he was invited for a function in a Marathi School and he faced a very awkward situation. He began to speak in Kannada and nobody understood him. Government should take care to see that Marathi knowing Educational Officers are posted to Belgaum district.

The Sardar's High School at Belgaum has a standing for more than 110 years. It was once a renowned institution. I am proud that I was a student of that high school. But Marathi Education in this school has been deteriorating. Whenever a Marathi teacher from that school is transferred, he is not replaced by a Marathi teacher. There are 7 Marathi divisions and according to the rules, there should be 10½ Marathi teachers in that High School.

But there are only six Marathi teachers for these seven Divisions and the Kannada teachers are asked to teach the Marathi Classes. Sir, in the Secondary Teachers' Training College at Belgaum, the subject 'Marathi' is retained only for a show. There is only one Professor for Marathi and he is not qualified to teach Marathi. He is qualified for other subjects, but only because he knows Marathi, he is kept there for the subject of Marathi. Marathi practical lessons in this College are observed by Kannada Masters of Methods who do not know Marathi. Similarly, practical examinations of the Marathi candidates are taken by Kannada examiners, who do not know Marathi. It is happening every year in that College. Kannada examiners not knowing Marathi are taking the practical examinations and thereby these candidates appearing for the examination have to suffer seriously. As a result of all this the number of students taking Marathi as special subject has dwindled. For specialisation in Marathi language in the year 1956-57 there were twenty students. This year that number has dwindled to only one and from next year there will be no student taking Marathi as special subject because that subject has been neglected and the trainees have to suffer.

2-30 P.M.

About the question papers that are printed at the examinations, Sir; I have raised this point more than once on the floor of the House. The Marathi question papers printed are not only incorrect, but they contain mutilated Marathi. The Hon'ble Minister for Education knows Marathi well, I will pass an some extracts of these papers and he will come to know of it. At times, it is not possible to make the head or tail from that question. To such an extent the Marathi language of the question papers is mutilated. Our Marathi schools have not got adequate number of teachers. Last year, a number of Marathi teachers were intimated that they would be deputed for training. Those poor teachers waited, but none of them were sent for training on deputation. The Marathi Training College at Vadagav in Belgaum District was intimated by the Department that 35 trainees will be deputed for training during 1962-63 in that College. That College kept the staff ready, but not a single trainee was deputed throughout the year to that College and that College

(SRI B. R. SUNTANKAR)

had to maintain the additional staff. That is how we are treated and how we are neglected. There is no provision for Marathi instruction in Technical courses and classes. A number of technical courses and classes are being conducted for others in the State. There is a Small scale Industries Service Institute at Belgaum which desires to conduct technical classes, but for want of Marathi Instructor that Institute could not conduct any classes. So, for these technical courses and classes, our Marathi candidates have to suffer for want of provision of Marathi Instructors in the various courses.

Some amounts are being allotted in respect of popular literature. For popular literature in linguistic minorities there is absolutey no provision. I am not entitled to speak about other minorities, but for Marathi I can speak. There is no provision at all for Marathi.

Sir, the Library books that are recommended for the School Libraries are exclusively books in Kannada, not a single Marathi book is recommended for the school libraries. There are number of such complaints and I can go on adding any number. I request the Hon'ble Minister for Education, who knows the feelings of Marathi people there, to pay more attention to the grievances of the Marathi section, to grievance of the Marathi area and to redress them. The people are smarting under the feeling that they are utterly neglected.

ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಸ್ವಾಮಿ ನಾನೊಂದು ಪಾಯಿಂಟ್ ಆಫ್ ಆರ್ಡರನ್ನು ಸೂಚಿಸುತ್ತೇನೆ. ಈಗ ಟ್ರೆಜರಿ ಬೆಂಚಿನಲ್ಲಿ ಯಾರೋ ಹೊಸಬರು ಒಬ್ಬರು ಕುಳಿತಿದ್ದಾರೆ. ಅವರು ಯಾವಾಗ ಮಂತ್ರಿಗಳಾದರೆಂಬ ವಿಚಾರ ನಮಗೆ ತಿಳಿಯಲಿಲ್ಲ, ಅದನ್ನು ತಿಳಿಸಬೇಕು.

MR. SPEAKER.— He has not become a Minister, don't worry.

Sri B. R. SUNTANKAR.—I have said enough about the neglect of our language. Now, I would say one word about North Kanara. In North Kanara, there are 40 Primary Schools and the schools are called "forty rupees master schools". The teachers in these 40 schools are getting a fixed pay of Rs. 40/- No pay scales are applied to them. The schools are called forty rupees schools and the masters are called forty rupees masters.

Sri S. R. KANTHI.—What about your Samithi Schools?

Sri B. R. SUNTANKAR.—They are given pay scales. For years together these poor teachers are getting only Rs. 40/- and not a pie more. Government should see that the pay scales are applied to them.

Sir, in the former Bombay State, the M.Ed. teachers were getting special facility. M.Ed. teacher was given two increments just after passing his M.Ed. examination. Here, that facility is not given to them. Even if he passes M.Ed. examination he is not given any increment not even any higher pay. Government should think over this, and in order to give encouragement to higher education and to higher qulifications, Government should follow the example of former Bombay State and the M.Ed. people should be given the same facility as they were given in the former Bombay State.

With these words, Sir, I conclude.

ಶ್ರೀಮತಿ ರತ್ನಮ್ಮ ಮಾಧವರಾವ್ (ಶಿವಮೊಗ್ಗ).—ಸನ್ಮಾನ್ಯ ಸಭಾಧ್ಯಕ್ಷರೇ ಈಗ ನಮ್ಮ ಮುಂದೆ ಮಂಡಿಸಿರತಕ್ಕ ವಿದ್ಯಾ ಬೇಡಿಕೆಯನ್ನು ಅನುಮೋದಿಸುತ್ತ ನಾನು ಒಂದೆರಡು ಮಾತುಗಳನ್ನು ಆಡಲು ಇಷ್ಟಪಡುತ್ತೇನೆ.

ಈ ದಿವಸ ಈ ತುರ್ತು ಪರಿಸ್ಥಿತಿಯಲ್ಲೂ ಸಹ ಈ ವಿದ್ಯಾಭ್ಯಾಸದ ಬಾಬಿಗೆ 18 ಕೋಟಿ ರೂ.ಗಳನ್ನು ಕೊಟ್ಟಿರುವುದನ್ನು ನಾನು ಸ್ವಾಗತಿಸುತ್ತೇನೆ. ಈಗ ಎಲ್ಲೆಲ್ಲೂ ಪ್ರಾಥಮಿಕ ವಿದ್ಯಾಭ್ಯಾಸದ ಅವಶ್ಯಕತೆ ದಿನದಿನಕ್ಕೂ ವರ್ಷ ವರ್ಷಕ್ಕೂ ಜಾಸ್ತಿಯಾಗುತ್ತಾ ಇದೆ. ಪ್ರಾಥಮಿಕ ಶಾಲೆಗಳಿಗೆ ಬೇಕಾದ ಉಪಾಧ್ಯಾಯರು ಸಾಕಷ್ಟು ಸಿಕ್ಕುತ್ತಿಲ್ಲ. ಬಡ್ಜೆಟ್ಟಿನಲ್ಲಿ ಕೇವಲ ಒಂದು ಸಾವಿರ ಜನರ ತರಪೇತಿಗೆ ಪ್ರಾವಿಜನ್ ತೋರಿಸಿದ್ದಾರೆ. ಆದರೆ ನಮಗೀ ದಿವಸ 5 ಸಾವಿರ ಜನಬೇಕಾಗಿದ್ದಾರೆ. ಆದ್ದರಿಂದ ಈಗ ನಿವೃತ್ತಿಯಾಗಿರತಕ್ಕ ಉಪಾಧ್ಯಾಯರನ್ನೇ ಅರ್ಧ ತಲುಬಿನ ಮೇಲೆ ನೇಮಕ ಮಾಡಿಕೊಂಡರೆ ಇದರಿಂದ ವಿದ್ಯಾಭಿವೃದ್ಧಿಗೂ ಅನುಕೂಲವಾಗಿ ಇದು ಎಕನಾಮಿಕಲ್ ಆಗಿಯೂ ಫ್ರೆನಲ್‌ಷಿಯರಿಗಿಂತಲೂ ಅನುಕೂಲವಾಗಿರುತ್ತದೆ. ಇದನ್ನು ಮಾಡಬೇಕೆಂದು ನಾನು ಸಹಿ ಮಾಡುತ್ತೇನೆ. ಸರ್ವೀಸ್ ಇನ್‌ಕ್ರೀಸ್ ಮಾಡದ ಹೊರತು ಸಾಕಷ್ಟು ನುರಿತ ಉಪಾಧ್ಯಯರು ಒದಗುವುದಿಲ್ಲ. ಬಿಲ್ಡಿಂಗ್ ಸಾಲದು. ಅದಿಲ್ಲ ಇದಿಲ್ಲ ಎಂದು ಕಲಸು ಮೇಲೋಗರ ಮಾಡುವುದಕ್ಕಿಂತ ಮೂರು ಗಂಟೆ ಕಾಲವಾದರೂ ಒಂದು system ಆಗಿ ಬದಲಾವಣೆ ಮಾಡಿದರೆ ಚೆನ್ನಾಗಿ ನಡೆಯಬಹುದೆಂದು ನನ್ನ ಸಲಹೆ.

ಅದೇ ರೀತಿ ಸೆಕೆಂಡರಿ ಲೆವಲ್‌ನಲ್ಲೂ ಕೂಡ ಮಾಡಬಹುದು. ವಿದ್ಯಾರ್ಥಿಗಳು ಬಹಳ ಬರುತ್ತಾರೆ ಇವರಲ್ಲೂ ಹಾಗೆಯೇ ಮಾಡಿದರೆ ಹೈಸ್ಕೂಲು ವಿದ್ಯಾಭ್ಯಾಸ ಒಂದು standard ಗೆ ಬರುತ್ತದೆಂದು ನನ್ನ ಸಲಹೆ.

ಪ್ರೈಮರಿ ವಿದ್ಯಾಭ್ಯಾಸದ ಆಡಳಿತವನ್ನು ಏಕ ರೂಪವಾಗಿರುವಂತೆ ಮಾಡಬೇಕು. Primary Education Bill ಡ್ರಾಫ್ಟ್ ಆಗುತ್ತಿದೆ ಎಂದು ನಾಲ್ಕು ವರ್ಷದಿಂದ ಕೇಳುತ್ತಿದ್ದೇವೆ. ಅದು ಡ್ರಾಫ್ಟ್ ಆಗಿದೆಯೇ ? ಆಗುತ್ತಿದೆಯೇ ಯಾವಾಗ ಬರುತ್ತದೆ ಎನ್ನುವುದನ್ನು ಮಾನ್ಯ ಮಂತ್ರಿಗಳು ಉತ್ತರಿಸುವಾಗ ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಬೊಂಬಾಯಿ ಪ್ರದೇಶದಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಸ್ಕೂಲುಗಳಿವೆ. ಅವು ಸರಿಯಾಗಿ ನಡೆಯುತ್ತಿಲ್ಲವೆಂದು ನಾನು ತಿಳಿದಿದ್ದೇನೆ. ಅಲ್ಲಿ ಅನೇಕ ವರ್ಷಗಳಿಂದ ಒಂದೇ ಬಾಡಿ ಕೆಲಸ ಮಾಡುತ್ತಿದೆ. ಅಲ್ಲಿ ಒಂದು ಹೊಸಬಾಡಿ ಮಾಡಬೇಕು. ಹಳೆಯ ಬಾಡಿ ಮುಂದುವರಿಯುತ್ತಿರುವುದರಿಂದ ವಶೀಲಬಾಜಿ ಜಾಸ್ತಿಯಾಗಿದೆ. ಮಹಿಳಾ ಶಿಕ್ಷಕರಿಗೆ ಬಹಳ ತೊಂದರೆಯಾಗಿದೆ ಎಂದು ನನಗೆ ತಿಳಿದುಬಂದಿದೆ. ಅದೂ ಅಲ್ಲಿದೆ appointments ನಲ್ಲಿ, transfers ನಲ್ಲಿ, ಅವರಿಗೆ ಬಹಳ ತೊಂದರೆ ಇದೆ. ಅಲ್ಲಿಯ ಸ್ಕೂಲುಗಳನ್ನೂ ಇಲ್ಲಿಯ ಹಾಗೆಯೇ ಮಾಡಬೇಕು, ಸರ್ಕಾರದ ಆಡಳಿತಕ್ಕೆ ತೆಗೆದುಕೊಳ್ಳಬೇಕು ಎಂದು ನಾನು ಸಲಹೆ ಮಾಡುತ್ತೇನೆ.

ಸ್ಕಾಲರ್‌ಷಿಪ್ ವಿಷಯ. ಹಿಂದೆ ಹೇಗಿತ್ತು ಎಂದರೆ ಸ್ಕಾಲರ್‌ಷಿಪ್ ಕೊಟ್ಟರೆ ಅದರೊಂದಿಗೆ freeship ಸೇರಿಕೊಂಡು ಬರುತ್ತಿತ್ತು. ಈವಾಗ ಸ್ಕಾಲರ್‌ಷಿಪ್ ಮತ್ತು ಅರ್ಧ ಫ್ರೀಷಿಪ್ ಎಂದು ಮಾಡಿದ್ದಾರೆ. ಇದರಿಂದ ಬಡ ವಿದ್ಯಾರ್ಥಿಗಳಿಗಾಗಲೀ, ಬುದ್ಧಿವಂತರಿಗಾಗಲೀ ಯಾವ ತರಹ ಅನುಕೂಲವನ್ನು ಮಾಡಿಕೊಟ್ಟ ಹಾಗೆ ಆಗುವುದಿಲ್ಲ. ಸ್ಕಾಲರ್‌ಷಿಪ್ ಜೊತೆಗೆ ಫ್ರೀಷಿಪ್ ಸೇರಿಕೊಂಡು ಬರುವ ಹಾಗೆ ಮಾಡಬೇಕೆಂದು ನನ್ನ ಸಲಹೆ. Half freeship ಕೊಡುವುದರ ಬದಲು Full freeship ಕೊಡುವುದಾದರೆ ಬಹಳ ಅನುಕೂಲವನ್ನು ಮಾಡಿಕೊಟ್ಟ ಹಾಗೆ ಆಗುತ್ತದೆ.

ಮಿಡಲ್ ಸ್ಕೂಲಿನಲ್ಲಿ ಈಸಲ III Year ಮತ್ತು IV Year ಎಂದರೆ 7th and 8th ಸ್ಟಾಂಡರ್ಡಿಗೆ ಒಂದು ಪಬ್ಲಿಕ್ ಪರೀಕ್ಷೆ ಮಾಡಿ ಮುಂದೆ ಹೈಸ್ಕೂಲಿನಲ್ಲಿ ನಾಲ್ಕು ವರ್ಷ ಮಾಡಿದ್ದಾರೆ. ಇದರಿಂದ ಏಳನೆ ಸ್ಟಾಂಡರ್ಡ್‌ನವರಿಗೇನೋ ಅನುಕೂಲವಾಯಿತು. ಎಂಟನೆ ಸ್ಟಾಂಡರ್ಡ್‌ನವರಿಗೆ ಒಂದು ವರ್ಷ ನಷ್ಟವಾಗುತ್ತದೆ. ಅವರಿಗೆ ಮೂರು ವರ್ಷ ಮಾಡುವುದಕ್ಕಾಗುವುದಿಲ್ಲವೇ ಎಂದು ಕೇಳುತ್ತೇನೆ.

ಕೇಂದ್ರ ಸರ್ಕಾರದ ಆ ದೇಶದ ಪ್ರಕಾರ ಸ್ನಾತಕೋತ್ತರ ಶಿಕ್ಷಣ (post-graduate course) ಸಂಜೆ ನಡೆಸುವುದು ಬರುವ ಶಿಕ್ಷಣ ವರ್ಷದಿಂದ ಜಾರಿಗೆ ತರುವುದು ತುಂಬ ಅನುಕೂಲ. ಅದನ್ನು ಆದಷ್ಟು ಜಾಗ್ರತೆ ಕಾರ್ಯರೂಪಕ್ಕೆ ತರಬೇಕೆಂದು ನಾನು ಸಲಹೆ ಮಾಡುತ್ತಿದ್ದೇನೆ.

ಪದವೀಧರರಿಗೆ ಮೂರು ವರ್ಷ ಅವಧಿಯಲ್ಲಿ ಬಿ. ಇ. ಡಿಗ್ರಿ ದೊರೆಯಲು ಇಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸುವ ಬದಲು ಇರುವ ಕಾಲೇಜುಗಳಲ್ಲಿಯೇ ಸೀಟುಗಳನ್ನು ಹೆಚ್ಚು ಮಾಡುವುದು ಒಳ್ಳೆಯದೆಂದು ನನ್ನ ಸಲಹೆ.

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸರ್ಕಾರ ಕೊಡುತ್ತಿರುವ ಗ್ರಾಂಟ್ ಸಾಲದು ಎಂದು ಹೇಳುತ್ತಿರುವ ಕಾಲದಲ್ಲಿ ಈ ತುರ್ತುಪರಿಸ್ಥಿತಿಯಲ್ಲಿ ಉಪಕುಲಪತಿಗಳೂ, ರಿಜಿಸ್ಟ್ರಾರ್ ಅವರು

(ಶ್ರೀಮತಿ ರತ್ನಮ್ಮ ಮಾಧವರಾವ್)

ಇಂಗ್ಲೆಂಡಿಗೆ ವಿಶ್ವವಿದ್ಯಾನಿಲಯದ ಖರ್ಚಿನಿಂದ ಹೋಗಬೇಕಾದ ಪ್ರಮೇಯವೇನು ಎಂದು ಯೋಚನೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ಮುಖ್ಯಮಂತ್ರಿಗಳು ಪ್ರಶ್ನೋತ್ತರ ಕಾಲದಲ್ಲಿ ವಿದ್ಯಾರ್ಥಿ ವೇತನವನ್ನು ವರ್ಷದ ಅವಧಿಗಿಂತ ಮುಂಚೆ ಕೊಡಿಸಿಕೊಡುತ್ತವೆಂದು ಭರವಸೆಕೊಟ್ಟರು. ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ.

ಇನ್ನೂ ಪದವೀಧರ ಉಪಾಧ್ಯಾಯರ ವಿಷಯ. ಆರು ವರ್ಷಗಳಿಂದಲೂ ಇದು ಚರ್ವಿತ ಚರ್ವಣವಾಗಿ ಹಾಗೆಯೇ ಇದೆ. ಮಿಡಲ್ ಸ್ಕೂಲಿನಲ್ಲಿ S.S.L.C. ಮಾಡಿಕೊಂಡು ಕೆಲಸಕ್ಕೆ ಸೇರಿ. ಪದವೀಧರರಾಗಿ 10-15 ವರ್ಷಗಳಾದರೂ ಪದವೀಧರರಿಗೆ ಕೊಡುವಂಥ pay scale ಆಗಲಿ, ಪ್ರಮೋಷನ್ ಆಗಲೀ ಸಿಕ್ಕುತ್ತ ಇಲ್ಲ. ಇದರ ಬಗ್ಗೆ ಆರು ವರ್ಷಗಳಿಂದಲೂ ನಾನೂ ಕೇಳುತ್ತ ಬಂದಿದ್ದೇನೆ. ಅನೇಕ ಬಾರಿ ಉತ್ತರ ಕೊಟ್ಟಿದ್ದಾರೆ: cadre and rules ಮಾಡುತ್ತೇವೆ. ಅದಾದ ಕೂಡಲೇ ಕೊಡುತ್ತೇವೆಂದು ಹೇಳಿದ್ದಾರೆ. ಇದನ್ನು ಮಾಡಲು ಇನ್ನೆಷ್ಟು ವರ್ಷ ಕಾಲ ಬೇಕಾಗುತ್ತದೆ? ಈ ಉಪಧ್ಯಾಯರು ರಿಟೈರ್ ಆಗುವುದಕ್ಕೆ ಮುಂಚೆಯಾದರೂ ಸಿಕ್ಕುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ವಿದ್ಯಾ ಇಲಾಖೆ ದಿನ ದಿನಕ್ಕೆ ವಿಶಾಲವಾಗಿ ಬೆಳೆಯುತ್ತಿದೆ. ಜಾಯಿಂಟ್ ಡೈರೆಕ್ಟರುಗಳ ಸಂಖೆಯೂ ಬೆಳೆಯುತ್ತಿದೆ. ಇದರಲ್ಲಿ ಒಬ್ಬ ಹೆಣ್ಣು ಮಗಳನ್ನು ಏಕೆ ನೇಮಕ ಮಾಡಬಾರದು? ಹೆಣ್ಣು ಮಕ್ಕಳ ಉಪಾಧ್ಯಾಯಿನಿಯರ ತಾಪತ್ರಯಗಳನ್ನು ಕೇಳುವವರೇ ಇರುವುದಿಲ್ಲ. ಗಂಡ ಹೆಂಡತಿಯರನ್ನು ಒಂದೇ ಕಡೆ ಹಾಕುವುದಕ್ಕೆ ಅವಕಾಶವಿದೆ ಇದನ್ನು ನಾನು ಪ್ರತಿಸಲವೂ ಹೇಳುತ್ತಿದ್ದೇನೆ. ಗಂಡ ಬೆಂಗಳೂರಿನಲ್ಲಿದ್ದರೆ ಹೆಂಡತಿ ಧಾರವಾಡದಲ್ಲಿರುತ್ತಾಳೆ. ಅವರು ಹೋಗಿ ಇಲಾಖೆಯಲ್ಲಿ ಕೇಳಿದರೆ ಒಂದು ಕಡೆ ಇಬ್ಬರನ್ನು ಹಾಕುವುದಿಲ್ಲ. ಹೆಣ್ಣುಮಗಳು ನಮ್ಮಂಥವರ ಹತ್ತಿರ ಬಂದು ಏನಾದರೂ ಕೇಳಿದಾಗ ನಾವು ಹೋಗಿ ಏನಾದರೂ ಹೇಳಿದರೆ ಎಂ. ಎಲ್. ಎ.ಗಳನ್ನು ಕರೆದುಕೊಂಡುಬಂದು influence ಮಾಡಿಸುತ್ತೇಯಾ, ನಿನ್ನನ್ನು ಏಕೆ ಸಸ್ಪೆಂಡ್ ಮಾಡಬಾರದೆಂದು ಕೇಳುತ್ತಾರೆ. ಇಂಥ ನಿದರ್ಶನಗಳು ಎರಡು ಮೂರು ನನಗ ಗೊತ್ತಿವೆ. ಇದನ್ನು ಅನೇಕ ವೇಳೆ ಹೇಳುತ್ತಿದ್ದೇನೆ, ದಂಪತಿಗಳನ್ನು ಒಂದೇ ಕಡೆ ಇರುವಂತೆ ವರ್ಗಮಾಡಿ ಪುಣ್ಯ ಕಟ್ಟಿಕೊಳ್ಳಿ.

ಶ್ರೀ ವಿ. ಎಂ. ದೇವ್—ಪಾರ್ಟಿಮೀಟಿಂಗ್‌ನಲ್ಲಿ ಕೇಳಿ. ಇಂಥ ಕಾರ್ಯಮಾಡುವುದಕ್ಕೆ ಏಕೆ ಬಿಡುತ್ತೀರಿ?

ಶ್ರೀಮತಿ ರತ್ನಮ್ಮ ಮಾಧವರಾವ್—ಇದು ಇಲಾಖೆಯಲ್ಲಿ ನಡೆಯುವ ವಿಚಾರ. ಇದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಆ ಪುಣ್ಯ ಬರಬೇಕಾದ್ದು ವಿದ್ಯಾಮಂತ್ರಿಗಳಿಗೆ.

M. A. (Sociology) ಮಾಡಿದ ಹೆಣ್ಣು ಮಕ್ಕಳು ಕೆಲಸವಿಲ್ಲದೆ ಅಲೆಯುತ್ತಿದ್ದಾರೆ. ಕೆಲವು ವೇಕೆನ್ಸಿಗಳಿವೆ ಎಂದು ಹೇಳುತ್ತಾರೆ. ವೇಕೆನ್ಸಿಗಳೇನಾದರೂ ಇದ್ದರೆ ಹೆಣ್ಣುಮಗಳಿಗೆ ಕೊಟ್ಟು, ಅದೂ ಒಂದು ಪುಣ್ಯ ಕಟ್ಟಿಕೊಳ್ಳಿ.

ತಾತ್ಕಾಲಿಕ ಲೆಕ್ಚರರುಗಳೆಂದು ಮಾಡಿರುವ ನೇಮಕಗಳನ್ನು ಖಾಯಂಗೊಳಿಸಿ. ಅವರಲ್ಲಿರುವ ಅತೃಪ್ತಿಹೋಗಲಿ. ಅವರನ್ನು ಖಾಯಂ ಮಾಡುವುದಕ್ಕೆ ಸರ್ಕಾರ ಒಪ್ಪಿದೆ ಎಂದು ತಿಳಿದುಬಂದಿದೆ. ಆ ಆರ್ಡರ್ ಜಾಗ್ರತೆಕೊಡುವುದಕ್ಕೆ ಏರ್ಪಾಡು ಮಾಡಬೇಕು.

ನಮ್ಮ ಸರ್ಕಾರ ಇಂದಿನ ತುರ್ತುಪರಿಸ್ಥಿತಿಯಲ್ಲಿ ಕೂಡ ಖಾಸಗಿ ಶಾಲಾ ಉಪಾಧ್ಯಾಯರಿಗೆ ತ್ರಿವಿಧ ಸೌಲಭ್ಯವನ್ನು ಒದಗಿಸಿರುವುದು ಅಭಿನಂದನೀಯ. ಅದೇ ಸೌಲಭ್ಯಗಳನ್ನು ಕಾಲೇಜ್ ಅಧ್ಯಾಪಕರಿಗೂ ಕೊಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಪ್ರಾಥಮಿಕಶಾಲಾ ಮಕ್ಕಳಿಗೆ ಫ್ರೀಯಾಗಿ ಪಠ್ಯಪುಸ್ತಕಗಳನ್ನು ಹಂಚಲುನಿರ್ಧರಿಸಿದ್ದಾರೆ. ಅದೂ ಕೂಡ ಅಭಿನಂದನೀಯವಾದುದು. ಅದು ಬಡಮಕ್ಕಳಿಗೆ ನ್ಯಾಯವಾಗಿ ದೊರಕುವಂತಾಗಲಿ.

ಪಠ್ಯಪುಸ್ತಕಗಳ ಬದಲಾವಣೆ ವರ್ಷ ವರ್ಷವೂ ಮಾಡುತ್ತೀರಿ. ಆ ರೀತಿ ಮಾಡುವುದು ಬೇಡ, ಕೊನೆಯಪಕ್ಷ ಐದು ವರ್ಷವಾದರೂ ಅವು ಇರಲಿ. ಪ್ರಾಥಮಿಕಶಾಲೆಗಳಿಗೆ ಒಂದರಿಂದ ಏಳನೆಸ್ಟಾಂಡರ್ಡ್ ವರೆಗೆ ಪುಸ್ತಕಗಳನ್ನು Educational Research Bureau ಮುಖಾಂತರ ತಜ್ಞರಾದ ಉಪಾಧ್ಯಾಯರನ್ನು ಬರಮಾಡಿಕೊಂಡು ಅವರಿಂದ ಬರೆಸಿ. ಅದನ್ನು ನೀವೇ ಪ್ರಿಂಟ್‌ಮಾಡಿಸಿದರೆ ಒಳ್ಳೆಯದು. ಸರ್ಕಾರಕ್ಕೆ ಲಾಭ ಕೂಡ ಬರುತ್ತದೆ. ಹೇಗೂ ಉಚಿತವಾಗಿ ಪಠ್ಯಪುಸ್ತಕಗಳನ್ನು ಹಂಚಬೇಕೆಂದು ಮಾಡಿದ್ದೀರಿ—ಅದಕ್ಕೂ ಸಹಾಯವಾಗುತ್ತದೆ. ಹೈಸ್ಕೂಲುಗಳ ಪಠ್ಯಪುಸ್ತಕಗಳನ್ನೂ ಖಾಸಗಿ ಲೇಖಕರಿಗೆ ಬಿಡಬಹುದು.

ಹಿಂದೀ ಉಪಾಧ್ಯಾಯರಬಗ್ಗೆ ನನ್ನ ಮಾನ್ಯಸ್ನೇಹಿತಯರಾದ ಶ್ರೀಮತಿ ಜಿ.ಸಿ. ಭಾಗೀರಥಮ್ಮನವರು ಬಡ್ಜೆಟ್ ಮೇಲೆ ಮಾತನಾಡುವಾಗ ಹೇಳಿದ್ದಾರೆ. ಹಿಂದೆ ಯಾರೂ ಸಿಕ್ಕದೆ ಇದ್ದಾಗ ಕೇವಲ 10 ರಿಂದ 25 ರೂಪಾಯಿಗಳಿಗೆ ಬಂದು ಸೇರಿ ಕೆಲಸಮಾಡಿಕೊಂಡು ಬಂದಿದ್ದಾರೆ. ಈಗ ಹೊಸದಾಗಿ S.S.L.C. ಆಗಬೇಕು, ವಿಶಾರದ ಆಗಿರಬೇಕು ಎಂದು ಅಂಥವರನ್ನು ನೇಮಕ ಮಾಡಿಕೊಳ್ಳುತ್ತಿದ್ದೀರಿ. ಮಾಡಿ ಅದರಲ್ಲಿ ತಪ್ಪಿಲ್ಲ. ಆದರೆ ಕೆಲವುಕಡೆ ನಿಮಗೆ ಸಾಕಷ್ಟು ಶಿಕ್ಷಕರು ಸಿಕ್ಕುತ್ತಿಲ್ಲವೆನ್ನುವುದು ನಿಜ. ಎರಡು ಸ್ಕೂಲುಗಳಿರುವ ಕಡೆ ಒಬ್ಬರನ್ನೇ ನೇಮಕ ಮಾಡಿದ್ದೀರಿ. ಹೀಗಿರುವಾಗ ಹಿಂದಿನಿಂದ ದುಡಿದುಕೊಂಡು ಬರುತ್ತಿದ್ದ ಉಪಾಧ್ಯಾಯರನ್ನು ಖಾಲಿಯಿರುವ ಜಾಗದಲ್ಲಿ ನೇಮಕ ಮಾಡುವುದು ಒಳ್ಳೆಯದು. ಅವರಿಗೂ ಕೂಡ ಅನುಕೂಲವಾಗುತ್ತದೆ.

ಮಾನ್ಯ ಮಂತ್ರಿಗಳಿಗೆ ಮಹಾರಾಣಿ ಕಾಲೇಜ್ ಬಹಳ ಹತ್ತಿರದಲ್ಲಿದೆ. ಸಂಜೆಹೊತ್ತು ವಾಕಿಂಗ್ ಹೋಗಿ ನೋಡಿಕೊಂಡು ಬರಬಹುದು. ಸಂಗೀತದ ಕ್ಲಾಸ್ ನಡೆಯುವುದು ಒಂದು ಸಣ್ಣ ಕೊಠಡಿಯಲ್ಲಿ. ಸಂಗೀತದ ವಿದ್ವಾಂಸರು ಹೆಚ್ಚು ಕಡಿಮೆ ನನ್ನ ಹಾಗೆಯೇ ಇದ್ದಾರೆ. ಹುಡುಗರು ಉಪಾಧ್ಯಾಯರು ಎಲ್ಲ ಸೇರಿಕೊಂಡರೆ ಉಸಿರಾಡುವುದಕ್ಕೇ ಆಗುವುದಿಲ್ಲ. ಇನ್ನು ಸಂಗೀತದ ಅಭ್ಯಾಸ ಹೇಗೆ ಮಾಡಬಹುದು. ಇದರ ಕಡೆಗೆ ಗಮನ ಕೊಡಬೇಕು.

ಈ ಕಾಲೇಜಿನಲ್ಲಿ ನ್ಯೂಸ್ಕೀಂನಲ್ಲಿ economics ಮತ್ತು ಸಂಗೀತ ಬಿ.ಎ. ಡಿಗ್ರಿ ತರಗತಿಗಳಿಗೆ ಇದೆ. ಇದರಲ್ಲಿ ಡಿಗ್ರಿ ತೆಗೆದುಕೊಂಡ ಹೆಣ್ಣುಮಕ್ಕಳು ಮುಂದೆ ಎಂ.ಎ.,ಗೆ ಹೋಗಬೇಕೆಂದರೆ ಸೆಂಟ್ರಲ್ ಕಾಲೇಜಿಗೆ ಹೋಗಬೇಕು. ಬಹಳ ಜನರಿಗೆ ಅಲ್ಲಿಗೆ ಹೋಗುವುದಕ್ಕೆ ಇಷ್ಟವಿಲ್ಲ. ಕೆಲವು ತಂದೆ ತಾಯಿಗಳಿಗೂ ಸೆಂಟ್ರಲ್ ಕಾಲೇಜಿಗೆ ಕಳಿಸುವುದಕ್ಕೆ ಇಷ್ಟವಿಲ್ಲ. ಆದುದರಿಂದ ಈ ಎರಡು ವಿಷಯಗಳಲ್ಲಿಯೂ ಈ ಕಾಲೇಜಿನಲ್ಲಿ ಎಂ.ಎ., ವ್ಯಾಸಂಗಕ್ಕೆ ಈ ವರ್ಷದಿಂದಲೇ ಅವಕಾಶ ಮಾಡಿಕೊಡಬೇಕು. ಇದಕ್ಕೆ ಅನುಮತಿಕೊಟ್ಟರೆ ಹೆಚ್ಚು ಖರ್ಚಿಲ್ಲದೆ ಕೋರ್ಸ್ ಪ್ರಾರಂಭವಾಗಬಹುದು. ಲೈಬ್ರರಿ ಬಹಳ ಅಚ್ಚುಕಟ್ಟಾಗಿದೆ, ನುರಿತವಿದ್ವಾಂಸರಿದ್ದಾರೆ ಕಟ್ಟಡವೂ ಇದೆ. ಇದು ಈ ವರ್ಷವೇ ಆಗಬೇಕೆಂದು ನಾನು ಒತ್ತಾಯಮಾಡುತ್ತೇನೆ.

ಸ್ಪೋರ್ಟ್ಸ್ ಕೌನ್ಸಿಲ್ ವಿಷಯದಲ್ಲಿ ಮಾನ್ಯಮಂತ್ರಿಗಳ ಕೂಡ ನಾನು ಅನೇಕವೇಳೆ ಮಾತನಾಡಿದ್ದೇನೆ. ಇದರಲ್ಲಿ ತಾವು ಸದಸ್ಯರಾಗಿ ಹಾಕುವಾಗ ಆಟಗಾರರ ಬಗ್ಗೆ ಅಭಿಮಾನವಿರುವವರನ್ನೂ, ಆಟಗಳಲ್ಲಿ ಅಭಿಮಾನ ಮತ್ತು ಅಭಿರುಚಿ ಇರುವವರನ್ನೂ ಸಾಧ್ಯವಾದಮಟ್ಟಿಗೂ ಎಲ್ಲ ಸಂಸ್ಥೆಗಳಿಂದಲೂ ಒಬ್ಬೊಬ್ಬರನ್ನು ತೆಗೆದುಕೊಂಡು ನೇಮಕಮಾಡಿದರೆ ಒಳ್ಳೆಯದು ಇದರಲ್ಲಿ ಮಹಿಳೆಯರನ್ನು ಸದಸ್ಯರನ್ನಾಗಿ ಹಾಕಿ ಈ ರೀತಿಯಿಂದ ಕೌನ್ಸಿಲ್ ಕೆಲಸ ಸರಿಯಾಗಿ ನಡೆಯುವಂತೆ ಮಾಡುತ್ತಾರೆಂದು ಮಾನ್ಯ ಮಂತ್ರಿಗಳನ್ನು ಪ್ರಾರ್ಥನೆ ಮಾಡುತ್ತೇನೆ.

ಶಿವಮೊಗ್ಗ ಸಹ್ಯಾದ್ರಿ ಕಾಲೇಜಿನಲ್ಲಿ ಸುಮಾರು 300 ಜನ ವಿದ್ಯಾರ್ಥಿನಿಯರಿದ್ದಾರೆ. ಸಂಗೀತವನ್ನು ಐಚ್ಛಿಕ ವಿಷಯವಾಗಿ ಕೊಡಬೇಕೆಂದು ಮೂರು ನಾಲ್ಕು ವರ್ಷದಿಂದ ಕೇಳುತ್ತ ಬಂದಿದ್ದೇವೆ. ಆದರೂ ಕೂಡ ಇನ್ನೂ ಕೊಟ್ಟಿಲ್ಲ. ಮುಂದಿನ ವರ್ಷದಿಂದಲಾದರೂ ಕೂಡ ಸಂಗೀತವನ್ನು ಅಲ್ಲಿಗೆ ಐಚ್ಛಿಕ ವಿಷಯವಾಗಿ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಮಾನ್ಯ ಅರ್ಥಿಕ ಸಚಿವರು ಎರಡು ಮಹಿಳಾ ಪಾಲಿಟೆಕ್ನಿಕ್ ತೆರೆಯುವುದಾಗಿ ಹೇಳಿದರು. ಧನ್ಯವಾದಗಳು. ಅವುಗಳಲ್ಲಿ ಒಂದನ್ನು ಶಿವಮೊಗ್ಗದಲ್ಲಿ ತೆರೆಯಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ನಮ್ಮಲ್ಲಿದ್ದ ಮೆಡಿಕಲ್ ಸ್ಕೂಲು ಹೋಯಿತು, ಮೆಡಿಕಲ್ ಕಾಲೇಜೂ ಬರಲಲ್ಲ. ಇಂಜಿನಿಯರಿಂಗ್ ಕಾಲೇಜೂ ಬರಲಲ್ಲ ಸ್ವಲ್ಪ ದಿನಗಳ ಕೆಳಗೆ ಮಾನ್ಯ ಮುಖ್ಯಮಂತ್ರಿಗಳಲ್ಲಿ Chemical, Mining, Metallurgy ಈ ಮೂರು Courses ತೆರೆಯುವುದಕ್ಕೆ ಅವಕಾಶಮಾಡಿಕೊಡಬೇಕು ಎಂದು ವಿನಂತಿ ಮಾಡಿದೆವು ಯಾವತ್ತಿಗೂ ಸರ್ಕಾರ commit ಮಾಡಿಕೊಳ್ಳುವುದಿಲ್ಲ. ಪರಿಶೀಲನೆಮಾಡುವುದಾಗಿ ಭರವಸೆಕೊಟ್ಟಿದ್ದಾರೆ. ಮುಂದಿನ ವರ್ಷದಲ್ಲಾದರೂ ಇದನ್ನು ಕೆರೆಯುವುದಕ್ಕೆ ಅವಕಾಶಮಾಡಿಕೊಡಬೇಕಾಗಿ ಪ್ರಾರ್ಥನೆ.

ಸಂಗೀತ, ನಾಟಕ ಅಕಾಡೆಮಿ ಅಧ್ಯಕ್ಷರು ಮಾನ್ಯ ವಿದ್ಯಾಮಂತ್ರಿಗಳು ಅಕಾಡೆಮಿ ಚೆನ್ನಾಗಿ ಕೆಲಸ ಮಾಡುತ್ತಿದೆ. ಹೊರಗಿನವರಿಗೆ ಹೆಚ್ಚು ಪ್ರೋತ್ಸಾಹ ಸಿಕ್ಕುತ್ತಿದೆ. ನಮ್ಮವರಿಗೆ ಸಾಕಷ್ಟು ಪ್ರೋತ್ಸಾಹವಿಲ್ಲ. ಬೆಂಗಳೂರು, ಮೈಸೂರು, ಮತ್ತು ಇತರ ಕಡೆ ಕೆಲವು ಚಿಕ್ಕ ಚಿಕ್ಕ ಸಂಸ್ಥೆಗಳೂ, ಸಂಘಗಳೂ, ಚೆನ್ನಾಗಿ ಕೆಲಸ ಮಾಡುತ್ತಿವೆ. ಉದಾಹರಣೆಗೆ ಬಸವನಗುಡಿಯಲ್ಲಿರುವ ಕಲಾಮಂದಿರ, ಮಿತ್ರಸಂಘ ಇವುಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ. ಇವನ್ನು ಮಾನ್ಯ ವಿದ್ಯಾಮಂತ್ರಿಗಳೂ ನೋಡಿದ್ದಾರೆ, ಮಾನ್ಯ ಸಭಾಧ್ಯಕ್ಷರೂ ನೋಡಿದ್ದಾರೆ. ಇಂಥ ಚಿಕ್ಕಪುಟ್ಟ ಸಂಸ್ಥೆಗಳಿಗೆ ತಾವು ಪ್ರೋತ್ಸಾಹ ಕೊಡಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ.

(ಶ್ರೀಮತಿ ರತ್ನಮ್ಮ ಮಾಧವರಾವ್)

ನಮಗೇನೂ ಕಾಂಪಿಟಿಷನ್ ಇಲ್ಲ. ಬೆಂಗಳೂರಿನಲ್ಲಿ ಒಂದು ವಿಶ್ವವಿದ್ಯಾನಿಲಯವನ್ನು ಮಾಡಿ, ಶಿವಮೊಗ್ಗಾದಲ್ಲಿ ಒಂದು ಮಲೆನಾಡು ವಿಶ್ವವಿದ್ಯಾನಿಲಯವನ್ನು ತೆಗೆಯಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ. ಇಂತಹ ವಿಶ್ವವಿದ್ಯಾನಿಲಯಗಳನ್ನು ತೆರೆಯುವುದರಿಂದ ಸ್ಟ್ಯಾಂಡರ್ಡ್ ಹೆಚ್ಚುತ್ತೆ ಮತ್ತು ಸಹಕಾರವೂ ಸಿಕ್ಕುತ್ತೆ.

ಮಲೆನಾಡಿನಲ್ಲಿ ಇನ್ನು ರೆಸಿಡನ್ಸಿಯಲ್ ಸ್ಕೂಲುಗಳನ್ನು ಸ್ಥಾಪನೆಮಾಡಲು ನಾನು ಸಲಹೆ ಮಾಡುತ್ತೇನೆ. 300 ಜನ ಇರುವ ವಿದ್ಯಾರ್ಥಿಗಳಕಡೆಯಲ್ಲಿ ಶಾಲೆಯಿರುತ್ತವೆ. ಆದರೆ ನೂರು ಜನ ಹುಡಗರಿರುವಕಡೆ ಶಾಲೆಗಳನ್ನು ತೆರೆಯಲುಬೇಡಿದಲ್ಲಿ ಮಲೆನಾಡು ಭಾಗದಲ್ಲಿರುವ Forest Revenue ಗಳಿಂದ ಸಾಕಷ್ಟು ಉತ್ಪತ್ತಿ ಬರುತ್ತಿರುವುದರಿಂದ ಅದರಲ್ಲಿ ಒಂದು ಪಾಲು ರೆವಿನ್ಯೂ ಕೊಡಬಹುದು. ಇದಕ್ಕೆ ನಮ್ಮ ಮಾನ್ಯ ಅರಣ್ಯ ಮಂತ್ರಿಗಳು ಒಪ್ಪಿಕೊಳ್ಳಲಿ. ಮಲೆನಾಡಿನಲ್ಲಿ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಬೇಕೆಂದು ಕಂಪಲ್ಸರೀ ಎಜುಕೇಷನ್ನು ಎಂದು ಮಾಡಿದರು-ಅವರಿಗೇನೂ ಪ್ರಯೋಜನವಾಗಿಲ್ಲ. ಮಲೆನಾಡಿನ ಸಮಸ್ಯೆಗಳನ್ನು ಪರಿಹರಿಸಲು ಅನುಕೂಲವಾಗುವಂತೆ ಒಂದು ಮಲೆನಾಡು ಡೆವೆಲಪ್‌ಮೆಂಟು ಬೋರ್ಡ್ ಎಂದು ಆಗಲೇಬೇಕು.

ಈ ನಾಲ್ಕು ಮಾತುಗಳನ್ನಾಡಿ ಈ ಬೇಡಿಕೆಗಳನ್ನು ಸಮರ್ಥಿಸುತ್ತೇನೆ.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ,

ವಿದ್ಯಾಮಂತ್ರಿಗಳು ಈ ಸಭೆಯ ಮುಂದೆ ಇಟ್ಟಿರುವ ಬೇಡಿಕೆಯನ್ನು ವಿರೋಧಿಸುತ್ತಾ ನನ್ನ ಈ ಖೋತಾ ನಿರ್ಣಯಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ. ಅವರು ವಿಷಯಗಳನ್ನು ಪರಿಶೀಲನೆ ಮಾಡಿ ಅದಕ್ಕೆ ಸೂಕ್ತವಾದ ಉತ್ತರ ಕೊಡುವುದೇ ಅಲ್ಲದೆ, ಇವುಗಳಲ್ಲಿ ಕೆಲವು ಉಪಯುಕ್ತವಾದ ಸಲಹೆ ರೀತಿಯಲ್ಲಿ ಕೆಲವು ನಿರ್ಣಯಗಳೇನಿವೆ ಅವುಗಳನ್ನು ಪರಿಶೀಲನೆ ಮಾಡಬೇಕು ಎಂದು ನಾನು ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ವಿದ್ಯೆ ಮನುಷ್ಯನಿಗೆ ಮುಖ್ಯವೋ ಅಥವಾ ಅನ್ನ ಮುಖ್ಯವೋ ಎನ್ನತಕ್ಕ ಪ್ರಶ್ನೆ ಬಂದಾಗ ಅನ್ನಕ್ಕಿಂತ ವಿದ್ಯೆಯೇ ಮುಖ್ಯವೆಂದು ನನಗನಿಸುತ್ತದೆ. ವಿದ್ಯೆ ಕೊಟ್ಟರೆ ಆತ ಎಲ್ಲಿಯಾದರೂ ಅನ್ನ ದುಡಿದುಕೊಳ್ಳುತ್ತಾನೆ ಎಂದು ನನಗನಿಸುತ್ತದೆ. ಪ್ರಜಾತಂತ್ರದಲ್ಲಿ ಈ ವಿದ್ಯೆಗೆ ಇನ್ನೂ ಹೆಚ್ಚು ಪ್ರಾಧಾನ್ಯತೆ ಬರುತ್ತದೆ. ದೇಶದ ಪ್ರಗತಿ ಈ ವಿದ್ಯೆಯ ಮೇಲೆ ನಿಂತುಕೊಳ್ಳುತ್ತದೆ ಎಂದು ಹೇಳಬಹುದು. ಇದರಲ್ಲಿ ಮುಖ್ಯವಾಗಿ ನಾನು ಒಂದು ವಿಷಯವನ್ನು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ದೇಶ ಸ್ವತಂತ್ರವಾದ ಮೇಲೆ ಇಷ್ಟು ದೀರ್ಘಕಾಲವಾದರೂ ಈ ವಿದ್ಯೆಯ ವಿಷಯವಾಗಿ ಒಂದು ರಾಷ್ಟ್ರೀಯವಾದ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಆಗದೆ ಇರುವುದು ಒಂದು ದೊಡ್ಡ ವಿಷಾದದ ಸಂಗತಿ. 1947ನೇ ಇಸವಿಯಲ್ಲಿ ಆರು ವರ್ಷವಾಗಿದ್ದಂತಹ ನಮ್ಮ ದೇಶದ ಮಕ್ಕಳು ಈಗ ಸುಮಾರು 22 ವರ್ಷದ ವಯಸ್ಕರಾಗಿದ್ದಾರೆ. ಹಳ್ಳಿಯ ಮಾತಿನಲ್ಲಿ ಹೇಳುವುದಾದರೆ, ಮದುವೆ ವಯಸ್ಸಿನವರಾಗಿ ಸ್ವಾತಂತ್ರ್ಯ ಬಂದನಂತರವೂ ಅವರನ್ನು ಹೆಬ್ಬೆಟ್ಟಿನ ರುಜು ಮಾಡುವಂತಹವರನ್ನಾಗಿ ಮಾಡಿದ್ದಾರೆ. ದೊಡ್ಡ ದೊಡ್ಡ ಕಟ್ಟಡಗಳಿಗಾಗಿ ಕೋಟಿಗಟ್ಟಲೆ ಕೊಡುವಂತಹ ಹಣವನ್ನು ಬಹುಶಃ ಸಾಕ್ಷರತೆಗಾಗಿ ವೆಚ್ಚಮಾಡದಿದ್ದರೆ ಈ ಗೊಂದಲ, ಈ ಒಂದು ಕಷ್ಟದ ಪರಿಸ್ಥಿತಿ ದೇಶಕ್ಕೆ ಒದಗುತ್ತಿರಲಿಲ್ಲ ಎಂದು ನನಗಾದರೂ ಅನಿಸುತ್ತದೆ. ರಾಜ್ಯಾಂಗದಲ್ಲಿ ಅಂದು ರಾಜ್ಯಾಂಗವನ್ನು ತಯಾರು ಮಾಡಿರತಕ್ಕವರು, ಈ ದೇಶದ ಎಲ್ಲ ಮಕ್ಕಳಿಗೂ ಪ್ರಾಥಮಿಕ ವಿದ್ಯಾಭ್ಯಾಸವನ್ನು ಉಚಿತವಾಗಿ ಹಾಗೂ ಕಡ್ಡಾಯವಾಗಿ ಕೊಡಬೇಕು ಎಂದು ಅವರು ಆದೇಶಕೊಟ್ಟರು. ಈ ಒಂದು ಜವಾಬುದಾರಿಯನ್ನು, ನಿರ್ದೇಶನವನ್ನು ಇನ್ನೂ ಕಾರ್ಯಗತಮಾಡಲಿಲ್ಲ. ಅವರ ವರದಿಯನ್ನೇ ನೋಡಿ. ನೀವು ಕಡ್ಡಾಯ ವಿದ್ಯಾಭ್ಯಾಸದ ಕಾನೂನನ್ನು ಜಾರಿಗೆಕೊಟ್ಟು ಎಷ್ಟು ಮಕ್ಕಳನ್ನು ಶಾಲೆಗಳಿಗೆ ಬರುವಂತೆ ಮಾಡಿದ್ದಾರೆ? ಎಷ್ಟು ಕಟ್ಟಡಗಳನ್ನು ಕಟ್ಟಿ ಕಡ್ಡಾಯದ ಶಿಕ್ಷಣವನ್ನು ಕೊಡಲು ಏನಾಗುತ್ತಿದೆ. ಕಟ್ಟಡಗಳನ್ನು ಕಟ್ಟುವುದಕ್ಕೆ ಏನು ತೊಂದರೆಯಿದೆ ಎನ್ನುವುದು ನಮಗೆಲ್ಲ ಮಂತ್ರಿಗಳ ಹೇಳಿಕೆಯಿಂದಲೇ ಅರ್ಥವಾಗುತ್ತದೆ. ನಿನ್ನೆ ನಾನು ಒಂದು ಪ್ರಶ್ನೆ ಬಗ್ಗೆ ಪದೇ ಪದೇ ಕಟ್ಟಡಗಳಿಲ್ಲ ಎಂದು ಹೇಳುತ್ತೀರಿ ಅದನ್ನು ಕಟ್ಟಲು ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಕೇಳಿದುದಕ್ಕೆ ಮಾನ್ಯ ಮಂತ್ರಿಗಳು ನೀಡಿದಕಾರಣಗಳನ್ನು ನೋಡಿದರೆ ಮಕ್ಕಳಿಗೆ ವಿದ್ಯೆ ಕೊಡಿಸುವುದಕ್ಕೆ ಸಾಧ್ಯವೇ ಎನ್ನುವ ಅರ್ಥ ಬರುವ ರೀತಿಯಲ್ಲಿ ನೇರವಾದ ಪ್ರಶ್ನೆಕೇಳಿದರೂ ನೇರವಾದ ಉತ್ತರ ಕೊಡಲಿಲ್ಲ. ಇಲ್ಲಿ ರಾಜ್ಯಾಂಗಕ್ಕೆ ಅಪಚಾರವಾಗುತ್ತದೆ. ಯಾವುದೇ ಸರಕಾರ ಇವೊತ್ತು ಆರುವರ್ಷದ ಹೆಣ್ಣು ಮತ್ತು ಗಂಡುಮಕ್ಕಳಿಗೆ ವಿದ್ಯೆಕೊಡದೇ ಹೋದರೆ, ಅದು ತನ್ನ ಕರ್ತವ್ಯದಲ್ಲಿ

ಲೋಪಮಾಡಿದಂತಾಗುತ್ತದೆ. ಅಷ್ಟುಮಾತ್ರವಲ್ಲ, ಅದು ಇಡೀ ರಾಷ್ಟ್ರಕ್ಕೇ ಹಾನಿಯನ್ನುಂಟು ಮಾಡಿದಂತಾಗುತ್ತದೆ ಎನ್ನುವುದನ್ನು ವಿದ್ಯಾಮಂತ್ರಿಗಳು ಗಮನದಲ್ಲಿಟ್ಟುಕೊಳ್ಳಬೇಕು.

ಸ್ವಾಮಿ, ಮುಖ್ಯವಾಗಿ ಪ್ರಾಥಮಿಕ ವಿದ್ಯಾಭ್ಯಾಸ ಮತ್ತು ಇದರ ಜವಾಬುದಾರಿಯನ್ನು ಹೊರತಕ್ಕದ್ದು ಸರಕಾರದ ಕರ್ತವ್ಯವಾಗಿದೆ. ಸುಮಾರು 19 ಕೋಟಿ ರೂಪಾಯಿಗಳಷ್ಟು ಹಣವನ್ನು ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡುತ್ತಿದ್ದೇವೆ. ಶ್ರೀಮತಿ ರತ್ನಮ್ಮನವರು ಇದು ಅಭಿನಂದನೀಯ ಎಂದು ಹೇಳಿದರು. ಅವರೇ ಎಷ್ಟು ಜನ ಮಕ್ಕಳಿಗೆ ಶಾಲೆಗಳನ್ನು ಒದಗಿಸಿದ್ದೀರಿ ಅಥವಾ ಇಲ್ಲ ಎನ್ನುವುದನ್ನು ಹೇಳಿದ್ದರೆ ಅದು ಚೆನ್ನಾಗಿರುತ್ತಿತ್ತು. ಈಗ ಕೊಡತಕ್ಕ ಹಣ ಇಪ್ಪತ್ತು ಕೋಟಿ ಎನ್ನುವುದು ಬಹಳ ದೊಡ್ಡದಾಗಿ ಕಾಣುತ್ತದೆ. ಆದರೆ 25–30 ಲಕ್ಷ ಜನ ವಿದ್ಯಾರ್ಥಿಗಳಿಗೆ ನೀವು ಕೊಡತಕ್ಕ ವಿದ್ಯಾಭ್ಯಾಸ ಯಾವ ಕ್ರಮದಲ್ಲಿದೆ, ಅದನ್ನು ನೀವು ವಿದ್ಯಾಭ್ಯಾಸ ಎಂದು ಕರೆಯುವುದಕ್ಕೆ ಸಾಧ್ಯವೇ? ನಲವತ್ತು ಹುಡುಗರಿಗೆ ಒಬ್ಬ ಉಪಾಧ್ಯಾಯರು ಎಂದು ಭಾರತದಲ್ಲಿದ್ದಾರೆ. ಅದಕ್ಕೆ ತಕ್ಕಂತೆ ನಮ್ಮಲ್ಲಿ 35 ಹುಡುಗರಿಗೆ ಶಿಕ್ಷಣ ಕೊಡಲು ಒಬ್ಬರು ಉಪಾಧ್ಯಾಯರೆಂದು ಹೇಳಿರುತ್ತಾರೆ ಆದರೆ ನಮ್ಮಲ್ಲಿರತಕ್ಕ ಉಪಾಧ್ಯಾಯರ ಸಂಖೆ ಎಷ್ಟಿದೆ? ಈ ಉಪಾಧ್ಯಾಯರುಗಳ ಸ್ಥಿತಿಗತಿಗಳು ಹೇಗಿವೆ? ಶಾಲೆಗಳು ಹೇಗಿವೆ? ಅವು ಹೇಗೆ ನಡೆಯುತ್ತಿವೆ ಎನ್ನುವುದನ್ನೆಲ್ಲಾ ನೋಡಿದರೆ, ಬಹಳ ಕನಿಷ್ಟ ದರ್ಜೆಯ ವಿದ್ಯಾಭ್ಯಾಸವನ್ನು ಇವೊತ್ತು ಕೊಡುತ್ತಿದ್ದಾರೆ ನಿಜ, ನಮಗೆ ಹಣದ ಕೊರತೆ ಇದೆ. ನಿಜ, ನ್ಯಾಯವಾದ ವ್ಯವಸ್ಥೆಯನ್ನು ಮಾಡಬೇಕೆಂದು ಇಟ್ಟುಕೊಂಡಿದ್ದೇವೆ. ಶೀಘ್ರವಾಗಿ ತೃಪ್ತಿಕರವಾಗಿ ಬೆಳೆಸುವುದಕ್ಕೆ ಸಾಧ್ಯವಾಗುತ್ತಿಲ್ಲ ಎಂದು ಈ ವಿಷಯದಲ್ಲಿ ವಿಳಂಬ ಮಾಡಿದರೆ, ಈ ವಿಷಯದಲ್ಲಿ ಉದಾಸೀನತೆ ತಲೆಯತ್ತಿದರೆ ಅದು ದೊಡ್ಡ ಹಾನಿಕರವಾದ ಲೋಪವಾಗುತ್ತದೆ, ಆದುದರಿಂದ ಇವೊತ್ತು ಪ್ರೈಮರಿ ವಿದ್ಯಾಭ್ಯಾಸದ ಕಡೆಗೆ ಹೆಚ್ಚು ಗಮನವನ್ನು ಕೊಟ್ಟು ಸರಕಾರ ಪೂರೈಸಬೇಕು. ದೇಶದಲ್ಲಿ ಇವತ್ತು ಇರತಕ್ಕ ಆರು ವರ್ಷತುಂಬಿದ ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ತಂದು ಸೇರಿಸಿ ಅಕ್ಷರಸ್ಥರನ್ನಾಗಿ ಶಿಕ್ಷಣಕೊಡುವ ವ್ಯವಸ್ಥೆಯನ್ನು ಮಾಡಲೇ ಬೇಕು ಎಂದು ಸರಕಾರದಲ್ಲಿ ಒತ್ತಾಯ ಮಾಡುತ್ತೇನೆ.

ಇನ್ನು ಕಟ್ಟಡಗಳ ಬಗ್ಗೆ ಪ್ರಶ್ನೆ ಮಾಡುತ್ತೇನೆ. ಮರದ ಕೆಳಗೆ ನೆರಳಿನಲ್ಲಿ ನಾವು ಶಾಲೆಗಳನ್ನು ನಡೆಸಿಕೊಂಡು ಹೋಗಬೇಕೆಂದು ಮಹಾತ್ಮ ಗಾಂಧಿಯವರೂ ಹಿಂದೆ ಹೇಳುತ್ತಿದ್ದರು. ನಮ್ಮ ವಿದ್ಯಾಮಂತ್ರಿಗಳು ಹೇಳುವುದರಲ್ಲಿ ಅರ್ಥವಿದೆ. ಬಿಜಾಪುರದ ಬಯಲು ಸೀಮೆ, ಅಲ್ಲಿ ಮರಗಳಿಲ್ಲ. ಆದರೆ ನಮ್ಮ ಮಲೆನಾಡಿನಲ್ಲಿ ಮರಗಳಿವೆ ಎಂದು ಮರಗಳ ಕೆಳಗೆ ಕುಳಿತರೆ ಮಳೆ ನಿಂತರೂ ಮರದ ಮೇಲಿರುವ ಮಳೆಹನಿಯಿಂದ ಅದರ ಕೆಳಗೆ ಕುಳಿತುಕೊಂಡು ಶಾಲೆ ಮಾಡಬೇಕೆಂದು ಹೇಳುವುದು, ಹೇಳುವಷ್ಟು ಸುಲಭವಾದ ಕೆಲಸವಲ್ಲ. ಅದನ್ನೂ ನಾನೂ ಒಪ್ಪುತ್ತೇನೆ. ಮರದ ಕೆಳಗೆ ಶಾಲೆಗಳನ್ನು ಮಾಡುವುದು ಉತ್ಪ್ರೇಕ್ಷೆಯ ಅಲಂಕಾರದ ರೀತಿಯಾಗುತ್ತದೆ ಎಂದು ಹೇಳಬಹುದೆ ವಿನಾ ಕಾರ್ಯತಃ ಏನೂ ಮಾಡುವುದಕ್ಕಾಗುವುದಿಲ್ಲ. ಈಗ ನಮಗೆ ಎಷ್ಟು ಸಂಖ್ಯೆಯ ಉಪಾಧ್ಯಾಯರು ಬೇಕೋ ಅಷ್ಟು ಸಂಖ್ಯೆಗೂ ಕಡಿಮೆ ಜನರಿದ್ದಾರೆ, ಹುಡುಗರ ಸಂಖ್ಯೆಗೆ ತಕ್ಕಂತೆ ಉಪಾಧ್ಯಾಯರುಗಳಿಲ್ಲ. ಕೆಲವು ಪ್ರದೇಶಗಳಲ್ಲಿ ನೂರು ಮಕ್ಕಳಿಗೆ ಒಬ್ಬರೇ ಉಪಾಧ್ಯಾಯರೆಂದು ಹಾಕಿಬಿಟ್ಟಿದ್ದಾರೆ. ಈ ರೀತಿ ಅಧಿಕಾರಿಗಳ ಕೊರತೆ ಇರುವ ಸ್ಥಿತಿ ಏಕೆ ಎನ್ನುವುದನ್ನು ವಿಚಾರಮಾಡಬೇಕು. ನಿನ್ನೆ ದಿನ ನಾನು ಕಟ್ಟಡಗಳ ಬಗ್ಗೆ ಪ್ರಶ್ನೆಹಾಕಿ ಸಲಹೆ ಮಾಡಿದ ಹಾಗೆ ಇನ್ನಾದರೂ ಸಹ ಸರಕಾರದವರು ಏನಾದರೂ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು, ಶಿಕ್ಷಣಕ್ಕೆ ಬೇಕಾಗುವಷ್ಟು ಆವಶ್ಯಕತೆಗನುಸಾರ ಅಲ್ಲಿರುವ ಗ್ರಾಮ ಪಂಚಾಯಿತಿಗಳಿಗೋ, ತಾಲ್ಲೂಕು ಬೋರ್ಡುಗಳಿಗೋ ಬಿಟ್ಟು ಅದಕ್ಕೆ ಬೇಕಾಗುವಷ್ಟು ಹಣವನ್ನು ಅವರಿಗೆ ಒದಗಿಸಿಕೊಡಬೇಕು ಮತ್ತು ಗ್ರಾಮಗಳ ಮಟ್ಟದಲ್ಲಿ ಬೇರೆ ತಾಲ್ಲೂಕು ಮಟ್ಟದಲ್ಲಿ ಬೇರೆ ಎಂದು ಅವರ ಮೂಲಕ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಬದಲಾಗಿ ಸಾಧ್ಯವಾದ ಮಟ್ಟಿಗೂ cheap design ಹಾಕಿಕೊಂಡು ಭದ್ರವಾದ, ವಿಶಾಲವಾದ, ಗಾಳಿ, ಬೆಳಕು ಬರತಕ್ಕಂತಹ ಕಟ್ಟಡಗಳನ್ನು ಜಾಸ್ತಿ ಕಟ್ಟುವ ವ್ಯವಸ್ಥೆಮಾಡಬೇಕು. ಈ ರೀತಿ ಶಾಲೆಗಳಿಗಾಗಿ ಹೆಚ್ಚಾಗಿ ಕಟ್ಟಡಗಳನ್ನು ಕಟ್ಟಿ ಅದನ್ನು ದೊರಕಿಸಿಕೊಡುವುದಕ್ಕೆ ಹೆಚ್ಚಿನ ಮಹತ್ವ ಕೊಡಬೇಕು.

Mr. SPEAKER—The House will now rise and meet after half an hour.

The House adjourned for recess at Three of the Clock and re-assembled at Thirty-Five Minutes past Three of the Clock.

[MR. CHAIRMAN (SRI M. SREENIVASA NAYAK) in the Chair.]

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಸರಕಾರದವರು ವಿದ್ಯಾ ಇಲಾಖೆಗೆ ಒಟ್ಟು ಖರ್ಚು ಮಾಡತಕ್ಕ 19 ಕೋಟಿಯಲ್ಲಿ ಅರ್ಧದಷ್ಟು ಭಾಗ ಹಣವನ್ನು ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡುತ್ತಾರೆ. ಈ ಪ್ರಾಥಮಿಕ ವಿದ್ಯಾಭ್ಯಾಸದ ವಿಚಾರದಲ್ಲಿ ಸರಕಾರ ಒಂದು ರೀತಿಯನ್ನು ಅನುಸರಿಸಿಕೊಂಡು ಹೋಗುತ್ತಾ ಇದೆ. ಸಮನ್ವಯ ಪಡಿಸುವುದಕ್ಕಾಗಿ ಏಳು-ಎಂಟನೆ ತರಗತಿಯ ವಿದ್ಯಾರ್ಥಿಗಳು ಒಟ್ಟಿಗೆ ಮುಂದಿನ ತರಗತಿಗೆ ಹೋಗುವ ಪರಿಸ್ಥಿತಿ ಈ ವರ್ಷ ಬಂದಿದೆ. ಕೆಲವು ವಿದ್ಯಾರ್ಥಿಗಳಿಗೆ ಒಂದು ವರ್ಷ ಹಿಂದಕ್ಕೆ ಹೋಗುವಂತಾಗಿ ನಷ್ಟವಾಗುತ್ತದೆ. ಇನ್ನು ಈ ಎ. ಜಿ. ಆರ್. ಕಮಿಟಿ ವರದಿಯಲ್ಲಿ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಈಗ ಸರಕಾರಕ್ಕೆ ಈ ಪ್ರಾಥಮಿಕ ವಿದ್ಯಾಭ್ಯಾಸವನ್ನು ತಾವೇ ನೇರವಾಗಿ ನಡೆಸಬೇಕೇ ಅಥವಾ ಸ್ಥಳೀಯ ಸಂಸ್ಥೆಗಳಿಗೆ ಜವಾಬ್ದಾರಿ ವಹಿಸಿಕೊಡಬೇಕೇ ಎಂಬ ಒಂದು ಸಮಸ್ಯೆಯಾಗಿದೆ. ಈ ಕಾರ್ಯವನ್ನು ಗ್ರಾಮ ಪಂಚಾಯಿತಿ, ತಾಲ್ಲೂಕು ಬೋರ್ಡು ಪೌರಸಭೆ ಹಾಗೂ ನಗರ ಸಭೆಗಳು ನಡೆಸಿಕೊಂಡು ಹೋಗತಕ್ಕಂಥ ಜವಾಬ್ದಾರೀ ವಹಿಸಬೇಕು ಮತ್ತು ಸರಕಾರದವರು ಇದರ ಮೇಲ್ವಿಚಾರಣೆ ನೋಡಿಕೊಳ್ಳಬೇಕು ಎಂದು ಹೇಳುತ್ತೇನೆ. ಕೆಲವರು ಇದಕ್ಕೆ ಭಯಪಡುತ್ತಾರೆ. ಯಾಕೆಂದರೆ ಗ್ರಾಮಗಳಲ್ಲಿ ಪಾರ್ಟಿ ಪಕ್ಷಗಳು ಇರುವದರಿಂದ ಒಂದು ಸರಿಯಾದ ವ್ಯವಸ್ಥೆ ಇಲ್ಲದೆ ಶಾಲೆಗಳು ಹಾಳಾಗಿ ಹೋಗುತ್ತವೆಯೋ ಏನೋ ಅವುಗಳಿಗೆ ವಹಿಸುವುದಕ್ಕೆ ಭಯವಾಗುತ್ತಿದೆ ಎಂದು. ಆದರೆ ಅವರವರ ಮಕ್ಕಳನ್ನು ಸಾಕುವ ಜವಾಬ್ದಾರಿ ಹೇಗೆ ಅವರುಗಳನ್ನು ಹೆತ್ತ ತಂದೆ ತಾಯಿಗಳದು ಆಗಿರುತ್ತದೆಯೋ, ಹಾಗೆಯೇ ಆಯಾ ಗ್ರಾಮದಲ್ಲ, ಆಯಾ ಊರಿನಲ್ಲಿ ಇರತಕ್ಕಂಥ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡತಕ್ಕಂಥ ಜವಾಬ್ದಾರಿ ಅವರ ತಂದೆ ತಾಯಿಗಳದು ಮತ್ತು ಆಯಾ ಗ್ರಾಮಪಂಚಾಯಿತಿ ಮತ್ತು ಸ್ಥಳೀಯ ಸಂಸ್ಥೆಗಳದು ಆಗಿರುತ್ತದೆ. ಆದರೆ ಬೆಂಗಳೂರಿನಲ್ಲಿ ಕುಳಿತುಕೊಂಡು ಹುಲಿಕಲ್ಲಿನಲ್ಲಿ ನಡೆಯತಕ್ಕಂಥ ಶಾಲೆ ಸರಿಯಾಗಿ ನಡೆಯುತ್ತದೆಯೋ ಇಲ್ಲವೋ, ಉಪಾಧ್ಯಾಯರು ಬರುತ್ತಾರೆಯೋ ಇಲ್ಲವೋ ಎಂದು ಅಲ್ಲಿ ಹುಟ್ಟುವ ಸ್ಥಿತಿಯನ್ನು ಇಲ್ಲಿ ಚಿಂತೆ ಮಾಡುವುದು ಯಾರಿಗೂ ಸಾಧ್ಯವಿಲ್ಲ. ಗ್ರಾಮಪಂಚಾಯಿತಿ ಮತ್ತು ಸ್ಥಳೀಯ ಸಂಸ್ಥೆಗಳು ಈ ಜವಾಬ್ದಾರಿಯನ್ನು ಹೊತ್ತುಕೊಳ್ಳುವುದಕ್ಕೆ ಮುಂದೆ ಬರಬೇಕು. ಇದನ್ನು ಸರ್ಕಾರದವರು ಈ ರೀತಿ ತೀರ್ಮಾನಿಸುವುದು ಒಳ್ಳೆಯದು. ಆದರೆ ಸರ್ಕಾರ ಹೀಗೆ ಮಾಡುತ್ತಾ ತನ್ನ ಜವಾಬ್ದಾರಿಯನ್ನೂ, ಹೊಣೆಯನ್ನೂ ಹಾರಿಸಿಕೊಳ್ಳುವುದಕ್ಕೆ ಆಗುವುದಿಲ್ಲ ಎಲ್ಲಾ ಕಡೆಯಲು ಶಾಲೆಗಳನ್ನು ತೆರೆದು ಅವು ಸರಿಯಾದ ರೀತಿಯಲ್ಲಿ ನಡೆದುಕೊಂಡು ಹೋಗಲು ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಅವುಗಳನ್ನು ಬಹಳ ಜಾಗ್ರತೆ ರೀತಿಯಿಂದ ತೆಗೆದುಕೊಂಡು ಅವುಗಳು ನಡೆದುಕೊಂಡು ಹೋಗುವುದನ್ನು ನೋಡಿಕೊಳ್ಳಬೇಕಾಗುತ್ತದೆ. ಇಲ್ಲಿ ಎಷ್ಟು ವರ್ಷದ ವಿದ್ಯಾಭ್ಯಾಸ ನಮ್ಮ ದೇಶದಲ್ಲಿ ನಡೆಯಬೇಕು ಅನ್ನುವುದನ್ನು ಇನ್ನೂ ತೀರ್ಮಾನಮಾಡಿಲ್ಲ. ಈಗಿನ್ನೂ ಭಾರತ ಸರ್ಕಾರದವರು ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಶ್ರೀಮಾನ್ ಧೇಬರ್‌ರವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಮಾಡಿ, ಒಂದು ಪ್ರಶ್ನಾವಳಿಯನ್ನು ದೇಶಾದ್ಯಂತ ಕೊಟ್ಟಿದ್ದಾರೆ. ಅದರ ವರದಿಯಾವಾಗ ಬರುತ್ತೊ, ಅದು ಏನಾಗುತ್ತೋ ಹೇಳುವುದಕ್ಕಾಗುವುದಿಲ್ಲ. ಮುಖ್ಯವಾಗಿ ಇದುವರೆಗೆ ಏನು ಕೆಲವು 10-15 ವರ್ಷಗಳಿಂದ ವಿದ್ಯಾ ಇಲಾಖೆಯಲ್ಲಿ ಅಥವ ವಿದ್ಯೆಗೆ ಸಂಬಂಧಪಟ್ಟ ಕ್ಷೇತ್ರದಲ್ಲಿ ಪ್ರಯೋಗಗಳು ನಡೆಯುತ್ತಾ ಇವೆಯೋ ಅವು ಉಪಯೋಗವಾಗಿಲ್ಲ. ಈ ರೀತಿ ಮಕ್ಕಳ ಜೀವನದ ಮೇಲೆ ಆಟ ಆಡತಕ್ಕಂಥ ಪ್ರಯೋಗಗಳು ಬಹಳ ಹಾನಿಕರ ಎಂದು ನಾನು ಈ ಸಂಧರ್ಭದಲ್ಲಿ ಹೇಳಬೇಕಾಗಿದೆ.

ಇನ್ನು ಯೂನಿವರ್ಸಿಟಿ ವಿದ್ಯಾಭ್ಯಾಸದ ಬಗ್ಗೆ ಅನೇಕರು ಅನೇಕ ಸಂದರ್ಭಗಳಲ್ಲಿ ಅಲ್ಲಿ ಎಲ್ಲವೂ ಸರಿಯಾಗಿಲ್ಲ ಎಂದು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಎರಡು ಯೂನಿವರ್ಸಿಟಿಗಳಿವೆ. ಮೇಲಾಗಿ ಸರ್ಕಾರದವರು ನೇರವಾಗಿ ಕೆಲವು ಕಾಲೇಜುಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಜೊತೆಗೆ ತಾಂತ್ರಿಕ ವಿದ್ಯಾಭ್ಯಾಸ ಹೆಚ್ಚು ಆಗಬೇಕು ಎಂದು ಹೇಳಿ ಎಲ್ಲಾ ಕಡೆಗಳಲ್ಲಿಯೂ ಪಾಲಿಟೆಕ್ನಿಕ್‌ಗಳನ್ನು ತೆರೆಯುತ್ತಾ ಇದ್ದಾರೆ, ಹಾಗೂ ಇಂಜನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳನ್ನೂ ತೆಗೆದಿದ್ದಾರೆ. ಆದರ ಅವಶ್ಯಕತೆಗಳನ್ನು ಅನುಸರಿಸಿ ನಾವು ವಿದ್ಯೆಯನ್ನು ಕೊಡುವುದಕ್ಕೆ ಆಗುತ್ತಾ ಇಲ್ಲ, ಅಥವ ಯಾರು ಯಾರು ಅಂಥ ವಿದ್ಯೆಗೆ ಬೇಡಿ ಅರ್ಜಿಗಳನ್ನು ಹಾಕುತ್ತಾರೆಯೋ, ಅವರೆಲ್ಲರಿಗೂ ಅವಕಾಶ ಕೊಡುವುದಕ್ಕಾಗುತ್ತಿರುವುದಿಲ್ಲ. ಯಾವ ಆಧಾರದ ಮೇಲೆ ಈ ಶಾಲೆಗಳಿಗೆ ವಿದ್ಯಾರ್ಥಿಗಳನ್ನು ಆರಿಸಬೇಕು ಎನ್ನುವುದು ಇನ್ನೂ ತೀರ್ಮಾನವಾಗಿಲ್ಲ. ಸರ್ಕಾರದವರು ಪ್ರತಿವರ್ಷ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ, ಅವರು ಕೋರ್ಟುಗಳಿಗೆ ಹೋಗಿ ಅದನ್ನು ಹೊಡೆಸಿ ಹಾಕುತ್ತಾರೆ. ಪುನಃ ಪ್ರವೇಶ ವಿಷಯದಲ್ಲಿ ಗೊಂದಲ ಪ್ರತಿವರ್ಷ ನಡೆಯುತ್ತದೆ. ಇದರ

ಪ್ರಕಾರ ಸರ್ಕಾರದವರು ಏನೂ ಕ್ರಮ ತೆಗೆದುಕೊಂಡಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. "ನಾನು ಇನ್ನೂ ಒಂದು ನಾಲ್ಕು ವರ್ಷ ಮಂತ್ರಿ ಮಂಡಲದಲ್ಲಿ ಉಳಿಯಬೇಕು" ಎಂಬ ಒಂದು ನೀತಿಯನ್ನು ವಿದ್ಯಾಮಂತ್ರಿಗಳಾಗಿದ್ದವರು ಅನುಸರಿಸದೆ ದೂರದೃಷ್ಟಿಯುತವಾದ ಮತ್ತು ಲೋಕೋಪಯೋಗಿಯಾಗುವಂತಹ ಒಂದು ನೀತಿಯನ್ನು ಸರ್ಕಾರದವರು ಹಾಕಿ ಅದನ್ನು ನಿಷ್ಠುರವಾಗಿ ಪರಿಪಾಲನೆ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು.

ಶಿಕ್ಷಣ ಮಾಧ್ಯಮದ (medium of instruction) ವಿಷಯದಲ್ಲಿ ನಮ್ಮ ದೇಶದಲ್ಲಿ ಇನ್ನೂ ತೀರ್ಮಾನವಾಗಿಲ್ಲವೆಂದು ಕೆಲವು ಕಡೆಗಳಲ್ಲಿ ಕೂಗು ಕೇಳಿಬರುತ್ತಿದೆ. ಪ್ರೈಮರಿ ಮೂರನೇ ತರಗತಿಯಿಂದ ಇಂಗ್ಲೀಷ್ ಭಾಷೆ ಹೇಳಿಕೊಡುತ್ತೇವೆಂದು ಹೇಳುವವರು ಹುಚ್ಚರು ಎಂದು ಹೇಳಬೇಕಾದ್ದಿಲ್ಲ. ಏಕೆಂದರೆ ನಮ್ಮ ದೇಶದಲ್ಲಿ ಇರತಕ್ಕಂಥ ಪ್ರಾಥಮಿಕ ವಿದ್ಯಾಭ್ಯಾಸದ ಪ್ರತಿ ಶಾಲೆಯ ಮೂರನೇ ತರಗತಿಗೂ ಇಂಗ್ಲೀಷ್ ಹೇಳಿಕೊಡತಕ್ಕ ವಿದ್ಯಾವಂತ ಉಪಾಧ್ಯಾಯರು ಎಷ್ಟು ಜನ ಸಿಗುತ್ತಾರೆಂದು ತಿಳಿದುಕೊಳ್ಳದೆ ಮಾತನಾಡುವುದು ಏನು ತೋರಿಸುತ್ತದೆಂದರೆ ಇಂಗ್ಲೀಷಿನ ಬಗ್ಗೆ ಇರುವ ಒಂದು ಅಂಥ ಅಭಿಮಾನ, ನಮ್ಮ ದೇಶದಲ್ಲ ಇಂಗ್ಲೀಷಿನಲ್ಲಿ ಕಲಿಸತಕ್ಕಂಥ ಒಂದು ಜವಾಬ್ದಾರಿ ಬ್ರಿಟೀಷ್ ಕೌನ್ಸಿಲ್ಲನವರದು, ಅವರು ಇಲ್ಲಿ ಬಂದು ಕೆಲಸ ಮಾಡುತ್ತಿದ್ದಾರೆ, ಅವರೇ ಇದನ್ನು ಮುಂದೆ ವಹಿಸಿಕೊಂಡು ಹೋಗಬೇಕಾಗಿದೆ.

ಶ್ರೀ ಎಸ್. ಆರ್. ಕಂಠಿ.—ಮೂರನೇ ಕ್ಲಾಸಿನಿಂದ ಇಂಗ್ಲೀಷ್ ಕಲಿಸಬೇಕೆಂದು ನಾಲ್ಕು ಸೌತ್ ಇಂಡಿಯನ್ ರಾಜ್ಯಗಳ ವಿದ್ಯಾಮಂತ್ರಿಗಳು 1961 ನೇ ಇಸವಿಯಲ್ಲಿ ಸೇರಿದಾಗ ನಿರ್ಧಾರ ಮಾಡಿದ್ದಾರೆ. ಆದರೆ ನಾವು ಅದನ್ನು ಅನುಕರಣಮಾಡಿಲ್ಲ, ಆಂಧ್ರದಲ್ಲಿ ಅನುಕರಣಮಾಡಿ ನಡೆಸುತ್ತಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಇಂಗ್ಲೀಷ್ ಭಾಷೆಯನ್ನು ಕಲಿಯಲೇಬೇಕು, ಇಂಗ್ಲೀಷಿನಲ್ಲಿ ನಮ್ಮ ಮಕ್ಕಳು ಬುದ್ಧಿವಂತರಾಗಬೇಕೆಂದು ಹೇಳುವುದಾದರೆ ಬ್ರಿಟಿಷ್ ಕೌನ್ಸಿಲ್ ಅದನ್ನು ವಹಿಸಿಕೊಂಡು ಮಾಡಬೇಕೇ ಹೊರತು, ಅಂಥ ದೊಡ್ಡ ಹೊರೆಯನ್ನು ನಾವು ಹೊರುವುದಕ್ಕಾಗುವುದಿಲ್ಲ.

ಚೀಣದಿಂದ ಈಗ ನಮಗೆ ಬಂದಿರುವ ವರದಿಗಳ ಪ್ರಕಾರ 100 ಕ್ಕೆ 90-91 ಜನ ಅಲ್ಲಿ ಅಕ್ಷರಸ್ಥರಾಗಿದ್ದಾರೆಂದು ನಾವು ಕೇಳಿದ್ದೇವೆ. ಅಲ್ಲಿ ಅಕ್ಷರ ಚಿತ್ರ ಲಿಪಿ. 300 ರಿಂದ ಹಿಡಿದು 3,000 ವರೆಗೂ ಅಕ್ಷರಗಳು ಹೋಗಬಹುದು. ಶಿಕ್ಷಣ ಮಾಧ್ಯಮ ದೇಶಭಾಷೆಯಾಗಿರುವುದರಿಂದ ಅಲ್ಲಿ ಅಷ್ಟು ಅಕ್ಷರತೆ ಬಂದಿರುತ್ತದೆ, ದೇಶದಲ್ಲಿ ಒಂದು ದೊಡ್ಡ ಬಲ ಬಂದಿದೆ. ನಮ್ಮ ದೇಶದಲ್ಲಿ ಈ ಅಕ್ಷರತೆ ಶೇಕಡ 20-25-30 ಮುಟ್ಟುವುದರೊಳಗೆ ಬಹಳ ಕಷ್ಟವಾಗುತ್ತದೆ. ಹೆಸರಿಗೆ ಮಾತ್ರ ವಯಸ್ಕರಿಗೆ ಶಿಕ್ಷಣ ಕೊಡತಕ್ಕಂಥ ಸಂಸ್ಥೆಗಳಿವೆ, ಅವು ವ್ಯಾಪಕವಾಗಿಲ್ಲ, ಅವುಗಳಿಂದ ಏನೂ ಕೆಲಸವಾಗಿಲ್ಲ, ಎಲ್ಲ ಜನರಿಗೂ ದೇಶದಲ್ಲಿ ವಿದ್ಯೆ ಕಲಿಸತಕ್ಕಂಥ ವ್ಯವಸ್ಥೆಯನ್ನು ಮಾಡಿದರೆ ಬಹಳ ಒಳ್ಳೆಯದಾಗುತ್ತದೆ.

[MR. SPEAKER in the Chair.]

ಆದರೆ ಶಿಕ್ಷಣ ಮಾಧ್ಯಮ ಮಾತೃ ಭಾಷೆಯಲ್ಲಿ ಇಲ್ಲದೆಹೋದಾಗ ಅಕ್ಷರ ಜ್ಞಾನವನ್ನು ಎಲ್ಲಾ ಮಕ್ಕಳಿಗೂ, ಎಲ್ಲಾ ಜನರಿಗೂ ಕೊಡುವುದಕ್ಕಾಗುವುದಿಲ್ಲ. ಎಲ್ಲಿ ಮರಾಠಿ ಮಕ್ಕಳು, ತೆಲುಗು ಮಕ್ಕಳು, ತಮಿಳು ಮಕ್ಕಳು, ಮತ್ತು ಬೇರೆ ಭಾಷೆ ಉಪಯೋಗಿಸತಕ್ಕಂಥವರು ಹೆಚ್ಚಿಗೆ ಇರುತ್ತಾರೆಯೋ, ಅಲ್ಲಿಯೂ ವಿದ್ಯಾಭ್ಯಾಸಕ್ಕೆ ಆ ಮಾತೃ ಭಾಷೆಯ ಸೌಲಭ್ಯ ಕಲ್ಪಿಸಬೇಕು. ಈ ಒಂದು ದಿಶೆಯಲ್ಲಿ ರಾಜ್ಯಾಂಗದ ವಿವರಣೆಯನ್ನು ಒಪ್ಪಿಕೊಳ್ಳಲೇಬೇಕು. ಇಲ್ಲದೆ ಹೋದರೆ ಅವರ ವಿರುದ್ಧ ಹೋದಂತಾಗಿ ಅದಕ್ಕೆ ಸರ್ಕಾರದವರು ಅವಕಾಶ ಕೊಟ್ಟಂತೆ ಆಗಬಾರದು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಶಿಕ್ಷಣ ಮಾಧ್ಯಮದ ವಿಷಯದಲ್ಲಿ ನಾನು ಒಂದೇ ಒಂದು ಮಾತನ್ನು ಹೇಳಬೇಕಾದರೆ ಈಗ ಪಿ. ಯು. ಸಿ. ದು ಒಂದು ಉದಾಹರಣೆ ಇದೆ. ಪಿ. ಯು. ಸಿ. ಯಲ್ಲಿ. ಆ ಪರೀಕ್ಷೆಯನ್ನು ಏಕೆ ನಡೆಸುತ್ತಾರೋ ನನಗೆ ಗೊತ್ತಿಲ್ಲ. ಅದರ ಹಿಂದುಗಡೆ ಒಂದು ಕಾರಸ್ತಾನವಿರಬಹುದು. ಎಲ್ಲಾ ಜನರೂ ಯೂನಿವರ್ಸಿಟಿಗೆ ಬರದಿರಲು ಅನುಕೂಲವಾಗುತ್ತದೆಂದು 100 ಕ್ಕೆ 80 ಜನರನ್ನು ಅಲ್ಲಿ ಹಿಡಿದುಹಾಕಬೇಕೇ? 100 ಕ್ಕೆ18 ಜನ ಈ ಪರೀಕ್ಷೆಯಲ್ಲಿ ಪಾಸ್ ಆಗುವುದು ಅಂದರೆ ಅದ ಇಡೀ ವಿದ್ಯೆಯ ಮೇಲೆ ಲಾಂಛನವಾಗುತ್ತದೆ. ಇದಕ್ಕೆ ಇಂಗ್ಲೀಷ್ ಮಿಡಿಯಂ ಕಾರಣವೆಂದು ಹೇಳುತ್ತೇನೆ. ಅವರು ಮುಂದಕ್ಕೆ ಹೋಗಬಾರದೆಂಬ ದುರುದ್ದೇಶ ಸರ್ಕಾರಕ್ಕೆ ಇದೆಯೆಂದು ನಾನು ಹೇಳಬೇಕಾಗುತ್ತದೆ, ಬೇರೆ ಬೇರೆ ಕಾರಣಗಳನ್ನು ಅದಕ್ಕೆ ಕೊಡುತ್ತೀರ. ಆದರೆ ಇದರ ಹಿಂದೆ ಬಲವತ್ತರವಾದ ಕಾರಣವಿದೆ. ಯಾರೂ ಮುಂದೆ ಹೋಗಿ ವಿದ್ಯಾಭ್ಯಾಸ ಮಾಡಬಾರದು ಎಂಬ

(ಶ್ರೀ ಎಸ್. ಗೋಪಾಲಗೌಡ)

ಉದ್ದೇಶ ಇದರ ಹಿಂದುಗಡೆ ಇರಬಹುದು ಎಂದು ಅನುಮಾನಪಡಬೇಕಾಗುತ್ತದೆ, ಮುಂದಕ್ಕೆ ಹೋಗದಹಾಗೆ ಅಲ್ಲಿಯೇ ತಡೆಹಾಕಬೇಕೆಂಬ ಉದ್ದೇಶವಿರಬೇಕು. ಈಗ ಹೆಚ್ಚುಕಾಲವಿಲ್ಲದಿರುವುದರಿಂದ ನನ್ನ ಗೊತ್ತುವಳಿಗಳನ್ನು ಒತ್ತಾಯಪಡಿಸುವುದಕ್ಕಾಗಲಿ, ಅವುಗಳ ಬಗ್ಗೆ ಹೆಚ್ಚಾಗಿ ಹೇಳುವುದಕ್ಕಾಗಲಿ ಇಷ್ಟಪಡುವುದಿಲ್ಲ. ಮಾನ್ಯ ವಿದ್ಯಾಮಂತ್ರಿಗಳು ಈ ಬಗ್ಗೆ ವಿಚಾರಮಾಡಬೇಕೆಂದು ಹೇಳಿ ಮೊದಲೇ ಕೇಳಿಕೊಂಡಿದ್ದೇನೆ, ಅದನ್ನೇ ಪುನಃ ಪ್ರಾರ್ಥನೆಮಾಡಿಕೊಳ್ಳುತ್ತೇನೆ.

ಪಠ್ಯಪುಸ್ತಕಗಳನ್ನು ಸರ್ಕಾರದವರು ಮಾಡಿ ಹಂಚಿದ್ದಾರೆ, ಅದು ಅಭಿನಂದನೆ ಮಾಡಬೇಕಾದ ವಿಷಯ. ಆದರೆ ಅದರಲ್ಲಿ ಒಂದು ಕಾಂಟ್ರೊವರ್ಸಿ ಏನೋ ಬಂದಿದೆ. ಚರಕ ಅನ್ನತಕ್ಕಂಥಾದ್ದು ಅದು ಸರಿಯಲ್ಲ, ಅದು ಚಕ್ರ ಎಂದು ಇರಬೇಕೆನ್ನುವುದನ್ನು ಒಪ್ಪಿಕೊಳ್ಳಲೇಬೇಕು. ಚರಕ ಅಂದರೆ ಏನು ಎಂದು ಬರೆದವರು ವಿವರಣೆ ಕೊಟ್ಟರೆ ಸಾಲದು ಇದರಿಂದ ಕಾಂಗ್ರೆಸ್ ಬಾವುಟಕ್ಕೆ ನಮಸ್ಕಾರ ಮಾಡಿದಹಾಗೆ ಆಗುತ್ತದೆ, ಪರೋಕ್ಷವಾಗಿ ರಾಷ್ಟ್ರಧ್ವಜಕ್ಕೆ ಅಪಚಾರ ಆಗುತ್ತದೆಂದು ಈ ಸಂಧರ್ಭದಲ್ಲಿ ಹೇಳಬಯಸುತ್ತೇನೆ.

ಕೊನೇ ಖೊತಾನಿರ್ಣಯದಲ್ಲಿ ಈ ಯೂನಿವರ್ಸಿಟಿ ವಿದ್ಯಾಭ್ಯಾಸವನ್ನು —ಪಿ. ಜಿ. ಆರ್ ಕಮಿಟಿಯವರು ಒಂದು ತೀರ್ಮಾನ ಮಾಡಿದ್ದಾರೆ—ಯು. ಜಿ. ಸಿ ಅವರಿಗೆ ಮತ್ತು ಕೇಂದ್ರ ಸರ್ಕಾರದವರಿಗೆ ವಹಿಸಬಹುದು ಎಂದು ಹೇಳುವುದಕ್ಕೆ ಅದನ್ನು ಚರ್ಚೆಮಾಡಬೇಕೆಂದು ಸೇರಿಸಿದ್ದೆ. ಪ್ರಾಥಮಿಕ ಮತ್ತು ಸೆಕೆಂಡರಿ ವಿದ್ಯಾಭ್ಯಾಸವನ್ನು ನಡೆಸತಕ್ಕ ಪೂರ್ತಿ ಜವಾಬ್ದಾರಿಯನ್ನು ಸರ್ಕಾರ ಹೊತ್ತುಕೊಳ್ಳಬೇಕು, ಸ್ಥಳೀಯ ಸಂಸ್ಥೆಗಳ ಸಹಕಾರದಿಂದ—ಯೂನಿವರ್ಸಿಟಿ ವಿದ್ಯಾಭ್ಯಾಸ ಏನಿದೆ ಅದನ್ನು ನೀವು ಅದಕ್ಕೇ ಪ್ರತ್ಯೇಕವಾದ ಒಂದು ಬೋರ್ಡು ಮಾಡಿ. ಅವರಿಗೆ ಹಣದ ಸಹಾಯ ಮಾಡಿದರೆ ಸಾಕು ನೇರವಾಗಿ ಸರ್ಕಾರದವರೇ ಅದನ್ನು ನಡೆಸುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಎಸ್. ಆರ್. ಕಂಠಿ.—ಯೂನಿವರ್ಸಿಟಿ ಅಟಾನಮಸ್ ಇದೆ, ಅದರಲ್ಲಿ ನಮ್ಮದೇನೂ ಇಲ್ಲ.

ಶ್ರೀ ಎಸ್. ಗೋಪಾಲಗೌಡ.—ಯೂನಿವರ್ಸಿಟಿ ಅಟಾನಮಸ್ ಇದೆ, ನಿಜ. ಆದರೆ ಸರ್ಕಾರದವರು ಎಷ್ಟೋ ಕಾಲೇಜುಗಳನ್ನು ನಡೆಸುತ್ತಾರೆ. ಆ ಜವಾಬ್ದಾರಿಯನ್ನು ಕೂಡ ಪ್ರತ್ಯೇಕವಾಗಿ ಬೇರೆಯವರಿಗೆ ವಹಿಸಿಕೊಟ್ಟು ಅವನ್ನು ಸರ್ಕಾರ ನಡೆಸುವ ಪಾಪವನ್ನು ತಪ್ಪಿಸಿಕೊಳ್ಳುವುದು ಒಳ್ಳೆಯದು ಎಂದು ಕಾಣುತ್ತದೆ. ಕಾಲೇಜು ಮಟ್ಟದ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ಸರ್ಕಾರದವರು ಹೊತ್ತುಕೊಳ್ಳುವುದಕ್ಕೆ ಆಗುವುದಿಲ್ಲ. ಅದನ್ನು ಪೂರ್ತಿ ಯೂನಿವರ್ಸಿಟಿಗೇ ವಹಿಸಬಹುದು. ಖಾಸಗೀ ಜನರು ಬಂದರೆ ಅವರಿಗೂ ಕೊಡಬಹುದು. ಆದರೆ ನಡೆಸುವಾಗ pay scale ಆಗಲೀ, ಕರಿಕ್ಯೂಲಂ ಆಗಲೀ ಹೇಳಿಕೊಡತಕ್ಕ ಪಾಠ ಆಗಲೀ ಒಂದು ಮಟ್ಟದಲ್ಲಿ, ಒಂದು ಕ್ರಮದಲ್ಲಿ, ಒಂದು ಕಾನೂನು ನಿಯಮದ ಪ್ರಕಾರ ನಡೆಯಬೇಕು. ಇವತ್ತು ನಡೆಯುತ್ತಿರುವಹಾಗೆ ಸಂಬಳ ಎಷ್ಟು ಕೊಡುತ್ತೇವೆ ಎಂದು ಹೇಳುತ್ತಾರೋ, ಅಷ್ಟು ಕೊಡುವುದಿಲ್ಲ, ಅಷ್ಟಕ್ಕೆ ರುಜು ಪಡೆಯುತ್ತಾರೆ. ಇಂಥಾದ್ದೆಲ್ಲಾ ಖಾಸಗಿ ಶಾಲೆಗಳಲ್ಲಿ ನಡೆಯುತ್ತಿದೆ, ಇಂಥಾ ಅಕ್ರಮ ತಪ್ಪಿಸಿ ಮೇಲಿನ ವಿಶ್ವವಿದ್ಯಾನಿಲಯದ ಮಟ್ಟದ ವಿದ್ಯಾಭ್ಯಾಸವನ್ನು ನಡೆಸುವ ಜವಾಬ್ದಾರಿಯನ್ನು ಸರ್ಕಾರ ತಪ್ಪಿಸಿಕೊಳ್ಳುವುದು ಒಳ್ಳೆಯದು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

† ಶ್ರೀ ಅಣ್ಣಾರಾವ್ ಗಣಮುಖಿ (ಅಫ್ಜಲ್‌ಪುರ).—ಈಗ ಮಾತನಾಡಿದಂಥ ಸದಸ್ಯರು ಇಂಗ್ಲೀಷ್ ಮೂರನೇ ವರ್ಗದಿಂದ ಪ್ರಾರಂಭ ಮಾಡಬಾರದು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಮದರಾಸು, ಆಂಧ್ರ, ಮೈಸೂರು ಮತ್ತು ಕೇರಳ ಈ ನಾಲ್ಕು ಸಂಸ್ಥಾನಗಳವರೂ ಕೂಡಿ ಮಂತ್ರಿಗಳು 3 ನೇ ವರ್ಗದಿಂದ ಇಂಗ್ಲೀಷ್ ಪ್ರಾರಂಭ ಮಾಡಬೇಕೆಂದು ಒಂದು ನಿರ್ಣಯ ತೆಗೆದುಕೊಂಡದ್ದು ನಮಗೆ ಗೊತ್ತಿದೆ. ಇದರ ಮಹಾತ್ಮ್ಯ, ಇಂಗ್ಲೀಷ್ ಭಾಷೆ ಏನಿದೆ ಇದು ಜಗತ್ತಿನ ಭಾಷೆಯಾಗಿದೆ. ಇದು ಮಹತ್ವದ ಭಾಷೆ ಅದರಿಂದಾಗಿ ಒಂದುವೇಳೆ ಈ ಭಾಷೆಯನ್ನು ನಾವು ಚೆನ್ನಾಗಿ ಕಲಿಯದಿದ್ದರೆ ಈಗಿನ ಟೆಕ್ನಿಕಲ್ ಎಜ್ಯುಕೇಷನ್ ಏನಿದೆ ಇದರ ಮೇಲೆ ಪ್ರಭುತ್ವ ಪಡೆಯತಕ್ಕ ಶಕ್ತಿ ಬರುವುದಿಲ್ಲ ಎಂಬ ಉದ್ದೇಶದಿಂದ, ಭಾಷೆಯ ಮೇಲೆ ಪ್ರಭುತ್ವ ಬರಬೇಕು ಎಂಬ ದೃಷ್ಟಿಯಿಂದ 3 ನೇ ವರ್ಗದಿಂದ ಶಿಕ್ಷಣ ಪ್ರಾರಂಭ ಮಾಡಬೇಕೆಂದು ನಿರ್ಣಯ ತೆಗೆದುಕೊಂಡಿದ್ದಾರೆ. ಆದರೆ ಏನು ವಿಷಾದ ಅನಿಸುತ್ತದೆ ಎಂದರೆ ಮೂರನೇ ವರ್ಗದಿಂದ ಅಲ್ಲಿ ನಾಲ್ಕನೇ ವರ್ಗದಿಂದಲೂ ಪ್ರಾರಂಭಿಸಿಲ್ಲ ಎಂದು ನಾವು ಕೇಳಬೇಕಾಗಿದೆ ಅದನ್ನು ಬಿಟ್ಟು ಮೂರನೇ ವರ್ಗದಿಂದ ಏಕೆ ಪಾರಂಭ ಮಾಡಿದಿರಿ ಎಂದು ಮನೆ ಬಾಗಿಲು ಮುಚ್ಚಿಕೊಂಡು ಹೊರಗಿನಿಂದ ಬರತಕ್ಕ ಗಾಳಿಯನ್ನು ಬಂದುಮಾಡಿ ಗಾಳಿ ಇಲ್ಲದಂತೆ ಮಾಡತಕ್ಕ ಒಂದು ಪ್ರವೃತ್ತಿ ನಮ್ಮ ದೇಶದಲ್ಲಿ ಬೆಳೆಯುತ್ತಾ ಇದೆ. ಅದನ್ನು ಬಿಟ್ಟುಬಿಡಬೇಕು. ಏಕೆಂದರೆ ಮಾಧ್ಯಮದ ಮಟ್ಟಿಗೆ ಪ್ರತಿಯೊಂದು ವಿಷಯವೂ ಕನ್ನಡ

ದಲ್ಲೇ ಇರಲಿ. ಆದರೆ ಭಾಷೆಯ ಮೇಲೆ ಪ್ರಭುತ್ವ ಪಡೆಯಬೇಕಾದರೆ ಇಂಗ್ಲೀಷನ್ನು ಸಣ್ಣ ಮಕ್ಕಳಿರುವಾಗಲೇ ಕಲಿಸಬೇಕು. ಇನ್ನೊಂದು ವಿಷಯ ಏನೆಂದರೆ ಯು. ಪಿ. ಎಸ್. ಸಿ ಕಾಂಪಿಟೇಷನ್ ಗೆ ಹೋದರೆ ಬರೀ ಕನ್ನಡದಲ್ಲೇ 5-6 ನೇ ವರ್ಗದವರೆಗೂ ಕಲಿತ ಹುಡುಗರು ಹೇಗೆ ಕಾಂಪೆಟ್ ಮಾಡಬೇಕು ಎಂಬುದು ಅರ್ಥವಾಗುವುದಿಲ್ಲ. ಬರಿ ಹಿಂದಿಯಲ್ಲೇ ಕಲತು ಕಾಂಪೇಟ್ ಮಾಡುತ್ತೇವೆ ಎಂದರೆ ಹೇಗೆ ಸಾಧ್ಯವಾದೀತು ! ಆದ್ದರಿಂದ ಹೊರಗಿನಿಂದ ಬರತಕ್ಕ ಗಾಳಿಯನ್ನು ತಡೆಯುದಂತೆ ಇಂಗ್ಲೀಷನ್ನು ಆ ಒಂದು ಸಂಕುಚಿತ ಮನೋಭಾವದಿಂದ ನೋಡಬಾರದು. ಇಂಗ್ಲಿಷ್‌ನವರು ಹೊರಟು ಹೋದರು. ಆದರೆ ಅವರ ಬಾಷೆಯಲ್ಲಿ ಶಕ್ತಿ ಇದೆ. ಆ ಶಕ್ತಿಯನ್ನು ಉಪಯೋಗಿಸಿಕೊಳ್ಳಬೇಕು. ಆ ದೃಷ್ಟಿಯಿಂದ ನಮ್ಮಲ್ಲಿ ಇಂಗ್ಲೀಷನ್ನು 3 ನೇ ವರ್ಗದಿಂದ ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ. ಮತ್ತು ಇಂಗ್ಲೀಷನ್ನು ಪ್ರಾಥಮಿಕ ಶಾಲೆಗಳಲ್ಲಿ ಪ್ರಾರಂಭ ಮಾಡಬೇಕಾದರೆ ಇಂಗ್ಲಿಷ್ ಬಲ್ಲ ಉಪಾಧ್ಯಾಯರು ಬೇಕು. ಒಬ್ಬ ಉಪಾಧ್ಯಾಯರಿರತಕ್ಕ ಸ್ಕೂಲು ಇದೆ. ಇಬ್ಬರು ಉಪಾಧ್ಯಾಯರಿರತಕ್ಕ ಸ್ಕೂಲುಗಳಿವೆ, ಅದರಲ್ಲೂ ಮುಂಬೈ ಭಾಗದಲ್ಲಿ ಸ್ಕೂಲ್ ಬೋರ್ಡ್ ಪರೀಕ್ಷೆಯನ್ನು, 7 ನೇ ಇಯತ್ತೆ ಪಾಸ್ ಮಾಡಿದ ಹೆಣ್ಣುಮಕ್ಕಳನ್ನು ಪ್ರೈಮರಿ ಸ್ಕೂಲ್ ಟೀಚರ್ಸ್ ಆಗಿ ಮಾಡುತ್ತೇವೆ ಎಂದು ಒಂದು ಘೋಷಣೆಯನ್ನು ಮಾಡಿದ್ದೀರಿ. ಅದು ಶುದ್ಧ ತಪ್ಪು ಎಂದು ನಾನು ಹೇಳುತ್ತೇನೆ. ಹೆಣ್ಣು ಮಕ್ಕಳಿಗಾಗಿ ಬರೀ ಕನ್ನಡದಲ್ಲಿ 7 ನೇ ಇಯತ್ತೆ ಓದಿದವರನ್ನು ಟೀಚರ್ಸ್ ಆಗಿ ಮಾಡಿಕೊಂಡು ಅವರಿಗೆ ಮಾತ್ರ ಲಾಭ ಮಾಡುತ್ತಿರೇವಿನಾ ಓದತಕ್ಕ ಮಕ್ಕಳಿಗೆ ಯಾವತರಹದ ಲಾಭವೂ ಸಿಕ್ಕುವುದಿಲ್ಲ. ಆ ದೃಷ್ಟಿಯಿಂದ ಈ ನೀತಿಯನ್ನು ರಿವೈಸ್‌ಮಾಡಿ ಎಸ್. ಎಸ್. ಎಲ್. ಸಿ. ಪಾಸ್ ಆದ ಹೆಣ್ಣು ಮತ್ತು ಗಂಡು ಮಕ್ಕಳಿಗೆ ನೌಕರಿ ಕೊಡಬೇಕು. ಗರ್ಲ್ಸ್ ಹೈಸ್ಕೂಲುಗಳನ್ನು ಹೆಚ್ಚಾಗಿ ತೆಗೆದು ಗರ್ಲ್ಸ್ ಹಾಸ್ಟಲುಗಳನ್ನು ಜಾಸ್ತಿ ಮಾಡಿ. ಇಂಥಾ ಅನುಕೂಲತೆಗಳನ್ನು ಒದಗಿಸಿದರೆ ಹೆಣ್ಣುಮಕ್ಕಳು ವಿದ್ಯಾಭಾಸ ಮಾಡಲು ಸಾಧ್ಯವೇ ಹೊರತು ಇಲ್ಲದೇ ಹೋದರೆ ಹೆಣ್ಣುಮಕ್ಕಳು ಬರುವುದಿಲ್ಲ. ಏಕೆಹೇಳುತ್ತೇನೆ ಎಂದರೆ ಮೊನ್ನೆ ಮೊನ್ನೆ ಪೇಪರ್‌ನಲ್ಲಿ ಓದಿದೆ ವಿದ್ಯಾಮಂತ್ರಿಗಳು ಮಂಗಳೂರಿಗೆ ಹೋಗಿ ಭಾಷಣ ಮಾಡಿದ್ದು ಪೇಪರ್‌ನಲ್ಲಿ ಬಂದಿದೆ. ಸಮಾಜವಾದ ರಾಜ್ಯ ಇದು ಹೆಣ್ಣು ಮಕ್ಕಳ, ಗಂಡು ಮಕ್ಕಳ ಶಾಲೇ ಬೇರೆ ಬೇರೆ ಇರದೇ ಕೋ ಎಜ್ಯುಕೇಷನ್ ಆಗಬೇಕೆಂದು ಒಂದು ಹೇಳಿಕೆ ಕೊಟ್ಟಿದ್ದಾರೆ. ಬಹುಮಟ್ಟಿಗೆ ಅದನ್ನು ಮಂಗಳೂರಿನವರೇ ಒಪ್ಪುತ್ತಾರೆಯೋ ಇಲ್ಲವೋ ಗೊತ್ತಿಲ್ಲ.

ಶ್ರೀ ಎಸ್. ಆರ್. ಕಂಠಿ.—ನಾನು ಸಭೆಗೆ ಹೇಳುವುದೇನೆಂದರೆ ನಾನು ಅಲ್ಲಿ ಹೇಳಿದ್ದು ನೀವು ದಕ್ಷಿಣ ಕನ್ನಡ ಜಿಲ್ಲೆಯವರು ಇಷ್ಟು ಮುಂದಿದ್ದೀರಿ, ನೀವೇ ಮುಂದೆ ಬಂದು ನಿಮ್ಮ ಜಿಲ್ಲೆಯಲ್ಲಿ ಮಾಡಿ ತೋರಿಸಿರಿ, ಎಂದು ಹೇಳಿದೆನೇ ಹೊರತು ಎಲ್ಲಾ ಕಡೆಯಲ್ಲೂ ಬರಬೇಕೆಂದು ಹೇಳಲಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯವರು ಪಾಠಹಾಕಿಕೊಡಿ ಅಂತ ಹೇಳಿದೆ ಅಷ್ಟೇ.

ಶ್ರೀ ಅಣ್ಣಾರಾವ್ ಗಣಮುಖಿ.—ಪಾಠ ಹಾಕತಕ್ಕ ಕರ್ತವ್ಯ ಅವರದಲ್ಲ ಪಾಠ ಎಂದರೆ ಹೆಣ್ಣು, ಗಂಡು ಮಕ್ಕಳು ಒಂದೇ ಕಡೆ ಕೂಡಿ ಓದಬೇಕೆಂಬ ಪ್ಯಾಟ್ರನ್ ಮಾಡಿದ್ದಾರೆಂದು ಹೇಳಬಹುದು, ಸಮಾಜ ಹಿಂದೆ ಬಿದ್ದಿರುವಾಗ ಶಾಲೆಗಳು ಬಹಳ ಮುಂದೆ ಹೋಗಿವೆ ಎಂದು ಅರ್ಥವಾಗಬಾರದು. ಯು. ಜಿ. ಸಿ ಅವರು, ಪ್ರೈಮರಿ ಮಟ್ಟದಲ್ಲಿ ಹೆಣ್ಣು, ಗಂಡು ಮಕ್ಕಳು ಒಂದು ಕಡೆ ಕೂಡಿ ಓದಬಹುದು, ಹೈಸ್ಕೂಲು ಮಟ್ಟದಲ್ಲಿ ಒಂದೇ ಕಡೆ ಕೂಡಿ ಓದಕೂಡದು ಎಂದು ಹೇಳುತ್ತಾರೆ.

ಶ್ರೀ ಎಸ್. ಆರ್. ಕಂಠಿ.—ನೀವು ಹೈದರಾಬಾದ್ ಪ್ರದೇಶದಿಂದ ಬರುತ್ತಾ ಇದ್ದೀರಿ, ಅದರ ಪಾಲಿಸಿ ಏನಿತ್ತು ಮತ್ತು ಬೊಂಬಾಯಿ ಪ್ರದೇಶದ ಪಾಲಿಸಿ ಏನಿತ್ತು ಹೇಳಿ ನೋಡೋಣ.

ಶ್ರೀ ಅಣ್ಣಾರಾವ್ ಗಣಮುಖಿ.—ನಮ್ಮ ದೇಶದಲ್ಲಿ ಸಮಾಜವಾದದ ಸಮಾಜ ಇದೆ ಎಂದು ಹೇಳಿ ಹೆಣ್ಣು ಮಕ್ಕಳ ಎಜ್ಯುಕೇಷನ್ ಗಂಡು ಮಕ್ಕಳ ಎಜ್ಯುಕೇಷನ್ ಒಂದೇ ಇದೆ ಆದ್ದರಿಂದ ಒಂದೇ ಕಡೆ ಹಾಕಿ ಎಲ್ಲರನ್ನೂ ಓದಿಸಬೇಕೆಂಬುದು ನನ್ನ ಅಭಿಪ್ರಾಯದಲ್ಲಿ ತಪ್ಪು ಎಂದು ಹೇಳಬಯಸುತ್ತೇನೆ. ಏಕೆಂದರೆ ಸೆಕೆಂಡರಿ ಕಮೀಷನ್ ರಿಪೋರ್ಟ್ ಮತ್ತು ರೆಡ್ಡಿ ಕಮಿಟಿ ರಿಪೋರ್ಟ್‌ನಲ್ಲಿ ಈ ರೀತಿ ಹೇಳಿದ್ದಾರೆ:—

> (Extract from Dr. C. R. Reddy Report—p. 100) "It is essential to have separate institutions for boys and girls specially at the high school stage and at the middle school stage." Report is dated 13th May 1949.

(ಶ್ರೀ ಅಣ್ಣಾರಾವ್ ಗಣಮುಖಿ)

(Extract from the University Education Commission Report —1949—page 400).

"There seems to be a definite and preponderent opinion that from the 13th or 14th year of age until about 18, separate schools for boys and girls are desirable."

Sri S. GOPALA GOWDA.—"Abolition of Maharani's College at Bangalore and Mysore to encourage co-education" ಎಂದು ನನ್ನ Cut Motion ಇದೆ.

4-00 P.M.

ಶ್ರೀ ಅಣ್ಣಾರಾವ್ ಗಣಮುಖಿ.–ಇದಕ್ಕೆ ಕಾರಣವಿಷ್ಟೆ ಈ ಹೆಣ್ಣುಮಕ್ಕಳ ಕಾಲೇಜು ಪ್ರತ್ಯೇಕ ಹಾಗಿದ್ದರೆ ಲ್ಯಾಬೊರೇಟರಿ ಎಕ್ವಿಪ್‌ಮೆಂಟುಗಳ ಸೌಕರ್ಯ ಸಾಕಷ್ಟಿರುವುದಿಲ್ಲ, ಆದ್ದರಿಂದ ಈ ಕಾಲೇಜ್ ಮಟ್ಟದಲ್ಲಿ ಈ ಕೋ ಎಜ್ಯುಕೇಷನ್ ಇದ್ದರೂ ಇರಲಿ ಎಂಬುದು ಒಂದು ಅಭಿಪ್ರಾಯ. ಮತ್ತೊಂದು ಅವರು ಕಾಲೇಜ್ ವ್ಯಾಸಂಗಕ್ಕೆ ಬರುವಾಗ್ಗೆ ಸಾಕಷ್ಟು ತಿಳುವಳಿಕೆ, ಜ್ಞಾನವಿರುತ್ತೆ, ಪರವಾಯಿಲ್ಲ ಎಂಬುದು ಇನ್ನೊಂದು ಆದರೆ ಈ ಹೈಸ್ಕೂಲು ಸ್ಟೇಜಿನಲ್ಲಿ ಅವರಿಗೆ ಅಷ್ಟು ಅನುಭವ ವಿಲ್ಲದಿರುವುದರಿಂದ ಅವರು ಕಾಲುಜಾರಬಹುದು ಅನ್ನೋದೃಷ್ಟಿಯಿಂದ ಹೈಸ್ಕೂಲು ಸ್ಟೇಜಿನಲ್ಲಿ ಆ ಹೆಣ್ಣುಮಕ್ಕಳ ಸೇಫ್‌ಗಾರ್ಡ್ ಗೋಸ್ಕರ ಬೇರೆ ಬೇರೆ ಸ್ಕೂಲುಗಳಿರಬೇಕೆಂದು ಅವರು ಹಾಗೆ ಹೇಳಿದ್ದಾರೆ. ಆದುದರಿಂದ ಮಂತ್ರಿಗಳು ಯಾವಾಗಲಾದರೂ ಇಂಥ ವಿಚಾರದಬಗ್ಗೆ ಮಾತನಾಡುವಾಗ ಮುಂಚಿತವಾಗಿ ಅಕ್ಯಾಡಮಿಕ್ ತಜ್ಞರ ಅಭಿಪ್ರಾಯ ತೆಗೆದುಕೊಂಡು ಸ್ಟೇಟ್‌ಮೆಂಟ್ ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ.

In the Reddy Committee report it is said as follows:

"The life of girls in girls' schools will be richer and fuller than that open to them in boys' schools".

ಆದುದರಿಂದ ಇಂಥಾ ಒಂದು ಸಿಸ್ಟಂಅನ್ನು ಇಡೀ ಸ್ಟೇಟಿಗೇ ಮಾಡಲ್ ಮಾಡುತ್ತೇನೆ ಎಂದು ಹೇಳುವುದು ಸರಿಯಲ್ಲ.

ಶ್ರೀ ಎಂ. ಶ್ರೀನಿವಾಸನಾಯಕ್ (ಮಂಗಳೂರು-1).—ಮಂಗಳೂರಿನಲ್ಲಿ ಎಷ್ಟೋದಿವಸಗಳಿಂದ ಈ ಮಿಕ್ಚರ್ ಶಾಲೆಗಳುಇವೆ. ಆದರೆ ಇಷ್ಟರತನಕ ಅಲ್ಲಿಯಾವ ಹುಡುಗಿಯಾಗಲೀ-ಹುಡುಗನಾಗಲೀ ಕೈಯೂಜಾರಿಲ್ಲ ಕಾಲು ಜಾರಿಲ್ಲ.

ಶ್ರೀ ಎಸ್. ಆರ್. ಕಂಠಿ.—ಆದರೆ ನಮ್ಮರಾಜ್ಯದಲ್ಲಿ ಬಾಲಕರ ಹೈಸ್ಕೂಲುಗಳು ಸಾವಿರಾರು ಇವೆ. ಹುಡುಗಿಯರ ಹೈಸ್ಕೂಲುಗಳು ಕೇವಲ 503 ಇವೆ.

ಶ್ರೀ ಅಣ್ಣಾರಾವ್‌ಗಣಮುಖಿ.—ಆದರೂ ಆ ತಜ್ಞರುಗಳೆಲ್ಲಾ ಇದು ಅಷ್ಟು ಡಿಸೈರಬಲ್ ಅಲ್ಲ ಎಂದು ಹೇಳಿದ್ದಾರೆ. ಈ ದಿವಸ ಹೆಣ್ಣುಮಕ್ಕಳಿಗೆ ಸಾಕಷ್ಟು ವಿದ್ಯಾ ಸೌಲತ್ತುಗಳನ್ನು ಮಾಡಿಲ್ಲ. ಅದೇಕಾರಣ ಈಗ ಎಲ್ಲೆಲ್ಲೂ ಎದ್ದುಕಾಣುತ್ತಿದೆ. ಅನೇಕ ಹೈಸ್ಕೂಲುಗಳಲ್ಲಿ 50-100 ಹುಡುಗರಿರುವಕಡೆ 5 ಹೆಣ್ಣುಹುಡುಗರುಸಹ ಅಲ್ಲಿಸೇರುವುದಿಲ್ಲ, ಕಾರಣವೇನೆಂದು ನಾನುಹಿಂದೆ ವಿದ್ಯಾಮಂತ್ರಿಯಾಗಿದ್ದಾಗ ಟೂರ್ ಹೋದಕಡೆಗಳಲ್ಲಿ ವಿಚಾರಿಸಿದ್ದರಲ್ಲಿ ಅನೇಕ ಸಂಸಾರಿಗಳು ಗಂಡು ಹುಡುಗರಿರತಕ್ಕ ಹೈಸ್ಕೂಲಿಗೆ ಅವರ ಹೆಣ್ಣುಮಕ್ಕಳನ್ನು ಕಳುಹಿಸಲು ಒಪ್ಪುತ್ತಿಲ್ಲ ಎಂದು ತಿಳಿಯಬಂತು, ಈ ಕಾರಣದಿಂದ ಈ ಸ್ಟೇಜಿನಲ್ಲಿ ಕೋ-ಎಜ್ಯುಕೇಷನ್ ಒಳ್ಳೆಯದಲ್ಲ ಎಂತು ಹೇಳುತ್ತೇನೆ. ಈ ಪ್ಯಾಟ್ರನ್ನನ್ನು ಸಾಕಷ್ಟು ಡೆವೆಲಪ್ ಆದನಂತರ ನೋಡೋಣ.

ಇನ್ನು ವಿದ್ಯಾಮಂತ್ರಿಗಳು ಆದೇ ಸೌತ್ ಕೆನಾರಾದಲ್ಲಿ ಇನ್ನೊಂದು ಸ್ಟೇಟ್‌ಮೆಂಟ್ ಮಾಡಿದ್ದಾರೆ. ಟೀಚರ್-ಪ್ಯುಪಲ್ ರೇಷಿಯೋವನ್ನು ಒಂದಕ್ಕೆ-40 ಇರುವುದನ್ನು ರೆಡ್ಯೂಸ್ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎಸ್. ಆರ್. ಕಂಠಿ.—ಅದು ತಪ್ಪು, ನಾನು ಹಾಗೆಹೇಳಲಿಲ್ಲ.

Mr. SPEAKER.—Anna Rao When the Hon'ble Minister says that it is not correct, the Hon'ble member must accept it.

Sri S. R. KANTHI.—Sir, the point in regard South Kanara is something different. There, the ratio of students to the teacher is 1:40 on attendence. So, the complaint was, it is too much and it should be 1:40 on rolls. That was the demand made by them. I must have referred to that.

ಶ್ರೀ ಅಣ್ಣಾರಾವ್ ಗಣಮುಖಿ.–ಈ ದಿವಸ ಇಡೀರಾಜ್ಯದಲ್ಲಿ ಈ ಟೀಚರ್ಸ್–ಪ್ಯೂಪಿಲ್ ರೇಷೆಯೋ 1 ರಿಂದ 40 ಇದೆ. ನಮ್ಮ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮಲ್ಲಿರತಕ್ಕ 10 ಲಕ್ಷ ಹುಡುಗರಿಗೆಷ್ಟು ಉಪಾದ್ಯಾಯರಿರಬೇಕೆಂಬುದನ್ನು ತೀರ್ಮಾನಮಾಡುವಾಗ ಈ 1 ರಿಂದ 4 ರೇಷಿಯೋದಮೇಲೆ 25 ಸಾವಿರ ಟೀಚರ್ಸ್ ಬೇಕೆಂದು ನಿರ್ಧರಿಸಲಾಗಿದೆ.

Sri S. R. KANTHI.—The Hon'ble Member will please beer with me. The point at issue was, whether it should be ratio on attendance or ratio on rolls.

ಶ್ರೀ ಅಣ್ಣಾರಾವ್‌ಗಣಮುಖಿ.—ಈ 1 ರಿಂದ 40 ರೇಷೆಯೋ ನಿರ್ಧರಿಸುವಾಗ ಎಷ್ಟೋಕಡೆ ದಿವಸದಿವಸವೂ ಒಂದಲ್ಲೊಂದುಕಡೆ 5–10 ಹುಡುಗರಸಂಖ್ಯೆ ಕಡಮೆ ಇದ್ದೇಇರುತ್ತದೆಂಬ ಅಭಿಪ್ರಾಯಮಿಟ್ಟುಕೊಂಡು ಅದರಪ್ರಕಾರ ಈಗ ಉಪಾದ್ಯಾಯರನ್ನು ಎಲ್ಲಶಾಲೆಗಳಿಗೂ ನೇಮಕ ಮಾಡಲಾಗಿದೆ. ಆದರೆ ಈಗ ಕಂಪಲ್‌ಸರಿ ಎಜುಕೇಷನ್‌ಬೇರೆ ಜಾರಿಗೆ ಬಂದಿರುವುದರಿಂದ ಹುಡುಗರ ಸಂಖ್ಯೆಯ ಪ್ರಶ್ನೆಯೇ ಬರುವುದಿಲ್ಲ. ಈಗ ಈ 1 ರಿಂದ 40 ರೇಷಿಯೋವನ್ನು ರೆಡ್ಯೂಸ್ ಮಾಡಲು ಸಾಧ್ಯವಿಲ್ಲ. ಈಗಿರತಕ್ಕ ವಿದ್ಯಾಮಂತ್ರಿಗಳೂಕೂಡ ಈ ರೇಷಿಯೋ ಆಧಾರದಮೇಲೇ ನಮಗೆ 5 ಸಾವಿರ ಟ್ರೈನ್ಡ್ ಟೀಚರ್ಸ್ ಬೇಕಾಗಿದ್ದಕಡೆ ಒಂದುಸಾವಿರ ಈಗ್ಗೆ ಸಾಕೆಂದು ಅವರೇತಿಳಿಸಿದ್ದಾರೆ. ಆದರೆ ಈ ದಿವಸ ಈ ಕೋ ಎಜ್ಯುಕೇಷನ್ ಸೌತ್‌ಕೆನಾರದಲ್ಲಿದೆ ಎಂದು ಹೇಳುತ್ತಾರೆ. ಆದರೆ ಅಲ್ಲಿರತಕ್ಕ ಪ್ರಾಬ್ಲಾಂಗಳೇ ಬೇರೆ, ಇಲ್ಲಿರತಕ್ಕ ಪ್ರಾಬ್ಲಂಗಳೇ ಬೇರೆ.

ಶ್ರೀ ಎಸ್. ಆರ್. ಕಂಠಿ.—ಈ 1 ರಿಂದ 40 ರೇಷಿಯೋ ಇರುವುದು On roll, ಅಟೆಂಡೆನ್ಸಿನಲ್ಲಲ್ಲ.

ಶ್ರೀ ಅಣ್ಣಾರಾವ್ ಗಣಮುಖಿ.—ಈ ದಿವಸ ಈ 1 ರಿಂದ 40 ರೇಷಿಯೋ ಕಡಮೆ ಮಾಡುತ್ತೇವೆಂದರೆ ರಾಜ್ಯಾದ್ಯಂತವೂ ಮಾಡಬೇಕು. ಈ ದಿವಸ ಎಷ್ಟೋಕಡೆ 100 ಹುಡುಗರಿರುವಲ್ಲಿ ಒಬ್ಬ ಟೀಚರಿದ್ದಾರೆ.

ಇನ್ನು ಯೂನಿವರ್ಸಿಟಿ ವಿಚಾರಕ್ಕೆ ಬಂದರೆ ಇಲ್ಲಿಯೂ ಹಾಗೇ ಇರತಕ್ಕ ಕೆಲವುವಿಚಾರಗಳನ್ನು ನೋಡಬಹುದು. ಈ ದಿವಸ ವೈಸ್-ಛಾನ್ಸಲರ್ ಸ್ಥಾನದಲ್ಲಿ ಒಬ್ಬ ಅಡ್ಮಿನಿಸ್ಟ್ರೇಟೀವ್ ಅಧಿಕಾರಿಗಳನ್ನು ಇಟ್ಟಿದ್ದಾರೆ. ಇದು ಸರಿಯೇ ಎಂಬುದನ್ನು ನಾವೀಗ ವಿಚಾರಮಾಡಬೇಕಾಗಿದೆ. ಈ ವೈಸ-ಛಾನ್ಸಲರ್ ಸ್ಥಾನದಲ್ಲಿ ಎಂಥಾವರಿರಬೇಕೆಂಬುದನ್ನು ದೊಡ್ಡದೊಡ್ಡ ರಿಪೋರ್ಟುಗಳಲ್ಲಿ ವಿಶದವಾಗಿ ತಿಳಿಸಿದ್ದಾರೆ.

> "A Vice-Chancellor is the Chief Executive and Academy Officer of the University. He presides over the Syndicate and Academic Councils and therefore it is his duty to know the senior members of the staff intimately, to know all the members of the staff and students. Therefore, he must command their confidence both on academic reputation and strength of personality."

ಈ ದಿವಸ ವೈಸ್-ಛಾನ್ಸಲರ್ ಸ್ಥಾನದಲ್ಲಿರತಕ್ಕವರು ವೈಸ್-ಛಾನ್ಸಲರುಗಳ ಮೀಟಿಂಗಿನಲ್ಲಿ ಭಾಗವಹಿಸಲು ಇವರಿಗೇನು ಗೊತ್ತಿದೆ? ಅಲ್ಲಿಯವಿಚಾರಗಳನ್ನು ರಿಪೋರ್ಟುಮಾಡಲು ಯಾವ ಮಟ್ಟದ ಜನರಿರಬೇಕು ಎನ್ನತಕ್ಕಬಗ್ಗೆ ಡಾ. ಸಿ. ಆರ್. ರೆಡ್ಡಿಯವರು ಹೀಗೆಹೇಳಿದ್ದಾರೆ :—

> "There is complete unanimity of opinion that the type of Vice-Chancellor should be a personality who would count both

(ಶ್ರೀ ಅಣ್ಣಾರಾವ್ ಗಣಮುಖಿ)

> inside and outside the State, who whould be welcomed at Inter-University Meetings, Vice-Chancellors' Conferences and other gatherings.''

ಇಂಥಾ ಉನ್ನತಮಟ್ಟದಲ್ಲಿರತಕ್ಕ ಜನರನ್ನು ಹಾಕದೆ ತಮಗೆ ಯಾರೂ ಸಿಕ್ಕಲಿಲ್ಲಎಂದು ವಿದ್ಯಾ ಇಲಾಖೆಯು ಒಬ್ಬ ಅಡ್ಮಿನಿಷ್ಟ್ರಟೀವ್ ಆಫೀಸರನ್ನು ಆ ಸ್ಥಾನಕ್ಕೆ ಹಾಕಿದ್ದು ತಪ್ಪುಎಂದು ಹೇಳುತ್ತೇನೆ. ಇದರಿಂದ ಆ ಸ್ಥಾನದ ಗೌರವ ಹಾಗೂ ಮಟ್ಟವನ್ನು ಇಳಿಸಿದಂತಾಗಿದೆ. ಇಂಥಾ ಕೆಲಸಮಾಡಬಾರದಾಗಿತ್ತು ಹೀಗೆ ಆ ಸ್ಥಾನವನ್ನು ಕೆಳಮಟ್ಟಕ್ಕಿಳಿಸಿದ್ದು ಸರಿಯಲ್ಲ ಎಂದು ಹೇಳುತ್ತೇನೆ.

ಇನ್ನೊಂದೇನೆಂದರೆ ಇನ್ನೂ ಒಂದು ವಿಶ್ವವಿದ್ಯಾನಿಲಯವನ್ನು ತೆಗೆಯುವ ವಿಚಾರವನ್ನು ಮಾಡಿದ್ದಾರೆ. ಆ ರಿಪೋರ್ಟಿನಿಂದಲೂ ಕೂಡ ಕೆಲವು ವಿಷಯಗಳನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ನಮಗೆ ಪ್ರೈಮರಿ ಶಾಲೆಗಳಿಗೆ ಒಬ್ಬ ಉಪಾಧ್ಯಾಯರನ್ನು ಹಾಕಬೇಕಾದರೆ ಹೆಚ್ಚು ಹಣವಿಲ್ಲ, ಹೈಸ್ಕೂಲಿಗೆ ಹಾಸ್ಟಲ್ ಕೊಡಲು ಹಣವಿಲ್ಲ, ಮತ್ತೊಂದು ಮಾಡಬೇಕಾದರೆ ಹಣವಿಲ್ಲ. ಆದರೆ ದೊಡ್ಡ ವಿಶ್ವವಿದ್ಯಾನಿಲಯದ ವಿಚಾರವನ್ನು ತಾವು ಮುಂದೆ ಇಟ್ಟುಕೊಂಡು ಕುಳಿತಿದ್ದೀರಿ. ಅದಕ್ಕೆ ಕಾರಣ ನನಗೆ ಗೊತ್ತಿದೆ. Interim Report of the Committee on Establishment of New Universities, ಇದರಲ್ಲಿ ಹನ್ನೊಂದನೆಯ ಪುಟದಲ್ಲಿ ''In the case of Bangalore, no formal request has been received by the U. G. C. but the Committee thought that this should be one of the most suitable places'' ಎಂದು ಹೇಳಿದ್ದಾರೆ. ಅವರಿಗೆ ಇಲ್ಲಿಯ ವ್ಯವಹಾರ ಗೊತ್ತಿಲ್ಲ, ಇಲ್ಲಿಂದ request ಹೋಗಿಲ್ಲ, ಇಲ್ಲಿ ಏನೇನಿದೆ, ಎಷ್ಟು ಸಾಮಗ್ರಿ ಇದೆ, ಯಾವ ಪ್ರಕಾರ ವಿಶ್ವವಿದ್ಯಾನಿಲಯವಿದೆ, ಏನೇನು ಕೆಲಸ ನಡೆದಿದೆ ಎನ್ನುವುದು ಗೊತ್ತಿಲ್ಲ. ಏನೂ ಗೊತ್ತಿಲ್ಲದೆ ಒಂದು ಸಿಫಾರಸನ್ನು ಅವರು ಮಾಡಿದ್ದಾರೆ. ಅದಕ್ಕೆ ಅವರು ಎಷ್ಟೋ ಕಡೆಗೆ ಹೇಳುತ್ತಾರೆ. ''It is far better to have one good University in a state than two indifferent or inferior Universities". ಎಂದು ಹೇಳುತ್ತಾರೆ. ಅಲ್ಲಿಂದ ಮುಂದೆ ಕೆಲವುಕಡೆಗೆ ಅವರು ಏನು ಹೇಳುತ್ತಾರೆಂದರೆ ಎರಡು ಕೋಟಿ ರೂಪಾಯಿ non-recurring ಮತ್ತು 50 ಲಕ್ಷ ರೂಪಾಯಿ recurring cost ಆಗುತ್ತದೆ. ಅದರಲ್ಲಿ ಪ್ರತಿ ವಿದ್ಯಾರ್ಥಿಗೂ 500 ರೂಪಾಯಿ ಖರ್ಚು ಬರಬೇಕು. ಆ ನಮೂನೆ ಇರಬೇಕು ಎಂದು ಹೇಳುತ್ತಾರೆ. ಮುಂದೆ ಏನು ಹೇಳುತ್ತಾರೆಂದರೆ ಖಾಸಗಿ ಜನರು 25 ಲಕ್ಷ ರೂಪಾಯಿ ಕಂಟ್ರಿಬ್ಯೂಷನ್ ಕೊಡಬೇಕೆಂದು ಹೇಳಿದ್ದಾರೆ. ಬೆಂಗಳೂರು ನಗರದಲ್ಲಿ ಸ್ವಲ್ಪ ತಿರುಗಾಡಿದರೆ ಇಲ್ಲಿ ಒಂದು ಪ್ರೈಮರಿ ಶಾಲಾಕಟ್ಟಡಕ್ಕೂ ಕಂಟ್ರಿಬ್ಯೂಷನ್ ಸಿಕ್ಕಿಲ್ಲ. ಇಲ್ಲಿ ಎಲ್ಲ ಸ್ಕೂಲುಗಳೂ ಬಾಡಿಗೆ ಮನೆಗಳಲ್ಲಿವೆ. ಹಳ್ಳಿಗಳಲ್ಲಿರುವ ಶಾಲಾ ಕಟ್ಟಡಗಳಿಗೆ ಕಂಟ್ರಿಬ್ಯೂಷನ್ ಕೊಟ್ಟಿದ್ದಾರೆ. ಹೀಗಿರುವಾಗ ಎರಡು ಕೋಟಿ ರೂಪಾಯಿ ಎಲ್ಲಿಂದ ತರುತ್ತೀರಿ, 50 ಲಕ್ಷ ರೂಪಾಯಿ ಎಲ್ಲಿಂದ ತರುತ್ತೀರಿ ! ಪ್ರೈಮರಿ ವಿದ್ಯಾಭ್ಯಾಸವೇ ಅಷ್ಟು ಚೆನ್ನಾಗಿ ನಡೆದಿಲ್ಲ. ಹೀಗಿರುವಾಗ ವಿಶ್ವವಿದ್ಯಾನಿಲಯದ ವಿಷಯಕ್ಕೆ ದೊಡ್ಡ idea ಹೇಳುತ್ತೀರಾ ಹೇಗೆ ಇಂಗ್ಲೀಷಿನಲ್ಲಿ ಒಂದು ಮಾತು ಹೇಳುತ್ತಾರೆ. ''If the first button of a man's coat is wrongly buttoned, then the whole coat gets crooked.'' ಒಂದು ವಿಶ್ವವಿದ್ಯಾನಿಲಯವೇ ಚೆನ್ನಾಗಿ ನಡೆದಿಲ್ಲವೆಂದು ಟೀಕೆಗಳು ಬರುತ್ತಿರುವಾಗ ಇನ್ನೊಂದು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕು ಎನ್ನುವುದು ನಮವರಿಗೆ ಕಷ್ಟವೆಂದು ಹೇಳಬಯಸುತ್ತೇನೆ.

ಹಿಂದೆ affiliating Universities ಏನಿತ್ತು ಅವು ಈಗ teaching Universities ಸಹ ಆಗಿವೆ. They not only affiliate but they teach. Teaching University ಎಂದು ಆದುದರಿಂದ Post-graduate course ಹೋದ ವರ್ಷದಿಂದ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭ ಮಾಡಿದ್ದಾರೆ. ಅವರು ಏನು ಹೇಳುತ್ತಾರೆಂದರೆ ಇಂಥ federal type of College ತಮ್ಮ Constituent College ಗಳಲ್ಲಿ Post-graduate Course ಇಡುವುದಿಲ್ಲ. Federal University ಪ್ರಾರಂಭಮಾಡುವಾಗ affiliate ಆದ ಎಷ್ಟು ಕಾಲೇಜುಗಳಲ್ಲಿ Post-graduate Course ಇದೆ ಎಂದು ನೋಡಬೇಕು. Research ಮತ್ತು Post-graduate Courses ಹೆಚ್ಚಾಗಬೇಕು, ಅದು ಮತ್ತು Concentration ಆಗಬೇಕು ಎಂದು ಅವರ ಉದ್ದೇಶವಿದೆ. ಮೈಸೂರು ವಿಶ್ವವಿದ್ಯಾನಿಲಯಕ್ಕೆ Post-graduate Course ಮತ್ತು researchಗೆ 35 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅವರು ಈ ಹಣ ಸಾಲದು ಎಂದು ಶಂಖ ಹೊಡೆಯುತ್ತಿದ್ದಾರೆ.

ಹೀಗಿರುವಾಗ ಇನ್ನೊಂದು ವಿಶ್ವವಿದ್ಯಾನಿಲಯವನ್ನು ತೆಗೆಯಲಿಕ್ಕೆ ಹೋದರೆ ಎಷ್ಟು ಕಷ್ಟವಾಗುತ್ತದೆಂಬುದನ್ನು ದೃಷ್ಟಿಯಲ್ಲಿಟ್ಟುಕೊಳ್ಳಬೇಕು. ಇದು ಬರೀ interim recommendation. ಇಲ್ಲಿ Conditions ಏನಿವೆ, ಇಲ್ಲಿಯ ವಿಶ್ವವಿದ್ಯಾನಿಲಯದಲ್ಲಿ ಏನು ಕಾರ್ಯಕ್ರಮ ನಡೆದಿದೆ, Post-graduate Courses ಏನಿವೆ, ಯಾವ ಮಟ್ಟದಲ್ಲಿ ಕೆಲಸ ಮಾಡುತ್ತಿವೆ, ಹಣದ ಕೊರತೆ ಇದೆಯೇ ಇದನ್ನೆಲ್ಲ ಅವರು ತಿಳಿದುಕೊಂಡಿದ್ದಾರೆಯೇ? ಇಲ್ಲಿ ಇನ್ನೊಂದು ವಿಶ್ವವಿದ್ಯಾನಿಲಯವನ್ನು ತೆಗೆಯುವ ಯೋಚನೆಯನ್ನು ಬಿಡಬೇಕು. ಈಗ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಕೆಲಸ ಹೆಚ್ಚಾಗಿದ್ದರೆ ಕೆಲವು ಡಿಸ್ಟ್ರಿಕ್ಟ್‌ಗಳನ್ನು ಕರ್ಣಾಟಕ ವಿಶ್ವವಿದ್ಯಾನಿಲಯಕ್ಕೆ ಕೊಡಬಹುದು, ಇಲ್ಲವೇ ಅವರಿಗೆ ಕೆಲಸ ಹೆಚ್ಚಾಗಿದ್ದರೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಕೆಲವು ಡಿಸ್ಟ್ರಿಕ್ಟ್‌ಗಳನ್ನು ತೆಗೆದುಕೊಳ್ಳಬಹುದು. ಆದರೆ ಬೇರೆ ವಿಶ್ವವಿದ್ಯಾನಿಲಯವನ್ನು ಮಾತ್ರ ಮಾಡಬಾರದಂದು ಹೇಳಬಯಸುತ್ತೇನೆ.

ಈಗ ಒಂದು move ಏನು ನಡೆದಿದೆ ಎಂದರೆ ವಿದ್ಯಾಭ್ಯಾಸವನ್ನು ರಾಜ್ಯಾಂಗದ Concurrent list ನಲ್ಲಿ ತರಬೇಕು ಎಂದು ನಡೆದಿದೆ. Consultative Committee of Parliament ಏನಿದೆ ಅವರು ಇದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದಾರೆಂದು ಪತ್ರಿಕೆಗಳಲ್ಲಿ ಬಂದಿದೆ. ಈ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ರಾಜ್ಯಾಂಗದ ಪ್ರಕಾರ ಅಧಿಕಾರವಿದೆ. ಲಿಸ್ಟ್ I ರಲ್ಲಿ, 66 ನೆಯ item ಪ್ರಕಾರ Co-ordination ಮತ್ತು determination of standards, ಇವೆರಡರ ಬಗ್ಗೆ ಕೇಂದ್ರಕ್ಕೆ ಅಧಿಕಾರವಿದೆ. ಇಷ್ಟರಮಟ್ಟಿಗೆ U.G.C. ಆಕ್ಟ್‌ನಲ್ಲಿಯೂ ಮಾಡಿದ್ದಾರೆ. ಅದಕ್ಕಿಂತಲೂ ಮುಂದೆ ಬಂದು ಕೇಂದ್ರ ಸರ್ಕಾರದವರು ಅಧಿಕಾರ ತೆಗೆದುಕೊಳ್ಳಬಹುದು ಎಂದು ನನಗನ್ನಿಸುತ್ತದೆ. ನಮ್ಮ ಸಂಸ್ಥಾನ ಸರ್ಕಾರ ಅದಕ್ಕೆ ಒಪ್ಪಿಕೊಳ್ಳಬಾರದು. ಪಾರ್ಲಿಮೆಂಟಿನಲ್ಲಿ introduce ಆಗಿ ಸಂಸ್ಥಾನಗಳ ಅಭಿಪ್ರಾಯಕ್ಕೆ ಬಂದಾಗ ಅರ್ಧ ರಾಜ್ಯಗಳು ಒಪ್ಪಿದರೆ ಅದನ್ನು ಜಾರಿಗೆ ತರುತ್ತಾರೆ. ಆಗ ವಿಶ್ವವಿದ್ಯಾನಿಲಯಗಳು ಸಂಸ್ಥಾನಗಳಿಂದ ಹೋಗುತ್ತವೆ, ಮತ್ತು ಸಂಸ್ಥಾನದ ಜನರಿಗೆ ವಿಶ್ವವಿದ್ಯಾನಿಲಯಗಳನ್ನು ನಡೆಸುವ ಯೋಗ್ಯತೆಯಿಲ್ಲವೆನ್ನುವ ಅಪವಾದ ಬರುತ್ತದೆ ಎಂದು ನನಗನ್ನಿಸುತ್ತದೆ. ಕೇಂದ್ರದಿಂದ ನಡೆಸಲ್ಪಡುತ್ತಿರುವ ಅಲಹಾಬಾದ್ ಮತ್ತು ಬೆನಾರೆಸ್ ವಿಶ್ವವಿದ್ಯಾನಿಲಯಗಳು ಎಷ್ಟು ಚೆನ್ನಾಗಿ ನಡೆಯುತ್ತಿವೆ ಎನ್ನುವುದು ಗೊತ್ತಿದೆ. ಒಂದುವೇಳೆ ಇಂಥ move ಬಂದರೆ, ಕರೆಂಟ್ ಲಿಸ್ಟ್‌ನಲ್ಲಿ ಈ ವಿಷಯ ಹಾಕಬೇಕು ಎಂದು ಬಂದರೆ, ಅದಕ್ಕೆ ಒಪ್ಪಿಕೊಳ್ಳಬಾರದೆಂದು ನಾನು ತಮಗೆ ಕೇಳಿಕೊಳ್ಳುತ್ತಿದ್ದೇನೆ.

ಹೈಸ್ಕೂಲು ವಿದ್ಯಾಭ್ಯಾಸದಲ್ಲಿ ಏನು ಮಾಡಿದೆ ಎಂದರೆ ಹತ್ತನೆಯ ಸ್ಟ್ಯಾಂಡರ್ಡ್ ವರೆಗೆ ಸಿಲಬಸ್ ಆಗಿದೆ, ಅಲ್ಲಿಂದ ಮುಂದಕ್ಕೆ ಸಿಲಬಸ್ ಇಲ್ಲ. ಒಂಬತ್ತನೆಯ ವರ್ಗದಲ್ಲಿ ವಿವಿಧೋದ್ದೇಶ ವಿರತಕ್ಕ technical courses ಎಂದರೆ agriculture, commerce ಇಂಥ ವಿಷಯಗಳನ್ನು ಬೋಧೆಮಾಡಲು 61 ಮಲ್ಟಿ-ಪರ್ಪಸ್ ಹೈಸ್ಕೂಲುಗಳು, 69 ಹೈಯರ್‌ಸೆಕೆಂಡರಿ ಶಾಲೆಗಳಿಗಾಗಿ ಲಕ್ಷಗಟ್ಟಲೆ ಗ್ರಾಂಟ್ ಕೊಡುತ್ತಿದ್ದೇವೆ. ಇಷ್ಟು ಗ್ರಾಂಟ್ ಕೊಟ್ಟನಂತರ ಹತ್ತನೆಯ ಸ್ಟ್ಯಾಂಡರ್ಡ್‌ಗೇ ನಿಲ್ಲಿಸಿದರೆ ಆ ಸ್ಕೂಲುಗಳಿಗೆ ಕೊಟ್ಟಿರುವ equipment ಎಲ್ಲ ಹಾಳಾಗುತ್ತದೆ. ಇದನ್ನು ವಿಚಾರ ಮಾಡಿದ್ದೀರಾ ಎಂದು ಕೇಳಬೇಕಾಗುತ್ತದೆ. ಈಗ ಪ್ರೀ ಯೂನಿವರ್ಸಿಟಿ ಎಂದು ಇರುವುದು Multi-purpose High School ಗಳಲ್ಲಿಯೇ ಬರಬೇಕು ಮತ್ತು ಕೆಲವು ಹೈಸ್ಕೂಲುಗಳಲ್ಲಿ, ಕಾಲೇಜಿಗೆ ಹೋಗುವುದರೊಳಗೇ ಹೈಸ್ಕೂಲು ಮಟ್ಟದಲ್ಲಿಯೇ ಹುಡುಗರು Multi-purpose course ಅಥವಾ Higher secondary course ತೆಗೆದುಕೊಳ್ಳಬೇಕೆಂದು ವಿಚಾರ ಮಾಡಿದ್ದೆವು. ಆ ಪ್ರಕಾರ ಎಷ್ಟೋ ಕೋರ್ಸ್‌ಗಳಿರಬೇಕು. ಕಾಲೇಜಿಗೆ ಹೋಗುವುದಕ್ಕೆ ವಿದ್ಯಾರ್ಥಿಗಳಿಗೆ ಸಂಪೂರ್ಣವಾದ ವಿದ್ಯಾಭ್ಯಾಸ ಮಾಡಿಕೊಂಡು diversified courses ತೆಗೆದುಕೊಳ್ಳಲು ಅವಕಾಶವಾಗುತ್ತದೆ.

ಮದರಾಸಿನಲ್ಲಿ ನಮ್ಮಂತೆ ಇಲ್ಲ. ಇಲ್ಲಿ 10th Standard ತೆಗೆದುಕೊಂಡು 11th Standard ನಲ್ಲಿ ನಿಲ್ಲಿಸುವುದು ಸರಿಯಲ್ಲ. ಎಷ್ಟೋ ಹೈಸ್ಕೂಲುಗಳಲ್ಲಿ ಎಕ್ವೈಪ್‌ಮೆಂಟಿಲ್ಲ ಎನ್ನುತ್ತಾರೆ. ಈ ಎಲ್ಲ ಹೈಸ್ಕೂಲುಗಳಲ್ಲಿರುವ ಎಕ್ವೈಪ್‌ಮೆಂಟುಗಳೂ ಇವೆ. ಚೆನ್ನಾಗಿವೆ. ಅದಕ್ಕೆ ತಕ್ಕಂತೆ ಟೀಚರುಗಳೂ ಇದ್ದಾರೆ. Accommodation ಕೂಡ ಇದೆ. ಇಂತಹ ಹೈಸ್ಕೂಲುಗಳಿಗಾಗಿ ಹಣವನ್ನು ಕೊಟ್ಟು ಈಗ 10th Standard class ವರೆಗೆ ಸಿಲಬಸ್ ಇರುವಂತೆ ಇಷ್ಟು ಮಟ್ಟಿಗೆ ಮಾಡಿದರೆ ಇದರ ಉದ್ದೇಶಪೂರ್ಣವಾಗುವುದಿಲ್ಲ. ಇಡೀ Tenth Standard ಗಾಗಿ ಇಷ್ಟು prepare ಮಾಡಿ ಇದನ್ನು ನಿಲ್ಲಿಸಿ alter ಮಾಡುವುದು ಸರಿಯಲ್ಲ, ಇದನ್ನು ತಾವು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

Incentive grants ಎಂದು ಈಗ ಕೊಡುತ್ತಿದ್ದಾರೆ. ಇದರಂತೆ ಯಾವ ಹೈಸ್ಕೂಲುಗಳು ಚೆನ್ನಾಗಿ ಕೆಲಸ ಮಾಡುತ್ತವೆಯೋ ಅದಕ್ಕೆ ಕೊಡಬೇಕು, ಸರಿಯಾಗಿ ಕೆಲಸ ಮಾಡದೇ ಇರುವ ಶಾಲೆಗಳಿಗಾಗಿ ಶೇಕಡಾ ಐದರಷ್ಟು ಗ್ರಾಂಟನ್ನೂ ಖೋತಾ ಮಾಡಬೇಕೆಂದು ಮಾಡಿದ್ದಾರೆ.

(ಶ್ರೀ ಅಣ್ಣಾರಾವ್ ಗಣಮುಖಿ)

ಯಾರು ಚೆನ್ನಾಗಿ ಕೆಲಸ ಮಾಡಿದವರು, ಯಾರು ಇಲ್ಲ ಎಂದು ಹೇಳುವುದಕ್ಕಾಗುತ್ತದೆ! ಚೆನ್ನಾಗಿರುವ ಸ್ಕೂಲಾದರೂ ಎಕ್ಸಾಮಿನೇಷನ್ನಿನಲ್ಲಿ ಸರಿಯಾದ ರಿಸಲ್ಟು ಬರುವುದಿಲ್ಲ. ಎಕ್ಸಾಮಿನೇಷನ್ನೆಲ್ಲಾ reform ಆಗಿದೆ It is the true index of a High School. ಇದರಲ್ಲಿ ರಿಸಲ್ಟು ಚೆನ್ನಾಗಿ ಬಂದರೆ incentive grant ಕೊಡುತ್ತಾರೆ.

ಶ್ರೀ ಎಸ್. ಆರ್. ಕಂಠಿ.—ತಾವು ಮಾಡಿದ್ದ Grant-in-Aid Code ಇದೆ. ಅದರಲ್ಲೇ ಇದ್ದದ್ದು.

ಶ್ರೀ ಅಣ್ಣಾರಾವ್ ಗಣಮುಖಿ.—ಅದರಲ್ಲಿರಲಿಲ್ಲ, ಒಂದು ವೇಳೆ ಇದ್ದರೂ ಅದು ನನ್ನ ನೋಟೀಸ್‌ಗೆ ಬಂದಿರಲಿಲ್ಲ. Penal clause ಎಂದು ಹಾಕಿರುವುದನ್ನು ಒಪ್ಪಿಕೊಂಡರೆ ರೀಸಲ್ಟಿಗೆ ಖೋತಾ ಹಾಕುವುದು ಎಂದು ಅಲ್ಲ, ಸಾಕಷ್ಟು ಕಾರಣಗಳನ್ನು ಕೊಟ್ಟು ಕಡಿಮೆ ಮಾಡಬೇಕೆಂದರೆ ರಿಸಲ್ಟಿನ ಮೇಲೆ ನಿರ್ಧಾರ ಮಾಡುವುದು ಎಂದರ್ಥವಲ್ಲ. ಈ ರೀತಿ ಹೈಸ್ಕೂಲುಗಳಿಗೆ ಪೀನಲೈಸು ಮಾಡಿ incentive grants ಗಳನ್ನು ಶೇಕಡಾ 25 ರಷ್ಟು ಎಂದು ಮಾಡಿದರೆ ಕಷ್ಟವಾಗುತ್ತದೆ.

ಇನ್ನೊಂದು ಮಾತು ಕೊನೆಯದಾಗಿ ಹೇಳುತ್ತೇನೆ. ಈ ಮೊದಲು Primary Education Bill ಎನ್ನುವುದನ್ನು Draft ಮಾಡಿ ಸಿದ್ಧವಾಗಿ ಅದನ್ನು ತಂದು ಪಾಸು ಮಾಡಬಹುದು, ಎಂದು ಹಿಂದಿನ ಮಿನಿಸ್ಟ್ರಿಯಲ್ಲಿ ನಿರ್ಣಯವಾಗಿತ್ತು. ಈ ಪಾಲಿಸಿಯನ್ನು ತೆಗೆದುಕೊಂಡಂತೆ ಇಲ್ಲಿಯವರೆಗೂ ಆ ಬಿಲ್ಲು ಸೆಕ್ರೆಟೇರಿಯಟ್ಟು ಬಿಟ್ಟು ಹೊರಡಲಿಲ್ಲ ಅದರಲ್ಲಿ ವಿದ್ಯಾಭ್ಯಾಸದ ಪದ್ಧತಿ ಯಾವ ರೀತಿ ಇರಬೇಕು ಮತ್ತು ಯಾವ ಪ್ರಕಾರ ಈ ಸ್ಕೂಲುಗಳನ್ನು ತಾಲ್ಲೂಕು ಬೋರ್ಡುಗಳಿಗೆ Hand over ಮಾಡಬೇಕು ಎನ್ನುವುದರ ಬಗೆಗೆ ಒಂದು ನಿರ್ಣಯವನ್ನು ತೆಗೆದುಕೊಂಡು ಮಾಡಲು ಅನುಕೂಲವಾಗುವಂತಹ ಈ ಬಿಲ್ಲನ್ನು ಆದಷ್ಟು ತೀವ್ರತೆಯಿಂದ Put off ಮಾಡದೆ ಈ ಸೆಷನ್ನಿನಲ್ಲಾಗದಿದ್ದರೆ ಮುಂದಿನ ಸೆಷನ್ನಿನಲ್ಲಾದರೂ ತಂದು ಪಾಸು ಮಾಡಬೇಕೆಂದು ಹೇಳಿ ಈ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈ ಸಭೆಯಲ್ಲಿ ನಮ್ಮ ಟೀಕೆಗಳಿಗೆ ಸಾಕಾದಷ್ಟು ಸರಿಯಾದ...............

Mr. SPEAKER.—Is the Hon'ble Member participating in the debate?

Sri B. HUTCHE GOWDA.—I was not given a chance.

Mr. SPEAKER.—I had called upon you.

ಶ್ರೀ ಬಿ. ಹುಚ್ಚೇಗೌಡ.—ನಿನ್ನೆ ದಿನ ನಾವು ಪಟ್ಟಿಯಲ್ಲಿ ಕೊಟ್ಟಂತೆ ಹೆಸರನ್ನು ಕೂಗಲಿಲ್ಲ.

Mr. SPEAKER.—There is little time left over and there are many people who would like to participate. Please try to be as brief as possible.

ಶ್ರೀ ಬಿ. ಹುಚ್ಚೇಗೌಡ.—ನಿನ್ನೆ ನಮ್ಮ ನಾಯಕರಾದ ಶ್ರೀ ಶಿವಪ್ಪನವರಿಗೂ ಅವಕಾಶ ಸಿಕ್ಕಲಿಲ್ಲ. ಆದ್ದರಿಂದ ಈ ದಿವಸ ಈ ಸಭೆಯಲ್ಲಿನ ಚರ್ಚೆಯಲ್ಲಿ ಭಾಗವಹಿಸಬಾರದೆಂದು ತೀರ್ಮಾನಿಸಿದ್ದೇವೆ.

Mr. SPEAKER.—Who initiated the debate yesterday? If the Hon'ble Member does not know the facts, he should not comment.

Sri S. M. KRISHNA.—Yesterday, Sri Gopala Gouda was given the chance and he did initiate the debate.

Right to initiate debate—Chair's Ruling.

Mr. SPEAKER.—I am really sorry that this statement should have been made at all and I think Sri Sivappa raised the point on two counts—firstly why he was not given a chance though he stood up; if

it is that he stood up first, I think I should have given a chance. I may tell him that he did not catch my eye and my belief was that he did not stand up. The House will kindly remember that a large number of Members were desirous to participate in the discussion on this demand. In the very beginning, I asked how many were desirous to participate and it was suggested that it might be extended by one day so that as many as possible could participate. That matter was dealt with and then I called upon Sri Gopala Gowda, and as he was a little hesitant, I called upon Sri Sunthankar. After that Sri Sivappa got up and said that the leader of the Opposition had got the right to initiate the debate and the Chair was violating the convention. So far as convention is concerned, even now I would ask them if they have got anything to show by way of a text-book, by way of a commentary or statement, as I will be very glad to read it. In fact, during the interval, I have gone through many books–I have got some of them here. I said that I would give a ruling later, and now that the statement has been made, it looks as if the party is desirous of knowing the Chair's intention.

Sri S. M. KRISHNA (Maddur).—We know that the intention of the Speaker is not in the wrong direction, but the point we are trying to make out is "this party, which is officially recognised as the Opposition, is not given the preference to express the Opposition sentitments in the State. We, as every other, would equally reciprocate the sentiments in the State, but when we are leading the position, we have to set certain healthy conventions, and one of these conventions has always been, to our limited knowledge, that it is the Leader of the Opposition who initiates the discussion on Demand, and specially so on 'Education'. Education is a most controversial matter in our State and the recent debate and the expressions of certain Members about the way the Education Ministry has been functioning, has been the subject of talk in the State. What we requested you was that the Leader of the Opposition should have been given the chance to initiate the Debate. It is not about the Hon'ble Member Sri Sunthankar being given the chance.

Sri V. M. DEO (Gubbi).—The Hon'ble Speaker gave Sri. Sivappa the chance, It is not fair to blame The Chair for nothing at all. Sri. Sivappa has been given chance many a time and I am happy about it, but what revolts me to make a statement is, "that it is not in conformity with the truth."

Sri S. M. KRISHNA.—Sri Sunthankar has initiated the debate in an exemplary way, but certain healthy conventions should be set up in this House under your leadership.

ಆದ್ದರಿಂದ ಈ ವಿದ್ಯೆಗೆ ಹೆಚ್ಚು ಮಾನ್ಯತೆ, ಹೆಚ್ಚು ಪ್ರೋತ್ಸಾಹ, ಎಲ್ಲ ವಿಧವಾದಂಥ ಸೌಕರ್ಯ, ದೇಶದ ದೃಷ್ಟಿಯಿಂದ ಜನತೆಯ ದೃಷ್ಟಿಯಿಂದ ಇರಬೇಕೆಂದು ವಾದಿಸುವುದಕ್ಕೆ ಹೊರಟಿದ್ದೇನೆ. ಅದಕೋಸ್ಕರ ಎಷ್ಟು ಹಣವನ್ನು ಖರ್ಚು ಮಾಡಿದರೂ ಯಾರೂ ಈ ವಿಚಾರದಲ್ಲಿ ಗೊಣಗುವುದಿಲ್ಲವೆಂದು ನಾನು ಹೇಳಬಯಸುತ್ತೇನೆ. ಈ ಒಂದು ಪವಿತ್ರವಾದ ವಿದ್ಯಾಸಂಸ್ಥೆ, ಈ ಒಂದು ಇಲಾಖೆ, ಈ ಒಂದು ವಿದ್ಯಾ ಕಾರ್ಯ ತತ್ಪರತೆ ಎಷ್ಟು ಉಚ್ಚ ಮಟ್ಟದಲ್ಲಿರುವುದು ಅಗತ್ಯ ಎನ್ನುವುದನ್ನು ಹೇಳಲು ನಾನು ಬಯಸುತ್ತೇನೆ. ನಮ್ಮ ಭಾವಿ ಜನಾಂಗಕ್ಕೆ ಏನು ಕೊಡಬೇಕೆಂದು ಹೊರಟಿದ್ದೇವೆಯೋ ನಮ್ಮ ಪೀಳಿಗೆ ಉತ್ಕೃಷ್ಟವಾಗಿ ಬೆಳೆಯಬೇಕೆಂದು ಅಪೇಕ್ಷಿಸಿದ್ದೇವೆಯೋ ಆ ಭಾವಿ ಜನಾಂಗ ಪೀಳಿಗೆ ಅಷ್ಟು ಉಚ್ಚ ಶ್ರೇಯಸ್ಸಿನಲ್ಲಿ ಬೆಳಯಬೇಕು. ಅದಕ್ಕೆ ನಮ್ಮ ಸಂಸ್ಥೆಗಳೂ, ಅವರಿಗೆ ಪಾಠ ಹೇಳತಕ್ಕಂಥ ಗುರುಗಳೂ ಅಷ್ಟೇ ಉಚ್ಚ ಮಟ್ಟದಲ್ಲಿ ಇರಬೇಕೆಂದು ಅಪೇಕ್ಷಿಸಿ ಈ ಶಿಕ್ಷಕರನ್ನು ನೋಡಿಕೊಳ್ಳತಕ್ಕಂಥ ಅಧಿಕಾರಿಗಳು ಕೂಡ ಅಷ್ಟೇ ಒಂದು ಯೋಗ್ಯತೆ, ಅಷ್ಟೇ ಒಂದು ಮಾನ್ಯತೆ, ಅಷ್ಟೇ ಒಂದು ಧಕ್ಷತೆ ಇರಬೇಕೆಂದು ನಾನು ಬಯಸುತ್ತೇನೆ ಅದಕ್ಕೆ ಮೊದಲು ಅಧಿಕಾರವನ್ನು ಚಲಾಯಿಸಿರತಕ್ಕಂಥ ನಮ್ಮ ಮಂತ್ರಿಗಳೂ ಹಾಗೆಯೇ ಇರಬೇಕು. ಹಾಗೆ ಎಲ್ಲಾ ಕಡೆಯಲ್ಲಿ ಎಲ್ಲಾ ಸರಿಯಾಗಿದ್ದರೆ ನಮ್ಮ ವಿದ್ಯಾ ಸಂಸ್ಥೆ ಚೆನ್ನಾಗಿ ನಡೆಯುತ್ತದೆ; ನಮ್ಮ ಪ್ರಜೆಗಳು ಚೆನ್ನಾಗಿ ಆಗುತ್ತಾರೆ, ಯೋಗ್ಯರಾಗುತ್ತಾರೆ, ದಕ್ಷರಾಗುತ್ತಾರೆ, ನೀತಿವಂತರಾಗಿರುತ್ತಾರೆ ಕೊಂಡಿಯಲ್ಲಿ ಎಲ್ಲ ದೋಷವಿದ್ದರೂ ಕೂಡ ಅನೇಕ ದುಷ್ಪರಿಣಾಮಗಳಾಗುತ್ತವೆ, ನಮ್ಮ ಭಾವಿ ಜನಾಂಗ ಕೆಟ್ಟು

ಹೋಗುತ್ತದೆಂದು ನಾನು ಅಭಿಪ್ರಾಯ ಪಡತಕ್ಕಂಥವನು ನಾನಾದರೂ ಹೇಳುವುದೇನೆಂದರೆ ವಿದ್ಯಾ ಸಂಸ್ಥೆ ನಡೆಸತಕ್ಕಂಥವರು, ಅಧಿಕಾರ ಮಾಡತಕಂಥಾವರು, ನಮ್ಮ ಉಪಾಧ್ಯಾಯರುಗಳು ಕೂಡ ಜಾತ್ಯಾತೀತರಾಗಿರಬೇಕು, ಪ್ರಾಂತ್ಯಗಳ ಅಭಿಮಾನಿಗಳಾಗಿರಬಾರದು, ಕೇವಲ ದೇಶಾಭಿಮಾನದಿಂದ ಕೆಲಸ ಮಾಡಬೇಕು. ಯಾರಾದರೂ ನಮ್ಮ ದೇಶದಲ್ಲಿ ವಿದ್ಯಾ ಸಂಸ್ಥೆಗಳಲ್ಲಿರತಕ್ಕಂಥ ಅಧಿಕಾರಿಗಳು ತನ್ನ ಜಾತಿಯನ್ನು ನೋಡಿಕೊಳ್ಳುತ್ತಾರೆ, ತನ್ನ ಪ್ರಾಂತ್ಯವನ್ನು ಗಮನಿಸುತ್ತಾರೆ, ತನ್ನ ಯೋಗಕ್ಷೇಮವನ್ನು ಗಮನಿಸುತ್ತಾರೆ ಎಂದು ಕೈ ತೋರಿಸಿ ನೋಡುವಂಥ ಒಂದು ಸ್ಥಿತಿ ಬಂದರೆ ನಾವೆಲ್ಲರೂ ತಲೆ ಬಗ್ಗಿಸಬೇಕಾಗುತ್ತದೆಂದು ಹೇಳಲು ಬಯಸುತ್ತೇನೆ.

ಹಾಗೆ ಆಗಬಾರದು, ನಾನಾದರೂ ಈ ಸಂದರ್ಭದಲ್ಲಿ ಹೇಳಬಯಸುವುದು ಏನೆಂದರೆ ಈ ವಿದ್ಯಾ ಇಲಾಖೆಯಲ್ಲಿ ಗಣ್ಯರು, ಯೋಗ್ಯರು ಎಲ್ಲಾ ವಿಧದಲ್ಲೂ ಕೂಡ ಶ್ರೇಷ್ಠರು ಎಂದು ಅನ್ನಿಸಿಕೊಳ್ಳಬೇಕು. ಈ ಅಧಿಕಾರಿಗಳನ್ನು ನೋಡಿ ಏನಾದರೂ ಅವರು ತಪ್ಪುದಾರಿ ಹಿಡಿದರೆ ಉಪಾಧ್ಯಾಯರು ಕೆಟ್ಟುಹೋಗುತ್ತಾರೆ, ಉಪಾಧ್ಯಾಯರು ಸರಿಯಾಗಿಲ್ಲದೇ ಇದ್ದರೆ ಮಕ್ಕಳು ಕೆಟ್ಟುಹೋಗುತ್ತಾರೆ. ಮಕ್ಕಳು ಕೆಟ್ಟುಹೋದರೆ ನಮ್ಮ ಭಾವಿ ಜನಾಂಗ ಹೀನ ಸ್ಥಿತಿಗೆ ಬರುತ್ತದೆ. ಅದಕ್ಕೇ ಈ ವಿಚಾರದಲ್ಲಿ ನಮ್ಮ ಸರ್ಕಾರದವರು ತೀವ್ರ ಗಮನವನ್ನು ಕೊಡಬೇಕೆಂದು ನಾನಾದರೂ ಕೂಡ ಈ ಸಂದರ್ಭದಲ್ಲಿ ಬಹಳ ನಮ್ರತೆಯಿಂದ ಪ್ರಾರ್ಥಿಸುತ್ತೇನೆ.

ಈಗ ಇಡೀ ದೇಶದಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೆ ತಂದಿದ್ದೇವೆ. ನನ್ನ ಅಭಿಪ್ರಾಯದಲ್ಲಿ ಎಷ್ಟುಮಟ್ಟಿಗೆ ಕಡ್ಡಾಯವಾದಂಥ ಮುಫತ್ತಾದ ಪ್ರಾಥಮಿಕ ಶಿಕ್ಷಣ ಕೊಡಬೇಕಾಗಿದೆಯೋ ಅಷ್ಟು ಕೊಡುತ್ತಿಲ್ಲ ಎಂದು ವ್ಯಸನಪಡುತ್ತೇನೆ. ನಾವೇನೋ ಹೇಳಿಕೊಳ್ಳಬಹುದು, ಬಹಳ ದರ್ಪದಿಂದ ಹೇಳಿಕೊಳ್ಳಬಹುದು. ಮೈಸೂರಿನಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೆ ಕೊಟ್ಟಿದ್ದೇವೆ ಕ್ರಮೇಣ 6ವರ್ಷದಿಂದ 14 ವರ್ಷದ ಬಾಲಕರೆಲ್ಲರೂ ವಿದ್ಯಾವಂತರಾಗುತ್ತಾರೆಂದು. ಆದರೆ ಇವತ್ತು ಬೆಳಿಗ್ಗೆ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಮಾನ್ಯಮಂತ್ರಿಗಳು ಹೊಸಕೋಟೆ ತಾಲ್ಲೂಕಿನಲ್ಲಿ 6 ಗ್ರಾಮಗಳಲ್ಲಿ ಪಾಠಶಾಲೆಗಳು ಇಲ್ಲ ಎಂದು ಹೇಳಿದರು. 6 ಗ್ರಾಮಗಳಲ್ಲಿ ಪಾಠಶಾಲೆಗಳಿಲ್ಲ ಎಂದಮೇಲೆ ಅಲ್ಲಿ ಕಡ್ಡಾಯವಾದಂಥ ಪ್ರಾಥಮಿಕ ಶಿಕ್ಷಣ ಕಾನೂನು ಜಾರಿಯಲ್ಲಿದೆ ಎಂದು ನನಗಂತೂ ಅರ್ಥವಾಗುವುದಿಲ್ಲ. ಎಂದರೆ ಕೆಲವು ಕಡೆ ಜಾರಿಯಲ್ಲಿದೆ, ಕೆಲವು ಕಡೆ ಜಾರಿಯಲ್ಲಿಲ್ಲ. ಏನೋ ನಡೆದುಕೊಂಡು ಹೋಗುತ್ತಾ ಇದೆ. ಇಷ್ಟೊಂದು ಜನ ಶಾಲೆಗೆ ಹೋಗುತ್ತಾರೆ, ಇಷ್ಟೊಂದು ಜನ ಶಾಲೆಗೆ ಸೇರಿದ್ದಾರೆ ಎನ್ನತಕ್ಕ ಮಾತು, ಎನ್ನತಕ್ಕ ವಾದ ನನಗಾದರೂ ತೃಪ್ತಿಪಡಿಸುವುದಿಲ್ಲ. ಕಡ್ಡಾಯ ಪ್ರಾಥಮಿಕ ಶಿಕ್ಷಣದ ಕಾನೂನು ಪ್ರಕಾರ ಏನು ವಿಧಿ ಇದೆಯೋ ಅದಕ್ಕನುಸಾರವಾಗಿ ನಾವಾದರೂ ಕಡ್ಡಾಯ ಶಿಕ್ಷಣವನ್ನು ದೇಶದಲ್ಲಿ ಜಾರಿಗೆ ತಂದಿಲ್ಲ. ಇದರಲ್ಲಿ ಏನು ಹೇಳಿದ್ದಾರೆ ಎಂದರೆ ಏನು ಅನುಕೂಲಗಳನ್ನು ಸರ್ಕಾರ ಮಾಡಬೇಕಾಗಿದೆಯೋ ಆ ಎಲ್ಲಾ ಅನುಕೂಲಗಳನ್ನು ಮಾಡಿಕೊಟ್ಟು ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ಮಾಡುತ್ತೇವೆ ಎಂದು ಕಾನೂನಿನಲ್ಲಿ ಇದೆ. ಅನುಕೂಲತೆ ಕೊಟ್ಟಿದ್ದೀರಾ ? ಎಷ್ಟೋ ಊರುಗಳಲ್ಲಿ ಮಕ್ಕಳು ಕುಳಿತುಕೊಳ್ಳುವುದಕ್ಕೆ ಜಾಗ ಇಲ್ಲ. ಒಂದುವೇಳೆ ಕುಳಿತುಕೊಂಡಿದ್ದರೂ ಆ ಜಾಗ ಮಕ್ಕಳು ಕುಳಿತುಕೊಳ್ಳುವುದಕ್ಕೆ ಯೋಗ್ಯವಾಗಿಲ್ಲ. ಎಷ್ಟೋ ಸ್ಕೂಲುಗಳಲ್ಲಿ ಮ್ಯಾಪು ಇಲ್ಲ, ಪಠ್ಯ ಪುಸ್ತಕ ಇಲ್ಲ, ಬರೆಯುವುದಕ್ಕೆ ಬೋರ್ಡು ಇಲ್ಲ ಎನ್ನುವುದನ್ನು ಅನೇಕ ಸಂದರ್ಭಗಳಲ್ಲಿ ನಾನು ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಇದು ಅನುಕೂಲತೆಗಳನ್ನು ಕೊಟ್ಟು ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರತಕ್ಕ ಮಾರ್ಗವೇ ಎಂದು ನಾನಾದರೂ ಈ ಸಂದರ್ಭದಲ್ಲಿ ಕೇಳಲು ಇಚ್ಛಿಸುತ್ತೇನೆ. ಅನೇಕ ಊರುಗಳಲ್ಲಿ ತಕ್ಕಷ್ಟು ಮಂದಿ ಉಪಾಧ್ಯಾಯರು ಇಲ್ಲ. ಇದು ನಿರ್ವಿವಾದವಾದ ವಿಚಾರ. 50 ಮಕ್ಕಳಿಗೆ ಮೇಲ್ಪಟ್ಟು ಇರತಕ್ಕ ಸ್ಕೂಲುಗಳಲ್ಲಿ ಒಬ್ಬರೇ ಉಪಾಧ್ಯಾಯರು ಕೆಲಸ ಮಾಡುತ್ತಾ ಇರುವುದನ್ನು ಕಣ್ಣಾರೆ ನೋಡಿದ್ದೇನೆ. ಅಲ್ಲಿ ನಾಲ್ಕು ತರಗತಿಗಳನ್ನು ನಡೆಸಬೇಕು ಆ ಬೃಹಸ್ಪತಿ. ಆ ಗುರು, ಮಕ್ಕಳಿಗೆ ಎಷ್ಟುಮಟ್ಟಿಗೆ ಪಾಠ ಬರುತ್ತದೆ, ಪಾಠ ಆಗುತ್ತದೆ ಎಂದು ಕೇಳುತ್ತೇನೆ. ಇದು ನಮ್ಮ ಗ್ರಾಮಾಂತರ ಪ್ರದೇಶದ ಸ್ಥಿತಿ. ಈ ಸಂದರ್ಭದಲ್ಲಿ ಪ್ರಶ್ನೆ ಮಾಡುತ್ತೇನೆ. ಸ್ವಾಮಿ ಮರದ ಕೆಳಗೆ ಇರತಕ್ಕ ಪಾಠಶಾಲೆ, ಜಗಲಿ ಮೇಲೆ ಇರತಕ್ಕ ಪಾಠಶಾಲೆ, ತರಪೇತು ಆಗದೇ ಇರತಕ್ಕ ಉಪಾಧ್ಯಾಯರಿರತಕ್ಕ ಪಾಠಶಾಲೆ, ಪಠ್ಯಪುಸ್ತಕ ಇಲ್ಲದೇ ಇರತಕ್ಕ ಪಾಠಶಾಲೆ, ಒಂದು ಮ್ಯಾಪು ಗತಿ ಇಲ್ಲದೇ ಇರತಕ್ಕ ಸ್ಥಿತಿ. ಕಡೆಗೆ ಒಂದು ಬೋರ್ಡು ಇಲ್ಲದೇ ಇರತಕ್ಕ ಸ್ಥಿತಿ, ನಮ್ಮ ಅಧಿಕಾರಿಗಳನ್ನು ಪ್ರಶ್ನೆ ಮಾಡುತ್ತೇನೆ ಇಂಥಾ ಶಾಲೆಗಳಿಗೆ ನಿಮ್ಮ ಮಕ್ಕಳನ್ನು ಕಳುಹಿಸುತ್ತೀರಾ ? ಹಳ್ಳಿಯವರು ನಾವು ಏನು ಪಾಪ ಮಾಡಿದ್ದೇವೆ? ನಾವು ದುಡ್ಡು ಕೊಡುತ್ತೇವೆ, ಎಲ್ಲಾ ಶಾಲೆಗಳಲ್ಲೂ ಕೂಡ ಕಟ್ಟುನಿಟ್ಟಾಗಿ ಕಡ್ಡಾಯ ಶಿಕ್ಷಣ ಕೊಡುತ್ತೇವೆ ಎಂದು ಇದೆ. ಇದು ಶಿಕ್ಷಣವೇನು ? ನಮ್ಮ ಮಕ್ಕಳಿಗೆ ವಿದ್ಯೆ ಬರುತ್ತಾ ಇದೆಯೇನು ? ಒಂದು ವೇಳೆ ಬರುತ್ತಾ ಇದ್ದರೆ ಆ ಮಕ್ಕಳಿಗೆ ಬರುತ್ತಾ ಇರತಕ್ಕ ವಿದ್ಯೆ ಆದರೂ ಏನು ? ಒಳ್ಳೆಯ ವಿದ್ಯೆ, ಯೋಗ್ಯವಾದ ವಿದ್ಯೆ. ಅವನು ಮುಂದೆ ಬರತಕ್ಕ ವಿದ್ಯೆ ದೊರೆ

(ಶ್ರೀ ಟಿ. ಮಾದಯ್ಯಗೌಡ)

ಅವನು ಒಳ್ಳೆಯ ಪ್ರಜೆ ಆಗುತ್ತಾನೆಯೇನು ? ಇದೇ ಸಂದರ್ಭದಲ್ಲಿ ಹೇಳುತ್ತೇನೆ Bad education is worse than no education' ವಿದ್ಯೆಯನ್ನು ಕೊಡಬೇಡಿ. ತಂದೆ ತಾಯಿಗಳ ಜೊತೆಯಲ್ಲಿ ಮಕ್ಕಳು ಬೆಳೆಯಲಿ ಅವನಿಗೆ ಒಳ್ಳೆಯದಾದರೂ ಆಗುತ್ತದೆ. ನಿಮ್ಮ ಉಪಾಧ್ಯಾಯರ ಜೊತೆಯಲ್ಲಿ ಈ ರೀತಿ ಅವನು ವಿದ್ಯಾಭ್ಯಾಸ ಮಾಡಿದರೆ ಅವನು ಯೋಗ್ಯವಂತನಾಗುವುದು ಕಷ್ಟ. ವಿದ್ಯಾವಂತ ಎಂದು ಅನಿಸಿಕೊಳ್ಳುವುದು ಕಷ್ಟ. ವಿದ್ಯಾವಂತನಿರಲಿ ನೀತಿವಂತನಾಗಿ ಬಾಳುವುದು ದುಸ್ತರ. ನೀತಿವಂತರು ದೇಶದಲ್ಲಿ ಹೆಚ್ಚದೇ ಹೋದರೆ, ವಿದ್ಯಾಭ್ಯಾಸ ಕೆಟ್ಟರೆ ನಮ್ಮ ಮುಂದಿನ ಭಾವೀ ಪ್ರಪಂಚ, ನಮ್ಮ ಸ್ಥಿತಿಗತಿ ಏನು ? ಈ ಒಂದು ದೃಷ್ಟಿಯಿಂದ ನಾನಾದರೂ ಹೆಚ್ಚಿನ ಒಂದು ಹೊಟ್ಟೆ ಉರಿಯಿಂದ ಹೇಳುತ್ತಾ ಇದ್ದೇನೆ. ಎಲ್ಲಿಯವರೆಗೆ ಪ್ರಾಥಮಿಕ ಶಿಕ್ಷಣ ಸರಿಹೋಗುವುದಿಲ್ಲವೋ ಅಲ್ಲಿಯವರೆಗೂ ಈ ವಿದ್ಯೆ. ಈ ಇಲಾಖೆ, ಈ ಉಪಾಧ್ಯಾಯರು, ಈ ಅಧಿಕಾರಿಗಳು ನಮಗೆ ಬೇಡ ಎಂದು ನನಗೆ ಅನಿಸುತ್ತದೆ. ಪ್ರಾಥಮಿಕ ವಿದ್ಯಾಭ್ಯಾಸದ ವಿಚಾರವಾಗಿ ಹೇಳಬೇಕೆಂದರೆ ಇನ್ನು ಬಹಳವಾಗಿ ಹೇಳಬಹುದು. ಅನೇಕ ವಿಚಾರಗಳನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಈ ದಿವಸ ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ಸ್ಕೂಲು ಕೇಳಿದರೆ, ಕಡೆಯದಾಗಿ ಮಿಡ್ಲ್ ಸ್ಕೂಲು ಕಟ್ಟಡ ಕೊಡಿ ಎಂದರೆ ನೀವೇನು ಕೊಡುತ್ತೀರಿ; ಎಂದು ಕೇಳುತ್ತಾರೆ. ಏನು ಸ್ಥಿತಿ ಬಂತು ಸ್ವಾಮಿ ? ವಿದ್ಯೆ ಇಲ್ಲ ಅದರಲ್ಲೂ ಬಾಲಕೀಯರ ವಿದ್ಯೆಗೆ ಒಂದು ಮಿಡ್ಲ್ ಸ್ಕೂಲು ಬೇಕು ಚಾಮರಾಜ ನಗರದಲ್ಲಿ, ಅಂಥಾ ಒಂದು ಪಟ್ಟಣದಲ್ಲಿ ಸ್ಕೂಲ್ ಕಟ್ಟಡ ಕಟ್ಟಿಸಿ, ಬಹಳ ದಿವಸದಿಂದ ಮುರುಕಲು ಮನೆಯಲ್ಲಿ ಶಾಲೆ ನಡೆಸುತ್ತಾ ಇದ್ದಾರೆ ಎಂದು ಕೇಳಿದರೆ, ನೀವೇನು ಹೇಳುತ್ತೀರಿ ? ನೀವೇನೂ ಕೊಡಲಿಲ್ಲ ನಾವು ಕಟ್ಟಿಸಲಿಲ್ಲ ಎಂದು ಹೇಳುತ್ತೀರಿ. ಇದು ಬಹಳ ಶೋಚನೀಯ ಸ್ಥಿತಿ ಅನೇಕ ಗ್ರಾಮಾಂತರ ಪ್ರದೇಶದವರು ನಮಗೆ ಕಟ್ಟಿಸುವುದಕ್ಕೆ ಯೋಗ್ಯತೆ ಇಲ್ಲ, ನಾವು ಬಡವರು, ನಮಗೆ ಸ್ಕೂಲು ಕಟ್ಟಡ ಕಟ್ಟಿಸಿ ಕೊಡಿ ಎಂದರೆ ಗ್ರಾಮದವರು ತಮ್ಮ ಭಾಗದ ಹಣ ಕೊಡದಿದ್ದರೆ ನೀವೇನೂ ಮಾಡುವುದಿಲ್ಲ. ಇದೇ ಸಂದರ್ಭದಲ್ಲಿ ಕೇಳುತ್ತೇನೆ ಎಷ್ಟು ಪಟ್ಟಣಗಳಲ್ಲಿ ಜನರಿಂದ ಹಣ ವಸೂಲು ಮಾಡಿ ಕಟ್ಟಡ ಕಟ್ಟಿಸಿದ್ದೀರಿ ? ಅದೇನು ಹಳ್ಳಿಯವರು ಪಾಪ ಮಾಡಿದ್ದಾರೆ, ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ! ಇದು ಬಹಳ ಅನ್ಯಾಯ ಸ್ವಾಮಿ !

Smt.. GRACE TUCKER (Deputy Minister for Education).—If the Hon'ble Member yields, may I inform him that as far as the State is concerned, either the people provide school building or no school is given at all.

ಶ್ರೀ ಟಿ. ಮಾದಯ್ಯಗೌಡ.—ಹಳ್ಳಿ ಮಕ್ಕಳಿಗೆ ಮಧ್ಯಾಹ್ನದ ಹೊತ್ತು ಒಂದು ತುತ್ತು ಅನ್ನ ಕೊಡಬೇಕೆಂದು ಮಾಡಿರತಕ್ಕ ವ್ಯವಸ್ಥೆ. ಒಂದು ಸಂತೋಷದ ವ್ಯವಸ್ಥೆ ಪ್ರಾಥಮಿಕ ಶಾಲೆಗಳಿಗಿಂತಲೂ ಹೆಚ್ಚಾಗಿ ಹೈಸ್ಕೂಲುಗಳಲ್ಲಿ ಈ ಏರ್ಪಾಡು ಆಗಬೇಕಾದ್ದು ತುರ್ತು ಮತ್ತು ಅತ್ಯಂತ ಅವಶ್ಯಕ. ಪ್ರಾಥಮಿಕ ಶಾಲೆಗೆ ಬರತಕ್ಕ ಹುಡುಗರಿಗೆ ಅಲ್ಲೇ ಮನೆ ಇರುತ್ತದೆ ಮಧ್ಯಾಹ್ನದ ಹೊತ್ತು ಮನೆಗೆ ಹೋಗಿ ಹೊಟ್ಟೆ ತುಂಬ ತಿಂದು ಬರುತ್ತಾರೆ. ಹೈಸ್ಕೂಲಿನಲ್ಲಿ ಓದತಕ್ಕ ಮಕ್ಕಳು ಬಹಳ ದೂರದಿಂದ ಬರುತ್ತಾರೆ. ರಾಮನಗರದಲ್ಲಿ ಒಂದು ಹೈಸ್ಕೂಲು ಇದೆ. ಅಲ್ಲಿಗೆ ಬರತಕ್ಕ ಮಕ್ಕಳು 10-15 ಮೈಲಿಯಿಂದ ಅನೇಕರು ಬರುತ್ತಾರೆ. ಬೆಳಿಗ್ಗೆ ಎದ್ದು ಸ್ಕೂಲಿಗೆ ಬರಬೇಕು, ಸಾಯಂಕಾಲದವರೆಗೂ ಇರಬೇಕು. ರಾತ್ರಿ 8ಗಂಟೆಯ ಮೇಲೆ ಅನ್ನ ತಿನ್ನಬೇಕು ಅವನಿಗೆ ಏನು ವಿದ್ಯೆ ಬರುತ್ತದೆ. ಎಂಥಾ ಪ್ರಜೆ ಆಗುತ್ತಾನೆ! ಆದ್ದರಿಂದ ಪ್ರಾಥಮಿಕ ಶಾಲೆಗಿಂತಲೂ ಹೈಸ್ಕೂಲಿನಲ್ಲಿ ಈ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ.

ಸ್ತ್ರೀ ವಿದ್ಯಾಭ್ಯಾಸದ ವಿಚಾರದಲ್ಲಿ ಒಂದು ಮಾತು ಹೇಳುತ್ತೇನೆ. ನಾವಾದರೂ ತಿಳಿದುಕೊಂಡಿದ್ದೇವೆ ಗಂಡು ಹುಡುಗರು ವಿದ್ಯೆ ಕಲಿತರೆ ಅವರು ವಿದ್ಯಾವಂತರಾಗುತ್ತಾರೆ. ಹೆಣ್ಣು ಮಕ್ಕಳು ವಿದ್ಯೆ ಕಲಿತರೆ ಒಂದು ಸಂಸಾರವನ್ನೇ ವಿದ್ಯಾವಂತರನ್ನಾಗಿ ಮಾಡುತ್ತಾರೆ ಎಂದು ಸ್ತ್ರೀ ವಿದ್ಯಾಭ್ಯಾಸಕ್ಕೆ ಈಚೀಚೆಗೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತಾ ಇಲ್ಲ.

ರಾಮನಗರಕ್ಕೆ ಒಂದು ಗರ್ಲ್ಸ್ ಹೈಸ್ಕೂಲನ್ನು ಕೊಡಬೇಕೆಂದು ನಾವು ಬಹಳ ದಿನಗಳಿಂದಲೂ ಸರ್ಕಾರದವರನ್ನು ಕೇಳುತ್ತಿದ್ದೇವೆ. ಇದೇ ವಿಚಾರವಾಗಿ ನಾನು 1962ನೇ ಜುಲೈನಲ್ಲಿ ಅಲ್ಲಿಂದ 5-6 ಪತ್ರಗಳನ್ನು ಮೇಲಿಂದ ಮೇಲೆ ಬರೆದಿದ್ದೇನೆ, ಆ ಕಾರಣದಿಂದಲೋ ಏನೋ ಈಗ ಸರ್ಕಾರದವರು ಈ ವಿಚಾರವನ್ನು ಕನ್‌ಸಿಡರ್ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಈ ಹಿಂದೆ ಶ್ರೀಮಾನ್ ಅಣ್ಣಾರಾಯರು ವಿದ್ಯಾ ಮಂತ್ರಿಗಳಾಗಿದ್ದಾಗ ಅವರು ರಾಮನಗರಕ್ಕೆ ಬಂದಿದ್ದಾಗ ನಾವು ಈ ವಿಚಾರವನ್ನು ಅವರಲ್ಲಿ ಅರಿಕೆಮಾಡಿಕೊಂಡಾಗ ಅವರು ಅದಷ್ಟು ಸಹಾನುಭೂತಿಯಿಂದ

ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದರು. ಅಂತು ಈಗ ಇದರ ಕಡೆಗೆ ಸರ್ಕಾರದವರ ಗಮನ ಬಿದ್ದಿರಬಹುದೆಂದು ಭಾವಿಸುತ್ತೇನೆ. ಆ ರಾಮನಗರ ಟೌನಿನಲ್ಲಿ ಹೊರಗಡೆ ಓಡಾಡವಂಥ ಗೋಷಾ ಹೆಣ್ಣುಮಕ್ಕಳು ಜಾಸ್ತಿ ಇದ್ದಾರೆ. ಈ ದಿವಸ ಅಲ್ಲಿ ಒಂದು Girls High School ಇಲ್ಲದೆ ಇರುವುದರಿಂದ ಅಲ್ಲಿಯ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ತುಂಬಾ ತೊಂದರೆಯಾಗಿ ಅಲ್ಲಿ ಅವಿದ್ಯಾವಂತ ಹೆಣ್ಣುಮಕ್ಕಳ ಸಂಖ್ಯೆ ಜಾಸ್ತಿ ಆಗುತ್ತಿದೆ. ಇಂಥ ಒಂದು ದುರಾದೃಷ್ಟ ಪ್ರಸಂಗ ಅಲ್ಲಿಗೆ ಒದಗಿದೆ. ವಿದ್ಯಾಮಂತ್ರಿಗಳು, ಮುಖ್ಯಮಂತ್ರಿಗಳು ಇತ್ತ ಕಡೆಗೆ ಹೆಚ್ಚು ಗಮನ ಕೊಡಬೇಕೆಂದು ಕೇಳಿಕೊಂಡು ನನಗೆ ಮಾತನಾಡಲು ಹೆಚ್ಚಿನ ಅವಕಾಶವಿಲ್ಲದ್ದರಿಂದ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

6.00 P.M.

Business of the House.

Sri V. S. PATIL.—Sir, what about our request to have this subject tomorrow also?

Sri S. NIJALINGAPPA.—Sir, to-day we are sitting till 7 O' clock; so, we get one hour more. If the House kindly agrees to give up the Question Hour tomorrow and utilise that hour for the debate, it would mean two hours. Then, the Minister will take about an hour for reply. So, that would mean three more hours for this debate. At 10-30 a.m., the Minister may be allowed to go because he has an engagement. A Minister of Government of India is coming and he is coming on an important mission. I think, this would be all right.

Mr. SPEAKER.—What is the sense of the House?

Sri S. NIJALINGAPPA.—Question Hour may be given up, Sir.

Mr. SPEAKER.—Shall I take it that the House is agreeable to this?

HON'BLE MEMBERS.—Yes.

ಶ್ರೀ ಬಿ. ಹುಚ್ಚೇಗೌಡ.—ಕೊಶ್ಚನ್-ಅವರ್ ಇದು ನಾನ ಆಫಿಷಿಯಲ್ ಬಿಜಿನೆಸ್. ಸರ್ಕಾರದವರಿಂದ ನಮಗೆ ಬೇಕಾದ ಇನ್‌ಫರ್ಮೇಷನ್ನನ್ನು ಪಡೆಯಲು ನಮಗಿರತಕ್ಕ ಅವಕಾಶ ಇದೊಂದರಿಂದಲೇ. ಈಗಾಗಲೇ 2-3 ದಿವಸ ಈ ನಮ್ಮ ಹಕ್ಕನ್ನು ತಾವು ಕಸಿದುಕೊಂಡಿದ್ದೀರಿ. ಇದರಿಂದ ನಮಗೆ ಪೂರಾ ತೊಂದರೆಯಾಗುತ್ತಿದೆ. ಅಧ್ಯಕ್ಷರು ದಯವಿಟ್ಟು ಇದನ್ನು ತಪ್ಪಿಸಬಾರದು. ಅವರು ನಮ್ಮ ಹಕ್ಕನ್ನು ರಕ್ಷಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

Sri K. LAKKAPPA.—Sir, question hour is a very important one when we want to elicit information from Government. That should not be taken away.

Mr. SPEAKER—After Knowing the sense of the House, if the Hon'ble Member simply gets up and begin to say something, I cannot allow that.

ಶ್ರೀ ಬಿ. ಹುಚ್ಚೇಗೌಡ.—ಈ ಪ್ರಶ್ನೆ ಮೆಜಾರ್ಟಿ ಇದೆಯೆಂಬ ಅಭಿಪ್ರಾಯದಿಂದ ಓಟಿಗೆ ಹಾಕಿ ತೀರ್ಮಾನ ಮಾಡತಕ್ಕ ವಿಚಾರವಲ್ಲ. ರೂಲಿಂಗ್ ಪಾರ್ಟಿಯವರಿಗೆ ಕೊಶ್ಚನ್ ಅವರ್ ಬೇಡ, ಯಾವುದೂ ಬೇಕಾಗಿಲ್ಲ. ಆದರೆ ನಮ್ಮ ಅಭಿಪ್ರಾಯಕ್ಕೂ ಅವರ ಅಭಿಪ್ರಾಯಕ್ಕೂ ಹೊಂದಾವಣೆ ಆಗುವುದೇ ಇಲ್ಲ.........

ಅಧ್ಯಕ್ಷರು.—ಅಭಿಪ್ರಾಯಗಳಲ್ಲಿ ಹಾಗೆ ವ್ಯತ್ಯಾಸವಿರುವುದು ಸಹಜ.

ಶ್ರೀ ಬಿ. ಹುಚ್ಚೆಗೌಡ.—ಓಟಿಂಗ್ ಮೇಲೆ ತೀರ್ಮಾನ ತೆಗೆದುಕೊಳ್ಳತಕ್ಕ ವಿಚಾರವಲ್ಲ ಇದು. ಹಾಗಾದರೆ ಇನ್ನುಮುಂದೆ ನಮ್ಮ ಹಕ್ಕು ಬಾಧ್ಯತೆಗಳೊಂದೂ ಉಳಿಯುವುದಿಲ್ಲ.

Sri S. M. KRISHNA.—Sir, the Ruling Party would be too glad to give up the Question Hour. By taking the sense of the House, if the Question Hour is dropped, it would become very difficult for us to elicit information on several matters.

Mr. SPEAKER.—The proposal to drop the Question Hour is seriously questioned.

Sri C. J. MUCKANNAPPA.—Sir, after ascertaining the opinion of the House, there is no question of again going back?

Sri V. S. PATIL.—Question Hour may be dropped Sir; or, in the alternative, the Hon'ble Minister for Education can spare time up to 11-30 A. M. or 12 Noon.

Sri S. R. KANTHI.—No Sir, that is not possible.

Mr. SPEAKER.—Yes Sri Range Gowda may speak now.

ಶ್ರೀ ಸಿ. ಆರ್. ರಂಗೇಗೌಡ (ಮಾಗಡಿ).—ಸ್ವಾಮಿ, ಪೂಜ್ಯ ಸಭಾಪತಿಗಳೇ: ಈಗ ವಿದ್ಯಾಖಾತೆಯ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಯನ್ನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನ ಪ್ರಸ್ತಾಪ ಮಾಡಲು ನಿಂತಿದ್ದೇನೆ.

ವಿದ್ಯಾಖಾತೆ ಬಹಳ ಮುಖ್ಯವಾದುದು. ವಿದ್ಯೆಯು ಬಹಳ ಹೆಚ್ಚಿನ ಮಹತ್ವ ಉಳ್ಳದ್ದು. ಈಗಾಗಲೇ ಶ್ರೀ ಗೋಪಾಲಗೌಡರೂ ಮತ್ತು ಶ್ರೀ ಟಿ. ಮಾದಯ್ಯಗೌಡರೂ ಹೇಳಿದ ಹಾಗೆ "ವಿದ್ಯಾವಿಹೀನ ಪಶುಃ". ಎಂಬಗಾದೆ ಇದೆ. ಅಂದರೆ ವಿದ್ಯೆಯಿಲ್ಲದವನು ಪಶುವಿಗೆ ಸಮಾನನು ಎಂದು. ಆ ಪಶುವಾದರೋ, ಹಾದಿಬೀದಿಯಲ್ಲಿರುವ ಹುಲ್ಲನ್ನು ತಿಂದು ಮಡುವಿನಲ್ಲಿರತಕ್ಕ ನೀರನ್ನು ಕುಡಿದು ಬಂದರೂ ಅದು ಅಮೃತವನ್ನು ಕೊಡುತ್ತದೆ. ಆದರೆ ವಿದ್ಯೆ ಇಲ್ಲದ ಮಾನವನು ಸಮಾಜಕ್ಕೂ, ದೇಶಕ್ಕೂ ಕಂಟಕನು. ಆದುದರಿಂದಲೇ ಎಲ್ಲರೂ ಈ ವಿದ್ಯೆಗೆ ಬಹಳ ಮಹತ್ವವನ್ನು ಕೊಟ್ಟಿದ್ದಾರೆ.

ಆದರೆ ಈ ದಿವಸ ಸರ್ಕಾರದವರು ಕಡ್ಡಾಯ ಶಿಕ್ಷಣವನ್ನು ದೇಶದಲ್ಲಿ ಜಾರಿಗೆ ತಂದಿದ್ದಾರೆ. ಆದರೆ ಇದಕ್ಕಿಂತಲೂ ಮೊದಲನೇಯದಾಗಿ ವಯಸ್ಕರ ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನ ಕೊಡಬೇಕಾಗಿದೆ. ಈ ಕಡ್ಡಾಯ ಶಿಕ್ಷಣ ಮತ್ತು ವಯಸ್ಕರ ಶಿಕ್ಷಣ ಇವೆರಡೂ ಒಂದಕ್ಕಿಂತ ಒಂದು ಮಹತ್ವವುಳ್ಳವುಗಳಾಗಿವೆ. ಮಕ್ಕಳು ವಿದ್ಯಾವಂತರಾಗಬೇಕಾಗಿದ್ದರೆ ಅದಕ್ಕೂ ಮೊದಲು ಅವರ ತಂದೆ ತಾಯಿಗಳು ವಿದ್ಯಾವಂತರೂ, ಬುದ್ಧಿವಂತರೂ ಆಗಿರಬೇಕು. ಅವರು ವಿಧ್ಯಾವಂತರಾಗಿದ್ದರೇನೇ ಅವರ ಮಕ್ಕಳನ್ನು ಅವರು ಕಾಲಕ್ಕೆ ಸರಿಯಾಗಿ ಶಾಲೆಗೆ ಕಳುಹಿಸುತ್ತಾ, ವಿದ್ಯೆಗೆ ಬೆಲೆ ಕೊಡುತ್ತಾರೆ. ತಂದೆ ತಾಯಿಗಳೇ ಅವಿದ್ಯಾವಂತರಾಗಿದ್ದರೆ ಅವರಿಗೆ ಮಕ್ಕಳ ವಿದ್ಯೆ ಬಗ್ಗೆ ಅಷ್ಟು ಆಸಕ್ತಿಯಿರುವುದಿಲ್ಲ. ಆದುದರಿಂದ ಮಕ್ಕಳ ವಿದ್ಯಾಭ್ಯಾಸದ ಮೂಲ ವಯಸ್ಕರ ಶಿಕ್ಷಣದಲ್ಲಿದೆ. ಆದ್ದರಿಂದ ವಯಸ್ಕರ ಶಿಕ್ಷಣವೂ ಮಕ್ಕಳ ಶಿಕ್ಷಣಕ್ಕಿಂತ ಹೆಚ್ಚು ಪ್ರಾಮುಖ್ಯವುಳ್ಳದ್ದು. ಆದುದರಿಂದಲೇ ಈ ಬಾಬಿಗೆ ಈಗ 5 ಲಕ್ಷ ರೂಪಾಯಿಗಳನ್ನು ಖರ್ಚುಮಾಡಲಾಗುತ್ತಿದೆ. ನಾನೀಗ ಈ ವಯಸ್ಕರ ಶಿಕ್ಷಣದ ಬಗ್ಗೆ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ಈ ದಿವಸ ಈ ಶಿಕ್ಷಣ ಸರಿಯಾದ ವ್ಯವಸ್ಥೆಯಿಂದ ನಡೆಯುತ್ತಿಲ್ಲ. ಒಂದೊಂದು ವಯಸ್ಕರ ಶಿಕ್ಷಣ ಶಾಲೆಯಲ್ಲ 10-15 ಜನರಿದ್ದರೆ ಹೆಚ್ಚಾಯಿತು. ಅವರೇನು ವ್ಯಾಸಂಗ ಮಾಡುತ್ತಾರೆ, ಅವರು ಕಲಿತುದನ್ನು ಮರೆತಿದ್ದಾರೆಯೇ-ಇಲ್ಲವೇ ಎಂಬುದನ್ನು ಪರೀಕ್ಷೆ ಮಾಡತಕ್ಕವರು ಯಾರೂ ಇಲ್ಲ. ಈ ಶಾಲೆಯಲ್ಲಿ ಜನರು ಏನಾದರೂ ಕಲಿತರೇ-ಇಲ್ಲವೇ ಅನ್ನುವುದನ್ನು ಕೇಳತಕ್ಕವರೇ ಇಲ್ಲ. ಈ ಹಿಂದೆ ಈ ವಯಸ್ಕರ ಶಿಕ್ಷಣದಲ್ಲಿ ಒಂದು ಪುಸ್ತಕ, ಪರೀಕ್ಷೆ ಇತ್ಯಾದಿಗಳನ್ನು ವ್ಯವಸ್ಥೆಮಾಡಿ ಒಂದು ಕ್ರಮದಲ್ಲಿ ವಿದ್ಯೆ ಕಲಿಸುತ್ತಿದ್ದರು. ಆದರೆ ಈ ದಿವಸ ಆ ಪದ್ಧತಿ ಮಾಯವಾಗಿದೆ. ಈಗ ಒಂದು ತಾಲ್ಲೂಕಿನಲ್ಲಿ ಹತ್ತು ವಯಸ್ಕರ ಶಿಕ್ಷಣ ಶಾಲೆಗಳಿದ್ದರೆ ಹೆಚ್ಚಾಯಿತು. ಒಂದೊಂದು ಶಿಕ್ಷಣ ಶಾಲೆಯಲ್ಲೂ 20 ಜನಗಳಿಗಿಂತ ಮೇಲಿರುವುದಿಲ್ಲ. ಅಂದರೆ ಈ ಎಲ್ಲ ಸ್ಕೂಲುಗಳಿಂದಲೂ ಒಂದು ತಾಲ್ಲೂಕಿನಲ್ಲಿ ವರ್ಷಕ್ಕೆ 200 ಜನರನ್ನು ವಿದ್ಯಾವಂತರನ್ನಾಗಿ ಮಾಡಿದಂತಾಯಿತು. ಈ ಮಟ್ಟದಲ್ಲಿ ನಾವು ಈ ಜನರನ್ನು ವಿದ್ಯಾವಂತರನ್ನಾಗಿ ಮಾಡುತ್ತಾ ಹೋದರೆ ನಮ್ಮ ದೇಶದಲ್ಲಿರತಕ್ಕ ಪ್ರಜೆಗಳನ್ನು ವಿದ್ಯಾವಂತರನ್ನಾಗಿ ಮಾಡಲು ಸರ್ಕಾರಕ್ಕೆ ಎಷ್ಟೋ ವರ್ಷಗಳು ಬೇಕಾಗುತ್ತವೆ.

ದೇಶದಲ್ಲಿ ವಯಶ್ಕರ ಶಿಕ್ಷಣ ಹೆಚ್ಚಾಗಬೇಕು. ಪ್ರತಿಯೊಬ್ಬರಿಗೂ ಕಡ್ಡಾಯವಾಗಿ ವಯಸ್ಕರ ಶಿಕ್ಷಣ ಕೊಡಬೇಕೆಂದು ಸರ್ಕಾರವನ್ನು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಈಗ ಇರುವ Adult Education Committee ಯಲ್ಲಿ ರಾಜಕೀಯ ತುಂಬಿ ತುಳುಕಾಡುತ್ತಿದೆ. ಪ್ರತಿವರ್ಷವೂ ಬಡಬೋರೆಗೌಡನ ದುಡ್ಡನ್ನು ಐದು ಲಕ್ಷ ರೂಪಾಯಿ ಖರ್ಚುಮಾಡುತ್ತಾ ಇದ್ದಾರೆ. ಅಲ್ಲಿ ಏನು

ಕೆಲಸ ನಡೆಯುತ್ತದೆ ಎನ್ನುವುದನ್ನೂ ಯಾರಾದರೂ ತನಿಖೆ ಮಾಡಿದ್ದಾರೆಯೇ ? ತನಿಖೆ ಮಾಡಿದ್ದರೆ ಆ ರಿಪೋರ್ಟನ್ನು ಒದಗಿಸಿಕೊಡಬೇಕೆಂದು ಹೇಳಬಯಸುತ್ತೇನೆ.

ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಅಧ್ಯಕ್ಷರಾಗಿರುವವರು ಪಾಶ್ಚಿಮಾತ್ಯ ದೇಶಗಳಿಗೆ ಹೋಗಿದ್ದಾರೆ ಅವರು ಸಂಬಳ ತೆಗೆದುಕೊಂಡು ಕೆಲಸ ಮಾಡುತ್ತ ಇದ್ದಂತೆ ತಿಳಿದು ಬಂದಿದೆ ಇಲ್ಲಿ ಬೆರೆಯವರು ಇದ್ದುಕೊಂಡು ಕೆಲಸ ನಡೆಸುತ್ತಿದ್ದಾರೆ. ಇದು ಕಾನೂನು ಬದ್ಧವಾಗಿ ಇದೆಯೇ ? ಸರ್ಕಾರದವರು ಯಾವ ಸಮಯದಲ್ಲಿ ಗ್ರ್ಯಾಂಟ್ ಕೊಡುವುದನ್ನು ನಿಲ್ಲಿಸುತ್ತಾರೆಯೋ ಎಂದು, ಅಲ್ಲಿ ಕೆಲಸ ಮಾಡುವವರೆಲ್ಲ ಬೇರೆ ಕಡೆ ಕೆಲಸ ಹುಡುಕಿಕೊಳ್ಳುವ ಪ್ರಸಂಗ ಬಂದಿದೆ. ಇದರಲ್ಲಿ ನಿಸ್ಪೃಹರಾದವರಿಗೆ, ಕಷ್ಟಪಟ್ಟು ಕೆಲಸಮಾಡುವವರಿಗೆ ಏನೂ ಪ್ರೋತ್ಸಾಹವಿಲ್ಲ. Dancing attendence ಕೆಲಸ ಮಾಡುವವರಿಗೆ ಪ್ರಮೋಷನ್‌ವೆಗೈರೆ ಎಲ್ಲ ದೊರಕುತ್ತದೆ. ಅಲ್ಲಿ ಮಾನಿಷ್ಟ ಹೆಣ್ಣುಮಕ್ಕಳಿಗೆ ಸ್ಥಳವಿಲ್ಲ. ಇದು ಮಾನ್ಯ ಮುಖ್ಯ ಮಂತ್ರಿಗಳಿಗೂ ಗೊತ್ತಿರುತ್ತದೆ.

ಶ್ರೀ ಎಸ್. ನಿಜಲಿಂಗಪ್ಪ.—ನನಗೆ ಗೊತ್ತಿಲ್ಲ, ಸ್ವಲ್ಪ ಹೇಳಿ.

ಶ್ರೀ ಸಿ. ಆರ್. ರಂಗೇಗೌಡ.—ಕೆಲವು ಮಾನ್ಯ ಸ್ನೇಹಿತರುಗಳಿಗೆ ಕಾಗದ ಬಂತು. ಆದನ್ನು ಮುಖ್ಯ ಮಂತ್ರಿಗಳ ಗಮನಕ್ಕೆ ಬೇಕಾದರೆ ತರುತ್ತೇನೆ. ಮಾನಸ್ಥ ಹೆಣ್ಣು ಮಕ್ಕಳು ಕೆಲಸ ಮಾಡುವುದಕ್ಕೆ ಆವಕಾಶವಿಲ್ಲದಂತಾಗಿದೆ. ಜೀವನಕ್ಕೋಸ್ಕರ ಬಂದವರಿಗೆ ಸರ್ಕಾರದವರು ರಕ್ಷಣೆ ಕೊಡಬೇಕಾದ್ದು ಮುಖ್ಯ. ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಈಗ ಕೃಷ್ಣ ಲೀಲೆಯಾಗಿದೆ, ಮೊನ್ನೆಯ ದಿನ ಶ್ರೀಮತಿ ನಾಗರತ್ನಮ್ಮನವರು ''ಶಿವಲೀಲೆ'' ಎಂದು ಹೇಳುತ್ತಿದ್ದರು. ಹಾಗೆ ಇಲ್ಲಿ ಕೃಷ್ಣಲೀಲೆಯಾಗಿದೆ. ಸರ್ಕಾರದವರು ಈ ಬಗ್ಗೆ ತನಿಖೆ ನಡೆಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

ನಮ್ಮ ದೇಶದಲ್ಲಿ ಪ್ರತಿ ಜಿಲ್ಲೆಯಲ್ಲಿಯೂ ವಿದ್ಯಾ ಪೀಠಗಳನ್ನು ಸ್ಥಾಪಿಸಬೇಕು. ಮಹಿಳೆಯರಿಗೇ ಒಂದು ವಿದ್ಯಾ ಪೀಠವನ್ನು ಸ್ಥಾಪಿಸಬೇಕು. ಶ್ರೀಮಾನ್ ಟಿ. ಮಾದಯ್ಯಗೌಡರು ಡೇನ್ಮಾರ್ಕ್ ದೇಶಕ್ಕೆ ಹೋಗಿದ್ದರು. ಅಲ್ಲಿರುವ ಜನತಾ ಶಿಕ್ಷಣ ಕಾಲೇಜುಗಳಂತೆ ಪ್ರತಿಯೊಂದು ಕಡೆಯೂ ನಮ್ಮ ದೇಶದಲ್ಲಿಯೂ ಆಗಬೇಕೆಂದು ಹೇಳುತ್ತಿದ್ದರು. Ford foundation ನವರು ಹನ್ನೊಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರಲ್ಲಿ ಸರ್ಕಾರದವರು ವಿದ್ಯಾಪೀಠಗಳನ್ನು ಸ್ಥಾಪಿಸಲು ಕೊಟ್ಟ ಹಣ, ಯಾವ ಉದ್ದೇಶಕ್ಕಾಗಿ ಕೊಡಲ್ಪಟ್ಟಿತ್ತೋ ಅ ಉದ್ದೇಶಕ್ಕಾಗಿ ವ್ಯವಸ್ಥಿತ ರೂಪದಲ್ಲಿ ಖರ್ಚಾಗುತ್ತಿಲ್ಲ. ಇಷ್ಟೆಲ್ಲ ಖರ್ಚಾಗುತ್ತಿರುವಾಗ ಸರ್ಕಾರದವರೇ ಇವನ್ನೇಕೆ ನಡೆಸಬಾರದು ? ನಮ್ಮ ದೇಶದ ಮುಂದಾಳುಗಳಾಗಿ, ಹಳ್ಳಿಯ ಪ್ರತಿನಿಧಿಗಳಾಗಿ, ವಿದ್ಯಾವಂತರಾಗಿ, ತಮ್ಮ ಕೆಲಸವನ್ನು ಮಾಡಿಕೊಂಡು ಸಮಾಜದಲ್ಲಿ ಮುಂದಾಳುಗಳಾಗಿ ಬಾಳತಕ್ಕಂಥ ತರಪೇತಿಯನ್ನು ಕೊಡುವಂತೆ ಯಶಸ್ವಿಯಾದ ರೀತಿಯಲ್ಲಿ ನಡೆಸುವುದಕ್ಕೋಸ್ಕರ ಜನತಾ ಕಾಲೇಜು ಆಕ್ಟ್ ಅಥವಾ People College Act ಜಾರಿಗೆ ತಂದು ಪ್ರತಿಯೊಂದು ಜಿಲ್ಲೆಯಲ್ಲಿಯೂ ಹೆಚ್ಚು ಹೆಚ್ಚು ವಿದ್ಯಾಪೀಠಗಳನ್ನು ಮಾಡಿ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ನಮ್ಮ ದೇಶದಲ್ಲಿ ಪುಸ್ತಕ ಭಂಡಾರಗಳನ್ನು ಪ್ರಾರಂಭ ಮಾಡಬೇಕೆಂದು ಅದಕ್ಕೆ ಪಂಚಾಯಿತಿಯವರು 30 ರೂಪಾಯಿ ಮತ್ತು ಸರ್ಕಾರದವರು 70 ರೂಪಾಯಿ ಕೊಟ್ಟು ಮೊದಲನೆ ವರ್ಷ ಪುಸ್ತಕಗಳನ್ನು ಕೊಡುತ್ತಾರೆ. ಅನಂತರ ಗ್ರಾಮಪಂಚಾಯಿತಿಗಳು ಎಷ್ಟು ಹಣವನ್ನು ಕೊಡುತ್ತಾರೆಯೋ ಅಷ್ಟನ್ನು ಸರ್ಕಾರದವರೂ ಕೊಡುತ್ತಾರೆ. ಒಂದು ವರ್ಷ ಅಕಸ್ಮಾತ್ ಪಂಚಾಯತಿಯವರು ದುಡ್ಡು ಕೊಡುವುದನ್ನು ನಿಲ್ಲಿಸಿದರೆ ಅವರು ಅದುವರೆಗೂ ಕೊಟ್ಟಿರುವ ಹಣವನ್ನು ಲೆಕ್ಕಕ್ಕೆ ತೆಗೆದು ಕೊಳ್ಳದೆ ಬೇರೆ ಗ್ರಾಮಗಳಿಗೆ ವರ್ಗಾಯಿಸಿದ ಪ್ರಸಂಗಗಳಿವೆ. ಇದರಿಂದ ಹಳ್ಳಿಗಳಲ್ಲಿ ಗುದ್ದಾಟಗಳು ನಡೆದಿವೆ. ಇದರಿಂದ ಪುಸ್ತಕಗಳು ಸರಿಯಾಗಿ ಒದಗುತ್ತಿಲ್ಲ. ನನಗೆ ತಿಳಿದ ಮಟ್ಟಿಗೆ ನಮ್ಮ ವಿದ್ಯಾಮಂತ್ರಿಗಳು ಒಂದು guide ಕೊಟ್ಟಿದ್ದಾರೆ, Kanthi's Guide. ಲೈಬ್ರರಿಡ್ರಾಫ್ಟ್ ಬಿಲ್ ತರುತ್ತೇವೆಂದು ಹೇಳಿರುವುದು ಸ್ವಾಗತಾರ್ಹವಾದುದು. ನಮ್ಮ ದೇಶದಲ್ಲಿ integrated areas ನಲ್ಲಿ Library Act ಇದೆ. ಅದನ್ನು ಎಲ್ಲ ಕಡೆಗೂ ತರುವುದನ್ನು ಸ್ವಾಗತಿಸುತ್ತೇನೆ.

ಹೋದ ವರ್ಷ ಬಡ್ಜೆಟ್ ಅಧಿವೇಶನದಲ್ಲಿ ವಿದ್ಯಾ ಮಂತ್ರಿಗಳು ಮಾತನಾಡುವಾಗ 1947ನೆಯ ಇಸವಿಯಲ್ಲಿ ಗ್ರಾಮಸ್ಥರು ಹಣ ಕೊಟ್ಟಿದ್ದರೆ, ಸ್ಕೂಲು ಕಟ್ಟಡ ಮಾಡಿಕೊಡುತ್ತೇವೆಂದು ವಾಗ್ದಾನ ಮಾಡಿದರು. ಅದರ ಪ್ರಕಾರ ನಾನು ಅವರಿಗೆ ಒಂದು ಕಾಗದವನ್ನೂ ಬರೆದಿದ್ದೆ. ನಮ್ಮ ತಾಲ್ಲೂಕಿನ ಮಾಯನಾಯಕನ ಹಳ್ಳಿಯವರು ಶಾಲಾ ಕಟ್ಟಡಕ್ಕಾಗಿ ಸರ್ಕಾರಕ್ಕೆ ದುಡ್ಡು ಪಾವತಿ ಮಾಡಿದ್ದಾರೆ. ನಾನು ಮತ್ತು ಗ್ರಾಮಸ್ಥರು ಈ ಬಗ್ಗೆ ಮನವಿ ಮಾಡಿಕೊಂಡರೂ ಅಲ್ಲಿ ಸ್ಕೂಲು ಕಟ್ಟಡವನ್ನು ಕಟ್ಟಿಸಿಕೊಡದಿರುವುದು ತುಂಬ ಶೋಚನೀಯವಾಗಿದೆ.

ಸರ್ಕಾರದವರು ಬೇಸಿಕ್ ಎಜುಕೇಷನ್ ಜಾರಿಗೆ ತಂದಿದ್ದಾರೆ, ಅದನ್ನು ಕಡ್ಡಾಯವಾಗಿ ಎಲ್ಲ ಕಡೆಯೂ ಜಾರಿಗೆ ತರಬೇಕೆಂದು ಪ್ರಾರ್ಥಿಸುತ್ತೇನೆ. ಈ ವರೆಗೆ ಹುಡುಗರಿಗೆ ತರಪೇತಿ ಕೊಡು

(ಶ್ರೀ ಸಿ. ಆರ್. ರಂಗೇಗೌಡ)

ತ್ತಿರುವುದು ಅವರನ್ನು ಗುಮಾಸ್ತರಾಗಿ ತಯಾರುಮಾಡುತ್ತಿರುವುದಾಗಿಯೇ ಹೊರತು ಸರಿಯಾದ ವಿದ್ಯಾವಂತರನ್ನಾಗಿ ಮಾಡುತ್ತಿಲ್ಲ. ತನ್ನ ಜೀವನವನ್ನು ತಾನು ನಡೆಸಿಕೊಂಡು ಹೋಗುವಂಥ ವಿದ್ಯೆಯನ್ನು ಕೊಟ್ಟು carn while you learn ಎನ್ನುವ ಯೋಜನೆಯನ್ನು ಜಾರಿಗೆ ತಂದರೆ ಮುಂದಿನ ಪೀಳಿಗೆ ವಿದ್ಯಾವಂತರಾಗಿ ತಮ್ಮ ಕಾಲ ಮೇಲೆ ತಾವು ನಿಂತುಕೊಳ್ಳುವುದಕ್ಕೆ ಅವಕಾಶವಾಗುತ್ತದೆಂದು ಹೇಳಿ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಂ. ಪಾಟೀಲ್ (ಟಿಕೋಟ).—ಮಾನ್ಯ ಸಭಾಪತಿಗಳೇ, ಇಂದಿನ ದಿನ ಮಾನ್ಯ ವಿದ್ಯಾ ಸಚಿವರು ಶಿಕ್ಷಣ ಬೇಡಿಕೆಗಾಗಿ ಸುಮಾರು 18 ಕೋಟಿ 79 ಲಕ್ಷ ರೂಪಾಯಿಗಳನ್ನು ಬೇಡಿದ್ದು ಅದನ್ನು ಅನುಮೋದಿಸುತ್ತ ನಾನು ನಾಲ್ಕು ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ.

ಭಾರತ ಹಳ್ಳಿಗಳ ನಾಡು. ಎರಡು ಪಂಚವಾರ್ಷಿಕ ಯೋಜನೆಗಳು ಮುಗಿಥ ನಂತರ ಮೂರನೆಯ ಯೋಜನೆಯಲ್ಲಿ ಎರಡು ವರ್ಷಗಳು ಮುಗಿದ ಬಳಿಕ ಇಲ್ಲಿಯವರೆಗೂ ನಮ್ಮ ಸರ್ಕಾರ ಶಿಕ್ಷಣ ರಂಗದಲ್ಲಿ ಏನು ಸಾಧಿಸಿದೆ ಎಂದು ವಿಚಾರಿಸಿದಾಗ ನಾವು ಪ್ರಾಥಮಿಕ ಶಿಕ್ಷಣ ರಂಗದಲ್ಲಿ ಉಚಿತವಾದ ಕಡ್ಡಾಯದ ಶಿಕ್ಷಣ ಜಾರಿಗೆ ತರುವುದರಲ್ಲಿ ಸರ್ಕಾರ ಸಾಕಷ್ಟು ಮುಂದೆ ಹೋಗಿದೆ, ಸಾಕಷ್ಟು ಪ್ರಗತಿ ಸಾಧಿಸಿದೆ ಎಂದು ಹೇಳಬಹುದು. ಪ್ರಾಥಮಿಕ ಶಿಕ್ಷಣದಲ್ಲಿ ಬರುವಂಥ ವಿದ್ಯಾರ್ಥಿಗಳ ಸಂಖ್ಯೆ 32 ಲಕ್ಷಕ್ಕೆ ಹೆಚ್ಚಿರುವುದು ಕಂಡುಬರುತ್ತದೆ. ಮೂರನೆಯ ಯೋಜನೆಯ ಮೊದಲನೆಯ ಎರಡು ವರ್ಷಗಳ 5.83 ಲಕ್ಷ ವಿದ್ಯಾರ್ಥಿಗಳೂ ಕಡ್ಡಾಯ ಶಿಕ್ಷಣದ ಕಕ್ಷೆಯಲ್ಲಿ ಬಂದಿದ್ದಾರೆ. ಮೂರನೆಯ ಯೋಜನೆಯಲ್ಲಿ ಹತ್ತು ಲಕ್ಷ ವಿದ್ಯಾರ್ಥಿಗಳೂ ಕಡ್ಡಾಯ ಶಿಕ್ಷಣದ ಕಕ್ಷೆಯೊಳಗೆ ಬರಬೇಕೆಂದು ಇಟ್ಟುಕೊಂಡಿದ್ದೆವು. ಅರ್ಧದಷ್ಟು ಪ್ರಗತಿ ಈ ಎರಡು ವರ್ಷಗಳಲ್ಲಿಯೇ ಸಾಧಿಸಿದ್ದೇವೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಇದೇ ರೀತಿ ಸರ್ಕಾರ ಇನ್ನು ಕೆಲವು ಪ್ರಗತಿಪರವಾದ ಸುಧಾರಣೆಗಳನ್ನು ಕಾರ್ಯ ರೂಪದಲ್ಲಿ ತಂದಿದೆ.

ಖಾಸಗಿ ಶಾಲೆಗಳಲ್ಲಿ ಕೆಲಸಮಾಡುವ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಮತ್ತು ಇತರರಿಗೂ ವಿವಿಧ ಸೌಲಭ್ಯ ಯೋಜನೆಯನ್ನು ಕಾರ್ಯರೂಪಕ್ಕೆ ತಂದಿದೆ. ಜೀವವಿಮೆ, ನಿವೃತ್ತಿ ವೇತನ, ಪ್ರಾವಿಡೆಂಟ್ ಫಂಡ್ ಈ ಮೂರು ಸೌಲಭ್ಯಗಳನ್ನು ಶಿಕ್ಷಕರಿಗೆ ಒದಗಿಸಿದೆ, ಇದನ್ನು ನೋಡಿದಾಗ ಸರ್ಕಾರ ಈ ಶಿಕ್ಷಕರ ಪ್ರಗತಿಯನ್ನು ಗಮನದಲ್ಲಿಟ್ಟುಕೊಂಡು, ಅವರಿಗೆ ಯಾವ ರೀತಿ ಸೌಲಭ್ಯಗಳು ಬೇಕೋ ಅವನ್ನು ಒದಗಿಸುವುದರಲ್ಲಿ ಬಹಳ ಮುಂದೆ ಹೋಗಿದೆ ಎಂದು ಹೇಳುತ್ತೇನೆ. ಇದಕ್ಕಾಗಿ ವಿದ್ಯಾ ಮಂತ್ರಿಗಳನ್ನೂ ಮತ್ತು ಮುಖ್ಯ ಮಂತ್ರಿಗಳನ್ನೂ ಅಭಿನಂದಿಸದೆ ಇರಲಾರೆ.

ಸರ್ಕಾರ 2,400 ರೂ. ಆದಾಯ ಅಥವಾ ಅದಕ್ಕಿಂತ ಕಡಮೆ ಆದಾಯವಿರುವಂಥವರ ಮಕ್ಕಳಿಗೆಲ್ಲ ಪುಕ್ಕಟೆ ಶಿಕ್ಷಣ ಕೊಡುವಂಥ ಯೋಜನೆಯನ್ನು ಕಾರ್ಯರೂಪಕ್ಕೆ ತಂದಿದೆ. ಈ ರಂಗದಲ್ಲಿ ಸಹ ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದೇವೆಂದು ಹೇಳಬಹುದು.

ಪಠ್ಯಪುಸ್ತಕಗಳ ರಾಷ್ಟ್ರೀಕರಣ. ಸರ್ಕಾರ ಈಗಾಗಲೇ 107 ಪಠ್ಯಪುಸ್ತಕಗಳನ್ನು 20-25 ಲಕ್ಷ ರೂಪಾಯಿ ವೆಚ್ಚಮಾಡಿ ರಾಷ್ಟ್ರೀಕರಣ ಮಾಡುವುದರಲ್ಲಿ ಮುಂದೆ ಹೋಗಿದೆ. ಭಾರತದಲ್ಲಿ ಇದೊಂದೇ ಸಂಸ್ಥಾನ ಈ ದೃಷ್ಟಿಯಿಂದ ಮುಂದೆ ಹೋಗಿದೆ ಎಂದು ಹೇಳಬಹುದು. ಪಠ್ಯಪುಸ್ತಕಗಳನ್ನು ಪುಕ್ಕಟೆಯಾಗಿ ಬಡ ಅರ್ಹ ವಿದ್ಯಾರ್ಥಿಗಳಿಗೆ ಕೊಡುವ ಯೋಜನೆಯನ್ನು ಕಾರ್ಯರೂಪಕ್ಕೆ ತಂದಿದ್ದಾರೆ. ಇದರಲ್ಲಿ 8 ಲಕ್ಷ ಪುಸ್ತಕಗಳು ಐದು ಲಕ್ಷ ರೂಪಾಯಿ ವೆಚ್ಚಮಾಡಿ ಒಂದರಿಂದ 7ನೆಯ ಇಯತ್ತೆಯ ಬಡ ಮತ್ತು ಅರ್ಹ ವಿದ್ಯಾರ್ಥಿಗಳಿಗೆ ಪುಕ್ಕಟೆ ಕೊಡುವುದರಲ್ಲಿ ಸರ್ಕಾರ ಒಂದು ಯೋಜನೆಯನ್ನು ಕಾರ್ಯರೂಪಕ್ಕೆ ತಂದಿದೆ. ಈ ವಿಚಾರದಲ್ಲಿಯೂ ಭಾರತದಲ್ಲಿ ಇದು ಮೊದಲನೆಯ ಸಂಸ್ಥಾನವೆಂದು ಹೇಳಬಹುದು.

ಮಧ್ಯಾಹ್ನದ ಊಟದ ಯೋಜನೆ. ಪ್ರತಿಯೊಂದು ಗ್ರಾಮದಲ್ಲಿಯೂ ಇದು ಜಾರಿಯಲ್ಲಿದೆ. ಸುಮಾರು ಐದು ಲಕ್ಷ ವಿದ್ಯಾರ್ಥಿಗಳಿಗೆ ಇದರಿಂದ ಸಹಾಯವಾಗುತ್ತದೆ. ಇದರಲ್ಲಿ Care ಸಂಸ್ಥೆ ಪುಕ್ಕಟೆಯಾಗಿ ಆಹಾರ ಧಾನ್ಯಗಳನ್ನು ಕೊಡಲು ಒಪ್ಪಿದೆ. ಇದನ್ನು ಹಂಚುವುದರಲ್ಲಿ ಸರ್ಕಾರದವರು ಆರು ಲಕ್ಷ ರೂಪಾಯಿ ಖರ್ಚುಮಾಡಬೇಕಾಗುತ್ತದೆ. ಸರಕಾರ ಸಾಕಷ್ಟು ಚೆನ್ನಾಗಿ ಕೆಲಸ ಮಾಡಿದೆ ಎನ್ನುವುದನ್ನು ಪ್ರತಿಯೊಬ್ಬರೂ ಒಪ್ಪಿಕೊಳ್ಳಬೇಕು. ಇಲ್ಲಿಯವರೆಗೆ ಸಾಕಷ್ಟು ಪ್ರಗತಿಯನ್ನು ಸರ್ಕಾರ ಸಾಧಿಸಿದೆ ಎನ್ನುವುದನ್ನು ಪ್ರತಿಯೊಬ್ಬರೂ ಒಪ್ಪಿಕೊಳ್ಳಲೇಬೇಕು. ಆದರೆ ಟೀಕೆಗಳು ಯಾವಾಗಲೂ ಕ್ರಿಯಾತ್ಮಕವಾಗಿದ್ದರೆ, ರಚನಾತ್ಮಕವಾಗಿರಬೇಕು ಅದನ್ನು ಒಪ್ಪಿಕೊಳ್ಳಬಹುದು. ಯಾರೇ ಆಗಲಿ ಅಂತಹ ಟೀಕೆಯನ್ನು ಈ ಮಾನ್ಯ ಸಭೆಯಲ್ಲಿ ಒಪ್ಪುತ್ತಾರೆಂದು ನಾನು ನಂಬುತ್ತೇನೆ. ಇದೇ ರೀತಿಯಿಂದ ಸರಕಾರದವರು ಈಗ ಹೈಸ್ಕೂಲುಗಳಲ್ಲಿ ಸ್ಕಾಲರ್‌ಷಿಪ್‌ಗಳನ್ನು ಕೊಡುವುದರಲ್ಲಿ

ಮುಂದೆ ಬಂದಿದ್ದಾರೆ. 1962-63ರಲ್ಲಿ ಮೊದಲು ಸ್ಕಾಲರ್‌ಷಿಪ್ಪು ಕೊಡುವುದರಲ್ಲಿ ಹೈಸ್ಕೂಲುಗಳಲ್ಲಿ ಸುಮಾರು ಶೇಕಡ ಎರಡರಷ್ಟು ಕೊಡುತ್ತಿದ್ದರು. ಈಗ ಇದನ್ನು ಶೇಕಡ 20ರಷ್ಟು ಏರಿಸಿ ಕೊಡುವಂತೆ ಮಾಡಿದ್ದಾರೆ. ಇದನ್ನು ನೋಡಿದರೆ, ನಮ್ಮ ರಾಷ್ಟ್ರದ ಉತ್ಸಾಹ . ಎಷ್ಟುಮಟ್ಟಿಗೆ ನಡೆಯುತ್ತಿದೆ ಎನ್ನುವುದು ತಿಳಿಯುತ್ತದೆ. ಅದರಂತೆ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸರಕಾರದಿಂದ ಹಣ ಪಡೆಯುತ್ತಿದ್ದಾರೆ. ಯಾವ ರೀತಿಯಿಂದ ಜನಕ್ಕೆ ಸಹಾಯ ಮಾಡಲು ಹೇಗೆ ಮುನ್ನಡೆಯುತ್ತಿದ್ದಾರೆ ಎನ್ನುವುದು ಪ್ರತಿಯೊಬ್ಬರಿಗೂ ಗೊತ್ತಾಗುತ್ತದೆ. ಶಿಕ್ಷಣ ರಂಗವನ್ನು ಪ್ರತಿಯೊಂದು ಹಳ್ಳಿಗಳಲ್ಲಿಯೂ ಅಭಿವೃದ್ಧಿ ಮಾಡಬೇಕು. ಪ್ರತಿಯೊಂದು ಸ್ಥಳದ ಪರಿಸ್ಥಿತಿಯನ್ನು ನೋಡಿಕೊಂಡು ಶಿಕ್ಷಣ ರಂಗವನ್ನು ಯಾವ ರೀತಿ ಮಾಡಬೇಕೆಂದು ಯೋಚನೆ ಮಾಡಿ ಮಾಡಬೇಕು. ಶಿಕ್ಷಣರಂಗ ಬಹು ಮಹತ್ವವಾದುದು. ಈ ಸಭೆಯ ಮಾನ್ಯ ಸದಸ್ಯರಿಗೆಲ್ಲರಿಗೂ ತಿಳಿದಿರುವಂತೆ ನಾವು ಸರ್ಕಾರವನ್ನು ಶಾಲೆಗಳನ್ನು ಮಾಡಬೇಕೆಂದು ಕೇಳಿದಾಗ, ಹಳ್ಳಿಹಳ್ಳಿಗಳಲ್ಲೆಲ್ಲಾ ಸ್ಥಾಪಿಸುವ ಧೋರಣೆ ನೋಡಿದಾಗ ಸರಕಾರ ಮಾಧ್ಯಮಿಕ ಶಾಲೆಗಳನ್ನು ಕೊಡುವಾಗ ಒಂದು ಮಹತ್ತರವಾದ ಹೆಜ್ಜೆಯನ್ನು ಇಟ್ಟಿದ್ದಾರೆ. ಜನ ಎಷ್ಟು ಹೈಸ್ಕೂಲುಗಳನ್ನು ಕೇಳಿದರೂ ಅಷ್ಟು ಸ್ಕೂಲುಗಳನ್ನು ಕೊಡಲು ಸರಕಾರ ಮುಂದೆ ಬಂದಿರುವುದು ಕಂಡುಬರುತ್ತದೆ. 1961-62ನೇ ಸಾಲಿನಲ್ಲಿ ಸರ್ಕಾರ ಸುಮಾರು 75 ಶಾಲೆಗಳನ್ನು ಕೊಟ್ಟಿದ್ದು, 1962-63ನೇ ಸಾಲಿನಲ್ಲಿ ಸುಮಾರು 145 ಮಾಧ್ಯಮಿಕ ಶಾಲೆಗಳನ್ನು ಮಾಡಿಕೊಟ್ಟಿದೆ. ಸಾರ್ವಜನಿಕ ಸಂಸ್ಥೆಗಳು ಶಾಲೆಗಳನ್ನು ಸ್ಥಾಪಿಸಲು ಮುಂದೆ ಬರುವುದಾದರೆ, ಅವರಿಗೆ ಬೇಕಾದ ಸಹಾಯ ಸಲಕರಣೆಗಳನ್ನೆಲ್ಲಾ ಕೊಟ್ಟು ಸಹಾಯ ಮಾಡುವುದು ಬಹಳ ಮಹತ್ವವುಳ್ಳದ್ದು ಅದೆ. ಇದನ್ನು ನೋಡುವಾಗ ಧನಸಹಾಯ ಸರಿಯಾಗಿ ಬರುತ್ತಿದ್ದರೆ ಈ ಸಾರ್ವಜನಿಕ ಸಂಸ್ಥೆಗಳು ಶಾಲೆಗಳನ್ನು ನಡೆಸಲು ಸಾಧ್ಯವಾಗುತ್ತದೆ. ಆದುದರಿಂದ ಇಂತಹ ಸಾರ್ವಜನಿಕ ಸಂಸ್ಥೆಗಳಿಗೆ ಸರಕಾರ ಮುಂದೆ ಬಂದು ಸಹಾಯ ಮಾಡುವಾಗ ಸಾಕಷ್ಟು ಸಹಾಯ ಧನ ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇಂತಹ ಸಾರ್ವಜನಿಕ ಸಂಸ್ಥೆಗಳಿಗೆ ಈಗಿರುವ Grant-in-Aid Codeನ್ನೂ ಸಡಿಲಗೊಳಿಸಿ ಈ ಸಂಸ್ಥೆಗಳಿಗೆ ಸಹಾಯ ಮಾಡಬೇಕೆಂದು ಸರಕಾರವನ್ನು ಒತ್ತಾಯ ಮಾಡುತ್ತೇನೆ. ಈ ರೀತಿ ಎಲ್ಲ ಸಾರ್ವಜನಿಕ ಸಂಸ್ಥೆಗಳೂ ಸರಿಯಾಗಿ ಮತ್ತು ಸಾಕಷ್ಟು ಪ್ರಾತಿನಿಧಿಸಿದ್ದಾರೆ. ಧನಸಹಾಯ ಕೊಡಬೇಕೆಂದು ಕೇಳುತ್ತಿದ್ದಾರೆ. ಅದರ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಂಡು ಎಲ್ಲ ಸಂಸ್ಥೆಗಳಿಗೂ ಸರಿಯಾಗಿ ಧನಸಹಾಯ ಮಾಡುತ್ತಾರೆಂದು ನಂಬುತ್ತೇನೆ.

ಕಾಲೇಜು ಶಿಕ್ಷಣದ ಬಗ್ಗೆ ನೋಡುವಾಗ ಸರಕಾರದವರು ಈ ಕಾಲೇಜು ಬಗ್ಗೆ ಒಂದೇ ಯೂನಿಫಾರಂ ಆದ ಗ್ರಾಂಟ್ ಇನ್ ಏಡ್‌ನ ನಿಯಮಗಳನ್ನು ಮಾಡಬೇಕು. ಈಗ ಒಂದೊಂದು ಭಾಗಕ್ಕೆ ಬೇರೆ ಬೇರೆಯಾದ ನಿಯಮಗಳು ಇವೆ. ಇವನ್ನೆಲ್ಲಾ ಸೇರಿಸಿ ಯೂನಿಫಾರಂ ಆದ Grant-in-Aid Code Ruleಗಳನ್ನು ತಂದು ಸಹಾಯ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಹೈಯರ್ ಸೆಕೆಂಡರಿ ಸ್ಕೂಲುಗಳಲ್ಲಿ IInd Year Classನಿಂದ ಪ್ರೀ ಯೂನಿವರ್ಸಿಟಿ ಕೋರ್ಸುಗಳನ್ನು ನಡೆಸಬೇಕೆಂದು ಹೋದರೆ ಸರಿಯಾಗಿರುವುದಿಲ್ಲ. ಇದರಂತೆ ಮಾಡಿದರೆ ಕಾಲೇಜುಗಳಲ್ಲಿರುವ ಸಂಖ್ಯೆ ಕಡಿಮೆಯಾಗುತ್ತದೆ. ಸುಮಾರು 40-50ರಷ್ಟು ಕಡಿಮೆಯಾಗಬಹುದು. ಇಂತಹ ಸಂಸ್ಥೆಗಳು ಮದರಾಸಿನಲ್ಲಿಲ್ಲ. ಮತ್ತು ಆ ಸರಕಾರ ಈ ಧೋರಣೆ ಒಪ್ಪಿಲ್ಲ. ಆದರೆ ನಮ್ಮ ಸರಕಾರ ಈಗಾಗಲೇ ಪ್ರೀ ಯೂನಿವರ್ಸಿಟಿ ಕೋರ್ಸನ್ನು ಈ ಹೈಸ್ಕೂಲುಗಳಲ್ಲಿ ನಡೆಸಬೇಕೆಂದರೆ ಈ ಕಾಲೇಜುಗಳ ಉಳಿವು ಹೇಗೆ ಎನ್ನುವ ಪ್ರಶ್ನೆ ಬರಬಹುದು. ಇದಕ್ಕೆ ಸರಕಾರ ಈ ಪ್ರೀ-ಯೂನಿವರ್ಸಿಟಿ ಕೋರ್ಸನ್ನು ಕಾಲೇಜುಗಳಲ್ಲಿಯೇ ನಡೆಸುವುದು ಸೂಕ್ತ. ಆ ರೀತಿ ಸರಕಾರ ಮುಂದುವರಿಸಬೇಕೆಂದು ಕೇಳಿಕೊಳ್ಳುತ್ತೇವೆ.

ಇನ್ನು ಸರಕಾರದವರು ರಾಜಕೀಯ ಸಂತ್ರಸ್ತರ ಮಕ್ಕಳಿಗೆ ಸರ್ಟಿಫಿಕೇಟನ್ನು ಒಮ್ಮೆ ಕೊಟ್ಟರೆ ಮತ್ತೊಮ್ಮೆ ಈ ಸರ್ಟಿಫಿಕೇಟನ್ನು ಪಡೆಯುವ ಪ್ರಶ್ನೆ ಇಲ್ಲ ಎಂದು ಮಾಡಿರುವುದು ಬಹಳ ಉತ್ತಮ. ಹಾಗೇ ಸಂರಕ್ಷಣಾ ಖಾತೆಯಲ್ಲಿರುವವರ ಮಕ್ಕಳಿಗೂ ಸರ್ಕಾರದವರು ಸಾಕಾದಷ್ಟು ಸೌಲಭ್ಯಗಳು ಕೊಡಬೇಕೆಂದು ಮಾಡಿರುವುದು ಬಹಳ ಸ್ವಾಗತಾರ್ಹವಾದುದು ಎಂದು ನನ್ನ ಅಭಿಪ್ರಾಯ.

ಇನ್ನು ನಮ್ಮ ಬಿಜಾಪುರದಲ್ಲಿ ಸೈನಿಕರ ಸ್ಕೂಲೊಂದನ್ನು ತೆರೆದು ಶಿಕ್ಷಣ ಕೊಡಬೇಕೆಂದು ಮಾಡಿರುವುದಕ್ಕಾಗಿ ನಮ್ಮ ಬಿಜಾಪುರದ ಜನ ಮೈಸೂರು ಸರ್ಕಾರದವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾರೆ. ಈ ತುರ್ತಿನ ಪರಿಸ್ಥಿತಿಯಲ್ಲಿ ಇಂತಹ ಡಿಸ್ಟ್ರಿಕ್ಟ್ ಪ್ಲೇಸುಗಳಲ್ಲಿ ಈ ರೀತಿ ಸೈನಿಕ ಶಾಲೆಗಳನ್ನು ಬೆಳೆಯುವಂತೆ ಮಾಡುವುದು ಬಹಳ ಮುಖ್ಯವಾದ ಅಂಶ. ಇದಕ್ಕಾಗಿ ನಾನು ಸರಕಾರವನ್ನು ಅಭಿನಂದಿಸದೆ ಇರಲಾರೆ.

ಬಿಜಾಪುರದಲ್ಲಿರುವ ಪ್ರೈಮರಿ ಶಾಲೆಗಳು ಒಳ್ಳೆಯ ರೀತಿ ನಡೆಯುತ್ತಿವೆ. ಇದರ ಬಗ್ಗೆ ಅನೇಕ ಮಾನ್ಯ ಸದಸ್ಯರು ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ಸರಕಾರ ಈ ಪ್ರೈಮರಿ ಶಾಲೆಗಳ

(ಶ್ರೀ ಬಿ. ಎಮ್. ಪಾಟೀಲ್)

ಅಂಕಿ ಸಂಖ್ಯೆಗಳನ್ನು ಕೊಟ್ಟಿರುವುದನ್ನು ನೋಡಿದಾಗ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಪ್ರಮಾಣ 38ರಷ್ಟು ಪ್ರಮಾಣ ಇರುತ್ತದೆ. ಮಾಧ್ಯಮಿಕ ಶಾಲೆಗಳಲ್ಲಿ ಪ್ರಮಾಣ ಶೇಕಡ 30ರಷ್ಟು ಇದೆ. ಇದನ್ನು ಹೇಗೆ ಮುಂದುವರಿಸಿಕೊಂಡು ಹೋಗಬಹುದು ಎನ್ನುವುದನ್ನು ಸರಿಯಾಗಿ ಪರಿಶೀಲನೆ ಮಾಡಿ ನೋಡಬೇಕು ಎಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ಎಜುಕೇಷನ್ ಡಿಮ್ಯಾಂಡಿನ ಮೇಲೆ ನಾನು ನಾಲ್ಕು ಮಾತುಗಳನ್ನಾಡಬೇಕೆಂದು ನಿಂತಿದ್ದೇನೆ. ಆದರೆ ನಾನು ಮಾತನಾಡುವುದಕ್ಕೆ ಮುನ್ನ ಮಾನ್ಯ ಅಧ್ಯಕ್ಷರಲ್ಲಿ ಒಂದು ಕೋರಿಕೆ. ಮೊನ್ನೆ ದಿವಸ ಮಾತನಾಡಿದಂತೆ ಮುಕ್ಕಣ್ಣಪ್ಪ—ಕಂಠಿಯವರ ವಾದವಿವಾದದಂತೆ ಆದೀತು ಹಾಗೇನಾದರೂ ಆದರೆ ನೀವು ನನಗೆ ರಕ್ಷಣೆ ಕೊಡಬೇಕು ಎಂದು ಮೊದಲು ಕೇಳಿಕೊಂಡು ....

Mr. SPEAKER.–The Hon'ble Member should not anticipate this.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನನಗೆ ಮಾತ್ರ 'ನಿಮ್ಮಪ್ಪ' ಎಂದರು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಏನು ಉತ್ತರ ಬೇಕಾದರೂ ಮಾನ್ಯಮಂತ್ರಿಗಳು ಕೊನೆಯಲ್ಲಿ ಹೇಳಲಿ. ನಾವು ಕೇಳುತ್ತೇವೆ. ಆದರೆ ಮಧ್ಯದಲ್ಲಿ ನಾನು ಹೇಳುವಾಗ ಮಾತನಾಡಬಾರದು ಎಂದು ಕೇಳಿಕೊಂಡು ಮುಂದೆ ಮಾತನಾಡುತ್ತೇನೆ.

ಶ್ರೀ ಎಸ್. ಆರ್. ಕಂಠಿ.—ನನಗೂ ಪ್ರೊಟೆಕ್ಷನ್‌ಬೇಕು.

Mr. SPEAKER.—I will protect both.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಮ್ಮ ಎಜುಕೇಷನ್ ಆಡಳಿತಕ್ಕಾಗಿ ಇಟ್ಟಿರುವುದು ಹದಿನೆಂಟೂಮುಕ್ಕಾಲು ಕೋಟಿಯಷ್ಟು ಸುಮಾರು 19 ಕೋಟಿಯಷ್ಟು ಹಣವನ್ನು ಇವರ ಕೈಯಲ್ಲಿ ಕೊಟ್ಟು ಅವರ ಮುಖೇನ ಖರ್ಚುಮಾಡಬೇಕಾಗಿದೆಯಲ್ಲ ಎಂದು ನೋಡುವಾಗ, ಈ ಹಣ ಖರ್ಚಾಗುತ್ತದೆಯೋ ಇಲ್ಲವೆ ಎಂದು ಇವರ ಕೈಯಲ್ಲಿ ಕೊಡುವಾಗ ಯೋಚನೆ ಮಾಡಿ ಇವರ ಕೈಯಲ್ಲಿ ಕೊಡಬೇಕು. ನನಗೊಂದು ಯೋಚನೆಯಾಗಿದೆ, ಇದು ಅವರ ದುಡ್ಡಲ್ಲ. ನಮ್ಮ ದುಡ್ಡೂ ಅಲ್ಲ. ಎಲ್ಲ ಪ್ರಜೆಗಳದ್ದು. ಎಷ್ಟು ಜನರು ಕಂದಾಯ ಕೊಡುತ್ತಾರೆ, ಟ್ಯಾಕ್ಸ್ ಕೊಡುತ್ತಾರೆ, ಸೆಸ್ಸನ್ನು ಕೊಡುತ್ತಾರೆ. ಇಷ್ಟು ತೆರಿಗೆಗಳಿಂದ ಬಂದ ಈ ಭಾರಿ ಮೊತ್ತವನ್ನು ಸರಿಯಾಗಿ ಖರ್ಚುಮಾಡುತ್ತಿದ್ದಾರೆಯೇ ಎಂದು ಯೋಚನೆ ಮಾಡಬೇಕಾಗಿದೆ. ಈ ಡಿಪಾರ್ಟುಮೆಂಟಿನಲ್ಲಿ ಏನಾಗಿದೆ ಎನ್ನುವುದನ್ನು ಮಾನ್ಯ ಸದಸ್ಯರಾದ ಮಾದೇಗೌಡರು ಇಲ್ಲಿ ಈಗಾಗಲೇ ಬಹಳ ಮೊಗಂಆಗಿ ಹೇಳಿದರು. ನಾನೂ ಅದನ್ನೇ ಸ್ವಲ್ಪ ವಿವರವಾಗಿ open ಆಗಿ ಹೇಳುತ್ತೇನೆ ಅಷ್ಟೇ. ಇಲ್ಲಿ ಏನಾಗಿದೆ ಎಂದರೆ ನಮ್ಮಲ್ಲಿ ಹಿರಿಯರು ಹಿಂದಿನ ಕಾಲದಲ್ಲಿ ಒಂದು ಗಾದೆ ಹೇಳುತ್ತಿದ್ದರು, ಅದು

"ಅಂಧೇರಿ ದರಬಾರ್,
ಚೌಪಟ್ ರಾಜ"

ಎನ್ನುವ ಹಾಗಾಗಿದೆ. ಈ ಮಿನಿಸ್ಟರವರಿಗೆ ತಕ್ಕಂತಹ ಒಬ್ಬರು ಡೈರೆಕ್ಟರು, ಯಾರ ಹತ್ತಿರ ಹೋಗಿ ಕೇಳಿದರೂ ಯಾವ ಕೆಲಸವನ್ನೂ ಮಾಡಿಕೊಡುವ ಹಾಗಿಲ್ಲ. ಏನೋ ಹೋದವರಿಗೆ ಒಂದು ಸಮಾಧಾನ ಹೇಳಿ ಗೌರವ ಕೊಡುತ್ತಾರೆಯೋ ಎಂದರೆ ಅದು ಮೊದಲೇ ಇಲ್ಲ. ಇನ್ನು ಮಿನಿಸ್ಟರನ್ನು ಕೇಳೋಣ ಎಂದು ಮೈಸೂರಿನಿಂದಲೋ ಇನ್ನೆಲ್ಲಿಂದಲಾದರೋ ಫೋನುಮಾಡಿ ಕೇಳಿದರೆ ಯಾವಾಗ ಕೇಳಿದರೂ ಇವರು ಬಾತ್‌ರೂಂನಲ್ಲಿಯೇ ಇರುವುದರಿಂದ ಇವರ ಬಾತ್‌ರೂಂಗೂ ಒಂದು ಫೋನನ್ನು ಹಾಕಿಸಿಕೊಡಬೇಕಾದುದು ಅಗತ್ಯ ಎಂದು ಕಾಣುತ್ತೆ. (ನಗು).

ವಿದ್ಯಾಮಂತ್ರಿಗಳು ಯಾವಾಗಲೂ ಬಾಥ್‌ರೂಮಿನಲ್ಲಿಯೇ ಇರುತ್ತಾರೆ ಎಂದು ಕಾಣುತ್ತದೆ. ಯಾವದೇ ಕೆಲಸದ ಬಗ್ಗೆ ವಿದ್ಯಾಮಂತ್ರಿಗಳನ್ನು ಕೇಳಿದರೆ DPI ಮಾಡಬೇಕು ಎಂದು ಹೇಳುತ್ತಾರೆ. DPI ಅವರನ್ನು ಕೇಳಿದರೆ ಮಂತ್ರಿಗಳು ಮಾಡಬೇಕು ಎಂದು ಹೇಳುತ್ತಾರೆ. ಇದು ಎಷ್ಟು ಅಸಹ್ಯವಾದ ಮಾತು ?

6–30 P.M.

ನಾನು ಮೊನ್ನೆ ಒಂದು ಪ್ರಶ್ನೆ ಕೇಳಿದೆ. ಅದಕ್ಕೆ ಸರಿಯಾಗಿ ಉತ್ತರ ಬರಲಲ್ಲ. ಮಲ್ಟಿಪರ್ಪಜ್ ಸ್ಕೂಲ ಬಗ್ಗೆ ವಿಚಾರಿಸಿದರೆ ಅದಕ್ಕೆ ಜಾಗ ಇಲ್ಲವೆಂದು ಹೇಳುತ್ತಾರೆ. ಮಲ್ಟಿ ಪರ್ಪಜ್ ಸ್ಕೂಲಗಾಗಿ ಮಷಿನರಿ ತರಿಸಿ ಅದನ್ನು ಉಪಯೋಗಿಸದೆ ಗ್ರೀಜ್ ಹಾಕಿ ಇಟ್ಟಿದ್ದಾರೆ. ಡೆಫ್ ಅಂಡ್ ಡಮ್, ಸ್ಕೂಲ ಬಾಬಿಗೆ 1,72,000 ರೂಪಾಯಿ ಬಜೆಟ್‌ನಲ್ಲಿ ಏತಕ್ಕೋಸ್ಕರ ಇಟ್ಟಿದ್ದೀರಿ ಅಲ್ಲಿ

ಸರಿಯಾದ Teacher ಇಲ್ಲ. ಹಾಗೂ pass ಆದವರಿಗೆ ಕೆಲಸ ಎಲ್ಲ. ಎಲ್ಲ ದೇಶದಲ್ಲಿ handicapped ಜನರನ್ನು ಮರ್ಯಾದೆಯಿಂದ ಬಾಳಿಸುವುದು ಸರ್ಕಾರ ಮತ್ತು ಸಮಾಜದ ಕೆಲಸ. ಇದಕ್ಕೆ ಈ ಮಂತ್ರಿಗಳು ಗಮನ ಕೊಟ್ಟಿದ್ದಾರೆಯೇ ? ಈ ಹಣ ಸಾಕೆ ? ಅಲ್ಲಿ ಸರಿಯಾದ ಒಂದು ವ್ಯವಸ್ಥೆಯಿಲ್ಲ. ಹುಡುಗರಿಗೆ ಸರಿಯಾಗಿ ಶಿಕ್ಷಣ ದೊರೆಯುತ್ತಿಲ್ಲ, ಅವರಿಗೆ ಸರಿಯಾಗಿ ಶಿಕ್ಷಣ ದೊರೆಯದೆ ಹೋದರೆ ಇಂಥ ಬಡ ವಿದ್ಯಾರ್ಥಿಗಳು ಜೀವನ ಹೇಗೆ ನಡೆಸಬೇಕು ! ನಮ್ಮ ವಿದ್ಯಾಮಂತ್ರಿಗಳು ಯೂರೋಪ ಇಂಗ್ಲೆಂಡ ದೇಶಗಳಿಗೆ ಹೋಗಿ ನೋಡಿಕೊಂಡು ಬಂದಿದ್ದಾರೆ. ಅವರು ಬಹಳಷ್ಟು ತಿಳಿದುಕೊಂಡಿದ್ದಾರೆ. ಆದರೆ ಅದು 'ಓಡಿ ಓದಿ ಕೆಟ್ಟ ಕೂಚುಭಟ್ಟ' ಎನ್ನುವ ಹಾಗೆ ಆಗಿದೆ. ಇದನ್ನು ಬಹಳ ಕಷ್ಟದಿಂದ ಹೇಳುತ್ತಿದ್ದೇನೆ.

Mr. SPEAKER.—The Hon'ble Member will kindly bear in mind that she should not discuss what she did when she was abroad.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ಹೇಳುವುದು ಇಷ್ಟೇ ಡೆಫ್ ಅಂಡ್ ಡಮ್ ಸ್ಕೂಲಿನಲ್ಲಿ ಟ್ರೇನಿಂಗ ಪಡೆದ ಟೀಚರ್ ಬೇಕೆಂದು ಒಬ್ಬರನ್ನು ಇಂಗ್ಲೆಂಡ ಅಮೇರಿಕಾ ದೇಶಗಳಿಗೆ ಕೊಟ್ಟು ಕಳಿಸಿದರು. ಅವರ ಟ್ರೇನಿಂಗ ಸಲುವಾಗಿ ಸರಕಾರ ಬೇಕಾದಷ್ಟು ಹಣ ಖರ್ಚು ಮಾಡಿದರು. ಅವರು ಟ್ರೇನಿಂಗ ಪಡೆದು ವಾಪಸ್ ಬಂದ ಮೇಲೆ ಅವರನ್ನು ಆ ಸ್ಕೂಲಿನಲ್ಲಿ ಇಟ್ಟುಕೊಳ್ಳದೆ ಆಲ್ ಇಂಡಿಯಾ ರೇಡಿಯೋಕ್ಕೆ ಕಳಿಸಿಕೊಟ್ಟರು. ಅವರ ಟ್ರೇನಿಂಗಿಗಾಗಿ ಇಷ್ಟು ಹಣ ಖರ್ಚು ಮಾಡಿದ್ದು ಏತಕ್ಕೆ ? ಇದನ್ನು ವರ್ಷ ವರ್ಷ ಹೇಳುತ್ತಿದ್ದೇನೆ. ಅವರನ್ನು ಕರೆಸಲು ಸಾಧ್ಯವಿಲ್ಲವೆ ? ವಿದ್ಯೆ ಕಲಿಸುತ್ತೇವೆಂದು ಹೇಳುವುದು ಒಂದು ನೆಪ. ಆ ಸ್ಕೂಲಿನಲ್ಲಿ ಒಬ್ಬ ಟೀಚರ್ ಇಲ್ಲ, ಕಲಿಸುವವರು ಇಲ್ಲ. ಈ ರೀತಿಯಾದರೆ ವಿದ್ಯಾರ್ಥಿಗಳ ಗತಿಯೇನು ? ಇದನ್ನು ನೋಡಿ ನೋಡಿ ಸಾಕಾಗಿ ಹೋಗಿದೆ. ಇಷ್ಟು ಹಣ ಬಜೆಟ್ಟಿನಲ್ಲಿ ಏತಕ್ಕೆ ಒದಗಿಸುತ್ತೀರಿ ? ವೋಕೇಶನಲ್ ಸ್ಕೂಲಿನಲ್ಲಿ ಹೆಣ್ಣುಮಕ್ಕಳಿಗೆ ಕಳಿಸುವುವಕ್ಕೆ ಒಂದು ಸರಿಯಾದ ವ್ಯವಸ್ಥೆ ಇಲ್ಲ. ಈ ಬಗ್ಗೆ ನಾನು ಒಂದು ಪ್ರಶ್ನೆ ತಳಿಸಿದ್ದೆ. ಆದರೆ ಅದಕ್ಕೆ ಉತ್ತರವೇ ಬಂದಿಲ್ಲ. ಹೇಳುವವರು ಕೇಳುವವರು ಯಾರಾದರೂ ಇದ್ದಾರೆಯೋ ಇಲ್ಲವೋ ಎಂದು ಅನಿಸುತ್ತದೆ. ಮಕ್ಕಳಿಗೆ ಊಟವಿಲ್ಲದೆ ಸಾಯಿಸುತ್ತಿದ್ದಾರೆ. ಇದನ್ನು ಯಾರಾದರೂ ಚೆಕ್ ಮಾಡುತ್ತಾರೆಯೆ ? ಬಹಳ ಅವ್ಯವಸ್ಥೆಯಿದೆ. ನಾನು ರಸಿಯಾದೇಶಕ್ಕೆ ಹೋದಾಗ್ಗೆ ಮಾಸ್ಕೋ ಪಟ್ಟಣದಲ್ಲಿ ನೋಡಿದ್ದೇನೆ. ಅಲ್ಲಿಯ ಜನರು ಶಿಕ್ಷಣಕ್ಕೆ ಪ್ರಾಶಸ್ತ್ಯ ಕೊಡುತ್ತಾರೆ. ಜನರು ವಿದ್ಯಾಸಂಸ್ಥೆಗಳಿಗೆ ಹೋಗದಿದ್ದರೆ ವಿದ್ಯಾಸಂಸ್ಥೆಗಳು ಜನರು ಇರುವ ಕಡೆ ಹೋಗತಕ್ಕದ್ದು ಎಂದು ಅಲ್ಲಿಯ ಜನ ಹೇಳುತ್ತಾರೆ. ಇದು ಗಮನಾರ್ಹವಾದುದು. ನಮ್ಮ ದೇಶದಲ್ಲಿ Audio Visual educationಗಾಗಿ ವಿದ್ಯಾಇಲಾಖೆ ಇಷ್ಟು ಹಣ ಒದಗಿಸಿದ್ದರೂ ಅದರಿಂದ ಎಷ್ಟರಮಟ್ಟಿಗೆ ಉಪಯೋಗವಾಗುತ್ತಿದೆ ಎನ್ನುವದನ್ನು ಯೋಚನೆ ಮಾಡಬೇಕಾದುದು ಅಗತ್ಯ.

ಇನ್ನು ಡಿ.ಪಿ.ಐ ಆರ್ಡರ್'ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಇದೊಂದು ಚಿಕ್ಕ ಸ್ಕೂಲ ಸಂಗತಿ. ಈ ಸ್ಕೂಲ ಬಗ್ಗೆ ನಾನು ಬಹಳ ಶ್ರಮ ವಹಿಸಿದ್ದೇನೆ. ಮುಖ್ಯಮಂತ್ರಿಗಳು ಆರ್ಡರ್ ಮಾಡಿದ್ದಾರೆ. ಊರಿಗೆ ಹೋಗಿ ಇನ್‌ಕ್ವಯರಿ ಮಾಡಬೇಕೆಂದು ತಿಳಿಸಿದ್ದಾರೆ. ವಿದ್ಯಾ ಇಲಾಖೆಗೆ ಲೆಟರ್ ಬರೆದಿದ್ದಾರೆ. ಇವರು ಒಂದು ಕಾಗದದಲ್ಲಿ ಊರಿಗೆ ಬರುವರೆಂದು ನನಗೆ ತಿಳಿಸಿದರು. ಇನ್ನೊಂದು ಕಾಗದದಲ್ಲಿ ನಮ್ಮನ್ನೇ ಬರಬೇಕೆಂದು ತಿಳಿಸಿದರು. ಒಂದು ಕಾಗದದಲ್ಲಿ ತಿಳಿಸಿದ್ದನ್ನು ಇನ್ನೊಂದು ಕಾಗದದಲ್ಲಿ ಅದಕ್ಕೆ ವಿರೋಧವಾಗಿ ತಿಳಿಸುತ್ತಾರೆ. ಸ್ವಲ್ಪವಾದರೂ ಮುಖ್ಯಮಂತ್ರಿಗಳ ಆರ್ಡರಿಗೆ ಮರ್ಯಾದೆಯಿಲ್ಲ. ಕೊಡುವುದೂ ಇಲ್ಲ. ಮೈಸೂರು ಡಿಸ್ಟ್ರಿಕ್ಟಿನಲ್ಲಿ ಒಂದೇ ಸಂಸ್ಥೆಗೆ ಹತ್ತು ಲಕ್ಷ ರೂಪಾಯಿ ಹಾಸ್ಟೆಲ್ ಬಗ್ಗೆ ಹಣ ಕೊಟ್ಟಿದ್ದೀರಿ. ಈ ಹಾಸ್ಟೆಲ್ಲುಗಳಲ್ಲಿ ನಡೆಯುವ ಅವ್ಯವಹಾರ ನೋಡುವದಕ್ಕಾಗುವದಿಲ್ಲ. ಒಂದೊಂದು ಹಾಸ್ಟೆಲ್ಲಿಗೆ 3000, 5000, 13,000 ರೂಪಾಯಿ ಕೊಡುತ್ತಿದ್ದೀರಿ. ಐದು ಸಾವಿರ ರೂಪಾಯಿ ತೆಗೆದುಕೊಂಡು ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸುತ್ತಿಲ್ಲ. ನಾನು ಬೇಕಾದರೆ ಚಾಲೆಂಜ ಮಾಡಿ ಹೇಳುತ್ತೇನೆ. ಒಂದು ಹಾಸ್ಟೆಲಿನಲ್ಲಿಯು ಅಷ್ಟು ಹುಡುಗರ ಸಂಖ್ಯೆಯಿಲ್ಲ. ಒಂದು ಹಾಸ್ಟೆಲ್ಲಿನಲ್ಲಿ ಇರುವ ಹುಡುಗರ ಹೆಸರುಗಳು ಇನ್ನೊಂದು ಹಾಸ್ಟೆಲಿನಲ್ಲಿರುತ್ತವೆ. ಎಲ್ಲ ಹುಡುಗರನ್ನು ತಂದು ನಿಲ್ಲಿಸಿ ಎಂದು ಹೇಳಿದರೆ ಆಗ್ಗೆ ಗೊತ್ತಾಗುತ್ತದೆ. ಇದನ್ನು ಯಾರೂ ಚೆಕ್ ಮಾಡುತ್ತಿಲ್ಲ. ಹುಡುಗರ ಸಂಖ್ಯೆ ತೋರಿಸುವುದು ಶುದ್ಧ ಸುಳ್ಳು ಆಗಿದೆ. ಅಂಥ ಸಂಸ್ಥೆಗಳಿಗೆ ಸರಕಾರ ಕಣ್ಣುಮುಚ್ಚಿಕೊಂಡು ದುಡ್ಡು ಕೊಡುತ್ತೀರಿ. ಯಾರು ಹೇಳಿದರೂ ನಮ್ಮ ಮಾತು ಕೇಳುವದಿಲ್ಲ. ಈ ರೀತಿ ಇರುವ ಸಂದರ್ಭದಲ್ಲಿ ಇಷ್ಟು ಹಣ ಈ ಬೇಡಿಕೆಗೆ ಕೊಡಬೇಕು ಅಂದರೆ ನಿಜವಾಗಿಯೂ ಹೊಟ್ಟೆ ಉರಿಯುತ್ತದೆ. ಈ ರೀತಿ ಹಣ ಹಾಳು ಮಾಡುವುದು ಸರಿಯಲ್ಲ.

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಇನ್ನು Development Blockನಲ್ಲಿರುವ ಈ ಸೋಷಿಯಲ್ ಎಜುಕೇಷನ್ officers ಬಗ್ಗೆ ಪ್ರತಿಯೊಂದು ಇಲಾಖೆಯವರು ತಮ್ಮ ತಮ್ಮ extension officerಗಳು welfare ನೋಡಿಕೊಳ್ಳುತ್ತಿದ್ದಾರೆ. ಈ ಇಲಾಖೆಗೆ ಸಂಬಂಧಪಟ್ಟ S.E.O.ಗಳಿಗೆ ಈ ಅಧಿಕಾರಿಗಳಿಗೆ ಏನು ಸಂಬಳ ಗೊತ್ತುಮಾಡಿದ್ದೀರಿ, ಪ್ರಮೋಷನ್ ಏನು ಕೊಡುತ್ತೀರಿ ತಿಳಿಸಬೇಕು.

ಇನ್ನು ಮಂತ್ರಿಗಳು ಟೂರ್ ಮಾಡುತ್ತಾರೆ. ಆದರೆ ಈ ಟೂರ್ ಪ್ರೋಗ್ರಾಂ ನಮಗೆ ತಿಳಿಸಿಕೊಡುವುದಿಲ್ಲ. ನಮ್ಮ ತಾಲ್ಲೂಕಿಗೆ ನಾವು ಜನ ಪ್ರತಿನಿಧಿಯೆಂದು ಚುನಾಯಿತರಾದ ಸದಸ್ಯರಾಗಿದ್ದೇವೆ. ನಮಗೆ ಟೂರ್ ಪ್ರೋಗ್ರಾಂ ಏಕೆ ತಿಳಿಸುವದಿಲ್ಲ, ನಮ್ಮ ಇಷ್ಟ ಬಂದರೆ ಬಂದು ಮಂತ್ರಿಗಳನ್ನು ಕಾಣುತ್ತೇವೆ, ಇಲ್ಲದಿದ್ದರೆ ಬಿಡುತ್ತೇವೆ. ವಿದ್ಯಾಮಂತ್ರಿಗಳು ಟೂರ್ ಮೇಲೆ ಬಂದಾಗ್ಗೆ ಅವರ ಕೂಡ ಇವರ ಕೂಡ ಪಿಸಿ ಪಿಸಿ ಮುಸಿ ಮುಸಿ ಮಾತನಾಡುತ್ತಾರೆ. ಎಲ್ಲರಿಗಿಂತಲೂ ಹೆಚ್ಚಾಗಿ ನಾನೇ sacrifice ಮಾಡಿದ್ದೇನೆಂದು ಹೇಳುತ್ತಾರೆ ಚೀಫ್ ಮಿನಿಸ್ಟರ್ ಬುದ್ಧಿಯಿಲ್ಲ ಎಂದು ಹೇಳುತ್ತಾರೆ. ಮುಖ್ಯಮಂತ್ರಿಗಳು ಏನಾದರೂ ಮಾಡಬೇಕೆಂದರೆ ಬಿಡುವುದಿಲ್ಲ, ಅವರು ಪ್ರಯೋಜನವಿಲ್ಲ, ಈ ರೀತಿ ಪ್ರತ್ಯಕ್ಷವಾಗಿ ಮಾತನಾಡಿದ್ದಾರೆ ಎನ್ನುವುದು ಗೊತ್ತಾಗಿದೆ. ಇವರೇ ರಾಷ್ಟ್ರಾಧ್ಯಕ್ಷರಾಗಲಿ ಇವರೇ ಮುಖ್ಯಮಂತ್ರಿಗಳಾಗಲಿ ಯಾರೂ ಬೇಡವೆನ್ನುವದಿಲ್ಲ, ಈ ರೀತಿ ಅಧ್ವಾನ ಬಹಿರಂಗವಾಗಿ ಮಾತನಾಡುವುದು ಸರಿಯಿಲ್ಲ ಎಂದು ಹೇಳುತ್ತೇನೆ.

ನಮ್ಮ Gundlupet headquarters ನಲ್ಲಿ ಹೈಸ್ಕೂಲು ಇದೆ. ಆ ಹೈಸ್ಕೂಲು ಯಾವ ಕಂಡಿಷನ್ನಿನಲ್ಲಿದೆಯೆಂದು ನಮ್ಮ ವಿದ್ಯಾಶಾಖೆಯ ಡೆಪ್ಯುಟಿ ಮಿನಿಸ್ಟರವರೂ, ಫೈನಾನ್ಸ್ ಡೆಪ್ಯುಟಿ ಮಿನಿಸ್ಟರವರೂ, ಅಲ್ಲಿಗೆ ಹೋಗಿ ಬಂದು ಏನು ರಿಪೋರ್ಟು ಕಳುಹಿಸಿದ್ದಾರೆ ಅದು ಹಾಗೆಯೇ ಬಿದ್ದು ಹೋಗುತ್ತಾ ಇದೆ. ವರ್ಷಾನುಗಟ್ಲೆ ಮಳೆ ಇಲ್ಲದೆ ರೈತ ಕಾಸಿಗೆ ಕಾಸು ಸೇರಿಸಿ, 25 ಸಾವಿರ ರೂಪಾಯಿ ಡೊನೇಷನ್ ಕೊಟ್ಟು ಕಟ್ಟಿಸಿದ ಹೈಸ್ಕೂಲು. ಇಂಥ ಸ್ಕೂಲು ಬಿದ್ದುಹೋಗುತ್ತಾ ಇದೆ. ಅದಕ್ಕೆ ಗಮನ ಕೊಡದೆ, ಚಾಮರಾಜನಗರದ ಸ್ಕೂಲು ಬಿದ್ದು ಮಕ್ಕಳು ಸತ್ತು ಹೋಗಿಬಿಟ್ಟಿದ್ದಾರೆಂದು ಈ ಸ್ಕೂಲನ್ನು ಬೇರೆ ಕಡೆಗೆ ಬದಲಾಯಿಸಿಬಿಟ್ಟರು. ಗುಂಡ್ಲುಪೇಟೆ ಸ್ಕೂಲಿನವರು ಮಕ್ಕಳಲ್ಲವೇ! ಅವರು ಸತ್ತುಹೋದರೆ ಪರವಾಗಿಲ್ಲವೇ ?

(Minister for Education rose)

Smt. NAGARATNAMMA.—I am not yielding Sir.

Sri C. J. MUCKANNAPPA.—Sir, I rise to a point of order. When the Hon'ble Member is saying that she would not yield, why should the Ministsr interrupt ?

Mr. SPEAKER.—I will give a ruling later. (laughter.)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈವಾಗ ಅದನ್ನು ಮಿಡಲ್‌ಸ್ಕೂಲಿನಲ್ಲಿ ಮಾಡುತ್ತಾ ಇದ್ದಾರೆಂದು ವರ್ತಮಾನ ಬಂದಿದೆ. ಮೊನ್ನೆ ದಿವಸ ಇವರೇ ಬಂದಾಗ ಹೇಳಿದರು. ಗುಂಡ್ಲುಪೇಟೆಯನ್ನು ಪ್ಲಾಸ್ಟರ್ ಮಾಡಿದ್ದರೆ ಸರಿಹೋಗಿಬಿಡುತ್ತದೆಂದು ಹೇಳಿದರಂತೆ ಬರೀ ರಾಜಕೀಯ, ಮಕ್ಕಳು ಸತ್ತುಬಿದ್ದರೂ ಸರಿ, ಕಂಟ್ರಾಕ್ಟರನ್ನು ಉಳಿಸಬೇಕಲ್ಲ. ಪಾಪ, ನಮ್ಮ ಚೀಫ್ ಮಿನಿಸ್ಟರು ಇವರಿಗೆ ಸುಲಭವಾಗಿ ಸಿಗುತ್ತಾರೆ, ಹಿಂದಲದೆಲ್ಲ ನೋಡಿದರೆ ಇವರಿಗೆ ಚಾಡಿ ಹೇಳುವ ಅಭ್ಯಾಸ ಬೇರೆ ಇರುವ ಹಾಗೆ ಕಾಣುತ್ತೆ. ನಮ್ಮ ಮೇಲೆ ಅವರಿಗೆ ಚಾಡಿ ಹೇಳಿಬಿಟ್ಟು, ನನಗೆ ಏನೂ ಮಾಡುವುದಕ್ಕಾಗುವುದಿಲ್ಲ.

Mr. SPEAKER.—Please proceed to the next point.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಚಾಡಿ ಹೇಳಿ ನನಗೆ ಕೆಲಸ ಮಾಡಿಕೊಡದೆ ಇರಬಹುದು. ಆದರೆ ನಮ್ಮ ತಲೆ ಮೇಲೆ ಇರುವ ಸೂರ್ಯನನ್ನು ಕಿತ್ತುಕೊಳ್ಳುವುದಕ್ಕಾಗುವುದಿಲ್ಲ, ಗಾಳಿ ಕಿತ್ತುಕೊಳ್ಳುವುದಕ್ಕಾಗುವುದಿಲ್ಲ. ದೇವರೇ ನನಗೆ ರಸ್ಟ್ ಕೊಡಬೇಕು ಅಂದರೆ ಅದನ್ನು ತಡೆಯುವುದಕ್ಕಾಗುವುದಿಲ್ಲ. ಇಷ್ಟು ನನಗೆ ಗೊತ್ತಿದೆ. ಚೀಫ್ ಮಿನಿಸ್ಟರಿಗೆ ಚಾಡಿ ಹೇಳಿ, ನಮ್ಮ ಊರಿಗೆ ಆಗಬೇಕಾದ ಸೌಕರ್ಯಗಳನ್ನು ನಿಲ್ಲಿಸಬಹುದು ಎಂಬ ಒಂದೇ ಭಯ. ಚೀಫ್ ಮಿನಿಸ್ಟರು ಇವರ ಮಾತು ಕೇಳಬಾರದೆಂದು ನಿಮ್ಮ ಮುಖಾಂತರ ಅವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರಿಗೆ ಇಷ್ಟು ಮಾತನ್ನು ಹೇಳಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

Sri M. SRINIVASA NAIK (Mangalore I).—Mr. Speaker, Sir, I rise to support the Demand placed by the Minister for Education before this Hon'ble House. Mr. Anna Rao Ganamukhi said that the Minister for Education has advocated co-education at Mangalore and it was not correct. Sir, there is already co-education existing in the City of Mangalore and we have found it working very satisfactorily and we have not heard of any untoward incidence having taken place as result of co-education, even at the secondary level. So, if the Minister has remarked in the City of Mangalore that co-education is working well he has only said the fact. We are aiming towards a Welfare State. Welfare State is achieved through universal education. Government has introduced compulsory primary education in the State with a view to see that we achieve the objective to a Welfare State in our country, so that our independence may live long. Western countries have advanced industrially, educationally and scientifically by introducing education in the very early stage. By introducing compulsory primary education in our State, we have brought in additional two lakhs of children and the target of ten lakhs would be achieved during the Third Five Year Plan. Government is spending huge sums of money in giving universal primary education for our children and I should say, we have succeeded in this attempt. In the City of Mangalore and District of South Kanara, we have almost 98 percent of students admitted at the primary stage.

Sir, some Members have remarked that there should be English medium in schools. I endorse that idea and say that there should be both English and Kannada from the preliminary stage. We should not bypass English or Kannada, so that those whose mother-tongue is not Kannada may be taught in English. Sir, we must admit that our Education Minister, after having taken over the education portfolio, has done some yeoman service to the people of the State, to the teachers and to the students as well as the parents of the schoolgoing children.

After he took office as the minister for Education, he has introduced the freeship to students whose parents' income is less than 2,400 rupees and this is in addition to scholarships given to poor students. This has given opportunity to boys however low placed he may be, however poor he may be, to obtain education. Another good thing that he has done is the introduction of triple benefit scheme to the teachers. Nearly Rs. 1,80,000 is spent by the State for achieving this very good object and nearly 49,000 teachers are benefitted. The other good deed that he will be doing is to give free meals to the five lakhs primary school children attending schools. I may suggest at this juncture that along with students of elementary classes teachers also should be provided with this mid-day meal benefit. The other good thing that is done by this Government and the Education Ministry is giving free books to the poor children. In the first standard nearly 40 per cent of the children go without books and in the higher standards nearly 5 to 10 per cent go without books. So, Government has come to their rescue by providing free books. The cost would be nearly 4.5 laks of rupees and it is sought

(SRI M. SRINIVASA NAYAK)

to be realised by putting some additional price on books that are sold to the other well-placed children who buy them.

Then, Sir, when we have introduced compulsory primary education, it is the duty of the Government to have a plan as regards the number of high schools and colleges that would be required in each place and the number of technical institutions that may have to be started to accommodate the children that come/out of the elementary education. In South Kanara there are 104 high schools and nearly 500 aided elementary schools apart from Government and Taluk Boards Schools, etc., and we have 11 colleges. There is a further request to Government to give permission to start two more colleges. There is still need for another six colleges in South Kanara. These six colleges will be started by private agencies and I request the Government to consider the request when made by such private agencies seeking permission in this regard. The Education Minister has seen that our District is very well advanced in the field of education

Further, three are training colleges and training schools in Mangalore. In other parts of Mysore State 40 per cent of the teachers are said to be trained and I am proud to say that in our District 100 per cent of the teachers are trained. I would like to make a suggestion that the teachers in Mysore State may be sent over to our district for training. The only difficulty would be that they will have to be paid deputation allowance but that would go a long way in giving the children proper education when the 60 percent would get training. We have got fully equipped private institutions as well as Government institutions which are catering to the training of teachers in Mangalore.

When new private agencies come forward, Government must as a policy, encourage them. There are requests for new high schools from other towns of my district like Ullal, Subramanya, Mulki, etc. They will be started by private agencies and Government will have to give them aid under the grant-in-aid code. Government may not even give them building grants but may rest content by giving them rent so that they may build their own buildings.

Under the compulsory primary education scheme, Government is committed to provide free education upto standard V but there is a problem for the students of 6th and 7th standard. I request the Government to see that free education is also extended to class 6 and 7. There is a problem arising out of the closure of standard VIII. The teachers that are to be displaced should be employed and not thrown out. The Minister for Education should meet the request not only made by me but other educationists when he was on tour in our district.

A point was raised about the teacher-pupil ratio in classes. It has been pointed out to the Education Minister that the ratio in our district which is I : 60 is causing hardship. I feel that it would be very difficult for a teacher to handle such a class. If the ratio is made 1 : 40, it would also provide more employment to teachers.

There is the problem of grants to be given to the aided schools between the management rate and the Government rate. That should be settled so that they may get grants in time.

Finally, I must say that there were many problems in our district and the Minister for Education had been good enough to solve 90 per cent of them. Naturally, more problems would crop up and people have to approach Government. Government has been able to satisfy the needs of the people. The maintenance grant due to the schools should be paid urgently because we are coming to the end of the financial year. I would request the Government to see that grants that are pending should be disposed of immediately so that the school authorities may pay the teachers in the month of April. Again equation of professors and tutors in Government Colleges at Mangalore has not been done properly. Representations have been made to Government and they should see that justice is meted out to them.

ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಅಧ್ಯಕ್ಷರೇ, ಇವತ್ತಿನ ಕಟ್ ಮೋಷನ್‌ಗಳನ್ನು ನೋಡಿದರೆ ಸುಮಾರು 5 ಪುಟ ಇದೆ. ಆದರೆ ಕಟ್‌ಮೋಷನ್‌ಗಳನ್ನು ಕಳುಹಿಸಿರುವ ಜನ ಬಹಳ ಕಡಿಮೆ ಇದ್ದಾರೆ. ಇದು ಏನು ತೋರಿಸುತ್ತದೆ ಎಂದರೆ ಸರ್ಕಾರದವರಿಗೆ ಹೇಳುವುದರಿಂದ ಏನು ಪ್ರಯೋಜನ ಎಂದು ಬಾಕಿಯವರೆಲ್ಲರೂ ಕಟ್‌ಮೋಷನ್ ಕಳುಹಿಸದೆ ಬಿಟ್ಟು ಬಿಟ್ಟಿದ್ದಾರೆ. ಹೋಗಲೀ ಕೆಲವರಾದರೂ 3–4 ಜನ ಆಶಾವಾದಿಗಳು 5 ಪುಟದಷ್ಟು ಕಟ್‌ಮೋಷನ್‌ಗಳನ್ನು ತಂದಿದ್ದಾರಲ್ಲಾ ಅಷ್ಟೇ ಸಾಕು. ಈಗ ಕೊನೇ ಘಳಿಗೆಯಲ್ಲಿ ಈ ವಿದ್ಯಾಖಾತೆಯ ಮಂತ್ರಿಗಳು ಒಂದು ಪ್ರಕಟಣೆಯನ್ನೇನೊ ಕಳುಹಿಸಿದ್ದಾರೆ. ಇದರಲ್ಲಿ ಆರನ್ನು ಓದಿದ್ದೇನೆ. ಇನ್ನೂ ಕೆಲವು ಇವೆ. ಸ್ಕಾಲರ್‌ಷಿಪ್ ಬಹಳ late ಆಗಿ ಕೊಡುತ್ತೀರಿ; ಈ ರೀತಿ ಕೊಟ್ಟು ಬಹಳ ಜನ ಮಕ್ಕಳಿಗೆ ಬಹಳ ಅನ್ಯಾಯ ಮಾಡುತ್ತಾ ಇದ್ದೀರಿ. ಇನ್ನು ಮುಂದಾದರೂ ಕಾಲಕ್ಕೆ ಸರಿಯಾಗಿ ಕೊಡಿ ಎಂದು ಗೋಪಾಲ ಗೌಡರು ಕಟ್‌ಮೋಷನ್‌ನಲ್ಲಿ ಬರೆದಿದ್ದಾರೆ. ಅಂಥವರೇ ಬರೆಯ ಬೇಕಾಗಿದ್ದರೆ; ಅವರು ಎಂಥವರು ಎಂದರೆ ರಾತ್ರಿಎಲ್ಲಾ ಯೋಚನೆ ಮಾಡಿ ವಿಷಯಗಳನ್ನೆಲ್ಲಾ ತಿಳಿದುಕೊಂಡು ಖಚಿತವಾಗಿ ಹೇಳತಕ್ಕವರು ; ನಿಜವಾಗಿಯೂ ಆಲೋಚನಾಪರರು. ನಮ್ಮ ಊರಿನಲ್ಲಿ ಒಬ್ಬ ಕುರುಬರ ಹುಡುಗ ಓದುತ್ತಾ ಇದ್ದಾನೆ. ಇಲ್ಲಿಯವರೆಗೆ ನಾನೇ ಅವನಿಗೆ ದುಡ್ಡು ಕೊಟ್ಟೆ. ಶಾಲೆ ಆದ ಮೇಲೆ ನನ್ನ ತೋಟದಲ್ಲಿ ಕೆಲಸ ಮಾಡು ಎಂದು ಹೇಳಿದೆ. ನನ್ನ ಸ್ವಭಾವಕ್ಕೆ ತಕ್ಕಹಾಗೆ ನಾನು ಮಾಡಬೇಕು. ಏಕೆ ಹೇಳುತ್ತೇನೆ ಎಂದರೆ ಈ ಹುಡುಗರನ್ನು ಬಹಳ ಜನ ಮುಳುಗಿಸುತ್ತಾರೆ. ಅದರಿಂದ ನಿಜವಾಗಿಯೂ ಕೆಟ್ಟ ಪ್ರತಿಫಲ ಬಂದೇ ಬರುತ್ತದೆ.

Mr. SPEAKER.—Next point.

ಶ್ರೀ ವಿ. ಎಂ. ದೇವ್.— Nationalisation of text books. ಇದರಲ್ಲಿ 107 ಟೆಕ್ಸ್ ಬುಕ್ಸ್ ಮಾತ್ರ ಮಾಡುತ್ತೇವೆ ಎಂದು ಹೇಳಿದ್ದೀರಿ. ನನಗೆ ಏನು ಅನ್ನಿಸುತ್ತದೆ ಎಂದರೆ ನೀವು ಸರಿಯಾದ ದಾರಿಯಲ್ಲಿ ಒಳ್ಳೆಯ ಹೆಜ್ಜೆ ಇಟ್ಟಿದ್ದೀರಿ. ಇದಕ್ಕಾಗಿಯೇ ಪ್ರತ್ಯೇಕವಾಗಿ ಒಂದು ಪ್ರೆಸ್ ಇಡಬೇಕು. ಇಟ್ಟರೆ ಬೇಕಾದಷ್ಟು ಲಾಭ ಪಡೆಯಬಹುದು. ಅದೂ ಅಲ್ಲದೆ ಹುಡುಗರಿಗೆ ಸಕಾಲಕ್ಕೆ ಪುಸ್ತಕ ಒದಗಿಸಬಹುದು. ಪಠ್ಯ ಪುಸ್ತಕಗಳನ್ನು ಪ್ರಿಂಟ್ ಮಾಡುವ ಕೆಲಸ ಪ್ರೈವೇಟ್ ಇಂಡಸ್ಟ್ರೀಸ್ ಅವರಿಗೆ ವಹಿಸಬಹುದು. ಅದನ್ನು ಮೊದಲನೇ ಸಾರಿ ಅರ್ಥ ಮಾಡಿಕೊಳ್ಳಬೇಕೆಂದು ಪ್ರಯತ್ನ ಪಟ್ಟಿದ್ದೀರಿ ಅದು ಗಮನಾರ್ಹ. ಮತ್ತೊಂದು distribution of text books ಲಾಭ ಬಂದರೂ ಪರವಾಗಿಲ್ಲ. ಅದಕ್ಕೂ ದುಡ್ಡು ಕೊಡಿ ಎಂದು ಕುಳಿತುಕೊಳ್ಳುತ್ತಾರೆ.

(ಶ್ರೀ ವಿ. ಎಂ. ದೇವ್)

ಪಂಚವಾರ್ಷಿಕ ಯೋಜನೆ ಮುಗಿಯುವುದಕ್ಕೆ ಮುಂಚೆಯೇ ಇದಕ್ಕೆ ಒಂದು ಪ್ರಿಂಟಿಂಗ್ ಪ್ರೆಸ್ ಹಾಕಿದರೆ ಸ್ವಲ್ಪ ಜಾಸ್ತಿ ದುಡ್ಡು ಸಿಕ್ಕುತ್ತದೆ. Mid-day meals 5 ಲಕ್ಷ ಮಕ್ಕಳಿಗೆ ಮುಫತ್ತಾಗಿ ತಿಂಡಿ ಕೊಡಲು 6 ಲಕ್ಷ ರೂಪಾಯಿ ಕೊಟ್ಟಿದ್ದೀರಿ. ಇದು ನನಗೆ ಅರ್ಥವಾಗುವುದಿಲ್ಲ, ವಿವರಣೆ ಕೊಟ್ಟರೆ ಬಹಳ ಸಂತೋಷವಾಗುತ್ತದೆ ಎಂದು ಅಷ್ಟು ಮಾತ್ರ ಹೇಳುತ್ತೇನೆ.

ಇನ್ನೊಂದು ವಿಷಯ ಎಂದರೆ, ಈಗ ವಿದ್ಯಾವಂತರು ಅವಿದ್ಯಾವಂತರು ಎಲ್ಲರಲ್ಲೂ ಅಶಾಂತಿ ಬಹಳ ಜಾಸ್ತಿಯಾಗಿದೆ. ಇದೇ ನಮ್ಮ ದೇಶ ಒಂದಕ್ಕೆ ಅಥವಾ ಪ್ರಪಂಚಕ್ಕೆ ಎಂದರೆ, ಇಡೀ ಪ್ರಪಂಚದಲ್ಲೇ ಅಲ್ಲೊಂದು ತರಹ ಇದ್ದರೆ, ಇಲ್ಲೊಂದು ತರಹ ಇದೆ. ಸ್ವಾಮಿ, ಆಮೇಲೆ ಇನ್ನೂ ಒಂದು ವಿಚಾರವಿದೆ, ಅದೇನೆಂದರೆ ಈ ವಿದ್ಯೆಯಲ್ಲಿ ಏನಾದರೂ ಸ್ವಲ್ಪ ಹೆಚ್ಚು ಕಡಿಮೆಯಾದರೆ ಅಥವಾ ವ್ಯತ್ಯಾಸವಾದರೆ ಇದರಿಂದ ಬಹಳ ತೊಂದರೆಯಾಗುತ್ತದೆ. ಜನರು ಅವರ ಆರ್ಥಿಕ ಪರಿಸ್ಥಿತಿಗನುಗುಣವಾಗಿ ವಿದ್ಯೆಯನ್ನು ಇಷ್ಟೋ ಅಷ್ಟೋ ಕಲಿಯುತ್ತಾರೆ...............

Mr. SPEAKER.—It is 7 O'clock. The Hon'ble Member can continue to-morrow. The House will now rise to meet again to-morrow at 8-30 P.M.

The House adjourned at Seven of the Clock to meet again at Thirty Minutes past Eight of the Clock on Saturday, the 16th March 1963.

THE
MYSORE LEGISLATIVE ASSEMBLY
DEBATES

OFFICIAL REPORT

OF THE

PROCEEDINGS OF THE NINETEENTH DAY

OF THE

THIRD SESSION

SATURDAY, 16TH MARCH 1963

Vol. III—No. 19

◆

BANGALORE :
PRINTED BY THE DIRECTOR OF PRINTING, STATIONERY AND
PUBLICATIONS AT THE GOVERNMENT PRESS
1963

Price : 25 nP

CONTENTS

PAGES

Papers laid on the Table—

Notification No. GAD 15 SSC 62, dated 18th February 1963 [Amendments to the Mysore Public Service Cummission (Consultation) Regulations, 1958], issued under clause (5) of article 320 of the Constitution of India. ... 1321

Budget Estimates for 1963-64—Demands for Grants—

Demand No. 17—28. Education (Voted) 1321—1346

Demand No. 18—29. Medical—(Debate not concluded) 1346—1373

MYSORE LEGISLATIVE ASSEMBLY

NINETEENTH DAY.

Saturday, 16th March 1963.

The House met in the Assembly Hall, Vidhana Soudha, Bangalore, at Thirty Minutes past Eight of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

PAPERS LAID ON THE TABLE

Sri S. R. KANTHI (Minister for Education).—Sir, I beg to lay Notification No. GAD 15 SSC 62, dated 18th February 1963 [Amendments to the Mysore Public Service Commission (Consultation) Regulations, 1958], as required under clause (5) of article 320 of the Constitution of India.

BUDGET ESTIMATES FOR 1963-64—DEMANDS FOR GRANTS

No. 17-28. Education

(Debate continued)

ಶ್ರೀ ವಿ. ಎಂ. ದೇವ್ (ಗುಬ್ಬಿ).—ಒಟ್ಟಿನಲ್ಲಿ ಮಾನವಕುಲ ಪ್ರಪಂಚದಲ್ಲಿ ಮೊದಲು ವಿದ್ಯೆಗೆ ಎಷ್ಟು ಮಹತ್ವ ಕೊಡುತ್ತಿದೆ ಅನ್ನುವುದು ಮುಖ್ಯ ಪ್ರಶ್ನೆ. ಅದು ಸಮರ್ಪಕವಾಗಿಲ್ಲದಿದ್ದರೆ it is not just the foibles of human beings ಪದ್ಧತಿಯಲ್ಲಿ ಏನೋ ತಪ್ಪು ಇರಬೇಕು. ವಿದ್ಯೆಯಲ್ಲಿ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯಕ್ಕೆ ಬಹಳ ಮಹತ್ವ ಕೊಟ್ಟಿದೆ. ಏಕೆಂದರೆ ವಿದ್ಯೆಗೆ ಪುರಸ್ಕಾರ ದೊರೆಯಬೇಕಾದರೆ ಅದಕ್ಕೆ ಸರಿಯಾದ ವಾತಾವರಣವಿದ್ದರೆ ಆಗ ಅದರಿಂದ ಬರುವ ಪ್ರತಿಫಲ ನಿಜವಾಗಿ ಅಗಾಧವಾಗಿದೆ. ಅದಕ್ಕೆ ಸರಿಯಾದ ವಾತಾವರಣ ಎಲ್ಲಿರುತ್ತದೆಂದರೆ, ಸಮಾಜವಾದರೀತಿಯ ಸಮಾಜದ ಚೌಕಟ್ಟಿನಲ್ಲಿರುತ್ತದೆ; ಇನ್ನು ಯಾವ ಕಡೆಯಲ್ಲಿಯೂ ಇರುವುದಿಲ್ಲ. ಇದಕ್ಕೆ ಉದಾಹರಣೆ ಕೊಡುತ್ತೇನೆ. ಈವಾಗ ಆರ್ಥಿಕ ಮಟ್ಟದಲ್ಲಿ ನೋಡಿ. ರಷ್ಯ ಮೊದಲನೆ ಉಪಗ್ರಹ ಹಾರಿಸಿದಾಗ ಅವರ ಆರ್ಥಿಕ ಮಟ್ಟ ಅಮೇರಿಕದ ಅರ್ಧದಷ್ಟು ಇತ್ತು; ಆದರೂ ಅಮೇರಿಕಕ್ಕಿಂತ ಮುಂಚೆ ಉಪಗ್ರಹ ಬಿಟ್ಟರು. ಅವರಲ್ಲಿ ಉಕ್ಕಿನ ಉತ್ಪತ್ತಿ ಕಡಿಮೆಯಾಗಿದ್ದರೂ, ಅಮೇರಿಕದ ಎರಡೂವರೆಯಷ್ಟು ಯಂತ್ರ ಸಾಮಗ್ರಿಗಳನ್ನು ತಯಾರು ಮಾಡುತ್ತಾರೆ. ವಿದ್ಯೆಯ ಎಕ್‌ನಾಮಿಕ್ಸಿನ ಒಂದು ಮುಕ್ತ ತೋರಿಸುತ್ತೇನೆ. ಇದರಿಂದ ಭ್ರಾತೃಭಾವನೆ ಉಂಟಾಗಬಹುದು. ವಿದ್ಯೆಯಿಂದ ಒಳ್ಳೆಯ ಫಲಬಂದರೆ ಸಾಮಾಜಿಕ ಜೀವನದಲ್ಲಿ ನಿಜವಾದ ಭ್ರಾತೃಭಾವನೆ ಬಂದು ದೇಶಕ್ಕೆ ನೆಮ್ಮದಿ ತಂದೀತು. ಆದ್ದರಿಂದ ಎಲ್ಲರೂ ಅದಕ್ಕೆ ತಕ್ಕ ಹಾಗೆ ದುಡಿಯಬೇಕು. ಮೂರನೆಯದಾಗಿ ರಾಜಕೀಯದಲ್ಲಿ ಒಂದು ತತ್ವ ಕಡ್ಡಾಯವಾಗಿ ಅಸ್ತಿತ್ವಕ್ಕೆ ಬಂದರೆ ರಾಷ್ಟ್ರ ಬಹಳ ಬಲವಾಗುತ್ತೆ. ಹಾಗೆ ಒಂದು ರಾಜಕೀಯ ತತ್ವಕ್ಕೆ ಕಟ್ಟುಬಿದ್ದು ಜನತಾ ಚೀನ ಬಲಗೊಂಡು ಈಗ ನಮ್ಮಮೇಲೆ ಯುದ್ಧ ಮಾಡುತ್ತಿದೆ. ಜನತಾ ಚೀನ ಇಂಡಿಯಾದೇಶದಮೇಲೆ ಬಿದ್ದ ನಂತರ ದೆಹಲಿಯಲ್ಲಿ ಸಹಿತ ವಿದ್ಯಕ್ಕೆ ಹೆಚ್ಚಿನ ದೃಷ್ಟಿಯನ್ನು ಕೊಡಬೇಕೆಂದು ಹೇಳುತ್ತಿದ್ದಾರೆ.

(ಶ್ರೀ ವಿ. ಎಂ. ದೇವ್)

ಸ್ವಾಮಿ ವಿವೇಕಾನಂದರು ಈ ರೀತಿ ಹೇಳುತ್ತಾರೆ.

"The mind of man is a reservoir of knowledge and that all knowledge, present, past or future, is within man in a state of manifestation or non-manifestation and the object of every system of education should be to help the mind to manifest it."

ಮನುಷ್ಯನ ಮನಸ್ಸಿಗೆ ಆಕಾಶವೇ ಲಿಮಿಟ್ಟು. ಇದರಲ್ಲಿ ಕಾಲಜ್ಞಾನವೂ ಇರಬೇಕೆಂದಿದೆ. Future ಒಂದೇ ಅಲ್ಲ; ಲಕ್ಷಾಂತರ ವರ್ಷಗಳ ಹಿಂದೆ ಏನಾಯಿತು ಎಂದು ತಿಳಿದುಕೊಳ್ಳಬಹುದು. ಈಗ present situation ಅನುಭವಕ್ಕೆ ತೆಗೆದುಕೊಂಡು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಒಬ್ಬ ಜಪಾನೀಸ್ ಗ್ರಂಥಕರ್ತೃ ಹೀಗೆ ಹೇಳುತ್ತಾರೆ:

"It is an established fact that the training of the intellect is not at all sufficient. The education of the Head without the training of the Heart increases one's power for evil, whereas the education of the Head along with the Heart increases one's power for good and this indeed is the true education."

ಅಂದರೆ ಎಜುಕೇಷನ್ ಕೊಟ್ಟುಬಿಟ್ಟರೆ ಬಲ ಬರುತ್ತದೆ. ಅದರಿಂದ ಆಗಬಾರದ್ದು ಆಗಬಹುದು; ಒಳ್ಳೆಯದು ಆಗಬಹುದು, ಕೆಟ್ಟದ್ದೂ ಆಗಬಹುದು. ಆದ್ದರಿಂದ ಅದಕ್ಕೆ ಸರಿಯಾದ ವಿದ್ಯೆ ಇರಬೇಕು, ಸರಿಯಾದ ವಿದ್ಯೆ ಇಲ್ಲದೆ ಹೋದರೆ ಅದು ವಿದ್ಯೆ ಆಗುವುದಿಲ್ಲ. ಅವಿದ್ಯೆ ಆಗುತ್ತದೆ. ಜಪಾನೀಸ್ ರೈಟರ್ ಹೇಳುವುದು ಸತ್ಯ. ಸರಿಯಾದ heart ಮತ್ತು head ಇವೆರಡನ್ನು ಹೊಂದುವುದೇ ನಿಜವಾದ ವಿದ್ಯೆ. ಇದರಮೇಲೆ ಒಂದು ಥೀಸೀಸ್ ಬರೆಯಬಹುದು. ಒಬ್ಬ ಮನುಷ್ಯ ಏನೂ ತಿಳಿಯದ ಮೂಢನಾಗಿರಬೇಕಾದರೆ, ಅದಕ್ಕೆ ಎಲ್ಲರೂ ಕಾರಣ. ಮನುಷ್ಯನ ಮನಸ್ಸಿಗೆ, ಜ್ಞಾನಕ್ಕೆ ಮಿತೀನೇ ಇಲ್ಲದೆ ಇರಬಹುದು. ಈ ಪಕ್ಷಕ್ಕೆ ಒಬ್ಬ ಮೂರ್ಖ ಮಂತ್ರಿಯೇ ಆಗಲಿ, ಒಬ್ಬ ಮೂರ್ಖ ಅಪೊಸಿಷನ್ ಮೆಂಬರೇ ಆಗಿರಲಿ, ಅದಕ್ಕೆ ಕಾರಣ ನಾವು ನೀವು. ಅದರ ಬಗ್ಗೆ ತಪ್ಪು ಎಲ್ಲರದೂ ಇದೆ, ಒಬ್ಬ ಮನುಷ್ಯನದಲ್ಲ. ಈ ದೃಷ್ಟಿಯಿಂದ ಪ್ರಪಂಚದಾದ್ಯಂತ ಇರುವುದನ್ನು ನೋಡುತ್ತಾ ಹೋದರೆ ಸಮಾಜವಾದ ತತ್ವದ ರೀತಿಯಲ್ಲಿ ಮುಂದಕ್ಕೆ ಹೋಗುವುದಕ್ಕೆ ದಾರಿ ಇರುತ್ತದೆ. ಈ ಅನುಕೂಲ ಬೇರೆ ಪದ್ಧತಿಗಳಲ್ಲಿ ಇಲ್ಲ. John Gunther, a great American Journalist ಬಂಡವಾಳಷಾಹಿ ರಾಷ್ಟ್ರಗಳಲ್ಲಿ ಏನಾಗಿದೆಯೆಂದು ಒಂದು ಕಡೆ ಹೀಗೆ ಹೇಳುತ್ತಾರೆ.

"Profound depravity and moral decay of every aspect of public life from music to sports, from animal life to the attitude towards science, from the understanding of religion to the approach to international affairs."

ಇದು ದೇಶಾದ್ಯಂತ ಇದೆ. ಇದು ನಮ್ಮ ದೇಶದಲ್ಲಿ ಸಾಕಾರರೂಪು ತೆಗೆದುಕೊಂಡಿದೆ. ಇರುವ ಪೊಸಿಷನ್ ತಿಳಿದುಕೊಂಡು, ಅದನ್ನು ಬಾಹ್ಯರೂಪದಲ್ಲಿ ಕಂಡುಕೊಂಡು ಹೋಗುವುದು ಒಳ್ಳೆಯದು. ನಮ್ಮ ದೇಶದಲ್ಲಿ ಒಟ್ಟಿನಲ್ಲಿ ಆಗಿರುವುದು ಇಷ್ಟೆ. Communalism ನಮ್ಮ ದೇಶದಲ್ಲಿ peculiar ಆಗಿ ಇರುತ್ತದೆ. ಈ ಶಕ್ತಿ ಭಾರತೀಯ ಮನುಷ್ಯನಲ್ಲಿರುತ್ತದೆ. ಈ ಜಾತೀಯತೆಯ ದೈತ್ಯತೆ ಸಾಕಾರ ಇರುವುದನ್ನು ಇಲ್ಲಿ ನೋಡಿದ್ದೇವೆ. ವೀರಶೈವರಿಗೆ ಸಹಾಯಮಾಡಿ, ಒಕ್ಕಲಿಗರಿಗೆ ಬಹಳ ಅನ್ಯಾಯಮಾಡುತ್ತಿದ್ದಾರೆ ನಮ್ಮ ಕಂಠಿ ಸಾಹೇಬರು, ಅವರು ನ್ಯಾಯ ಬಾಹಿರರಾದವರು ಎಂದು ಅರ್ಥ ಬರುವ ಹಾಗೆ ಕೆಲವರ ಮಾತುಗಳಲ್ಲಿ insinuation ಇತ್ತು. ಇನ್ನೂ ಒಂದು ಏನೆಂದರೆ ಸ್ಕೂಲು ಕಾಲೇಜುಗಳಿಗೆ ಮುಖ್ಯಾಧಿಕಾರಿಗಳಾಗಿ ಒಕ್ಕಲಿಗೇತರರು ಇರುವುದು ಒಳ್ಳೆಯದಲ್ಲ ಅಂದ ಹಾಗಾಯಿತು. ಶ್ರೀ ಕಂಠಿಯವರು ಖಾಸಗಿ ಸಂಸ್ಥೆಗಳಿಗೆ ಉತ್ತೇಜನ ಕೊಡುವುದರಲ್ಲಿ, ಸುತ್ತೂರು ಮಠಕ್ಕೆ ಸಹಾಯ ಮಾಡಿದ್ದಾರೆಂದು ಕೆಲವರ ವಾದದಲ್ಲಿ ಈ ಒಂದು insinuation ಇತ್ತು. ಇದರಲ್ಲಿ ಅಪೋಜಿಷನ್ ಲೀಡರೂ ನಾವೂ ಕಾನ್‌ಸರ್ಟೆಡ್ ಅಲ್ಲಾಟ್ ಮಾಡಬೇಕಾಗಿತ್ತು. ವಿದ್ಯಾಮಂತ್ರಿಗಳು 'ಪೆಬ್ಬೆಬ್ಬೆ' ಅಂದರು. ಆಗಿಹೋಯಿತು, ನಾನು ಇರಲಿಲ್ಲ. ಅವರಮೇಲೆ ಅಪಪ್ರಚಾರ ಮಾಡಿದವರು. They are broken down. It is nerve racking and fearful. If there is anything you give specific points and accuse, else it is cowardice—ನಮ್ಮ ವಿದ್ಯಾ ಮಂತ್ರಿಗಳಿಗೋ ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಬರುವದಿಲ್ಲ. ಮಧ್ಯೆ ಮಧ್ಯೆ ಬಾಯಿ ಹಾಕಿ ಏನೋನೋ ಹೇಳುತ್ತಾರೆ. ಅವರು ಬರೀ

''ಬೆಳ್ಳುಳ್ಳಿ ಶಿವ''. ಗಂಭೀರವಾಗಿ ಕೂತುಕೊಂಡು ಕೇಳಿ points ಎಲ್ಲಾ ನೋಟು ಮಾಡಿಕೊಂಡು, ಆಮೇಲೆ ಸಮಂಜಸವಾದ ಉತ್ತರ ಕೊಟ್ಟರೆ ಸರಿಯಾಗಿರುತ್ತದೆ. ಅದು ಬಿಟ್ಟು ಎತ್ತೆತ್ತಲೋ ಮಾತನಾಡುತ್ತಾರೆ. ಅದು ಎತ್ತೆತ್ತಲೋ ಆಗುತ್ತದೆ. Apart from that ಒಟ್ಟಿನಲ್ಲಿ ಆಗಬೇಕಾದುದು ಇಷ್ಟೆ. ಇದರಲ್ಲಿ ವಾಸ್ತವಾಂಶ ಎಷ್ಟಿದೆ ಎಂಬುದನ್ನು ನೋಡಿ, ಇದಕ್ಕೆ ಪರಿಹಾರ ಹುಡುಕಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಬಹಳ ಸ್ವಾರಸ್ಯವಾಗಿದೆ.

ಶ್ರೀ ವಿ. ಎಂ. ದೇವ್.—ಆದರೂ ನೀವೆಲ್ಲಾ ಮಾತನಾಡುವುದಕ್ಕೆ ವೇಳೆ ಕೊಡಿಸುವುದಿಲ್ಲವಲ್ಲಾ.

Mr. SPEAKER.—The Hon'ble Member has got two minutes. If he wants to lose it by conversation with Sri Muckannappa, I have no objection. He may carry on the conversation and I will call upon some other Member... ..

ಶ್ರೀ ವಿ. ಎಂ. ದೇವ್.—ಒಟ್ಟಿನಲ್ಲಿ ಇದು ಒಂದೇ ಒಂದು ರಂಗದಲ್ಲಿ ಆಗಿದೆ. Insinuation ಕೆಟ್ಟದ್ದು. ಇಲ್ಲಿ ಹೀಗೆ ಮಾತನಾಡಿದರೆ ಜನಗಳ ಟೀಕೆಗೆ ನಾವೂ ನೀವೂ ತುತ್ತಾಗುತ್ತೇವೆ. ಶ್ರೀ ಬುದ್ಧದಾಸ್ ಪಾರ್ಲಿಮೆಂಟರಿ ಸೀಟಿಗೆ ನಿಂತಾಗ ನಾನೂ ಅವರ ಜೊತೆ ಬೈಎಲೆಕ್ಷನ್ ಪ್ರಾಪಗ್ಯಾಂಡಾಕ್ಕೆ ಹೋಗಿದ್ದೆ. ಶ್ರೀಮಾನ್ ಜೆ. ಬಿ. ಮಲ್ಲಾರಾಧ್ಯರ ಸ್ಟೇಟ್‌ಮೆಂಟ್ ನನಗೆ ಗೊತ್ತಿದೆ. ಅವರು ಇಲ್ಲಿ ಕುಳಿತುಕೊಂಡು ಎಲ್ಲಾ ಶ್ರೀ ಬುದ್ಧದಾಸ್ ಅಲ್ಲಿ ಹೇಳಿದ್ದನ್ನೇ ಹೇಳುತ್ತಾ ಇದ್ದರೆ......

Mr. SPEAKER—Do not drag in Members of the other House. They are not here to defend themselves.

ಶ್ರೀ ವಿ. ಎಂ. ದೇವ್.—ಶ್ರೀ ಬುದ್ಧದಾಸರ ಹೇಳಿಕೆಯಲ್ಲಿ ಬುರುಡೆ ಇಲ್ಲ. ಅವರ ಕೊಟ್ಟ ಸ್ಟೇಟ್‌ಮೆಂಟ್ ಇವರೂ ಕೊಟ್ಟಿರುವುದು. ಇದರಿಂದ ಏನು ಆಗುತ್ತಿದೆಯೆಂದರೆ character assassination. ಈವಾಗ ಮುಖ್ಯವಾಗಿ ಬಂದಿರುವ ವಿಷಯ ಹೇಳುತ್ತೇನೆ. ಕಾಲೇಜ್ ಡೈರೆಕ್ಟರನ್ನು ನೋಡುವುದಕ್ಕೆ ನಿನ್ನೆ ಹೋಗಿದ್ದೆ. ಅವರನ್ನು meet ಮಾಡುವುದಕ್ಕೆ ಆಗಲಿಲ್ಲ. ಯೂನಿವರ್ಸಿಟಿಯಲ್ಲಿ ಬಹಳ ಜನರನ್ನು meet ಮಾಡಿದೆ.

ನಾನು ಹೇಳುವುದು ಇಷ್ಟೆ. ವಿದ್ಯೆಗೆ ಪುರಸ್ಕಾರ ಇಲ್ಲದೆ ಯಾವುದೂ ಬೆಳೆಯುವುದಿಲ್ಲ. ನಾನು ಕೇಳಬೇಕೆಂದಿರುವುದೇನೆಂದರೆ ಮುಂಚೆ ರೀವ್ಯಾಲ್ಯುಯೇಷನ್ ಇತ್ತು. ರೀಎಕ್ಸಾಮಿನೇಷನ್‌ಗೆ ಅವಕಾಶ ಇತ್ತು. ಅದರಿಂದ ಪ್ರಯೋಜನವೂ ಇರುತ್ತಿತ್ತು. ಈಗ ಎಲ್ಲಾ ಹಾಳಾಗಿ ಹೋಗುತ್ತಿದೆ. ಮಾಡಬಾರದ ಕೆಲಸ ಮಾಡಿ ಎಂದು ಇವರು ಹೇಳುವುದು, ಅವರು ಮಾಡುವುದು, ಏಟಿಗೆ ಸಿಕ್ಕಿ ಹಾಕಿಕೊಳ್ಳುವುದು, ಇವರು ತಪ್ಪಿಸಿಕೊಳ್ಳುವುದು. ಹೀಗೆಲ್ಲಾ ವಿಪರೀತ ಪರಿಸ್ಥಿತಿ ಉಂಟಾಗುತ್ತದೆ. ಈ ರೀತಿ ಮಾಡದೇ ಅವರು ಮಾಡಬೇಕಾದ ಕೆಲಸ ಸರಿಯಾಗಿ ಮಾಡದಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಮೊನ್ನೆ ಯೂನಿವರ್ಸಿಟಿಗೆ ಹೋಗಿದ್ದಾಗ ಇಷ್ಟೇ ಸೀಲಿಂಗ್‌ವಾಕ್ಸ್ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ ಎಂದು ಹೇಳಿದರು. ಇದು ದೊಡ್ಡ ಮನುಷ್ಯ ತನವಲ್ಲ. ಆ ಪತ್ರ ವ್ಯವಹಾರವೆಲ್ಲಾ ಇದೆ. ಇದು ನಗೆಪಾಟಲಾಗುತ್ತದೆ ಎಂದು ಹೇಳುತ್ತೇನೆ. ರೀ ವ್ಯಾಲ್ಯುಯೇಷನ್ ಇರಬೇಕು, ರೀಎಗ್ಜಾಮಿನೇಷನ್ ಇರಬೇಕು.

ಶ್ರೀಮತಿ ನಾಗರತ್ನಮ್ಮ ಹಿರೇಮಠ್‌ರವರು ' ಕೆನ್ನೆಗೆ ಕೆನ್ನೆ ಹಚ್ಚಿ ' ಅಂತ ಅನ್ನುವ ಒಂದು ಪಾಠ ಪಬ್ಲಿಷ್ ಆಗಿದೆ ಎಂದು ಹೇಳಿದರು. ಅದನ್ನೆಲ್ಲಾ ಬಿಟ್ಟು ಏನು ಮಾಡಬೇಕು ಎಂದು ಹೇಳಿದರೆ ಅಂಥಾ ಕೆಲವು Sex ವಿಚಾರ ತೆಗೆದು ಹಾಕಿ ಎಂದು ಹೇಳುವುದಿಲ್ಲ. ಕುಡುಕತನದಿಂದ ಅಂಗ ವಿಕಲರಾದ ಮಕ್ಕಳು ಹುಟ್ಟುತ್ತಾರೆ ಎಂದು ಸಿದ್ಧಾಂತವಾಗಿದೆ. ಅಂತಹ ಟೆಕ್ಸ್ಟ್‌ಬುಕ್ಸ್ ಇಡಬಾರದು. ಸಂಸ್ಕೃತಿಯ ಕೆಲವು ಕಾರ್ಯಕ್ರಮಗಳನ್ನು ಇಡಬೇಕು. ಇಲ್ಲದೇ ಇದ್ದರೆ ಸಂಸ್ಕೃತಿ ಮುಂದುವರಿಯಲಿಕ್ಕೆ ಅವಕಾಶವಾಗುವುದಿಲ್ಲ.

Mr. SPEAKER.—The Hon'ble Member's time is over. I must ask him to resume his seat.

Sri V. M. DEO.—Sir, the Chair's order has to be obeyed and I do so. But I have to say that the Chair has disappointed the whole House.

Mr. SPEAKER.—I will try to apportion time at the rate of five minutes in order to accomodate as many Hon'ble Members as possible.

† **ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೇಬಿಹಾಳ್).**—ಮಾನ್ಯ ಸಭಾಪತಿಗಳೇ ಈಗ ನಮ್ಮ ಮುಂದೆ ಇರತಕ್ಕ ವಿದ್ಯಾ ಖಾತೆಯ ಸಲುವಾಗಿ ಮಾನ್ಯಸದಸ್ಯರು ಹೇಳಿದಂತೆ ಇದನ್ನು ಈ ಸಭೆ ಅತಿ ಆನಂದದಿಂದ ಬರಮಾಡಿಕೊಳ್ಳಬೇಕಾಗಿತ್ತು. ಆದರೆ ರಾಜ್ಯದಲ್ಲಿ ಏನೋ ಒಂದು ಅನಾಹುತ ನಡೆದಿದೆ ಎಂದು ಹೇಳಿ ಇಲ್ಲದ ಆರೋಪಗಳನ್ನು ಮಾಡುತ್ತಾ, ವಿದ್ಯಾ ಇಲಾಖೆ, ವಿದ್ಯೆ ಎಷ್ಟು ಮಹತ್ವವಾದದ್ದು, ಪವಿತ್ರವಾದದ್ದು ಎನ್ನುವಂಥಹದನ್ನು ಮರೆತು, ಯಾವುದೋ ಒಂದು ಹಾಸ್ಯಾಸ್ಪದವಾದ ರೀತಿಯಲ್ಲಿ ಈ ಮಹತ್ವವಾದಂಥ ಪವಿತ್ರವಾದಂಥ ಖಾತೆಯನ್ನು ನೋಡುತ್ತಾ ಇದ್ದಾರೆಯಲ್ಲಾ ಎಂಬುದು ಎಲ್ಲರಿಗೂ ವ್ಯಥೆ ಆದಂಥಾ ಮಾತು; ನಮ್ಮ ಹಿಂದೂಸ್ತಾನ ಸ್ವತಂತ್ರವಾದ ಮೇಲೆ ನಮ್ಮ ಮುಖ್ಯ ಗುರಿ, ನಮ್ಮ ಹೋರಾಟ ಅಜ್ಞಾನವನ್ನು ತೊಡೆದು ಹಾಕುವುದರ ಸಲುವಾಗಿ ಮತ್ತು ನಮ್ಮ ಸಂಪತ್ತನ್ನು ಹೆಚ್ಚು ಮಾಡುವುದರ ಸಲುವಾಗಿ ಹಾಗೂ ಬಡತನವನ್ನು ನೀಗುವುದರ ಸಲುವಾಗಿ ಇದ್ದಿತೇ ಹೊರತು ಒಂದು ಗುಂಪನ್ನು ಕಟ್ಟಿಕೊಂಡು ಅಥವಾ ಯಾವುದಾದರೂ ಒಂದು ಜನಾಂಗಕ್ಕೆ ಅನ್ಯಾಯ ಮಾಡುವಂತಹ ಒಂದು ಇರಾದೆಯನ್ನು ಕಲ್ಪಿಸಿಕೊಂಡು ಈ ಸ್ವತಂತ್ರ್ಯವನ್ನು ಪಡೆಯಲಿಲ್ಲ. ನಾವು ಸ್ವಾತಂತ್ರ್ಯ ಪಡೆದೆವು. ಅಷ್ಟೇ ಅಲ್ಲ ಒಂದು ರಾಜ್ಯದಲ್ಲಿ ಭಾಗವಾಗಿ ಅಥವಾ ಭಿನ್ನವಾಗಿ ಹೋಗಿ ಎಲ್ಲೋ ನೆಲಸಿದಂಥ ಜನ ಏನಿತ್ತು ಅವರನ್ನು ಈಗ ಒಂದುಗೂಡಿಸಿ ಇಡೀ ಕರ್ನಾಟಕ ಏಕೀಕರಣವಾಗಬೇಕು, ನಮ್ಮ ಸಾಂಪತ್ತಿಕಸ್ಥಿತಿ ಸುಧಾರಿಸಬೇಕು, ಅಜ್ಞಾನ ಹೋಗಬೇಕೆಂಬ ಇರಾದೆಯಿಂದ ನಮ್ಮ ಮಹಾನಾಯಕರು ಮತ್ತು ಹಿರಿಯರು ಬಡಿದಾಡಿ ಈಗ ರಾಜ್ಯವನ್ನು ಒಂದುಗೂಡಿಸಿದ್ದಾರೆ. ಒಂದುಗೂಡಿಸಿದ್ದರ ಫಲವನ್ನು ನಾವು ಇಂದು ಉಣ್ಣಬೇಕಾಗಿದೆ. ಒಂದುಗೂಡಿಸಿದೆವು ಎಂದ ಮೇಲೆ ನಾವು ನಮ್ಮಲ್ಲಿದ್ದಂಥ ನ್ಯೂನತೆಗಳನ್ನು ಮರೆಯಬೇಕು. ನಾವು ಅಣ್ಣ ತಮ್ಮಂದಿರು ಎಂಬ ಭಾವನೆಯಿಂದ ಹೊಂದಿಕೊಳ್ಳಬೇಕು. ಅಣ್ಣ ತಮ್ಮಂದಿರಂತೆ ನಾವೆಲ್ಲರೂ ಹಿಂದೆ ಇದ್ದವರು. ನಾವು, ಇವರು ನಮ್ಮವರು ಎಂಬ ಭಾವನೆ ಸಾವಿರಾರು ವರ್ಷಗಳ ಹಿಂದೆ ಏನಿತ್ತು ಇತ್ತೀಚೆಗೆ ಅದು ನಮ್ಮಲ್ಲಿ ಮಾಯವಾಗಿ ಹೋಗಿತ್ತು. ಅದನ್ನು ತಿರುಗಿ ನಮ್ಮ ಕಲ್ಪನೆಗೆ ತಂದುಕೊಟ್ಟಂಥ ನಮ್ಮ ಹಿರಿಯರಿಗೆ ಮನ್ನಣೆ ಮಾಡಬೇಕಾಗಿದೆ ಏಕೆಂದರೆ ಮೈಸೂರು ರಾಜ್ಯ ಒಂದಾನೊಂದು ಕಾಲಕ್ಕೆ ಒಂದೇ ಕರ್ನಾಟಕ ರಾಜ್ಯವಾಗಿತ್ತು, ಯಾವುದೋ ಶಕ್ತಿಯ ದೆಶೆಯಿಂದ ಅದು ಭಿನ್ನವಾಗಿ ನಾವೆಲ್ಲರೂ ಅಣ್ಣ ತಮ್ಮಂದಿರು ಎಂಬುದನ್ನು ಮರೆತಿದ್ದೆವು. ಕುಂತಿಯು ಕರ್ಣನಿಗೆ ಅರ್ಜುನನು ತಮ್ಮನಾಗಬೇಕೆಂಬುದನ್ನು ಪರಿಚಯ ಮಾಡಿಕೊಟ್ಟಂತೆ ಆಗಿದೆ. ಇದರ ಮೂಲ ಉದ್ದೇಶ ನಮ್ಮ ಅಜ್ಞಾನತನ ತೊಲಗಿ ಜನದ ಸಾಂಪತ್ತಿಕ ಸ್ಥಿತಿ ಸುಧಾರಿಸಬೇಕು ಎಂಬುದಕ್ಕಾಗಿ ಹೋರಾಟವೇ ವಿನಾ ಮತ್ತಾವುದಕ್ಕೂ ಹೋರಾಟ ಇರಲಿಲ್ಲ. ಎಷ್ಟೋ ತ್ಯಾಗ ಮಾಡಿದ್ದೇವೆ. ಅದರ ಶ್ರೇಯಸ್ಸನ್ನು ಈಗ ನಾವು ಪಡೆದುಕೊಳ್ಳಬೇಕಾಗಿದೆ. ಆದ್ದರಿಂದ ಈಗ ನಮ್ಮ ರಾಜ್ಯದಲ್ಲಿ ಈ ವಿದ್ಯಾ ಇಲಾಖೆ ಅಲ್ಲೋಲ ಕಲ್ಲೋಲವನ್ನುಂಟುಮಾಡಿದೆ ಎನ್ನುವಂತಹ ಮಾತಿನಲ್ಲಿ ಎಳ್ಳಷ್ಟು ಕೂಡ ನಿಜವಿಲ್ಲ. ನಿಜವಾಗಿಯೂ ನೋಡಿದರೆ ನಾವು ನಮ್ಮ ಹಿಂದಿನ ಇತಿಹಾಸ ನೋಡಿದರೆ ಈ ಹತ್ತು ವರ್ಷದಲ್ಲಿ ಎಷ್ಟೊಂದು ಪ್ರಗತಿ ಸಾಧಿಸಿದ್ದೇವೆಯೋ ಅದಕ್ಕಿಂತ ಮಿಗಿಲಾಗಿ 1962-63ನೇ ಸಾಲಿನಲ್ಲಿ ಹೇಳಲಾರದಷ್ಟು ಪ್ರಗತಿಯಾಗಿ, ಮುನ್ನಡೆ ನಡೆದಿದ್ದೇವೆ. ನಮ್ಮ ವಿದ್ಯಾ ಇಲಾಖೆ ಮುಂದೆ ಹೋಗಬೇಕು ಜನರಲ್ಲಿ ಇದ್ದಂಥ ಅಜ್ಞಾನತನ ತೊಲಗಬೇಕೆಂದರೆ overnight change ಮಾಡಲಿಕ್ಕೆ ಬರುವುದಿಲ್ಲ. ಎಷ್ಟು ಜನಗಳು ಇಷ್ಟು ಕಾಲದಿಂದ ವಿದ್ಯೆ ಪಡೆದಿದ್ದೇವೆ? ವಿದ್ಯಾ ಸಂಸ್ಥೆಗಳು ಒಂದು ಉನ್ನತ ಮಟ್ಟಕ್ಕೆ ಹೋಗಬೇಕಾದರೆ ನಮ್ಮಲ್ಲಿರತಕ್ಕ ಒಂದು ಕುಶಲತೆ ಮುಖ್ಯ. ಅದು ಬರೀ ಸರ್ಕಾರದ ಕೆಲಸ, ಸರ್ಕಾರದ ಜವಾಬ್ದಾರಿ ಆಗಿನಸರ್ಕಾರ ಅದು ಮಾಡಲಿಲ್ಲ. ಇದು ಮಾಡಲಿಲ್ಲ ಎನ್ನುವಂತಹದು ಹೇಳುತ್ತೇವೆ. ನಿಜವಾಗಿಯೂ ನಾವು ಮಾಡಬೇಕಾದ ಕಾರ್ಯ ಮಾಡುತ್ತಾ ಇದ್ದೇವೆಯೇ ಎಂಬುದನ್ನು ಯೋಚನೆಮಾಡಬೇಕಾಗಿದೆ, ಈ ಕಾಲದಲ್ಲಿ ಮಾನ್ಯ ಸದಸ್ಯರು ಸರ್ಕಾರ ಮಾಡಲಿಲ್ಲ ಎಂದು ಹೇಳುತ್ತಾರೆ. ಹೌದು, ನಾವು ಏನು ಮಾಡಬೇಕಾಗಿದೆಯೋ ಅದನ್ನು ಮಾಡಿದ್ದೇವೆಯೇ; ಯಾವುದೋ ಒಂದು ಕಾಲದಲ್ಲಿ ಬ್ರಿಟಿಷರ ಆಡಳಿತದಲ್ಲಿ ಇದ್ದೆವು ಅಥವಾ ರಾಜ ಮಹಾರಾಜರ ಆಡಳಿತದಲ್ಲಿ ಇದ್ದೆವು ಅವರಿಗೆ ಮಾಡಿದಂಥ ಆರೋಪ ಮಾಡಬೇಕೇ ಎಂಬುದನ್ನು ವಿಚಾರ ಮಾಡಬೇಕಾಗಿದೆ. ಈಗ ಸಾಧಿಸಬೇಕು ಅನ್ನುವಂಥದು ಬಹಳ ಇದೆ. ಸಾಧಿಸಿರುವುದು ಬಹಳ ಅಲ್ಪ ಎನ್ನುವುದನ್ನು ಎಲ್ಲ ಸದಸ್ಯರೂ ಗಮನದಲ್ಲಿಟ್ಟುಕೊಳ್ಳಬೇಕು. ನಮ್ಮಲ್ಲಿ ಇದ್ದಂಥ ಅಜ್ಞಾನತನ ಹೋಗಬೇಕಾಗಿದೆ. ನಿರುದ್ಯೋಗತನ ಹೋಗಬೇಕಾಗಿದೆ. ಇದು ಹೋಗಬೇಕಾದರೆ ಒಂದು ಸತತವಾದ ಶ್ರೇಷ್ಠತರ ಮಾರ್ಗ ಎಂದರೆ ವಿದ್ಯಾಭ್ಯಾಸ. ಅದಕ್ಕೇ ನಮ್ಮ ರಾಜ್ಯದ ಹಿರಿಯರು ಅದರಲ್ಲೂ ವಿದ್ಯಾಭ್ಯಾಸದ ಸಲುವಾಗಿ ಹೆಚ್ಚು ಕಳಕಳಿಯಿಂದ ಮೊದಲಿನಿಂದಲೂ ದುಡಿಯುತ್ತಾ ಬಂದಿದ್ದಾರೆ, ತಜ್ಞರು ಒಂದು ಯೋಜನೆಯನ್ನು ತಯಾರುಮಾಡಿ, ನಮ್ಮ ರಾಜ್ಯಕ್ಕೆ ಯಾವ ಯೋಜನೆ ಅನ್ವಯಿಸುತ್ತದೆಯೋ ಅದನ್ನು ನಿರೂಪಿಸಿ ಈಗ ನಮ್ಮ ಮುಂದೆ ಕೆಲವು ಯೋಜನೆಗಳನ್ನು ಇಟ್ಟಿದ್ದಾರೆ. ಅವುಗಳಲ್ಲಿ ಕೆಲವೊಂದು ದೋಷಪೂರಿತವಾಗಿರಬಹುದು ಅಥವಾ ಶ್ರೇಯಸ್ಸಿಗೆ

ಒಯ್ಯದೇ ಇರಬಹುದು ; ಅಂದಮಾತ್ರಕ್ಕೆ ಎಲ್ಲವೂ ಹಾಸ್ಯಾಸ್ಪದವಾದವು ಅಥವಾ ಕೆಳ ಮಟ್ಟಕ್ಕೆ ಹೋಗುವಂಥವು ; ಈ ವಿದ್ಯಾಭ್ಯಾಸದಲ್ಲಿ ಅನುಕೂಲತೆಯೇ ಇಲ್ಲ ಎಂದು ಹೇಳಲಿಕ್ಕೆ ಆಗುವುದಿಲ್ಲ. ನ್ಯೂನತೆ ಇದ್ದ ಪಕ್ಷದಲ್ಲಿ ನಾವು ನೀವು ಎಲ್ಲರೂ ಪರಿಹರಿಸಬೇಕಾಗಿದೆ. ನಮ್ಮ ದೇಶದಲ್ಲಿ ಮೊದಲಿನಿಂದಲೂ ಕಂಪಲ್‌ಸರಿ ಪ್ರೈಮರಿ ವಿದ್ಯಾಭ್ಯಾಸಕ್ಕೆ ಪ್ರಾಮುಖ್ಯಕೊಟ್ಟಿದ್ದಾರೆ. ಅದನ್ನು ಸಾಧಿಸುವಾಗ ಎಲ್ಲರ ಸಹಕಾರಬೇಕು. ಇವತ್ತು ವಿದ್ಯಾಭ್ಯಾಸದ ಮೂಲ ಉದ್ದೇಶ ಏನಿದೆ ಅದು ಪ್ರಗತಿಪರವಾಗಿ ನಡೆಯಬೇಕಾದರೆ ಅದಕ್ಕೆ ತಕ್ಕಂಥ ಒಂದು ಶಿಬ್ಬಂದಿ ತಯಾರುಮಾಡಬೇಕು. ಅದಕ್ಕೆ ತಕ್ಕಂಥ ಶಾಲೆ ಮತ್ತು ಮಕ್ಕಳು ಕುಳಿತುಕೊಳ್ಳಲಿಕ್ಕೆ ಒಂದು ಕಟ್ಟಡ ನಿರ್ಮಾಣ ಮಾಡಬೇಕಾಗಿದೆ. ಈ ಮೂರು ಒಂದಕ್ಕೆ ಒಂದು ಸಮಭಾಗವಾಗಿ ನಡೆಯಬೇಕಾಗಿದೆ. ಇಂದು ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಾ ಇದೆ ಎಂಬ ಮಾತನ್ನು ಎಲ್ಲರೂ ಹೇಳುತ್ತಾರೆ. ಆದರೆ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಶಿಕ್ಷಕರು ತಯೂರಾಗಿಲ್ಲ. ತಯೂರಾಗಬೇಕಾಗಿದೆ.

ಅದರಂತೆ ನಮಗೆ ವಿದ್ಯಾಕಟ್ಟಡಗಳಿಗೆ ಸ್ಥಳವಿಲ್ಲ ; ಕಟ್ಟಡಗಳಿಲ್ಲ ಅನ್ನುವುದೇ ಒಂದು ದೊಡ್ಡ ಸಮಸ್ಯೆಯಾಗಿದೆ ; ಇದನ್ನು ಯಾವ ರೀತಿ ಬಗೆಹರಿಸಬೇಕು ಎಂಬುದನ್ನು ಪರಿಶೀಲಿಸಬೇಕಾಗಿದೆ. ಮಕ್ಕಳು ಕುಳಿತುಕೊಳ್ಳಲು ಶಾಲೆಗಳಲ್ಲಿ ಸಾಕಷ್ಟು ಸ್ಥಳವಿಲ್ಲ, ಕೆಲವು ಶಾಲಾ ಕಟ್ಟಡಗಳು ಈಗಲೋ ಆಗಲೋ ಬೀಳತಕ್ಕ ಸ್ಥಿತಿಯಲ್ಲಿವೆ, ಎಂತ ಹೀಗೆಲ್ಲ ಹೇಳುವುದು ಸರಿಯಲ್ಲ. ಆದರೆ ನಮ್ಮ ಪೂರೈಕೆಗೆ ಸಾಕಾಗುವಷ್ಟು ನಮ್ಮ ಆರ್ಥಿಕ ಸಂಪತ್ತನ್ನು ನಾವಿನ್ನೂ ಸರಿಯಾಗಿ ದೊರಕಿಸಿಕೊಂಡಿಲ್ಲ. ಈ ದೃಷ್ಟಿಯಿಂದ ನಮ್ಮಲ್ಲಿ ಎಷ್ಟು ವಿದ್ಯಾಭಿವೃದ್ಧಿಯಾಗಬೇಕೋ ಅಷ್ಟಾಗಿಲ್ಲ ಎಂಬುದು ಅದು ಬೇರೆ ಆಯಿತು.

ಆದರೆ ಈಗ ನಮ್ಮ ಪ್ರಾಥಮಿಕ ಶಾಲೆಗಳಲ್ಲಿ ಇರತಕ್ಕ ಹುಡುಗರ ಸಂಖ್ಯೆಗೂ ಅಧ್ಯಾಪಕರ ಸಂಖ್ಯೆಗೂ ಹೋಲಿಕೆ ಮಾಡಿದರೆ ಒಬ್ಬ ಅಧ್ಯಾಪಕರಿಗೆ 40 ಹುಡುಗರು ಇರಬೇಕೆಂತ ಹೇಳಿದೆ. ನನ್ನ ದೃಷ್ಟಿಯಲ್ಲಿ ಇದಿನ್ನೂ ಕಡಮೆಯಾಗಬೇಕು. ಏಕೆಂದರೆ ಪ್ರಾಥಮಿಕ ಶಾಲೆಗಳಲ್ಲಿ 40 ವಿದಾರ್ಥಿಗಳನ್ನು ಕಂಟ್ರೋಲ್ ಮಾಡತಕ್ಕ ಶಕ್ತಿ ಒಬ್ಬ ಅಧ್ಯಾಪಕರಿಗಿರುವುದಿಲ್ಲ. ಆದರೆ ಈ ವ್ಯವಸ್ಥೆಯನ್ನು ಕಾಲೇಜು ಮಟ್ಟದಲ್ಲಿ ಮಾಡಬಹುದು. ಆದರೆ ಪ್ರಾಥಮಿಕ ವಿದ್ಯಾಭ್ಯಾಸದ ಸ್ಟೇಜಿನಲ್ಲಿ ಒಬ್ಬ ಅಧ್ಯಾಪಕರು 40 ಜನ ಹುಡುಗರಿಗೆ ವಿದ್ಯೆ ಕಲಿಸುವುದೆಂದರೆ ಅದು ಸಾಧ್ಯವಿಲ್ಲದ ಮಾತು. ಈ ಶಾಲೆಗಳಿಗೆ ಬರತಕ್ಕ ಹುಡುಗರ ವಯಸ್ಸು ಬಹಳ ಕಡಮೆ ಇರುತ್ತದೆ. ಇವರನ್ನು ಸರಿಯಾಗಿ ಮಾರ್ಪಾಡು ಮಾಡಲು ಅವಕಾಶ ಆಗುವುದಿಲ್ಲ. ಈ ಹುಡುಗರನ್ನು ಒಂದು ಸುವ್ಯವಸ್ಥಿತ ರೀತಿಯಲ್ಲಿ ಮಾರ್ಪಾಡು ಮಾಡಬೇಕಾಗಿದ್ದರೆ ಆ ಅಧ್ಯಾಪಕರು ಸಾಕಷ್ಟು ಉತ್ತೇಜನ-ಉತ್ಸಾಹಗಳನ್ನು ತೆಗೆದುಕೊಳ್ಳಬೇಕು. ಹೆಚ್ಚು ಜನ ವಿದ್ಯಾರ್ಥಿಗಳಿದ್ದರೆ ಹಾಗೆ ಉತ್ತೇಜನದಿಂದ ಪಾಠ ಹೇಳುವುದಕ್ಕೆ ಆಗುವುದಿಲ್ಲ.- ಈ ಹುಡುಗರ ಸಂಖ್ಯೆ ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಇನ್ನೂ ಹತ್ತಿಪ್ಪತ್ತು ಹೆಚ್ಚಾಗಿದ್ದರೂ ಫರವಾಇಲ್ಲ. ಅಲ್ಲಿಯ ಪರಿಸ್ಥಿತಿಗೂ ಪ್ರಾಥಮಿಕ ಶಾಲಾ ಪರಿಸ್ಥಿತಿಗೂ ವ್ಯತ್ಯಾಸವಿರುತ್ತದೆ. ಆದ್ದರಿಂದ ಪ್ರಾಥಮಿಕ ಶಾಲೆಗಳಲ್ಲಿ ಒಬ್ಬ ಉಪಾಧ್ಯಾಯರಿಗೆ ಈಗ ನಿಗದಿ ಮಾಡಿರತಕ್ಕ ಹುಡುಗರ ಸಂಖ್ಯೆಯನ್ನು ಕಡಮೆ ಮಾಡಿದರೆ ಒಳ್ಳೆಯದೆಂದು ನನ್ನ ಅಭಿಪ್ರಾಯವಾಗಿದೆ.

ಇನ್ನು ಈ ಅಸೆಂಬ್ಲಿಯಲ್ಲಿ ಶಾಲಾ ಬಿಲ್ಡಿಂಗುಗಳ ವಿಚಾರ ಬಹಳ ಮುಖ್ಯವಾಗಿ ಚರ್ಚೆಗೆ ಬಂದಿದೆ. ಹಳೇ ಮೈಸೂರು ರಾಜ್ಯದಲ್ಲಿ ನಮ್ಮವರು ಹಿಂದೆ ಈ ಪ್ರಾಥಮಿಕ ಹಾಗೂ ಇತರ ಮಟ್ಟದಲ್ಲಿ ವಿದ್ಯೆಗೆ ಬಹಳ ಅನುಕೂಲತೆಗಳನ್ನು ಮಾಡಿಕೊಟ್ಟಿದ್ದಾರೆ. ಆದರೆ ಎರಡನೇ ಕಡೆ ಸರ್ಕಾರದವರನ್ನು ಕಾಡದೆ ಅವರೇ ಈ ವಿದ್ಯೆಯ ಪ್ರಸಾರವನ್ನು ಬೆಳಸಿಕೊಂಡು ಬಂದಿದ್ದಾರೆ. ಈ ವಿಚಾರದಲ್ಲಿ ನಾವು ಸದಾ ಎರಡನೆಯವರನ್ನ ಕಾಡಿ ಈ ವಿದ್ಯಾಭ್ಯಾಸವನ್ನು ಮುಂದುವರಿಸಬೇಕೆಂದರೆ ಅದು ಆಗದ ಮಾತು. ಇದಕ್ಕೆ ಜನರೂ ಕೂಡ ತ್ಯಾಗ ಮಾಡಲೇಬೇಕು. ಸರ್ಕಾರವೇ ಪ್ರತಿಯೊಂದು ಬಾಬಿಗೂ ಬೆಂಬಲ ಕೊಡಬೇಕೆಂದರೆ ಅದು ಆಗದಮಾತು. ಬರಿ ಸರ್ಕಾರದವರ ನೆರವನ್ನೇ ಅವಲಂಬಿಸಿ ಕುಳಿತಲ್ಲಿ ನಾವು ಇನ್ನೂ ಎಷ್ಟು ವರ್ಷಗಳ ಕಾಲ ಹೀಗೇ ಕುಳಿತಿರಬೇಕೋ ಅದನ್ನು ಹೇಳುವುದಕ್ಕಾಗುವುದಿಲ್ಲ. ಈಗ ನಾವು ರಷ್ಯಾ-ಅ-ಚೈನಾ ವಿಚಾರವನ್ನು ತೆಗೆದುಕೊಳ್ಳೋಣ. ಅಲ್ಲಿನಂತೆ ನಾವು ಇಲ್ಲಿಯೂ ಹೆಚ್ಚು ದುಡ್ಡನ್ನು ಖರ್ಚುಮಾಡಿದರೆ ಇಲ್ಲಿಯೂ ಶಿಕ್ಷಣ ಒಳ್ಳೇ ರೀತಿಯಲ್ಲೇ ನಡೆಯುತ್ತದೆ. ಆದರೆ ನಮಗಿಲ್ಲಿ ಬಡತನವೂ ಹೋಗಬೇಕು, ಅವಿದ್ಯೆಯೂ ಹೋಗಬೇಕು. ಈ ಎರಡನ್ನೂ ನಾವೀಗ ಬಗೆಹರಿಸಬೇಕಾಗಿದೆ. ಮಕ್ಕಳಿನ್ನೂ ತಾಯಿಯ ಗರ್ಭದಲ್ಲಿರುವಾಗಲೇ ಶಿಕ್ಷಣ ಕೊಡತಕ್ಕಂಥ ಕಾಲ ಇಲ್ಲಿಯೂ ಸ್ವಲ್ಪದರಲ್ಲೇ ಬರಬಹುದು. ಆದರೆ ನಮ್ಮಲ್ಲಿ ಈ ಹಿಂದೆ ಕೆಲವು ಮಾತನಾಡಿದ ಸದಸ್ಯರು ನಮ್ಮ ವಿದ್ಯಾ ಮಂತ್ರಿಗಳ ಖಾತೆಯಲ್ಲಿ ಏನೋ ಒಂದು ಅನಾಹುತವೇ ಆಗಿಹೋಗಿದೆ ಅನ್ನೋರೀತಿಯಲ್ಲಿ ಹೇಳಿದ್ದಾರೆ. ಆದರೆ ಇದು ಪ್ರಗತಿಪರವಾದ ರಾಜ್ಯಕ್ಕೆ ಅನ್ವಯಿಸಕ್ಕ ಮಾತಲ್ಲ. ಒಂದು ಟೀಕೆ ಮಾಡುವುದಕ್ಕಾಗೇ ನಾವಿಲ್ಲಿಗೆ ತಯಾರಾಗಿ ಬಂದಿದ್ದೇವೆಂಬ ಭಾವನೆ ಇಟ್ಟುಕೊಂಡಿರತಕ್ಕವರಿಗೆ ಪ್ರತಿಯೊಂದೂ ವಾದಗ್ರಸ್ತವಾಗೇ ಕಾಣುತ್ತದೆ. ಈ ದಿವಸ ಒಂದು ಪಾರ್ಟಿ ಬಲದಮೇಲೆ ಒಂದು

(ಶ್ರೀ ಎಸ್. ಎಂ. ಗುರೆಡ್ಡಿ)

ಕೋಮಿನ ಬಲದಮೇಲೆ ಶಿಕ್ಷಣಾಭಿವೃದ್ಧಿ ನಡೆಯುತ್ತಿದೆ ಎಂದು ಹೇಳುವುದೇ ಒಂದು ಹೇತುವಾದರೆ ಅದು ವಿದ್ಯಾ ಪ್ರಗತಿಗೆ ಸರಿಯಾದ ಹೇಳಿಕೆಯಲ್ಲ. ಈಗ ವಿದ್ಯಾಭ್ಯಾಸದ ಲೈನಿನಲ್ಲಿ ಸಾಕಷ್ಟು ಪ್ರಗತಿಯಾಗಿದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಸ್ಕಾಲರ್‌ಷಿಪ್‌ಗಳನ್ನು ಕೊಡಲಾಗುತ್ತಿದೆ. ಈ ಹಿಂದೆ ಶೇಕಡ ಎರಡು ಇದ್ದ ಸ್ಕಾಲರ್‌ಷಿಪ್‌ಗಳನ್ನು ಈಗ ಶೇಕಡ 20ಕ್ಕೆ ಏರಿಸಿದೆ. ಇದರಲ್ಲಿ ಸರ್ಕಾರ ಹಾಗೂ ಸದಸ್ಯರುಗಳ ಸಹಕಾರ ಭಾವನೆಯಿಂದ ಆಗಿರತಕ್ಕದ್ದಾಗಿದೆ. ಇದರ ಜೊತೆಗೆ ಟ್ರಿಪಲ್ ಬೆನಿಫಿಟ್‌ನ ಅನುಕೂಲತೆಯನ್ನು ಶಿಕ್ಷರಿಗೆ ಮೊದಲು ಒದಗಿಸಲಾಗಿದೆ. ನಮ್ಮ ಶಿಕ್ಷಕರಿಗೆ ಮೊದಲು ಮನಸ್ಸು ಸಂತೃಪ್ತಿ ಇರಬೇಕು. ಹಾಗಿದ್ದರೇನೆ ಅವರು ಈ ಶಿಕ್ಷಣ ಬಾಬಿನಲ್ಲಿ ಹೆಚ್ಚಿನ ಉತ್ತೇಜನದಿಂದ ಕೆಲಸ ಮಾಡಲು ಸಾಧ್ಯ. ನಮ್ಮ ಮಕ್ಕಳಿಗೆ ಸರಿಯಾದ ರೀತಿಯಲ್ಲಿ ಒಳ್ಳೆ ವಿದ್ಯೆ ದೊರೆಯುತ್ತದೆ. ಆದ್ದರಿಂದ ಆ ಶಿಕ್ಷರ ಮನಸ್ಸು ತೃಪ್ತಿಯಾಗಿರುವಂತೆ ನೋಡಿಕೊಳ್ಳಬೇಕು. ಆದರೆ ನಮ್ಮ ಆರ್ಥಿಕ ಬಿಕ್ಕಟ್ಟಿನಿಂದ ಸಾಕಷ್ಟು ಪಗಾರಗಳನ್ನು ಶಿಕ್ಷಕರಿಗೆ ಕೊಡಲಾಗುತ್ತಿಲ್ಲ. ಹೀಗಾಗಿ ಈ ದಿವಸ ಆ ಶಿಕ್ಷಕರ ಮನಸ್ಸು ಹರ್ಷವಾಗಿಲ್ಲ, ಈ ಕಾರ್ಯವನ್ನು ಸರ್ಕಾರದವರು ಸಾಧಿಸಲೇ ಬೇಕಾಗಿವೆ. ನಮ್ಮ ಶಿಕ್ಷಣ ಕ್ರಮದಲ್ಲಿ ಕೆಲವು ನ್ಯೂನತೆಗಳಿವೆ. ಇಲ್ಲಿಯತನಕ ನಮ್ಮ ಶಾಲೆಗಳಲ್ಲಿ ಏನೊಂದು ಪಾಠ ಪ್ರವಚನಗಳನ್ನು ನಡೆಸಿಕೊಂಡು ಬರಲಾಗುತ್ತಿತ್ತೋ ಅದು ಕೇವಲ ನಮ್ಮ ವಿದ್ಯಾವಂತರನ್ನು ಅವರು ಶಾಲೆಯಿಂದ ಹೊರಗೆ ಬಂದನಂತರ ಅವರನ್ನು ಒಂದು ಕಾರ್ಕೂನಗಿರಿಗೋ ಅಥವಾ ಮತ್ತೆ ಯಾವುದೋ ಒಂದು ಗುಲಾಂಗಿರಿ ವೃತ್ತಿಗೋ ಒಯ್ಯತಕ್ಕದ್ದಾಗಿತ್ತು. ಆದರೆ ಈಗ ನಮ್ಮ ಸರ್ಕಾರ ಅದನ್ನು ಬದಲಾಯಿಸಿದೆ; ಜನರು ತಮ್ಮ ಕಾಲ ಮೇಲೆ ತಾವು ನಿಲ್ಲುವಂಥ ಒಂದು ವಿದ್ಯೆಯನ್ನು ಜನರಿಗೆ ಕೊಡಲಾಗುತ್ತಿದೆ. ಆ ದೃಷ್ಟಿಯಿಂದ ನಮ್ಮಲ್ಲೀಗ ತಾಂತ್ರಿಕ ವಿದ್ಯಾಭ್ಯಾಸಕ್ಕೆ ಬಹಳ ಮಹತ್ವ ಕೊಡಲಾಗಿದೆ. ನಮ್ಮಲ್ಲಿ ನೂರಾರು ಪಾಲಿಟೆಕ್ನಿಕ್ ಶಾಲೆಗಳನ್ನು ತೆರೆಯಲಾಗಿದೆ. ಇವುಗಳನ್ನು ಇನ್ನೂ ಹೆಚ್ಚಿಗೆ ತೆರೆಯುವ ಆವಶ್ಯಕತೆ ಇದೆ. ಆದರೆ ನಮ್ಮ ಇಂದಿನ ತುರ್ತು ಪರಿಸ್ಥಿತಿಯಲ್ಲಿ ಸೈನಿಕ ಸ್ಕೂಲುಗಳನ್ನು ಹೆಚ್ಚು ಹೆಚ್ಚಾಗಿ ತೆರೆಯುವುದು ನಾಡಿನ ಶ್ರೇಯಸ್ಸಿಗೆ ಅಗತ್ಯ ಅಂತ ಹೇಳಿದ್ದಾರೆ. ಇಂಡಿಯಾ ದೇಶದಲ್ಲಿ ಈಗಾಗಲೇ ಒಂದೆರಡು ಮಿಲಿಟರಿ ಹೈಸ್ಕೂಲುಗಳು ಜಾರಿಗೆ ಬಂದಿವೆ. ನಮ್ಮ ರಾಜ್ಯದಲ್ಲೂ ಸಹ ಇಂಥ ಮಿಲಿಟರಿ ಸೈನಿಕ ಶಾಲೆಗಳನ್ನು ತೆರೆಯಲಾಗಿದೆ. ಅದಕ್ಕಾಗಿ ನಾವು ನಮ್ಮ ಮಂತ್ರಿಗಳನ್ನು ಅಭಿನಂದಿಸದೆ ಇರಲಾರೆವು. ಈ ದಿವಸ ಈ ಮಿಲಿಟರಿ ಟ್ರೈನಿಂಗ್ ಶಾಲೆಗಳು ಎಲ್ಲ ಕಡೆಗೂ ಆಗಬೇಕಾಗಿದೆ. ನಾವೆಲ್ಲರೂ ಶಿಸ್ತಿನ ಸೈನಿಕರಾಗಬೇಕು. ಹಾಗೇ ನಮ್ಮ ನುಡಿನಡೆಯಲ್ಲೂ ಶಿಸ್ತನ್ನು ಪರಿಪಾಲಿಸತಕ್ಕವರಾಗಿ ಈ ಎರಡು ಸಂಘಟನೆಗಳು ಒಂದಾಗಿರುವುದು ಅಗತ್ಯ ಅಂತ ಹೇಳುತ್ತೇನೆ. ಹೀಗೆ ನಮ್ಮ ಜನರನ್ನು ಎಲ್ಲ ರಂಗದಲ್ಲೂ ನಾಗರೀಕರನ್ನಾಗಿ ಮಾಡಲು ಅವರಿಗಾಗಿ ಈಗ 19 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಇದಕ್ಕೆ ಇನ್ನೂ ಹೆಚ್ಚು ಹಣ ಖರ್ಚುಮಾಡಲು ಪ್ರಯತ್ನ ಮಾಡಿ ನಮ್ಮ ರಾಜ್ಯವನ್ನು ಮುಂದೆ ಬರುವಂತೆ ಮಾಡಬೇಕೆಂದು ಬೇಡಿಕೊಳ್ಳುತ್ತೇನೆ.

ಶ್ರೀ ಎನ್. ನಂಜೇಗೌಡ (ಕೃಷ್ಣರಾಜ ಪೇಟೆ).—ಮಾನ್ಯ ಸಭಾಪತಿಗಳೇ, ಈಗ ಸಭೆಯ ಮುಂದಿರತಕ್ಕ ಡಿಮ್ಯಾಂಡನ್ನು ನಾನು ಅನುಮೋದಿಸುವುದಾಗಿದ್ದರೂ ಇದರಲ್ಲಿರತಕ್ಕ ಕೆಲವು ಅಂಶಗಳನ್ನು ವಿರೋಧಿಸಲು ಇಷ್ಟಪಡುತ್ತೇನೆ.

ಈ ವಿದ್ಯಾ ಸಂಸ್ಥೆಯೆಂಬುದು ಬಹಳ ಪವಿತ್ರವಾದುದು, ಈ ಸಂಸ್ಥೆಗಳಲ್ಲಿ ವಿದ್ಯಾರ್ಜನೆ ಮಾಡತಕ್ಕ ಜನರು ಒಳ್ಳೆಯ ವಿದ್ಯೆಕಲಿತು, ಅವರು ಸುಶಿಕ್ಷಿತರೂ—ಒಳ್ಳೆಯ ಸಂಸ್ಕೃತಿಯುಳ್ಳವರೂ ಆಗಿ ಬರುವಂಥ ಅವಕಾಶವಿರಬೇಕು. ಜನರಿಗೆ ಒಳ್ಳೆಯ ಆರೋಗ್ಯವಿರಬೇಕೆಂಬುದು ಎಷ್ಟು ಮುಖ್ಯವೋ ಅವರಿಗೆ ಒಳ್ಳೆ ವಿದ್ಯೆ ಇರಬೇಕೆಂಬುದೂ ಅಷ್ಟೇ ಮುಖ್ಯವೆಂದು ನಾನು ಹೇಳುತ್ತೇನೆ. ಈ ಹಿಂದೆ ಹುಡುಗರನ್ನು ಆಶ್ರಮಗಳಿಗೆ ಕಳುಹಿಸಿ, ಅಲ್ಲಿ ಯಾವ ಒಂದು ದುಷ್ಟ ಪದ್ಧತಿಗೂ ಅವಕಾಶವಿರದಂತೆ ತಡೆಗಟ್ಟಿ ಅಲ್ಲಿ ಹುಡುಗರನ್ನು ಸುಸಂಸ್ಕೃತರನ್ನಾಗಿಯೂ, ಸುಶಿಕ್ಷಿತರನ್ನಾಗಿಯೂ ತರಬೇತು ಮಾಡುತ್ತಿದ್ದರು. ಆದರೆ ಈಗಿನ ವಿದ್ಯಾಭ್ಯಾಸದ ಕ್ರಮವೇ ಒಂದು ರೀತಿಯಾಗಿದೆ. ಈ ದಿನ ಈ ವಿದ್ಯಾಭ್ಯಾಸ ಬರಿ ಒಂದು ರಾಜಕೀಯ ಭಾವನೆ ಮೇಲೆ ಬೆಳೆಯುತ್ತ ಇದರ ಮೂಲೋದ್ದೇಶವೇ ತಪ್ಪಿಹೋಗಿದೆ. ಆದರೆ ನಮ್ಮ ಶ್ರೀಮಾನ್ ಗುರೆಡ್ಡಿಯವರು ಸ್ಕಾಲರ್‌ಷಿಪ್‌ಗಳನ್ನು ಸರಿಯಾಗಿ ಹಂಚಲಾಗುತ್ತಿದೆ ಇತ್ತೀಚೆಗೆ ಸ್ಕಾಲರ್‌ಷಿಪ್‌ಗಳನ್ನು ಹೆಚ್ಚು ಮಾಡಲಾಗಿದೆ, ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಗಳನ್ನು ತೆರೆಯಲಾಗಿದೆ, ಹೀಗೆಲ್ಲ ವಿದ್ಯಾಭ್ಯಾಸ ಮುಂದುವರಿಯುತ್ತಿದ್ದರೂ ವೃಥಾ ಟೀಕೆಗಳನ್ನು ಮಾಡುತ್ತಿದ್ದಾರೆಂತ ಹೇಳಿದರು. ಆದರೆ ನಾನೀಗ ಒಂದೆರಡು ಉದಾಹರಣೆಗಳನ್ನು ಕೊಡುತ್ತ ಈ ಸ್ಕಾಲರ್‌ಷಿಪ್‌ಗಳನ್ನು ಹಂಚುವ ನೀತಿ ಏನಾಗಿದೆ ಎಂಬುದನ್ನು ಹೇಳುತ್ತೇನೆ. ಈ ದಿವಸ ಈ ಸ್ಕಾಲರ್‌ಷಿಪ್‌ಗಳನ್ನು ಯಾವ ರೀತಿ ಹಂಚಲಾಗುತ್ತಿದೆ, ಇವು ಯಾರಿಗೆ ದೊರೆಯುತ್ತಿವೆ,

ಬಡವರಿಗೇ ಅಥವಾ ಮತ್ತ್ಯಾರಿಗೆ ಎಂಬುದನ್ನು ತಿಳಿಸಬೇಕಾಗಿದೆ. ಈ ದಿವಸ ಮೈಸೂರಿನಲ್ಲಿ 16 ಹೈಸ್ಕೂಲುಗಳಿವೆ, ಅಲ್ಲಿರತಕ್ಕ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ 9,000. ಅಲ್ಲಿ ಸ್ಕಾಲರ್‌ಷಿಪ್‌ಗಾಗಿ 980 ಅರ್ಜಿಗಳು ಬಂದಿದ್ದವು. ಆ ಪೈಕಿ 843 ಜನರಿಗೆ ಸ್ಕಾಲರ್‌ಷಿಪ್ ಸಿಕ್ಕಿದೆ. ಆದರೆ ಇದೇ ಬೆಂಗಳೂರಲ್ಲಿ 26 ಹೈಸ್ಕೂಲುಗಳಿವೆ. 19 ಸಾವಿರ ವಿದ್ಯಾರ್ಥಿಗಳಿದ್ದಾರೆ. 1,800 ಅಪ್ಲಿಕೇಷನ್‌ಗಳು ಬಂದಿದ್ದವು. ಇಲ್ಲಿ 538 ಹುಡುಗರಿಗೆ ಸ್ಕಾಲರ್‌ಷಿಪ್ ಕೊಡಲಾಗಿದೆ. ಇನ್ನು ನಮ್ಮ ಕೃಷ್ಣರಾಜಪೇಟೆಯಲ್ಲಿ ಆರು ಹೈಸ್ಕೂಲುಗಳಿವೆ. 900 ಹುಡುಗರಿದ್ದಾರೆ. ಅಲ್ಲಿ 93 ಜನರಿಗೆ ಸ್ಕಾಲರ್‌ಷಿಪ್ ಕೊಟ್ಟಿದ್ದಾರೆ. ಅರಕಲಗೂಡಿನಲ್ಲಿ ಆರು ಹೈಸ್ಕೂಲುಗಳಿವೆ. ಅಲ್ಲಿ ಒಟ್ಟು 1,650 ಹುಡುಗರಿದ್ದಾರೆ. ಅಲ್ಲಿ 80 ಜನರಿಗೆ ಸ್ಕಾಲರ್‌ಷಿಪ್ ಕೊಟ್ಟಿದ್ದಾರೆ. ಹೀಗೆ ಈ ದಿವಸ ಈ ಸ್ಕಾಲರ್‌ಷಿಪ್‌ಗಳನ್ನು ಯಾವ ನೀತಿಯ ಮೇಲೆ ಕೊಡುತ್ತಿದ್ದಾರೆಂಬುದೇ ಗೊತ್ತಾಗುವುದಿಲ್ಲ. ಈ ಸ್ಕಾಲರ್‌ಷಿಪ್ ಕೊಡತಕ್ಕ ವಿಚಾರದಲ್ಲಿ ಇನ್‌ಸ್ಟ್ರಕ್ಷನ್ ಗ್ರೈಡ್ ಎಂತ ಒಂದಿದೆ. ಆ ಗ್ರೈಡಿನಲ್ಲಿ ಒಂದು ಹೈಸ್ಕೂಲಿನಲ್ಲಿ ಎಷ್ಟು ಜನ ವಿದ್ಯಾರ್ಥಿಗಳಿದ್ದಾರೆ, ಎಷ್ಟು ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್‌ಕೊಡಬೇಕು ಅನ್ನತಕ್ಕದ್ದನ್ನೆಲ್ಲ ಆ ಗ್ರೈಡಿನಲ್ಲಿ ಕೊಟ್ಟಿದ್ದಾರೆ. ಸ್ಕಾಲರ್‌ಷಿಪ್ ಕೊಡುವ ವ್ಯವಸ್ಥೆ ಒಂದೊಂದು ಕಡೆ ಒಂದೊಂದು ವಿಧದಲ್ಲಿದೆ. ಇದು ಸಮರ್ಪಕವಾಗಿರಬೇಕು. ಸ್ಕಾಲರ್‌ಷಿಪ್ ಕೊಡಬೇಕಾದರೆ 1,200 ರೂಪಾಯಿಗಿಂತ ಕಡಮೆ ವರಮಾನವಿರುವವರಿಗೆ ಮಾತ್ರ ಕೊಡಬೇಕೆಂದಿದೆ. ಆದರೆ ಒಂಭತ್ತು ಸಾವಿರ ಹುಡುಗರಿರುವ ಕಡೆ 980 ಜನ ಸ್ಕಾಲರ್‌ಷಿಪ್ ಪಡೆಯಲು ಲಾಯಖ್ ಆಗಿದ್ದವರು ಮಾತ್ರ ಅರ್ಜಿಹಾಕಿಧ್ದಾರೆ. ಉಳಿದ 8,000 ಜನರು ಸ್ಕಾಲರ್‌ಷಿಪ್ ಪಡೆಯಲು ಅರ್ಹರಲ್ಲ. ಇಂಥ ಕಡೆ 843 ಜನಗಳಿಗೆ ಸ್ಕಾಲರ್‌ಷಿಪ್ ಕೊಟ್ಟು, 900 ಹುಡುಗರಿರುವ ಕಡೆ 725 ಜನ ಅರ್ಜಿ ಹಾಕಿದ್ದವರಲ್ಲಿ 93 ಜನಗಳಿಗೆ ಮಾತ್ರ ಕೊಟ್ಟಿದ್ದಾರೆ. 19 ಸಾವಿರ ವಿದ್ಯಾರ್ಥಿಗಳಿರುವ ಕಡೆ 1,800 ಅರ್ಜಿಗಳು ಬಂದಿದ್ದು 538 ಹುಡುಗರಿಗೆ ಸ್ಕಾಲರ್‌ಷಿಪ್ ಕೊಟ್ಟಿದ್ದಾರೆ. ಇದು ಯಾವ ನೀತಿ ? ಸ್ಕಾಲರ್‌ಷಿಪ್ ಕೊಡುವುದು ಬಡವರಿಗೆ. ಇದಕ್ಕೆ ಒಂದು ನೀತಿ ಇರಬಾರದೇ ? ಒಂದು ನಿಯಮ ಬೇಡವೇ ? ಬಡವರಿಗೆ ಸರಿಯಾಗಿ ನ್ಯಾಯ ದೊರೆಯುತ್ತಿಲ್ಲವೆನ್ನುವುದಕ್ಕೆ ಒಂದು ನಿದರ್ಶನವನ್ನು ಕೊಡುತ್ತೇನೆ. ಸ್ಕಾಲರ್‌ಷಿಪ್ ಕಮಿಟಿಯಲ್ಲಿ 20 ಜನ ಸದಸ್ಯರಿದ್ದಾರೆ. ಹಿಂದೆ ಡಿಸ್ಟ್ರಿಕ್ಟಿಗೆ ಎಂಟು ಜನ ಮಾತ್ರ ಇರುತ್ತಿದ್ದರು, ಈಗ ತಾಲ್ಲೂಕಿಗೆ 23 ಜನ. ಇವರು ಎಷ್ಟು ಜನರಿಗೆ ಸ್ಕಾಲರ್‌ಷಿಪ್ ಕೊಡಬೇಕೋ ಅದನ್ನು ಪಾಲು ಮಾಡಿಕೊಂಡು ತಮಗೆ ಬೇಕಾದವರ ಮೂರು-ನಾಲ್ಕು ಹೆಸರುಗಳನ್ನು ಹೇಳುತ್ತಾರೆ. ಇದರಿಂದ ಯಾವ ನೀತಿಯೂ ಅನುಸರಿಸಿದಂತಾಗಲಿಲ್ಲ ಮತ್ತು ಬಡವರಿಗೆ ಸ್ಕಾಲರ್‌ಷಿಪ್ ಸಿಕ್ಕುವುದಿಲ್ಲ. 1,200 ರೂಪಾಯಿಗಳೊಳಪಟ್ಟು ಬರುವವರಿಗೆ merit ಮೇಲೆ ಸ್ಕಾಲರ್‌ಷಿಪ್ ಕೊಡಲು ಅಡ್ಡಿ ಏನಿದೆ ? ಅದಕ್ಕೆ ಇಷ್ಟು ಜನರನ್ನೊಳಗೊಂಡ ಒಂದು ದೊಡ್ಡ ಸಮಿತಿ ಏಕೆ ? ಕಮಿಟಿಯಲ್ಲಿ ವಿದ್ಯಾ ಇಲಾಖೆಯವರು ಇರುತ್ತಾರೆ ಅವರ ಜೊತೆಗೆ ಒಬ್ಬಿಬ್ಬರು ಸ್ಥಳದ ದೊಡ್ಡ ಮನಷ್ಯರನ್ನು ನಾಮಕರಣ ಮಾಡಿ ಬಡತನ ಮತ್ತು merit ಈ ಆಧಾರದ ಮೇಲೆ ಹಂಚಿದರೆ ಆವಾಗ ಒಂದು ತತ್ವ ನೀತಿ ಇರುತ್ತದೆ. ಅದಿಲ್ಲದೆ ಒಂದು ರಾಜಕೀಯ ಪಕ್ಷವನ್ನೇ ಈ ಕಮಿಟಿಗಳಲ್ಲಿ ತುಂಬಿ ಒಂದು ಗುಂಪಿನ ಮನೋಭಾವವನ್ನು ಬೆಳಸುವುದು ನೀತಿಯಲ್ಲ. ಈ ಕಮಿಟಿಯನ್ನು ಮಾಡಿರುವುದರಲ್ಲಿ ಕೂಡ ವಿದ್ಯಾ ಸಚಿವರು ರಾಜಕೀಯ ಮಾಡುತ್ತಿದ್ದಾರೆ. ನಿನ್ನೆಯ ದಿನ ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ಒಂದು ವಿಷಯ ಹೇಳಿದರು. ಅದಕ್ಕೆ ಅಷ್ಟೇ ಪ್ರಾಶಸ್ತ್ಯವಿದೆ. ಕಮಿಟಿ ಮೆಂಬರುಗಳ ಪಟ್ಟಿಯನ್ನು ತರಿಸಿಕೊಂಡು ನೋಡಿದರೆ ಮಾನ್ಯ ಮುಖ್ಯ ಮಂತ್ರಿಯವರಿಗೆ ಅರ್ಥವಾಗುತ್ತದೆ, ಮುಖ್ಯ ಮಂತ್ರಿಗಳು ಇದನ್ನು ಗಮನಿಸಬೇಕೆಂದು ನಾನು ಹೇಳುತ್ತೇನೆ.

9-00 A.M.

ಕೃಷ್ಣರಾಜ ಪೇಟೆ ತಾಲ್ಲೂಕಿನಲ್ಲಿ 1,30,000 ಜನ ಸಂಖ್ಯೆ ಇದೆ, ಇಲ್ಲಿ ಒಂದು ಪಾಲಿಟೆಕ್ನಿಕ್ ಸ್ಕೂಲು ಇದೆ; ಇದಕ್ಕೆ ಒಂದು ಕಮಿಟಿ ನೇಮಕ ಮಾಡಬೇಕಾದರೆ ಈತಾಲ್ಲೂಕಿನಲ್ಲಿ ಲಾಯಖಾದವರು ಯಾರೂ ಇರಲಿಲ್ಲವೇ ? ಕಾಂಗ್ರೆಸ್ ಪಕ್ಷದವರೂ ಇರಲಿಲ್ಲವೇ ? ನೀತಿವಂತರಿರಲಿಲ್ಲವೇ ? ಈ ತಾಲ್ಲೂಕಿನವರನ್ನು ಬಿಟ್ಟು ಬೇರೆ ತಾಲ್ಲೂಕಿನವರನ್ನು ಅಲ್ಲಿಗೆ ಹಾಕುವುದು ಎಂದರೆ ಆ ತಾಲ್ಲೂಕಿನ ಜನಗಳ ಸ್ಥಿತಿ ಏನು, ಎನ್ನುವುದನ್ನು ಯೋಚನೆ ಮಾಡಿ. ನಮ್ಮ ವಿದ್ಯಾ ಮಂತ್ರಿಗಳು ಈ ಸ್ಥಾನದಲ್ಲಿದ್ದರೆ ಅವರ ಪರಿಸ್ಥಿತಿ ಏನಾಗುತ್ತಿತ್ತು ಎಂದು ಯೋಚನೆಮಾಡಿ.

ಶ್ರೀ ಎಸ್. ಆರ್. ಕಂಠಿ (ವಿದ್ಯಾ ಶಾಖೆಯ ಮಂತ್ರಿಗಳು).—ಮಾನ್ಯ ಸದಸ್ಯರಾದ ನಂಜೇಗೌಡರು ಆಗಲೇ ಈ ವಿಚಾರವಾಗಿ ನನ್ನನ್ನೂ ಕಂಡು ಕೆಲವು ಹೆಸರುಗಳು ಬಿಟ್ಟು ಹೋಗಿವೆ ಎಂದು ಹೇಳಿದರು. ಎರಡನೆಯ ತಾಲ್ಲೂಕಿನವರನ್ನೆ ಹಾಕಿದ್ದಾರೆ ಎನ್ನುವುದು-ಆಶ್ಚರ್ಯದ ಸಂಗತಿ. ಅವರು ಮೊದಲೇ ಹೇಳಿದ್ದರೆ, ಅದರ ಬಗ್ಗೆ ನೋಡಿ ಕ್ರಮ ತೆಗೆದುಕೊಳ್ಳುತ್ತಿದ್ದೆ.

ಶ್ರೀ ಎಚ್. ನಂಜೇಗೌಡ.—ಕಮಿಟಿ ರಚನೆ ಯಾದ ಕೂಡಲೇ ನಾನು ಒಂದು ಮನವಿಯನ್ನು ಬರೆದು ಕೊಟ್ಟಿದ್ದೇನೆ. ಸ್ಕಾಲರ್‌ಷಿಪ್ ಕಮಿಟಿ ಕೆಲಸ ಮುಗಿದನಂತರ ನನ್ನ ಮನವಿಯನ್ನು ಗಮನಕ್ಕೆ ತೆಗೆದುಕೊಂಡಿದ್ದಾರೆಂದು ಕಾಣುತ್ತದೆ. ಒಂದು ಅಧಿಕಾರ ಸ್ಥಾನದಲ್ಲಿರುವಾಗ ಇತರರಿಗೆ ಮಾರ್ಗದರ್ಶಕರಾಗಿರುವಂತಹ ನೀತಿಯನ್ನು ಹಾಕಬೇಕು. ನಾನು ತಮ್ಮಲ್ಲಿ ಬಂದು ಕೇಳಿದಾಗ ತಾವು ಏನೋ ಹೇಳಿದಿರಿ. ಅಧಿಕಾರ ಸ್ಥಾನದಲ್ಲಿದ್ದರೂ ಕೂಡ ಇನ್ನೊಬ್ಬರಿಗೂ ಮನುಷ್ಯತ್ವವಿದೆ ಎಂದು ತಿಳಿದು ತಾವು ಮಾಡುವ ಕೆಲಸ ಒಂದು ನೀತಿಯ ಮೇಲೆ ಅವಲಂಬಿಸಿರಬೇಕು. ಯಾರೋ ಒಬ್ಬರು ಹೇಳುತ್ತಾರೆಂದು ಅದರಂತೆ ನಡೆಯುವುದು ನೀತಿಯಲ್ಲ ; ಯಾವ ದುರುದ್ದೇಶದಿಂದಲೂ ಕೂಡ ಇನ್ನು ಮುಂದಾದರೂ ಮಾಡಬಾರದೆಂದು ಪ್ರಾರ್ಥನೆ ಮಾಡುತ್ತೇನೆ.

ಕಾಲೇಜುಗಳ ವಿಷಯದಲ್ಲಿ ಒಂದೆರಡು ಮಾತನ್ನು ಹೇಳುತ್ತೇನೆ. ಸೆಂಟ್ರಲ್ ಕಾಲೇಜಿನಲ್ಲಿ ಎಂ. ಎ. ತರಗತಿಗಳನ್ನು ತೆರೆದಿದ್ದಾರೆ. ಇದರಲ್ಲಿ ಮೂರು ಸೆಕ್ಷನ್‌ಗಳಿವೆ. ಇಲ್ಲಿ ಕೆಲಸ ಮಾಡತಕ್ಕವರು ಯಾರು ಎಂದರೆ ಒಬ್ಬ tutor. ಎಂ. ಎ. ತರಗತಿಗಳನ್ನು ತೆಗೆದುಕೊಳ್ಳಲು ಅನುಭವವಿರುವವರೂ, ಸರ್ವಿಸ್ ಆದವರೂ ಆದ ಒಬ್ಬರು ಮೈಸೂರು ಮಹಾರಾಜ ಕಾಲೇಜಿನಲ್ಲಿದ್ದವರು ಇಪ್ಪತ್ತು ವರ್ಷ ಸರ್ವೀಸಾದವರು ಇರಬೇಕಾದರೆ ಒಬ್ಬ tutorನ್ನು ನೇಮಕ ಮಾಡಿರುವುದು ಕೋಮುವಾರು ಭಾವನೆಯಲ್ಲದೆ ಮತ್ತೇನು ? Tutor ಆದವರು ಎಂ. ಎ. ತರಗತಿಗಳನ್ನು ತೆಗೆದುಕೊಂಡರೆ ವಿದ್ಯಾರ್ಥಿಗಳ ಗತಿಏನು ? ವಿದ್ಯಾ ಸಂಸ್ಥೆ ಹೇಗೆ ಉಳಿಯುತ್ತದೆ ? ಇದರಲ್ಲಿ ಏನಾದರೂ ನೀತಿ ಇದೆಯೇ ? ಸರ್ವಿಸ್ ಆದವರೂ, ಪಿ. ಎಚ್. ಡಿ. ಪಡೆದವರೂ, ಹರಿಜನ ಕೋಮಿಗೆ ಸೇರಿದವರೂ ಆದ ಒಬ್ಬರು ಸೆಂಟ್ರಲ್ ಕಾಲೇಜಿನಲ್ಲಿ ಇದ್ದಾರೆ. ಅವರೆನ್ನೆಲ್ಲ ಬಿಟ್ಟು ಟ್ಯೂಟರ್ ಆದವರನ್ನು ನೇಮಿಸಿದರೆ ವಿದ್ಯಾಭ್ಯಾಸದ ಮಟ್ಟ ಹೇಗೆ ಇರುತ್ತದೆ ? ಯಾವ ಮಟ್ಟದಲ್ಲಿ ಬೆಳೆದೀತು ಎನ್ನುವುದನ್ನು ಮಾನ್ಯ ವಿದ್ಯಾ ಮಂತ್ರಿಗಳು ಗಮನಿಸಬೇಕು.

ಇನ್ನೂ ಹೇಳುವ ವಿಷಯಗಳು ಅನೇಕ ಇದ್ದುವು. ಆದರೆ ಅಧ್ಯಕ್ಷರು ವೇಳೆಯಾಯಿತೆಂದು ಹೇಳುತ್ತಿದ್ದಾರೆ, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟದ್ದಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† **Smt. VIJAYA RAGHAVENDER RAO DESAI** (Chitapur) Sir, I support the demand placed before the House today. Due to pressure of time, I would not speak much about this Demand.

We have been given a note about the achievements of the Education Department during the year 1962-63. Many Hon'ble Members have already given valuable suggestions and I would not dwell on them.

We all know that in the field of education, the responsibility does not primarily lie on Government alone, the public also should share the responsibility. I would like to state that in spite of the greatest attention being given to the spread of education since the beginning of this century, very little progress has been *achieved*. The standard of education is going down so steeply that I would not like to say anything about it. The foundation, for all inventions and discoveries in the scientific and other fields, is education. Education is stem from which shoots like agriculture, science spring up.

The budget provision for education is 18.79 crores. Out of that primary education alone accounts for 9 and odd crores. I would like to ask the Government whether this large amount has been utilised properly. What is the standard of the teachers who teach primary classes ? I am of opinion that women are best suited to handle primary education. I have already said during the general discussion on budget that primary education should he handed over to women and there should be a separte Directorate for Girl's Education and Primary Education. We have a responsibility to future generations because we have to prepare doctors, lawyers and engineers. We know the pains and difficulties in

bringing up a child. I therefore request the Government to consider my suggestions and take necessary action.

The budget estimates for Sanskrit education is $3\frac{1}{2}$ lakhs. We know that Sanskrit is the main stem for most of the languages in India.

Even then we are not giving that much of attention and encouragement for Sanskrit. We are absolutely pushing it into oblivion. As we know Sanskrit is one of the sweet languages. Here, I would suggest that even though for the public examination they do not want to make this as a compulsory subject, let them keep it as a compulsory subject for 8th, and 9th and 10th standards so that Sanskrit may get a little encouragement as the oldest Indian language.

I have already said as regards vocational Institute for Gulbarga, that has been closed with an intention to start a polytechnic for girls. I do not know how far the Government is moving and I feel that polytechnic is necessary for the Hyderabad Karnatak area.

As far as Kannada is concerned, I keep it at the summit of my mind. I love it; I have the highest respect and reverence that it needs. But even then we cannot do only with Kannada for the study of applied science, for some of the research studies and schemes of research we must have English. We cannot discard English at this moment. I believe when I was a research student we were not only using English journals but also we had to use French and German journals. We had to pass some examinations in German and French. So I think English must have a little more encouragement and the standard of English should be raised. The other day somebody was speaking about Regional English language Institute for the southern States that has been established in Bangalore. In order to improve the standard of teaching in schools that institute is having a sum of about Rs. 5,04,000 and I believe the Andhra Government has also accorded sanction for Rs. 1,40,000 being their share for this institution. So, I request the Government to see that students come forward for taking advantage of this institute.

We are happy in having a Sainik School in Bijapur. Still I would ask the Government whether they can consider the proposal having some residential schools also. We must have one residential school for each division. The cost is not very much for it will require about Rs. 18 lakhs, and I think 150 to 200 acres of land is required for residential schools. About Rs. 15 to 20 lakhs are required as capital expenditure including building for main schools and also building for a hostel. I believe recurring expenditure will not exceed more than Rs. 50,000. So, I request the Government to consider this proposal. I thank the Chair for having given me just five minutes for offering my remarks. I support the Demand.

† ಶ್ರೀ ಇ. ನಾರಾಯಣ ಗೌಡ (ಬಂಗಾರಪೇಟೆ).—ಮಾನ್ಯ ಅಧ್ಯಕ್ಷರೇ, ಈ ದಿನ ವಿದ್ಯಾ ಮಂತ್ರಿಗಳು ಈ ಸಭೆಯ ಮುಂದಿಟ್ಟಿರತಕ್ಕ ಡಿಮ್ಯಾಂಡನ್ನು ವಿರೋಧಿಸುತ್ತಾ ಈ ಇಲಾಖೆಯಲ್ಲಿರುವ ಕೆಲವು ಲೋಪದೋಷಗಳನ್ನು ಈ ಸಮಯದಲ್ಲಿ ವ್ಯಕ್ತಪಡಿಸಲಿಚ್ಛಿಸುತ್ತೇನೆ.

(ಶ್ರೀ ಇ. ನಾರಾಯಣಗೌಡ)

ಸ್ವಾಮಿ, ಈ ಇಲಾಖೆ ಬಹಳ ಹಿಂದಿನಿಂದಲೂ ಸಾರ್ವಜನಿಕರ ಒಂದು ಗೌರವಕ್ಕೆ ಪಾತ್ರವಾಗಿತ್ತು. ಈಚೆಗೆ ದೇಶದಲ್ಲಿ ಈ ಇಲಾಖೆಯ ವಿಚಾರವಾಗಿ ಅನೇಕ ಭಿನ್ನಾಭಿಪ್ರಾಯಗಳೂ, ಅಸಮಾಧಾನಗಳೂ ವ್ಯಕ್ತಪಡುತ್ತಿವೆ. ಇದಕ್ಕೆ ಮೂಲಭೂತವಾದ ಕಾರಣವೇನೆಂದು ವಿಚಾರ ಮಾಡಿದರೆ, ಈ ಇಲಾಖೆಯಲ್ಲಿ ಶ್ರೀಮಾನ್ ಕಂಠಿಯವರು ವಿದ್ಯಾಮಂತ್ರಿಗಳಾದ ಮೇಲೆ ; ವೈಯ್ಯಕ್ತಿವಾಗಿ ಶ್ರೀಮಾನ್ ಕಂಠಿಯವರಲ್ಲಿ ನಮಗೆ ಗೌರವವಿದೆ, ಏಕೆಂದರೆ ಹಿಂದೆ ಅವರು ಈ ಸಭೆಯ ನಾಯಕರಾಗಿದ್ದವರು ಎಂದು ಅವರ ವಿಚಾರವಾಗಿ ಬಹಳ ಗೌರವ ತೋರಿಸಿದ್ದೇವೆ. ಆದರೆ ಅವರು ಈ ವಿದ್ಯಾ ಇಲಾಖೆಯನ್ನು ವಹಿಸಿಕೊಂಡ ಮೇಲೆ ಇದರಲ್ಲಿ ನಡೆಯುತಕ್ಕ ಕೆಲ ಕೆಲವು ವಿಚಾರಗಳನ್ನು ನೋಡಿದರೆ ನಿಜವಾಗಿಯೂ ಅವರು ಈ ದೇಶದಲ್ಲಿ ಜನರ ಮತ್ತು ಎಲ್ಲ ಸದಸ್ಯರುಗಳ ಒಂದು ವಿಶ್ವಾಸವನ್ನು ಕಳೆದುಕೊಂಡಿದ್ದಾರೆ ಎಂದು ವಿಷಾದದಿಂದ ಹೇಳಬೇಕಾಗಿದೆ. ಈ ಇಲಾಖೆಯಲ್ಲಿ ಒಂದು ಜಾತೀಯತೆಯ ವಿಷಬೀಜವನ್ನು ಬಿತ್ತಿ ದೇಶದ ಜನತೆಯಲ್ಲಿ ಒಂದು ಅಸಮಾಧಾನವನ್ನುಂಟುಮಾಡುತ್ತಿದ್ದಾರೆ. ಒಂದು ಉದಾಹರಣೆ ಹೇಳುತ್ತೇನೆ. Appointment of a Joint Director in G. O. No. E.D. 27, dated 25th January 1963. ಶಿಕ್ಷಣ ಇಲಾಖೆಯಲ್ಲಿ ಈ ಜಾಯಿಂಟ್ ಡೈರೆಕ್ಟರ ನೇಮಕ ಮಾಡಿರುವುದು ಹೇಗಿದೆ ಎಂದರೆ ಸೀನಿಯರು ಡೈರೆಕ್ಟರಾಗಿರುವವರೊಬ್ಬರನ್ನು ಕೈ ಬಿಟ್ಟು ಅವರಿಗಿಂತ ಹದಿನೆಂಟು ತಿಂಗಳು ಜೂನಿಯರಾಗಿರುವ ತಮ್ಮ ಸ್ವಜಾತಿಯ ಒಬ್ಬ ಅಧಿಕಾರಿಗಳನ್ನು ನೇಮಕ ಮಾಡಿಕೊಂಡಿದ್ದಾರೆ. ಈ ಬಗ್ಗೆ ಅವರು ಮೊನ್ನೆ ಹೇಳಿಕೆ ಕೊಡುವಾಗ ಅವರು ಸೀನಿಯಾರಿಟಿ ಲಿಸ್ಟಿನಲ್ಲಿ ಅವರ ಹೆಸರಿರಲಲ್ಲ ಎಂದು ಈ ಸೀನಿಯರು ಆಫೀಸರನ್ನು ನೇಮಿಸಿರುವುದು ತಪ್ಪು ಎಂದು ಹೇಳಿದರು. ಇದರಲ್ಲಿರುವಂತೆ 15-7-1958 ರಲ್ಲಿ Dr. Thimmaiah ಎಂಬುವರು ಸೀನಿಯರು ಡೈರೆಕ್ಟರಾಗಿದ್ದರು.

Mr. SPEAKER.—He should omit mentioning of names on the floor of the House.

ಶ್ರೀ ಇ. ನಾರಾಯಣ ಗೌಡ.—ಇವರಿಗಿಂತ ಹದಿನೆಂಟು ತಿಂಗಳು ಜೂನಿಯರು ಆಗಿರುವ ಅಧಿಕಾರಿಯೊಬ್ಬರನ್ನು ಶಿಕ್ಷಣ ಖಾತೆಯ ಜಾಯಿಂಟು ಡೈರೆಕ್ಟರಾಗಿ ನೇಮಕ ಮಾಡಿದ್ದಾರೆನ್ನುವ ವಿಚಾರ ಇದರಿಂದ ಗೊತ್ತಾಗುತ್ತದೆ. ಇಷ್ಟು ಜಾತೀಯ ಅಭಿಮಾನದಿಂದ ಈ ದೇಶಕ್ಕೆ ಅನ್ಯಾಯ ಮಾಡುತ್ತಿದ್ದಾರೆ ಎಂದು ವಿಷಾದದಿಂದ ಈ ಸಭೆಗೆ ತಿಳಿಸಬೇಕಾಗಿದೆ.

ಎರಡನೇದಾಗಿ ಸ್ಕಾಲರುಷಿಪ್ಪು ಕಮಿಟಿಗಳ ವಿಚಾರವಾಗಿ ಅನೇಕ ಮಾನ್ಯ ಸದಸ್ಯರುಗಳು ಈಗಾಗಲೇ ತಮ್ಮ ಅಸಮಾಧಾನವನ್ನು ವ್ಯಕ್ತಮಾಡಿದ್ದಾರೆ. ಪ್ರಶ್ನೋತ್ತರ ಕಾಲದಲ್ಲೂ ಸಹ ಇದರ ಬಗ್ಗೆ ಅನೇಕ ಪ್ರಶ್ನೆಗಳು ಉದ್ಭವಿಸಿವೆ. ಉದಾಹರಣೆಯಾಗಿ ಹೇಳಬೇಕಾದರೆ, K. G. F. Mining School ನಲ್ಲಿರುವ ಸ್ಕಾಲರುಷಿಪ್ಪು ಕಮಿಟಿಗೆ ಹೊರಗಿನಿಂದ ಬೇರೆ ತಾಲ್ಲೂಕಿನಿಂದ ಚುನಾಯಿತರಾಗಿರುವ ಬಂದಿರುವ ಎಂ.ಎಲ್.ಎ.ಯನ್ನು ನೇಮಿಸಿದ್ದಾರೆ. ಹಾಗೂ K.G.F. ಮೈನಿಂಗ್ ಬೋರ್ಡಿನಿಂದ ಬರುವ ಎಂ. ಎಲ್. ಎ. ಒಬ್ಬರನ್ನು ನೇಮಿಸಿ, ಅಲ್ಲೇ ಇದ್ದ ಇನ್ನೊಬ್ಬರು ಎಂ. ಎಲ್. ಎ. ಯನ್ನು ಹಾಗೇ ಕೈ ಬಿಟ್ಟಿದ್ದಾರೆ. ಇದನ್ನು ವಿಚಾರಮಾಡಿ ನೋಡಿದರೆ, ಎಷ್ಟು ಮಟ್ಟಿಗೆ ಪಕ್ಷಪಾತ ತೋರಿಸುತ್ತಿದ್ದಾರೆ ಎನ್ನುವುದು ನಮಗೆ ವ್ಯಕ್ತವಾಗುತ್ತದೆ. ಈ ರೀತಿ ವಿದ್ಯಾ ಖಾತೆಯಲ್ಲಿ ಒಂದು ರಾಜಕೀಯ ಮನೋಭಾವ ಬಂದು ಇಡೀ ಜನತೆಯ ಒಂದು ಅಸಮಾಧಾನಕ್ಕೆ ಗುರಿಯಾಗುತ್ತಿರುವ ನಮ್ಮ ವಿದ್ಯಾಮಂತ್ರಿಗಳಲ್ಲಿ ನಾನು ಈ ಸಮಯದಲ್ಲಿ ಪ್ರಾರ್ಥಿಸುವುದು ಏನೆಂದರೆ ಅವರು ತಮ್ಮ ಖಾತೆಯನ್ನು ಪೂರ್ತಿಯಾಗಿ ಶ್ರೀಮತಿ ಗ್ರೇಸ್ ಟಕ್ಕರವರಿಗೆ ವಹಿಸಿ ಇವರು ಯಾವುದಾದರೂ ಒಂದು ಮಠಕ್ಕೆ ಮಠಾಧಿಪತಿಗಳಾಗುವುದು ಒಳ್ಳೆಯದು ಎಂದು ನಾನು ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. (ನಗು)

ಆ ಮೇಲೆ ಟೆಕ್ಸ್ಟ್ ಬುಕ್ ಕಮಿಟಿಗಳೆಂದು ಮಾಡಿದ್ದಾರೆ. ಇವೊತ್ತಿನವರೆಗೂ ಅನೇಕ ಪ್ರೈಮರಿ ಶಾಲೆಗಳ ಮಕ್ಕಳಿಗೆ ಟೆಕ್ಸ್ಟ್ ಬುಕ್ಕುಗಳು ಹೊರಕ್ಕೆ ಬಂದಿಲ್ಲ. ಒಂದೊಂದು ಜಿಲ್ಲೆಗೆ ಒಂದೊಂದು ರೀತಿಯಾದ ಟೆಕ್ಸ್ಟ್ ಬುಕ್ಕುಗಳಿವೆ. ಯಾರಾದರೂ ರಾಜಕೀಯ ಪಂಡಿತರುಗಳಿಗೋಸ್ಕರ ಈ ಕಮಿಟಿ ಇದೆಯೋ ಅಥವಾ ರಾಜ್ಯದ ವಿದ್ಯಾಭ್ಯಾಸಕ್ಕಾಗಿ ಒಂದು ಸರಿಯಾದ ಪದ್ಧತಿ ತರಬೇಕೆಂದಿದೆಯೋ ಗೊತ್ತಾಗುತ್ತಿಲ್ಲ. ಒಂದೊಂದು ಜಿಲ್ಲೆಗೆ ಪ್ರತ್ಯೇಕವಾಗಿ ಏಕೆ ಟೆಕ್ಸ್ಟ್ ಬುಕ್‌ಗಳಿರಬೇಕು ? ಉದಾಹರಣೆಗೆ ಕೋಲಾರ ಜಿಲ್ಲೆಯಿಂದ ಒಬ್ಬರು ಅಧಿಕಾರಿಗಳು ಬೆಂಗಳೂರು ಜಿಲ್ಲೆಗೆ ವರ್ಗವಾಗಿ ಬಂದರೆ ಕೋಲಾರ ಜಿಲ್ಲೆಯಲ್ಲಿ ಅವರ ಮಕ್ಕಳಿಗಾಗಿ ಕೊಂಡು ಕೊಂಡ ಪುಸ್ತಕಗಳು ಇಲ್ಲಿಗೆ ಉಪಯೋಗಕ್ಕೆ ಬರುವುದಿಲ್ಲ. ಬೆಂಗಳೂರಿಗೆ ಬಂದು ಇಲ್ಲಿ ಹೊಸದಾಗಿ ಬೇರೆ ಪುಸ್ತಕಗಳನ್ನು ಕೊಂಡುಕೊಳ್ಳಬೇಕು. ಇದರಿಂದ ವಿದ್ಯಾಭ್ಯಾಸವನ್ನು ಮುಂದುವರಿಸುವುದಾದರೂ

ಹೇಗೆ ? ಒಂದೊಂದು ಕಡೆಗೆ ಒಂದೊಂದು ರೀತಿಯಾದ ಟೆಕ್ಸ್ಟ್ ಬುಕ್ಕುಗಳು ಎಂದು ನಿಗದಿ ಮಾಡಿದರೆ ಜನಗಳಿಗೆ ಎಷ್ಟೋ ಕಷ್ಟವಾಗುತ್ತದೆ. ಇದನ್ನು ಸರಕಾರ ಯೋಚನೆ ಮಾಡಬೇಕು.

ಪ್ರೈಮರಿ ಶಾಲೆಗಳ ಎಂದರೆ ಪ್ರಾಮಿಥಕ ವಿದ್ಯಾಭ್ಯಾಸದ ಆಡಳಿತದ ವಿಚಾರವಾಗಿ ಅನೇಕ ಮಿತ್ರರುಗಳು ಆಗಲೇ ಹೇಳಿದ್ದಾರೆ. ನಮ್ಮ ವಿದ್ಯಾಮಂತ್ರಿ ಅನೇಕ ಕಡೆ ಅನೇಕ ರೀತಿಯಾದ ಹೇಳಿಕೆಗಳನ್ನು ಕೊಡುತ್ತಿದ್ದಾರೆ. ಇದರಿಂದ ಏನಾಗಿದೆ ಎಂದರೆ, ನಾವು ಹಳ್ಳಿಗಳ ಕಡೆ ಹೋದರೆ ಅಲ್ಲಿನ ಜನ ನಮ್ಮನ್ನು ಇದು "ನಿಮ್ಮ ಮಾತೋ ಅಥವಾ ನಿಮ್ಮ ಮಂತ್ರಿಗಳಾದ ಕಂಠಿಯವರ ಮಾತೋ" ಎಂದು ಕೇಳುತ್ತಿದ್ದಾರೆ. ಹೀಗೆ ಗಂಟೆಗೊಂದು ದಿವಸಕ್ಕೊಂದು ಹೇಳಿಕೆಗಳನ್ನು ಕೊಡುತ್ತಿದ್ದಾರೆ; ಆದನ್ನು ಜನ ತಿಳಿದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ.

ಆಲ್ಲದೆ ಹಳ್ಳಿಗಳಲ್ಲಿ ಜನರೇ ಶಾಲಾ ಕಟ್ಟಡಗಳನ್ನು ಕಟ್ಟಿಸಬೇಕೆಂದರೆ ಕಷ್ಟವಾಗುತ್ತದೆ ಎಂದು ಹಿಂದಿನಿಂದಲೂ ಹೇಳುತ್ತಿದ್ದಾರೆ. ಇದರ ದೆಸೆಯಿಂದ ಶಾಲಾ ಕಟ್ಟಡಗಳನ್ನು ಕಟ್ಟಬೇಕಾಗಿದ್ದರೆ ಸಾರ್ವಜನಿಕರಿಂದ ಚಂದಾ ಹಣವನ್ನು ವಸೂಲುಮಾಡಿ ತಂದರೆ ಅಗ ಕಟ್ಟಡದ ನಿರ್ಮಾಣಕ್ಕೆ ಅವಕಾಶ ಮಾಡಿಕೊಡುತ್ತೇವೆಂದು ಹೇಳುತ್ತಾರೆ. ಆದರೆ ಪ್ರತಿಯೊಂದು ಹಳ್ಳಿಯಲ್ಲಿಯೂ ಆ ರೀತಿ ಶಾಲಾ ಕಟ್ಟಡಗಳನ್ನು ಚಂದಾ ಹಣದಿಂದ ಕಟ್ಟಲು ಪ್ರಭಾವವುಳ್ಳವರು ಇಲ್ಲದೇ ಇದ್ದರೆ ಅಂತಹ ಪರಿಸ್ಥಿತಿಯಲ್ಲಿ ಕಟ್ಟಡಗಳನ್ನು ಕಟ್ಟುವುದಕ್ಕೆ ಸಾಧ್ಯವಿಲ್ಲವೆಂದು ಅವರೇ ಹೇಳಿದ್ದಾರೆ.

ಕಡ್ಡಾಯ ಶಿಕ್ಷಣ ದೇಶದಾದ್ಯಂತ ಜಾರಿಗೆ ತಂದಿದ್ದೀರಿ ಮತ್ತು ಇದಕ್ಕಾಗಿ ಕೋಟ್ಯಾಂತರ ರೂಪಾಯಿ ಖರ್ಚುಮಾಡುತ್ತಿದ್ದೀರಿ. ವಿದ್ಯಾಭ್ಯಾಸ ಸೌಕರ್ಯ ಒದಗಿಸಲು ಸ್ಕೂಲ್ ಕಟ್ಟಡ, ಉಪಾಧ್ಯಾಯರಿಗೆ ವಸತಿ ಸೌಕರ್ಯ ಒದಗಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಬೆಂಗಳೂರಿನಲ್ಲಿ ಕಾಲೇಜ ಬದಲಾವಣೆ ಮಾಡುವುದಕ್ಕೆ ಕಟ್ಟಡ ವಿಸ್ತರಣ ಮಾಡುವುದಕ್ಕೆ ಸಾರ್ವಜನಿಕರಿಂದ ಹಣ ಕೇಳುವದಿಲ್ಲ. ಸರಕಾರ ಹಣ ಒದಗಿಸುತ್ತದೆ. ಆದರೆ ಹಳ್ಳಿಗಾಡಿನಲ್ಲಿ ಸಣ್ಣ ಶಾಲೆಗಾಗಿ ಜನರಿಂದ ಹಣ ಕೇಳುತ್ತೀರಿ. ಇದರಿಂದ ಹಳ್ಳಿಗಳಲ್ಲಿ ವಿದ್ಯಾಭ್ಯಾಸ ಮುಂದುವರಿಯಬಾರದು ಎಂಬ ಮನೋಭಾವ ಇದ್ದಹಾಗಿದೆ. ಇಂಥ ನೀತಿಯನ್ನು ಬಿಟ್ಟು ಸರಕಾರ ಎಲ್ಲ ಖರ್ಚನ್ನೂ ವಹಿಸಿಕೊಳ್ಳಬೇಕು. ಗ್ರಾಮಾಂತರಪ್ರದೇಶಕ್ಕೆ ಉಪಾಧ್ಯಾಯರನ್ನು ವರ್ಗಾವಣೆ ಮಾಡುತ್ತೀರಿ. ಅದರಲ್ಲಿಯೂ ಹೆಣ್ಣುಮಕ್ಕಳಿಗೆ ತುಂಬಾ ಅನಾನುಕೂಲವಾಗುತ್ತದೆ. ವಸತಿ ಸೌಕರ್ಯವಿಲ್ಲದೆ ಕಷ್ಟವಾಗುತ್ತದೆ. ಆದ್ದರಿಂದ ಉಪಾಧ್ಯಾಯರಿಗೆ ವಸತಿ ಸೌಕರ್ಯ ಒದಗಿಸಬೇಕೆಂದು ಸೂಚನೆಮಾಡುತ್ತೇನೆ.

ಇನ್ನು ತಾಂತ್ರಿಕ ಶಾಲೆಗಳಿಗೆ ಅಭ್ಯರ್ಥಿಗಳನ್ನು ಆರಿಸಿಕೊಳ್ಳುವುದಕ್ಕೆ ಒಂದು ಕಮಿಟಿ ಮಾಡಿದ್ದೀರಿ. ಮೆರಿಟ್ ಗಣನೆಗೆ ತೆಗೆದುಕೊಂಡು ಚುನಾಯಿಸುತ್ತಾರೆಂದು ಹೇಳುತ್ತೀರಿ. ಆದರೆ ಕೆಲವು ಶಾಲೆಗಳಲ್ಲಿ ಅಕ್ರಮ ನಡೆದಿದೆ. ಕೆ. ಜಿ. ಎಫ್'. ಶಾಲೆಯಲ್ಲಿ ಚುನಾಯಿಸುವಾಗ ಮೆರಿಟ್ ಗಣನೆಗೆ ತೆಗೆದುಕೊಂಡಿಲ್ಲ. ಇದೇ ರೀತಿ ಅನೇಕ ತಾಂತ್ರಿಕ ಶಾಲೆಗಳಲ್ಲಿ ಆಗುತ್ತಾ ಇರಬಹುದು. ಇದು ಸರಿಯಲ್ಲ. ಸರಕಾರದ ನೀತಿ ಎಲ್ಲ ತಾಂತ್ರಿಕ ಶಾಲೆಗಳಿಗೂ ಮೆಡಿಕಲ್ ಸ್ಕೂಲುಗಳಿಗೂ ಒಂದೇ ರೀತಿಯಾಗಿ ಅನ್ವಯಿಸಬೇಕು.

ನಾಲ್ಕನೆಯದಾಗಿ ಇನ್ನೊಂದು ವಿಚಾರ. ಡಿ.ಪಿ.ಐ. ಅವರ ಆಫೀಸಿನಲ್ಲಿ ಒಂದು ಅಚಾತುರ್ಯ ನಡೆದಿದೆ. ಅದು ದೇಶಕ್ಕೆ ಅವಮಾನಕರವಾದ ಸಂಗತಿ. ಅಂಥವರು ಯಾವದೇ ಅಧಿಕಾರಿಯಾಗಿರಲಿ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸರಕಾರಕ್ಕೆ ಮನವಿಗಳು ಬಂದಿವೆ. ಈ ವಿಚಾರದಲ್ಲಿ ಸರಕಾರ ತುಟಿಬಿಚ್ಚಿ ಮಾತನಾಡದೆ ಮೌನವಾಗಿ ಇರುವುದನ್ನು ನೋಡಿದರೆ ಅಂಥ ಅಧಿಕಾರಿಗಳಿಗೆ ಅಪ್ರತ್ಯಕ್ಷವಾಗಿ ಸರಕಾರ ಸಹಕಾರ ನೀಡುತ್ತಿದ್ದಾರೆಂದು ಅನಿಸುತ್ತದೆ. ಸಭೆಯಲ್ಲಿ ನಡೆದ ಚರ್ಚೆಗೆ ಉತ್ತರ ಕೊಡುವಾಗ್ಗೆ ವಿದ್ಯಾಮಂತ್ರಿಗಳು ಈ ವಿಚಾರದಲ್ಲಿ ಏನು ಕ್ರಮ ತೆಗೆದುಕೊಂಡಿದ್ದಾರೆ ಎನ್ನುವುದನ್ನು ಈ ಸಭೆಗೆ ತಿಳಿಸಬೇಕು ಎಂದು ಹೇಳಬಯಸುತ್ತೇನೆ. ವಿದ್ಯಾಮಂತ್ರಿಗಳು ಈ ಸಭೆಗೆ ಸರಿಯಾದ ಸಮಾಧಾನಕರವಾದ ಉತ್ತರ ಕೊಡಬೇಕೆಂದು ಇಷ್ಟು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಫಕೀರಪ್ಪ ಎಸ್. ತಾವರೆ (ಸಿಗ್ಗಾವಿ).—ಮಾನ್ಯ ಸಭಾಪತಿಗಳೇ, ಮಾನ್ಯ ವಿದ್ಯಾಸಚಿವರ ಈ ಸಭೆಯಲ್ಲಿ ಮಂಡಿಸಿರತಕ್ಕಂಥ ಎಜ್ಯುಕೇಷನ್ ಡಿಮ್ಯಾಂಡ ಬಗ್ಗೆ ಮಾತನಾಡುತ್ತಾ ವಿದ್ಯಾ ಇಲಾಖೆಯು ರಾಜ್ಯದ ಜನಕ್ಕೆ ಯಾವ ರೀತಿ ಅನುಕೂಲತೆ ಒದಗಿಸಿಕೊಟ್ಟಿದೆ ಎನ್ನುವುದನ್ನು ಈ ಸಭೆಗೆ ಮತ್ತು ಮಾನ್ಯ ವಿದ್ಯಾ ಸಚಿವರ ಗಮನಕ್ಕೆ ತರಲಿಚ್ಛಿಸುತ್ತೇನೆ. ರಾಜ್ಯದ ಒಟ್ಟು ನೂರು ಕೋಟಿ ಆದಾಯದೊಳಗೆ ವಿದ್ಯಾ ಇಲಾಖೆಗೆ 5/1 ಭಾಗ ಹಣ ವಿದ್ಯಾಭ್ಯಾಸಕ್ಕಾಗಿ ಖರ್ಚುಮಾಡುತ್ತಲಿದ್ದೇವೆ. ಇಷ್ಟು ದೊಡ್ಡ ಮೊತ್ತದ ಹಣ ಖರ್ಚುಮಾಡುವ ಕಾಲಕ್ಕೆ ಅದೂ ಕೂಡ ರಾಷ್ಟ್ರದ ಭಾವೀ ಪ್ರಜೆಗಳಾದ ಮಕ್ಕಳಿಗೆ ತರುಣರಿಗೆ, ಅವರು ತಮ್ಮ ಮುಂದಿನ ಜೀವನದ ಅಸ್ತಿಭಾರ ಹಾಕುವ ಎಜ್ಯುಕೇಷನ ಬಗ್ಗೆ ಮಾತನಾಡುವಾಗ್ಗೆ ಸದಸ್ಯರೆಲ್ಲರೂ ನಮ್ಮ ಹೊಣೆ, ನಮ್ಮ ಜವಾಬ್ದಾರಿ ಅರಿತುಕೊಂಡು ಮಾತನಾಡುವುದಲ್ಲದೆ ಅದರಿಂದ ರಾಜ್ಯದ ಮೇಲೆ ಏನು ಪರಿಣಾಮವಾಗುತ್ತದೆ ಎಂಬುದನ್ನು ಯೋಚನೆ ಮಾಡಿ ಸಮಾಜಕ್ಕೆ ಒಳ್ಳೆಯದು ಆಗುವ ಹಾಗೆ ಮಾತನಾಡಬೇಕು ಎಂದು ಹೇಳುತ್ತೇನೆ. ಯಾವ

(ಶ್ರೀ ಫಕೀರಪ್ಪ ಎಸ್. ತಾವರೆ)

ದೊಂದು ವಿಷಯ ಚರ್ಚೆಮಾಡುವ ಕಾಲಕ್ಕೆ ಅದರ ರೂಪರೇಷೆ ಏನು, ಒಳಿತು ಏನು ಕೆಡಕು ಏನು ಎಂಬುದಕ್ಕೆ ಲಕ್ಷ್ಯ ಕೊಡಬೇಕು. ಮಾತನಾಡುವಾಗ್ಗೆ ದುಡುಕಿ ಕೆಳಗಿನ ಮಟ್ಟಕ್ಕೆ ಹೋಗಬಾರದು. ನಿಜವಾಗಿಯೂ ನ್ಯಾಯವಾದುದನ್ನು ನೋಡುವ ದೃಷ್ಟಕೋಣವಿರಬೇಕು. ಇಲ್ಲದಿದ್ದರೆ ದೇಶಕ್ಕೆ ದ್ರೋಹ ಮಾಡಿದ ಹಾಗಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ರಾಜ್ಯದಲ್ಲಿ ಒತ್ತಾಯದ ತಾಂತ್ರಿಕ ಶಿಕ್ಷಣ ಜಾರಿಗೆ ತಂದಿದ್ದಾರೆ. ಸಮಾಜದಲ್ಲಿ ಅನೇಕ ಸುಧಾರಣೆಗಳಾಗಬೇಕಾಗಿದೆ. ಸರಿಯಾದ ರಸ್ತೆ ಕಟ್ಟಡಗಳಿಲ್ಲ. ಸಮಾಜ ಮುಂದುವರಿಯಬೇಕಾಗಿದೆ. ಹಿಂದಿನ ಕಾಲದಲ್ಲಿ ಶಿಕ್ಷಣಕ್ಕೆ ಬಹಳ ಪ್ರಾಮುಖ್ಯತೆ ಕೊಟ್ಟಿದ್ದರು. ಇದಕ್ಕಾಗಿ ಒಳ್ಳೇ ಶಿಕ್ಷಕರನ್ನು ತಯಾರುಮಾಡುತ್ತಲಿದ್ದರು. ಈ ವಿಚಾರದಲ್ಲಿ ಸರ್ವಜ್ಞ ಕವಿ ಈ ರೀತಿ ಹೇಳಿದ್ದಾನೆ.

"ವಿದ್ಯೆ ಕಲಿಸದ ತಂದೆ ಬುದ್ಧಿ ಹೇಳದ ಗುರುವು
ಬಿದ್ದಿರಲು ಬಂದು ನೋಡದ ತಾಯಿಯು ಈ ಮೂವರು
ಶುದ್ಧ ವೈರಿಗಳು ಸರ್ವಜ್ಞ ॥"

ಆದ್ದರಿಂದ ಮುಖ್ಯವಾಗಿ ಮಕ್ಕಳಿಗೆ ವಿದ್ಯೆ ಕಲಿಸುವ ಕೆಲಸ ಮಾಡಬೇಕೆಂದು ಹೇಳಿದ್ದಾರೆ. ಅದಕ್ಕಾಗಿಯೇ ನಮ್ಮ ರಾಜ್ಯ ಸರಕಾರ ದೇಶದಲ್ಲಿ ಕಡ್ಡಾಯ ಶಿಕ್ಷಣ ಪದ್ಧತಿಯನ್ನು ಜಾರಿಗೆ ತಂದಿದ್ದಾರೆ. ಇದರಲ್ಲಿ ಕೆಲವು ಲೋಪದೋಷಗಳಿರಬಹುದು. ಒಳ್ಳೆ ತತ್ವವಿರುವುದನ್ನು ಮರೆಯಬಾರದು. ಮೊದಲು 1,200 ರೂ. ವರ್ಷಕ್ಕೆ ಆದಾಯವಿರುವವರಿಗೆ ಫ್ರೀಷಿಪ್ ಸಿಕ್ಕುತ್ತಿತ್ತು. ಈಗ 2400 ರೂ. ಆದಾಯ ಇರುವವರಿಗೆ ಫ್ರೀಷಿಪ್ ಸಿಕ್ಕುತ್ತದೆ. ಇದನ್ನು ನೋಡಿದರೆ ನೂರಕ್ಕೆ 90ರಷ್ಟು ವಿದ್ಯಾರ್ಥಿಗಳು ಪುಕ್ಕಟೆ ಶಿಕ್ಷಣ ಪಡೆಯುವುದಕ್ಕೆ ಅರ್ಹರಾಗಿದ್ದಾರೆ. ಇದಕ್ಕಾಗಿ ಒಂದು ಕೋಟಿ ರೂಪಾಯಿ ಖರ್ಚುಮಾಡುತ್ತೇವೆ. ಅದೇ ರೀತಿಯಾಗಿ ಮೊದಲು ಎರಡು ಪರ್ಸೆಂಟ ಸ್ಕಾಲರ್‌ಷಿಪ್ ಸಿಕ್ಕುತ್ತಾ ಇರಲಿಲ್ಲ. ಈಗ 20 ಪರ್ಸೆಂಟ್ ಸ್ಕಾಲರ್ ಷಿಪ್ ಕೊಡಲಾಗುತ್ತಿದೆ. ಇದಕ್ಕಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತಿದ್ದೇವೆ. ಯಾವ ಶಿಕ್ಷಕರು ತಮ್ಮ ಜೀವನಕ್ಕೋಸ್ಕರ ನಿರಾಶಾ ಭಾವನೆ ತೋರಿಸುತ್ತಿದ್ದರೋ ಅಂಥವರ ಸಲುವಾಗಿ ಈಗ ಟ್ರಿಪಲ್ ಬೆನಿಫಿಟ್ ಸ್ಕೀಮ್ ಬಂದಿರುವುದರಿಂದ ಅವರಲ್ಲಿ ಆಶಾಭಾವನೆ ಮೂಡಿದೆ. ಆತ್ಮಬಲ ಶಿಕ್ಷಕರಲ್ಲಿ ಮಾಡಲಿಕ್ಕೆ ಹತ್ತಿದೆ. ಆದರೆ ಅವರಿಗೆ ತಮ್ಮ ಕರ್ತವ್ಯದ ಅರಿವು ಇನ್ನೂ ಆಗಿಲ್ಲ. ಇದು ಸಮಾಜದಲ್ಲಿ ಕಾಣುತ್ತದೆ.

9-30 A.M.

ನಮ್ಮ ಈ ಡಿಮ್ಯಾಂಡನ್ನು ಅನುಮೋದಿಸುತ್ತಾ ಮಾನ್ಯ ಸಚಿವರ ಲಕ್ಷ್ಯಕ್ಕೆ ಒಂದೆರಡು ತಪ್ಪುಗಳನ್ನು ತರ ಬಯಸುತ್ತೇನೆ. ಏನೆಂದರೆ ಇವತ್ತು ಅವರ ಮಲತಾಯಿ ಧೋರಣೆ ಕಡಿಮೆಯಾಗಬೇಕು ರಾಜ್ಯದಲ್ಲಿ ಒಂದು ಊರಿನಲ್ಲಿ 95 ಪರ್ಸೆಂಟ್ ಖರ್ಚನ್ನು ಸರ್ಕಾರ ಹೊತ್ತುಕೊಂಡು ಹೈಸ್ಕೂಲು ನಡೆಸಿದರೆ ರಾಜ್ಯದ ಬೊಕ್ಕಸ ಬರಿದಾಗುತ್ತದೆ. ಇನ್ನೊಂದು ಕಡೆ ಪಾಪ 100ಕ್ಕೆ 90 ರಷ್ಟು ಖರ್ಚು ಹಾಕಿಕೊಂಡು ನಡೆಸುತ್ತೇವೆಂದು ಮುಂದೆ ಬಂದರೂ ಅಲ್ಲಿ ಅನುಕೂಲತೆಗಳನ್ನು ಒದಗಿಸುವುದು ಕಷ್ಟವೆಂದು ಹೇಳುತ್ತಾರೆ, ಒಂದು ಕಡೆ ಪ್ರತಿವರ್ಷ 300 ವಿದ್ಯಾರ್ಥಿಗಳು ಇದ್ದರೂ ಕಟ್ಟಡ ಅಲ್ಲಿಗೆ ಇಲ್ಲ. ಒಂದು ಸ್ಕೂಲಿನಲ್ಲಿ 6-7 ಜನ ವಿದ್ಯಾರ್ಥಿಗಳು ಇದ್ದರೂ ಸಹ ಅಂಥದಕ್ಕೆ ಲಕ್ಷಗಟ್ಲೆ ಹಣತೆತ್ತು ಸ್ಕೂಲ್ ಬಿಲ್ಡಿಂಗ' ಕಟ್ಟಿಸುವ ಕ್ರಮ ನಡೆದಿದೆ. ಆದಕ್ಕೆ ಬಹಳ ನೊಂದುಕೊಂಡು ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ : ಇದು ಹೋಗಬೇಕು ಟೀಕೆ ಟಿಪ್ಪಣಿಗಳ ಲೆಕ್ಕ ಹಾಕಿಕೊಳ್ಳುವಾಗ, ಎಲ್ಲಿಗೆ ಅನ್ಯಾಯ ಏನಿದೆಯೋ, ಅಲ್ಲಿಗೆ ನ್ಯಾಯವಾಗಿ ಸರ್ಕಾರದ ಸಲವತ್ತು ಹೆಚ್ಚಾಗಿ ಸಿಗಬೇಕೋ ಅಲ್ಲಿಗೆ ಕೊಡಬೇಕು. ಅವರಲ್ಲಿ ವಿಶಾಲ ಭಾವನೆ ಬಂದು ಎಲ್ಲ ಭಾಗದ ಜನರನ್ನೂ ಸಮ್ಮ ದೃಷ್ಟಿಯಿಂದ ನೋಡುವ ಮನೋಧೈರ್ಯ ಬರಬೇಕೆಂದು ಬೇಡಿಕೊಳ್ಳುತ್ತಿದ್ದೇನೆ.

ಸಾಧಾರಣವಾಗಿ ಕೆಲವು ಊರುಗಳನ್ನು ಬಿಟ್ಟರೆ ಎಲ್ಲಾ ಕಡೆಯಲ್ಲಿಯೂ ಸ್ಕೂಲುಗಳು ನಡೆಯುತ್ತಾ ಇವೆ. ಆದರೆ ಈ ಸ್ಕೂಲುಗಳಿಗೆ ಕಟ್ಟಡಗಳನ್ನು ಮಾಡಬೇಕಾಗಿದೆ. ಮತ್ತು ಅನೇಕ ಕಡೆಗಳಲ್ಲಿ ಶಿಕ್ಷಕರ ಸಂಖ್ಯೆ ಬಹಳ ಸಣ್ಣ ಪ್ರಮಾಣದಲ್ಲಿದೆ. ಯಾವ ಸ್ಕೂಲಿಗೆ ಹೋಗಿ ನೋಡಿದರೂ ಒಬ್ಬ ಶಿಕ್ಷಕ ಎರಡು ಕ್ಲಾಸು ನಡೆಸುತ್ತಿರುತ್ತಾನೆ ; ಮೂರು ಕ್ಲಾಸುಗಳನ್ನೂ ನೋಡಿಕೊಳ್ಳುತ್ತಿರುತ್ತಾನೆ ಇದು ನಿಜವಾಗಿಯೂ ನಿರುತ್ಸಾಹದ ಮಾತು. ನಮ್ಮ ದೇಶಕ್ಕೆ ಐದು ಸಾವಿರ ಜನ ಪ್ರಾಥಮಿಕ ಶಿಕ್ಷಕರು ಬೇಕಾಗಿದ್ದಾರೆ. ಇನ್ನೂ ಸಾವಿರಾರು ಜನ ತರಪೇತಿ ಹೊಂದದವರು ಇದ್ದಾರೆಂದು ಕೇಳುತ್ತೇನೆ. ಇಷ್ಟು ಮಂದಗತಿಯಿಂದ ಸಾಗಿದರೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಆಗ

ಬೇಕಾದ ಕಾರ್ಯವನ್ನು ಸಾಧಿಸುವುದಕ್ಕಾಗುವುದಿಲ್ಲ. ಆದುದರಿಂದ ತೀವ್ರಗತಿಯಿಂದ ಶಿಕ್ಷಕರಿಗೆ ಟ್ರೇನಿಂಗ್ ಕೊಡುವ ಕಾರ್ಯವನ್ನು ವಿದ್ಯಾ ಇಲಾಖೆ ಕೈಗೊಳ್ಳಬೇಕೆಂದು ಬೇಡಿಕೊಳ್ಳುತ್ತೇನೆ.

ಇದರ ಜೊತೆಯಲ್ಲಿ ಮೈಸೂರು ಯೂನಿವರ್ಸಿಟಿ ಕಡೆಗೆ ಹೊರಳಿದರೆ ಅಲ್ಲಿ ನಡೆಯತಕ್ಕಂಥ ಸ್ನಾತಕೋತ್ತರ ಶಿಕ್ಷಣದ ಕೆಲಸ ಪ್ರಗತಿಯಿಂದ ಸಾಗಿಲ್ಲ. ಆ ಬಗ್ಗೆಯೂ ಕೂಡ ಹೆಚ್ಚಿಗೆ ಲಕ್ಷ್ಯ ಹೋಗಬೇಕಾಗಿದೆ. ಧಾರವಾಡ ಯೂನಿವರ್ಸಿಟಿ ಕಡೆಗೆ ಹೊರಳಿ ನೋಡಿದರೆ ಇವತ್ತು 350 ಎಕರೆಯೊಳಗೆ ವಿಶಾಲವಾದಂಥ ಕಡೆಯಲ್ಲಿ ಈ ವಿದ್ಯಾಲಯ ತಲೆಯೆತ್ತಿ ನಿಂತಿವೆ ; ಕನ್ನಡಿಗರ ಅಭಿಮಾನದಿಂದ ಒಂದು ದೊಡ್ಡ ಸಂಸ್ಥೆಯಾಗಿ ಬೆಳೆಯುತ್ತಾ ಇದೆ.

ನಮ್ಮ ವಿದ್ಯಾಭ್ಯಾಸದ ಅನುಕೂಲತೆಗಳನ್ನು ಒದಗಿಸುವ ಕಾಲಕ್ಕೆ ಮಾನ್ಯ ಮಂತ್ರಿಗಳು ಒಂದು ಕಡೆಗೇ ಲಕ್ಷ್ಯ ಕೊಟ್ಟು ಹಾಗೆ ಮಹತ್ವವಾಗಿ ಕಾಣಿಸುತ್ತದೆ. ಯಾವ ಭಾಗದಲ್ಲಿ ಶಿಕ್ಷಣದಲ್ಲಿ ಹಿಂದುಳಿದಂಥ ಜನರ ಸಂಖ್ಯೆ ಪ್ರಮಾಣ ಯಾವ ರೀತಿ ಇದೆ, ಅಲ್ಲಿಗೆ ಹೆಚ್ಚಿಗೆ ಗಮನ ಕೊಡುವುದು ನಮ್ಮ ಕರ್ತವ್ಯ. ಬೆಂಗಳೂರು ಊರೊಳಗೆ ನೋಡಿದರೆ ಅಂದಾಜು 49.6ರಷ್ಟು ಶಿಕ್ಷಣ ಹೊಂದಿದ ಜನರು ಸಿಗುತ್ತಾರೆ. ಕೊಡಗಿನಲ್ಲಿ 39ರಷ್ಟು ಸಿಗುತ್ತಾರೆ. ಬಿದರೆ, ಗುಲ್ಬರ್ಗ, ರಾಯಚೂರು ಭಾಗದಲ್ಲಿ 14, 15 ಪರ್ಸೆಂಟೇಜ್ ಸಿಗಬಹುದು. ಅದರಲ್ಲೂ ಹಿಂದುಳಿದ ಭಾಗಗಳನ್ನು ನೋಡಿದರೆ, 1, 2, 3 ರಷ್ಟು ಇರುವ ಒಂದು ದುಃಖದಾಯಕವಾದ ಪರಿಸ್ಥಿತಿ ಕಾಣುತ್ತಾ ಇದೆ. ಇದನ್ನು ಮಾನ್ಯ ವಿದ್ಯಾಸಚಿವರು ಲಕ್ಷ್ಯದಲ್ಲಿ ಇಟ್ಟುಕೊಂಡು ಯಾವ ಭಾಗಕ್ಕೆ ಹೆಚ್ಚು ಅನುಕೂಲತೆಗಳನ್ನು ಒದಗಿಸಬೇಕು, ಎಲ್ಲಿ ಜನ ಮುಂದೆ ಬಂದಿದ್ದಾರೆ, ಎಲ್ಲ ರಾಜ್ಯದ ನೆರವಿಲ್ಲದೆ ಹಿಂದುಳಿದಿದ್ದಾರೆ, ಯಾವ ಟೀಕೆ ಟಿಪ್ಪಣಿಗಳಿಗೆ ಲಕ್ಷ್ಯ ಕೊಡುತ್ತಾ ಇಲ್ಲ ಮತ್ತು ಗಣನೆಗೆ ತೆಗೆದುಕೊಂಡು, ಎಲ್ಲರನ್ನೂ ಒಂದೇ ದೃಷ್ಟಿಯಿಂದ ನೋಡಿಕೊಂಡು ಹೋದರೆ, ಅವರ ಕೈಯಲ್ಲಿ ಇಲಾಖೆ ಇರುವುದು ಸಾರ್ಥಕವಾಗುತ್ತದೆ, ದೇಶಕ್ಕೆ ಗೌರವ ಬಂದೀತು ಎಂದು ಅವರಲ್ಲಿ ಹೇಳಿಕೊಂಡು, ಮಾತನಾಡಲು ಸಮಯ ಒದಗಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ಉಪಕಾರ ಸ್ಮರಿಸಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಎಸ್. ಆರ್. ಕಂಠಿ (ವಿದ್ಯಾಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ನಿನ್ನೆಯಿಂದ ಈ ಚರ್ಚೆಯಲ್ಲಿ ಭಾಗವಹಿಸಿದಂಥ ಮಾನ್ಯ ಸದಸ್ಯರುಗಳೆಲ್ಲರಿಗೂ ನಾನು ತುಂಬಾ ಋಣಿಯಾಗಿದ್ದೇನೆ. ಅವರಿಗೆ ನನ್ನ ಅಭಿವಂದನೆಗಳನ್ನು ಅರ್ಪಿಸುತ್ತಾ ಇದ್ದೇನೆ.

ಈ ವಿದ್ಯಾ ಇಲಾಖೆ ಬಹಳ ದೊಡ್ಡದು, ಇದಕ್ಕೆ ಬಹಳ ಹಣ ಕೊಟ್ಟಿದ್ದೇವೆ, ಅದನ್ನು ಸರಿಯಾಗಿ ನಡೆಸಿಕೊಂಡು ಹೋಗುತ್ತೇವೆಯೋ ಇಲ್ಲವೋ ಅನ್ನತಕ್ಕಂಥ ಕೆಲವು ಮಾತುಗಳು ಒಬ್ಬ ಸದಸ್ಯರಿಂದ ಬಂದವು. ಈ ವಿಚಾರವಾಗಿ ನಾನು ಸ್ವಲ್ಪ ವಿಶದವಾಗಿ ಹೇಳಬೇಕೆಂತ ಮಾಡಿದ್ದೇನೆ. ಏಕೆಂದರೆ ಈಗ ಕೊಟ್ಟಂಥ ದುಡ್ಡನ್ನು ಸರಿಯಾಗಿ ನಡೆಸಿಕೊಂಡು ಹೋಗಲಾರದಂಥ ಸ್ಥಿತಿ ನಮ್ಮಲ್ಲಿ ಇಲ್ಲ ಎಂದು ನನಗೆ ಅನ್ನಿಸುತ್ತಾ ಇದೆ. ಈ ಒಂದು ವರ್ಷ ಕಾಲದಲ್ಲಿ ಬಹಳ ಕಷ್ಟಪಟ್ಟು ಎಲ್ಲಾ ಆಫೀಸುಗಳಲ್ಲಿ ಮತ್ತು ಆಡಳಿತ (administration) ವರ್ಗದಲ್ಲೂ ಸುವ್ಯವಸ್ಥಿತವಾದ ಆಡಳಿತ ತರುವ ಪ್ರಯತ್ನವನ್ನು ಮಾಡಲಾಗಿದೆ. ಇನ್ನೂ ಅನೇಕ ಕುಂದುಕೊರತೆಗಳಿವೆ. ಅವುಗಳನ್ನ ಹೋಗಲಾಡಿಸಬೇಕಾದರೆ ಅದಕ್ಕೆ ಇನ್ನೂ ಕೊಂಚಕಾಲ ಜಾಸ್ತಿಬೇಕು. ಆದ್ದರಿಂದ ಮಾನ್ಯ ಸದಸ್ಯರು ಹಾಗೆಯೇ ಸ್ವಲ್ಪ ತಾಳ್ಮೆಯಿಂದ ತಡೆಯಬೇಕು ಎಂದು ನಾನು ಅವರಲ್ಲಿ ಕೇಳಿಕೊಳ್ಳುತ್ತಾ ಇದ್ದೇನೆ.

ಮತ್ತೊಂದು ಮಾತೆಂದರೆ ಒಬ್ಬ ಸದಸ್ಯರು ಜಾತೀಯತೆಯ ವಿಚಾರವಾಗಿ ಮಾತನಾಡಿದರು. ಜಾತೀಯತೆಯ ಒಂದು ಉದಾಹರಣೆಯನ್ನು ಅವರು ಏನು ಹೇಳಿದ್ದಾರೋ ಈ ವಿಚಾರವಾಗಿ ಅನೇಕ ಸಲ ಹೇಳಿದ್ದೇನೆ. ಈ ಮನೆಯಲ್ಲಿ ಈ appointment of Joint Director of Technical Education ವಿಚಾರವಾಗಿ ಪುನಃ ಪುನಃ ಜಾತೀಯತೆಯ ಮಾತು ಹೇಳುವಾಗ, ಈ ಮಾತಿನ ವಿಷಯಕ್ಕೆ ಖುಲಾಸೆ ಕೊಟ್ಟಿದ್ದೇನೆ. ಅವರು ಯಾರಿಗಾದರೂ ಸಂಶಯದ ಬಾಧೆ ಇದ್ದರೆ, ಈ appointment of Joint Director of Technical Education ವಿಚಾರವಾಗಿ ತಮ್ಮ ಕಡೆಗೂ ನಾನು ಫೈಲನ್ನು ತಂದುಕೊಡುತ್ತೇನೆ, ತಾವು ಅದರಲ್ಲಿ ನಿರ್ಣಯವನ್ನು ಕೊಡಬಹುದು ತಾವು ಜಾತೀಯತೆ ಇದೆಯೆಂದು ಹೇಳಿದರೆ, ನಾನು ಒಪ್ಪಿಕೊಳ್ಳುತ್ತೇನೆ ಎಂದು ತಮ್ಮ ಮುಂದೆ ಹೇಳುತ್ತೇನೆ. ಅದು ಇಲ್ಲದೆ ಹೋದರೆ ಹೈಕೋರ್ಟು ಜಡ್ಜುಗಳಿಗೆ ಫೈಲನ್ನು ಕೊಡುತ್ತೇನೆ. ಅವರೇ ಹೇಳಲಿ ನನ್ನದು ತಪ್ಪು ಇದೆಯೆಂದು ಹೇಳಿದರೆ ಈ ಮಂತ್ರಿಪದವಿಗೂ, ಈ ಮಾನ್ಯ ಸಭೆಯ ಸದಸ್ಯತ್ವಕ್ಕೂ ರಾಜೀನಾಮೆ ಕೊಡಲು ಸಿದ್ಧನಿದ್ದೇನೆ. ಯಾರೋ ಅಧಿಕಾರಿಗಳು ಏನೋ ತಮ್ಮ ಸ್ವಂತದ ಸ್ವಾರ್ಥಕ್ಕಾಗಿ ಈ ತರಹ ನಿರಪರಾಧಿಗಳಾದಂಥ ಸದಸ್ಯರನ್ನು ಉಪಯೋಗ ಮಾಡಿಕೊಂಡಿರತಕ್ಕದ್ದು ಸರಿಯಲ್ಲ. ಅದನ್ನು ಸ್ವಚ್ಛವಾಗಿ ತಿಳಿದುಕೊಳ್ಳಬೇಕು. ಯಾವುದಾದರೂ ಒಂದು ಮಾತು ಯಾರೋ ಅಧಿಕಾರಿಗಳು ಹೇಳಿದರೆ, ಅದು ಸತ್ಯವೋ ಅಸತ್ಯವೋ, ನಿಜವೋ ಅಲ್ಲವೋ ಅನ್ನುವ ಮಾತನ್ನು ನೀವು ಸ್ವಚ್ಛವಾಗಿ ತಿಳಿದುಕೊಂಡು ಮಾತನಾಡಬೇಕು. ಅಂಥ ಸ್ಥಿತಿಯನ್ನು ನಾವು ಕಲ್ಪಿಸಿಕೊಡುತ್ತೇವೆ. ಆದುದರಿಂದ

(ಶ್ರೀ ಎಸ್. ಆರ್. ಕಂಠಿ)

ಯಾರಾದರೂ ಸದಸ್ಯರು ಇಂಥವರಿಗೆ ಹೀಗಾಗಿದೆ ಅಂತ ಒಂದು ಮಾತನ್ನು ಹೇಳಿದರೆ, ನಾನು ಅವರ ಹತ್ತಿರ ಕೂತುಕೊಂಡು ನಾನೇ ಅವರಿಗೆ ಎಲ್ಲ ವಿಧವಾದಂಥ ನಿಜವಾದ ಸಂಗತಿ ಹೇಳಿಕೊಟ್ಟು, ಆ ಮೇಲೆ ಇವರು ಏನು ಎಲ್ಲಾ ಮಾತು ಹೇಳುವುದು ಸರಿ ಎಂದು ಒಪ್ಪಿಕೊಳ್ಳುತ್ತೇನೆ. ಇಲ್ಲದಿದ್ದರೆ ನಿಸ್ವಾರ್ಥಿಗಳಾದಂಥ ನಿಷ್ಪಕ್ಷಪಾತಿಗಳಾದಂಥ ಜನಗಳಿಗೆ ನಾನು ಅದನ್ನು submit ಮಾಡಲಿಕ್ಕೆ ಸಿದ್ಧನಿದ್ದೇನೆ. ಜಾತಿ ಜಾತಿಯ ಮಾತನ್ನು ಆಡುವುದು ಸರಿಯಲ್ಲ. ಏಕೆಂದರೆ ಯಾವುದೋ ಜಾತಿಯವರು ಇವತ್ತಿನ ದಿವಸ ಒಂದು ದೊಡ್ಡ ಸ್ಥಾನಕ್ಕೆ ಹೋದರೆ ನನಗೆ ಬರುವ ಭಾಗ್ಯ ಅಷ್ಟರಲ್ಲಿಯೇ ಇದೆ. ನನ್ನ ಜಾತಿಯವರು ದೊಡ್ಡ ಅಧಿಕಾರಿಯಾದರೆ ನನಗೆ ಬರುವ ಭಾಗ್ಯ ಅಷ್ಟೇ. ಬೇರೆ ಜಾತಿಯವರು ಆದರೆ ನನ್ನ ಮೇಲೆ ಆಕಾಶ ಕಳಚಿಬೀಳುವುದು ಅಷ್ಟರಲ್ಲಿಯೇ ಇದೆ. ನಾನು ಮುಂಬೈ ರಾಜ್ಯದಿಂದ ಇಲ್ಲಿಗೆ ಬಂದವನು : ಯಾವ ರಾಜ್ಯದಲ್ಲಿ Communalism ಭಾವನೆ ಬಹಳ ಕಡಿಮೆ ಇದೆಯೋ ಅಂಥ ಕಡೆಯಿಂದ ಬಂದವನಾದುದರಿಂದ ನನಗೆ ಜಾತಿಯ ಭಾವನೆಗಳು ಬರುವುದಿಲ್ಲ. ಈ ವಿಚಾರವೆಲ್ಲಾ ನನ್ನಲ್ಲಿ ಬರುವುದಿಲ್ಲ: ಆದರೂ ಕೂಡ ಪುನಃ ಪುನಃ ಜಾತೀಯತೆಯ ಚಾರ್ಜ್ ನನ್ನ ಮೇಲೆ ಮಾಡುವುದರಿಂದ, ಜನಗಳಿಗೆ ಕೂಲಂಕಷವಾಗಿ, ದೇವರ ಸಾಕ್ಷಿಯಾಗಿ ವಿಚಾರ ಮಾಡಬೇಕೆಂದು ಅವರಿಗೆ ನಾನು ಬೇಡಿಕೊಳ್ಳುತ್ತಾ ಇದ್ದೇನೆ.

ಶ್ರೀ ಇ. ನಾರಾಯಣ ಗೌಡ.—ಒಮ್ಮೊಮ್ಮೆ ಸ್ವಾಮಿಗಳ ಪ್ರಭಾವಕ್ಕೆ ಒಳಗಾಗಿ ಬಿಡುತ್ತೀರ.

ಶ್ರೀ ಎಸ್. ಆರ್. ಕಂಠಿ.—ಯಾರ ಪ್ರಭಾವಕ್ಕೂ ಒಳಗಾಗುವುದಿಲ್ಲ ಎಂದು ನಿಮಗೆ ಹೇಳಿದ್ದೇನೆ. ಹೈಕೋರ್ಟಿನ ಜಡ್ಜಿಗಳು ತೆಗೆದುಕೊಂಡು ಸರ್ಕಾರ ತಪ್ಪು ಅಂತ ಹೇಳಿದರೆ ಒಪ್ಪಿಕೊಳ್ಳುತ್ತೇನೆ. ಸುಮ್ಮನೆ ಯಾರೊಬ್ಬರು ಅಧಿಕಾರಿಗಳೂ ತಮಗೆ ಅನ್ಯಾಯವಾಗಿದೆ ಎಂದು ಭಾವಿಸಿಕೊಂಡು ಅನ್ಯಾಯವಾದ ರೀತಿಯಲ್ಲಿ ಪಾಪ, ಹೌಸಿನ ಅಥವಾ ಮೇಲ್ಮನೆ ಸದಸ್ಯರ ಪ್ರಯೋಜನ ಪಡೆಯಬಾರದೆಂದು ವಿನಂತಿ ಮಾಡಿಕೊಳ್ಳುತ್ತಾ ಇದ್ದೇನೆ.

ಆದ್ದರಿಂದ ಅವರ ಮೇಲೆ ಕ್ರಮತೆಗೆದುಕೊಳ್ಳುವ ಪ್ರಸಂಗ ಬಂದರೂ ತೆಗೆದುಕೊಳ್ಳಬಾರದು, ತೆಗೆದುಕೊಳ್ಳುವುದು ಸರಿಯಾದ್ದಲ್ಲ ಎಂದು ಮಾಡಿದ್ದೇನೆ. ಏಕೆಂದರೆ ಕೆಲವುಕಾಲ ನೋಡೋಣ, ನಂತರ ಸರಿಯಾಗುತ್ತದೆ ಎಂದು ತಿಳಿದುಕೊಂಡಿದ್ದೇನೆ. ಶ್ರೀಮಾನ್ ನಂಜೇಗೌಡರು ಸ್ಕಾಲರ್‌ಷಿಪ್ ಕಮಿಟಿ ವಿಚಾರ ಹೇಳಿದರು. ಯಾವ ಉದ್ದೇಶದಿಂದ ಮಾಡಿದ್ದೇವೆ ಎಂದು ಕೇಳುತ್ತಾರೆ. ಗವರ್ನ್‌ಮೆಂಟ್ ಆರ್ಡರ್ ಇದೆ ಆ ಪ್ರಕಾರ ಮಾಡಿದ್ದೇವೆ ಅದನ್ನು ಅವರು ನೋಡಿಕೊಳ್ಳಬಹುದು. ಎಲ್ಲಾ ಸ್ಕಾಲರ್‌ಷಿಪ್ ಕಮಿಟಿ ಚೆನ್ನಾಗಿದೆ ಎಲ್ಲರೂ ಒಪ್ಪುವಂಥಹುದು ಆಗಿದೆ ಎಂದು ನಾನು ಎಂದೂ ಹೇಳುವುದಿಲ್ಲ. ಏಕೆಂದರೆ ಕಮಿಟಿ ಮಾಡುವ ಕಾಲಕ್ಕೆ ಅದರಲ್ಲಿ ಸ್ವಲ್ಪ ವ್ಯತ್ಯಾಸವಾಗುತ್ತಾ ಇದೆ. ಇಡೀರಾಜ್ಯದಲ್ಲಿ 178 ಸ್ಕಾಲರ್‌ಷಿಪ್ ಕಮಿಟಿಗಳನ್ನು ಮಾಡುವ ಕಾಲಕ್ಕೆ ಎಲ್ಲಾ ಕಡೆಯಲ್ಲೂ ನಾವು ಕಣ್ಣು ಇಟ್ಟುಕೊಂಡು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನಂಜೇಗೌಡರಂಥ ಜನಗಳು ಯಾರಿಗೆ ಅನ್ಯಾಯವಾಗಿದೆ ಎಂದು ಅನಿಸುತ್ತಾ ಇದೆ ಅಂಥಾ ಮಾನ್ಯ ಸದಸ್ಯರು ಬಂದು ಹೇಳಿದರೆ ಒಪ್ಪಿಕೊಳ್ಳುವುದಕ್ಕೆ ಸಿದ್ಧವಾಗಿದ್ದೇನೆ. ಒಪ್ಪಿಕೊಂಡಿದ್ದೇನೆ. ಆದರೆ ಇದರಲ್ಲಿ ಭೂತ ಇದೆ, ಜಾತಿವಾದ ಇದೆ, ಎನ್ನುವುದು ಸರಿಯಲ್ಲ. ಮೇಲ್‌ಮನೆ ಮಾನ್ಯ ಸದಸ್ಯರು, ಈ ಮನೆ ಮಾನ್ಯ ಸದಸ್ಯರು ಜಾತಿಯ ವಿಚಾರವನ್ನು ಎತ್ತುವುದು ಸಂಪೂರ್ಣವಾಗಿ ಬಿಟ್ಟು ನಿಷ್ಕಳವಾಗಿ ಶಿಸ್ತಿನಿಂದ ವಿಚಾರ ಮಾಡೋಣ. ಅಲ್ಲದೆ ಯಾರು ಜಾತಿವಾದ ತರುತ್ತಾರೆ ಅವರಿಗೆ ನಿಷ್ಠುರವಾಗಿ ಹೇಳೋಣ ಇದು ಸರಿಯಲ್ಲ ಎಂದು. ಜಾತಿವಾದ ಎಂದರೆ ಹೇಗೆ ಏನು ಎಂದು ಕೂಲಂಕಷವಾಗಿ ಪರಿಶೀಲನೆ ಮಾಡೋಣ. ಅದರಿಂದ ಜಾತಿವಾದ ಹೋಗುತ್ತದೆ ; ಇಲ್ಲದೆ ಹೋದರೆ ನಮ್ಮ ರಾಜ್ಯ ಸರಿಯಾಗಿ ನಡೆಯುವುದಿಲ್ಲ ಎಂದು ತಿಳಿದುಕೊಂಡಿದ್ದೇನೆ.

ಸೆಂಟ್ರಲ್ ಕಾಲೇಜಿನ ಟ್ಯೂಟರ್ಸ್ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. 5 ಜನ ಪ್ರೊಫೆಸರ್ಸ್ ಇದ್ದಾರೆ ಅದರಲ್ಲಿ ಇಬ್ಬರು ಟ್ಯೂಟರ್ಸ್ ಇದ್ದದ್ದು ನಿಜ. ಡೈರೆಕ್ಟರ್ ಆಫ್ ಕೊಲಿಜಿಯೇಟ್ ಎಜ್ಯುಕೇಷನ್, ಅವರೂ ಒಂದೇ ಜಾತಿಯವರು ಇರಬಹುದು. ಇಂಥಾ ಪ್ರಶ್ನೆ ಬಂದಾಗ ಕೂಲಂಕಷವಾಗಿ ವಿಚಾರ ಮಾಡಬೇಕು. ಅದು ಏನಾಗಿದೆ ಎಂಬುದನ್ನು ನೋಡಿ. ಕೆಳಗಿನವರು ಯಾರಾದರೂ ಯೋಗ್ಯರು ಇದ್ದರೆ ಅವರನ್ನು ಮೇಲ್‌ಭಾಗಕ್ಕೆ ತಂದಿರಬಹುದು. ಇದು ಗೊತ್ತಾಗುವುದು ಕಷ್ಟ. ಪಾಲಿಸಿ ಪ್ರೋಗ್ರಾಂ ಪ್ರಕಾರ ನಡೆಯಬೇಕಾಗುತ್ತದೆ. ಆದರೆ ಆ ರೀತಿ ಕಾರ್ಯರೂಪದಲ್ಲಿ ನಡೆಯುವುದಕ್ಕೆ ಸಾಧ್ಯವೇ ? ಪ್ರತಿಯೊಂದು ಕಾಲೇಜು, ಪ್ರತಿಯೊಂದು ಶಾಲೆ, ಪ್ರತಿಯೊಂದು ಸಂಸ್ಥೆಯಲ್ಲಿ ನಡೆಯುವುದಕ್ಕೆ ಸಾಧ್ಯವಿಲ್ಲ ಎನ್ನುವುದನ್ನು ನಿಮಗೆ ತಿಳಿಸಬಯಸುತ್ತಾ ಇದ್ದೇನೆ. ಪಿ. ಎಚ್. ಡಿ. ಪಾಸ್ ಆದವರು ಒಂದೇ ಜಾತಿಯವರು ಇರುವುದಿಲ್ಲ. ಮೊನ್ನೆ ದಿವಸ 150 ಜನರನ್ನು ಇಂಟರ್‌ವ್ಯೂ

ಮಾಡಿದ್ದೆವು ; ಅದರಲ್ಲಿ ಪಿ. ಎಚ್. ಡಿ. ಪಾಸ್ ಆದವರು ಬೇರೆ ಬೇರೆ ಜಾತಿಯವರು ಇದ್ದರು. ಯೋಗ್ಯತೆ ಇದ್ದರೂ ಇನ್ನೂ ಮೇಲಿನ ಜಾಗಕ್ಕೆ ಏಕೆ ಹಾಕಲಿಲ್ಲ ಎಂದರೆ ಐ. ಎ. ಎಸ್. ಲಿಸ್ಟ್ ಮಾಡಿರಲಿಲ್ಲ, ಕೇಡರ್, ರಿಕ್ರೂಟ್‌ಮೆಂಟ್ ರೂಲ್ಸ್ ಮಾಡಿರಲಿಲ್ಲ. ಅದನ್ನೆಲ್ಲಾ ಮಾಡುತ್ತಾ ಇದ್ದೇವೆ. ಐ. ಎ. ಎಸ್. ಪ್ರೊವಿಷನಲ್ ಲಿಸ್ಟ್ ಆಗಿತ್ತು. ತಕರಾರು ಅರ್ಜಿ ಹಾಕುತ್ತಾ ಇದ್ದಾರೆ. ಅದನ್ನೆಲ್ಲಾ ನೋಡುತ್ತಾ ಇರುವುದರಿಂದ ಇಷ್ಟರಲ್ಲೇ ಟ್ಯೂಟರ್ಸ್‌ನ್ನು ಮೇಲೆ ಹಾಕಬೇಕು ; ಅದನ್ನು ನೋಡಿ, ಪ್ರಮೋಷನ್ ಕೊಡಬೇಕೆಂಬ ನಿರ್ಣಯ ಮೊನ್ನೆ ದಿವಸ ತೆಗೆದುಕೊಂಡಿದ್ದೇವೆ.

ಶ್ರೀ ಜಿ. ದುಗ್ಗಪ್ಪ (ಹೊಳಲ್ಕೆರೆ).—ಸೆಂಟ್ರಲ್ ಕಾಲೇಜಿನಲ್ಲಿ ಪೋಸ್ಟ್ ಗ್ರ್ಯಾಜ್ಯುಯೇಟ್ ಸ್ಟಡೀಸ್ ಪ್ರಾರಂಭಮಾಡಿದ್ದೀರಿ. ಅಲ್ಲಿ ಅಧ್ಯಾಪಕರು ಯಾರು ಇರಬೇಕೆಂದರೆ ಪೋಸ್ಟ್ ಗ್ರ್ಯಾಜ್ಯುಯೇಟ್ ಕ್ವಾಲಿಫಿಕೇಷನ್ ಇದ್ದವರು ಇರಬೇಕು. ಆರ್ಡಿನರಿ ಎಂ. ಎ. ಮಾಡಿರತಕ್ಕ ಅಧ್ಯಾಪಕರನ್ನು ತಾವು ಇಲ್ಲಿಗೆ ನೇಮಕ ಮಾಡಿದ್ದೀರಿ. Historyನಲ್ಲಿ ಎಂ.ಎ., ಪಿ.ಎಚ್.ಡಿ., ಫಾರಿನ್ ಯೂನಿವರ್ಸಿಟಿಯಲ್ಲಿ, ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾಗಿರುವವರನ್ನು ಬಿಟ್ಟು......

ಶ್ರೀ ಎಸ್. ಆರ್. ಕಂಠಿ.—ನೀವು ಹೇಳಿದ್ದರಲ್ಲಿ ಅರ್ಥ ಇದೆ. ಅದನ್ನು ನೋಡಿಸುತ್ತೇನೆ. ಯೂನಿವರ್ಸಿಟಿಯವರು ಕೆಲವೊಂದು ಕಂಡೀಷನ್‌ಗಳನ್ನು ಹಾಕಿದ್ದಾರೆ. ಆ ಕಂಡೀಷನ್‌ಗಳ ಪ್ರಕಾರ ನಡೆಯಬೇಕಾಗುತ್ತದೆ. ನಡೆಯುತ್ತಾ ಇದ್ದೇವೆ ಎಂದು ಭಾವನೆ ಮಾಡಿದ್ದೇನೆ. ಯೂನಿವರ್ಸಿಟಿಯವರು ಹಾಕಿದ ನಿಯಮಗಳನ್ನು ಮೀರಿ ನಡೆಸಬೇಕೆಂಬ ಇಚ್ಛೆ ಇದೆ. ಬೇರೆ ಯಾವುದೋ ಪೋಸ್ಟ್ ಗ್ರ್ಯಾಜ್ಯುಯೇಟ್ ಸ್ಟಡೀಸ್‌ಮಾಡಿ ಹೆಸರು ಪಡೆಯಬೇಕೆಂದಿಲ್ಲ. ಸೆಂಟ್ರಲ್ ಕಾಲೇಜು ಐಡಿಯಲ್ ಕಾಲೇಜು. ಅದು ಐಡಿಯಲ್ ಆಗಿ ನಡೆಸಬೇಕೆಂದೇ ಉದ್ದೇಶ ಇದೆ.

ಪ್ರೈಮರಿ ಎಜ್ಯುಕೇಷನ್ ವಿಚಾರವಾಗಿ ಬಹಳ ಜನರು ಮಾತನಾಡಿದ್ದಾರೆ. ನಿಜವಾಗಿಯೂ ಬಹಳ ಮಹತ್ವದ ವಿಷಯ ಅದನ್ನು ಮಾತನಾಡಿದ್ದು ಸರಿ. ಇದಕ್ಕೆ ಬರುವುದಕ್ಕೆ ಮುಂಚೆ ಸ್ಕಾಲರ್ ಷಿಪ್ ಕಮಿಟಿ ವಿಚಾರದಲ್ಲಿ ಒಂದು ಮಾತು ಹೇಳುತ್ತೇನೆ. ಏನೆಂದರೆ ಈ ಸ್ಕಾಲರ್‌ಷಿಪ್‌ಗಳನ್ನು ಕೆಲವೊಂದು ನಿಯಮಾವಳಿಗಳ ಪ್ರಕಾರ ಹಂಚಿದ್ದೇವೆ. ಮೊದಲು ಡಿಸ್ಟ್ರಿಕ್ಟ್‌ದಲ್ಲಿ ಇರುವಂಥ ಜನ ಸಂಖ್ಯೆ ತೆಗೆದುಕೊಂಡು ಸ್ಕಾಲರ್‌ಷಿಪ್ ಕೊಡುತ್ತಾ ಇದ್ದೆವು. ಆ ಮೇಲೆ ಪ್ರತಿಯೊಂದು ತಾಲ್ಲೂಕಿಗೂ ಆ ತಾಲ್ಲೂಕಿನಲ್ಲಿರುವಂಥ ಶಾಲೆಗಳಲ್ಲಿ ಓದುವಂಥ ವಿದ್ಯಾರ್ಥಿಗಳ ಜನಸಂಖ್ಯೆ ಪ್ರಮಾಣ ನೋಡಿಕೊಂಡು ಕೊಟ್ಟಿದ್ದಾಗಿದೆ. ಇದು ಕೆಲವು ಕಡೆ ಏನಾಗಿದೆ ಎಂದರೆ ನಮ್ಮ ಜಿಲ್ಲೆಯಲ್ಲಿ ಹೇಳುತ್ತೇನೆ. ವಿಜಾಪುರ ಜಿಲ್ಲೆಯಲ್ಲಿ ಜನಸಂಖ್ಯೆ ಬಹಳ ಜಾಸ್ತಿ, ರೂರಲ್ ಏರಿಯಾದಲ್ಲಿ ಜಾಸ್ತಿ ಸಿಕ್ಕಬೇಕೆಂಬ ಉದ್ದೇಶದಿಂದ ಅರ್ಬನ್ ಏರಿಯಾದಲ್ಲಿ ಕಮ್ಮಿ ಮಾಡಿ ಎಂದು ಜನರಲ್ ಆಗಿ ಆದೇಶ ಕೊಟ್ಟಿದ್ದೇವೆ. ಇದರ ಉದ್ದೇಶ ಇಷ್ಟೆ; ಗ್ರಾಮಾಂತರಗಳಲ್ಲಿ ನಡೆಯುವಂಥ ಹೈಸ್ಕೂಲುಗಳಿಗೆ ಹೆಚ್ಚು ಸಿಕ್ಕಬೇಕು. ಕೃಷ್ಣರಾಜಪೇಟೆ ಅದು ಗ್ರಾಮಾಂತರವಲ್ಲ. ಅದು ಅರ್ಬನ್ ಏರಿಯಾ ಅವರಿಗೆ ಕಡಿಮೆ ಸಿಕ್ಕಿರಬಹುದು.

ಪ್ರೈಮರಿ ಎಜ್ಯುಕೇಷನ್ ಬಗ್ಗೆ ಶ್ರೀಮತಿ ವಿಜಯದೇಸಾಯಿ ಅವರು ಇಷ್ಟು ವರ್ಷ ಆದರೂ ಒಂದೂ ಮುಂದೆ ಹೋಗಿಲ್ಲ ಎಂಬ ಮಾತನ್ನು ಹೇಳಿದರು. ಅವರು ಏಕೆ ಆ ರೀತಿ ಹೇಳಿದರೋ ಗೊತ್ತಾಗಲಿಲ್ಲ. ಯಾರ ಮೇಲೆ ಇದು ರಿಫ್ಲೆಕ್ಷನ್ ಎಂಬುದನ್ನು ಅವರು ಅರ್ಥಮಾಡಿಕೊಳ್ಳಲಿಲ್ಲ. ಹೀಗೆ ಹೇಳಿದಾಕ್ಷಣಕ್ಕೆ ಯಾವ ಕಾಂಗ್ರೆಸ್ ಪಾರ್ಟಿಗೆ ಅವರು ಸೇರಿದ್ದಾರೋ ಆ ಕಾಂಗ್ರೆಸ್ ಪಾರ್ಟಿಯವರು ಸ್ವಾತಂತ್ರ್ಯ ಬಂದ ಮೇಲೆ ಏನೂಮಾಡಿಲ್ಲ ಎಂದು ಅರ್ಥವಾಗುತ್ತದೆ. ಇದನ್ನು ಅವರು ಸ್ವಲ್ಪ ಯೋಚನೆ ಮಾಡಬೇಕಾಗಿತ್ತು. ಇದನ್ನು ನಾನು ಒಪ್ಪುವುದಿಲ್ಲ. ಕಾಂಗ್ರೆಸ್ ಪಾರ್ಟಿ ಅಧಿಕಾರದಲ್ಲಿರಲಿ, ಮತ್ತೆ ಯಾವ ಪಾರ್ಟಿ ಅಧಿಕಾರದಲ್ಲಿರಲಿ ಈ 15 ವರ್ಷಗಳ ಕಾಲದಲ್ಲಿ ಶಿಕ್ಷಣದಲ್ಲಿ ಬಹಳ ಮುಂದುವರಿದಿದ್ದೇವೆ ಮತ್ತು ಅದರಲ್ಲೂ 1956-57ರಲ್ಲಿ ಎಷ್ಟು ದುಡ್ಡು ಖರ್ಚುಮಾಡುತ್ತಾ ಇದ್ದೆವೋ ಅದಕ್ಕೆ ಎರಡು ಪಟ್ಟು ದುಡ್ಡನ್ನು ಈ ದಿವಸ ಖರ್ಚುಮಾಡುತ್ತಾ ಇದ್ದೇವೆ. ಪ್ರೈಮರಿ ಎಜ್ಯುಕೇಷನ್‌ಗೆ 11 ಕೋಟಿ ರೂಪಾಯಿಗೆ ಮೇಲ್ಪಟ್ಟು ಖರ್ಚುಮಾಡುತ್ತಾ ಇದ್ದೇವೆ. ಇದು ಎಲ್ಲಾ ವ್ಯರ್ಥ ಎಂದು ನನಗೆ ಅನಿಸುವುದಿಲ್ಲ. ಕೆಲವು ಕಡೆಯಲ್ಲಿ ಶಾಲೆಗಳು ಸರಿಯಾಗಿ ನಡೆಯುತ್ತಾ ಇರಲಿಕ್ಕೆ ಇಲ್ಲ ಅಂದ ಮಾತ್ರಕ್ಕೆ ಎಲ್ಲಾ ಕಡೆಯಲ್ಲೂ ಸರಿಯಾಗಿ ನಡೆಯುವುದಿಲ್ಲ ಎಂದು ಹೇಳಿದರೆ ತಪ್ಪಾಗುತ್ತದೆ. ನಿನ್ನೆ ದಿವಸ ವಿವರಿಸಿದ್ದೇನೆ ಪ್ರಾಥಮಿಕ ಶಿಕ್ಷಣಕ್ಕೆ ಪ್ರತಿ ಹುಡುಗನಿಗೆ ಸುಮಾರು 20 ರೂಪಾಯಿ ಖರ್ಚು ಮಾಡುತ್ತಾ ಇದ್ದೇವೆ. ಇವೆಲ್ಲಾ ವ್ಯರ್ಥ ಎಂದು ಹೇಳುವುದು ಸರಿಕಾಣುವುದಿಲ್ಲ ಎಂದು ನನ್ನ ಅಭಿಪ್ರಾಯ ಇದೆ. ನಮ್ಮ ರಾಜ್ಯದಲ್ಲಿ 30 ಸಾವಿರ ಪ್ರಾಥಮಿಕ ಶಾಲೆಗಳು ಇವೆ. 30-9-62ಕ್ಕೆ 32,27,000 ವಿದ್ಯಾರ್ಥಿಗಳು ಪ್ರಾಥಮಿಕ ಶಾಲೆಗಳಲ್ಲಿ ಓದುತ್ತಾ ಇದ್ದಾರೆ. 83,000 ಜನ ಶಿಕ್ಷಕರು ಇದ್ದಾರೆ. ಸೆಕೆಂಡರಿ ಸ್ಕೂಲುಗಳು 1,000 ಇವೆ. ಶಿಕ್ಷಕರು 7,000 ಜನ ಇದ್ದಾರೆ. ಮತ್ತು 2,15,000 ಜನ ವಿದ್ಯಾರ್ಥಿಗಳು ಓದುತ್ತಾ ಇದ್ದಾರೆ. ಇವುಗಳಲ್ಲಿ 150 ಹೈಸ್ಕೂಲ್‌ಗಳು ಮಾತ್ರ ಗರ್ಲ್ಸ್ ಹೈಸ್ಕೂಲುಗಳು. 850 mixed boys and girls high schools ಇದೆ.

(ಶ್ರೀ ಎಸ್. ಆರ್. ಕಂಠಿ)

ಮಾನ್ಯ ಸದಸ್ಯರು ಹಿಂದಿನ ಮಾಜಿ ಮಂತ್ರಿಗಳು ಆಕಾಶ ಕಳಚಿ ಬೀಳುತ್ತದೆಯೋ ಏನೋ ಅನ್ನುವ ಹಾಗೆ ಕೋ-ಎಜ್ಯುಕೇಷನ್ ಬೇಡ, ಹೆಣ್ಣು ಮಕ್ಕಳಿಗೆ ಬೇರೆ ಶಾಲೆಗಳನ್ನು ಸರ್ಕಾರದವರು ಮಾಡಬೇಕು ಎಂದು ಹೇಳಿದರು ಅವರೇ ಇದನ್ನು ವಿಚಾರ ಮಾಡಲಿ. ಅವರಿಗೆ ಗೊತ್ತಿರುವ ಮಟ್ಟಿಗೆ ನಾವು ಇಷ್ಟು ಹೆಣ್ಣುಮಕ್ಕಳಿಗೆಲ್ಲ ಪ್ರತ್ಯೇಕ ಶಾಲೆಗಳನ್ನು ಮಾಡಲು ಸಾಧ್ಯವೇ ಎಂಬುದನ್ನು ಅವರೇ ಯೋಚನೆ ಮಾಡಲಿ. ಈ ವಿಚಾರದಲ್ಲಿ ನಾನು ನನ್ನ ವೈಯಕ್ತಿಕ ದೃಷ್ಟಿಯಿಂದ ಹೇಳುವುದಾದರೆ ಈಗ ಕೋ-ಎಜುಕೇಷನ್ನು ಕಾರ್ಯರೂಪದಲ್ಲಿ ಜಾರಿಗೆ ತರುವುದಕ್ಕೆ ಸಾಧ್ಯವಿದೆ. ಆದರೆ ನಾವು ಈಗ ಎಲ್ಲಿಯೋ ಅಲ್ಲೊಂದು-ಇಲ್ಲೊಂದು ಹೈ ಸ್ಕೂಲುಗಳನ್ನು ಪ್ರತ್ಯೇಕವಾಗಿ ಹೆಣ್ಣುಮಕ್ಕಳುಗಳಿಗೆ ಕೊಟ್ಟಿದ್ದೇವೆ. ಅಷ್ಟೇನೆ. ಆದುದರಿಂದ ಈ ಕೋಎಜ್ಯುಕೇಷನ್ನನ್ನು ಜಾರಿಗೆ ತಂದರೆ ಏನೋ ಒಂದು ದೊಡ್ಡ ಪರಿಣಾಮ ವುಂಟಾಗಿಬಿಡುತ್ತೆ ಅಂತ.........

ಶ್ರೀ ಅಣ್ಣಾರಾವ್ ಗಣಮುಖಿ (ಅಫ್‌ಜಲ್‌ಪುರ).—ಈ ಎರಡನ್ನೂ ಒಟ್ಟಿಗೆ.........

ಶ್ರೀ ಎಸ್. ಆರ್. ಕಂಠಿ.—ಇದು ಈಗಾಗಲೇ ಜಾರಿಯಲ್ಲಿ ಬಂದು ಹೋಗಿದೆ. ಈ ದಿವಸ ಯಾವ ಬಾಯ್ಸ್ ಹೈ ಸ್ಕೂಲಿನಲ್ಲಿ ಗರ್ಲ್ಸ್‌ಗಳಿಲ್ಲ? ಎಲ್ಲ ಬಾಯ್ಸ್ ಹೈ ಸ್ಕೂಲುಗಳಲ್ಲೂ ಗರ್ಲ್ಸ್ ಇದ್ದಾರೆ. ಆದರೆ ಎಲ್ಲಿ ಶಕ್ಯವಿದೆಯೋ ಹೆಣ್ಣುಮಕ್ಕಳುಗಳಿಗೆ ಪ್ರತ್ಯೇಕವಾಗಿ ಬೇರೊಂದು ಹೈ ಸ್ಕೂಲನ್ನು ಕೊಡಲು ಅಂಥ ಕಡೆಗಳಲ್ಲಿ ಮಾತ್ರ ಕೊಡಲಾಗಿದೆ. ಅಷ್ಟುಮಾತ್ರಕ್ಕೇ ನಮಗೆ ಈ ಕೋ-ಎಜ್ಯುಕೇಷನ್ ಹಿಡಿಸುವುದಿಲ್ಲ ಅಂತ ಹೇಳುವುದು ಸರಿ ಇದ್ದಂತೆ ಕಾಣುವುದಿಲ್ಲ. ಆದರೆ ಈಗ ಜನರು ಸೋಷಿಯಲಿಸ್ಟಿಕ್ ಪ್ಯಾಟ್ರನ್ ಆಫ್ ಸೊಸೈಟಿ ಬೇಕೆಂತ ಕೇಳುತ್ತಿದ್ದಾರೆ. ಇಂಥ ಸಮಯದಲ್ಲಿ ಹೆಣ್ಣುಮಕ್ಕಳಿಗೇ ಪ್ರತ್ಯೇಕ ಹೈ ಸ್ಕೂಲುಗಳಿರಬೇಕೆಂತ ಕೇಳುವುದು ನನಗೇನೋ ಸರಿ ಕಾಣುವುದಿಲ್ಲ. ಆದರೆ ಈಗ ನಾನೀ ವಿಚಾರವನ್ನು ಸರ್ಕಾರದವರ ಪರವಾಗಿ ಹೇಳುತ್ತಿಲ್ಲ. ಈ ಬಗ್ಗೆ ನನ್ನ ವೈಯುಕ್ತಿಕ ವಿಚಾರವನ್ನು ಕೇಳುವುದಾದರೆ ಈ ಕೋ-ಎಜುಕೇಷನ್ನಿನಿಂದ ಅಷ್ಟೇನು ತೊಂದರೆಯಾಗಲಿಕ್ಕಿಲ್ಲವೆಂದು ನನ್ನ ಭಾವನೆ. ನಮ್ಮ ಹಣಕಾಸಿನ ದೃಷ್ಟಿಯಿಂದ ಹೇಳುವುದಾದರೆ ಇನ್ನು ಮುಂದಕ್ಕೆ ಹೆಣ್ಣುಮಕ್ಕಳಿಗೆ ಪ್ರತ್ಯೇಕವಾಗಿ ಎಲ್ಲ ಕಡೆಗಳಲ್ಲಿಯೂ ಹೈ ಸ್ಕೂಲುಗಳನ್ನು ಕೊಡುತ್ತೇವೆಂತ ಹೇಳುವುದಕ್ಕಾಗುವುದಿಲ್ಲ. ಮುಂದೆ ಇದು ಸಾಧ್ಯವಾಗಲಾರದು.

ಈ ದಿವಸ ಸರ್ಕಾರಿ ಸೈನ್ಸ್ ಕಾಲೇಜುಗಳಲ್ಲೂ ಮತ್ತು ಆರ್ಟ್ಸ್ ಕಾಲೇಜುಗಳಲ್ಲೂ ಓದುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ 15,720 ಇದೆ. ಪ್ರಾಯ್‌ವೇಟ್ ಕಾಲೇಜುಗಳಲ್ಲಿ ಓದತಕ್ಕ ವಿದಾರ್ಥಿಗಳ ಸಂಖ್ಯೆ 27,322 ಇದೆ. ಈ ಪ್ರಕಾರ ಈ ಸಾಯಿನ್ಸ್ ಮತ್ತು ಆರ್ಟ್ಸ್ ಕಾಲೇಜುಗಳಲ್ಲಿ ಓದುತ್ತಿರುವ ಒಟ್ಟು ವಿದಾರ್ಥಿಗಳ ಸಂಖ್ಯೆ 43,042 ಇದೆ. ಹೀಗೆ ಈಗ ಗೌರ್ನಮೆಂಟ್ ಇಂಜಿನಿಯರಿಂಗ್ ಕಾಲೇಜುಗಳಲ್ಲಿ 1,574 ವಿದ್ಯಾರ್ಥಿಗಳಿದ್ದಾರೆ. ಖಾಸಗೀ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವವರ ಸಂಖ್ಯೆ 2,550. ಈ ಪ್ರಕಾರ ಒಟ್ಟು ಇಂಜಿನಿಯರಿಂಗ್ ಕಾಲೇಜುಗಳಲ್ಲಿ 4,124 ವಿದ್ಯಾರ್ಥಿಗಳಿದ್ದಾರೆ. ಎಲ್ಲಾ ಪಾಲಿಟೆಕ್ನಿಕಲ್ ಶಾಲೆಗಳಲ್ಲೂ ಓದತಕ್ಕ ಹುಡುಗರ ಸಂಖ್ಯೆ 2,902 ಇದೆ. ಈ ಪ್ರಕಾರ ಪ್ರಾಯಿವೇಟ್ ಪಾಲಿಟೆಕ್ನಿಕ್‌ಗಳಲ್ಲಿ ಓದುತ್ತಿರುವ ಹುಡುಗರ ಸಂಖ್ಯೆ 8,458 ಇದೆ. ಮುಂದಿನ ವರ್ಷ ಈ ಸಂಖ್ಯೆ ಇನ್ನೂ ಜಾಸ್ತಿಯಾಗಬಹುದು. ಈ ಸಂಖ್ಯೆ ಇಷ್ಟಕ್ಕೆ ನಿಲ್ಲುವುದಿಲ್ಲ.

ಇನ್ನು ಪ್ರಾಥಮಿಕ ಶಾಲೆಗಳ ಬಗ್ಗೆ ಸರ್ಕಾರದವರು ಏನೇನು ಪ್ರಯತ್ನ ಮಾಡಬಹುದಾಗಿತ್ತೋ ಅದೆಲ್ಲವನ್ನೂ ಮಾಡಿದ್ದಾರೆ—ಮಾಡುತ್ತಲೂ ಇದ್ದಾರೆ. ಆದರೆ ಕೆಲವು ಮಾನ್ಯ ಸದಸ್ಯರುಗಳು ಈ ಪ್ರಾಥಮಿಕ ಶಾಲಾ ಕಟ್ಟಡಗಳನ್ನು ಸರ್ಕಾರದವರೇ ಕಟ್ಟಿಸಿಕೊಡಬೇಕೆಂದು ಕೇಳಿದ್ದಾರೆ. ನನ್ನ ಅಂದಾಜಿನ ಪ್ರಕಾರ ಹೇಳುವುದಾದರೆ ಈ ಕಾರ್ಯಕ್ಕೆ ಸುಮಾರು 20-25 ಕೋಟಿ ರೂಪಾಯಿಗಳು ಶಾಲಾ ಕಟ್ಟಡಗಳಿಗೆ ಹಿಡಿಯಬಹುದೆಂತ ತಿಳಿದು ಬಂದಿದೆ. ಆದರೆ ಈ ಕಟ್ಟಡಗಳ ಸಂಖ್ಯೆ ಇಷ್ಟಕ್ಕೆ ನಿಲ್ಲುವುದಿಲ್ಲ. ಇವು ವರ್ಷೇವರ್ಷೇ ಬೆಳೆಯುತ್ತಿರುತ್ತವೆ. ವರ್ಷಕ್ಕೆ 32-34 ಲಕ್ಷ ರೂಪಾಯಿಗಳುವರೆಗೆ ಖರ್ಚು ಮಾಡಬೇಕಾಗುತ್ತದೆ. ಆದರೆ ನಾವೀಗ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ವಿದ್ಯಾ ಬಾಬಿಗೆ 40 ಲಕ್ಷ ರೂಪಾಯಿಗಳು ಸಾಕಾಗಬಹುದೆಂತ ಅಂದಾಜು ಮಾಡಿ ನಿಗದಿ ಮಾಡಿದ್ದೇವೆ. ಹೀಗಿರುವಾಗ ಈ ಪ್ರಾಥಮಿಕ ವಿದ್ಯಾ ಶಾಲೆಗಳನ್ನೆಲ್ಲ ಸರ್ಕಾರದವರೇ ಕಟ್ಟಿಸಬೇಕೆಂದರೆ ಅದು ಸಾಧ್ಯವಿದೆಯೇ ಎಂಬುದನ್ನು ತಾವೆಲ್ಲರೂ ಆಲೋಚನೆ ಮಾಡಬೇಕಾಗಿದೆ. ಈ ದಿವಸ ಸರ್ಕಾರದವರು ಈ ವಿದ್ಯಾಖಾತೆಗಾಗಿ 19 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ ಎಲ್ಲ ಬಾಬುಗಳಿಗಿಂತಲೂ ಈ ಬಾಬಿಗೆ ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದೇವೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬಹುದಾಗಿದ್ದರೆ ನಮ್ಮ

ದೇಶದ ಇಂದಿನ ಕ್ಲಿಷ್ಟಪರಿಸ್ಥಿತಿ ಹೀಗೇ ಮುಂದುವರಿದಲ್ಲಿ ಈಗ ಸರ್ಕಾರದವರು ಈ ಬಾಬಿಗೆಷ್ಟು ಹಣವನ್ನೊದಗಿಸಿದ್ದಾರೋ ಇಷ್ಟೂ ಮುಂದೆ ಸಿಗಲಿಕ್ಕಿಲ್ಲ. ಹೀಗಿರುವಾಗ ಸಾರ್ವಜನಿಕರು ಸಹಕಾರ ನೀಡದಿದ್ದರೆ ಈ ಶಾಲಾಕಟ್ಟಡಗಳ ಅಭಿವೃದ್ಧಿ ಹೇಗಾಗುತ್ತದೆ? ಆದರೆ ಇವುಗಳ ಪೂರಾ ಜವಾಬ್ದಾರಿಯನ್ನು ಹೊರಲಿಕ್ಕೆ ಸರ್ಕಾರಕ್ಕೆ ಎಂದೂ ಸಾಧ್ಯವಾಗುವುದಿಲ್ಲ. ಶಿಬ್ಬಂದಿಗೂ ಸಂಬಳ ಕೊಡಬೇಕು, ಈ ಶಾಲಾಕಟ್ಟಡಗಳನ್ನೂ ನಾವೇ ಕಟ್ಟಿಸಬೇಕು ಎಂದರೆ ಅದು ಎಂದಿಗೂ ಸಾಧ್ಯವಿಲ್ಲದ ಮಾತು.

It is a mistake that Hon. Members are making. It is the primary responsibility of the society. The community must come forward and bear the burden.

Sri S. SIVAPPA (Sravanabelagola).—That is a new definition of 'socialistic pattern of society'.

Sri S. R. KANTHI.—It may be new or old. But this would be realized in course of time. Today or tomorrow Members will realize the truth of what I say. We cannot spend all the money in one plan and keep quite thereafterwards. It will have to be spread over for 15 to 20 years. In course of time we would have to evolve a method by which the community will also share the burden.

Sri V. M. DEO.—As in all fields, the public and private sectors must co-operate. I agree. But a time should come when the public sector should predominently have the responsibility in the field of education.

Sri S. R. KANTHI.—That again is a mistake. It is a joint partnership not only now but in future also. It is the joint responsibility of the society and the Government. I will quote the example of South Kanara. I have gone there thrice and I have found out how both sectors can help. I commend that example to one and all.

ನಾನು ಸೌತ್ ಕ್ಯಾನರಾಕ್ಕೆ ಮೂರಾವರ್ತಿ ಹೋಗಿ ನೋಡಿಕೊಂಡು ಬಂದಿದ್ದೇನೆ. ಇಲ್ಲಿಯುವರೆಗೂ ಅಲ್ಲಿನ ಜನರು ಎಂದೂ ನಮಗೊಂದು ಹೈಸ್ಕೂಲನ್ನು ಕೊಡಿ, ನಮಗೊಂದು ಕಾಲೇಜನ್ನು ಕೊಡಿ ಎಂತ ಸರ್ಕಾರದವರನ್ನು ಕೇಳಿಲ್ಲ. ಅವರೇನಿದ್ದರೂ ಆ ಪ್ರಾಯಿವೇಟ್ ಹೈಸ್ಕೂಲುಗಳನ್ನು ತೆರೆಯುವುದಕ್ಕೆ ಅವಕಾಶ ಹಾಗೂ ಅವುಗಳಿಗೆ ರೆಕಾಗ್ನಿರ್ಷ ಕೊಡಿ ಎಂತ ಮಾತ್ರ ಕೇಳುತ್ತಿದ್ದಾರೆ. ಅವರು ವಿದ್ಯಾಭಿವೃದ್ಧಿಯಲ್ಲಿ ಮುಂದುವರಿಯುತ್ತಿರುವುದನ್ನು ನೋಡಿದರೆ ಬಹಳ ಸಂತೋಷವಾಗುತ್ತದೆ. ಹಾಗೆ ಅವರು ಅಷ್ಟರಮಟ್ಟಿಗೆ ವಿದ್ಯೆಯಲ್ಲಿ ಮುಂದೆ ಬಂದಿರುವುದಕ್ಕೆ ಮೂಲ ಕಾರಣ ಅವರು ಈ ವಿಚಾರಗಳಲ್ಲೆಲ್ಲ ಸ್ವಾವಲಂಬಿಗಳಾಗಿರುವುದರಿಂದಲೇ ಅವರು ಹಾಗೆ ಮುಂದೆ ಬಂದಿದ್ದಾರೆ. ಇನ್ನು ಉತ್ತರ ಕರ್ಣಾಟಕದಲ್ಲೂ ಇದೇ ಪರಿಸ್ಥಿತಿ ಇದೆ. ಅಲ್ಲಿಯವರೂ ಸ್ವಾವಲಂಬಿಗಳಾಗೇ ಇದ್ದರು. ಆದರೆ ಇತ್ತೀಚೆಗೆ ಅಲ್ಲಿಯ ಕೆಲವು ಜನರು ಸರ್ಕಾರಿ ಹೈಸ್ಕೂಲುಗಳನ್ನು ಕೊಡಬೇಕೆಂದು ಕೇಳಲಿಕ್ಕೆ ಈಗ ಪ್ರಾರಂಭಿಸಿದ್ದಾರೆ. ಆದರೆ ಈ ದಿವಸ ಸರ್ಕಾರದವರಿಗೆ ಈ ಹೈಸ್ಕೂಲುಗಳನ್ನು ಸ್ಥಾಪಿಸಲು ಸಾಧ್ಯವಿಲ್ಲದೆ ಇರುವುದರಿಂದಲೇ ಪ್ರಾಯಿವೇಟ್ ಹೈಸ್ಕೂಲುಗಳನ್ನು ತೆರೆಯಲು ಜನರು ಮುಂದೆ ಬಂದರೆ ಅವುಗಳಿಗೆ ರೆಕಾಗ್ನಿರ್ಷ ಇತ್ಯಾದಿಗಳನ್ನು ಕೊಡುತ್ತೇವೆಂದು ಹೇಳಿದ್ದೇವೆ.

ಇನ್ನು ತರಪೇತಾದ ಶಿಕ್ಷಕರ ಕೊರತೆಯಿದೆ ಎಂತ ಹೇಳಿದ್ದಾರೆ. ಇನ್ನು ನಮ್ಮ ಡಿ.ಪಿ.ಐ. ಅವರು ಒದಗಿಸಿರತಕ್ಕ ವರದಿ ಪ್ರಕಾರ ಪ್ರಾಥಮಿಕ ಶಾಲೆಗಳಲ್ಲಿ ಒಬ್ಬೊಬ್ಬ ಅಧ್ಯಾಪಕರು ಆವರೇಜಿನಲ್ಲಿ 38 ಜನ ವಿದ್ಯಾರ್ಥಿಗಳಿಗೆ ಪಾಠಪ್ರವಚನ ನಡೆಸುತ್ತಿರುವುದಾಗಿ ತಿಳಿದು ಬಂದಿದೆ. ಆದರೆ ಕೆಲವು ಕಡೆಗಳಲ್ಲಿ ಈ ಅಧ್ಯಾಪಕರ ಕೊರತೆಯಿದೆ. ಆದರೆ ಹಿಂದಿನ ಸಾಲಗಿಂತ ಈ ವರ್ಷ ಇದು ಎಷ್ಟೋ ಸುಧಾರಣೆಯಾಗಿದೆ. ಮುಂದಿನ ವರ್ಷದ ಬಡ್ಜೆಟ್ಟಿನಲ್ಲಿ ತಮಗೆಲ್ಲರಿಗೂ ಗೊತ್ತಿರುವಂತೆ ಒಂದು ಸಾವಿರ ಜನ ಶಿಕ್ಷಕರನ್ನು ಜಾಸ್ತಿ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಲಾಗಿದೆ. ದುಡ್ಡಿನ ಅಭಾವದಿಂದ ಈ ಕಾರ್ಯ ಸ್ವಲ್ಪ ಹಿಂದೆ ಬಿದ್ದಿದೆ. ಆದರೆ ಈಗ ಹೀಗೆ ಈ ಶಿಕ್ಷಕರ ಸಂಖ್ಯೆಯನ್ನು

(ಶ್ರೀ ಎಸ್. ಆರ್. ಕಂಠಿ)

ಹೆಚ್ಚಿಸಿಕೊಳ್ಳಬಹುದೆಂಬ ಬಗ್ಗೆ ಕೆಲವು ಸಲಹೆಗಳು ಬಂದಿವೆ. ಇದೇ ಸಂದರ್ಭದಲ್ಲಿ ಅಧಿಕಾರ ವಿಕೇಂದ್ರೀಕರಣ ಪ್ರಶ್ನೆಯೂ ಬಂದಿದೆ. ಇದಕ್ಕಾಗಿ ಒಂದು ಸಮಿತಿ ನೇಮಕವಾಗಿದೆ. ಡ್ರಾಫ್ಟ್ ಬಿಲ್ ತಯಾರಾಗಿದೆ, ಆದರೆ ಕೆಲವು ತೊಂದರೆಗಳಿವೆ.

10-00 A.M.

ನಮ್ಮ ಸ್ಥಾನಿಕ ಸಂಸ್ಥೆಗಳು, ತಾಲ್ಲೂಕು ಬೋರ್ಡ್‌ಗಳು, ಪಂಚಾಯಿತಿಗಳು ಮತ್ತು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಬೋರ್ಡ್‌ಗಳು ಯಾವರೀತಿಯಿಂದ ನಡೆಯುತ್ತಿವೆ ಅದರಲ್ಲಿ ಏನು ಮಾರ್ಪಾಡು ಮಾಡಬೇಕು ಎನ್ನುವ ವಿಚಾರವಾಗಿ ಶ್ರೀಮಾನ್ ಕೊಂಡಜ್ಜಿ ಬಸಪ್ಪನವರ ನೇತೃತ್ವದಲ್ಲಿ ಒಂದು ಕಮಿಟಿಯನ್ನು ನೇಮಿಸಿದ್ದೇವೆ. ಅವರು ಯಾವರೂಪ ತಾಳಬೇಕೆಂದು ಹೇಳುತ್ತಾರೆಯೋ ಅವರ ರಿಪೋರ್ಟ್ ಬಂದ ಮೇಲೆ ಅದರ ನಿರ್ಣಯ ಮಾಡಲಿಕ್ಕೆ ಸಾಧ್ಯವಾಗುತ್ತದೆ. ನಾನು ಡ್ರಾಪ್ಟ್ ಬಿಲ್ಲನ್ನು ತರಿಸಿನೋಡಿದೆ. ಅದನ್ನು ನೋಡಿದ ಮೇಲೆ ಅದರಲ್ಲಿ ವಿಕೇಂದ್ರೀಕರಣ ಕಡಮೆ ಇದೆ. ಆ ತರಹ ವಿಕೇಂದ್ರೀಕರಣವಾಗುವುದಿಲ್ಲ. ಸಾಮಾನ್ಯ ತಾಲ್ಲೂಕ್ ಡೆವಲಪ್‌ಮೆಂಟ್ ಬೋರ್ಡಿಗೆ ಅಧಿಕಾರ ಕೊಡುತ್ತೇವೆಂದರೆ ನನ್ನ ಮಟ್ಟಿಗೆ ನಾನು ಒಪ್ಪುವುದಿಲ್ಲವೆನ್ನುವ ಮಾತನ್ನೂ ನಾನು ಹೇಳುತ್ತೇನೆ. ಕೊಂಡಜ್ಜಿ ಬಸಪ್ಪನವರಿಂದ ರಿಪೋರ್ಟ್ ಬರುವವರೆಗೂ, ತಾಲ್ಲೂಕ್ ಡೆವಲಪ್‌ಮೆಂಟ್ ಕಮಿಟಿಗಳಿಗೆ ಸರಿಯಾದ ಅಧಿಕಾರ ಕೊಟ್ಟಿಲ್ಲ, ಅಧಿಕಾರ ವಿಕೇಂದ್ರೀಕರಣವಾಗಿಲ್ಲವೆನ್ನುವುದು ಸರಿಯಲ್ಲವೆಂದು ನನ್ನ ವೈಯುಕ್ತಿಕ ಅಭಿಪ್ರಾಯ.

Medium of instruction ಎಂದರೆ ಶಾಲೆಗಳಲ್ಲಿ ಮತ್ತು ಕಾಲೇಜುಗಳಲ್ಲಿ ಯಾವರೀತಿಯ ವಿದ್ಯಾಭ್ಯಾಸ ಕ್ರಮವಿರಬೇಕು ಎನ್ನುವ ವಿಚಾರವನ್ನೂ ಕೆಲವರು ಎತ್ತಿದ್ದಾರೆ ಪ್ರೈಮರಿ ಮಟ್ಟದಲ್ಲಿ ಸಣ್ಣಮಕ್ಕಳು ಅವರ ಮಾತೃಭಾಷೆಯಲ್ಲಿಯೇ ಓದಬೇಕು ಎನ್ನುವಂಥಾದ್ದನ್ನು ಸರ್ಕಾರದವರು ಒಪ್ಪಿದ್ದಾರೆ. ಇದು ಅಖಿಲಭಾರತೀಯ ನಿರ್ಣಯವಾಗಿದೆ. ಹೈಸ್ಕೂಲಿನಲ್ಲಿ ಕನ್ನಡವನ್ನು regional language, ಕಡ್ಡಾಯ ಮಾಡಿಲ್ಲ. ಪ್ರಾದೇಶಿಕ ಭಾಷೆಯನ್ನು ಕಡ್ಡಾಯವಾಗಿ ಮಾಡಲಾರದಂಥ ಯಾವುದಾದರೂ ಒಂದು ರಾಜ್ಯ ನಮ್ಮ ಭಾರತದಲ್ಲಿದ್ದರೆ ಅದು ಮೈಸೂರು ರಾಜ್ಯ. ಮಹಾರಾಷ್ಟ್ರದಲ್ಲಿ ಹೇಗಿದೆ ಎಂಬುದನ್ನು ಇಲ್ಲಿ ಏನೇನೋ ಹೇಳುವಂಥ ಮಹಾರಾಷ್ಟ್ರ ಸಮಿತಿಯ ಮಿತ್ರರು ಹೋಗಿ ಸ್ವಲ್ಪ ನೋಡಬೇಕು. ಮಹಾರಾಷ್ಟ್ರದಲ್ಲಿ ಮ ರಾ ಠಿ ಯ ನ್ನು Compulsoryಯಾಗಿ ಮಾಡಿದ್ದಾರೆ. ಆದರೆ ನಾವು ಕನ್ನಡವನ್ನು secondary stageನಲ್ಲಿ ಕೂಡ Compulsory ಮಾಡಿಲ್ಲ.

Sri N. O. SAMAJI (Belgaum II). Spoke in Marathi) —

ಶ್ರೀ ಎಸ್. ಆರ್. ಕಂಠಿ.—ಪ್ರಾಥಮಿಕ ಶಿಕ್ಷಣವನ್ನೂ ಮಾತೃಭಾಷೆಯಲ್ಲಿ ಕಲಿಯುವುದಕ್ಕೆ ಅನುಕೂಲ ಮಾಡಿಕೊಟ್ಟಿದ್ದೇವೆ. ಅದು ಅಖಿಲ ಭಾರತ ನಿರ್ಣಯವಾಗಿದೆ. ಹಿಂದಿ ಮತ್ತು ಇಂಗ್ಲಿಷನ್ನು compulsory ಮಾಡಿದ್ದೇವೆ. ಕನ್ನಡವನ್ನು compulsory ಮಾಡಿಲ್ಲ. ಆದರೆ Kannada is one of the elective languages ಎಂದರೆ ಸಂಸ್ಕೃತ, ಅಥವಾ ಮಾತೃಭಾಷೆ, ಅಥವಾ Latin, ಹೀಗೆ ಯಾವುದನ್ನಾದರೂ ತೆಗೆದುಕೊಳ್ಳಬಹುದು. ಇಷ್ಟು ತೀವ್ರಗತಿಯಿಂದ ಹೆಜ್ಜೆಯನ್ನು ಬೇರೆ ಯಾವ ರಾಜ್ಯಗಳೂ ಇಟ್ಟಿಲ್ಲವೆನ್ನುವುದನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ವಿಶ್ವವಿದ್ಯಾನಿಲಯದಲ್ಲಿ ಯಾವ ಭಾಷೆ ಇರಬೇಕು ಎನ್ನುವ ವಿಚಾರ ಶ್ರೀಮಾನ್ ಗೋಪಾಲಗೌಡರು ಕೇಳಿದರು. ಮಾನ್ಯ ಸದಸ್ಯರು ಮಾಡಿದಂಥ ಭಾಷಣ ನನಗೆ ಬಹಳ ಮಟ್ಟಿಗೆ ಒಪ್ಪಿಗೆ ಇದೆ ಎನ್ನುವುದನ್ನು ಹೇಳುತ್ತಿದ್ದೇನೆ. ಅವರು ಹೇಳುವುದರಲ್ಲಿ ಸ್ವಲ್ಪ ಖಾರಖಾರವಾಗಿ ಹೇಳಿದರೇ ವಿನಾ ಅವರು ಹೇಳಿದ ವಿಚಾರಗಳಿಗೆ ನನ್ನ ಸಹಮತವಿದೆ ಎನ್ನುವುದನ್ನು ನಾನು ವ್ಯಕ್ತಪಡಿಸುತ್ತೇನೆ. ವಿಶ್ವವಿದ್ಯಾನಿಲಯದಲ್ಲಿ ಕನ್ನಡವು ಬೋಧಭಾಷೆಯಾಗಬೇಕೆನ್ನುವ ಮಾತನ್ನು ಹೇಳಿದಾಗ ಸರ್ಕಾರದವರು ಅದನ್ನು ಒಪ್ಪಿಕೊಂಡಿದ್ದಾರೆ. ಆದರೆ ವಿಶ್ವವಿದ್ಯಾನಿಲಯದಲ್ಲಿ ಕನ್ನಡವನ್ನು ಬೋಧಭಾಷೆ ಮಾಡುವ ಪ್ರಶ್ನೆ ನಮ್ಮದಲ್ಲ ವಿಶ್ವವಿದ್ಯಾನಿಲಯದವರಿಗೆ ಸೇರಿದ್ದು. ಅದು ಅಟಾನಮಸ್ ಇದೆ. ಆ ಅಧಿಕಾರವನ್ನು ನಾವು ಅವರಿಗೆ ಬಿಟ್ಟುಕೊಟ್ಟಿದ್ದೇವೆ. Vice-Chancellors' Conferenceನಲ್ಲಿ ಮತ್ತು National Integration Councilನಲ್ಲಿ ಬೋಧಭಾಷೆ ಹಿಂದಿ ಆಗಬೇಕು, ಪ್ರಾದೇಶಿಕ ಭಾಷೆಯಾಗಬೇಕು, ಹಂತ ಹಂತವಾಗಿ ಕಾರ್ಯರೂಪಕ್ಕೆ ಬರಬೇಕು

ಎಂದು ಒಪ್ಪಿಕೊಂಡಿದ್ದಾರೆ. ನಾನೂ ಕೂಡ ಅದನ್ನು ಒಪ್ಪಿಕೊಳ್ಳುತ್ತೇನೆ. ಸರ್ಕಾರದ ಧೋರಣೆಯೂ ಅದೇ ಆಗಿದೆ ಎಂದು ನಾನು ವ್ಯಕ್ತಪಡಿಸುತ್ತೇನೆ.

Pre-primary education ವಿಚಾರವಾಗಿ ಎರಡು ಮಾತು ಹೇಳಿದರು. ಸರ್ಕಾರದವರು ಬಾಲೂವಾಡಿಗಳನ್ನೂ, ನರ್ಸರಿ ಸ್ಕೂಲುಗಳನ್ನೂ ನಡೆಸಬೇಕೆಂದು ಹೇಳಿದರು. ಅದು ಸರ್ಕಾರದ ಕರ್ತವ್ಯವಾಗಿಲ್ಲ. ವಿದ್ವಜ್ಜನಗಳೂ, ಮಹನೀಯರೂ ಮುಂದೆ ಬಂದು ಅವುಗಳನ್ನು ನಡೆಸಬೇಕು ಎಂದು ನಾನು ವಿಜ್ಞಾಪನೆ ಮಾಡಿಕೊಳ್ಳತ್ತ ಸರ್ಕಾರದವರು ಗ್ರಾಂಟ್ ಕೊಡುವ ವಿಚಾರ ಮಾಡಿದ್ದಾರೆ, ಗ್ರಾಂಟ್ ಕೊಡುತ್ತಾರೆ. ಜನಗಳು ಈ ಬಗ್ಗೆ ಮುಂದೆ ಬರಬೇಕು ಎಂದು ಹೇಳುತ್ತೇನೆ.

ಬೇಸಿಕ್ ಎಜುಕೇಷನ್ ವಿಚಾರವಾಗಿ ಎರಡು-ಮೂರು ಜನರು ಬೇರೆಬೇರೆ ತರಹ ಹೇಳಿದರು· Basic Education ಇರಕೂಡದು ಎಂದು ಶ್ರೀಮಾರ್ಕ ಸುಂತಣಕರ್ ಅವರು ಹೇಳಿದರು. Basic Education ಕಡ್ಡಾಯ ಮಾಡಿರಿ, ಅದನ್ನು ಭದ್ರಪಡಿಸಿರಿ ಎಂದು ಕೆಲವರು ಹೇಳಿದರು. ಈ ಎರಡೂ ವಿಚಾರಗಳನ್ನೂ ನೋಡಿ ಸರ್ಕಾರದ ಮಟ್ಟಿಗೆ ಹೇಳುವುದಾದರೆ basic education ಜಾಸ್ತಿ ಪ್ರಮಾಣದಲ್ಲಿ ತರಬೇಕೆಂದು ಮಾಡಿದ್ದಾರೆ ಮತ್ತು ಆ ಪ್ರಕಾರವಾಗಿ ತರುತ್ತಿದ್ದಾರೆ. ಇದರಲ್ಲಿ ಎರಡು ತರಹ ಇವೆ. ಒಂದು basic pattern ಮತ್ತು ಇನ್ನೊಂದು ‘full basic. Basic patternನಲ್ಲಿ ಯಾವುದಾದರೂ ಒಂದು craft ಕಲಿಸಬೇಕು. ನಮ್ಮ ರಾಜ್ಯದಲ್ಲಿ ಎಲ್ಲ ಶಾಲೆಗಳನ್ನೂ basic pattern ಮಾಡಿದ್ದೀವೆ. ಉತ್ತರ ಕರ್ಣಾಟಕದ ಜಿಲ್ಲೆಗಳಲ್ಲಿ ಮಾತ್ರ full basic ಶಾಲೆಗಳಿವೆ. ಉಳಿದ ಕಡೆ ಮಾಡಿಲ್ಲ. All-India Conferenceನಲ್ಲಿ ನಮ್ಮ ಶಾಲೆಗಳಲ್ಲಿ basic schools ಆಗಬೇಕೆಂದು ನಿರ್ಣಯ ಮಾಡಿದ್ದಾರೆ. ಕೇಂದ್ರ ಸರ್ಕಾರದವರು ಅದೇ ಪ್ರಕಾರದ ಆದೇಶವನ್ನೂ ಕೊಟ್ಟಿರುವ ಕಾರಣ ನಾವು basic pattern ಮಾಡಿದ್ದೇವೆ. ಇನ್ನು ಮುಂದೆ basic ಮಟ್ಟಕ್ಕೆ ಹೆಜ್ಜೆ ಇಡಬೇಕಾಗಿದೆ. ಇದನ್ನು ಮಾಡುವ ಕಾಲಕ್ಕೆ ನಮ್ಮ ಶಾಲೆಗಳಲ್ಲಿ ತರಬೇತಿ ಹೊಂದಿದವರಿಲ್ಲ. ಟ್ರೈನಿಂಗ್ ಕಾಲೇಜುಗಳಲ್ಲಿ ತರಬೇತಿ ಕೊಡುತ್ತಿದ್ದೇವೆ.

ಶ್ರೀಮಾರ್ಕ ಸುಂತಣಕರ್ ಅವರು ಹೇಳಿದರು, ಒಂದು ತಕಲಿ ಕೊಟ್ಟು ನೂಲುವುದಕ್ಕೆ ಹೇಳಿ, basic pattern ಮಾಡುತ್ತಿದ್ದೀರಿ, basic education ಕೊಡುತ್ತಿದ್ದೀರಿ, ಇದು ಸರಿಯಲ್ಲವೆಂದು ಹೇಳಿದರು. ಅದು ಸರಿಯಲ್ಲ. ನಾವು ನೂಲುವುದು, ನೇಯುವುದು, ವ್ಯವಸಾಯ, ಬಡಗಿತನ, ಇವುಗಳನ್ನೆಲ್ಲಾ ಸೇರಿಸಿದ್ದೇವೆ. ಆ ಪ್ರಕಾರವಾಗಿ ನಡೆಯುತ್ತಿದೆ. ಯಾವುದೇ ಒಂದು ವಿಷಯವನ್ನು ಪ್ರಯೋಗಾರ್ಥವಾಗಿ ತೆಗೆದುಕೊಂಡಾಗ failure ಆಯಿತು, ಅಥವಾ ಒಳ್ಳೆಯದಾಯಿತು ಎನ್ನುವುದಕ್ಕೆ ಕಾಲ ಬೇಕಾಗುತ್ತದೆ. ಮಾನ್ಯ ಸದಸ್ಯರು ಕೆಲವು ಕಾಲ ತಡೆಯಬೇಕೆಂದು ಬೇಡಿಕೊಳ್ಳುತ್ತಿದ್ದೇನೆ.

ಮಲ್ಟಿ ಪರ್ಪಸ್ ಹೈ ಸ್ಕೂಲುಗಳು ಸಂಪೂರ್ಣವಾಗಿ failure ಆಗಿವೆ ಎಂದು ಶ್ರೀಮಾರ್ಕ ಸುಂತಣಕರ್ ಅವರು ಹೇಳಿದರು. ವಿಚಾರ ಹೀಗಿದೆ. ನಮ್ಮ ರಾಜ್ಯದಲ್ಲಿರುವ ಒಂದು ಸಾವಿರ ಹೈ ಸ್ಕೂಲುಗಳಲ್ಲಿ 61 ಮಾತ್ರ ಮಲ್ಟಿ ಪರ್ಪಸ್ ಹೈ ಸ್ಕೂಲುಗಳಾಗಿವೆ. ಇವು ಚೆನ್ನಾಗಿ ನಡೆದಿಲ್ಲವೆನ್ನುವುದನ್ನು ಒಪ್ಪುವುದಿಲ್ಲ. ಕೆಲವು ಕಡೆ ತೊಂದರೆಗಳಿವೆ. ಶ್ರೀಮತಿ ನಾಗರತ್ನಮ್ಮನವರು ಹೇಳಿದರು, ಚಿಕ್ಕಮಗಳೂರಿನಲ್ಲಿ ಗ್ರೀಸ್ ಹಾಕಿ ಸಲಕರಣೆಗಳನ್ನಿಟ್ಟಿದ್ದೇವೆ ಎಂದು ಹೇಳಿದರು. ಗ್ರೀಸ್ ಹಾಕಿ ಇಟ್ಟಿದ್ದರೆ ಅವು ಸರಿಯಲ್ಲವೆಂದಲ್ಲ. ಗ್ರೀಸ್ ಹಾಕದೆ ಇದ್ದರೆ ಅವು rust ಹಿಡಿಯುತ್ತವೆ, ಜಂಗ್ ಆಗುವ ಸಂಭವವಿರುತ್ತದೆ. ಗ್ರೀಸ್ ಹಾಕಿರುವುದು ತಪ್ಪಲ್ಲ. ಜಾಗ ಇಲ್ಲದ್ದಕ್ಕೆ ಹಾಗೆ ಮಾಡಿದ್ದೆವು ಈ ವರ್ಷ ಕ್ರಮ ತೆಗೆದುಕೊಂಡು ಕಟ್ಟಡ ಕಟ್ಟಿಸಬೇಕೆಂದು ಮಾಡಿದ್ದೇವೆ. ಜಾಗ ಸಿದ್ಧವಾಗಿದೆ. ಮುಂದಿನ ವರ್ಷ ಅಲ್ಲಿ ಹಾಕುತ್ತೇವೆ. ಹಿಂದೆ ಯಾವುದೋ ಕಾಲದಲ್ಲಿ ಆದದ್ದನ್ನು ನನ್ನ ಕೊರಳಿಗೆ ಕಟ್ಟುತ್ತಿದ್ದಾರೆ. ನಾಲ್ಕು ವರ್ಷದ ಹಿಂದೆ ನಡೆದುದ್ದನ್ನು ಸರಿಪಡಿಸಲು ಕಟ್ಟಡ ಕಟ್ಟಿಸುವ ಪ್ರಯತ್ನ ಮಾಡಿ, ಕಟ್ಟಡ ಕಟ್ಟಿಸಿ ಎಲ್ಲ ಸಿದ್ಧಮಾಡಿದ್ದಕ್ಕೆ ಮಾತ್ರ ಶ್ರೇಯಸ್ಸು ಸಿಕ್ಕಲಿಲ್ಲ, ಗ್ರೀಸ್ ಹಾಕಿ ಇಟ್ಟಿದ್ದಕ್ಕೆ ಮಾತ್ರ ಶ್ರೇಯಸ್ಸು ಸಿಕ್ಕಿತು.

ವಿದ್ಯಾ ಪೀಠಗಳ ವಿಚಾರವಾಗಿ ಶ್ರೀಮಾರ್ಕ ಸುಂತಣಕರ್ ಅವರು ಏನೇನೋ ಹೇಳಿದರು. ವಿದ್ಯಾಪೀಠಗಳು ಬೇಕಾಗಿರುವುದಿಲ್ಲವೆಂದೂ, ಈಗ ರಾಜ್ಯದಲ್ಲಿ ನಾಲ್ಕು ವಿದ್ಯಾಪೀಠಗಳಿವೆಯೆಂದೂ ಹೇಳಿದರು. ನಮ್ಮ ರಾಜ್ಯದಲ್ಲಿ ಏಳು ವಿದಾಪೀಠಗಳವೆ. ಎಂಟನೆಯದು ಮುಂಬೈ ಕರ್ಣಾಟಕದಲ್ಲಿ ಆಗುತ್ತದೆ. ಒಂಬತ್ತನೆಯದನ್ನು ಹೈದರಾಬಾದ್ ಕರ್ಣಾಟಕದಲ್ಲಿ ಮಾಡಬೇಕೆಂದು ಸರ್ಕಾರಕ್ಕೆ ಉದ್ದೇಶವಿದೆ. ಇವುಗಳಿಂದ ಜನರ ಮನೋವೃತ್ತಿ ಮಾರ್ಪಾಡಾಗುತ್ತದೆ. ಹೊಸತರಹದ ಜೀವನ ಮಾಡಲಿಕ್ಕೆ ಶಕ್ಯವಿದೆ, ಹೊಸತರಹ ವ್ಯವಸಾಯವನ್ನು ಮಾಡಲಿಕ್ಕೆ ಶಕ್ಯವಿದೆ ಎನ್ನುವ ಆಲೋಚನೆ ನನಗಿದೆ. ಇದಕ್ಕೆ ಬಹಳ ಖರ್ಚಾಗುತ್ತದೆಂದು ಹೇಳಿದರು. ಖರ್ಚಾಗುತ್ತದೆ. ವಿದ್ಯಾಪೀಠಗಳ

(ಶ್ರೀ ಎಸ್. ಆರ್. ಕಂಠಿ)

curriculum ಬೇರೆ, ಕಲಿಯುವಂಥ ರೀತಿ ಬೇರೆ, ಇರುತ್ತದೆ, ಇದರಿಂದಾಗಿ ಇವುಗಳ ಖರ್ಚು ಬಹಳ ಎಂದು ಒಪ್ಪಿಕೊಳ್ಳುತ್ತೇನೆ. ಇವು ಯಶಸ್ವಿಯಾಗಿ ಕೆಲಸ ಮಾಡಲಿಲ್ಲವೆಂದು ಹೇಳುವುದು ಸರಿಯಲ್ಲವೆಂದು ನನಗನ್ನಿಸುತ್ತದೆ.

ಸೋಷಿಯಲ್ ಎಜುಕೇಷನ್ನಿನ ವಿಚಾರವಾಗಿ ಮಾನ್ಯ ಸದಸ್ಯರಾದ ಶ್ರೀಮಾನ್ ಗೋಪಾಲ ಗೌಡರು ಹೇಳಿದಂತಹ ವಿಚಾರ ಬಹಳ ಗಹನವಾದುದು. ಅದನ್ನೂ ವಿಚಾರ ಮಾಡುತ್ತಿದ್ದೇವೆ ಎಂದು ಅಷ್ಟು ಹೇಳುತ್ತೇವೆ. ನೂರಕ್ಕೆ ಇಪ್ಪತ್ತೈದರಷ್ಟು ಮಾತ್ರ ಸಾಕ್ಷರತೆ ಇದೆ ಎಂದರೆ ಇದು ಇನ್ನೆಷ್ಟು ವರ್ಷಗಳಾದಮೇಲೆ ನೂರಕ್ಕೆ ನೂರರಷ್ಟು ಹೋಗುತ್ತದೆ ಎನ್ನುವುದರ ಬಗ್ಗೆ ನಾವೂ ಸಹ ವಿಚಾರ ಮಾಡಬೇಕಾಗುತ್ತದೆ. ನಾವು ಇತ್ತೀಚೆಗೆ Education Ministers' Conferenceಗೆ ದೆಹಲಿಗೆ ಹೋಗಿದ್ದಾಗ ಎಂದರೆ ಹೋದವರ್ಷದ ಅಕ್ಟೋಬರು 18 ಮತ್ತು 19ನೇ ತಾರೀಖುಗಳಲ್ಲಿ ಒಂದು ನಿರ್ಣಯ ಮಾಡಲಾಗಿದೆ ಅಲ್ಲಿ ಅವರೂ ಸಹ ಈ ಸೋಷಿಯಲ್ ಎಜುಕೇಷನ್ನಿಗಾಗಿ, ಹೆಚ್ಚು ದುಡ್ಡು ಹಾಕಿ, ಜನಗಳಲ್ಲಿ ಹೆಚ್ಚಿನ ಸಾಕ್ಷರತೆಯನ್ನುಂಟುಮಾಡಬೇಕು ಎಂದು ನಿರ್ಣಯಮಾಡಿದೆ. ಅದರಂತೆ ಕೇಂದ್ರ ಸಚಿವರಾಗಿದ್ದ ಶ್ರೀ ಮಾಲಿಯವರು ಈ ತಿಂಗಳು 23ನೇ ತಾರೀಖಿನದಿನ ಸೋಷಿಯಲ್ ಎಜುಕೇಷನ್ನಿನ ಒಂದು ಟೀಮು'ನವರೊಂದಿಗೆ ಇದನ್ನು ವಿಚಾರ ಮಾಡಲಿಕ್ಕೆ ಬರುವವರಾಗಿದ್ದಾರೆ. ಅವರಲ್ಲಿ ಇವೆಲ್ಲವನ್ನೂ ವಿಚಾರಮಾಡಿ ಯಾವರೀತಿ ಮುಂದೆ ಹೆಜ್ಜೆ ಇಡಬೇಕೆಂದು ನೋಡಬೇಕಾಗಿದೆ. ಹಿಂದೆ ಬ್ರಿಟಿಷರಕಾಲದಲ್ಲಿ ಶೇಕಡ 12 ಮತ್ತು 13 ಸಾಕ್ಷರತೆ ಇದ್ದುದು ಈಗ ಶೇಕಡ 15ರಷ್ಟು ಜಾಸ್ತಿಯಾಗಿದೆ. ಆದಕಾರಣ ಈ illiteracyಯನ್ನು ದೂರ ಮಾಡಬೇಕಾದರೆ ಎಷ್ಟೋ ವರ್ಷಗಳಾಗುತ್ತದೆ ಎಂದು ಅವರೂ ಅಸಮಾಧಾನಪಟ್ಟಿದ್ದಾರೆ. ಇದನ್ನು ಸರಿಯಾಗಿ ವಿಚಾರ ಮಾಡಬೇಕು ಎಂದು ನನಗೂ ಇದೆ. ನಾವು ಯಾವುದೇ ಒಂದು ಕೆಲಸವನ್ನು ಮಾಡಬೇಕಾಗಿದ್ದರೂ ಅದಕ್ಕೆ ತಕ್ಕಂತೆ ಶಿಕ್ಷಣ ಖಾತೆಯಲ್ಲಿ ದುಡ್ಡಿಲ್ಲದೆ ಆ ಕೆಲಸ ಆಗುತ್ತಿಲ್ಲ. ದುಡ್ಡಿಲ್ಲದೆ ಯಾವ ಕೆಲಸವನ್ನು ಮಾಡುವುದಕ್ಕೆ ಆಗುವುದಿಲ್ಲ. ಅದರಿಂದ ನಮ್ಮ ದೇಶದಲ್ಲಿ ಸಾಕ್ಷರತೆಯ ಅಭಾವವಿದ್ದರೂ ಹೆಚ್ಚಿಗೆ ಸ್ಕೂಲುಗಳನ್ನು ಮಾಡದೇ ಇರುವುದಕ್ಕೆ ಹಣದ ಅಭಾವವೂ ಒಂದು ಕಾರಣವಾಗಿದೆ. ಅದಕ್ಕಾಗಿ ಹೆಚ್ಚು ದುಡ್ಡನ್ನು ಕೊಟ್ಟರೆ ಇದನ್ನು ಮುಂದುವರಿಸುವುದಕ್ಕೆ ಸಾಧ್ಯವಿದೆ. ಇದಕ್ಕಾಗಿ ಎಲ್ಲರಿಂದಲೂ ಅಷ್ಟು, ಇಷ್ಟು ಬೇಕು ಎಂದು ಹೇಳಿ ಲೆಕ್ಕಮಾಡಿಹಾಕಿ ನೋಡಿದ್ದೇವೆ. ಅದು ಹೇಗೆಂದರೆ, ಹಳ್ಳಿಗಳಲ್ಲಿರುವ ಯಾರಾದರೂ ಒಬ್ಬರಿಂದ ಒಂದು ದೀಪ ಬೇಕಾದರೆ ಕೊಡುವುದಕ್ಕೆ ತೊಂದರೆಯಾಗುವುದಿಲ್ಲ. ಕೊಡುವುದಕ್ಕೆ ಒಂದು ಚಾಪೆ ತಂದುಕೊಡುವುದಕ್ಕೆ ತೊಂದರೆಯಾಗುವುದಿಲ್ಲ. ಹಾಗೇ ಒಂದು ಬೋರ್ಡು ಕೊಡುವುದಕ್ಕೆ ತೊಂದರೆಯಾಗುವುದಿಲ್ಲ. ಇದನ್ನು ಅವರೇ ಮಾಡಬೇಕೆಂದು ಯೋಚನೆ ಮಾಡಿದ್ದೇವೆ ; ಅದರಂತೆ ಸ್ಕೂಲುಗಳಲ್ಲಿರುವ ಮಾಸ್ತರುಗಳು, ಹೈಸ್ಕೂಲು ಟೀಚರುಗಳು, ಎಲ್ಲರೂ ಸೇರಿಕೊಂಡು ಈ ಕೆಲಸ ಮಾಡಬೇಕೆಂದು ಒಂದು ಯೋಜನೆಯನ್ನು ನಾವು ಮಾಡಿದ್ದೇವೆ.

Adult Education Council ವಿಚಾರವಾಗಿ ಮಾನ್ಯ ಸದಸ್ಯರಾದ ಶ್ರೀಮಾನ್ ರಂಗೇಗೌಡರು ಬಹಳ ಕಟುವಾಗಿ ಟೀಕೆ ಮಾಡಿದರು. ನಾನೂ ಇದನ್ನು ನೋಡಿಸಿದೆ. ಆದರೆ ಅವರು ಇದರಬಗ್ಗೆ ಎಷ್ಟುಮಟ್ಟಿಗೆ ತಿಳಿದುಕೊಂಡಿದ್ದಾರೆ ಅಷ್ಟು ವ್ಯತ್ಯಾಸಗಳು ಇಲ್ಲಿ ಇದ್ದಹಾಗೆ ಕಾಣುವುದಿಲ್ಲ. ಆದರೂ ಇನ್ನೂ ನೋಡಿಸುತ್ತೇವೆ.

ಶ್ರೀ ಸಿ. ಆರ್. ರಂಗೇಗೌಡ (ಮಾಗಡಿ).—ನಾನು ಮಾಗಡಿ ತಾಲ್ಲೂಕಿನ ವಿಚಾರದಲ್ಲಿ ಹೇಳಿದೆ. ಅಲ್ಲಿದ್ದ ಒಬ್ಬ ಮಹಿಳಾ ಟೀಚರನ್ನು ಬೆಂಗಳೂರಿಗೆ ವರ್ಗಮಾಡಿ ಅವರ ಶೀಲವನ್ನು ಅಪಹರಣ ಮಾಡಿರುವಬಗ್ಗೆ ಹೇಳಿದೆ.

ಶ್ರೀ ಎಸ್. ಆರ್. ಕಂಠಿ.—ಅಡಲ್ಟ್ ಎಜುಕೇಷನ್ನು ಸ್ಕೀಮು ಹಳೆಯ ಮೈಸೂರಿನ ಭಾಗದಲ್ಲಿ ಮಾತ್ರ ಅನ್ವಯಿಸುವಂತೆ ಇತ್ತು, ಆದರೆ ಈಗ ಇದನ್ನು ಈ ದೇಶದ ಎಲ್ಲಾ ಭಾಗಕ್ಕೂ ಅನ್ವಯಿಸುವ ಬಗ್ಗೆ ವಿಚಾರ ಮಾಡುವುದಕ್ಕಾಗಿ ಈ ತಿಂಗಳ ೨೩ನೇ ತಾರೀಖು ಒಂದು ಮೀಟಿಂಗನ್ನು ಕರೆದಿದ್ದೇವೆ. ಅದರೊಳಗೆ ಯಾವರೀತಿ ಇದನ್ನು entire Stateಗೆ ವಿಸ್ತರಿಸಬೇಕು ಎನ್ನುವ ಮುಖ್ಯ ಉದ್ದೇಶದಿಂದ ಈ ಕಮಿಟಿ ಕರೆದಿದ್ದೇವೆ. ಈ ಕಮಿಟಿಯಾದಮೇಲೆ ಇದಕ್ಕೆ ಒಂದು constitution ಎಂದರೆ ಒಂದು ಘಟಕವನ್ನು ಮಾಡಿ ಎಲ್ಲ ಕಡೆಯಲ್ಲೂ ಅದರಂತೆ ಏರ್ಪಾಡು ಮಾಡಬೇಕೆಂದು ವ್ಯವಸ್ಥೆಮಾಡಿದ್ದೇವೆ. ಸೋಷಿಯಲ್ ಎಜುಕೇಷನ್ನು ಬೋರ್ಡ್ ಎಂದು ಮಾಡಿರುವುದು ಬರಿ ಒಂದು ಅಡ್ವೈಜರಿ ಬೋರ್ಡು. ಅದು ಇಡೀ ರಾಜ್ಯಕ್ಕೆ ಅನ್ವಯಿಸುವಂತೆ ಮಾಡಲಾಗಿದೆ. ಹೈಸ್ಕೂಲು ಎಜುಕೇಷನ್ನಿನಲ್ಲಿ, ಕಾಲೇಜು ಎಜುಕೇಷನ್ನಿನಲ್ಲಿ falling in standards ಬಗ್ಗೆ ಕೆಲವರು ಹೇಳಿದ್ದಾರೆ. falling in standards

ಆಗಿದೆ ಎನ್ನುವುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಇದು ಮೈಸೂರು ರಾಜ್ಯವೊಂದಕ್ಕೆ ವಿಚಿತ್ರವಾದುದೇನಲ್ಲ ಎಂದು ತಿಳಿದುಕೊಳ್ಳಬೇಕು. ಎಲ್ಲ ಕಡೆಯೂ ಇಂತಹ ಪರಿಸ್ಥಿತಿ ಉಂಟಾಗಿದೆ. ಇದರಬಗ್ಗೆ ಈಚೆಗೆ ದೆಹಲಿಯಲ್ಲಿ ನಡೆದ ಎಜುಕೇಷನ್ನು ಮಿನಿಸ್ಟರುಗಳ ಕಾನ್‌ಫರೆನ್ಸಿನಲ್ಲಿ ಈ falling in standardsಗೆ ಕಾರಣವೇನು ಎನ್ನುವ ವಿಚಾರವಾಗಿ ಎಲ್ಲರೂ ಬಹಳ ಗಹನವಾಗಿ ವಿಚಾರಮಾಡಿ, ಇದರಲ್ಲಿ Defects ಏನಿವೆ ಎನ್ನುವುದನ್ನೂ ಯೋಚನೆ ಮಾಡುತ್ತಿದ್ದಾರೆ. ಈರೀತಿ ಇಡೀ ರಾಜ್ಯದಲ್ಲಿ falling in standards ಇದೆ ಎಂದು ನೋಡಿದ್ದೇವೆ ಇದಾಗಬಾರದು. ಇದನ್ನು ಸರಿಯಾಗಿ diognise ಮಾಡಿ ಈ ರೀತಿ ಏಕೆ falling in standards ಆಗುತ್ತಿದೆ ಎನ್ನುವುದನ್ನೂ ನೋಡುತ್ತಿದ್ದಾರೆ. ನನಗೆ ತಿಳಿದಮಟ್ಟಿಗೂ ಈ ಸ್ಟ್ಯಾಂಡರ್ಡು ಬಹಳ ಕಡಿಮೆಯಾಗುತ್ತಿದೆ.

ಇನ್ನು ಶ್ರೀಮಾನ್ ಗೋಪಾಲಗೌಡರು ಕಾಲೇಜು ಎಜುಕೇಷನ್ನಿನ ಬಗ್ಗೆ ಅನೇಕ ಸೂಚನೆಗಳನ್ನು ಕೊಟ್ಟಿದ್ದಾರೆ, ಆವು ಗಮನಾರ್ಹವಾದುದು. ಅವುಗಳನ್ನೆಲ್ಲಾ ನೋಡಿಸುತ್ತೇನೆ.

Linguistic Minorities ಬಗ್ಗೆ ಮಾನ್ಯ ಸದಸ್ಯರಾದ ಶ್ರೀಮಾನ್ ಸುಂಠಣ್‌ಕರ್ ಅವರು ಹೇಳಿದರು. ಲಿಂಗ್ವಿಸ್ಟಿಕ್ ಮೈನಾರಿಟಿಗಾಗಿ ಆದಷ್ಟೂ ಸಹಾಯ ಮಾಡುತ್ತಿದ್ದೇವೆ. ಹಾಗಿದ್ದರೂ ಏನೇನೂಮಾಡಿಲ್ಲ. ಎಂದು ಹೇಳುವುದು ಸರಿಯಲ್ಲ ಎಂದು ನನಗನಿಸುತ್ತದೆ. ನಾವು ಮಾಡಿರುವಂತಹ ಕಾರ್ಯಕ್ರಮಗಳು ತೆಗೆದುಕೊಂಡಿರುವ ನೀತಿ ಮತ್ತು ಮುಂದೆ ಮಾಡುವಂತಹ ಕಾರ್ಯಕ್ರಮಗಳು ಇವೆಲ್ಲವನ್ನೂ ಕೇಂದ್ರದ ಲಿಂಗ್ವಿಸ್ಟಿಕ್ ಮೈನಾರಿಟಿ ಬೋರ್ಡಿನ ಮುಂದೆ ಇಟ್ಟಾಗ ಅವರು ಇದನ್ನು ನೋಡಿ.—

"It is satisfying tone"

ಎಂದು ಹೇಳಿದ್ದಾರೆ. ಆದುದರಿಂದ ಪುನಃ ಈಗ ಇಲ್ಲಿ ಈರೀತಿ ಹೇಳುವುದು ಸರಿ ಎಂದು ಕಾಣಿಸುವುದಿಲ್ಲ. ನಮ್ಮ ರಾಜ್ಯದಲ್ಲಿ ಇನ್ನೂ ಹೆಚ್ಚಿಗೆ ಮಾಡುವುದು ಇದೆ ಎಂದು ಹೇಳಿದರೆ ಅದರಂತೆ ಮಾಡಬಹುದು ಅದಕ್ಕೆ ನನ್ನ ಅಡ್ಡಿಯೇನಿಲ್ಲ. ಆದರೆ ನಾವು ಏನೂ ಮಾಡಿಲ್ಲ ಎಂದು ಅಲ್ಲಿನ ಮರಾಠಿ ಜನರು ಮತ್ತು ಮಹಾರಾಷ್ಟ್ರದ ಏಕೀಕರಣ ಸಮಿತಿಯ ಸದಸ್ಯರು ಮರಾಠಿ ಜನರಮೇಲೆ ದಬ್ಬಾಳಿಕೆ ಮಾಡುತ್ತಿದ್ದಾರೆ ಎನ್ನುವಂತಹ ಒಂದು impression create ಮಾಡುವುದು ಸರಿಯಲ್ಲ. ಆದುದರಿಂದ ನಾನು ಈ ಸಮಿತಿಯ ಸದಸ್ಯರನ್ನು ಕೇಳಿಕೊಳ್ಳುವುದು ನಮ್ಮಲ್ಲಿ ಏನು ಲೋಪದೋಷಗಳಿವೆ ಎನ್ನುವುದನ್ನು ಹೇಳಲಿ ಅದನ್ನು ಸರಿಪಡಿಸುವಂತೆ ಮಾಡುತ್ತೇವೆ. ಆದರೆ ಇದನ್ನೇ ಒಂದು ಅಸ್ತ್ರ ಮಾಡಿಕೊಂಡು ನಮ್ಮ ಸೂಚನಯನ್ನೇನೂ ಗಣನೆಗೆ ತೆಗೆದುಕೊಳ್ಳಲಿಲ್ಲ ಎಂದು ಹೇಳುವುದು ಸರಿಯಲ್ಲ ಎಂದು ನಾನು ಆವರಿಗೆ ಹೇಳುತ್ತೇನೆ.

Sri N. O. SAMAJI.—(Marathi)

Sri S. R. KANTHI.—(Replied in Marathi)

ಅವರು ಕೆಲವು ಮಾತುಗಳನ್ನು ಹೇಳಿದ್ದಾರೆ. ಶ್ರೀಮಾನ್ ಸುನ್ಟನಕರ ಅವರು ಬಂದು ನನ್ನನ್ನು ಭೇಟಿ ಮಾಡಿದ್ದಾರೆ. ಅವರಿಗೆ ನಾನು ಇಲ್ಲಿ ಒಂದು ಮನವಿ ಮಾಡಿಕೊಳ್ಳುತ್ತೇನೆ. ಅದೇನೆಂದರೆ ಅವರಿಗೆ ಏನಾದರೂ ಆಗಬೇಕಾಗಿದ್ದರೆ ಅದನ್ನು ನ್ಯಾಯವಾಗಿ ಮಾಡುವಂತಿದ್ದರೆ ಮಾಡುವುದಕ್ಕೆ ಸಿದ್ಧನಾಗಿದ್ದೇನೆ ಎಂದು. ಕೆಲವರು ಬಂದು ನನ್ನಲ್ಲಿ ಹೇಳಿದ್ದಾರೆ. ಎಲ್ಲಿಯಾದರೂ ಏನಾದರೂ ಅಂಥ ಲೋಪದೋಷಗಳಿದ್ದರೆ ಅದನ್ನು ತಿಳಿಸಿದರೆ ಅದಕ್ಕೆ ಮಾಡಬೇಕಾದುದನ್ನು ಮಾಡಬಹುದು ಎಂದು ಹೇಳಿದ್ದೇನೆ.

Sri N. O. SAMAJI.—(Marathi)

Sri S. R. KANTHI.—(Replied in Marathi)

[*Interruptions*].

ಶ್ರೀ ಎಸ್. ಆರ್. ಕಂಠಿ.—ಕೆಲವೊಂದು ಸಲಹೆಗಳನ್ನು ನನ್ನಲ್ಲಿಗೆ ಬಂದು ಶ್ರೀಮಾನ್ ಸುನ್ಟನಕರ್ ಅವರೂ ಮತ್ತು ಶ್ರೀಮಾನ್ ಬಿ. ಎಸ್. ಪಾಟೀಲ್‌ರವರೂ ಸಹ ಬಂದು ಕೆಲವು ವಿಚಾರಗಳನ್ನು ಹೇಳಿದ್ದಾರೆ, ಆದರೆ ಮಾನ್ಯ ಸದಸ್ಯರಾದ ಶ್ರೀಮಾನ್ ಸಾಮಜಿಯವರು ಒಂದುಸಲವಾದರೂ ಬಂದು ನನ್ನನ್ನು ಭೇಟಿ ಮಾಡಲಿಲ್ಲ.

[*Interruptions in Marathi*]

ಶ್ರೀ ಎಸ್. ಆರ್. ಕಂಠಿ.—ಶ್ರೀಮತಿ ರತ್ನಮ್ಮ ಮಾಧವರಾವ್ ಅವರು Triple Benefit Schemeನ್ನು ಕಾಲೇಜುಗಳಲ್ಲಿಯೂ ಏಕೆ ತರಬಾರದು ಎಂದು ಹೇಳಿದರು. ಅದು ಸಾಧ್ಯವಾಗದ ವಿಚಾರ ಎನ್ನುವ ಮಾತನ್ನು ಇಲ್ಲಿ ಸ್ಪಷ್ಟಪಡಿಸುತ್ತೇನೆ. ಕಾಲೇಜುಗಳಲ್ಲಿ Triple Benefit Schemeನ್ನು ತರುವುದು ಅಸಾಧ್ಯ ಏಕೆಂದರೆ, ಒಟ್ಟು ನಮ್ಮ ರಾಜ್ಯದಲ್ಲಿ ಈಗ ಎರಡೂ ಯೂನಿವರ್ಸಿಟಿಗಳ ಮಧ್ಯೆ 63 ಕಾಲೇಜುಗಳಿವೆ. ಇದರಲ್ಲಿ 16 ಕಾಲೇಜುಗಳು ಮಾತ್ರ ಸರಕಾರಿ ಕಾಲೇಜುಗಳು. ಆಮೇಲೆ 9 ಇಂಜನೀಯರಿಂಗು ಕಾಲೇಜುಗಳು 5 ಮೆಡಿಕಲ್ ಕಾಲೇಜುಗಳೂ ಇವೆ. ಈ ಪ್ರಕಾರ ಲೆಕ್ಕ ಹಾಕಿದರೆ 63+14=77 ಕಾಲೇಜುಗಳಿವೆ. ನಮ್ಮ ಸರಕಾರಿ ಕಾಲೇಜುಗಳು ಮಾತ್ರ 27 ಇವೆ. ಆದುದರಿಂದ ಈ ಕಾಲೇಜುಗಳು ನಮ್ಮಲ್ಲಿರುವುದು ಒಳ್ಳೆಯದಲ್ಲ. ಎಲ್ಲ Private Sectorsಗಳಲ್ಲಿಯೇ ಹೆಚ್ಚಾಗಿ ಅದರೆ, ಅಂತಹ ಕಾಲೇಜುಗಳಿಗೆ ಸಾಕಷ್ಟು ಸಹಾಯ ಸಲಕರಣೆಗಳನ್ನು ಕೊಡಬಹುದು, ಇದಕ್ಕಾಗಿ ಬೇಕಾಗುವ ಪೂರ್ತಿ ಸಹಾಯವನ್ನು ಸರ್ಕಾರದವರೇ ಮಾಡುತ್ತಾರೆಂದು ಇಟ್ಟುಕೊಳ್ಳಬಾರದು. ಇದನ್ನು Private Agenciesಗಳಿಗೆ ಅಥವಾ ಡಿಸ್ಟ್ರಿಕ್ಟನಲ್ಲಿರುವ ಒಂದು ಬೋರ್ಡಿಗೆ ಈ ಕೆಲಸವನ್ನು ವಹಿಸಿದರೆ ಇದರಿಂದ ಜನಕ್ಕೆ ಹೆಚ್ಚಿನ ಅನುಕೂಲವಾಗಬಹುದು ಎಂಬುದು ನನ್ನ ವೈಯಕ್ತಿಕಾಭಿಪ್ರಾಯ. ಇದರಲ್ಲಿ ರಾಜಕೀಯ ಬರುತ್ತೆಂದು ಕೆಲವರು ಹೇಳಿದರು. ನನ್ನ ವೈಯುಕ್ತಿಕವಾದ ಅಭಿಪ್ರಾಯವೂ ಹಾಗೇ ಇದೆ. ನಾನೂಕೂಡ ಹೇಳಿಕೆಗಳನ್ನು ಕೊಡುವ ಕಡೆಗಳಲ್ಲಿ ಇದು ನನ್ನ ವೈಯ್ಯುಕ್ತಿಕ ಅಭಿಪ್ರಾಯ ಎಂದು ಹೇಳಿದ್ದೇನೆ. ಆದರೆ ಸರಕಾರದ ಅಭಿಪ್ರಾಯ ಇದಲ್ಲ.

Sri C. J. MUCKANNAPPA (Sira).—Sir, I rise to a point of order. When the Minister is a Minister all the 24. hours, and when he makes a statement in that capacity, will it not create a sort of impression in the minds of the people that there are conflicting statements from the same person ? I want to know when he is a Minister and when he is not a Minister, and when he is making a statement as Minister and when he is not making a statement as Minister.

Sri S. R. KANTHI.—My only reply to him is this : when I sleep, I am not a Minister.

Sri C. J. MUCKANNAPPA.—Sir, my point of order is not disposed of.

Mr. SPEAKER.—It is safely lodged. I will give my ruling. Let the Minister continue the reply and conclude.

Sri S. R. KANTHI.—I just submit that it is not fair. Whenever I have spoken, I have stated that it is my personal view ; Government is not considering......

Sri S. M. KRISHNA (Maddur).—Sir, a point of order has been raised and the Chair has reserved the ruling. In connection with the point of order raised by my friend Sri Muckannappa, I would like to take one submission......

Sri S. R. KANTHI.—I am not yielding, Sir.

Sri C. J. MUCKANNAPPA.—Sir, I may bring to your notice that the Hon'ble Finance Minister said the other day that once a Minister, he is a Minister all the 24 hours. I want the Hon'ble Speaker to kindly give us protection and guide us along the correct tract. Let not this train be derailed. That is my appeal to the Hon'ble Speaker.

Sri S. R. KANTHI.—I am not yielding, Sir.

Sri C. J. MUCKANNAPPA.—Because you are our guardian Sir, you are there to protect our interests. I do not want the protection of the Education Minister here.

Mr. SPEAKER.—Is the Hon'ble Member raising a new point of order ?

Sri S. M. KRISHNA.—We need some enlightenment from the Education Minister.

Sri C. J. MUCKANNAPPA.—It is people's money we are spending.

Sri S. R. KANTHI.—Once you have said that you are going to give your ruling on the point raised, why this controversy ? I am not here to give protection to anybody. I know the Education Minister also is here under the control and guidance of the Speaker. If anything, I require protection from the Chair, Sir.

Sri S. SIVAPPA.—The Education Minister is always creating confusion by making statements. He has become a controversial figure.

Sri S. R. KANTHI.—Am I a controversial figure, Sir ? What does it matter ?

Mr. SPEAKER.—He is not.

Sri S. R. KANTHI.—It is not a matter which should be treated as lightly as possible. I have always said that I am saying so and so in my personal...capacity this is what the Government has decided and this is what the Government has not decided.

Mr. SPEAKER.—All right, in order to cut short, I will give my ruling. What the Minister for Education said is right and there is no point of order.

ಶ್ರೀ ಎಸ್. ಆರ್. ಕಂಠಿ.—ಆಮೇಲೆ ಹೆಣ್ಣುಮಕ್ಕಳಿಗೆ ಮ್ಯಾಟ್ರಿಕ್ಯುಲೇಷನ್ ಪಾಸಾಗದೆ ಎಂಪ್ಲಾಯಮೆಂಟ ಕೊಡಬಾರದು ಟೀಚರನ್ನಾಗಿ ಮಾಡಬಾರದು ಎಂದು ಶ್ರೀಮಾನ್ ಅಣ್ಣಾರಾವ್ ಗಣಮುಖಿಯವರು ಹೇಳಿದರು. ಇದನ್ನು ಕೂಲಂಕಷವಾಗಿ ಸರಕಾರ ವಿಚಾರ ಮಾಡಿದೆ ಈ ರೀತಿ ಮಾಡಿದ್ದೇ ಆದರೆ ಕೆಲವು ಜಿಲ್ಲೆಗಳಲ್ಲಿ ಲೇಡಿ ಟೀಚರ್ಸ್ ಸಿಕ್ಕುವದಿಲ್ಲ. ಧಾರವಾಡದ ಹೆಣ್ಣುಮಕ್ಕಳ ಶಾಲೆಗಾಗಿ ಕಾರವಾರದಿಂದ ಅರ್ಜಿಗಳು ಬಂದಿದ್ದವು. ಧಾರವಾಡದಿಂದ ಬರಲಿಲ್ಲ. ಈ ರೀತಿ ಮಾಡಿದರೆ ಅವ್ಯವಸ್ಥೆಯಾಗುತ್ತದೆ. ಆ ಕಾಲ ಇನ್ನೂ ಬಂದಿಲ್ಲ. ಪ್ರೈಮರಿ ಸ್ಕೂಲ್ ಟೀಚರ್ ಆಗುವದಕ್ಕೆ ಹೆಣ್ಣುಮಕ್ಕಳು L. S. Certificate ಪಡೆದಿದ್ದರೆ ಸಾಕು ಎಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಬಿ. ಚನ್ನಬೈರೇಗೌಡ (ಹೊಸಕೋಟೆ).—ಸ್ವಾಮಿ, ಡಿ.ಪಿ.ಐ. ಆಫೀಸಿನಲ್ಲಿ ಅವಮಾನಕರವಾದ ಹಗರಣ ನಡೆದ ಬಗ್ಗೆ ನಾನು ವಿವರ ಕೇಳಿದ್ದೆ, ಅದನ್ನು ಹೇಳಲಿಲ್ಲ.

ಶ್ರೀ ಎಸ್. ಆರ್. ಕಂಠಿ.—ಅದು ನನಗೆ ಗೊತ್ತಿಲ್ಲ.

Mr. SPEAKER.—I want to make a general request. Any clarification can come only after the reply is over. No clarification can come in at this stage. I will not permit it. The Hon'ble Minister is entitled to give his reply undisturbed.

ಶ್ರೀ ಎಸ್. ಆರ್. ಕಂಠಿ.—ಬೆಂಗಳೂರು ಯೂನಿವರ್ಸಿಟಿ ವಿಚಾರ ಹೇಳಿದ್ದು ಇದು ದುರ್ದೈವದ ಸಂಗತಿಯಾಗಿದೆ. 19 ಕೋಟಿ ರೂಪಾಯಿ ವಿದ್ಯಾ ಇಲಾಖೆಗೆ ಖರ್ಚು ಮಾಡುವಾಗ್ಗೆ ದೊಡ್ಡ ದೊಡ್ಡ ಕೆಲಸಗಳನ್ನು ಬಿಟ್ಟು ಕೊಟ್ಟು ಸಣ್ಣ ಸಣ್ಣ ಮಾತುಗಳಿಗೆ ಹೆಚ್ಚು ಬೆಲೆ ಕೊಡುತ್ತಿದ್ದಾರೆ. ಇದನ್ನು ಏಕೆ ವಿರೋಧಿಸುತ್ತಾರೋ ತಿಳಿಯದು. ಎರಡು ಕೋಟಿ non-recurring expenditure ಮತ್ತು 300 ಎಕರೆ ಜಾಗ ಬೇಕಾಗುತ್ತದೆಂದು ಹೇಳಿದರು. ಬೆಂಗಳೂರು ಯೂನಿವರ್ಸಿಟಿಯು ಫೆಡರಲ್ ಯೂನಿವರ್ಸಿಟಿಯಾಗುತ್ತದೆ. ಬೆಂಗಳೂರು ನಗರದಲ್ಲಿ 22 ಕಾಲೇಜುಗಳಿವೆ. ಈಗ ಮಾಡುತ್ತಿರುವ ಖರ್ಚಿನ ಲೆಕ್ಕ ಹಾಕಿದರೆ ಎರಡು ಕೋಟಿಯಾಗುತ್ತದೆ. ಯು.ಜಿ.ಸಿ. ಅವರ ಸಹಾಯ ಬೇಕು. ಪ್ರತಿಯೊಬ್ಬನಿಗೆ 500 ರೂಪಾಯಿ ಖರ್ಚು ಬರುತ್ತದೆ. ಈಗಿನ ಲೆಕ್ಕದ ಪ್ರಕಾರ 425 ಕ್ಕಿಂತ ಕಡಿಮೆಯಾಗುವದಿಲ್ಲ. ಕೇವಲ 75 ರೂಪಾಯಿ ಹೆಚ್ಚು ವೆಚ್ಚವಾಗುತ್ತದೆ. ಪ್ರತಿದಿವಸ

(ಶ್ರೀ ಎಸ್. ಆರ್. ಕಂಠಿ)

ಬೆಂಗಳೂರು ನಗರ ಬೆಳೆಯುತ್ತಾ ಇದೆ. ಯೂನಿವರ್ಸಿಟಿ ಮಾಡಿದಾಗ್ಗೆ 500 ರೂಪಾಯಿ ಖರ್ಚು ಮಾಡಬೇಕಾಗುತ್ತದೆಂದು ಹೇಳಬಹುದು. 300 ಎಕರೆ ಜಮೀನು ಬೇಕಾದರೆ, ಇದ್ದ ಜಾಗದಲ್ಲಿ ಮಾಡಿಕೊಳ್ಳಲು ಬರುತ್ತದೆ. ಫೆಡರಲ್ ಯೂನಿವರ್ಸಿಟಿ ಪ್ರಶ್ನೆ ಮಾಡಬಹುದಾಗಿತ್ತು. ನಗರದಲ್ಲಿ ನಾನಾ ಕಡೆ ಕಾಲೇಜುಗಳಿವೆ. ಸೆಂಟ್ರಲ್ ಕಾಲೇಜನ್ನು ನ್ಯೂಕ್ಲಸ್‌ಆಗಿ ಇಟ್ಟುಕೊಂಡು ಮಾಡಬಹುದು. ಇದಕ್ಕಾಗಿ ಒಂದು ಕಮಿಟಿ ನೇಮಿಸಿದೆ. ಈ ಕಮಿಟಿಯ ವರದಿ ಬರುತ್ತದೆ. ಈ ಯೂನಿವರ್ಸಿಟಿ ರಚನೆಯಿಂದ ಹೆಚ್ಚು ಖರ್ಚು ಆಗುವದಿಲ್ಲ. ಈ ಕಮಿಟಿಯು ಇದಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನು ಪರಿಶೀಲಿಸಿ ವರದಿ ಬಂದಮೇಲೆ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಆ ಮೇಲೆ 10ನೇ ಕ್ಲಾಸ್ ಬಗ್ಗೆ ಹೇಳುತ್ತಾ ಗ್ರ್ಯಾಂಟ್ ಜೂರಿಸ್‌ಡಿಕ್ಷನನ್ನು ಎಜುಕೇಷನ್ನಿಗೆ ಹಾಕಬಾರದೆಂದು ಸಲಹೆ ಮಾಡಿದರು. ಇದರಲ್ಲಿ ನಮಗೆ official information ಇಲ್ಲ. ಅವರು ಹೇಳಿದ ಮಾತನ್ನು ನಾನು ಗಮನದಲ್ಲಿ ಇಟ್ಟುಕೊಂಡಿರುತ್ತೇನೆ.

10–30 A. M.

11ನೇ ಕ್ಲಾಸ್ ಬಗ್ಗೆ ಮಾತನಾಡುತ್ತಾ ಸಿಲಬಸ್ ಮಾಡಿಲ್ಲ ಅಂತ ಹೇಳಿದ್ದಾರೆ. ಅವರಿಗೆ ಎಲ್ಲಾ ಗೊತ್ತು; ನಾನು ಒಂದು ವರ್ಷ ವಿದ್ಯಾಮಂತ್ರಿಯಾಗಿದ್ದರೆ, ಅವರು ನಾಲ್ಕು ವರ್ಷ ಆಗಿದ್ದರು; ಆದ್ದರಿಂದ ಎಲ್ಲಿ ಬಾಟಲ್‌ನೆಕ್ ಇದೆ ಎಂದು ಅರಿತಿದ್ದಾರೆ. ಎರಡೂ ಯೂನಿವರ್ಸಿಟಿಗಳಿಗೆ P. U.C. ಯಲ್ಲಿ ಒಂದೇ ಸಿಲಬಸ್ ಇರಲಿ ಅನ್ನುವ ದೃಷ್ಟಿಯಿಂದ, ಇಷ್ಟುದಿವಸ ಈ ಕಾರ್ಯ ಮುಂದೆ ಹೋಗಿದೆ. ಸುದೈವದಿಂದ ಮೈಸೂರು ಯೂನಿವರ್ಸಿಟಿಯವರು ಎರಡು ಯೂನಿವರ್ಸಿಟಿಗಳ P. U. C. ಸಿಲಬಸ್ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ಒಂದೇ ಸಿಲಬಸ್ ಮಾಡುವುದಕ್ಕೆ ಶಕ್ಯವಾಗುತ್ತದೆ ಎಂದು ತಿಳಿಯಪಡಿಸುತ್ತೇನೆ.

ಆಂಗ್ಲೋ ಇಂಡಿಯನ್ ಸ್ಕೂಲುಗಳ ಬಗ್ಗೆ ಶ್ರೀ ಡಿ'ಮೆಲ್ಲೋರವರು 2½ಗಂಟೆ ಮಾತನಾಡಿದ್ದಾರೆ. ಅವರು ಪ್ರಸ್ತಾಪಿಸಿದ್ದರಲ್ಲಿ ಕೆಲವನ್ನು ಮಾಡುವುದಕ್ಕೆ ಸಾಧ್ಯವಿದೆ. ಕೆಲವನ್ನು ಮಾಡುವುದಕ್ಕೆ ಸಾಧ್ಯವಿಲ್ಲ. Constitutionಗೆ ವಿರುದ್ಧವಾಗಿ ಕೆಲವನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಅವರು ತಿಳಿಸಿದ್ದರಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನು ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು ನಾನು ಯಾವಾಗಲೂ ಬಾತ್ ರೂಮಿನಲ್ಲಿರುತ್ತೇನೆ ಅಂತ ಮಾತನಾಡುವಾಗ ಹೇಳಿದರು. ಪ್ರಾಮಾಣಿಕವಾಗಿ ಹೇಳುತ್ತೇನೆ: ಜುಲೈ ತಿಂಗಳಿನಿಂದ ನನಗೂ ಆ ಮಾನ್ಯ ಸದಸ್ಯರಿಗೂ ಭೇಟಿ ಇಲ್ಲ. ಆದ್ದರಿಂದ ಜುಲೈನಿಂದಲೂ ಈತನಕ ಬಾತ್‌ರೂಮಿನಲ್ಲಿ ಇರುತ್ತೇನೆಂದು ಹೇಗೆ ಹೇಳಿದರೋ ಗೊತ್ತಿಲ್ಲ.

ಶ್ರೀ ಎಸ್. ಶಿವಪ್ಪ:—ಜುಲೈಗಿಂತ ಮುಂಚೆ ?

ಶ್ರೀ ಎಸ್. ಆರ್. ಕಂಠಿ.—ಜುಲೈಗಿಂತ ಹಿಂದೆ ನನ್ನ ಹತ್ತಿರ ಬರುತ್ತಾ ಇದ್ದರು, ಆ ಮೇಲೆ ಬರುತ್ತಿಲ್ಲ. ನನಗೂ, ನಮ್ಮ ಮನೆಯವರಿಗೂ ಅವರು ಬಹಳ ಬೇಕಾದವರು ; ಈಗ ಸ್ವಲ್ಪ ವ್ಯಾಧಿ ಬಂದಿದೆ. ನನ್ನ ಮೇಲಿನ ಸಿಟ್ಟಿನಿಂದ ನಮ್ಮ ಮನೆಗೆ ಬರುವುದನ್ನೇ ನಿಲ್ಲಿಸಿದ್ದಾರೆ. ನನ್ನ ಹೆಂಡತಿಗೆ ಕೇವಲ ಬೇಕಾದವರಾಗಿದ್ದರೂ ಕೂಡ.

ಈ ಡೆಫ್ ಅಂಡ್ ಡಂಬ್ ಸ್ಕೂಲ್ ಬಗ್ಗೆ ಹೇಳುತ್ತಾ ಯಾರೋ ಒಬ್ಬ ಉತ್ಕೃಷ್ಟ ತರಬೇತಿ ಹೊಂದಿದವರನ್ನು ಇನ್ನು ಎಲ್ಲಿಗೋ ಬೇರೆಕಡೆಗೆ ಹಾಕಿದ್ದಾರೆಂದು ಹೇಳಿದರು. ಈ ರಾಜ್ಯ ಒಂದುಗೂಡಿ ವಿಶಾಲವಾಗಿ, ಮೈಸೂರು ಅಗುವುದಕ್ಕೆ ಮುಂಚೆ ಅದು ನಡೆದು ಹೋಗಿದೆ: ಅದು ನಡೆದಾಗ ನಾನು ಇಲ್ಲಿಗೆ ಬಂದೇ ಇರಲಿಲ್ಲ. ಅದಕ್ಕೆ ನನ್ನ ಬೈಯುವುದಕ್ಕೆ ಹತ್ತಿದ್ದಾರೆ, ನಾನು ಏನು ಹೇಳುವುದು. ಸ್ವಲ್ಪ ಯೋಚನೆ ಮಾಡಿ.

ಶ್ರೀ ವಿ. ಎಂ. ದೇವ್.—ನೀವು ನಾವು ಹೇಳಿದ ಒಳ್ಳೆಯ ಪಾಯಿಂಟುಗಳನ್ನು ಸೆಲೆಕ್ಟ್ ಮಾಡಿ, answer ಮಾಡುವುದು ಬಿಟ್ಟು ಯಾವಯಾವದೋ ಕ್ಷುಲ್ಲಕ ಅಂಶಗಳನ್ನು ಜವಾಬಿಗೆ ಆರಿಸಿದ್ದೀರಿ. ಅದಕ್ಕೇ ಇಷ್ಟು ಸಿಟ್ಟಿನ ವಾತಾವರಣ, ಎಲ್ಲಿಗೋ ದುಡ್ಡು ಕಲೆಕ್ಟ್‌ಮಾಡಿದಿರಿ ಅಂತ ಆರೋಪಣೆ ಮಾಡಿದ್ದನ್ನು ಬಿಟ್ಟುಬಿಟ್ಟಿರಿ.

ಶ್ರೀ ಎಸ್. ಆರ್. ಕಂಠಿ.—ನಾನು ಒಳ್ಳೆಯ ಪಾಯಿಂಟುಗಳು ಹೇಳಿದಾಗ ದೇವ್‌ರವರು ಮಾತನಾಡುವುದಿಲ್ಲ. ಮಾನ್ಯ ಸದಸ್ಯರಿಗೆ ವಾಸ್ತವಾಂಶ ಹೇಳಿ ನಿಜಸ್ಥಿತಿ ಕೊಟ್ಟರೆ ಹಣಾಹಣಿಯಿಂದ ಬಡಿದುಕೊಳ್ಳುತ್ತಾರೆ.

ಡಿ. ಪಿ. ಐ. ವಿರುದ್ಧ ವಸ್ತುಸ್ಥಿತಿಗೆ ದೂರವಾದ ಅನೇಕ ಅಹಿತಕರ ಸಂಗತಿಗಳನ್ನು ಹೇಳಿದರು; ಅವು ಸಣ್ಣ ಸಣ್ಣ ಮಾತುಗಳು ; ಅವುಗಳನ್ನೆಲ್ಲಾ ನಾನು ನೋಡಿದ್ದೇನೆ. ಒಂದು ಮಾತ್ರ ನಾನು ಈ ಮಾನ್ಯ ಸದಸ್ಯರಲ್ಲಿ ಬೇಡಿಕೊಳ್ಳುತ್ತಾ ಇದ್ದೇನೆ. ಈ ಮನೆಯಲ್ಲಾಗಲಿ, ಟ್ರೆಷರಿ ಬೆಂಚಿನಲ್ಲಾಗಲಿ ಯಾರೂ ಅವರಿಗೆ ವಿರೋಧವಾದಂಥವರು ಇಲ್ಲ ; ಸುಮ್ಮನೆ ಅವರಿಗೆ ವಿರೋಧಿಗಳು ಇದ್ದಾರೆ ಎಂದು ತಿಳಿದುಕೊಂಡಿದ್ದರೆ ಅದು ತಪ್ಪು. ಯಾವ ಕೆಲಸಗಳನ್ನು ಮಾಡಬೇಕಾದರೂ, ನಿಯಮ ನೀತಿ, rules, regulations ಇರುತ್ತವೆ, ಆ ಪ್ರಕಾರ ಮಾಡಬೇಕಾಗುತ್ತದೆ. ಅದನ್ನು ಗ್ರಹಿಸದೆ ಧತ್ ಅಂದರೆ ಏನುಮಾಡುವುದು. ನಾನು ಚಾಡಿಹೇಳುವ ಅಭ್ಯಾಸ ಇದ್ದವನು ಎಂದು ಅವರು ಹೇಳಿದರು.

ಶ್ರೀ ಎಸ್. ಶಿವಪ್ಪ.—ಇದು ಹೊಸದು. ನಮಗೆ ಗೊತ್ತಿರಲಿಲ್ಲ.

ಶ್ರೀ ಎಸ್. ಆರ್. ಕಂಠಿ.—ನನಗೆ 55 ವರ್ಷವಾಯಿತು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದಕ್ಕೆ ಏನು ಸಂಬಂಧ ?

Mr. SPEAKER.—When the Hon'ble Minister is attacked personally, he is entitled to reply to that.

Sri C. J. MUCKANNAPPA.—We did not dispute the fact that he was 55 years.

ಶ್ರೀ ಎಸ್. ಆರ್. ಕಂಠಿ.—ಇದು ಏನು, running commentary, All-India Radio ! 55 ವರ್ಷ ನನಗೆ ಆಗಿದೆ. 30ವರ್ಷಕಾಲ ರಾಜಕೀಯದಲ್ಲಿದ್ದೇನೆ. ಹಳೇಮೈಸೂರಿನ ಜನಕ್ಕೆ ಗೊತ್ತಿಲ್ಲ ; ಉತ್ತರ ಕರ್ಣಾಟಕದಲ್ಲಿ ಇಂಥ ಕೀಳುಮನಸ್ಸಿನಿಂದ ನನ್ನನ್ನು ಯಾರೂ ತಿಳಿದುಕೊಂಡಿಲ್ಲ.

ಚಾಡಿಹೇಳುವುದು ನಾನೇ, ಮಾನ್ಯ ಸದಸ್ಯರೇ ಅನ್ನುವುದನ್ನು ರಿಕಾರ್ಡಿನೊಳಗೆ ತಮಗೇ ತೋರಿಸುತ್ತೇನೆ: ಸ್ವತಃ ಅಕ್ಷರಶಃ ಚಾಡಿಇದೆ. ಆದರೆ ಮಾನ್ಯ ಸದಸ್ಯರು, ಹೆಣ್ಣುಮಕ್ಕಳು, ನನ್ನ ದುರ್ದೈವ, 55ನೇ ವರ್ಷದಲ್ಲಿ ನನಗೆ ವಿರೋಧವಾಗಿದ್ದಾರೆ. ನಾನು ಅವರಿಗೆ ವಿರೋಧಿಯಾಗಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—55ನೇ ವರ್ಷದಲ್ಲಿ ವಿರೋಧಿಯಾಗಿರುವುದಕ್ಕೆ ಕಾರಣ ಏನು ? (ನಗು).

ಶ್ರೀ ಎಸ್. ಆರ್. ಕಂಠಿ.—ತಾವೇಹೇಳಿ.

Mr. SPEAKER.— I think the Hon'ble Member says it as a joke.

Sri C. J. MUCKANNAPPA.—It is not a joke, Sir. I seriously meant it. ಇವರ 55ನೇ ವರ್ಷದಲ್ಲಿ ಶ್ರೀಮತಿ ನಾಗರತ್ನಮ್ಮನವರು ಇವರನ್ನು ದ್ವೇಷ ಮಾಡುವುದಕ್ಕೆ ಕಾರಣವೇನು ? (ನಗು).

ಶ್ರೀ ವಿ. ಎಂ. ದೇವ್.—30 ವರ್ಷ ರಾಜಕೀಯದಲ್ಲಿದ್ದು ಪ್ರಯೋಜನವೇನಾಯಿತು ?

ಶ್ರೀ ಎಸ್. ಆರ್. ಕಂಠಿ.–ಯಾವುದೋ ಒಂದುವಿಷಯ, ಅವರಿಗೆ ಸಂಬಂಧಪಟ್ಟಂಥ ಹೈಸ್ಕೂಲ್ ವಿಷಯವನ್ನು ನಾನು ತಲೆಗೆ ಕಟ್ಟಿಕೊಂಡಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ವಹಿಸಿಬಿಟ್ಟು ಅವರಿಗೆ ‘‘ಆರ್ಡರ್‌ಪಾಸುಮಾಡಿ, ನಿಮ್ಮ ಗವರ್ನ್‌ಮೆಂಟಿನಲ್ಲಿರುವವರೆಗೆ ಶಿರಸಾವಹಿಸಿ ಮಾಡುತ್ತೇವೆ’’ ಎಂದು ಹೇಳಿದ್ದೇನೆ. ಅವರು ತಿಳಿದುಕೊಂಡಿರುವುದು ತಪ್ಪು· ಯಾವುದೋ ಒಂದು ವಿಷಯಕ್ಕೆ ಹೈಕೋರ್ಟಿಗೆ ಕಾಲಿಡುವ ಪ್ರಸಂಗ ಬರಬಾರದೆಂಬ ದೃಷ್ಟಿಯಿಂದ ಮಾಡುತ್ತಾ ಇದ್ದೇನೆ. ಅವರ ವೈರಿಗಳು ಹೊರಗಡೆ ಇದ್ದಾರೆ. ಅವರನ್ನು ಬಿಟ್ಟು ನನಗೆ ಬೈಯುತ್ತಾ ಇದ್ದಾರೆ. ಯಾರೋ ಒಬ್ಬ ಸ್ವಾಮಿಗಳ ವಿಷಯಕ್ಕೆ ಹೇಳುತ್ತಾ ಇದ್ದಾರೆ, ಹೇಳಿಕೊಳ್ಳಲಿ, ಯಾರೋ ಒಬ್ಬ ಸ್ವಾಮಿಗಳು ಅವರ ಮನಸ್ಸಿನಲ್ಲಿರುತ್ತಾರೆ. ನಾನು ಆ ಸ್ವಾಮಿಗಳು ನಡೆಸುವಂಥಾ ಸಂಸ್ಥೆಗೆ ದುಡ್ಡುಕೊಟ್ಟಿದ್ದೇನಂತೆ. ಅದನ್ನು 1961ನೇ ಸಾಲಿನಲ್ಲಿಯೇ ಕೊಟ್ಟದ್ದಾಗಿದೆ, ಆಗ ನಾನು ಆ ‘‘Chair’’ನಲ್ಲಿ (Speaker's) ಇದ್ದೆ. 1,75,000 ರೂಪಾಯಿನ್ನು 1961ನೇ ಸಾಲಿನಲ್ಲಿ ಕೊಟ್ಟಿದ್ದಾಗಿದೆ; ನಾನು ಕೊಡಲಿಲ್ಲ: ಆದರೂ ಕೂಡ ನನ್ನನ್ನು ಬೈಯುತ್ತಾರೆ. ಇದು ತೋಳ ಕುರಿಮರಿ ಕಥೆಯಾದಂತೆ ಆಗಿದೆ. ‘‘ನಾನು ಕೆಳಗಡೆ ನೀರುಕಡಿದೆ’’ ಎಂದು ಕುರಿ ಅಂದರೂನೂ, ತೋಳ ‘‘ನಿಮ್ಮ ಅಪ್ಪ ಕುಡಿದಿದ್ದಿರಬಹುದು ’’ ಎಂದು ಕುರಿಮರಿಯನ್ನು ನುಂಗಿಬಿಟ್ಟಹಾಗೆ. ಶ್ರೀಮತಿ ನಾಗರತ್ನಮ್ಮನವರು ಅವರತಪ್ಪು ತಿಳಿದುಕೊಂಡು ತಮ್ಮ ಆತ್ಮ ಶೋಧನೆ ಮಾಡಿಕೊಳ್ಳಲಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ನಾನು ಆತ್ಮಶೋಧನೆ ಮಾಡಿಕೊಂಡಿದ್ದೇನೆ.

ಶ್ರೀ ಎಸ್. ಆರ್. ಕಂಠಿ.—ಮಾಡಿಕೊಂಡಿಲ್ಲ. ಕಡೆಯದಾಗಿ ನಿನ್ನೆ ಹೇಳಿದೆ ಈ ಡಿಪಾರ್ಟ್‌ಮೆಂಟಿನಲ್ಲಿ ನಾವು ಮುಂದಿನ ವರ್ಷ ಒಂದು ಸಾವಿರ ಶಿಷ್ಯರನ್ನು ನೇಮಿಸುವುದಕ್ಕೆ ಆಗುವುದಿಲ್ಲ ಪ್ರೈಮರಿ ಎಜ್ಯುಕೇಷನನ್ನು Strengthen ಮಾಡಬೇಕಾಗುತ್ತದೆ ಎಂದು. ಅದಕ್ಕೆ ಅನೇಕ ರೀತಿಯಿಂದ ಎಲ್ಲೆಲ್ಲಿ ಮಿತವ್ಯಯ ಮಾಡುವುದಕ್ಕೆ ಸಾಧ್ಯವಿದೆ ಅದನ್ನು ಮಾಡುತ್ತಾ ಇದ್ದೇವೆ. ಇದಕ್ಕೆ ಹೆಚ್ಚಿನ ಶಿಕ್ಷಕರನ್ನು ಹಾಕಲು ಪ್ರಯತ್ನ ಮಾಡಬೇಕೆಂದು ಮಾಡಿದ್ದೇವೆ. ಒಂದು ಮಾತು ಎಂದರೆ ಈಗಿನ ಕಾಲದಲ್ಲಿ ನಾವು ನಮ್ಮ ಶಿಕ್ಷಣ ಖಾತೆಯಲ್ಲಿ ಒಂದು ಯೂನಿಫಾರ್ಮಿಟಿ ಮಾಡಿದ ವಿನಃ ಯಾವುದೂ ಆಗುವುದಿಲ್ಲ. ಎಕಾನಮಿ, ಯೂನಿಫಾರ್ಮಿಟಿ ಶಿಕ್ಷಣಖಾತೆಯಲ್ಲಿ ಮಾಡುವುದು ಅವಶ್ಯಕವಾಗಿದೆ ಮಾಡುತ್ತಾ ಇದ್ದೇವೆ. ಯಾರಕಡೆ ಯಾವಖಾತೆ ಇರುತ್ತದೆ ಅವರ ಕಡೆಯಿಂದ ಆ ಕೆಲಸಮಾಡಿಸಿಕೊಳ್ಳುತ್ತೇವೆ. ಯಾವರೀತಿಯಿಂದ ಕೆಲಸಮಾಡಿಸಿಕೊಳ್ಳಬೇಕೆಂಬುದು ನಮಗೆ ಗೊತ್ತಿದೆ. ಮಾನ್ಯ ಸದಸ್ಯರಿಗೆ ಹೇಳುತ್ತಾ ಇದ್ದೇನೆ, ನೀವು ಅಲ್ಲಿಗೆ ಹೋಗುತ್ತೀರಿ, ಇಲ್ಲದೆ ಬರುತ್ತೀರಿ ಎಂದು ಭೂತ, ದೆವ್ವ ಅಂತ ಕಲ್ಪನೆ ಮಾಡುವುದು ಸರಿಯಲ್ಲ. 4ನೇ ಪಂಚವಾರ್ಷಿಕ ಯೋಜನೆಯನ್ನು ಮಾಡಬೇಕಾಗುತ್ತದೆ. ಇದೇ ತಿಂಗಳ ಕೊನೇ ವಾರದಲ್ಲಿ ದೆಹಲಿಯಿಂದ ಪ್ರವೀಣರು ಬರುತ್ತಾರೆ. ಅವರ ಜೊತೆಯಲ್ಲಿ ಮಾತನಾಡಬೇಕಾಗಿದೆ. ಮಾತನಾಡಿ ಅನೇಕ ವಿಷಯಗಳನ್ನು ಮಾನ್ಯ ಸದಸ್ಯರ ಮುಂದೆ ಜನರ ಮುಂದೆ ಇಡಬೇಕಾಗಿದೆ. ನಮ್ಮ ರಿಸೋರ್ಸೆಸ್ ಎಷ್ಟು ಯಾವರೀತಿ ಡೆವಲಪ್ ಮಾಡಿಕೊಳ್ಳಬೇಕು, ಕೇಂದ್ರ ಸರ್ಕಾರದಿಂದ ಒದಗುವ ಸಹಾಯ ಎಷ್ಟು, ಜನರಲ್ ಪ್ಯಾಟ್ರನ್ ಹೇಗಿರಬೇಕು ಎಂದು ಹೇಳಿ ಅದನ್ನು ಸಹ ಪರಿಶೀಲನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ. ಇವತ್ತು 4ನೇ ಪಂಚವಾರ್ಷಿಕ ಯೋಜನೆ ಅಥವಾ 3ನೇ ಪಂಚವಾರ್ಷಿಕ ಯೋಜನೆ ಇಷ್ಟು ಸುವ್ಯವಸ್ಥಿತವಾಗಿದೆ. 15 ವರ್ಷಕಾಲದ ಒಂದು ರೂಪುರೇಖೆ ಮಾಡುವಂಥ ವಿಚಾರವನ್ನು ಕೇಂದ್ರದಿಂದ ಬರುವಂಥ ಸದಸ್ಯರು ಹೇಳುವವರಿದ್ದಾರೆ. ಅದನ್ನು ಜನರ ಮುಂದೆ ಇಡುತ್ತೇವೆ, ಒಪ್ಪು ತಪ್ಪು ಹೇಳಬೇಕು. ವೈಯಕ್ತಿಕವಾಗಿ ಎಲ್ಲಾದರೂ ಹೇಳಿದಂಥಾ ನಾಲ್ಕು ಮಾತುಗಳು ಕಟುವಾಗಿ ಇರಬಹುದು ಅಥವಾ ಅವುಗಳ ವಿಷಯಕ್ಕೆ ಏನೊಂದು ರಾಜಕೀಯ ರೂಪ ಕೊಡಬಹುದೋ ಅದನ್ನು ಕೊಟ್ಟಿದ್ದೇನೆ. ಕೆಲವು ವಿಷಯಗಳ ಬಗ್ಗೆ ನಾನು ಹೇಳಿರುವುದೆಲ್ಲಾ ನಿಜ ಎಂದು ನಂಬಿದ್ದೇನೆ ಅಷ್ಟು ವಿಶ್ವಾಸ ನನಗೆ ಇದೆ. ಮತ್ತು ಮುಂದಿನ ಸರ್ಕಾರ ಅವನ್ನು ಮಾಡುತ್ತದೆ ಎಂದು ನನಗೆ ನಿಜವಾಗಿಯೂ ವಿಶ್ವಾಸ ಇದೆ.

Demand No. 17.—EDUCATION.

28. *Education.*

Mr. SPEAKER.—The question is :

"That a sum not exceeding Rs. 18,79,15,800 be granted to the Government to defray the charges which will come in course of payment during the financial year for the period ending 31st day of March 1964, in respect of 'Education'."

The motion was adopted.

Demand No. 18.

29. *Medical.*

Sri K. NAGAPPA ALVA (Minister for Health).—I beg to move :

"That a sum not exceeding Rs. 3,53,27,000 be granted to the Government to defray the charges which will come in course of payment during the financial year for the period ending 31st day of March 1964, in respect of 'Medical'.

Mr. SPEAKER.—Motion moved :

"That a sum not exceeding Rs. 3,53,27,000 be granted to the Government to defray the charges which will come in course of payment during the financial year for the period ending 31st day of March, 1964, in respect of 'Medical'."

Sri K. NAGAPPA ALVA.—I beg to move :

"That a sum not exceeding Rs. 3,34,04,000 be granted to the Government to defray the charges which will come in course of payment during the financial year for the period ending 31st day of March 1964, in respect of 'Public Health'."

Mr. SPEAKER.—Motion moved :

"That a sum not exceeding Rs. 3,34,04,000 be granted to the Government to defray the charges which will come in course of payment during the financial year for the period ending 31st day of March 1964, in respect of 'Public Health'."

Mr. SPEAKER.—I think it is better to fix a time limit. Shall we sit till 12-30 P.M. or extend the period ?

Sri S. NIJALINGAPPA (Chief Minister).—We can sit till one o'clock.

Sri C. J. MUCKANNAPPA.—Let us sit till 1-30 P.M. Time given is too short.

Mr. SPEAKER.—I will consider it. Meanwhile, Dr. Gowdaiah will open the debate and will conclude within 20 minutes.

ಶ್ರೀ ಕೆ. ಎಸ್. ಗೌಡಯ್ಯ (ಕೃಷ್ಣರಾಜನಗರ).—ಮಾನ್ಯ ಸಭಾಪತಿಗಳೇ, 1963-64ನೇ ಸಾಲಿನ 18 ಮತ್ತು 19ನೇ ಬೇಡಿಕೆಗಳ ಮೇಲೆ ನಾನು ಚರ್ಚೆಯನ್ನು ಪ್ರಾರಂಭ ಮಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಪ್ರಪ್ರಥಮವಾಗಿ ತಮಗೆ ವಂದಿಸುತ್ತೇನೆ.

[MR. CHAIRMAN (SRI GHOUSE MOHIUDDIN) in the Chair]

ಆರೋಗ್ಯ ಎಂಬುದು ಬಹಳ ಮುಖ್ಯವಾದದ್ದೆಂಬುದು ಎಲ್ಲರಿಗೂ ತಿಳಿದಂಥ ವಿಷಯ. ಜನರ ಆರೋಗ್ಯ ರಾಷ್ಟ್ರದ ಪ್ರಗತಿಗೆ ತಳಹದಿ ಎಂಬುದನ್ನು ಎಲ್ಲರೂ ಮನಗಂಡಿದ್ದಾರೆ. ಸ್ವಾಮಿ, ಆರೋಗ್ಯ ಎಂದರೆ ಏನು ಎಂಬುದನ್ನು ಸವಿಷ್ಟೀಕರಣ ಮಾಡುವುದು ಕಷ್ಟವಾದ ವಿಷಯ. ಕೆಲವರ ಭಾವನೆ ಇರಬಹುದು ಒಬ್ಬ ವ್ಯಕ್ತಿಗೆ ಯಾವ ರೋಗರುಜಿನ ಇಲ್ಲದೇ ಇದ್ದರೆ ಆತ ಆರೋಗ್ಯವಂತ ಎಂದು. ಆದರೆ ಅಷ್ಟೇ ಅಲ್ಲ ನಾವಿನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳಬೇಕಾಗುತ್ತದೆ. ಆರೋಗ್ಯವಂತರೆನ್ನುವವರು ಯಾರು ಎಂದರೆ ಒಬ್ಬ ಮನುಷ್ಯನ ದೇಹ ಮತ್ತು ಮನಸ್ಸು ಸಮರಸವಾಗಿ ಹೊಂದಿಕೊಂಡಿರಬೇಕು, ಸುತ್ತಮುತ್ತಿನ ಭೌತಿಕ ಮತ್ತು ಸಾಮಾಜಿಕ ವಾತಾವರಣಕ್ಕೆ ಹೊಂದಿಕೊಂಡು ಸಮರಸವಾಗಿ ಈ ಎರಡು ಕೆಲಸ ಮಾಡಬೇಕು. ಸಮರಸವಾಗಿ ಕೆಲಸ ಮಾಡುವಾಗ ಆ ಮನುಷ್ಯ ತನ್ನ ಜೀವನದಲ್ಲಿ ಬಹಳ ಸಂತೋಷದಿಂದ ಒಂದು ಉತ್ತಮ ಶ್ರೇಣಿಯಲ್ಲಿ ಜೀವನ ನಡೆಸಬೇಕು ಮತ್ತು ಆತನ ಉತ್ಪಾದನಾ ಶಕ್ತಿ ಏನಿದೆ, ಕೆಲಸ ಮಾಡುವ ಶಕ್ತಿ ಏನಿದೆ ಅದು ಒಂದು ಶ್ರೇಷ್ಠ ದರ್ಜೆಗೆ ಏರಬೇಕು. ಇದನ್ನೆಲ್ಲಾ ಸೇರಿಸಿ ಹೇಳಿದರೆ ಒಬ್ಬ ಮನುಷ್ಯ ಆರೋಗ್ಯವಂತ ಎಂಬುದಾಗಿ ಹೇಳಬಹುದು. ಅದನ್ನು ಇಂಗ್ಲೀಷ್‌ನಲ್ಲಿ positive health ಎಂದು ಹೇಳುತ್ತಾರೆ. ಹೀಗೆ ಆರೋಗ್ಯವೇ ದೇಶದ ಭಾಗ್ಯ ಎಂದು ನಾನು ಹೇಳಿದ ಮೇಲೆ ಈ ಆರೋಗ್ಯವನ್ನು ಕಾಪಾಡಲು ಬೇಕಾದಂಥ ಅವಶ್ಯಕವಾದ ವಸ್ತುಗಳು ಯಾವುವು ಎನ್ನುವುದನ್ನು ಒಂದೆರಡು ಮಾತಿನಲ್ಲಿ ಹೇಳಬೇಕೆಂದು ಇದ್ದೇನೆ. ಭೌತಿಕವಾದವು ಕೆಲವು. ಪೌಷ್ಟಿಕ ಆಹಾರ, ಪರಿಶುದ್ಧವಾದ ನೀರು,

(ಶ್ರೀ ಕೆ. ಎಸ್. ಗೌಡಯ್ಯ)

ಗಾಳಿ, ಬೆಳಕು, ಒಳ್ಳೆಯ ವಾಸಸ್ಥಳ ಮತ್ತು ಸುತ್ತಮುತ್ತಿನ ಪ್ರದೇಶಗಳು ಸ್ವಚ್ಛತೆಯಿಂದ ಇರುವುದು, ಮಲ ಮೂತ್ರ ಮುಂತಾದ ಕಶ್ಮಲಗಳನ್ನು ಸಾಗಿಸಲು ಇರುವ ಸಾಧನಗಳು ಮತ್ತು ಜನತೆಗೆ ಇರತಕ್ಕಂಥ ಬಟ್ಟೆ, ಬರೆ ಮತ್ತು ರೋಗ ಬಂದಾಗ ಅದನ್ನು ತಡೆಗಟ್ಟಲು ಮತ್ತು ಚಿಕಿತ್ಸೆ ನಡೆಸಲು ಬೇಕಾದ ಔಷಧಿಗಳು. ಭಾವನಾತ್ಮಕವಾದ ವಸ್ತುಗಳ ವಿಷಯವಾಗಿ ಒಂದೆರಡು ಮಾತು ಹೇಳುವುದಾದರೆ ಸ್ವಾಮಿ, ಇದು ಅವಶ್ಯಕವೇ ಎಂದು ಕೆಲವರು ಪ್ರಶ್ನಿಸಬಹುದು. ಆದರೆ ಈಗಿನ ಕಾಲದಲ್ಲಿ ಈಗ ಜನ ಸಾಮಾನ್ಯದಲ್ಲಿರತಕ್ಕ ಈ ರೋಗಗಳು ಏನಿವೆ. ರಕ್ತದ ಒತ್ತಡ, ಡಯಾಬಿಟೀಸ್ ಮತ್ತು ಮಾನಸಿಕ ರೋಗಗಳು ಬರದೇ ಇರಬೇಕಾದರೆ ಮುಂದೆ ನಾನು ಏನು ವಿಷಯಗಳನ್ನು ಹೇಳುತ್ತೇನೆ ಅವು ಅವಶ್ಯಕ ಎಂದು ತಮ್ಮ ಮುಂದೆ ಹೇಳಲು ಬಯಸುತ್ತೇನೆ. ಅದೇನೆಂದರೆ ಒಬ್ಬ ವ್ಯಕ್ತಿ ನಡೆಸತಕ್ಕ ಒಂದು ನಿರಾಡಂಬರ, ಸರಳ ಮತ್ತು ಸ್ವಚ್ಛ ಜೀವನ, ಒಂದು ಇತಿಮಿತಿಯೊಳಗೆ ಆತ ಸಲ್ಲಿಸತಕ್ಕ ದೇಹ ಶ್ರಮ. ಮಾನವೀಯತೆ, ದಯೆ, ಕರುಣೆ, ಅನುಕಂಪ ಮತ್ತು ನಿಸ್ವಾರ್ಥತೆ. ಮತ್ತು ಮನುಷ್ಯನಲ್ಲಿರತಕ್ಕ ಸೇವಾ ಮನೋಭಾವ. ಅದರಂತೆಯೇ ಮನುಷ್ಯನಿಗಿರತಕ್ಕ ಮಾನಸಿಕ ನೆಮ್ಮದಿ ಮತ್ತು ಸಂತೃಪ್ತಿ. ಇವೂ ಕೂಡ ಮುಖ್ಯವಾದದ್ದು. ಇದರ ಜೊತೆಗೆ ಮನುಷ್ಯನಿಗಿರುವ ಸತ್ಯಾನ್ವೇಷಣೆಯಾದರೋ ಬಹಳ ಮುಖ್ಯವಾದದ್ದು. ಈ ಸತ್ಯಾನ್ವೇಷಣೆ ಎನ್ನುವುದು ಪ್ರತಿಯೊಬ್ಬ ಮನುಷ್ಯನಲ್ಲೂ ರಕ್ತಗತವಾಗಿದ್ದು ಅದರಿಂದ ದೇಶಕ್ಕೆ ಬಹಳ ಪ್ರಯೋಜನವಿದೆ. ಇದರಿಂದ ನಮ್ಮ ಆರೋಗ್ಯ ವಿಚಾರದಲ್ಲಿ ಸಂಶೋಧನೆಗಳನ್ನು ಮಾಡುವುದಕ್ಕೂ ಅವುಗಳನ್ನು ಮುಂದುವರಿಸಿಕೊಂಡು ಹೋಗುವುದಕ್ಕೂ ಬಹಳ ಉಪಯೋಗವಾಗುತ್ತದೆ. ಇದರಿಂದ ಜನರಲ್ಲಿ ಒಂದು ಹೆಚ್ಚಿನ ಸಹಾನುಭೂತಿ ಬೆಳೆಯುತ್ತದೆ, ಜನರು ಹೆಚ್ಚಿನ ತತ್ಪರರಾಗುತ್ತಾರೆ. ಇದರಿಂದ ಜನರಲ್ಲಿ ಯಾವಾಗಲೂ ಒಂದು ಹೊಸ ವಿಷಯವನ್ನು ಕಂಡುಹಿಡಿಯಲೇಬೇಕು ಎನ್ನತಕ್ಕ ಉತ್ಸಾಹ, ಸಹನೆ, ಧೈರ್ಯ, ಸ್ಥೈರ್ಯಗಳು ಇರಲು ಇದು ಇರಲೇಬೇಕು. ಇವಿಷ್ಟೂ ಈ ಭೌತಿಕವಾದ ಭಾವನಾತ್ಮಗಳನ್ನು ಬೆಳಸಲು ಇರಲೇಬೇಕು ಎಂತ ಹೇಳಿದಮೇಲೆ ಇವುಗಳನ್ನು ಒದಗಿಸಿಕೊಡತಕ್ಕವರು ಯಾರು ಎಂತ ಕೇಳಬಹುದು. ಇವುಗಳನ್ನು ಒದಗಿಸಿಕೊಳ್ಳತಕ್ಕ ಕಾರ್ಯದಲ್ಲಿ ಎಲ್ಲರೂ ಪಾತ್ರವಹಿಸಲೇ ಬೇಕು. ಅಂದರೆ ಸಾಮಾನ್ಯ ಜನರೂ, ಈ ದಿವಸ ಔಷಧಿಗಳನ್ನು ಒದಗಿಸುತ್ತಿರುವ ಜನರೂ, ಈ ಆರೋಗ್ಯ ಸಂಸ್ಥೆಗಳನ್ನು ಬೆಳಸತಕ್ಕ ಜನರೂ—ಹೀಗೆ ಪ್ರತಿಯೊಬ್ಬರೂ ಇದರಲ್ಲಿ ಭಾಗವಹಿಸಬೇಕೆಂತ ಹೇಳಬಹುದು. ಆದರೆ ಹಾಗೆ ಮಾಡದೆ ಇಷ್ಟೆಲ್ಲವನ್ನೂ ಈ ಒಂದು ವೈದ್ಯ ಇಲಾಖೆಯ ಜನರೇ ಒದಗಿಸಿಕೊಡಬೇಕೆಂದರೆ ಇದು ಖಂಡಿತ ಸಾಧ್ಯವಿಲ್ಲದ ಮಾತು. ಒಟ್ಟಿನಲ್ಲಿ ಹೇಳುವುದಾದರೆ ಇದಕ್ಕಾಗಿ ಇಡೀ ದೇಶವೇ ದುಡಿಯಬೇಕು—ಪ್ರತಿಯೊಬ್ಬ ವ್ಯಕ್ತಿ, ಸಮಾಜ, ರಾಜಕಾರಣಿ, ವ್ಯಾಪಾರಗಾರ, ವ್ಯವಸಾಯಗಾರ, ಆಡಳಿತಗಾರ, ಇನ್ನಿತರ ಸಮಾಜ ಧುರೀಣರು, ಮಠಾಧಿಪತಿಗಳು-ಹೀಗೆ ಎಲ್ಲ ತರಹೆಯ ಜನರೂ ಇದರಲ್ಲಿ ಭಾಗವಹಿಸಬೇಕಾಗಿದೆ. ಆಗ ಯಾವ ಯಾವ ಜನರು ಆರ್ಥಿಕ ನೈಪುಣ್ಯತೆಯನ್ನು ಬಯಸುತ್ತಾರೋ ಯಾವ ಯಾವ ಜನ ಆರೋಗ್ಯ ನಿಯಮ ಪಾಲನೆಯನ್ನು ಬಯಸುತ್ತಾರೋ ಅಂಥವರೆಲ್ಲರಿಗೂ ಇದರಿಂದ ತುಂಬ ಸಹಾಯವಾಗುತ್ತದೆ ಎಂದು ಹೇಳುತ್ತೇನೆ. ಹೀಗೆ ಎಲ್ಲರೂ ಕೂಡಿ ಒಗ್ಗಟ್ಟಿನಿಂದ, ಒಂದು ಸೇವಾ ಮನೋಭಾವನೆಯಿಂದ, ಒಂದು ಹೊಂದಾವಣಿಕೆಯಿಂದ ಕೆಲಸ ಮಾಡಿದರೂ ಕೂಡ, ಆಗಲೂ ಇದರಲ್ಲಿ ಕೆಲವು ಲೋಪದೋಷಗಳು ಕಂಡುಬಂದೇ ಬರುತ್ತವೆ. ಆದರೆ ಇದು ಅನಿವಾರ್ಯವೆಂದು ಹೇಳುತ್ತೇನೆ. ಹೀಗೆಯೇ ಹಿಂದಿನಿಂದಲೂ ದೇಶದಲ್ಲಿ ಕೆಲವು ರೋಗರುಜಿನಗಳು ಇದ್ದೇ ಇರುತ್ತವೆ. ಅವೂ ಕೂಡ ಅನಿವಾರ್ಯವೇ. ಅವುಗಳ ಬಗ್ಗೆ ನಾವು ಏನು ಕಾರ್ಯಕ್ರಮ ಕೈಗೊಳ್ಳಬೇಕು ಎಂಬುದೇ ಈಗ ನಮ್ಮ ಮುಂದಿರತಕ್ಕ ಪ್ರಶ್ನೆ. ಇದರಲ್ಲಿ ಮೊದಲನೆಯದು ರೋಗ ಹರಡದಂತೆ ಅವುಗಳನ್ನು ತಡೆಗಟ್ಟುವುದು. Prevention is better than cure ಅಂದ ಹಾಗೆ ರೋಗಗಳು ತಲೆದೋರಿದ ಕೂಡಲೆ ತಕ್ಕ ಚಿಕಿತ್ಸೆಗಳನ್ನು ನಡೆಸುವುದು—ಇನ್ನೊಂದು ಹೀಗೆ ಜೊತೆಯಲ್ಲೇ ಈ ಎರಡೂ ಕಾರ್ಯಕ್ರಮಗಳನ್ನು ಕೈ ಕೊಳ್ಳಬೇಕು.

ಸ್ವಾಮಿ, ದೇಶದಲ್ಲಿರತಕ್ಕ ಈಗಿನ ಸಂದಿಗ್ಧ ಪರಿಸ್ಥಿತಿಯಲ್ಲಿ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಬಹಳ ಮುಖ್ಯವಾದದ್ದು. ಆದುದರಿಂದ ಈ ಆರೋಗ್ಯ ಭಾಗ್ಯವನ್ನು ಜನರು ಕಾಪಾಡಿಕೊಳ್ಳತಕ್ಕ ಬಗ್ಗೆ ಮುಖ್ಯ ಕಾರ್ಯಕ್ರಮಗಳೇನಿವೆ ಅವುಗಳ ಕಡೆಗೆ ಇಡೀ ದೇಶದ ಜನತೆಯ ಮನಸ್ಸನ್ನು ಆಕರ್ಷಣೆ ಮಾಡತಕ್ಕ ವಿಷಯಗಳು ಕೆಲವು ಇರುತ್ತವೆ. ಅವುಗಳೇನೆಂಬುದನ್ನು ನಾನೀಗ ಸೂಚಿಸ ಬಯಸುತ್ತೇನೆ. ಇದಕ್ಕೆ ಮಾರ್ಗದರ್ಶನ ನೀಡಿರತಕ್ಕ ಕೆಲವು ಸಮಿತಿಯ ವರದಿಗಳಿವೆ. ಅವುಗಳನ್ನು ಈ ಸಂದರ್ಭದಲ್ಲಿ ನಾವು ಜ್ಞಾಪಕ ಮಾಡಿಕೊಳ್ಳದೆ ಇದ್ದಲ್ಲಿ ನಾವು ಆ ಸಮಿತಿಗಳಿಗೆ ನಮ್ಮ ಗೌರವವನ್ನು ತೋರಿಸಿದಹಾಗೆ ಆಗುವುದಿಲ್ಲ. ಅಂಥ ಸಮಿತಿಗಳು ಯಾವುವೆಂದರೆ—

ಒಂದು ಬೋರ್‌ಸಮಿತಿಯವರ ವರದಿ. ಮತ್ತೊಂದು ಡಾಕ್ಟರ್ ಲಕ್ಷ್ಮಣಸ್ವಾಮಿಯವರ ನೇತೃತ್ವದಲ್ಲಿ ನೇಮಿಸಲಾಗಿದ್ದ ಹೆಲ್ತ್ ಅಂಡ್ ಸ್ಯಾನಿಟೆರಿ ಪ್ಲಾನಿಂಗ್ ಸಮಿತಿಯವರ ವರದಿ, ಮತ್ತು ಮೂರನೆಯದಾಗಿ ಯೂನಿವರ್ಸಿಟಿ ಮೆಡಿಕಲ್ ಎಜ್ಯುಕೇಷನ್ ಸಮಿತಿಯವರ ವರದಿ. ಹೀಗೆ ನೇಮಿಸಲಾಗಿದ್ದ ಆ ಮೂರು ಸಮಿತಿಗಳೂ ವೈದ್ಯಕೀಯ ಹಾಗು ಜನಾರೋಗ್ಯ ಸಂಸ್ಥೆಗಳು ಯಾವ ರೀತಿ ಅವು ಬೆಳೆಯಬೇಕು, ಯಾವ ರೀತಿ ಅವು ಕೆಲಸ ಕಾರ್ಯಗಳನ್ನು ಮಾಡಬೇಕು ಎನ್ನತಕ್ಕ ಬಗ್ಗೆ ಆ ಸಮಿತಿಯವರು ಮಾರ್ಗದರ್ಶನ ಮಾಡಿಕೊಟ್ಟಿದ್ದಾರೆ. ಆ ಮಾರ್ಗದರ್ಶನದಲ್ಲಿ ಕೆಲಕೆಲವು ಬಾಬುಗಳನ್ನು ಈಗಾಗಲೇ ಕೇಂದ್ರ ಸರ್ಕಾರ ಹಾಗೂ ರಾಜ್ಯಸರ್ಕಾರಗಳು ಕಾರ್ಯಗತ ಮಾಡಿವೆ. ಆದರೆ ಮುಂದಿನ್ನೂ ಮಾಡಬೇಕಾದುದು ಅಗಾಧವಾಗಿವೆ. ಆದರೆ ಈ ವರೆಗೆ ಮಾಡಿರತಕ್ಕ ಅಥವಾ ಕೈ ಗೊಂಡಿರತಕ್ಕ ಕೆಲವು ಕಾರ್ಯಕ್ರಮಗಳಲ್ಲಿ ಕೆಲವು ಲೋಪದೋಷಗಳಿವೆಯೆಂದು ನಾನೀಗ ಹೇಳಬೇಕಾಗಿದೆ. ಆ ಮಹನೀಯರು ಒಟ್ಟಿನಲ್ಲಿ ಸೂಚಿಸಿರತಕ್ಕ ಸಲಹೆಗಳಲ್ಲಿ ಪ್ರಾಮುಖ್ಯವಾಗಿ ಹೆಚ್ಚಿನ ಗಮನ ಸೆಳೆಯುತಕ್ಕಂಥ ಸೂಚನೆಗಳ್ಯಾವುವೆಂದರೆ ಹೊಸ ಹೊಸ ಔಷಧಿಗಳ ಸಂಶೋಧನೆ, ಹೆಚ್ಚು ಮೆಡಿಕಲ್ ಕಾಲೇಜುಗಳ ಸ್ಥಾಪನೆ, ಗ್ರಾಮಾಂತರ ಪ್ರದೇಶಗಳಲ್ಲಿ ಹೇಗೆ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಬೇಕು, ಹಾಗೂ ಅಲ್ಲಿ ಹೇಗೆ ಕುಟುಂಬ ರಕ್ಷಣೆ ಜಾರಿಗೆ ತರಬೇಕು, ಶಾಲಾ ಮಕ್ಕಳ ಆರೋಗ್ಯ ರಕ್ಷಣೆ ಇತ್ಯಾದಿ ಬಾಬುಗಳು. ಇತ್ತೀಚೆಗೆ ನಮ್ಮ ರಾಜ್ಯದಲ್ಲಿ ಜನಾರೋಗ್ಯದ ವಿಚಾರದಲ್ಲಿ ಇನ್ನೊಂದು ಒಳ್ಳೆಯ ಏರ್ಪಾಡನ್ನು ಮಾಡಿದ್ದಾರೆ. ಅದನ್ನು ಹೆಚ್ಚು ಪ್ರಚಾರದಲ್ಲಿ ತರಬೇಕಾಗಿದೆ. ಜನರ ಆರೋಗ್ಯವು ಉತ್ತಮ ರೀತಿಯಲ್ಲಿರಬೇಕಾದರೆ ಅದಕ್ಕೆ ಮೂಲ, ಒಳ್ಳೆಯ ನ್ಯೂಟ್ರಿಷನ್ ಇರತಕ್ಕ ಉತ್ತಮ ಆಹಾರಬೇಕು. ಈ ವಿಚಾರವನ್ನು ಜನರಿಗೆ ಹೆಚ್ಚು ಹೆಚ್ಚು ಪ್ರಚಾರ ಮಾಡಲು ಒಂದು ಯೋಜನೆಯನ್ನೀಗ ಕೈ ಗೊಂಡಿದ್ದಾರೆ. ಈಗ ನಾನು ಈ ಪ್ರತಿಯೊಂದು ವಿಷಯದಲ್ಲೂ ಹೆಚ್ಚಿನ ಪರಿಶೀಲನೆ ಮಾಡಲು ಪ್ರಯತ್ನಿಸುತ್ತೇನೆ. ಆದರೆ ಈ ಕೆಲವು ವಿಷಯಗಳ ಬಗ್ಗೆ ನನ್ನ ಮಾನ್ಯ ಸ್ನೇಹಿತರನೇಕರು ಖರ್ಚಿನ ಖೋತಾ ಸೂಚನೆಗಳನ್ನು ಮಂಡಿಸಿದ್ದಾರೆ. ಆ ಖೋತಾ ಸೂಚನೆಗಳ ಒಂದು ವಿಹಂಗಮ ದೃಷ್ಟಿಯನ್ನೂ ಕೂಡ ನಾನೀಗ ಸರ್ಕಾರದವರ ಮುಂದಿಡಲು ಪ್ರಯತ್ನ ಮಾಡುತ್ತಿರುವುದರಿಂದ ಆ ನನ್ನ ಸ್ನೇಹಿತರ ಕೆಲಸವನ್ನು ನಾನೇ ಒಂದು ರೀತಿಯಲ್ಲಿ ನಿರ್ವಹಿಸಿದ ಹಾಗೆ ಅಗುತ್ತದೆ. ವೈದ್ಯಕೀಯ ಕಾಲೇಜುಗಳನ್ನು ಹೆಚ್ಚು ಹೆಚ್ಚಾಗಿ ಸ್ಥಾಪನೆ ಮಾಡುವುದು, ವೈದ್ಯಕೀಯ ಶಿಬ್ಬಂದಿಯನ್ನು ಹೆಚ್ಚುಮಾಡುವುದು, ಶಾರೀರಕ ಚಿಕಿತ್ಸೆ ಹಾಗೂ ರೀಹ್ಯಾಬಿಲಿಟೇಷನ್ನಿಗೆ ಸಂಬಂಧಪಟ್ಟ ವಿಭಾಗಗಳನ್ನು ಅಭಿವೃದ್ಧಿಗೊಳಿಸುವುದು, ಮತ್ತು ಇವುಗಳಿಗೆ ಹೆಚ್ಚು ಸೌಲಭ್ಯಗಳನ್ನು ನೀಡುವುದು, ದ್ಯಂತವೈದ ವಿಭಾಗಗಳಲ್ಲಿರತಕ್ಕ ವೈದ್ಯಕೀಯ ಅಧಿಕಾರಿಗಳ ಸಂಬಳ ಸಾರಿಗೆಗಳನ್ನು ಇತರ ವೈದ್ಯಕೀಯ ಅಧಿಕಾರಿಗಳ ಮಟ್ಟಕ್ಕೆ ತಂದು ಅದನ್ನು ಸರಿಪಡಿಸಬೇಕು ಎಂತ ಕೇಳಿದ್ದಾರೆ. ಹೀಗೆ ಆಯುರ್ವೇದ ಕಾಲೇಜುಗಳಿಗೆ ಹೆಚ್ಚಿನ ಗಮನ ಕೊಡಬೇಕು. ಸಾಕಷ್ಟು ಸಂಖ್ಯೆಯ ವೈದ್ಯರಿಗೂ-ದಾದಿಯರಿಗೂ ತರಪೇತು ಕೊಡತಕ್ಕ ಕಾರ್ಯಕ್ಕೆ ಹೆಚ್ಚು ಗಮನ ಕೊಡಬೇಕು, ಜಿಲ್ಲಾ ಕೇಂದ್ರಗಳಲ್ಲಿರುವ ಆಸ್ಪತ್ರೆಗಳಿಗೆ ವಿಶೇಷ ತಜ್ಞರನ್ನು ಹೆಚ್ಚು ಹೆಚ್ಚಾಗಿ ನೇಮಿಸಬೇಕು, ಅಲ್ಲಿಗೆ ಹೆಚ್ಚು ಔಷಧಿಗಳನ್ನು ಸರಬರಾಯಿ ಮಾಡಬೇಕು, ಹೋಮಿಯೋಪತಿಕ್ ಅಸ್ಪತ್ರೆಗಳಿಗೆ ಹೆಚ್ಚು ಗಮನ ಕೊಡಬೇಕು ಎಂತ ಕೇಳಿದ್ದಾರೆ. ಮಲೆನಾಡಿಗೆ ಒಂದು ಮೆಡಿಕಲ್ ಕಾಲೇಜನ್ನು ಕೊಡಬೇಕೆಂದು ಶಿವಮೊಗ್ಗದವರು ಕೇಳಿ ಕೊಂಡಿದ್ದಾರೆ. ಹೀಗೆ ಎಲ್ಲೆಲ್ಲಿಯೂ ವೈದ್ಯಕೀಯ ಶಿಕ್ಷಣ ಶಾಲೆಗಳನ್ನೂ, ಆಸ್ಪತ್ರೆಗಳನ್ನೂ, ವೈದ್ಯಕೀಯ ಶಿಬ್ಬಂದಿಯನ್ನೂ ಹೆಚ್ಚಿಸುವುದಲ್ಲದೆ ಹೆಚ್ಚು ಹೆಚ್ಚು ಔಷಧಿಯನ್ನೂ ಒದಗಿಸಬೇಕೆಂದು ಕೇಳುತ್ತಿದ್ದಾರೆ. ಹೀಗೆ ಇನ್ನೂ ಈ ಜನಾರೋಗ್ಯ ರಕ್ಷಣೆ ಖಾತೆಯ ಖೋತಾ ಸೂಚನೆಗಳಲ್ಲಿ ಜಾಡಮಾಲಿಗಳ ಪರಿಸ್ಥಿತಿಯನ್ನು ಉತ್ತಮಗೊಳಿಸುವುದು, ಅಂಟುರೋಗಗಳನ್ನು ತಡೆಗಟ್ಟುವುದು, ಕುಟುಂಬ ಯೋಜನೆಯನ್ನು ಹೆಚ್ಚು ಹೆಚ್ಚಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಹರಡುವುದು, ಖೋಟಾ ಔಷಧಿಗಳ ತಯಾರಿಕೆ ಹಾಗೂ ಮಾರಾಟವನ್ನು ಜರೂರಾಗಿ ತಡೆಗಟ್ಟಬೇಕು ಎಂಬ ಅನೇಕ ಸೂಚನೆಗಳನ್ನಿತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚು ವೈದ್ಯಕೀಯ ಸೌಲಭ್ಯಗಳನ್ನು ಕಲ್ಪಿಸಬೇಕು—ಶಿಬ್ಬಂದಿ ಅಭಾವವನ್ನು ನೀಗಬೇಕು ಎಂತ ಹೀಗೆಲ್ಲಾ ಕೇಳಿಕೊಂಡಿದ್ದಾರೆ.

ಬಹುಶಃ ಮುಖ್ಯವಾದ ವಿಷಯ ಕುಡಿಯುವ ನೀರಿನ ಬಾವಿಗಳು, ಶುದ್ಧವಾದ ಕುಡಿಯುವ ನೀರು ಸಿಕ್ಕುವ ಹಾಗೆ ಮಾಡಬೇಕೆಂಬುದಾಗಿ ಸೂಚಿಸಿದ್ದಾರೆ. ಅವುಗಳನ್ನು ನಾನು ಅವರ ಪರವಾಗಿ ತಮ್ಮ ಮುಂದೆ ಇಟ್ಟಿದ್ದೇನೆ.

11-00 A.M.

Rural Health Service—ಗ್ರಾಮಾಂತರ ಪ್ರದೇಶಗಳ ಆರೋಗ್ಯ ರಕ್ಷಣೆ ಯಾವ ರೀತಿ ನಡೆಯಬೇಕು, ಇದರಲ್ಲಿರುವ ಲೋಪ ದೋಷಗಳೇನು ಎಂಬ ವಿಷಯವಾಗಿ ಕೆಲವು ಮಾತುಗಳನ್ನು

(ಶ್ರೀ ಕೆ. ಎಸ್. ಗೌಡಯ್ಯ)

ಹೇಳುತ್ತೇನೆ. ನಮ್ಮ ರಾಜಕಾರಣಿಗಳು, ಹೇಳುತ್ತಾರೆ ಇಲ್ಲಿ ಡಾಕ್ಟರುಗಳ ಅಭಾವವಿರುವುದರಿಂದ ನಾವು ಹೆಚ್ಚಾಗಿ ಗಮನ ಕೊಡಲಿಕ್ಕೆ ಆಗಲಿಲ್ಲವೆನ್ನುವ ವಾದವನ್ನು ಹೂಡುತ್ತಾರೆ. ಡಾಕ್ಟರುಗಳಿದ್ದರೂ ಕೂಡ ಹಳ್ಳಿಗಾಡು ಪ್ರದೇಶಗಳಿಗೆ ಹೋಗಿ ಕೆಲಸ ಮಾಡಲು ಒಪ್ಪುತ್ತಿಲ್ಲ; ಅದಕ್ಕೆ ಕಾರಣ ಅವರಲ್ಲಿರುವ ದುರಾಸೆ, ಅವರಲ್ಲಿ ಸೇವಾ ಮನೋಭಾವವಿಲ್ಲದಿರುವುದು ಎಂಬುದಾಗಿ ವೈದ್ಯರುಗಳ ಮೇಲೆ ಆರೋಪ ಮಾಡುತ್ತಾರೆ, ನಮ್ಮ ರಾಜಕಾರಣಿಗಳು. ವೈದ್ಯರ ಮೇಲೆ ಈ ರೀತಿ ಆರೋಪಣೆ ಮಾಡುವಾಗ ನಾವು ನಮ್ಮ ಆತ್ಮ ಸಂಶೋಧನೆಯನ್ನು ಪ್ರತಿಯೊಬ್ಬರೂ ಮಾಡಿಕೊಳ್ಳಬೇಕು. ನಮ್ಮಲ್ಲಿ ಆ ತರಹ ದುರಾಶೆ ಇಲ್ಲವೆ, ಆ ತರಹ ಸೇವಾ ಮನೋಭಾವ ಏದೆಯೇ ಎಂಬುದನ್ನು ನಾವು ಯೋಚನೆ ಮಾಡಿಕೊಳ್ಳಬೇಕು. ವೈದ್ಯರಾಗುವುದಕ್ಕೆ ಅವರು ಎಷ್ಟು ವರ್ಷಕಾಲ ಓದಬೇಕು, ಒಬ್ಬ ಪದವೀಧರನಾಗಲು ಎಷ್ಟು ವರ್ಷ ಕಾಲವ್ಯಯ ಮಾಡಬೇಕು, ಎಷ್ಟು ಹಣ ಖರ್ಚು ಮಾಡಬೇಕು, ಎಷ್ಟು ಸಾಲ ಮಾಡಿರಬೇಕು, ತನ್ನ ಆಸ್ತಿ ಪಾಸ್ತಿಗಳನ್ನು ಮಾರಿಕೊಂಡಿರಬೇಕು ಅಥವಾ ಎಷ್ಟು ಜನರ ಕೈಕಾಲು ಹಿಡಿದು ಧನರೂಪವಾದ ಸಹಾಯವನ್ನು ಪಡೆದಿರಬೇಕು ? ಇಂಥವರ ಮೇಲೆ ಈ ತರಹ ಆರೋಪಣೆಗಳನ್ನು ಮಾಡುವುದು ಅಷ್ಟು ಸರಿಯಲ್ಲ. ಅವರಲ್ಲಿ ಏನಾದರೂ ದೋಷಗಳಿದ್ದರೆ ಅವು ಜನ ಸಾಮಾನ್ಯರಿಗೆ ಇರತಕ್ಕ ದೋಷಗಳೇ ಹೊರತು, ಅವರಲ್ಲಿ ಮಾತ್ರವಿದ್ದು ಇನ್ನು ಯಾರಲ್ಲಿಯೂ ಇಲ್ಲದೇ ಅವರಲ್ಲಿಯೇ ಕೇಂದ್ರೀಕೃತವಾಗಿರುವುದಿಲ್ಲವೆಂದು ನಾನು ನನ್ನ ವೃತ್ತಿ ಬಾಂಧವರ ಪರವಾಗಿ ಹೇಳಲು ಬಯಸುತ್ತೇನೆ.

ಪದವೀಧರರಾದ ವೈದ್ಯರು ತಕ್ಷಣವೇ ಹಳ್ಳಿಗಳಿಗೆ ಹೋಗಿ ಅಲ್ಲಿ ಐದು ವರ್ಷಕಾಲ ಕೆಲಸ ಮಾಡಬೇಕು ಎಂದು ಕೆಲವರು ಹೇಳುತ್ತಾರೆ. ಅದು ಹಳ್ಳಿಗಾಡಿನವರಿಗೆ ಅಪಚಾರ ಮಾಡಿದ ಹಾಗೆ ಆಗುತ್ತದೆ. ಏಕೆಂದರೆ ಪದವೀಧರನಾದ ತಕ್ಷಣ ಏನೂ ಅನುಭವವಿಲ್ಲದೆ, ಹಿರಿಯ ವೈದ್ಯರುಗಳ ಅನುಭವವೇನಿದೆ ಅದನ್ನು ತೆಗೆದುಕೊಳ್ಳದೆ ನೇರವಾಗಿ ಅವರನ್ನು ಹಳ್ಳಿಗಳಿಗೆ ಕಳಿಸಿದರೆ ಹಳ್ಳಿಯ ಜನಗಳಿಗೆ ಅಪಚಾರ ಮಾಡಿದಹಾಗೆ ಆಗುತ್ತದೆ. ನನ್ನ ಅನುಭವದಲ್ಲಿ ಕೂಡ ನಾನು ಪದವೀಧರನಾದ ಮೇಲೆ ತಕ್ಷಣ ಒಂದು intravenous injection ಕೊಡಲು ಎಷ್ಟೋ ಕಷ್ಟವಾಗುತ್ತಿತ್ತು. ಅಂಥಾದ್ದರಲ್ಲಿ ಅವರನ್ನು ತಕ್ಷಣ ಹಳ್ಳಿಗಾಡಿಗೆ ಕಳಿಸಿದರೆ ಅಲ್ಲಿನ ಜನಗಳಿಗೆ ತೊಂದರೆ ಕೊಟ್ಟಹಾಗೆ ಆಗುತ್ತದೆ. ಪಟ್ಟಣದವರಿಗೆ ಒಂದು ತರಹ ಹಳ್ಳಿಗಾಡಿನವರಿಗೆ ಒಂದು ತರಹ ನೀತಿ ಸರಿಯಲ್ಲ. ಮೂರು ನಾಲ್ಕು ವರ್ಷ ಅನುಭವ ಪಡೆದ ಮೇಲೆ ಎಲ್ಲರನ್ನೂ ಕಡ್ಡಾಯವಾಗಿ ಹಳ್ಳಿಗಾಡಿಗೆ ಕಳಿಸಬೇಕು ಎನ್ನುವ ವಾದ ಹೇಳುತ್ತಾರೆ. ಆದರೆ ಹಾಗೆ ಮಾಡಬೇಡಿ. ನಮ್ಮ ಪ್ರಜಾಪ್ರಭುತ್ವ ಲಕ್ಷಣದ ಪ್ರಕಾರ ಕಡ್ಡಾಯವಾಗಿ ಮಾಡುವುದು ಸರಿಯೇ ಎಂದು ಕೇಳುತ್ತೇನೆ. ಯಾರು ಹಳ್ಳಿಗಾಡಿಗೆ ಹೋಗಲು ಇಚ್ಛೆ ಪಡುತ್ತಾರೆಯೋ ಅಂಥವರನ್ನು ಅಲ್ಲಿಗೆ ಕಳಿಸಬೇಕೇ ಹೊರತು ಎಲ್ಲರನ್ನ ಹಳ್ಳಿಗಾಡಿಗೆ ಹೋಗಿ ಜನರಿಗೆ ಚಿಕಿತ್ಸೆ ನಡೆಸಿ ಎಂದು ಹೇಳುವುದು ಅನ್ಯಾಯವೆಂದು ನಾನು ಹೇಳುತ್ತೇನೆ. ಏಕೆಂದರೆ ಎಷ್ಟೋ ಜನ ಪದವೀಧರರಿಗೆ ವೈದ್ಯಕೀಯ ವಿಷಯಗಳಲ್ಲಿ ಅಥವಾ ಉಳಿದ ವಿಷಯಗಳಲ್ಲಿ ಹೆಚ್ಚು ಪರಿಣತರಾಗುವ ಆಸೆ ಇರುತ್ತದೆ, ಆ ತರಹ ಶಕ್ತಿ ಕೂಡ ಅವರಲ್ಲಿರುತ್ತದೆ. ಅಂಥವರನ್ನು ಹಳ್ಳಿಗಳಿಗೆ ಕಳುಹಿಸಿದರೆ ಅವರ ಶಕ್ತಿಯನ್ನು ವಿನಾಕಾರಣವಾಗಿ ಕುಂಠಿತ ಮಾಡಿದ ಹಾಗೆ ಆಗುತ್ತದೆ. ಆದಕ್ಕೋಸ್ಕರ ನನ್ನ ಸಲಹೆ ಏನೆಂದರೆ ಹಳ್ಳಿಗಾಡುಗಳಿಗೆ ವೈದ್ಯರುಗಳನ್ನು ಆಕರ್ಷಿಸಬೇಕಾದರೆ ಯಾರು ಬೇರೆ ವಿಷಯಗಳಲ್ಲಿ ಹೆಚ್ಚು ತಜ್ಞತೆಯನ್ನು ಪಡೆಯುವುದಕ್ಕೆ ಇಷ್ಟಪಡದೆ ಇರುತ್ತಾರೆ ಅಂಥವರಿಗೆ ಹಳ್ಳಿಗಾಡಿನಲ್ಲಿ ಹೆಚ್ಚು ವೇತನಗಳ ರೀತಿಯಲ್ಲಿ ಮನೆಗಳನ್ನು ಕಟ್ಟಿಸಿಕೊಡುವ ರೀತಿಯಲ್ಲಿ ಒಳ್ಳೆಯ ವಾತಾವರಣ ಕಲ್ಪಿಸುವ ರೀತಿಯಲ್ಲಿ, ಮತ್ತು ಅಲ್ಲಿನ ಆಸ್ಪತ್ರೆಗಳಲ್ಲಿ ಹೆಚ್ಚು ರೋಗಗಳನ್ನು ಕಂಡುಹಿಡಿದು ಜನರಿಗೆ ಚಿಕಿತ್ಸೆ ಮಾಡಲು ಔಷಧ, ಉಪಕರಣಗಳು, laboratory equipment ಇದನ್ನೆಲ್ಲ ಒದಗಿಸಿ ಕೊಡುವುದರ ಮುಖಾಂತರ ವೈದ್ಯರನ್ನು ಹಳ್ಳಿಗಾಡು ಪ್ರದೇಶಗಳಿಗೆ ಆಕರ್ಷಿಸಬಹುದು. ಕಡ್ಡಾಯ ಮಾಡುವುದು ಸರಿಯಲ್ಲ. ಅವರು ಪದವೀಧರರಾದ ಕೂಡಲೇ ಹಳ್ಳಿಗಳಿಗೆ ಕಳಿಸುವುದೂ ಸರಿಯಲ್ಲವೆಂದು ನಾನು ಹೇಳುತ್ತೇನೆ.

Licentiate course ಈಗ ನಮ್ಮಲ್ಲಿ ತೆಗೆದುಬಿಟ್ಟಿದ್ದಾರೆ. ನಿಜವಾಗಿಯೂ ಇದು ಅಭಿನಂದನೀಯವಾದ ವಿಷಯ. ದೇಶದಲ್ಲಿ ಪುನಃ licentiate course ಪ್ರಾರಂಭ ಮಾಡಬಾರದಾಗಿತ್ತು ಎಂದು ಅದಕ್ಕೆ ವಿರೋಧವಿತ್ತು. ಆದರೆ ಇದ್ದ ಎರಡು ಮೆಡಿಕಲ್ ಸ್ಕೂಲುಗಳನ್ನು ತೆಗೆದಮೇಲೆ ಒಂದೇ ಒಂದು ಮೆಡಿಕಲ್ ಕಾಲೇಜ್ ಪ್ರಾರಂಭ ಮಾಡಿದ್ದಾರೆ. ಶಿವಮೊಗ್ಗದಲ್ಲಿ ಮೆಡಿಕಲ್ ಸ್ಕೂಲನ್ನು ಸ್ಥಾಪನೆ ಮಾಡಿದ್ದು ಅದನ್ನು ತೆಗೆದುಹಾಕಿದ್ದಾರೆ. ಶಿವಮೊಗ್ಗದವರೂ ಕಾಲೇಜನ್ನು ಕೇಳುತ್ತಿದ್ದಾರೆ. ಇನ್ನೂ ಸ್ವಲ್ಪ ಹಣವನ್ನೊದಗಿಸಿಕೊಂಡು ಶಿವಮೊಗ್ಗದಲ್ಲಿ ಒಂದು ಕಾಲೇಜನ್ನು

ತೆರೆದರೆ ನಮ್ಮ ಡಾಕ್ಟರುಗಳ ಅಭಾವವನ್ನು ತಪ್ಪಿಸುವುದಲ್ಲದೆ ಆ ಭಾಗದ ಜನಗಳಿಗೆ ಉತ್ಸಾಹ ಕೂಡ ಬರುವ ಹಾಗೆ ಆಗುತ್ತದೆಂದು ಹೇಳುತ್ತೇನೆ.

Nutrition ಬಗ್ಗೆ ಹೆಚ್ಚು ಗಮನ ಕೊಡಬೇಕು. ಅದರಲ್ಲಿಯೂ ವ್ಯವಸಾಯಿಗಾರರು ಮತ್ತು ವ್ಯವಸಾಯ ಇಲಾಖೆಯವರು ಹೆಚ್ಚು ಸಹಾಯ ಮಾಡಬೇಕಾಗುತ್ತದೆ. ಅವರು ಹೆಚ್ಚು ಆಹಾರ ಬೆಳೆಯುವಂಥಾದನ್ನೇ ಗಮನದಲ್ಲಿಟ್ಟುಕೊಳ್ಳದೆ ತಾವು ಬೆಳೆಯುವ ಆಹಾರದಲ್ಲಿ ಪೌಷ್ಟಿಕವಾದ ವಸ್ತುಗಳು ಇವೆಯೋ ಇಲ್ಲವೇ ಎಂಬುದನ್ನು ವಿಚಾರ ಮಾಡಬೇಕು. ಸಾಮಾನ್ಯ ಜನರು ಆ ಆಹಾರ ಪದಾರ್ಥಗಳನ್ನು ಉಪಯೋಗಿಸುವುದರಿಂದ ಅದರಲ್ಲಿ ಪೌಷ್ಟಿಕಾಂಶವಿದೆಯೋ ಇಲ್ಲವೇ ಎಂಬುದನ್ನು ಯೋಚನೆ ಮಾಡಿ, ಹೆಚ್ಚು ಬೆಳೆ ಬೆಳೆಯನ್ನು ಕೊಡುವಂಥ ಮತ್ತು ಪೌಷ್ಟಿಕಾಂಶದಿಂದ ಕೂಡಿರುವಂಥ ತಳಿಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ ಪ್ರಯತ್ನ ಮಾಡಬೇಕು.

ಸಂಶೋಧನೆಯ ವಿಚಾರವಾಗಿ ಹೇಳುವುದಕ್ಕೆ ಹೋದರೆ ನಮ್ಮ ದೇಶದಲ್ಲಿ ಅದರ ಅನುಭವ ಎಷ್ಟಿದೆ ಎಂದರೆ ನಮಗೆ ಆಶ್ಚರ್ಯವಾಗುತ್ತದೆ. ನಮ್ಮ ಜನಗಳಲ್ಲಿ ಕೆಲವು ಕಡೆ ಸಂಶೋಧನೆಗೆ ಅವಕಾಶವೇ ಇಲ್ಲ, ಕೆಲವು ಕಡೆ ಉಪಕರಣಗಳಿದ್ದರೆ, ಅವುಗಳನ್ನು ಸರಿಯಾಗಿ ಉಪಯೋಗಿಸುತ್ತಿಲ್ಲ. ಮುಖ್ಯವಾಗಿ ಪ್ರತಿಯೊಬ್ಬ ವೈದ್ಯನಿಗೆ, ಹೆಚ್ಚಿಗೆ ತಜ್ಞತೆಯನ್ನು ಪಡೆದಂಥ ವೈದ್ಯನಿಗೆ ಇದನ್ನೆಲ್ಲ ಒದಗಿಸಿ ವಾರ್ಡ್ ಪಕ್ಕದಲ್ಲಿಯೇ ಒಂದು ಸಂಶೋಧನಾಗಾರ (research annexe) ಎಂದು ಏನು ಹೇಳುತ್ತಾರೆ ಅದನ್ನು ಕೊಟ್ಟು Pathologist, Bio-chemist, Laboratory Assistant ಇವರೆಲ್ಲರೂ ಆತನ ನೇತೃತ್ವದಲ್ಲಿ ಕೆಲಸ ಮಾಡುವ ಹಾಗೆ ಮಾಡಿದರೆ ಆ ವೈದ್ಯನು ಅಲ್ಲಿ ಸಿಕ್ಕುವ chemical material ಉಪಯೋಗಿಸಿಕೊಂಡು ಹೊಸ ವಿಷಯಗಳನ್ನು ಕಂಡುಹಿಡಿಯುವುದಕ್ಕೆ ಅವಕಾಶವಾಗುತ್ತದೆ.

ಜನರಲ್ ಪ್ರಾಕ್ಟೀಷನರುಗಳು ಕೂಡ ತಮ್ಮ ಕಣ್ಣು ತೆರೆದುನೋಡಿ, ಕೇವಲ ರಕ್ಷಣೆಗೆ ಔಷಧಿಯನ್ನು ಕೊಟ್ಟು ಕಳಿಸಬೇಕು ಎನ್ನುವ ಮನೋಭಾವವಿಲ್ಲದೆ, ಅವರಿಗೆ ಬರುವ ಖಾಯಿಲೆಗಳನ್ನು ಸಂಶೋಧನಾ ದೃಷ್ಟಿಯಿಂದ ನೋಡಿದರೆ ಅವರೂ ಕೂಡ ಸಂಶೋಧನೆಗೆ ನೆರವಾಗಬಲ್ಲರು.

ವಿಶ್ವ ವಿದ್ಯಾನಿಲಯದಲ್ಲಿ ನಮ್ಮ ಪದವೀಧರರಿಗೆ ಮಾನ್ಯತೆಯ ವಿಧಾನವೇನು ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. Indian Medical Council ನವರು ಬಂದು ಹೋದರು. ಅವರು ಬಂದು ಹೋದಮೇಲೆ ಏನಾಯಿತು, ಎನ್ನುವುದು ನಮಗೆ ಗೊತ್ತಾಗಲಿಲ್ಲ. ಮತ್ತೆ ಅವರು ಕಾಲೇಜುಗಳಲ್ಲಿ ಒದಗಿಸತಕ್ಕ ಎಲ್ಲ ವಿಷಯಗಳು, ಉಪಕರಣಗಳು ಇವಕ್ಕೆಲ್ಲ ಅವರು ಒಪ್ಪಿಗೆಯನ್ನು ಕೊಟ್ಟಿದ್ದಾರೆಯೇ ಎಂದು ಕೇಳುತ್ತೇನೆ.

Physio Therapy ಪಾಸ್ ಮಾಡಿಕೊಂಡು ಬಂದವರಿಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಏನು ಅನುಕೂಲಗಳನ್ನು ಕಲ್ಪಿಸಿ ಕೊಟ್ಟಿದ್ದೀರಿ ? ಪದವೀಧರರಿಗೆ ಮಾನ್ಯತೆ ಕೊಡಬೇಕಾದರೆ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರು ಮೈಸೂರು ಸಂಸ್ಥಾನಕ್ಕೆ ಈ ತರಹ ನಿರ್ಬಂಧ ಮಾಡಬಹುದು. ಅಲ್ಲಿ ಒಂದು ಡಿಪ್ಲೊಮ ಕೋರ್ಸ್ ತೆಗೆಯಲು ಅವಕಾಶ ಕೊಡಬೇಕೆಂದು ಏನಾದರೂ ನಿರ್ಬಂಧವಿದೆ. ಅದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎಂಬುದಾಗಿ ಕೇಳುತ್ತೇನೆ.

ನಮ್ಮ ವಿಕ್ಟೋರಿಯಾ ಹಾಸ್ಪಿಟಲ್ಲನ್ನು ಮುಂದಕ್ಕೆ ತರುವಂತೆ ಡಿಸ್ಟ್ರಿಕ್ಟುಗಳಲ್ಲಿರುವ ಹಾಸ್ಪಿಟಲ್ಲುಗಳನ್ನು ಮುಂದಕ್ಕೆ ಬರುವ ಹಾಗೆ ಮಾಡಬೇಕು. ತಾಲ್ಲೂಕು ಹಾಸ್ಪಿಟೆಲ್ಲುಗಳನ್ನು ಚೆನ್ನಾಗಿರುವಂತೆ ಮಾಡಬೇಕು.

ಇಂಡಿಯಾ ದೇಶದ ವೈದ್ಯ ಪದ್ಧತಿಯ ಬಗ್ಗೆ ಒಂದೆರಡು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ನಮ್ಮಲ್ಲಿ ಪಾಶ್ಚತ್ಯ ವೈದ್ಯ ಪದ್ಧತಿಗಳೇ ಅಲ್ಲದೆ, ಆಯುರ್ವೇದ, ಯುನಾನಿ ಅಲೋಪತ್ತಿ, ಹೋಮಿಯೋಪತ್ತಿ ಇವುಗಳೆಲ್ಲ ಇವೆ. ಇದಕ್ಕೆ ಸರಕಾರದವರು ಗಮನ ಕೊಡುತ್ತಿದ್ದಾರೆ. ಇವು ಸರಕಾರದ ಮನ್ನಣೆ ಪಡೆದ ಉಚಿತವಾದ ವೈದ್ಯ ಪದ್ಧತಿಗಳಾಗಿವೆ. ಇದು ಜನ ಸಾಮಾನ್ಯರಲ್ಲಿ ಹರಡಿ ಸರಕಾರದ ಮಾನ್ಯತೆ ಪಡೆಯುದಿದ್ದರೂ ನೂರರಲ್ಲಿ ಎಂಭತ್ತು ಭಾಗದಷ್ಟು ಜನರಲ್ಲಿ ಇವು ಹರಡಿವೆ ಎನ್ನುವುದನ್ನು ಈ ಮಾನ್ಯ ಸಭೆಯಗಮನಕ್ಕೆ ತರುತ್ತಿದ್ದೇನೆ. ಅದಕ್ಕಾಗಿ ಮಾನ್ಯ ಮಂತ್ರಿಗಳು ಈಗಲಾದರೂ ಇದಕ್ಕೆ ಗಮನ ಕೊಡುವುದು ಮುಖ್ಯವೆಂದು ನಾನು ತಿಳಿದುಕೊಂಡಿದ್ದೇನೆ.

ನಮ್ಮ ದೇಶದಲ್ಲಿ Magic ಮಾಯ, ಮಾಟ ಇವುಗಳಿಂದ ಎಷ್ಟೋ ರೋಗ ವಾಸಿ ಮಾಡುವಂತಹ ಜನರಿದ್ದಾರೆ. ಒಬ್ಬ ವ್ಯಕ್ತಿಯಾದ ವೈದ್ಯಕೀಯ ಸಂಸ್ಥೆಯಲ್ಲೂ ತರಬೇತಿ ಹೊಂದದಿದ್ದಾಗೂ ಏನೋ ಒಂದು ಕಾಯಿಲೆಗೆ ಔಷಧಿ ಎಂದು ಕೊಡುತ್ತಾನೆ, ಹಾವು ಕಚ್ಚಿದವರಿಗೆ, ಇಸಬು

(ಶ್ರೀ ಕೆ. ಎಸ್. ಗೌಡಯ್ಯ)

ಬಂದವರಿಗೆ ಔಷಧಿ ಕೊಡುತ್ತಾನೆ, ಆದರೆ ಅದರಿಂದ ಏನಾದರೂ ಹೆಚ್ಚು ಕಡಿಮೆಯಾದರೆ ಅದನ್ನು ಸರಿಪಡಿಸುವುದಕ್ಕೆ ಬರುವುದಿಲ್ಲ. ಈ ತರಹ ಕೆಲವು ಔಷಧಿಗಳನ್ನು ಕೊಡತಕ್ಕ ವೈದ್ಯರುಗಳಿದ್ದಾರೆ. ಇದರಿಂದ ಏನಾದರೂ ಒಳ್ಳೆಯದಾಗುತ್ತದೆಯೇ ಎಂದು ನೋಡಬೇಕು. ನಮ್ಮ ಹಳ್ಳಿಗಳಲ್ಲಿ ಇಕ್ಕುಮದ್ದು ಎಂದರೆ ಗೋಸುಂಬೆ ಪ್ರಾಣಿಯನ್ನುಪಯೋಗಿಸಿ ಒಂದು ಮದ್ದನ್ನು ತಯಾರಿಸುತ್ತಾರೆ. ತಮಗೆ ಯಾರಾದರೂ ಬೇಡದವರಿದ್ದರೆ ಅಂತಹವರಿಗೆ ಊಟದಲ್ಲಿ ಆ ಇಕ್ಕ ಮದ್ದನ್ನು ಬೆರಸಿ ಹಾಕುತ್ತಾರೆ. ಇದರಿಂದ ಆ ಮನುಷ್ಯ ಬೇಗ ಸಾಯುವಂತೆ ಮಾಡುವುದಕ್ಕಾಗುವುದಿಲ್ಲ. ಆದಾಗ್ಯೂ, ಇದು ನಿಧಾನವಾಗಿ ಆರುತಿಂಗಳು, ಒಂದುವರ್ಷ, ಎರಡು ವರ್ಷಗಳ ಕಾಲ ಕಾಯಿಲೆಯಲ್ಲಿ ನರಳಿಸಿ ನಿಧಾನವಾಗಿ ಸಾವು ಬರುವಂತೆ ಮಾಡಲು ಅದೊಂದು ಮಾರ್ಗವಾಗಿರುತ್ತೆ. ಬಹಳವಾಗಿ ಅನೇಕ ಹಳ್ಳಿಗಳಲ್ಲಿ ಈ ರೀತಿಯಿದೆ. ನಮ್ಮ ಕಡೆ ಒಂದು ಹಳ್ಳಿಯಲ್ಲಿ ಈ ಇಕ್ಕುಮದ್ದನ್ನು ಉಪಯೋಗಿಸುತ್ತಿದ್ದಾರೆ. ಈಗಿರುವ ಕೆಲವಾರು ವೈದ್ಯ ಪದ್ಧತಿಗಳನ್ನೆಲ್ಲಾ ಕ್ರೋಢೀಕರಿಸಿ ಒಂದು ಸಮನ್ವಯ ಮಾಡಿ ರಾಷ್ಟ್ರೀಯ ವೈದ್ಯ ಪದ್ಧತಿಯಂತೆ ಜಾರಿಗೆ ತರಬೇಕೆಂದು ಸಲಹೆ ಮಾಡುತ್ತೇನೆ. ರಾಷ್ಟ್ರೀಯ ವೈದ್ಯ ಪದ್ಧತಿಯಲ್ಲಿ, ಅಲೋಪತ್ತಿ, ಹೋಮಿಯೋಪತ್ತಿ, ಆಯುರ್ವೇದ ಹಾಗೂ ಯುನಾನಿ ಹೀಗೆ ಇರುವ ಎಲ್ಲ ವೈದ್ಯ ಪದ್ಧತಿಗಳನ್ನು ಆದಷ್ಟು ಸೇರಿಸಿ ವೈದ್ಯ ಪದ್ಧತಿಯನ್ನು ಜಾರಿಗೆ ತಂದು ಇದನ್ನೇ ಶಿಕ್ಷಣ ಪದ್ಧತಿಯಲ್ಲೂ ಚೆನ್ನಾಗಿ ಅಳವಡಿಸಿ ಜನತೆಗೆ ಆ ಸೌಲಭ್ಯಗಳು ದೊರೆಯುವಂತೆ ಅನುಕೂಲ ಮಾಡಿಕೊಡಬೇಕು. ನಮ್ಮ ಜನರ ಆರೋಗ್ಯ ಉತ್ತಮ ವಾಗುವುದಲ್ಲದೆ ಅದನ್ನು ಅಭಿವೃದ್ಧಿ ಯಾಗುವಂತೆ ಪ್ರಯತ್ನಗಳನ್ನು ಮಾಡಬೇಕು ಎಂದು ಇಷ್ಟು ಹೇಳಿ ನಾನು ಮಾತನಾಡಲು ಇಷ್ಟು ಅವಕಾಶ ಮಾಡಿಕೊಟ್ಟುದಕ್ಕಾಗಿ ಅಧ್ಯಕ್ಷರಿಗೆ ನನ್ನ ವಂದನೆಗಳು.

ಶ್ರೀಮತಿ ರತ್ನಮ್ಮ ಮಾಧವರಾವ್ (ಶಿವಮೊಗ್ಗ).— ಮಾನ್ಯ ಸಭಾಧ್ಯಕ್ಷರೇ,

ನಮ್ಮ ಮುಂದಿಟ್ಟಿರುವ ಮೆಡಿಕಲ್ ಮತ್ತು ಹೆಲ್ತ್ ಬೇಡಿಕೆಗಳನ್ನು ಅನುಮೋದಿಸುತ್ತ ಕೆಲವು ಸಲಹೆಗಳನ್ನು ಕೊಡಬೇಕೆಂದು ನಿಂತಿದ್ದೇನೆ.

ಈ ಎರಡು ಬೇಡಿಕೆಗಳಿಗಾಗಿ ಬಡ್ಜೆಟ್ಟಿನಲ್ಲಿ ಕೊಟ್ಟಿರುವ ಹಣ ಸುಮಾರು ಆರು ಕೋಟಿಯಷ್ಟು ಇದ್ದರೂ ಎಲ್ಲ ಕೆಲಸಗಳನ್ನು ಮಾಡಲು ಈ ಮೊಬಲಗು ಸಾಲುತ್ತೋ ಇಲ್ಲವೋ ಎನ್ನುವ ಅನುಮಾನ ನನಗೆ ಇದೆ. ಮತ್ತು ಅದೇ ಯೋಚನೆಯಾಗಿದೆ. ಈ ಹಣದಲ್ಲಿ ಏನೇನು ಕಾರ್ಯಕ್ರಮ ಹಾಕಿಕೊಳ್ಳಬಹುದು ಮತ್ತು ನಾವು ಏನನ್ನು ಕೇಳಬಹುದು ಎಂಬುದು ಹೊಳೆಯುತ್ತಿಲ್ಲ ಬಹುಶಃ ನಿಮ್ಮ ಆರೋಗ್ಯವನ್ನು ನೀವೇ ನೋಡಿಕೊಂಡು ಹೋಗಿ ಎಂಬ ಭಾವನೆಯಿಂದಲೊ ಏನೋ ಈ ರೀತಿ ಇಲ್ಲಿ ಒದಗಿಸಿರುವ ಹಣ ಕಡಿಮೆ ಯಾಗಿರುತ್ತದೆಯೋ ಏನೋ ಎಂದು ನನಗೆ ಯೋಚನೆಯಾಗಿದೆ. ಕೆಲವು ಮಾನ್ಯ ಸದಸ್ಯರು ಈಗಾಗಲೇ ಮಾತನಾಡುತ್ತ ಹೇಳಿದ ಹಾಗೇ ಮೈಸೂರು ಯೂನಿವರ್ಸಿಟಿಯವರು ಕೊಡತಕ್ಕ ಎಂ. ಬಿ. ಬಿ. ಎಸ್. ಡಿಗ್ರಿಯನ್ನು ಆಲ್ ಇಂಡಿಯಾ ಮೆಡಿಕಲ್ ಕೌನ್ಸಿಲ್ಲಿನವರು ಯಾವಾಗ ರೆಕ್‌ಗ್ನೈಜ್ ಮಾಡುತ್ತಾರೆ ಎಂದು ಹೋದಬಾರಿ ನಾನೊಂದು ಪ್ರಶ್ನೆಯನ್ನು ಕೇಳಿದ್ದಕ್ಕೆ ಉತ್ತರವಾಗಿ ಬೇಗ ರೆಕ್‌ಗ್ನೈಜ್ ಆಗುತ್ತದೆ ಎಂಬುದಾಗಿ ಉತ್ತರಕೊಟ್ಟಿದ್ದರು. ಅದು ಹತ್ತಿರಕ್ಕೆ ಬಂದಿದೆಯೋ ? ಅಥವಾ ಈ ವರ್ಷದಲ್ಲಾದರೂ ಬರುತ್ತದೆಯೊ. ಈಗ ಡಾಕ್ಟರುಗಳಿಲ್ಲ ಎಂದು ಹೇಳುತ್ತಿದ್ದೀರಿ ಡಾಕ್ಟರುಗಳ ಅಭಾವವಿದೆ ಎನ್ನುವ ಈ ಸಮಯದಲ್ಲಿ ನಿವೃತ್ತಿ ಹೊಂದಿದ ಡಾಕ್ಟರುಗಳನ್ನೇಕೆ ನೀವು ರೀಅಪಾಯಿಂಟು ಮಾಡಿಕೊಳ್ಳಬಾರದು ? ಹೀಗೆ ಮಾಡಿದರೆ ಡಾಕ್ಟರುಗಳ ಅಭಾವವೂ ಕಡಿಮೆ ಯಾಗುತ್ತದೆ. ಬೇಕಾದಷ್ಟು ಡಾಕ್ಟರುಗಳೂ ಸಿಕ್ಕಿದ ಹಾಗಾಗುತ್ತದೆ. ಆಸ್ಪತ್ರೆಗಳಲ್ಲಿರುವ ಡಾಕ್ಟರುಗಳಿಗೆ ಪ್ರತಿಯೊಬ್ಬ ಸರ್ಜನ್ಸ್‌ರವರಿಗೂ ಒಂದೊಂದು ಫೋನನ್ನು ಪ್ರತ್ಯೇಕವಾಗಿ ಅವರಿಗೆ ಕೊಡಬೇಕು. ಯಾರು ಯಾರಿಗೋ ಚಿಲ್ಲರೆ ವ್ಯಾಪಾರಿಗಳಿಗೆಲ್ಲಾ ಈಗ ಫೋನುಗಳನ್ನು ಕೊಡುತ್ತಿರುವಾಗ ಈ ಸರ್ಜನ್ಸ್‌ಗಳಿಗೆ ಕೊಡಲು ಫೋನುಗಳಿಲ್ಲವೇ. ಸರ್ಜನ್ಸ್‌ಗಳಿಗೆ ಫೋನು ಅವಶ್ಯವಾಗಿರಬೇಕು. ಯಾರೋ ಸರ್ಜನ್ಸ್‌ಗಳು ಬೇಕೆಂದು ಕಳವಳದಿಂದ ಫೋನು ಮಾಡಿದರೆ ಅವರು ಸಮಯಕ್ಕೆ ಸರಿಯಾಗಿ ಫೋನಿನಲ್ಲಿ ಸಿಗದೇಹೋದರೆ, ನಿಧಾನವಾಗಿ ಈ ಸರ್ಜನ್ನುಗಳು ಬರುವವೇಳೆಗೆ ರೋಗಿ ಕೈಲಾಸವಾಗಸಿಯಾಗುತ್ತಾನೆ. ಆದುದರಿಂದ ಆಸ್ಪತ್ರೆಗಳಲ್ಲಿರುವ ಪ್ರತಿಯೊಬ್ಬ ಸರ್ಜನ್‌ಗಳಿಗೂ ಫೋನನ್ನು ಕೊಡಬೇಕೆಂದು ನಾನಿಲ್ಲಿ ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ.

ಇನ್ನು ಲೇಡಿ ಡಾಕ್ಟರುಗಳಲ್ಲಿ ಕೆಲವರಿಗೆ ಅವರ ಪ್ರಮೋಷನ್ನಿನ ಬಗ್ಗೆ ಅನ್ಯಾಯವಾಗಿದೆ ಎಂದು ಕೇಳುತ್ತೇನೆ. ಇದರ ಬಗ್ಗೆ ಸರಿಯೋ ತಪ್ಪೋ ಎನ್ನುವುದನ್ನು ಪರಿಶೀಲನೆ ಮಾಡಿ ಈ ಲೇಡಿ

ಡಾಕ್ಟರುಗಳಿಗಿರುವ ಅಸಮಾಧಾನವನ್ನು ಹೋಗಲಾಡಿಸುವಂತೆ ನಾನು ಸರಕಾರದಲ್ಲಿ ವಿನಂತಿ ಮಾಡುತ್ತೇನೆ.

ಆರೋಗ್ಯದ ಇಲಾಖೆಯಲ್ಲಿ ಅಧಿಕಾರಿಗಳಲ್ಲೇ ಪಕ್ಷಪಾತ ಇರಬಾರದು ಇದರಿಂದ ಆಡಳಿತ ಕೆಟ್ಟು ಹೋಗುತ್ತದೆ. ದಕ್ಷರಾದ, ಅನುಭವವಿರುವಂತಹವರನ್ನು ಇಲ್ಲಿ ಅಧಿಕಾರಿಗಳಾಗಿ ಕೆಲಸ ಮಾಡಲು ನೇಮಿಸಿದರೆ ಅನುಕೂಲ ವಾಗುತ್ತದೆ. ಆ ರೀತಿ ಮಾಡುತ್ತಾರೆಂದು ಆಶಿಸುತ್ತೇನೆ.

ಮಹಿಳಾ ಡಾಕ್ಟರುಗಳೇ ಇಲ್ಲ ಎನ್ನುವಾಗ ಎಲ್ಲೋ ಒಂದುಕಡೆ ಒಬ್ಬ ಮಹಿಳಾ ಡಾಕ್ಟರವರಿದ್ದ ಭಾಗದಲ್ಲಿ ಅದೃಷ್ಟವಶಾತ್ ಈಗ ಅವರು ಸೂಪರಿಂಟೆಂಡೆಂಟರಾಗಿದ್ದಾರೆ. ಹಾಗೆ ಆಗುವುದೇ ಕಷ್ಟ. ಅಂತಹುದರಲ್ಲಿ ಅಲ್ಲಿಗೆ ಅವರ ತಲೆಯಮೇಲೆ ಒಬ್ಬ ಮಹನೀಯರನ್ನು ಹಾಕುತ್ತೀರಲ್ಲ ಯಾಕೆ? ಆ ಮಹನೀಯರು ಮತ್ತು ಆ ಮಹಿಳೆ ಇಬ್ಬರೂ ಹೊಂದಿಕೊಂಡು ಕೆಲಸ ಮಾಡಿದರೆ ಸರಿ ಇಲ್ಲವಾದರೆ ಅಲ್ಲಿ ಉಂಟಾಗುವ ತಲೆನೋವು ನಿಮಗೆ ಬರುತ್ತದೆ.

ಇನ್ನು ಕುಟುಂಬ ಯೋಜನೆ ಇದು ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ ಎಂದು ನನ್ನ ಅನುಭವಕ್ಕೆ ಬಂದಿದೆ. ಇದನ್ನು ದೀರ್ಘವಾಗಿ ಪುನಃ ಪರಿಶೀಲನೆ ಮಾಡುವುದು ಅಗತ್ಯ ಎಂದ ನಾನು ಸಲಹೆ ಮಾಡುತ್ತೇನೆ.

ಈ ಸಾರಿ ಬಡ್ಜೆಟ್ಟು ಪುಸ್ತಕವನ್ನು ನೋಡಿದೊಡನೆ ಆ ಪುಸ್ತಕವನ್ನು ಚೆನ್ನಾಗಿ ತಿರುವಿಹಾಕಿದರೆ ನಮ್ಮ ಹಳ್ಳಿಗಳ ಕಡೆಗೆ ಏನೇನು ದೊರಕಿದೆ ಎನ್ನುವುದು ತಿಳಿಯುತ್ತೆ ಎಂದು ನೋಡಿದೆ. ನಮ್ಮ ಮಲೆನಾಡು ಭಾಗವಾದ ಶಿವಮೊಗ್ಗ ತಾಲ್ಲೂಕಿನ ಹಾರನಹಳ್ಳಿ ಹೋಬಳಿಯಲ್ಲಿ ಒಟ್ಟು ಸುಮಾರು 26,000 ಪ್ರಜಾ ಸಂಖ್ಯೆಇದೆ, ಇಲ್ಲಿ ಪ್ರೈವೇಟು ಡಾಕ್ಟರೊಬ್ಬರು, ಒಬ್ಬರು ಪಂಡಿತರು ಇದ್ದಾರೆ, ಇಂತಹ ಒಂದು ಜಾಗಕ್ಕೆ ಒಂದು ಆಸ್ಪತ್ರೆಯನ್ನು ಕಟ್ಟಿಸಿಕೊಡಬೇಕೆಂದು ಕೇಳಿದ್ದೆ. ಸರಕಾರ ಯಾವಾಗಲೂ ಉತ್ತರಕೊಡುವಂತೆ ಇದನ್ನು ಪರಿಶೀಲನೆ ಮಾಡುತ್ತೇವೆಂದು ಒಂದು ಭರವಸೆ ಕೊಟ್ಟಿದ್ದರು. ಇದರ ಬಗ್ಗೆ ಬಡ್ಜೆಟು ಪುಸ್ತಕವನ್ನು ನೋಡಿದಾಗ ಎಲ್ಲಿಯೂ ಏನೂ ಕಾಣಿಸಲಿಲ್ಲ. ಇದನ್ನು ಈ ವರ್ಷವಾದರೂ ಕೊಡುವುದಕ್ಕೆ ಮನಸ್ಸು ಮಾಡುತ್ತೀರಾ? ಅಲ್ಲಿರುವವರು ಏನು ಹಣ ಕೊಡಬೇಕೆಂದು ಇಟ್ಟಿದ್ದೀರೋ ಅದನ್ನು ಕೊಡಲು ಸಿದ್ಧರಾಗಿದ್ದಾರೆ.

ಮೆಡಿಕಲ್ ಕಾಲೇಜಿನ ಬಗ್ಗೆ ಮಾನ್ಯ ಸದಸ್ಯರು ಈಗಾಗಲೇ ಹೇಳಿದರು ಶಿವಮೊಗ್ಗಕ್ಕೆ ಒಂದು ಮೆಡಿಕಲ್ ಕಾಲೇಜುಬೇಕೆಂದು ಮಾನ್ಯ ಸದಸ್ಯರಾದ ಶ್ರೀಮಾನ್ ದೇವೇಂದ್ರಪ್ಪನವರು ನಾನೂ ಕೇಳುತ್ತಲೇ ಇರುತ್ತೇನೆ. ದಯಮಾಡಿ ಈಗಲಾದರೂ ಒಂದು ಮೆಡಿಕಲ್ ಕಾಲೇಜನ್ನು ಶಿವಮೊಗ್ಗಕ್ಕೆ ಕೊಡಿ ಎಂದು ಪ್ರಾರ್ಥಿಸುತ್ತೇವೆ. ಜಾಗ್ರತೆ ಕೊಡಬಹುದು ಎಂದು ನಾನು ಆಶಿಸುತ್ತೇನೆ.

ಶಿವಮೊಗ್ಗದಲ್ಲಿ Tropical School of Medicine ಎನುವುದನ್ನು ಏಕೆ ಸ್ಥಾಪನೆಮಾಡಬಾರದು? ಅಲ್ಲಿ ಎಲ್ಲ ಅನುಕೂಲವೂ ಇದೆ. ಹೆಲ್ತ್ ಲ್ಯಾಬೊರೇಟರಿ ಇದೆ. ತಾವೇ ಈಚೆಗೆ ಅದನ್ನು ಇಲ್ಲಿಗೆ ಬಂದು Open ಮಾಡಿದಿರಿ ಅಷ್ಟೆ ಅಲ್ಲ ಚೆನ್ನಾಗಿರುವ ಒಂದು ಒಳ್ಳೆಯ ಆಸ್ಪತ್ರೆ ಇದೆ. ಅಲ್ಲದೆ ಹಿಂದೆ ಮೆಡಿಕಲ್ ಕಾಲೇಜಿಗಾಗಿ ಇಟ್ಟಿದ್ದ 500 ಎಕರೆಯಷ್ಟು ಜಮೀನು ಹಾಗೆ ಇದೆ. ಇದನ್ನು ತಾವು ಪರಿಶೀಲನೆ ಮಾಡಬೇಕು ಎಂದು ತಮ್ಮಲ್ಲಿ ನನ್ನ ವಿನಂತಿ.

ಇನ್ನು ಪ್ರತಿಯೊಂದು ಡಿಸ್ಟ್ರಿಕ್ಟು ಹಾಸ್ಪಿಟಲ್‌ಗಳಿರುವ ಎಲ್ಲ ಕಡೆಗಳಲ್ಲಿಯೂ M.R.C.P.M.D. ಆಗಿರುವ physicians ಗಳು ಬೇಕು ಹಾಗೂ E.N.T. Specialists, Dental Surgeons, ಸ್ಪೆಷಲಿಸ್ಟುಗಳು ಬೇಕು. ಹೀಗಿರುವ ಡಾಕ್ಟರುಗಳನ್ನು ಹಾಕಿದರೆ ನಗರಗಳ ಆಸ್ಪತ್ರೆಗಳಿಗೆ ಹೊರಗಿನಿಂದ ಬರುವವರ ಧಾಳಿ ಕಡಿಮೆಯಾಗುತ್ತದೆ. ಹಳ್ಳಿಯ ಬಡರೈತರಿಗೂ ಅನುಕೂಲ ವಾಗುತ್ತದೆ ಮತ್ತು ಅವರಿಗೂ ತುಂಬಾ ಅನುಕೂಲವಾಗುತ್ತದೆ.

ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ, ನಮ್ಮ ರಾಜ್ಯದಲ್ಲಿ ಯಾವ ಒಂದು ಸಂಶೋಧನೆಯೂ ರೋಗಗಳ ಬಗ್ಗೆ ನಡೆಯುತ್ತಿಲ್ಲ. ಇಷ್ಟೆಲ್ಲಾ ಅನುಕೂಲಗಳಿರುವಾಗ ತಾವು ಇದನ್ನೇಕೆ ಮಾಡಬಾರದು! ಇದನ್ನು ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಮೆಡಿಕಲ್ ಮತ್ತು ಹೆಲ್ತ್ ಎರಡನ್ನು ಸೇರಿಸಿ ಒಂದೇ ಸಂಸ್ಥೆಮಾಡಿ ಒಬ್ಬರೇ ಡೈರೆಕ್ಟರನ್ನು ಮಾಡುವುದರ ಬಗ್ಗೆ ಏನಾಯಿತು.

ಮೆಡಿಕಲ್ ಕಾಲೇಜುಗಳಲ್ಲಿ ಹುಡುಗರನ್ನೇ ಪಾಠ ಹೇಳಲು ಕಳುಹಿಸುತ್ತಿದ್ದಾರೆ. ಇದಕ್ಕೆ ಬದಲಾಗಿ ಇಲ್ಲಿಗೆ ಅನುಭವಸ್ಥರಾದ ಡಾಕ್ಟರುಗಳನ್ನು ಹಾಕಬೇಕೆಂದು ನಾನು ಹೇಳುತ್ತೇನೆ. ಹುಡುಗರನ್ನೇ ಇಲ್ಲಿಗೆ ಹಾಕಿದರೆ ಸರಿಯಾಗುವುದಿಲ್ಲ. ಹುಡುಗರು ಗುರುಗಳು ಒಂದೇ ವಯಸ್ಸಿನವರಾದರೆ, ಏನು ಪ್ರಯೋಜನ ವಾಗುತ್ತದೆ? ಹುಡುಗರನ್ನು ಹಾಕಿದರೆ ಅದು ಬರೀ ಹುಡುಗಾಟವಾಗುತ್ತದೆ. ಅಲ್ಲದೆ M.B.B.S. ಪಾಸುಮಾಡಿದ ತಕ್ಷಣ ಇವರನ್ನು ಟೀಚರಾಗಿ ಹಾಕಿದರೆ ಸರಿಯೇ? ದೇಶದ ಜನತೆಯ ಆರೋಗ್ಯದ ಆಧಾರಸ್ತಂಭಗಳೆನಿಸಿದ ಇವರು ಸರಿಯಾದ ಪರಿವೇತ್ತರಾಗಿರಬೇಡವೇ? ಇಲ್ಲಿ ಅನುಭವಸ್ಥ ಡಾಕ್ಟರುಗಳನ್ನು ಹಾಕುವುದೊಳ್ಳೆಯದು.

(ಶ್ರೀಮತಿ ರತ್ನಮ್ಮ ಮಾಧವರಾವ್)

ಬೆಂಗಳೂರು ನಗರದಲ್ಲಿಯ ಆಸ್ಪತ್ರೆಯು ಬಗ್ಗೆ ಎರಡು ಮಾತು ಹೇಳಲಿಚ್ಛಿಸುತ್ತೇನೆ. ವಿಕ್ಟೋರಿಯಾ ಮತ್ತು ವಾಣಿವಿಲಾಸ ಆಸ್ಪತ್ರೆಗಳಲ್ಲಿ ವಿಜಿಟರ್ಸ್ ಬೋರ್ಡನ್ನು ಇನ್ನೂ ಯಾಕೆ ಮಾಡಿಲ್ಲ? ಇದರಲ್ಲಿ ಇರುವ ತೊಂದರೆ ಏನು? ಹೊರಗಡೆಯಿಂದ ಬರುವ ರೋಗಿಗಳಿಗೆ ನೇರವಾಗಿ ಡಾಕ್ಟರರನ್ನು ನೋಡುವದಕ್ಕಾಗುವುದಿಲ್ಲ. ಡಾಕ್ಟರರು ಸಿಕ್ಕುವುದಿಲ್ಲ. ಯಾರ ಮುಖಾಂತರವಾದರೂ ಡಾಕ್ಟರರನ್ನು ನೋಡಬೇಕಾಗುತ್ತದೆ. ವಿಜಿಟರ್ಸ್ ಇದ್ದರೆ ಅವರ ಮುಖಾಂತರವಾದರೂ ಡಾಕ್ಟರರನ್ನು ನೋಡಬಹುದು. ಇದನ್ನು ಜಾಗ್ರತೆ ಮಾಡಬೇಕೆಂದು ಸೂಚಿಸುತ್ತೇನೆ.

ಆಸ್ಪತ್ರೆಗಳಲ್ಲಿ ಔಷದಿ ಇಂಜೆಕ್ಷನ್ಸ್ ಸಿಕ್ಕದೆ ಡ್ರಗ್ಸ್ ಕಳ್ಳಸಂತೆಯಲ್ಲಿ ವ್ಯಾಪಾರವಾಗುತ್ತಿವೆ. ಒದಗಿದ ಔಷಧಿ ಇಂಜೆಕ್ಷನ್ ಎಲ್ಲಿ ಹೋಗುತ್ತವೆ, ಹೇಗೆ ಹೋಗುತ್ತವೆ, ರೋಗಿಗಳಿಗೆ ಏಕೆ ಸಿಕ್ಕುವುದಿಲ್ಲ ಎನ್ನುವುದನ್ನು ತನಿಖೆ ಮಾಡಬೇಕಾದುದು ಅಗತ್ಯ.

ಈಗ ಆಸ್ಪತ್ರೆಗಳಲ್ಲಿ ತೊಂದರೆ ಜಾಸ್ತಿಯಾಗಿದೆ. ನಾನು ಇಲ್ಲಿಗೆ ಬಂದ ಮೇಲೆ ನನ್ನ ಸ್ನೇಹಿತೆಯೊಬ್ಬರು ಅನಾರೋಗ್ಯದಿಂದ ವಾಣೀವಿಲಾಸ ಆಸ್ಪತ್ರೆಯಲ್ಲಿದ್ದವರನ್ನು ನೋಡಬೇಕಾಗಿ ಬಂತು. ನಾನು ಅಲ್ಲಿಗೆ ಹೋಗಿದ್ದೆ. ಆಗ ನನಗೆ ಅಲ್ಲಿಯ ಕಷ್ಟ ಪರಿಸ್ಥಿತಿಯು ಅರಿವಾಯಿತು. 4 ಜನ ಸೀರಿಯಸ್ ಆದ ಪೇಷಂಟ್ಸ್ ಇದ್ದರು. ಇಬ್ಬರು ನರ್ಸಗಳು ಒಬ್ಬ ಡಾಕ್ಟರು ಇದ್ದರು. ಆಗ್ಯೆ ಸುಮಾರು ರಾತ್ರಿ ಒಂಬತ್ತು ಗಂಟೆಯಾಗಿತ್ತು ಈ ಮೂರು ಜನ ಏನು ಮಾಡುವುದಕ್ಕಾಗುತ್ತದೆ? ಡಾಕ್ಟರರು ಕಣ್ಣು ಕಣ್ಣು ಬಿಡಭೇಕು ಅಷ್ಟೇ. ಏನಾದರು ಹೆಚ್ಚು ಕಡಿಮೆಯಾದರೆ ಅವರ ಗತಿಯೇನು! ನಮ್ಮಂಥವರೇ ಬಂದು ನಿಮ್ಮಲ್ಲಿ ಡಾಕ್ಟರರ ಮೇಲೆ ಕಂಪ್ಲೇಟ್ ಮಾಡುತ್ತೇವೆ. ಅಲ್ಲಿ ನಾವು ಕಣ್ಣಾರೆ ನೋಡಿದರೆ ಆ ಡಾಕ್ಟರರು ಪರಿಸ್ಥಿತಿ ಏನು ಎಂದು ಅನ್ನಿಸುತ್ತದೆ. ಈಗ ಆಸ್ಪತ್ರೆಗಳಲ್ಲಿ ನರ್ಸಸ್ ಅಭಾವ ಬಹಳವಾಗಿದೆ. ಅದರಲ್ಲಿಯೆ ವಾಣಿವಿಲಾಸ ಆಸ್ಪತ್ರೆಯಂಥ ಮಹಿಳೆಯರ ಆಸ್ಪತ್ರೆಯಲ್ಲಿ ಹೆಚ್ಚಾಗಿ ಡಾಕ್ಟರ್ ನರ್ಸಸ್ ಇರಬೇಕು. ನರ್ಸಸ್ ಟ್ರೇನಿಂಗ್ ಸೆಂಟರ್ ಈ ಊರಿನಲ್ಲಿ ಇದ್ದುದನ್ನು ಅಬಾಲಿಷ್ ಮಾಡಲು ಕಾರಣವೇನು? ಮೊದಲು ಇಂಥ ಟ್ರೇನಿಂಗ್ ಸೆಂಟರ್ ಪ್ರಾರಂಭಿಸುವುದೇ ಕಷ್ಟ. ಇರುವಂಥಾದ್ದನ್ನು ಅಬಾಲಿಷ್ ಮಾಡಿದ್ದು ಏಕೆ? ಇದರ ಪರಿಣಾಮವಾಗಿ ನರ್ಸಸ್ ಅಭಾವ ಜಾಸ್ತಿಯಾಗಿದೆ. ಚಾಮರಾಜ ಪೇಟೆಯಲ್ಲಿ ನರ್ಸಸ್‌ಗೆ ಅಂತಾ ಕೆಲವು ಮನೆಗಳನ್ನು ಕಟ್ಟಿಸಿದ್ದೀರಿ. ಅವುಗಳನ್ನು ಯಾವಾಗ ಕಟ್ಟಿದ್ದು? ಎಷ್ಟು ದಿನಗಳಿಂದ ಖಾಲಿಯಾಗಿದೆ! ಇದರಿಂದ ಎಷ್ಟು ನಷ್ಟವಾಯಿತು? ಅಲ್ಲಿರಲು ನರ್ಸಸ್ ಒಪ್ಪಿದ್ದಾರೆಯೆ? ಆ ಮನೆಗಳಿಗಾಗಿ ಆಗಿರುವ ಖರ್ಚು ಎಷ್ಟು? ಈ ವಿವರ ದಯವಿಟ್ಟು ತಿಳಿಸಬೇಕು. ಆಸ್ಪತ್ರೆಗಳಲ್ಲಿ ಡಾಕ್ಟರುಗಳ ನರ್ಸುಗಳ ಸೌಕರ್ಯ ಒದಗಿಸವಿದ್ದಲ್ಲಿ ಆಸ್ಪತ್ರೆಗಳ ಬಗ್ಗೆ ದೂರು ತುಂಬಾ ಜಾಸ್ತಿಯಾಗುತ್ತದೆ. ಇದರಿಂದ ಜನತೆಗೆ ತುಂಬಾ ಅನ್ಯಾಯ ಮಾಡಿದಂತಾಗುತ್ತದೆ.

ವಾಣಿವಿಲಾಸ ಆಸ್ಪತ್ರೆಯಲ್ಲಿ ಇನ್ನೊಂದು ವಿಚಿತ್ರ ಪದ್ಧತಿಯಿದೆ. ಅದನ್ನು ಹೇಳುವುದು ಮರೆತಿದ್ದೆ. ಅದು ಅಂದರೆ ಯೂನಿಟ್ ಸಿಸ್ಟಮ್ ಈ ಯೂನಿಟ್ ಸಿಸ್ಟಮ್ ಮಾಡಿ ಎಷ್ಟು ದಿನವಾಯಿತು? ಇದರಿಂದ ಯಾವ ಅನುಕೂಲವಿಲ್ಲ. ಒಂದು ಯೂನಿಟ್ಟಿಗೆ ಒಬ್ಬ ಪೇಶಂಟ್ ಸೇರಿಸಿದ ಮೇಲೆ ಅದೇ ಯೂನಿಟ್ಟಿನ ಡಾಕ್ಟರ್ ಒಂದು ನೋಡಬೇಕು. ಪ್ರಾಣ ಹೋಗುವ ಸಮಯ ಬಂದರೂ ಇನ್ನೊಬ್ಬ ಡಾಕ್ಟರ್ ಬಂದು ನೋಡುವುದಿಲ್ಲ.

[MR. SPEAKER in the Chair.]

A B C D ಅಂತಾ ಯೂನಿಟ್ಟುಗಳಿವೆ. ಇದನ್ನು ನೀವು ಮಾಡಿದ್ದೀರಾ? ಅಥವಾ ಸರಕಾರ ಮಾಡಿದೆಯೆ? ಅವರೇ ಮಾಡಿಕೊಂಡಿದ್ದಾರೆಯೆ? ಇದನ್ನು ಯಾರು ಮಾಡಿದರು ತಿಳಿಸಬೇಕು. ಇದರಿಂದ ರೋಗಿಗಳ ಕೊರೆಯಾಗುತ್ತಿದೆಯಲ್ಲ! ನಾವು ರೋಗಿಗಳನ್ನು ಆಸ್ಪತ್ರೆಗೆ ಯಾಕೆ ಸೇರಿಸಬೇಕು! ಹಿಂದಕ್ಕೆ ಈ ಸಿಸ್ಟಮ್ ಇರಲಿಲ್ಲ. ದಯವಿಟ್ಟು ಈ ಯೂನಿಟ್ ಸಿಸ್ಟಂನ್ನು ತೆಗೆದು ಹಾಕಬೇಕು. ಮಂತ್ರಿಗಳ ಮನೆಯವರು ಕೂಡ ಆಸ್ಪತ್ರೆಗೆ ಹೋಗಿದ್ದಾರೆ ಇದು ಅವರಿಗೆ ಗೊತ್ತಿದೆ. ಹಿಂದಕ್ಕೆ ಯಾವ ಕೆಸ್ ಆದರೂ RMO ಆಗಿದ್ದವರು ನೋಡವೇ ಬೇಕಾಗಿತ್ತು. ದಯಮಾಡಿ ಈ ಯೂನಿಟ್ ಸಿಸ್ಟಂನ್ನು ವಜಾಮಾಡಿ. ಇದಕ್ಕೆ ಸರಿಯಾದ ವಿವರ ಮಾನ್ಯಮಂತ್ರಿಗಳು ಉತ್ತರದಲ್ಲಿ ಕೊಡಬೇಕು.

ಈ ವರ್ಷ MD course ಇಲ್ಲಿ ತೆಗೆದಿರುವದಕ್ಕಾಗಿ ನಾನು ಅಭಿನಂದಿಸುತ್ತೇನೆ.

ಇತ್ತೀಚೆಗೆ ಲೇಡಿ ಡಾಕ್ಟರರ ಅವಶ್ಯಕತೆ ಹೆಚ್ಚಿದೆ. ಆದರೆ ಲೇಡಿ ಡಾಕ್ಟರವರ ಅಭಾವ ಬಹಳವಾಗಿದೆ. ಮೆಡಿಕಲ್ ಕಾಲೇಜಿನಲ್ಲಿ ಲೇಡಿ ಡಾಕ್ಟರರಿಗೆ ಹೆಚ್ಚು ಸೀಟು ಕೊಡಬೇಕು. ಲೇಡಿ ಡಾಕ್ಟರರ ಪ್ರವೇಶದ ಬಗ್ಗೆ ಆಗುವ ಅನ್ಯಾಯ ಪರಿಶೀಲಿಸಬೇಕು.

ಗ್ರಾಮಾಂತರ ಪ್ರದೇಶಗಳಲ್ಲಿ ಆಸ್ಪತ್ರೆ ಹೆಲ್ತ್ ಯುನಿಟ್ ಇವುಗಳ ಕಡೆ ಹೆಚ್ಚು ಗಮನ ಕೊಡಬೇಕಾದುದು ಅಗತ್ಯ. ಅವಶ್ಯಕವಾದ ಔಷಧಿ ಸಾಮಾಗ್ರಿಗಳನ್ನು ಒದಗಿಸಿ ಕೊಡಬೇಕು. ಮಲೆನಾಡು ಹಳ್ಳಿಗಳ ಪ್ರದೇಶ. ಕೇಳುವುದು ತುಂಬಾ ಇದೆ. ಹಳ್ಳಿಗಳ ಕಡೆ ಬಹಳ ಬೇಕಾಗಿವೆ. ಒಟ್ಟಿಗೆ ಕೇಳಿದರೆ ಎಲ್ಲಿ ಕೊಡುತ್ತೀರಿ ? ಆದ್ದರಿಂದ ಒಂದೊಂದಾಗಿ ಕೇಳಬೇಕಾಗಿದೆ. ಮಾನ್ಯ ಆರೋಗ್ಯ ಮಂತ್ರಿಗಳು ಸಹನೆಯಿಂದ ಕೂಡಿದ ಶಾಂತ ಮೂರ್ತಿಯವರಾಗಿದ್ದಾರೆ. ಮಲೆನಾಡಿನ ಕಡೆ ಹೆಚ್ಚು ಗಮನ ಕೊಟ್ಟು ನಮ್ಮ ಹಾರನಹಳ್ಳಿಗೆ ಒಂದು ಆಸ್ಪತ್ರೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ ಈ ಬೇಡಿಕೆಗೆ ನನ್ನ ಸಂಪೂರ್ಣ ಬೆಂಬಲ ಕೊಟ್ಟು ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸುತ್ತೇನೆ. ಇಷ್ಟು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

Mr. SPEAKER.—May I know how much time the Minister would require to reply ?

Sri K. NAGAPPA ALVA.—About one hour and fifteen minutes, Sir.

Mr. SPEAKER.—I suggest that the debate may go on till One o'clock today and the Hon'ble Minister will reply on Monday. Will it suit the Minister and the House ?

Sri K. NAGAPPA ALVA.—Yes, Sir.

Mr. SPEAKER.—Yes ; now the debate will continue.

ಶ್ರೀ ಆರ್. ಎನ್. ಲಕ್ಷ್ಮೀಪತಿ (ಗೌರಿಬಿದನೂರು).—ಮಾನ್ಯ ಸಭಾಪತಿಗಳೇ, ನಮ್ಮ ಜನತೆಗೆ ಬೇಕಾದುದು ಆರೋಗ್ಯ ಸಂಪತ್ತು. ಆರೋಗ್ಯದಂಥ ವಸ್ತು ಯಾವುದು ಇಲ್ಲ. ಆರೋಗ್ಯವಂತರಾಗುವುದಕ್ಕೆ ಪುಷ್ಟಿಕರವಾದ ಆಹಾರ ಬೇಕಾಗುತ್ತದೆ. ನಮ್ಮ ಬದುಕು ಸುಖವಾಗಿ ಸಂತೋಷವಾಗಿ ಆಗಬೇಕಾದರೆ ಆರೋಗ್ಯ ಭಾಗ್ಯ ಬೇಕು. ಈ ಸೌಲಭ್ಯ ನಮ್ಮ ದೇಶದಲ್ಲಿಲ್ಲ. ಹೊಟ್ಟೆಗೆ ಸರಿಯಾದ ಆಹಾರವಿಲ್ಲದೆ ಹೆಚ್ಚು ಶ್ರಮಪಟ್ಟು ದುಡಿಯುವದರಿಂದ ಅನೇಕರು ಕಾಹಿಲೆ ಬೀಳುತ್ತಾರೆ ಎನ್ನುವದನ್ನು ಆಸ್ಪತ್ರೆಗಳಲ್ಲಿ ನಾನು ನೋಡಿದ್ದೇನೆ. ಹಳ್ಳಿಗಳಲ್ಲಿ ಕಾಹಿಲೆ ಜಾಸ್ತಿಯಾಗುತ್ತಾ ಇದೆ. ಆಸ್ಪತ್ರೆಗಳಲ್ಲಿ ಸೌಲಭ್ಯ ಕಡಿಮೆ. ನಮ್ಮ ತಾಲ್ಲೂಕಿನಲ್ಲಿ ಹೆಸರಿಗೆ ನಾಲ್ಕೈದು ಆಸ್ಪತ್ರೆಗಳಿವೆ. ಆದರೆ ಅಲ್ಲಿ ಡಾಕ್ಟರರು ಇಲ್ಲ. ಒಂದು ಹಳ್ಳಿಯಿಂದ 8-10 ಮೈಲಿ ನಡೆದುಕೊಂಡು ಆಸ್ಪತ್ರೆಗೆ ಹೋಗಬೇಕಾಗುತ್ತದೆ. ಅಲ್ಲಿಗೆ ಹೋದರು ಸಹ ಸರಿಯಾದ ಔಷಧಿ ಇರುವದಿಲ್ಲ. ಆಸ್ಪತ್ರೆಯಿಂದ ಇಂಡೆಂಟ್ ಮಾಡಿದರು ಕಾಲಕ್ಕೆ ಸರಿಯಾಗಿ ಔಷಧಿ ಬರುವದಿಲ್ಲ. ಔಷಧಿ ಬರಲು ತಡವಾಗುತ್ತದೆ. ಆದುದರಿಂದ ಇಂಡೆಂಟ್ ಮಾಡಿ ತಕ್ಷಣ ಔಷಧಿಗಳನ್ನು ಕಳಿಹಿಸಿ ಕೊಡಬೇಕು. ಕಡಿಮೆ ಔಷಧಿ ಕಳಿಸುವುದರಿಂದ, ಸರಿಯಾದ ಚಿಕಿತ್ಸೆ ನಡೆಯುವುದಿಲ್ಲ ಇದನ್ನು ಸರಿಪಡಿಸಬೇಕು.

ಇನ್ನು ಹಳ್ಳಿಗಾಡಿನ ಪ್ರದೇಶದಲ್ಲಿ ಚಿಕಿತ್ಸೆ ನಡೆಸಲು ಒಂದು ತಾಲ್ಲೂಕಿನಲ್ಲಿ ಒಂದು ಸಣ್ಣ ಎಕ್ಸರೆ ಯಂತ್ರ ಇಡುವ ವ್ಯವಸ್ಥೆ ಮಾಡಬೇಕು. ಇದಲ್ಲದೆ ಮೈನರ್ ಆಪರೇಷನ್ನಿಗಾಗಿ 10-20 ಮೈಲಿ ದೂರ ಹೋಗಬೇಕಾಗುತ್ತದೆ. ಇಲ್ಲದೆ ಬೆಂಗಳೂರಿಗೆ ಬರಬೇಕಾಗುತ್ತದೆ. ಆದುದರಿಂದ ಈ ತೊಂದರೆ ತಪ್ಪಿಸಲು ಸಣ್ಣ ಸಣ್ಣ ಆಪರೇಷನ್ ಮಾಡಲು ಅದಕ್ಕೆ ಬೇಕಾಗುವ ಸಲಕರಣೆಗಳನ್ನು ಒದಗಿಸಿ ಅನುಕೂಲ ಮಾಡಿಕೊಡಬೇಕು. ಅನೇಕ ಕಡೆ ಆಪರೇಷನ್ ಮಾಡುವುದಕ್ಕೆ ಡಾಕ್ಟರರ ಅಭಾವವಿರುತ್ತದೆ. ಮೆಡಿಕಲ್ ಕಾಲೇಜಿನಿಂದ ಪಾಸಾದ ತಕ್ಷಣ ಎರಡು ವರ್ಷ ಟ್ರೈನಿಂಗ್ ಪಡೆದರೆ ರೋಗಿಗೆ ಸರಿಯಾಗಿ ಔಷಧಿ ಕೊಡುತ್ತಾರೆ. ಅನುಭವಸ್ಥ ಡಾಕ್ಟರರನ್ನು ನೇಮಕ ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯ. ಆಸ್ಪತ್ರೆಗಳನ್ನು ಪ್ರಾರಂಭಿಸುವುದಕ್ಕೆ ಅನೇಕರು ಡೊನೇಷನ್ಸ್ ಕೊಡುತ್ತಾರೆ. ಒಂದು ವಾರ್ಡ ಕಟ್ಟಿಸಲು ನಮ್ಮ ತಾಲ್ಲೂಕಿನವರೊಬ್ಬರು 5000 ರೂಪಾಯಿ ಡೋನೆಷನ್ ಕೊಟ್ಟಿದ್ದಾರೆ. ಆದರೆ ಸರಕಾರದವರು ಈ ಬಗ್ಗೆ ಮುತವರ್ಜಿ ವಹಿಸಿಲ್ಲ. ಅದಕ್ಕೆ ಏನೇನು ಬೇಕೋ ಅದನ್ನು ಕೊಟ್ಟು ವಾರ್ಡ ಕಟ್ಟಿಸಿ ಕೊಡಬೇಕು. ನಮ್ಮ ತಾಲ್ಲೂಕಿನವರೊಬ್ಬರು ಬೆಂಗಳೂರಿನಲ್ಲಿ ಆಸ್ಪತ್ರೆಗಾಗಿ 30 ಸಾವಿರ ರೂಪಾಯಿ ಕೊಟ್ಟಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಒಂದು ಕಣ್ಣಾಸ್ಪತ್ರೆ ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅದನ್ನು ಮಾನ್ಯ ಮಂತ್ರಿಗಳು ನೋಡಬೇಕು. ಈ ವಿಚಾರದಲ್ಲಿ ಅವರಿಗೆ ಒಂದು ಅರ್ಜಿ ಕೊಡಲು ಯೋಚಿಸುತ್ತೇವೆ, ಜಾಗ್ರತೆ ಆಸ್ಪತ್ರೆ ಪ್ರಾರಂಭ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಶ್ರೀ ಆರ್. ಎನ್. ಲಕ್ಷ್ಮೀಪತಿ)

ಸಾಮಾನ್ಯವಾಗಿ ಹಳ್ಳಿಗಳಿಗೆ ಆಸ್ಪತ್ರೆಯೆಂದರೆ ಪ್ರತಿಯೊಂದು ಹೋಬಳಿ ಹೆಡ್‌ಕ್ವಾರ್ಟರ್ಸಿನಲ್ಲಿ ಮಾಡಬೇಕೆಂಬ ಪ್ಲಾನ್ ಇಟ್ಟುಕೊಂಡಿದ್ದಾರೆ. ಹಳ್ಳಿಯಲ್ಲಿರುವ ರೋಗಿ ಗವರ್ನ್‌ಮೆಂಟ್ ಆಸ್ಪತ್ರೆಯ ಔಟ್-ಪೇಷಂಟ್ ಡಿಪಾರ್ಟ್‌ಮೆಂಟಿಗೆ ಹೋಗಬೇಕಾದರೆ ಈಗ ಎಂಟು ಹತ್ತು ಮೈಲ ನಡೆದು ಹೋಗುತ್ತಾನೆ. ರೋಗ ಬಂದಿರತಕ್ಕವನಿಗೆ ನಡೆಯುವುದಕ್ಕೆ ಶಕ್ತಿ ಇರುವುದಿಲ್ಲ. ಆದ್ದರಿಂದ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಂದು ಮೊಬೈಲ್ ವ್ಯಾನ್ ಇಡಬೇಕು. ಪ್ರತಿಯೊಂದು ಊರಿಗೆ ಅಥವ ಒಂದೆರಡು ಊರು ಸೇರಿಸಿ, ಒಂದು, ಒಂದುವರೆ ಮೈಲಿಗಳಿಗೆ ಒಂದು ನಿರ್ದಿಷ್ಟವಾದ ಸ್ಥಳ ಏರ್ಪಡಿಸಿ, ಅಲ್ಲಿಗೆ ರೋಗಿಗಳು ಬರುವಂತೆ ಮಾಡಿ, ಡಾಕ್ಟರ್ ಹೋಗಲು ಸಾಧ್ಯವಿಲ್ಲದಂಥ ಮನೆಯಲ್ಲಿರುವ ರೋಗಿಗಳನ್ನು ಡಾಕ್ಟರಿರುವಕಡೆಗೆ ವ್ಯಾನಿನಲ್ಲಿ ಕರೆದುಕೊಂಡು ಹೋಗಿ, ಅವರಿಗೆ ವೈದ್ಯಕೀಯ ಚಿಕಿತ್ಸೆ ಸಿಗುವ ಹಾಗೆ ಮಾಡಿ ಕೊಡಬೇಕು.

11-30 A.M.

ಈಗ ಡಾಕ್ಟರುಗಳಿಗೆ ಹೆಚ್ಚಿನ ಸಂಬಳ ಕೊಡದೆ ಇರುವುದರಿಂದ ಆಸ್ಪತ್ರೆಗೆ ಬರುವ ರೋಗಿಗಳಿಗೆ ಸರಿಯಾದ ಚಿಕಿತ್ಸೆ ದೊರೆಯುವುದಿಲ್ಲ. ತಮಗೆ ದುಡ್ಡು ಎಲ್ಲಿಂದ ಬರುತ್ತದೆಯೋ ಆಕಡೆ ಜಾಸ್ತಿ ಗಮನ ಕೊಡುತ್ತಾರೆ. ಅಂದರೆ private practiceಗೆ ಹೆಚ್ಚು ಮುತುವರ್ಜಿ ವಹಿಸುತ್ತಾರೆ. ತಮಗೆ ಅನುಕೂಲವಾಗುವ ದೃಷ್ಟಿಯಿಂದ ರೋಗಿಗಳನ್ನು ನೋಡಿಕೊಳ್ಳುತ್ತಾರೆ. ಈ ಮನೋಭಾವವನ್ನು ಡಾಕ್ಟರುಗಳಲ್ಲಿ ತಪ್ಪಿಸಬೇಕು. ಮಾನವ ಜನ್ಮ ಎತ್ತಿರುವುದು ಮನುಷ್ಯನ ಸೇವೆಗೆ, ಈ ಒಂದು ಸೇವೆ ಮಾಡುವ ಅವಕಾಶ ಹೆಚ್ಚಾಗಿ ಇರುವುದು ಡಾಕ್ಟರುಗಳಿಗೆ. ಇಂಥ ಒಂದು ಉತ್ಕೃಷ್ಟವಾದ ಸೇವೆ ಮಾಡುವ ಅವಕಾಶ ಇನ್ನಾವವೃತ್ತಿಗೂ ಸಿಗುವುದಿಲ್ಲ ಎಂದು ಅವರು ತಿಳಿದುಕೊಳ್ಳಬೇಕು. ಪ್ರತಿಯೊಂದು ರೋಗಗ್ರಸ್ತ ಜೀವಿಗೂ ಚಿಕಿತ್ಸೆ ಮಾಡಿ ಆರೋಗ್ಯವನ್ನು ಗುಣಪಡಿಸುವ ಒಂದು ವೈದ್ಯಕೀಯ ಶಕ್ತಿಯನ್ನು ಡಾಕ್ಟರುಗಳಿಗೆ ದೇವರು ಕೊಟ್ಟಿದ್ದಾನೆ. ಮಾನವ ಸೇವೆ ಮಾಡುವುದಕ್ಕೆ ಇರುವ ಈ ಉತ್ಕೃಷ್ಟ ಸದವಕಾಶವನ್ನು ಪ್ರತಿಯೊಬ್ಬ ಡಾಕ್ಟರೂ ಉಪಯೋಗಿಸಿಕೊಂಡು ತನ್ನ ಆತ್ಮ ಕಲ್ಯಾಣಕ್ಕೆ ಪ್ರಯತ್ನ ಮಾಡಬೇಕು. ಡಾಕ್ಟರುಗಳಿಗಾದರೂ ಪ್ರತಿಯೊಬ್ಬ ರೋಗಿಗು ಜಾಸ್ತಿಗಮನ ಕೊಡುವುದು ಕಷ್ಟ! ರೋಗಿಗಳು ಅಷ್ಟು ದೊಡ್ಡ ಪ್ರಮಾಣದಲ್ಲಿ ಬರುತ್ತಾರೆ, ಆಸ್ಪತ್ರೆಗಳಿಗೆ. ವಿಕ್ಟೋರಿಯ ಮತ್ತು ಬೌರಿಂಗ್ ಆಸ್ಪತ್ರೆಗಳಲ್ಲಿ ರೋಗಿಗಳ ದೊಡ್ಡ ಕ್ಯೂ ಇರುತ್ತದೆ. ಐನೂರು ಆರುನೂರು ಜನ ಇರುತ್ತಾರೆ. ಒಬ್ಬೊಬ್ಬ ಪೇಷಂಟಿಗೆ ಒಂದು ನಿಮಿಷದಂತೆ ಲೆಕ್ಕಾ ಹಾಕಿದರೆ, ದಿನವೆಲ್ಲಾ ನೋಡಿದರೂ ಡಾಕ್ಟರುಗಳು ಅವರನ್ನು ನೋಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ದೊಡ್ಡ ದೊಡ್ಡ ಆಸ್ಪತ್ರೆಗಳನ್ನು ಜಾಸ್ತಿ ಮಾಡಬೇಕು. ಪ್ರತಿಯೊಂದು ತಾಲ್ಲೂಕಿನಲ್ಲಿಯೂ minor operation ಗೆ ಮತ್ತು X-ray ಗೆ ಏರ್ಪಾಡು ಮಾಡಿ, ಮೊಬೈಲ್ ವ್ಯಾನ್ ಕೊಟ್ಟ ಪಕ್ಷದಲ್ಲಿ ಹೆಚ್ಚಿನ ಜನಗಳಿಗೆ ಅನುಕೂಲವಾಗುತ್ತದೆ! ನೇರವಾಗಿ ತಮ್ಮ ಮನೆ ಹತ್ತಿರದಲ್ಲಿಯೇ ವೈದ್ಯಕೀಯ ಸೌಲಭ್ಯ ಸಿಗುತ್ತದೆ.

ಸ್ವಲ್ಪ ದಿವಸಗಳ ಹಿಂದೆ Medical ಮತ್ತು Health Department ಗಳು merge ಆಗುತ್ತವೆ ಎಂದು ಪೇಪರಿನಲ್ಲಿ ಓದಿದ್ದೆ. Health Department ನಲ್ಲಿ ಇರುವವರಿಗೆ ನಿರುತ್ಸಾಹ ಇದೆ ; ಅವರು ಆ ಇಲಾಖೆಯಲ್ಲಿರುವವರಿಗೆ ಜನ ಸಂಪರ್ಕವಿಲ್ಲದೆ ವ್ಯಾಕ್ಸಿನ್ ಇನ್‌ಸ್ಟಿಟ್ಯೂಟ್ ಮುಂತಾದ ಕಡೆ ಕೆಲಸ ಮಾಡಬೇಕಾಗುತ್ತದೆ; ಅಲ್ಲಿ ಆಸ್ಪತ್ರೆ ಸಂಪರ್ಕವಿಲ್ಲವಲ್ಲಾ ಎಂದು ಆ ಇಲಾಖೆಗೆ ಬರುವುದಕ್ಕೆ ಹಿಂದೇಟು ಹಾಕುತ್ತಾರೆ. ಅಲ್ಲಿಯೇ ಇದ್ದರೆ ವೈದ್ಯಕೀಯ ಜ್ಞಾನವನ್ನು ಮರೆಯುವ ಸಂಭವವೂ ಇದೆಯೆಂದು ಹೇಳುತ್ತಾರೆ. ಆಸ್ಪತ್ರೆ ಸಿಗುವುದು Health Department ಗೆ ಬರುವುದಿಲ್ಲ. ಆದ್ದರಿಂದ Health ಮತ್ತು Medical Department ಗಳನ್ನು merge ಮಾಡಿ, ಡಾಕ್ಟರುಗಳನ್ನು ಬಂದು ಮೂರು ವರ್ಷ ಆಸ್ಪತ್ರೆಯಲ್ಲಿದ್ದರೆ, ಇನ್ನು ಮೂರು ವರ್ಷ ವ್ಯಾಕ್ಸಿನ್ ಇನ್‌ಸ್ಟಿಟ್ಯೂಟಿಗೆ ಹಾಕಿ. ಇದಕ್ಕೆ ಅವರೂ ಸಂತೋಷದಿಂದ ಒಪ್ಪಿಕೊಳ್ಳುತ್ತಾರೆ. ಬರೀ ಹೆಲ್ತ್ ಇಲಾಖೆಯಲ್ಲಿಟ್ಟರೆ ಮೆಡಿಕಲ್ ಗಂಧವೇ ಹೋಗುವ ಸಂಭವವಿದೆಯೆಂದು ಹೇಳುತ್ತಾರೆ. ಆದ್ದರಿಂದ ಈ ಎರಡು ಇಲಾಖೆಗಳನ್ನೂ ಆದಷ್ಟು ಜಾಗ್ರತೆ ಒಂದು ಮಾಡಬೇಕು.

ಈ Condensed M.B.B.S. Courseಗೆ ಹಿಂದಿನ ಸಾರಿ 40-50 ಜನ ಡಾಕ್ಟರುಗಳು ದುಡ್ಡು ಕೊಟ್ಟಿದ್ದಾರೆ. ಅದಕ್ಕೆ ಕಳುಹಿಸುವುದನ್ನು ನಿಲ್ಲಿಸಿಬಿಟ್ಟಿದ್ದಾರೆ. ದಯವಿಟ್ಟು Condensed Course ಗೆ ಸಾಧ್ಯವಾದಷ್ಟು ಜನವನ್ನು ಕಳುಹಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

†ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಮಾನ್ಯ ಸಭಾಪತಿಗಳೇ, ಆಗಲೆ ಹಿಂದೆ ಮಾತನಾಡಿದ ನನ್ನ ಸ್ನೇಹಿತರಾದ ಶ್ರೀಮಾರ್ಕ ಗೌಡರು ಮತ್ತು ಇತರರು ವೈದ್ಯಕೀಯ ಮತ್ತು ಜನಾರೋಗ್ಯ ಇಲಾಖೆಗಳ ವಿಷಯದಲ್ಲಿ ರಚನಾತ್ಮಕವಾದ ಮತ್ತು ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಶ್ರೀಮತಿ ರತ್ನಮ್ಮ ಮಾಧವರಾವ್‌ರವರು ಮಾತನಾಡುತ್ತಾ ವೈದ್ಯಕೀಯ ಮತ್ತು ಜನಾರೋಗ್ಯ ಇಲಾಖೆಯು ಅಧಿಕಾರಿಗಳಲ್ಲಿ ಅಷ್ಟೊಂದು ಸಮರಸ್ಯವಿಲ್ಲ, ಪೈಪೋಟಿ ಮತ್ತು ಒಂದು ವಿದವಾದಂಥ ಈರ್ಷೆ ಸ್ವಭಾವವಿದೆ, ಇದು ಇರಬಾರದು ಎಂದು ಹೇಳಿ, ಒಂದು ಸಲಹೆ ಕೊಟ್ಟರು. ಅನೇಕ ಕಡೆ ಈ ಎರಡು ಇಲಾಖೆಗಳು ಪ್ರತ್ಯೇಕವಾಗಿ ಕೆಲಸ ಮಾಡಬೇಕಾಗಿದೆ. ಈ ಎರಡು ಇಲಾಖೆಗಳನ್ನೂ ಒಂದುಗೂಡಿಸಿ ಸರಿಮಾಡತಕ್ಕಂಥ ವಿಚಾರದಲ್ಲಿ ವಿಮರ್ಶೆ ನಡೆದು, ಭೋರ್ ಕಮಿಟಿಯವರು ಮತ್ತು ಇತರ ತಜ್ಞರೂ ಕೂಡ ಈ ಎರಡು ಇಲಾಖೆಗಳನ್ನೂ ಕೂಡ ಒಂದು ಮಾಡತಕ್ಕಂಥದ್ದು ಸರಿ, ಈ Curative ಮತ್ತು Preventive medicine ಗಳನ್ನು ಪ್ರತ್ಯೇಕವಾಗಿ ಇಡದೆ, ಎರಡನ್ನೂ integrate ಮಾಡತಕ್ಕಂಥಾದ್ದು ನ್ಯಾಯವಾದುದು, ಅಲ್ಲದೇನೆ There is considerable developing of functions and duplication of staff ಈ ಎರಡು ಡಿಪಾರ್ಟ್‌ಮೆಂಟಿನಲ್ಲಿಯೂ ಇದೆ, ಇದನ್ನು ಕಡಿಮೆ ಮಾಡಬೇಕೆಂದು ಹೇಳಿದ್ದಾರೆ.

Mr. SPEAKER.—It is before or after the emergency ?

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಮುಂಚೆ ಇದು ಪ್ರತ್ಯೇಕವಾಗಿ ಇರುವುದರಿಂದ ಎರಡರಲ್ಲಿಯೂ ಕೂಡ ಕೆಲಸಕಾರ್ಯಗಳು overlap ಆಗುತ್ತಿವೆ, ಹೆಚ್ಚಿನ ವೆಚ್ಚವಾಗುತ್ತಿದೆ, ಮಿತವ್ಯಯ ದೃಷ್ಟಿಯಿಂದ ಎರಡು ಇಲಾಖೆಗಳನ್ನು ಒಂದುಗೂಡಿಸತಕ್ಕಂಥದ್ದು ನ್ಯಾಯವಾದುದು ಅಂತ ಹೇಳಿ ಭೋರ್ ಕಮಿಟಿಯವರು ಅಭಿಪ್ರಾಯ ಪಟ್ಟಿದ್ದಾರೆ. ಈಗ ನನಗೆ ತಿಳಿದದ್ದರಲ್ಲಿ ನಮ್ಮ ಸರ್ಕಾರದವರು ಈ ಎರಡು ಇಲಾಖೆಗಳನ್ನೂ ಕೂಡ ಒಂದುಗೂಡಿಸಬೇಕು ಎಂಬತಕ್ಕಂಥಾದ್ದನ್ನು ನಾನು ಪತ್ರಿಕೆಗಳಲ್ಲಿ ಓದಿದ್ದೇನೆ. ಈ ಪ್ರಶ್ನೆ ಬಹಳ ದಿವಸಗಳಿಂದ ಇದ್ದರೂ ಕೂಡ ಇದನ್ನು ಜಾರಿಗೆ ಕೊಡುವುದರಲ್ಲಿ ಬಹಳ ವಿಳಂಬವಾಗಿದೆ. ಈ ಎರಡು ಇಲಾಖೆಗಳನ್ನು ಒಂದುಗೂಡಿಸಿ, ಜಿಲ್ಲಾ ಮಟ್ಟದಲ್ಲಿಯೂ ಮತ್ತು ಸಂಸ್ಥಾನದ ಮಟ್ಟದಲ್ಲೂ ಕೂಡ, ಒಂದೇ ಅಧಿಕಾರಿ ಕೆಳಗೆ ವೈದ್ಯಕೀಯ ಮತ್ತು ಜನಾರೋಗ್ಯದ ಕೆಲಸಕಾರ್ಯಗಳು ನಡೆಯತಕ್ಕಂಥಾದ್ದು ಅತ್ಯಗತ್ಯ. ಏನ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆಯೋ ಅದನ್ನು ಕಾಲ ವಿಳಂಬ ಮಾಡದೇನೇ ಬೇಗ ಜಾರಿಗೆ ಕೊಡತಕ್ಕಂಥಾದ್ದು ಅತ್ಯವಶ್ಯಕವಾಗಿದೆ.

ಈ ಇಲಾಖೆಗಳ ವಿಚಾರದಲ್ಲಿ ಮಾತನಾಡಬೇಕಾದ ಇನ್ನೊಂದು ಪ್ರಾಮುಖ್ಯವಾದ ವಿಷಯ ಅಂದರೆ, ಡಾಕ್ಟರುಗಳ ಅಭಾವ. ನಮ್ಮ ಸಂಸ್ಥಾನದಲ್ಲಿ ಅನೇಕ ಆಸ್ಪತ್ರೆಗಳಿವೆ ಆದಾಗ್ಯೂ ಆಸ್ಪತ್ರೆಗಳ ಅವಶ್ಯಕತೆ ಇನ್ನೂ ಬಹಳವಿದೆ. ಅದರಲ್ಲಿಯೂ ಗ್ರಾಮಾಂತರ ಪ್ರದೇಶಗಳಲ್ಲಿ ತತ್ರಾಪಿ ಮಲೆನಾಡು ಪ್ರದೇಶಗಳಲ್ಲಿ ಆಸ್ಪತ್ರೆಗಳ ಅವಶ್ಯಕತೆ ಬಹಳವಿದೆ. ಆಧರೆ ಈಗ ಇರತಕ್ಕಂಥ ಅನೇಕ ಆಸ್ಪತ್ರೆಗಳಲ್ಲಿ ಡಾಕ್ಟರುಗಳೇ ಇಲ್ಲ. ನಾನು ಹಿಂದೆ ಇದೇ ಸಭೆಯಲ್ಲಿ ಕೇಳಿದ ಪ್ರಶ್ನೆಗೆ ಸುಮಾರು 300 ಡಾಕ್ಟರುಗಳು ಹೆಚ್ಚಾಗಿ ಇರಬೇಕಾಗಿದ್ದು, ಸಾಲದಾಗಿದೆ ಎಂದು ಹೇಳಿದರೂ ಅನೇಕ ಆಸ್ಪತ್ರೆಗಳಿಗೆ ಡಾಕ್ಟರುಗಳಿಲ್ಲ. ಅದರಲ್ಲಿಯೂ ಲೇಡಿ ಡಾಕ್ಟರುಗಳ ಅಭಾವವನ್ನೋ ಹೇಳುವುದಕ್ಕೆ ತೀರದು. ಆಸ್ಪತ್ರೆಗಳು ಹೀಗಾಗಿ ವರ್ಷಾನುಗಟ್ಟಲೆ, ಅನೇಕ ಆಸ್ಪತ್ರೆಗಳಲ್ಲಿ ಎರಡು ಮೂರು ವರ್ಷವಾದರೂ ಡಾಕ್ಟರುಗಳಿಲ್ಲ. ಆದ್ದರಿಂದ ಆಸ್ಪತ್ರೆಗಳಿದ್ದರೂ ಕೂಡ ಅವುಗಳ ಪ್ರಯೋಜನ ಜನಗಳಿಗೆ ದೊರೆಯುತ್ತಾ ಇಲ್ಲ. ಯಾವ ತಾಲ್ಲೂಕಿಗೇ ಹೋಗಿ, ವೇಕೆನ್ಸಿ ಹಾಗೇ ಖಾಲಿಯಿರುತ್ತದೆ, ತುಂಬಿಯೇ ಇರುವುದಿಲ್ಲ. ಈ ರೀತಿ ಯಾವ ಇಲಾಖೆಯಲ್ಲಿಯೂ ಇಲ್ಲ. ಆರೋಗ್ಯ ಮತ್ತು ಜನಾರೋಗ್ಯ ಇಲಾಖೆಗಳಲ್ಲಿ ಮಾತ್ರ ಇದೊಂದು ವೈಶಿಷ್ಟ್ಯವಾಗಿದೆಯೆಂದು ನನಗನಿಸುತ್ತದೆ. ಡಾಕ್ಟರುಗಳು ಪ್ರತಿ ವರ್ಷವೂ ಕೂಡ ಹೊಸದಾಗಿ ಬರುತ್ತಿದ್ದಾರೆ, ವಿದ್ಯಾಥಿಗಳು ಪಾಸ್ ಮಾಡುತ್ತಾ ಇದ್ದಾರೆ. ನೂರಕ್ಕಿಂತಲೂ ಹೆಚ್ಚಿಗೆ ವಿದ್ಯಾರ್ಥಿಗಳು ಪ್ರತಿ ವರ್ಷವೂ ಪಾಸ್ ಮಾಡಿಕೊಂಡು ಡಾಕ್ಟರುಗಳಾಗುತ್ತಿದ್ದಾರೆ. ಹಾಗಿದ್ದರೂ ಕೂಡ ಇರತಕ್ಕಂಥ ಆಸ್ಪತ್ರೆಗಳಿಗೆ ಡಾಕ್ಟರುಗಳು ಹೋಗದೆ ಇರುವುದಕ್ಕೆ ಏನು ಕಾರಣ ಎಂಬುದನ್ನು ಇಲಾಖೆಯವರು ಆಲೋಚನೆ ಮಾಡಿ, ಈ ನ್ಯೂನತೆಯನ್ನು ಬಗೆಹರಿಸುವುದಕ್ಕೆ ಇಲ್ಲಿಯವರೆಗೂ ಜಯಶೀಲರಾಗದಿರುವುದು ಬಹಳ ವಿಷಾದ. ದೂರು ಬಹಳ ವರ್ಷಗಳಿಂದಲೂ ಕೂಡ ಇದ್ದೇ ಇವೆ ; ಇದನ್ನು ಬಗೆಹರಿಸುವುದಕ್ಕೆ ನಮ್ಮ ಸರ್ಕಾರದವರಿಂದ ಸಾಧ್ಯವಾಗಿಲ್ಲ.

ಇದಕ್ಕೆ ಕಾರಣ ನನಗೆ ಅನಿಸುತ್ತದೆ ಮೊದಲನೆಯದಾಗಿ ನೆರೆ ಪ್ರಾಂತ್ಯಗಳಿಗಿಂತಲೂ ನಮ್ಮ ಪ್ರಾಂತ್ಯದಲ್ಲಿ ಡಾಕ್ಟರುಗಳಿಗೆ ಕೊಡುತ್ತಾ ಇರತಕ್ಕ ಸಂಬಳ ಕಡಿಮೆ ಎಂಬ ಒಂದು ದೂರು ಒಂದು ಕಾರಣವಾಗಿರಬೇಕು ಎಂದು. ಎರಡನೆಯದಾಗಿ ಅವರು ನೌಕರಿಗೆ ಸೇರಿಕೊಳ್ಳುವುದಕ್ಕೆ-ಡಾಕ್ಟರ್

(ಶ್ರೀ ಜಿ. ಎ. ತಿಮ್ಮಪ್ಪಗೌಡ)

ಕೆಲಸ ಮಾಡುವುದಕ್ಕೆ ಸಾಕಾದಷ್ಟು ಆಕರ್ಷಣೆ ಇಲ್ಲ. ಪಾಸ್ ಮಾಡಿದ ಮೇಲೆ ಕೆಲವರನ್ನು ಲೋಕಲ್ ಕ್ಯಾಂಡಿಡೇಟ್ಸ್ ಅಂತ ತೆಗೆದುಕೊಳ್ಳುತ್ತಾ ಇದ್ದೀರಿ. ನಾನು ಕೇಳಿದ್ದೇನೆ, ಮಾನ್ಯ ಮಂತ್ರಿಗಳ ಗಮನಕ್ಕೂ ಕೂಡ ತಂದಿದ್ದೇನೆ. ಡಾಕ್ಟರುಗಳ ಅಭಾವ ಇಷ್ಟೊಂದು ಇರುವಾಗ ಲೋಕಲ್ ಕ್ಯಾಂಡಿಡೇಟ್ಸ್ ಅಂತ ತೆಗೆದುಕೊಂಡ ಮೇಲೆ ಮೂರು ನಾಲ್ಕು ವರ್ಷ ಆದರೂ ಕೂಡ ಅವರನ್ನು ಕನ್‌ಫರ್ಮ್ ಮಾಡಿಲ್ಲ. ಅವರ ಸರ್ವಿಸ್ ಏನು, ಅವರ ಪ್ರಮೋಷನ್ ಏನು, ಅವರ ಗ್ರೇಡ್ ಏನು ವಗೈರೆ ವಿಚಾರಗಳನ್ನು ನಮ್ಮ ಸಂಸ್ಥಾನದಲ್ಲಿ ತೀರ್ಮಾನವಾಗಿಲ್ಲ ಎಂದು ಕೇಳಿದ್ದೇನೆ. ಇಂಥಾ ಸನ್ನಿವೇಶ ನೆರೆ ಪ್ರಾಂತ್ಯದಲ್ಲಿ ಎಲ್ಲಿಯೂ ಇಲ್ಲ. ಇದರಿಂದ ಏನಾಗುತ್ತದೆ ಡಾಕ್ಟರುಗಳಿಗೆ ತಮ್ಮ ಸರ್ವಿಸ್ ಗ್ರೇಡು ಸಂಬಳ ಸಾರಿಗೆ ಇವು ಯಾವುದು ಸ್ಪಷ್ಟವಾಗಿ ಗೊತ್ತಾಗದೇ ಇರುವಾಗ, ಖಚಿತವಾದ ನೌಕರಿ ನಂಬಿಕೆ ಅವರಿಗೆ ಹುಟ್ಟದೇ ಇರುವಾಗ 3 4 ವರ್ಷವಾದರೂ ಇಂಥಾ ಅನಿಶ್ಚಿತ ಸ್ಥಿತಿಯಲ್ಲಿ ಅನುಕೂಲವಾಗಿರತಕ್ಕ ಯಾವ ಡಾಕ್ಟರು ತಾನೇ ನಮ್ಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯ ಎಂಬುದನ್ನು ತಾವು ಇಲ್ಲಿಯವರೆಗೂ ತಿಳಿದುಕೊಂಡು ಅದಕ್ಕೆ ಸರಿಯಾದಂಥ ವ್ಯವಸ್ಥೆ ಮಾಡದೇ ಇರುವುದು ಈ ಒಂದು ನ್ಯೂನತೆಗೆ ಮೂಲ ಕಾರಣವಾಗಿದೆ. ಈಗ ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಕೆಲಸ ಮಾಡುತ್ತಾ ಇದ್ದವರು ಅನೇಕರು ನಮ್ಮ ಆಸ್ಪತ್ರೆಗಳನ್ನು ಬಿಟ್ಟು ಬೇರೆ ಕಡೆ ಸೇರಿದ್ದಾರೆ, ಮತ್ತು ಹೆಚ್ಚಿನ ವ್ಯಾಸಂಗಕ್ಕೆ ಬೇರೆ ಕಡೆಗೆ ಹೋಗಿದ್ದಾರೆ ಎಂದು ಕೇಳಿದ್ದೇನೆ. ಇಲ್ಲಿ ಕನ್‌ಫರ್ಮ್ ಮಾಡುತ್ತಿಲ್ಲ. ಆ ಕಡೆ ಪಿ. ಎಸ್. ಸಿ. ಅವರು ರೆಕ್ರೂಟ್ ಮಾಡಿಕೊಂಡಿಲ್ಲ. ಡಾಕ್ಟರುಗಳ ಅವಶ್ಯಕತೆ ಎಲ್ಲಾ ಕಡೆ ಇರುವಾಗ, ಅವರಿಗೆ ಪ್ರೈವೇಟ್ ಪ್ರಾಕ್ಟೀಸ್ ಮಾಡುವುದಕ್ಕೆ ಅನುಕೂಲವಿರುವಾಗ, ಬೇರೆ ಪ್ರಾಂತ್ಯಗಳಲ್ಲಿ ಅವರಿಗೆ ಡಿಮ್ಯಾಂಡ್ ಇರುವಾಗ ನಮ್ಮ ಸಂಸ್ಥಾನದಲ್ಲೇ ಅವರು ಕೆಲಸ ಮಾಡಿಕೊಂಡಿರಬೇಕೆಂದರೆ ಯಾವ ರೀತಿ ನಿರೀಕ್ಷೆ ಮಾಡಬಹುದೆಂಬ ವಿಷಯವನ್ನು ಕೂಡ ತಾವು ಕೂಲಂಕಷವಾಗಿ ಪರಿಶೀಲನೆ ಮಾಡಬೇಕು. ಅವರ ಸರ್ವೀಸ್‌ನ್ನು ಗಣನೆಗೆ ತೆಗೆದುಕೊಡು ಅವರಿಗೆ ತಕ್ಕ ಗ್ರೇಡು ವಗೈರೆ ಕೊಡುವುದು ಉತ್ತಮ ಎಂದು ಹೇಳುತ್ತೇನೆ.

ಇದರ ಜೊತೆಗೆ ಡಾಕ್ಟರುಗಳು ಹಳ್ಳಿಗಾಡುಗಳಿಗೆ ಹೋಗುವುದಿಲ್ಲ. ಯಾರನ್ನು ಕೇಳಿದರೂ ಮೈಸೂರು, ಬೆಂಗಳೂರಿನಂತಹ ದೊಡ್ಡ ದೊಡ್ಡ ಪಟ್ಟಣಗಳಲ್ಲಿರತಕ್ಕ ಆಸ್ಪತ್ರೆಗಳನ್ನೇ ಕೇಳುತ್ತಾರೆ. ಹಳ್ಳಿಗಳಲ್ಲಿ 3-4 ವರ್ಷಗಳಿಂದಲೂ ಡಾಕ್ಟರುಗಳಿಲ್ಲ ಡಾಕ್ಟರನ್ನು ಕಳುಹಿಸಿ ಎಂದರೆ ಯಾರು ಬರುವುದಿಲ್ಲ. ಈಗ ಸ್ವಲ್ಪ ಆಲೋಯನ್ಸ್ ಹೆಚ್ಚಿಸಿದ್ದಾರೆ. ಗ್ರ್ಯಾಜುಯೆಟುಗಳಿಗೆ 50 ರೂಪಾಯಿ, ಎಲ್. ಎಂ. ಪಿ. ಗಳಿಗೆ 25 ರೂಪಾಯಿ ಅಲೋಯೆನ್ಸ್ ಕೊಡುತ್ತಾರೆ ಎಂದು ಕೇಳಿದ್ದೇನೆ. ಯಾವ ತಾರತಮ್ಯವೂ ಇಲ್ಲದೇ ಎಲ್ಲರಿಗೂ 50 ರೂಪಾಯಿ ಅಲೋಯನ್ಸು ಸಾಧ್ಯವಾದರೆ ಮನೆ ಸೌಕರ್ಯ ಕೂಡ ಮಾಡಿಕೊಟ್ಟರೆ ಹೆಚ್ಚಿನ ಆಕರ್ಷಣೆ ಉಂಟಾಗಿ ಹಳ್ಳಿಗಾಡಿನ ಕಡೆ ಡಾಕ್ಟರುಗಳು ಹೋಗುವುದಕ್ಕೆ ಸಾಧ್ಯವಾಗುತ್ತದೆ. ಈ ರೀತಿ ಮಾಡುವುದು ಬಹಳ ಅವಶ್ಯಕವಾಗಿದೆ.

ಇನ್ನೊಂದು ಅನಿಸುತ್ತದೆ. ನಾನು ಕೂಡ ಮೆಡಿಕಲ್ ಸ್ಕೂಲು ಸೆಲೆಕ್ಷನ್ ಕಮಿಟಿಯಲ್ಲಿ ಸದಸ್ಯನಾಗಿದ್ದೆ. ವಿದ್ಯಾರ್ಥಿಗಳನ್ನು ಎಲ್. ಎಂ. ಪಿ.ಗೆ ಸೆಲೆಕ್ಟ್ ಮಾಡುವಾಗ ನನ್ನ ಮಿತ್ರರಾದ ಶ್ರೀಮಾನ್ ಪುಟ್ಟಸ್ವಾಮಿಯವರು ಹೇಳುತ್ತಾ ಇದ್ದರು ಗ್ರಾಮಾಂತರಗಳಿಂದ ಬರತಕ್ಕ ವಿದ್ಯಾರ್ಥಿಗಳಿಗೆ ಅದರಲ್ಲೂ ಮಲೆನಾಡಿನಿಂದ ಬರತಕ್ಕ ವಿದ್ಯಾರ್ಥಿಗಳಿಗೆ ಸ್ವಲ್ಪ ಹೆಚ್ಚಿನ ರಿಯಾಯಿತಿಯನ್ನು ಕೊಟ್ಟು ಹೆಚ್ಚಿನ ಸಂಖ್ಯೆಯಲ್ಲಿ ಸೇರಿಸಿಕೊಳ್ಳಬೇಕು, ಹೆಣ್ಣು ಮಕ್ಕಳನ್ನು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಸೇರಿಸಿಕೊಳ್ಳಬೇಕು ಎಂದು. ಇದಕ್ಕೆ ಕಾರಣವೇನೆಂದರೆ ಯಾರಾದರೂ 4-5 ವರ್ಷಗಳ ಹಿಂದಿನ ಲಿಸ್ಟನ್ನು ತಗೆದುಕೊಂಡು ನೋಡಬಹುದು. ಸೀಟು ದೊರಕಿರುವುದೆಲ್ಲಾ ಪಟ್ಟಣಗಳಲ್ಲಿರತಕ್ಕವರು, ಶ್ರೀಮಂತರ ಮಕ್ಕಳು, ದೊಡ್ಡ ದೊಡ್ಡ ಅಧಿಕಾರಿಗಳ ಮಕ್ಕಳಿಗೇ ಈ ಸೌಲಭ್ಯ ದೊರಕಿದೆ. ಇದು ಹೊಟ್ಟೇಕಿಚ್ಚು ಪಡುವ ವಿಚಾರವಲ್ಲ. ವಾಸ್ತವವಾಗಿ ಏನಾಗಿದೆ ಎಂದರೆ ಶ್ರೀಮಂತರ ಮಕ್ಕಳು, ದೊಡ್ಡ ದೊಡ್ಡ ಅಧಿಕಾರಿಗಳ ಮಕ್ಕಳು ಸೀಟು ಹೊಂದಿದವರಾಗಿ ಅವರಿಗೆ ಹಳ್ಳಿಗಳ ಜೀವನದ ಗಂಧವೇ ಇಲ್ಲದೇ ಅವರು ಪಾಸ್ ಮಾಡಿಕೊಂಡು ಏನು ಮಾಡುತ್ತಾರೆ. ಬೆಂಗಳೂರಿನಲ್ಲೇ ಇಲ್ಲಿಯ ಆಸ್ಪತ್ರೆಗಳಲ್ಲಿ ಅಥವಾ ಮೈಸೂರು, ದಾವಣಗೆರೆ ಇಂಥ ಆಸ್ಪತ್ರೆಗಳಲ್ಲಿ ಕೆಲಸ ಮಾಡಲು ಬಯಸುತ್ತಾರೆ. ಹಳ್ಳಿಯ ಆಸ್ಪತ್ರೆಗಳಿಗೆ ಹೋಗಿ ಅಲ್ಲಿ ವಾಸ ಮಾಡುವುದಕ್ಕೆ ಇಷ್ಟ ಪಡುವುದಿಲ್ಲ. ಆದ್ದರಿಂದ ಗ್ರಾಮಾಂತರ ಪ್ರದೇಶದ ಅದರಲ್ಲೂ ಮಲೆನಾಡು ಪ್ರಾಂತ್ಯಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ಹೆಚ್ಚಿಗೆ ಸೀಟು ಕೊಡುವುದರಿಂದ ಈ ನ್ಯೂನತೆ, ತೊಂದರೆ ಸ್ವಲ್ಪ ಕಡಿಮೆಯಾಗಬಹುದು. ಆದರೆ ಇದಕ್ಕೆ ಸರ್ಕಾರದ ರೂಲ್ಸ್ ವಿರೋಧ ಬರುತ್ತದೆ. ಮೆರಿಟ್ ಪ್ರಕಾರ ಕೊಡಬೇಕೆಂಬ ತತ್ವ ಇದೆ. ಇದು ಅಡ್ಡಿ ಬರಬಹುದು. ಈಗ ಯಾವ ರೀತಿ ನಡೆಯುತ್ತಾ ಇದೆ ಎಂಬುದನ್ನು ಯೋಚನೆ ಮಾಡಿದರೆ ನೆನ್ನೆ ಮೊನ್ನೆಯಿಂದ ಪಿ. ಯು. ಸಿ. ಪರೀಕ್ಷೆ ನಡೆಯುತ್ತಾ ಇದೆ. ಬೆಂಗಳೂರು ಪಟ್ಟಣದಲ್ಲಿ

ಸಾಮಾನ್ಯವಾಗಿ ಎಲ್ಲಾ ವಿದ್ಯಾರ್ಥಿಗಳಿಗೂ ಕೂಡ question papers ಗೊತ್ತಾಗಿದೆ. ರಾತ್ರಿ ಹತ್ತು ಹತ್ತುವರೆ ಗಂಟೆ ಆದರೆ ಒಬ್ಬರಿಂದ ಒಬ್ಬರಿಗೆ ಪ್ರಶ್ನೆಗಳು ಗೊತ್ತಾಗಿ ಪರೀಕ್ಷೆಗೆ ಹೋಗುತ್ತಾರೆ. ಹೀಗಿರುವಾಗ ಮೆರಿಟ್ ಅನ್ನುವುದು ಹೇಗೆ ಬರುತ್ತದೆ. ಈ ಸೌಕರ್ಯ, ಸೌಲಭ್ಯ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ವಿದ್ಯಾರ್ಥಿಗಳಿಗೆ ಇರುವುದಿಲ್ಲ. ಇದನ್ನೇ ಒಂದು ದೊಡ್ಡ ಕ್ರೈಟೀರಿಯಾ ಮಾಡಿಕೊಂಡು ಶೇಕಡ 50 ಬಂದವನು ಅರ್ಹನಲ್ಲ. ಶೇಕಡ 65 ಬಂದವನು ಅರ್ಹ ಅವನಿಗೆ ಸೀಟು ಕೊಡಬೇಕು ಎಂದು ಹೇಳುವುದು ನ್ಯಾಯವಾದ ಮಾರ್ಗವಾಗುವುದಿಲ್ಲ. ಹಳ್ಳಿಗಳಲ್ಲಿ ಹೋಗಿ ಕೆಲಸ ಮಾಡುವುದಕ್ಕೆ, ಹಳ್ಳಿಗಳ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸುವುದಕ್ಕೆ ಆಶೆ ಇರುವವರಿಗೆ ಸೀಟು ಸಿಕ್ಕದೇ ಇರುವುದರಿಂದ ಈ ನ್ಯೂನತೆ ಆಗಿದೆ. ಇದರಿಂದ ಡಾಕ್ಟರುಗಳ ಅಭಾವ ಕಡಿಮೆ ಮಾಡುವುದಕ್ಕೆ ಕಷ್ಟವಾಗುತ್ತದೆ ಎಂದು ಹೇಳ ಬಯಸುತ್ತೇನೆ. ನಾನು ಕಮಿಟಿಯಲ್ಲಿ ಸದಸ್ಯನಾಗಿದ್ದಾಗ ಶೇಕಡ45, ಶೇಕಡ 50 ಶೇಕಡ 55 ಬಂದವರಿಗೆ 4-5 ಜನರಿಗೆ ಸೀಟು ಕೊಟ್ಟು ಪ್ರತಿ ವರ್ಷವೂ ಕೂಡ ಪಾಸ್ ಮಾಡಿ ಯೋಗ್ಯರಾದ, ದಕ್ಷರಾದ ಡಾಕ್ಟರುಗಳಾಗಿ ಹಳ್ಳಿಗಳಲ್ಲಿ ಕೆಲಸ ಮಾಡುತ್ತಾ ಇದ್ದಾರೆ. ಪ್ರೈವೇಟ್ ಪ್ರಾಕ್ಟೀಸ್ ವಿಚಾರದಲ್ಲು ಕೂಡ ನಮ್ಮ ಸ್ನೇಹಿತರು ಮಾತನಾಡಿದರು. ಪ್ರೈವೇಟ್ ಪ್ರಾಕ್ಟೀಸ್‌ಗೆ ಅವಕಾಶ ಕೊಟ್ಟಿರುವುದು ಸರಿಯಾವಲ್ಲ ಏಕೆಂದರೆ ಪ್ರೈವೇಟ್ ಪ್ರಾಕ್ಟೀಸಿಗೆ ಅವಕಾಶ ಕೊಟ್ಟರೆ ಅವರ ಪೇಷೆಂಟುಗಳನ್ನು ಸರಿಯಾಗಿ ನೋಡುತ್ತಾರೆ, ಅವರ ಕಡೆಗೆ ಹೆಚ್ಚು ಆಸಕ್ತಿ ವಹಿಸುತ್ತಾರೆಯೇ ಹೊರತು ಆಸ್ಪತ್ರೆಗೆ ಬರತಕ್ಕ ರೋಗಿಗಳ ಕಡೆಗೆ ಅಷ್ಟಾಗಿ ಗಮನ ಕೊಡುವುದಿಲ್ಲ ಎಂದು ಅನೇಕ ಕಡೆಗಳಿಂದ ಕೇಳಿ ಬರುತ್ತಾ ಇವೆ. ಈ ಡಾಕ್ಟರುಗಳಿಗೆ ಹೆಚ್ಚು ಸಂಬಳ ಸಾರಿಗೆ ಮಾಡದಿದ್ದರೂ ಪರವಾಗಿಲ್ಲ ಪ್ರೈವೇಟ್ ಪ್ರಾಕ್ಟೀಸ್ ಮಾಡುವುದನ್ನು ಕಡ್ಡಾಯವಾಗಿ ತಪ್ಪಿಸುವುದು ಯೋಗ್ಯವಾದದ್ದು, ಎಂದು ಅನೇಕರ ಅಭಿಪ್ರಾಯವಾಗಿದೆ. ಆಸ್ಪತ್ರೆಗಳಲ್ಲಿ ಸರಿಯಾದಂಥ ಔಷಧಿ ದೊರೆಯುತ್ತಾ ಇಲ್ಲ ಎಂಬ ದೂರು ಹೆಚ್ಚಾಗಿದೆ. ಸಾಮಾನ್ಯವಾಗಿ ಬಹಳ ಅಗ್ಗವಾಗಿರತಕ್ಕ ಔಷಧಿ ಸಿಕ್ಕುತ್ತದೆಯೇ ಹೊರತು ಯಾವ ರೋಗಿ ಹೋದರೂ ಕೂಡ ಬೆಲೆಯಾದಂಥ ಅತ್ಯವಶ್ಯಕವಾಗಿ ಬೇಕಾಗಿರತಕ್ಕಂಥ, ಹೆಚ್ಚಿನ ಕಾಯಿಲೆಗಳಿಗೆ ಬೇಕಾಗಿರತಕ್ಕ ಯಾವುದಾದರೂ ಇಂಜೆಕ್ಷನ್ ಟ್ಯೂಬು ವಗೈರೆ, ಬಡವನಾದರೂ ಕೂಡ ಅಂಗಡಿಯಿಂದ ತೆಗೆದುಕೊಂಡು ಬಾ ಎಂದು ಹೇಳುತ್ತಾರೆ, ಬೆಲೆ ಬಾಳುವ ಔಷಧಿಗಳು ಬಹಳ ಇರುತ್ತವೆ. ಅಂಥ ಔಷಧಿಗಳು ಬಡವರಿಗೆ ಸಿಕ್ಕುವ ಹಾಗೆ ಗ್ರಾಮಾಂತರದ ಆಸ್ಪತ್ರೆಗಳಿಗೆ ಸರಬರಾಯಿ ಮಾಡಲು ತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ಚನ್ನಬೈರೇಗೌಡ (ಹೊಸಕೋಟೆ).—ಸ್ವಾಮಿ, ಈಗ ನಮ್ಮ ಮುಂದಿರತಕ್ಕ ಜನಾರೋಗ್ಯ ಮತ್ತು ವೈದ್ಯಕೀಯ ಡಿಮ್ಯಾಂಡುಗಳನ್ನು ನಾನು ಅನುಮೋದಿಸುತ್ತ ಈ ಬಾಬುಗಳಲ್ಲಿರತಕ್ಕ ಕೆಲವು ನ್ಯೂನತೆಗಳನ್ನು ಈಗ ಸರ್ಕಾರದವರ ಗಮನಕ್ಕೆ ತರಲಿಚ್ಛಿಸುತ್ತೇನೆ.

ಇಲ್ಲಿಯತನಕ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನರಿಗೆ ಮೆಡಿಕಲ್ ಎಯ್ಡ್ ಸರಿಯಾಗಿ ಸಿಕ್ಕುತ್ತಿಲ್ಲ. ಹತ್ತಾರು ಗ್ರಾಮಗಳಿಗೊಂದು ಆಸ್ಪತ್ರೆಯಿದ್ದು ಜನರು ಆ ಆಸ್ಪತ್ರೆಗೆ 8-10 ಮೈಲಿಗಳಿಂದ ನಡೆದು ಬರಬೇಕಾಗಿದೆ. ಏನೋ ನಮ್ಮ ರಾಜ್ಯದಲ್ಲೂ ಎಲ್ಲ ಕಡೆಗಳಲ್ಲೂ ಆಸ್ಪತ್ರೆಗಳಿವೆ ಅಂತ ಹೇಳಿಕೊಳ್ಳಲು ಇದರಿಂದ ಒಂದು ಅವಕಾಶವಿರಲಿ ಅಂತ ಇವುಗಳನ್ನು ಮಾಡಿರುವಂತೆ ಕಂಡುಬರುತ್ತಿದೆ. ಅನೇಕ ಆಸ್ಪತ್ರೆಗಳಲ್ಲಿ 6 ತಿಂಗಳಗಟ್ಟಲೆ ಇನ್ನು ಕೆಲವು ಕಡೆ ವರ್ಷಗಟ್ಟಲೆ ಆಸ್ಪತ್ರೆಗಳಲ್ಲಿ ಡಾಕ್ಟರುಗಳೇ ಇರುವುದಿಲ್ಲ—ಅಂದ ಮೇಲೆ ಈ ವೈದ್ಯಕೀಯ ಸಹಾಯ ದೊರೆಯುತ್ತಿಲ್ಲ ಎಂಬುದನ್ನು ಮತ್ತೆ ಹೇಳಬೇಕಾದ್ದೇ ಇಲ್ಲ. ನಮ್ಮ ತಾಲ್ಲೂಕಿನಲ್ಲಿ ಒಂದು ಲಕ್ಷ ರೂ. ಗಳನ್ನು ಖರ್ಚುಮಾಡಿ ಅಲ್ಲಿ ಒಂದು ಮೆಟರ್ನಿಟಿ ಆಸ್ಪತ್ರೆಯನ್ನು ಕಟ್ಟಿಸಲಾಗಿದೆ. ಅಲ್ಲಿ ಹೆಸರಿಗೆ ಮಾತ್ರ 23 ಬೆಡ್ಡುಗಳಿವೆ. ಒಂದರಲ್ಲೂ ಹಾಸಿಗೆಯಿಲ್ಲ, ತಲೆದಿಂಬಿಲ್ಲ, ಬೆಡ್‌ಷೀಟಿಲ್ಲ, ಕಂಬಳಿಯಿಲ್ಲ. ಇಷ್ಟೇ ಅಲ್ಲ ಅಲ್ಲಿ ಯಾರಾದರೂ ಕೈ-ಕಾಲು ಮುರಿದವರು ಬಂದರೆ ಅವರಿಗಾದರೂ ಆ ಕಾಟನ್-ಬ್ಯಾಂಡೇಜ್ ಬಟ್ಟೆ ಸಹ ಇರುವುದು ಬೇಡವೇ ? ಇಂಥಾ ಪರಿಸ್ಥಿತಿ ಇದೆ. ಇದನ್ನು ನಾನೇ ಕಣ್ಣಾರೆ ನೋಡಿ ಮೊನ್ನೆ ನಾನೇ ಬೆಂಗಳೂರಿನಿಂದ ಅಲ್ಲಿಗೆ ಎರಡು ಬಂಡಲ್ ತೆಗೆದುಕೊಂಡು ಹೋಗಿ ಕೊಟ್ಟಿದ್ದೇನೆ. ಆದರೆ ಈ ದಿವಸ ಈ ಡಾಕ್ಟರ ಅಭಾವ ಎಷ್ಟೋ ಇದೆ ಅಂತ ಹೇಳುವುದು ಒಂದು ಕಡೆಗಿರಲಿ. ಇರತಕ್ಕ ಆ ಡಾಕ್ಟರುಗಳೇ ಇದ್ದಾರೆ ಅವರಿಗೆ ರೋಗಿಗಳ ವಿಚಾರದಲ್ಲಿ ಸ್ವಲ್ಪವೂ ಕನಿಕರವಿಲ್ಲ — ಅಂದರೆ ಅವರಿಗೆ ಹಾರ್ಟಿಲ್ಲ ಎಂತ ಹೇಳುತ್ತೇನೆ. ಆ ಡಾಕ್ಟರುಗಳು ಎಲ್ಲೇ ಸೇರಲಿ ಅವರು ಬರಿ ಈ ಒಂದು ದುಡ್ಡಿನ ಸಂಪಾದನೆ ವಿಚಾರವೋ ಅಥವಾ ಅವರಿಗೆ ಇಂಕ್ರಿಮೆಂಟುಗಳು ಸರಿಯಾಗಿ ದೊರೆತಿಲ್ಲ—ಪ್ರಮೋಷನ್ ದೊರೆತಿಲ್ಲ, ನಮಗೆ ಬಿಲ್ಡಿಂಗ್ ಕಟ್ಟಿಸಲು ಸಿಮೆಂಟ್ ಸಿಗುತ್ತಿಲ್ಲ—ಕಬ್ಬಿಣ ಸಿಕ್ಕುತ್ತಿಲ್ಲ, ನನಗೆ ಸರ್ಕಾರದಿಂದ ಇನ್ನೂ ಅಡ್ವಾನ್ಸ್ ಸಾಲ ಮಂಜೂರಾಗಲಿಲ್ಲ ಅಂತ ಇಂಥಾ ಮಾತುಗಳು ಕೇಳಿ ಬರುತ್ತಿವೆಯೇ ವಿನಾ ಅವರ ಬಾಯಿನಲ್ಲಿ ನಾನು ಇಂಥಾ ಪೇಷಂಟಿಗೆ ಟ್ರೀಟ್‌ಮೆಂಟ್ ಕೊಟ್ಟೆ—

(ಶ್ರೀ ಬಿ. ಚನ್ನಬೈರೇಗೌಡ)

ನನ್ನಲ್ಲಿ ಇಂಥ ಒಂದು ಪೆಕ್ಯೂಲಿಯರ್ ಕೇಸ್ ಬಂದಿತ್ತು, ಹೀಗೆ ಟ್ರೀಟ್‌ಮೆಂಟ್ ಕೊಟ್ಟೆ ಎನ್ನತಕ್ಕ ಮಾತುಗಳೇ ಬರುವುದಿಲ್ಲ. ಇಂಥಾ ಅಭ್ಯಾಸವೇ ಅವರಲಲ್ಲ. ಹೀಗಿರುವಾಗ ಈ ಡಾಕ್ಟರುಗಳನ್ನು ನಾವು ಹೊರ ದೇಶಗಳಿಗೆ ಬೇರೆ ಕಳುಹಿಸಿ ಆ L. R. C. P & M. R. C. P. ಎಂಬ ಡಿಗ್ರಿಗಳನ್ನು ಕೊಡಿಸುವ ಬದಲು ಅವರನ್ನೆಲ್ಲ ಇಲ್ಲೇ ಸಮೀಪದಲ್ಲೇ ವೇಲೂರು ಅಂತ ಇದೆ, ಅಲ್ಲಿ ಒಂದು ಆಸ್ಪತ್ರೆಯಿದೆ, ಅಲ್ಲಿಗೆ ಈ ನಮ್ಮ ಡಾಕ್ಟರುಗಳನ್ನೆ ಕಳುಹಿಸಿ ಅಲ್ಲಿಯ ಅಸ್ಪತ್ರೆಯಲ್ಲಿ ಕೆಲಸ ಕಾರ್ಯಗಳು ಹೇಗೆ ನಡೆಯುತ್ತಿವೆ, ಅಲ್ಲಿ ಕೆಲಸ ಮಾಡತಕ್ಕ ಆ ಡಾಕ್ಟರುಗಳ ಮನೋಭಾವನೆ, ಅವರ ಆ ಒಂದು ಮನೋವೃತ್ತಿ ಹೇಗೆ ಇರುತ್ತದೆ ಎಂಬುದನ್ನು ಅಭ್ಯಾಸಮಾಡಿಕೊಂಡು ಬರುವುದು ಬಹಳ ಪ್ರಾಮುಖ್ಯವೆಂದು ನನಗೆ ತೋರತ್ತದೆ. ಈ ದಿವಸ ನಮ್ಮ ಡಾಕ್ಟರುಗಳ ರೂಮಿನ ಗೋಡೆ ಮೇಲೆ ಒಂದು ದೊಡ್ಡ ಬೊರ್ಡೇನೋ ಇರುತ್ತೆ. ಆದರೆ ಅವರಲ್ಲಿ ಅಂಥಾ ದೊಡ್ಡ ಮನೋಭಾವನೆ ಮಾತ್ರ ಇರುವುದಿಲ್ಲ. ನಾವು ಸಾರ್ವಜನಿಕರ ಹಣವಲ್ಲಿ ಕೋಟಿಗಟ್ಟಲೇ ಈ ಡಾಕ್ಟರುಗಳಿಗೆ ಸಂಬಳ ಸಾರಿಗೆ ಕೊಟ್ಟು ಕೋಟ್ಯಂತರ ರೂ.ಗಳನ್ನು ಈ ಆಸ್ಪತ್ರೆಗಳಿಗಾಗಿ ಖರ್ಚು ಮಾಡುತ್ತಿದ್ದರೆ ಈ ದಿವಸ ಈ ಸರ್ಕಾರಿ ಆಸ್ಪತ್ರೆಗಳಿಂದ ಯಾರಿಗೆ ಪ್ರಯೋಜನವಾಗುತ್ತಿದೆಯೆಂದರೆ—ಮಂತ್ರಿಗಳಿಗೆ, ಮಂತ್ರಿಗಳ ಅಳಿಯಂದಿರುಗಳಿಗೆ, ಮಂತ್ರಿಗಳ ಮಕ್ಕಳಿಗೆ ಹಾಗೂ ಅವರ ಸ್ನೇಹಿತರಿಗೆ ಅಥವಾ ಅವರು ಶಿಫಾರ್ಸು ಮಾಡತಕ್ಕವರಿಗೆ. ಇಷ್ಟುವಿನಾ ಈ ದೊಡ್ಡ ದೊಡ್ಡ ಮೆಡಿಕಲ್ ಇನ್‌ಸ್ಟಿಟ್ಯೂಷನ್‌ಗಳಿಂದ ಈ ದಿವಸ ಹಳ್ಳಿಗಾಡಿನ ಜನರಿಗೆ ಸುತರಾಂ ಪ್ರಯೋಜನವಾಗುತ್ತಿಲ್ಲ. ಇದನ್ನು ಮಂತ್ರಿಗಳು ಪರೀಕ್ಷೆಮಾಡಿ ನೋಡಬಹುದು — ಆಗ ಅವರಿಗೇ ನಾನು ಹೇಳುತ್ತಿರುವುದು ಸರಿ ಎಂದು ಗೊತ್ತಾಗುತ್ತದೆ. ಈ ದಿವಸ ಈ ಮಂತ್ರಿಗಳ ಆಸ್ಪತ್ರೆ ಪರೀಕ್ಷೆಯಾದರೂ ಹೇಗೆ ನಡೆಯುತ್ತಿದೆ ಎಂದರೆ-ಇವರು ಆ ಆಸ್ಪತ್ರೆಗಳ ಇನ್‌ಸ್ಪೆಕ್ಷನ್‌ಗೆ ಹೋಗುವ ಮೊದಲೇ ಪ್ರೋಗ್ರಾಂ ಕೊಟ್ಟು ಹೋಗುತ್ತಾರೆ. ಅಂದಾಗ ಇವರಿಗೆ ಅಲ್ಲಿಯ ಹುಳುಕು ಹೇಗೆ ಗೊತ್ತಾಗುತ್ತದೆ? ಇವರು ಆ ಆಸ್ಪತ್ರೆಗೆ ಹೋದಕೂಡಲೆ ಅಲ್ಲಿಯ ಡಾಕ್ಟರುಗಳು ಇವರನ್ನು 10-15 ರೂ.ಗಳ ವಾರ್ಡಿಗೆ ಕರೆದುಕೊಂಡು ಹೋಗುತ್ತಾರೆ. ಅಲ್ಲೆಲ್ಲ ಸಾಮಾನ್ಯವಾಗಿ ದೊಡ್ಡ ದೊಡ್ಡ ಶ್ರೀಮಂತರ ಮನೆಯ ಪೇಷಂಟುಗಳಿರುತ್ತಾರೆ. ಅಂಥಾವರನ್ನು ತೋರಿಸಿ ಬಿಡುತ್ತಾರೆ. ಆಗ ಈ ಮಂತ್ರಿಗಳು ನಮ್ಮ ಡಾಕ್ಟರುಗಳೆಲ್ಲ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆಂತ ತಿಳಿದುಕೊಳ್ಳುತ್ತಾರೆ. ಈ ದಿವಸ ಈ ಸರ್ಕಾರಿ ಆಸ್ಪತ್ರೆಗಳಲ್ಲಿ ನಿಜವಾಗಿಯೂ ಏನು ನಡೆಯುತ್ತಿದೆ ಎಂಬುದನ್ನು ಪರಿಶೀಲನೆ ಮಾಡತಕ್ಕ ಇರಾದೆ ನಮ್ಮ ಮಂತ್ರಿಗಳಿಗಿದ್ದರೆ ಅವರು ಆ ಜನರಲ್ ವಾರ್ಡುಗಳಿಗೆ ಹೋಗಿ ಅಲ್ಲಿರತಕ್ಕ ಸ್ಥಿತಿಗತಿಗಳೇನು ಅನ್ನುವುದನ್ನು ಪರೀಕ್ಷೆ ಮಾಡಬೇಕು. ಆಗಲೇ ಇವರಿಗೆ ನಿಜಸ್ಥಿತಿ ಗೊತ್ತಾಗುವುದು. ಈ ದಿವಸ ಅಲ್ಲಿರತಕ್ಕ ಆ ನರ್ಸುಗಳೂ, ಡಾಕ್ಟರುಗಳೂ ಆ ರೋಗಿಗಳಿಗೆ ಕೊಡಬೇಕಾದ ಬೆಲೆ ಬಾಳತಕ್ಕ ಅನೇಕ ಇಂಜಕ್ಷನ್‌ಗಳನ್ನು 20-30 ರೂ.ಗಳ ಬೆಲೆಯಾಗತಕ್ಕ ಇಂಜಕ್ಷನ್ ಟ್ಯೂಬುಗಳನ್ನೂ ನೂರಾರು ಮಾತ್ರೆಗಳನ್ನು ಆ ರೋಗಿಗಳಿಗೆ ಉಪಯೋಗ ಮಾಡದೆ ಹಾಗೆ ಜೋಬಿನಲ್ಲಿ ತುಂಬಿಕೊಂಡು ಅದೇ ವಿಕ್ಟೋರಿಯಾ ಆಸ್ಪತ್ರೆಯ ಎದುರಿಗಿರುವ ಡ್ರಗ್ ಷಾಪುಗಳಿಗೆ ಮಾರಾಟಮಾಡುತ್ತಿದ್ದಾರೆ. ಈ ಸಂಬಂಧದಲ್ಲಿ ನನಗೆ ಒಬ್ಬ ಡಾಕ್ಟರು ಮಾಡಿದ ಕೃತ್ಯ ಜ್ಞಾಪಕಕ್ಕೆ ಬರುತ್ತದೆ. ನಾನು ಅವರ ಹೆಸರನ್ನು ಈಗ ಹೇಳುವುದಿಲ್ಲ. ಏನಾಯಿತು ಎಂದರೆ ಒಂದಾವರ್ತಿ ಒಬ್ಬ ಹುಡುಗ ಚೆಂಡಾಡುತ್ತ ಕೈ ಮುರಿದುಕೊಂಡಿದ್ದನು. ಅವನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ—ಆಗ ಅಲ್ಲಿದ್ದ ಡಾಕ್ಟರು ಈಗ R. M. O. ಅವರಿಲ್ಲ. ಇದಕ್ಕೆ ಆಂಟಿ ಗ್ಯಾಂಗ್ ಇನ್‌ಜೆಕ್ಷನ್ ಟ್ಯೂಬ್ ಬೇಕು. ಈಗಲೇ ಇಂಜಕ್ಷನ್ ಕೊಡಬೇಕೆಂದರೆ ನೀವು ಬೇರೆ ಷಾಪಿನಲ್ಲಿ ಹೋಗಿ ತಂದುಕೊಟ್ಟರೆ ಈಗಲೇ ಇಂಜಕ್ಷನ್ ಕೊಡುತ್ತೇನೆಂದು ಹೇಳಿ ಆ ಟ್ಯೂಬನ್ನು ತರಿಸಿಕೊಂಡು ಇಂಜಕ್ಷನ್ ಮಾಡಿದರು. ಆದರೆ ಆ ವಾರನೇ ದಿವಸ R. M. O. ಹತ್ತಿರ ಹೋಗಿ ಆ ಹುಡುಗನ ಹೆಸರಿನಲ್ಲಿ ಅದೇ ಇಂಜಕ್ಷನ್ ಟ್ಯೂಬ್ ಖರ್ಚುಹಾಕಿ ಅದನ್ನು ಆ ಡಾಕ್ಟರು ಅವರ ಜೇಬಿಗೆ ಬಿಟ್ಟರೆಂಬ ವಿಚಾರ ಗೊತ್ತಾಯಿತು. ಆದರೂ ಆ ಹುಡುಗನಿಗೆ ಕೈ ಬರತೇ ಇಲ್ಲ. ಒಂದೇ ಕೈ ಆಯಿತು. ಇಲ್ಲಿಗೆ 2 ವರ್ಷಗಳ ಹಿಂದೆ ಇನ್ನೊಬ್ಬ ಸರ್ಕಾರಿ ಡಾಕ್ಟರು ಏನು ಮಾಡಿದರು ಅಂದರೆ...

Mr. SPEAKER.—If he has got a more recent instance, give it to the Minister and he will certainly look into it.

ಶ್ರೀ ಬಿ. ಚನ್ನಬೈರೇಗೌಡ.—ಹಾಗಾದರೆ ಕಳೆದ ವರ್ಷ ನಡೆದ ವಿಚಾರವನ್ನೇ ಹೇಳುತ್ತೇನೆ. ಈ ವಿಚಾರ ನಡೆದದ್ದು ಈಗ ಹಾಲಿ ಇರತಕ್ಕ ಮಂತ್ರಿಗಳ ಕಾಲದ್ದೇ. ಶಾಂತಮಲ್ಲಪ್ಪ ಅಂತ ಒಬ್ಬ ಲಾರಿ ಮಾಲೀಕ ಆತನಿಗೆ ಒಂದು ಆಕ್ಸಿಡೆಂಟ್ ಆಗಿತ್ತು. ಆತನನ್ನು ಇದೇ ಬೆಂಗಳೂರಿನಲ್ಲಿರತಕ್ಕ

ಬೌರಿಂಗ್ ಆಸ್ಪತ್ರೆಗೆ ಕರೆದುಕೊಂಡು ಹೋದೆನು. ಆತನಿಗೆ ಕಾಲು ಮುರಿದಿತ್ತು. ಆದರೆ ಆತನಿಗೆ ಚಿಕಿತ್ಸೆ ಮಾಡುವಾಗ ಆ ಘಾಯದಲ್ಲಿ ಸೇರಿದ್ದ ಮಣ್ಣು–ಕಸ ಕಡ್ಡಿಗಳನ್ನು ಸರಿಯಾಗಿ ತೆಗೆಯದೆ ಟ್ರೀಟ್‌ಮೆಂಟ್ ಕೊಟ್ಟಿದ್ದರಿಂದ ಮೂರು ತಿಂಗಳಾದರೂ ಆತನಿಗೆ ವಾಸಿಯಾಗಲೇ ಇಲ್ಲ. ಅರ್ಧಮುಕ್ಕಾಲು ಕಾಲನ್ನೇ ಆಪರೇಟ್ ಮಾಡಿಬಿಟ್ಟರು. ಹೀಗೆ ಎಷ್ಟೋ ತಾತ್ಸಾರಮಾಡಿದ ನಿದರ್ಶನಗಳಿವೆ. ನಮಗೆ ಜಾಯಿಂಟ್ ರೆಸ್‌ಪಾನ್ಸಿಬಿಲಿಟಿಯಿದೆ, ನಾವು ಗಾಂಧೀ ಭಕ್ತರು, ಗಾಂಧಿ ನೆರಳಲ್ಲಿ ಕೆಲಸ ಮಾಡತಕ್ಕವರು ಅಂತ ಹೇಳಿಕೊಳ್ಳತಕ್ಕ ಜನರು ಮಾಡತಕ್ಕ ಕೆಲಸ ಇದೇನೇ ಎಂತ ಕೇಳುತ್ತೇನೆ ? ಮಾತೆತ್ತಿದರೆ ನಮ್ಮ ಸರ್ಕಾರ ಯಾವ ರಾಜ್ಯಕ್ಕೂ ಹಿಂದೆ ಬಿದ್ದಿಲ್ಲ ಅಂತ ಬೇರೆ ಹೇಳಿಕೊಳ್ಳುತ್ತಿದ್ದಾರೆ. ಇದಕ್ಕೆ ಒಂದು ನಿದರ್ಶನ ಹೇಳುತ್ತೇನೆ. ನಾನೇ ಒಂದುಸಾರ್ತಿ ಒಂದು ಕೇಸನ್ನು ಆಸ್ಪತ್ರೆಗೆ ತಂದಿದ್ದೆ. ಅಲ್ಲಿ ದೇಶಕ್ಕೇ ದೊಡ್ಡ ಡಾಕ್ಟರ್ ಇದ್ದರು. ಅವರು ಎರಡುಸಾರ್ತಿ ಆಪರೇಷನ್ ಮಾಡಿ, ಮೂರನೇ ಸ್ಟೇಜಿನಲ್ಲಿ ಇದು ಇಲ್ಲಿ ವಾಸಿಯಾಗುವುದಿಲ್ಲ, ಮೂಳೆ ಗಂಟು ಕಟ್ಟಿದೆ, ಕ್ಯಾನ್ಸರ್ ಆಗಿದೆ ಎಂತ ಹೇಳಿ ಕಳುಹಿಸಿಬಿಟ್ಟರು. ಆನಂತರ ಆ ಪೇಷಂಟನ್ನು ನಾನೇ ಕೋಲಾರದಲ್ಲಿರತಕ್ಕ ಮಿಷನ್ ಆಸ್ಪತ್ರೆಗೆ ಕರೆದುಕೊಂಡು ಹೋದೆ. ಅಲ್ಲಿ ಕೇಸು ಏನು ಅಂತ ಕೇಳಿದರು—ಆಗ ನಾನು ಕ್ಯಾನ್ಸರ್ ಎಂತ ಹೇಳಿದೆ. ಅದಕ್ಕೆ ಅಲ್ಲಿದ್ದ ಡಾಕ್ಟರು ನಕ್ಕು—ನಿಮಗೆ ಕ್ಯಾನ್ಸರ್ ಎಂತ ಯಾರ ಹೇಳಿದರು ಎಂದು ಕೇಳಿದರು. ನಾನು ಮೊದಲು ಟ್ರೀಟ್‌ಮೆಂಟ್ ಕೊಟ್ಟಿದ್ದ ಸರ್ಜನ್ನರ ಹೆಸರನ್ನು ಹೇಳಿದೆ. ಆಗ ಅವರು ನಕ್ಕು ಸುಮ್ಮನಾಗಿಬಿಟ್ಟರು. ಆದರೆ ಅವರು ಅಲ್ಲಿ ಆತನಿಗೆ ಟ್ರೀಟ್‌ಮೆಂಟನ್ನು ಕೊಟ್ಟರು. ಈಗ ಆತ ಚೆನ್ನಾಗಿ ಬದುಕಿಕೊಂಡು ಸುಖವಾಗಿದ್ದಾನೆ. ಆದರೆ ನಾನು ಹೇಳುವುದಿಷ್ಟೇ. ಇಲ್ಲಿ ನಮ್ಮ ಡಾಕ್ಟರುಗಳಿಗೆ ಸರ್ಜನ್‌ಗಳಿಗೆ ವಿದ್ಯೆ ಇಲ್ಲ ಅಂತ ಹೇಳುವುದಿಲ್ಲ. ಇವರಲ್ಲೂ ಬೇಕಾದಷ್ಟು ವಿದ್ಯೆ ಇದೆ. ಆದರೆ ಇವರಿಗೆ ಹಾರ್ಟ್ ಇಲ್ಲ. ಆದ್ದರಿಂದ ಇವರಿಗೆ ಒಬ್ಬ ರೋಗಿ ಆಸ್ಪತ್ರೆಗೆ ಹೋದರೆ ಅವನೊಂದಿಗೆ ಹೇಗೆ ಮಾತನಾಡಬೇಕು, ಆತನಿಗೆ ಏನು ಟ್ರೀಟ್‌ಮೆಂಟು ಕೊಡಬೇಕು ಎನ್ನತಕ್ಕ ಈ ಬಾಬುಗಳು ಇವರಿಗೆ ಗೊತ್ತಿಲ್ಲ ಎಂಬ ಅಂಶವನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಈ ಪರಿಸ್ಥಿತಿ ಹೀಗೇ ಮುಂದುವರಿಯುವುದಾದರೆ ಸಾರ್ವಜನಿಕರಿಗೆ ಈ ಸರ್ಕಾರಿ ಆಸ್ಪತ್ರೆಗಳ ಅವಶ್ಯಕತೆ ಇರುವುದಿಲ್ಲ—ಇದ್ದರೂ ಇವುಗಳಿಂದ ಅವರಿಗೇನೂ ಪ್ರಯೋಜನವೂ ಆಗುವುದಿಲ್ಲ. ಆದುದರಿಂದ ಈಗಿರತಕ್ಕ ಸರ್ಕಾರಿ ಆಸ್ಪತ್ರೆಗಳನ್ನೆಲ್ಲ ನಿಲ್ಲಿಸಿ—ಈ ಕಟ್ಟಡಗಳನ್ನು ಆ ಪ್ರೈವೇಟ್ ಡಾಕ್ಟರುಗಳಿಗಾದರೂ ಕೊಟ್ಟರೆ ಇದರಿಂದ ಸರ್ಕಾರಕ್ಕೆ ಈಗ ಆಗುತ್ತಿರುವ ಅಪಾರ ವೆಚ್ಚವೂ ತಪ್ಪುತ್ತದೆ ಮತ್ತು ಸರ್ಕಾರಕ್ಕೆ ಈ ಕಟ್ಟಡಗಳಿಂದ ಬಾಡಿಗೆ ರೂಪದಲ್ಲಿ ಹೆಚ್ಚಿನ ವರಮಾನ ಬರತ್ತದೆ. ಈಗ ಆ ಸಾಮಾನ್ಯ ಜನರು ಸಾಮಾನ್ಯ ವಾರ್ಡಿಗೆ ಹೋಗಿ ಅಲ್ಲಿ ಸಾಯುವುದನ್ನು ಕೂಡ ತಪ್ಪಿಸಿದಹಾಗೆ ಆಗುತ್ತದೆ. ಈ ದಿವಸ ಈ ದೊಡ್ಡ ದೊಡ್ಡ ಆಸ್ಪತ್ರೆಗಳಿರುವುದು ಸಾಮಾನ್ಯ ಜನರಿಗಾಗಿ ಅಲ್ಲ. ಇವುಗಳೇನಿದ್ದರೂ ದೊಡ್ಡ ಶ್ರೀಮಂತರಿಗೂ—ಮಂತ್ರಿಗಳಿಗೂ ಇರುತ್ತವೆ. ಇಂಥಾ ಬಾಬಿಗೆ ನಾವೇಕೆ ಈ ದಿವಸ ಈ 8 ಕೋಟಿ ರೂ.ಗಳನ್ನು ಖರ್ಚು ಮಾಡಬೇಕು ? ಈಗ ಸರಿಯಾಗಿ ಲೆಕ್ಕ ಹಾಕಿದರೆ ಈ ಮೆಡಿಕಲ್ ಅಂಡ್ ಪಬ್ಲಿಕ್ ಹೆಲ್ತ್ ಬಾಬಿಗೆ ಈ ರೆಗ್ಯುಲರ್ ಬಡ್ಜೆಟ್ಟಿನಲ್ಲೇನೊ 8 ಕೋಟಿ ರೂ.ಗಳನ್ನು ಕೇಳಿದ್ದಾರೆ. ನಾಳೆ ಸಪ್ಲಿಮೆಂಟರಿ ಗ್ರ್ಯಾಂಟ್ ರೂಪದಲ್ಲಿ ಏನಿಲ್ಲ ಅಂದರೂ ಮತ್ತೆ ಒಂದು ಕೋಟಿ ರೂ.ಗಳನ್ನು ಕೇಳುತ್ತಾರೆ. ಹೀಗೆ ಈ 9 ಕೋಟಿ ರೂ.ಗಳ ಖರ್ಚನ್ನು ನಾವು ಉಳಿಸಿದಂತಾಗುತ್ತದೆ. ಜನರಿಗೂ ಕೂಡ ಇದರಿಂದ ಅಂಥಾ ಅನಾನುಕೂಲವೇನೂ ಆಗುವುದಿಲ್ಲ—ಸರ್ಕಾರಕ್ಕೂ ದುಡ್ಡು ಉಳಿತಾಯವಾಗುತ್ತದೆ. ಇದರಿಂದ ದೇಶಕ್ಕೊಂದು ಹೆಚ್ಚಿನ ಲಾಭಬಂದ ಹಾಗಾಗುತ್ತದೆ. ಆದ್ದರಿಂದ ನಾನು ಮಾಡತಕ್ಕ ಸಲಹೆ ಏನೆಂದರೆ ಈ ಸರ್ಕಾರಿ ಆಸ್ಪತ್ರೆಗಳನ್ನೆಲ್ಲ ರದ್ದು ಮಾಡಬೇಕು ಇಲ್ಲವೇ ಈ ನಮ್ಮ ಡಾಕ್ಟರುಗಳ ಹೃದಯ ಪರಿವರ್ತನೆ ಮಾಡಲು ಏನಾದರೂ ಅವಕಾಶವಿದ್ದರೆ ಮಾಡಿ ಅದನ್ನು ಮಾಡಿ ಈ ಆಸ್ಪತ್ರೆಗಳನ್ನು ನಡೆಸಿ ಇಲ್ಲವೇ ಇವುಗಳನ್ನೆಲ್ಲ ರದ್ದು ಮಾಡಿ ಈ ಬಿಲ್ಡಿಂಗುಗಳನ್ನೆಲ್ಲ ಬಾಡಿಗೆಗೆ ಕೊಟ್ಟುಬಿಡಿ ಎಂತ ಹೇಳುತ್ತಿದ್ದೇನೆ.

ಹೊಸಕೋಟೆ ಟೌನಿನಲ್ಲಿ ಒಬ್ಬ ಡಾಕ್ಟರಿದ್ದರು. ಅವರು ಒಬ್ಬ ಹೆಂಗಸನ್ನು ಅಡಿಗೆ ಕೆಲಸಕ್ಕೆ (cook) ನೇಮಿಸಿಕೊಂಡಿದ್ದರು. ಅವರು ಅಡಿಗೆ ಮಾಡಲು ಪಾತ್ರೆ, ಪದಾರ್ಥಗಳೊಂದೂ ಇರುವುದಿಲ್ಲ. ಅವರಿಗೆ ತಿಂಗಳಿಗೆ ಸಂಬಳ 80-100ರೂಪಾಯಿಗಳು. ಡಾಕ್ಟರು ತಮ್ಮ ವ್ಯವಹಾರಕ್ಕೋಸ್ಕರ ಆಕೆಯನ್ನು ಅಡಿಗೆಯ ಕೆಲಸಕ್ಕೆ ನೇಮಿಸಿಕೊಂಡಿದ್ದರು. ನಾನು ಮುನಿಸಿಪಲ್ ಪ್ರೆಸಿಡೆಂಟ್ ಆಗಿದ್ದಾಗ ಆ ಡಾಕ್ಟರನ್ನು ವರ್ಗ ಮಾಡಬೇಕೆಂದು ಕಾಗದ ಬರೆದೆ. ಡೈರೆಕ್ಟರ್ ಆಫ್ ಪಬ್ಲಿಕ್ ಹೆಲ್ತ್ ಮತ್ತು ಚೀಫ್‌ಸೆಕ್ರೆಟರಿಯವರಿಗೆ ಕಾಗದ ಬರೆದೆ.

12 NOON

Mr. SPEAKER.—When was the letter written to Government ?

ಶ್ರೀ ಬಿ. ಚನ್ನಬೈರೇಗೌಡ.—ತಾರಿಖು ಜ್ಞಾಪಕವಿಲ್ಲ. ಸುಮಾರು ಒಂದೂವರೆ ವರ್ಷವಾಯಿತು.

ಆಮೇಲೆ ಹೆಲ್ತ್ ಆಫೀಸರ್ ಬಂದು enquiry ಮಾಡಿದರು. ಡಾಕ್ಟರು ಒಪ್ಪಿಕೊಂಡು ತಮ್ಮ ತಪ್ಪನ್ನು ಕ್ಷಮಿಸಬೇಕೆಂದು ಪ್ರಾರ್ಥಿಸಿದರು. ಡಾಕ್ಟರು ತಮ್ಮ ತಪ್ಪನ್ನು ಒಪ್ಪಿಕೊಂಡ ಮೇಲೆ ಸಹ ಅವರನ್ನು ಅಲ್ಲಿಯೇ ಇಟ್ಟು, ಏನೂ ತಪ್ಪು ಇಲ್ಲದೆ ಇದ್ದರೂ ಅಡಿಗೆಯಾಕೆಯನ್ನು ವರ್ಗಮಾಡಿದರು. ಇಂಥ ಸಂದರ್ಭಗಳು ಅನೇಕವಿರುತ್ತವೆ. ಈ ಬಾಬುಗಳಿಗೆ ಎಂಟುಕೋಟಿ ರೂಪಾಯಿಗಳನ್ನು ದೇಶದ ದುಡ್ಡನ್ನು ಕೊಡುತ್ತಿರುವಾಗ ಸರಿಯಾದ ಹತೋಟಿ ಮತ್ತು ವ್ಯವಸ್ಥೆಯನ್ನಿಟ್ಟು ಕೊಂಡು, ಸರಿಯಾದ ನಿಗಾವಣೆ ಇಟ್ಟು ಕೆಲಸ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ಮುನಿಸ್ವಾಮಯ್ಯ (ದೇವನಹಳ್ಳಿ).—ಸ್ವಾಮಿ, ಆರೋಗ್ಯ ಮಂತ್ರಿಗಳು ನಮ್ಮೆದುರಿಗೆ ಇಟ್ಟಿರುವ ಬೇಡಿಕೆಗಳನ್ನು ಸಂಪೂರ್ಣವಾಗಿ ಅನುಮೋದಿಸುತ್ತ ವೈದ್ಯಕೀಯ ಮತ್ತು ಜನಾರೋಗ್ಯ ರಕ್ಷಣಾ ಇಲಾಖೆಗಳಲ್ಲಿರುವ ಕೆಲವೊಂದು ನ್ಯೂನತೆಗಳನ್ನು ತಮ್ಮ ಗಮನಕ್ಕೆ ತರಬೇಕು ಮತ್ತು ಆ ನ್ಯೂನತೆಗಳನ್ನು ಸರಿಪಡಿಸಬೇಕು ಎಂದು ಸಲಹೆ ಮಾಡುವುದಕ್ಕೋಸ್ಕರ ನಾಲ್ಕು ಮಾತುಗಳನ್ನು ಹೇಳುತ್ತೇನೆ ಸ್ವಾಮಿ.

ಪ್ರಾರಂಭದಲ್ಲಿ ನಾನು ವಿಕ್ಟೋರಿಯಾ ಆಸ್ಪತ್ರೆಯ ವಿಷಯ ಸ್ವಲ್ಪ ಹೇಳುತ್ತೇನೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ Spirit lamps ಉರಿಸುವುದಕ್ಕೆ ಸ್ಪಿರಿಟ್ ಇಲ್ಲದೆ ಅದಕ್ಕೆ Tr. Iodine ಹಾಕಿ ಪರೀಕ್ಷಾ ಕೆಲಸಗಳಿಗೆ ಉಪಯೋಗಿಸುತ್ತಿದ್ದಾರೆಂದು ಕೇಳಿದ್ದೇನೆ. ಸ್ಪಿರಿಟ್ ವೆಚ್ಚ ಕಡಮೆ ಮತ್ತು Tr. Iodine ವೆಚ್ಚ ಬಹಳ ಜಾಸ್ತಿ ಎಂದು ವೈದ್ಯರು ಹೇಳುತ್ತಾರೆ. ಇಲ್ಲಿಗೆ ಸ್ಪಿರಿಟ್ ಏಕೆ ಸಪ್ಲೈ ಮಾಡುತ್ತಿಲ್ಲ ಅಥವಾ ಸಪ್ಲೈ ಮಾಡಿದ ಸ್ಪಿರಿಟ್ ಎಲ್ಲಿ ಹೋಯಿತು ಎನ್ನುವುದರ ಕಡೆ ಗಮನ ಕೊಟ್ಟು ಚೆಕ್‌ಮಾಡಬೇಕೆಂದು ಮಂತ್ರಿಗಳಿಗೆ ಹೇಳುತ್ತೇನೆ.

Wheel chairs, stretchers. ಇವುಗಳ ಚಕ್ರಗಳಿಗೆ ರಬ್ಬರ್ ಹಾಕಿ ಎಷ್ಟೋ ದಿವಸಗಳಾಗಿವೆ. ಇವುಗಳನ್ನು ತಳ್ಳಿಕೊಂಡು ಹೋಗುವಾಗ ಕಟ ಕಟ ಶಬ್ದವಾಗುತ್ತ ಪಕ್ಕದಲ್ಲಿರುವ ರೋಗಿಗಳು ಇದೇನು ಬಂತಪ್ಪ ಎಂದು ಎದ್ದು ನೋಡುವ ಪರಿಸ್ಥಿತಿ ಇದೆ. Wheel chairs and stretchers ಇಷ್ಟೊಂದು ಅಧ್ವಾನವಾಗಿರುವಾಗ ಅವುಗಳನ್ನು ರಿಪೇರಿ ಮಾಡಿಸಿಲ್ಲ. ಇವು ಬಂದು ಎಷ್ಟು ಕಾಲವಾಯಿತೋ ಗೊತ್ತಿಲ್ಲ. ಇದನ್ನು ಡಾಕ್ಟರಾಗಿರುವ ನಮ್ಮ ಆರೋಗ್ಯ ಮಂತ್ರಿಗಳು ಚೆನ್ನಾಗಿ ಪರೀಕ್ಷೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇದಲ್ಲದೆ ಅಲ್ಲಿಗೆ ಕೊಟ್ಟಿರತಕ್ಕ ಚಾಕುಗಳು ಮತ್ತು ಕತ್ತರಿಗಳು ಯಾವ ಕಾಲದಲ್ಲಿ ಬಂದವೋ ಗೊತ್ತಿಲ್ಲ. ಇದನ್ನು ಕೂಡ ಮಾನ್ಯ ಮಂತ್ರಿಗಳು ಪರೀಕ್ಷೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಚ್ಚುಗಳನ್ನು ಇಟ್ಟುಕೊಂಡಿದ್ದಾರೆ.

ಶ್ರೀ ಆರ್. ಮುನಿಸ್ವಾಮಯ್ಯ.—ಇದ್ದರೂ ಇರಬಹುದು.

ಆಹಾರ ಪದಾರ್ಥಗಳಿಗೆ ವರ್ಷಕ್ಕೆ ಒಂದು ಸಲ ಟೆಂಡರ್ ಕರೆಯುತ್ತಾರೆಂದು ಕೇಳಿದ್ದೇನೆ. ಈ ಟೆಂಡರ್ ಒಂದು ಸಲ ಕೊಟ್ಟರೆ ಅದು ಮೂರು ವರ್ಷವಾದರೂ approve ಆಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಸರ್ಕಾರಕ್ಕೆ ಬಂದು approve ಆಗಿ ಹಿಂದಕ್ಕೆ ಹೋಗುವುದರಲ್ಲಿ ಬಹಳ ತಡವಾಗುತ್ತದೆಂದು ಕೇಳಿದ್ದೇನೆ. ಎಷ್ಟೋ ದಿನಗಳಲ್ಲಿ diet, ಮೊಟ್ಟೆ ಮತ್ತು ಹಣ್ಣುಗಳು ಮೊದಲಾದವುಗಳನ್ನು ಸಕಾಲದಲ್ಲಿ ರೋಗಿಗಳಿಗೆ ಕೊಡದೆ ನೀವೇ ತರಿಸಿಕೊಳ್ಳಿ, ಹೊರಗಿನಿಂದ ತರಿಸಿಕೊಳ್ಳಿ, ಎಂದು ಹೇಳುತ್ತಾರಂತೆ. ಈ ಕಡೆಗೂ ಗಮನ ಕೊಡಬೇಕೆಂದು ಹೇಳುತ್ತೇನೆ.

ಬೆಂಗಳೂರಿನಲ್ಲಿ ದೊಡ್ಡ ದೊಡ್ಡ ಆಸ್ಪತ್ರೆಗಳಿವೆ. ಅನೇಕರು ಸ್ಪೆಷಲ್ ವಾರ್ಡಿನಲ್ಲಿರುವುದಕ್ಕೆ ಶಕ್ತಿಯಿರುವವರು, ಹೆಚ್ಚಿನ ಸೌಲಭ್ಯಗಳನ್ನು ಪಡೆಯತಕ್ಕ ಶಕ್ತಿಯಿರುವವರೂ ಹೋಗಿ ಜನರಲ್ ವಾರ್ಡ್‌ಗಳಲ್ಲಿ ಸೇರಿಕೊಂಡು ಸ್ಪೆಷಲ್ ವಾರ್ಡ್‌ಗಳಿಗೆ ಕೊಡಬೇಕಾದ ಹಣವನ್ನು ಕಳ್ಳತನದಲ್ಲಿ ಉಳಿಸಿಕೊಳ್ಳುತ್ತಾರೆಂದು ಕೇಳಿದ್ದೇನೆ. ಅದಕ್ಕೆ ಒಬ್ಬ assessing ಆಫೀಸರನ್ನು ಹಾಕಿ, ರೋಗಿಗಳು ಆದಾಯವನ್ನು ಕಡಮೆ ಕೊಡದೆ ಇರುವ ಹಾಗೆ ಮಾಡಿದರೆ ಆಸ್ಪತ್ರೆಗಳ ವರಮಾನವನ್ನು ಹೆಚ್ಚಿಸಬಹುದೆಂದು ನಾನು ಅಭಿಪ್ರಾಯ ಪಡುತ್ತೇನೆ.

ವೈದ್ಯಕೀಯ ಸಹಾಯಕ್ಕೆ ಬಂದಂಥ ರೋಗಿಗಳಿಂದಲೇ ಆಸ್ಪತ್ರೆಗಳಲ್ಲಿ ಸರಿಯಾದ ವರಮಾನವನ್ನು ತಿಳಿದುಕೊಳ್ಳುವುದಕ್ಕೆ ಆಗದೆ ಹೋದರೆ, ಅವರ ಖಾಯಂ ವಿಳಾಸಗಳನ್ನು ಪಡೆದು ಆಯಾ ಸ್ಥಳಗಳಿಂದ ಮಾಹಿತಿಯನ್ನು ಪಡೆದು ಅವರಿಂದ ಬರಬೇಕಾಗುವ ಹಣವನ್ನು ವಸೂಲ್ಮಾಡಬೇಕು. ಒಂದು ವೇಳೆ ತಕ್ಷಣ ವಸೂಲ್ಮಾಡುವುದಕ್ಕೆ ಆಗದೆ ಇದ್ದ ಪಕ್ಷದಲ್ಲಿ ನಿಧಾನವಾಗಿಯಾದರೂ ಸ್ಥಳದ ತಹಸೀಲ್ದಾರರ ಮೂಲಕ ವಸೂಲ್ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಅನೇಕ ವೇಳೆ ವಿಕ್ಟೋರಿಯಾ, ವಾಣಿವಿಲಾಸ, ಬೌರಿಂಗ್ ಇಂಥ ಆಸ್ಪತ್ರೆಗಳಿಗೆ ರೋಗಿಗಳು ಚಿಕ್ಕ ಚಿಕ್ಕ ಆಸ್ಪತ್ರೆಗಳಿಂದ Barium meal examination, X-ray ಮುಂತಾದುವುಗಳಿಗೆ ಚೀಟಿಗಳನ್ನು ತೆಗೆದುಕೊಂಡು ಬರುತ್ತಾರೆ. ಅಂಥವರಿಗೆ ಹತ್ತು ದಿನಬಿಟ್ಟು ಬನ್ನಿ, Barium meal ಪರೀಕ್ಷೆಗೆ ಆರು ದಿವಸ ಬಿಟ್ಟು ಬನ್ನಿ, ಮತ್ತೊಂದಕ್ಕೆ ಒಂದೆರಡು ದಿವಸ ಬಿಟ್ಟು ಬನ್ನಿ ಎಂದು ಹೇಳುತ್ತಾರೆ. ಹೀಗೆ ಹೇಳಿದರೆ ಹೊರಗಡೆಯಿಂದ ಬಂದ ರೋಗಿಗಳು ಎಷ್ಟೋ ತೊಂದರೆ ಪಡಬೇಕಾಗುತ್ತದೆ. ಆದುದರಿಂದ ಅಂಥವರಿಗೆ ಬಂದ ಕೂಡಲೇ ಪರೀಕ್ಷೆ ನಡೆಸುವುದಕ್ಕೆ ಏರ್ಪಾಡಾಗಲೀ, ಹಾಗೆ ಸಾಧ್ಯವಿಲ್ಲದೆ ಇದ್ದರೆ ಬಂದ ಒಂದೆರಡು ದಿನಗಳಲ್ಲಿ ಪರೀಕ್ಷೆ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಸಲಹೆ ಮಾಡುತ್ತೇನೆ ಮತ್ತು ಇವರು ಅಷ್ಟು ದಿನಗಳು ಇರಲು ವಸತಿ ಸೌಕರ್ಯವನ್ನು ಏರ್ಪಾಡು ಮಾಡಿಕೊಡಬೇಕೆಂದು ಹೇಳುತ್ತೇನೆ.

ಈಗ ಗುಲ್ಬರ್ಗ, ಮತ್ತು ಮಂಗಳೂರುಗಳಲ್ಲಿ ಮೆಡಿಕಲ್ ಕಾಲೇಜುಗಳು ಸ್ಥಾಪಿತವಾಗಬೇಕಾಗಿವೆ. ಮಂಗಳೂರಿನಲ್ಲಿ Chemical facilities ಇರುವುದರಿಂದ ಅಲ್ಲಿ ಒಂದು ಕಾಲೇಜನ್ನು ಸ್ಥಾಪಿಸಬೇಕೆಂದು ಹೇಳುತ್ತೇನೆ.

ಬೆಂಗಳೂರಿನಲ್ಲಿರುವ ಮೆಡಿಕಲ್ ಕಾಲೇಜಿನಲ್ಲಿ ಬಹಳ ದಿನಗಳಿಂದ Lecturers, Assistant Professors ಮತ್ತು Professors ಸ್ಥಳಗಳು ಖಾಲಿ ಬಿದ್ದಿವೆ. ಆದರಿಂದ ಪಾಠಗಳು ಸಾಕಾದಷ್ಟು ರೀತಿಯಲ್ಲಿ ನಡೆಯುತ್ತಿಲ್ಲವೆಂದು ವಿದ್ಯಾರ್ಥಿಗಳು ಹೇಳುತ್ತಿದ್ದಾರೆ. ಖಾಲಿಯಾಗಿರುವ ಸ್ಥಳಗಳಿಗೆ ಜನರನ್ನು ನೇಮಿಸಿ ಪಾಠಗಳು ಸರಿಯಾಗಿ ನಡೆಯುವಂತೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ, ಸ್ವಾಮಿ.

ಬೆಂಗಳೂರಿನಲ್ಲಿ ಒಂದು Christian College ಆಗುವುದರಲ್ಲಿದೆ. ಅಲ್ಲಿ ಸೀಟುಗಳನ್ನು ಹಂಚುವಾಗ ಒಂದೇ ಪಂಗಡದವರಿಗೆ, ಪಕ್ಷದವರಿಗೆ, ಜಾತಿಯವರಿಗೆ ಎಲ್ಲ ಸೀಟುಗಳೂ ಹೋಗುತ್ತವೆಯೋ ಏನೋ ಅನ್ನಿಸುತ್ತದೆ. ವೆಲ್ಲೂರಿನಲ್ಲಿರುವ ಕಾಲೇಜಿನಲ್ಲಿ 50 ಸೀಟುಗಳಲ್ಲಿ 46 ಸೀಟುಗಳನ್ನೂ Protestant Christians ಗೆ ಮಾತ್ರ ಮೀಸಲಾಗಿಡುವ ಪದ್ಧತಿ ಇದೆ. ಅದೇ ರೀತಿ ಬೆಂಗಳೂರಿನಲ್ಲಿ ಪ್ರಾರಂಭವಾಗಲಿರುವ ಕಾಲೇಜಿನಲ್ಲಿ Catholic Christians ಗೆ ಎಲ್ಲ ಸೀಟುಗಳನ್ನು ಕೊಟ್ಟು ಬೇರೆಯವರಿಗೆ ಸೀಟು ಸಿಕ್ಕುತ್ತದೆಯೋ ಇಲ್ಲವೋ ಎಂದು ಅನುಮಾನವಿದೆ. ಅದಕ್ಕೋಸ್ಕರವಾಗಿ ಅಲ್ಲಿ ಸೀಟುಗಳನ್ನು ಹಂಚುವ ಕಾಲಕ್ಕೆ ಸರ್ಕಾರದವರು ಪ್ರವೇಶ ಮಾಡಿ ಬೇರೆ ಕಾಲೇಜುಗಳಿಗೆ ಹೇಗೆ ಸೀಟುಗಳನ್ನು ಹಂಚುತ್ತಾರೆಯೋ ಅದೇ ರೀತಿ ಹಂಚುವುದಕ್ಕೆ ಏರ್ಪಾಡು ಮಾಡಬೇಕೆಂದು ಈಗಲೇ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ.

ಬೆಂಗಳೂರು ಕಾಲೇಜಿನಲ್ಲಿ M. D. Course ಪ್ರಾರಂಭಿಸಿದ್ದಾರೆ. ಅದಕ್ಕೆ ಸರ್ಕಾರವನ್ನು ನಾವು ಅಭಿನಂದಿಸಬೇಕು. M. D. Seats ಇಷ್ಟೇ ಇರಬೇಕು ಎಂದು ಖಚಿತವಾಗಿದೆ. ಆದರೆ ಇಲ್ಲಿಗೆ ಸೇರುವುದಕ್ಕೆ ಅವಕಾಶ ಸಿಕ್ಕದೆ ಇರತಕ್ಕ ಕೆಲವು ವೈದ್ಯರು ಹೊರಗಡೆ ಕಲ್ಕತ್ತ, ದೆಹಲಿ, ಲಕ್ನೋ ಇಂಥ ಕಡೆ ಇರುವ ಕಾಲೇಜುಗಳಲ್ಲಿ M. D. ವ್ಯಾಸಂಗಕ್ಕೆ ಸೇರಿ ಹೆಚ್ಚಿನ ತಜ್ಞತೆಯನ್ನು ಪಡೆಯಲು ರಜ ಕೇಳುತ್ತಿದ್ದಾರೆ ಏನೋ ಕಾರಣದಿಂದ ಅವರಿಗೆ ರಜ ಕೊಡುತ್ತಿಲ್ಲ. ಒಂದ ಡಾಕ್ಟರುಗಳ ಅಭಾವವಿದೆ ಎಂದು ಮೆಡಿಕಲ್ ಕಾಲೇಜುಗಳನ್ನು ಸ್ಥಾಪನೆ ಮಾಡಲು ಹೊರಟಿದ್ದೇವೆ. ಅವುಗಳಿಗೆ ಹೆಚ್ಚಿನ ವಿದ್ಯಾವಂತರನ್ನು ನೇಮಿಸಬೇಕಾಗಿದೆ. ಅದಕ್ಕೋಸ್ಕರವಾಗಿ ಈಗ ಹೆಚ್ಚಿನ ವ್ಯಾಸಂಗಕ್ಕಾಗಿ ಬೇರೆ ಕಾಲೇಜುಗಳಿಗೆ ಹೋಗಲು ರಜ ಕೇಳಿರುವವರಿಗೆ ರಜ ಕೊಡಬೇಕೆಂದು ಹೇಳುತ್ತೇನೆ.

ಇನ್ನೊಂದು ರೀತಿಯ ಪಕ್ಷಪಾತ ನಡೆಯುತ್ತಿರುವ ಹಾಗೆ ಕಾಣುತ್ತಿದೆ, ಅಮೆರಿಕ, ಇಂಗ್ಲೆಂಡ್ ದೇಶಗಳಿಗೆ ಹೆಚ್ಚಿನ ವ್ಯಾಸಂಗಕ್ಕೆ ಹೋಗಲು ಕೆಲವರು ಅರ್ಜಿಗಳನ್ನು ಕೊಟ್ಟಿದ್ದಾರೆ. ಅವರು ಈಗ ಪರದೇಶಗಳಿಗೆ ಹೋಗಬೇಕಾದ್ದಿಲ್ಲ, ಇಲ್ಲೇ M. D. ಪ್ರಾರಂಭವಾಗಿದೆ ಎಂದು ಕೆಲವರಿಗೆ ಅವಕಾಶ ಕೊಡದೆ ಕೆಲವರಿಗೆ ಮಾತ್ರ ಅವಕಾಶವನ್ನು ಕೊಟ್ಟಿದ್ದಾರೆ. ಇದನ್ನು ಮಂತ್ರಿಗಳು ಚೆನ್ನಾಗಿ ಪರಿಶೀಲನೆ ಮಾಡಿ, ಪಕ್ಷಪಾತ ಏಕೆ ತೋರಿಸಿದ್ದಾರೆ, ಅರ್ಜಿ ಹಾಕಿಕೊಂಡಿರುವ ವಿದ್ಯಾರ್ಥಿಗಳಿಗೆ ಏನು ಅನ್ಯಾಯವಾಗಿದೆ, ಎಂಬುದನ್ನು ನೋಡಿ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ಹೇಳುತ್ತೇನೆ.

ಇನ್ನೊಂದು ಮುಖ್ಯವಾದ ವಿಷಯವೆಂದರೆ ಬಹಳ ಅನುಭವ ಪಡೆದಂಥ ಉಪಾಧ್ಯಾಯರುಗಳು ಮೆಡಿಕಲ್ ಕಾಲೇಜಿನಿಂದ ಜಾರಿಕೊಂಡು ಹೊರಗೆ ಹೋಗುತ್ತಿದ್ದಾರೆ. ಕಾಲೇಜನಲ್ಲಿರುವುದಕ್ಕೆ ಬದಲು ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದರೆ private practice ಸಿಕ್ಕುತ್ತದೆಂದು ಕಾಲೇಜಿನ ಲೆಕ್ಚರರ್ ಹುದ್ದೆಯನ್ನು ಬಿಟ್ಟು ಹೊರಗಡೆ ಹೋಗುತ್ತಿದ್ದಾರೆ.

ಹೆಚ್. ಎಂ. ಟಿ. ಮುಂತಾದ ಕಾರ್ಖಾನೆಗಳಲ್ಲಿ ಅಥವಾ ಖಾಸಗೀ ಆಸ್ಪತ್ರೆಗಳಲ್ಲಿ ಪಾರ್ಟ್‌ಟೈಂ ಕೆಲಸ ಮಾಡಲು ಸೇರಿಕೊಂಡು ಸಂಪಾದನೆಮಾಡಿಕೊಳ್ಳುವುದಕ್ಕಾಗಿ, ಕಾಲೇಜು ತರಗತಿಗಳನ್ನು

(ಶ್ರೀ ಆರ್. ಮುನಿಸ್ವಾಮಯ್ಯ)

ತೆಗೆದುಕೊಂಡು ಬೋಧಿಸುವುದಿಲ್ಲ. ಆದರೂ ಅವರು ವಿಕ್ಟೋರಿಯಾ ಆಸ್ಪತ್ರೆ ಎಂದರೆ, ಕಾಲೇಜು ಪಡೆದಿರುವ ಆಸ್ಪತ್ರೆಯಲ್ಲಿ ಉದ್ಯೋಗ ಮಾತ್ರ ಬೇಕೆಂದು ಸೇರಿದ್ದಾರೆ. ಹತ್ತಾರು ವರ್ಷಗಳಿಂದ ಈ ಆಸ್ಪತ್ರೆಗೇನ ಅಲ್ಲದೆ ಬೌರಿಂಗ್ ಆಸ್ಪತ್ರೆಗೂ ಅಂಟಿಕೊಂಡಿದ್ದಾರೆ. ಇಲಾಖೆಯ ಅಧೀನದಲ್ಲಿರುವ ಬೇರೆಬೇರೆ ದೊಡ್ಡ ಆಸ್ಪತ್ರೆಗಳಿಂದ ಅನುಭವಪಡೆದಿರುವ ಹೆಚ್ಚು ಪರಿಣಿತರಾಗಿರುವ ಮತ್ತು ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ಬೋಧಿಸುವುದಕ್ಕೂ ಒಪ್ಪಿಕೊಳ್ಳುವ ಡಾಕ್ಟರುಗಳನ್ನು ವರ್ಗ ಮಾಡಿಕೊಂಡು ಬೆಂಗಳೂರಿಗೆ ತರಬೇಕೆಂದು ಹೇಳುತ್ತೇನೆ. ಅಥವಾ ಇಲ್ಲಿರುವ ಡಾಕ್ಟರುಗಳಿಗೆ ಹೊರಗಡೆ ಕಾರ್ಖಾನೆ ಮುಂತಾದುವುಗಳಲ್ಲಿ ಪಾರ್ಟ್‌ಟೈಂ ಕೆಲಸಮಾಡುವುದಕ್ಕೆ ಹೋಗಲು ಅವಕಾಶ ಕೊಡಬಾರದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮೀ, ಈ ಸಭೆಯ ಮುಂದೆ ಇರುವ ವೈದ್ಯ ಮತ್ತು ಜನಾರೋಗ್ಯ ರಕ್ಷಣೆ ಇಲಾಖೆಯ ಬೇಡಿಕೆಗಳನ್ನು ನಾನು ವಿರೋಧಿಸುತ್ತೇನೆ.

ಇತ್ತೀಚೆಗೆ ಸರಕಾರದವರು ಆಸ್ಪತ್ರೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ತೆರೆಯುತ್ತಿದ್ದಾರೆ. ಇದು ಬಹಳ ಸಂತೋಷದ ವಿಷಯ. ಆದರೆ ನಮ್ಮ ಸರಕಾರಕ್ಕೆ ಈ ದೇಶದಲ್ಲಿ ಎಷ್ಟು ಆಸ್ಪತ್ರೆಗಳನ್ನು ತೆರೆದಿದ್ದೇವೆಯೋ ಅದಕ್ಕೆ ತಕ್ಕಷ್ಟು ಜನ ಡಾಕ್ಟರುಗಳು ಇರಬೇಕು ಎನ್ನುವುದು ಅವರ ಲೆಕ್ಕದಲ್ಲಿ ಇದ್ದಹಾಗೆ ಕಾಣಿಸುತ್ತಿಲ್ಲ. ಡಾಕ್ಟರರುಗಳ ಅಭಾವವಿದೆ ಅದನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಸರಕಾರದವರು ನಾನಾ ಸಂದರ್ಭಗಳಲ್ಲಿ ಜನರಿಗೆ ಭರವಸೆ ಕೊಡುತ್ತಿರುತ್ತಾರೆ. ಆದರೆ ಈ ಅಭಾವ ಇನ್ನೂ ಸರಿಹೋಗಲಿಲ್ಲ. ಇದು ಸರಿಹೋಗುವ ಹಾಗೂ ಕಾಣಿಸುವುದಿಲ್ಲ. ಇದಕ್ಕೆ ಕಾರಣವೇನು ಎನ್ನುವುದನ್ನು ಸರಿಯಾಗಿ ಪರಿಶೀಲನೆಮಾಡಿದರೆ ಈ ಇಲಾಖೆಯವರು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಲಿಕ್ಕೆ ತಯಾರಾಗಿರುವ ಹಾಗೆ ಕಾಣುತ್ತಿಲ್ಲ. ಪ್ರತಿ ವರ್ಷವೂ ಎಷ್ಟೋ ಡಾಕ್ಟರರುಗಳು ಬೇರೆ ಪ್ರಾಂತ್ಯಗಳಿಗೆ, ನೂರಾರು ಸಂಖ್ಯೆಯಲ್ಲಿ ಹೋಗುತ್ತಿರುವುದನ್ನು ನೋಡುತ್ತಿದ್ದೇವೆ. ಅದಕ್ಕೆ ಕಾರಣ ಸ್ವಾಭಾವಿಕವಾಗಿ ತಿಳಿದದ್ದು. ಬೇರೆ ಪ್ರಾಂತಗಳಲ್ಲಿ ಕೊಡುವ ಸಂಬಳದ ಸ್ಕೇಲುಗಳಿಗೂ ನಮ್ಮ ಪ್ರಾಂತದಲ್ಲಿ ಕೊಡುವ ಸ್ಕೇಲುಗಳಿಗೂ ಏನೇನೂ ಸಂಬಂಧವಿಲ್ಲ. ಬೇರೆ ಪ್ರಾಂತಗಳಲ್ಲಿ ಹೆಚ್ಚಿನ ಸಂಬಳ ಮತ್ತು ಹೆಚ್ಚಿನ ಅನುಕೂಲಗಳು ಈ ದಿನ ಇದೆ ನಮ್ಮ ಪ್ರಾಂತದಲ್ಲಿರುವ ಸ್ಕೇಲುಗಳು ಕಡಿಮೆಯಿರುವುದರಿಂದ, ಡಾಕ್ಟರುಗಳು ಹೊರಗಡೆಗೆ ಹೋಗುತ್ತಿದ್ದಾರೆ.

ಇನ್ನೊಂದು ವ್ಯಸನಕರವಾದ ವಿಷಯ ಇದೆ. ಈ ಇಲಾಖೆಯಲ್ಲಿರುವ ಉನ್ನತ ಅಧಿಕಾರಿಗಳು ಡಾಕ್ಟರುಗಳಾಗಿರುವವರನ್ನು ಪೋಲೀಸು ಇಲಾಖೆಯ ಪೋಲೀಸರಂತೆ ಕನಿಷ್ಟವಾಗಿ ಕಡಿಮೆ ರೀತಿಯಲ್ಲಿ ಕಾಣುತ್ತಾರೆ. ಅವರು ಸಮಾಜದಲ್ಲಿ ಬಹಳ ಮುಖ್ಯವಾದ ಪಾತ್ರ ವಹಿಸತಕ್ಕ ಇಂತಹ ಡಾಕ್ಟರುಗಳನ್ನು ಇಲಾಖೆಯ ಉನ್ನತ ಅಧಿಕಾರಿಗಳು ಸ್ವಲ್ಪ ಕನಿಕರ ದೃಷ್ಟಿಯಿಂದ ನೋಡಿಕೊಂಡು ಅವರ ಸಮಸ್ಯೆಗಳನ್ನು ಬಗೆಹರಿಸಬೇಕು ನನಗೇ ಗೊತ್ತಿರುವ ಹಾಗೆ L. M. P. ಪಾಸಾಗಿರುವ ಡಾಕ್ಟರುಗಳು ಈಚೆಗೆ M. B. B. S. ನ್ನು ಪಾಸುಮಾಡಿ ಕೆಲಸ ಮಾಡುತ್ತಿರುವವರಿಗೆ ಇನ್ನೂ L. M. P. Scale ನ ಸಂಬಳವನ್ನೇ ಕೊಡುತ್ತಿದ್ದಾರೆ. ಇದರ ಬಗ್ಗೆ ಅಧಿಕಾರಿಗಳಲ್ಲಿ ಅವರು ಕೇಳಿಕೊಂಡರೂ ಅದಿನ್ನೂ ಪರಿಹಾರವಾಗಿಲ್ಲ. ಹಾಗೇ ಪರಿಸ್ಥಿತಿ ಮುಂದುವರಿಯುತ್ತಿದೆ. ಡಾಕ್ಟರುಗಳ ಅಭಾವವಿದೆ, ಡಾಕ್ಟರುಗಳನ್ನು ಸರಿಯಾಗಿ ನೋಡಿಕೊಳ್ಳಬೇಕೆಂದು ನಮ್ಮ ಮಂತ್ರಿಗಳಲ್ಲಿ ನಾವು ಆಗಿಂದಾಗ್ಗೆ ಹೇಳುತ್ತಿರುತ್ತೇವೆ. ಇದರ ಬಗ್ಗೆ ಕೆಲವು ಸಲಹೆಗಳನ್ನು ನಾನಾಗಲೇ ಮಂತ್ರಿಗಳಿಗೆ ಕೊಟ್ಟಿದ್ದೇನೆ. ಇಲ್ಲಿ ಹೆಸರುಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಕೆಲವರಿಗೆ ಅನ್ಯಾಯವಾಗಿದೆ ಎನ್ನುವುದೂ ಮಂತ್ರಿಗಳಿಗೆ ಗೊತ್ತಿದೆ. ಆ ಬಗ್ಗೆ ನಮ್ಮ ಮಂತ್ರಿಗಳು ಜಾಗ್ರತೆಯಾದ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದಾರೆಂದು ನಾನು ಭಾವಿಸುತ್ತೇನೆ. ಆದರೆ ಉನ್ನತಾಧಿಕಾರಿಗಳು ಡಾಕ್ಟರುಗಳ ಪೇಪರುಗಳನ್ನು ಡಿಲೇಮಾಡುತ್ತಿದ್ದಾರೆ. ಇದನ್ನು ಈಗಲಾದರೂ ಸರಿಪಡಿಸುತ್ತಾರೆಂದು ನಾನು ಆಶಿಸುತ್ತೇನೆ. ಆದರೆ ಇಲಾಖೆಯ ಅಧಿಕಾರಿಗಳಿಗೂ ಸರಕಾರಕ್ಕೂ ಏನೇನೂ ಸಂಬಂಧವಿರುವಹಾಗೆ ಕಾಣುವುದಿಲ್ಲ. ನಮ್ಮ ಕೋಲಾರದ ಜಿಲ್ಲಾ ಆಸ್ಪತ್ರೆಗಳಲ್ಲಿ ಬಹಳ ನ್ಯೂನತೆಗಳಿದ್ದು ಅದರ ಬಗ್ಗೆ ಈಗಿನ ಮಂತ್ರಿಗಳಿಗೂ ಹಿಂದೆ ಒಂದಿದ್ದಂತಹ ಮಂತ್ರಿಗಳಿಗೂ ಮತ್ತು ಈ ಮಾನ್ಯ ಸಭೆಗೂ ತಿಳಿಸಿದ್ದೆ. ಮತ್ತು ಮನವಿಯನ್ನೂ ಸಲ್ಲಿಸಿದ್ದೇನೆ. ಅನೇಕ ಸಾರಿ ಮಂತ್ರಿಗಳನ್ನೂ ಭೇಟಿಮಾಡಿ ತಿಳಿಸಿದ್ದೇನೆ. ಅಲ್ಲಿ ಈಗಿರುವ ಸ್ಥಳಾವಕಾಶ ಸಾಲದು ನೂರಾರು ಜನ ಪೇಷೆಂಟುಗಳು ಜಾಗ ಸಿಗದೆಹೋಗುವ ಪರಿಸ್ಥಿತಿ ಇದೆ. ಆದರಿಂದ ಈಗಿರುವ ಆಸ್ಪತ್ರೆಗೆ ಒಂದು upstair ನ್ನು ಕಟ್ಟಿಸಿಕೊಡಬೇಕೆಂದು ಕೇಳುತ್ತಿದ್ದೇವೆ. ಅದರ ಬಗ್ಗೆ ಮಂತ್ರಿಗಳೂ ಭರವಸೆ ಕೊಟ್ಟಿರುತ್ತಾರೆ. ಮತ್ತು P. W. D. ಇಲಾಖೆಯವರು ಟೆಂಡರೂ ಕರೆದದ್ದೂ ಆಯಿತು. ಆದರೆ

ಇದಕ್ಕೆ ಇನ್ನೂ ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಸಿಕ್ಕಿಲ್ಲ ಎಂದು ಗೊತ್ತಾಗಿದೆ. ಇದು ಉನ್ನತಾಧಿಕಾರಿಗಳ ಕೆಲಸದಿಂದಾಗಿ ನಿಧಾನವಾಗಿದೆ ಎಂದು ತೋರುತ್ತದೆ. ಇದೂ ಅಲ್ಲದೆ ಅಲ್ಲಿಗೆ Post operation ward ಆರು ರೂಮುಗಳ, ಒಂದು ರೆಸ್ಟ್ ಹೌಸು, ಈ ಆಸ್ಪತ್ರೆಗೆ ಅನುಕೂಲವಾಗುವಂತಹ ಒಂದು ವಾಟರು ಟ್ಯಾಂಕು ಕಟ್ಟಿಸಿಕೊಡಬೇಕೆಂದು ಅನೇಕಸಾರಿ ಮಂತ್ರಿಗಳಿಗೂ ಅಧಿಕಾರಿಗಳಿಗೂ ತಿಳಿಸಿದ್ದೇನೆ ಸರಕಾರದವರು ಈಗಲಾದರೂ ಬೇಗ ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ನು ಕೊಟ್ಟು ಕೋಲಾರದ ಆಸ್ಪತ್ರೆಗೆ upstair ನ್ನು ಕಟ್ಟಲು ಅನುಕೂಲಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇಷ್ಟೇ ಅಲ್ಲದೇ ಅನಭವಸ್ಥರಾದ ಡಾಕ್ಟರುಗಳ ಅಭಾವವನ್ನು ಏನಾದರೂಮಾಡಿ ಹೋಗಲಾಡಿಸಬೇಕಾದರೆ ಅದಕ್ಕೆ ತಾವು ಪರಿಣಾಮಕಾರಿಯಾದ ಕ್ರಮಗಳನ್ನೇ ತೆಗೆದುಕೊಳ್ಳಬೇಕಾಗಿದೆ, ನಾನು ಒಂದು ಸಲಹೆಯನ್ನು ಸೂಚಿಸುತ್ತೇನೆ. ತಾವು ಪಟ್ಟಣಗಳಲ್ಲಿರುವ ಡಾಕ್ಟರುಗಳಿಗೆ ಹೆಚ್ಚಿನ ಅನುಕೂಲಗಳನ್ನು ಸಂಬಳಗಳನ್ನು ಕೊಡುತ್ತಿರುವಂತೆ ಹಳ್ಳಿಗಳಲ್ಲಿರುವ ಡಾಕ್ಟರುಗಳಿಗೂ ಅಷ್ಟೇ ಸಂಬಳಕೊಡದೇ ಇರುವುದರಿಂದ ಡಾಕ್ಟರುಗಳು ಹಳ್ಳಿಗಳಿಗೆ ಬರುತ್ತಿಲ್ಲ. ಇದಕ್ಕಾಗಿ ಹಳ್ಳಿಗಳಲ್ಲಿಯೇ ಕೆಲಸಮಾಡಲು ಬರುವಂತಹ ಡಾಕ್ಟರುಗಳಿಗೆ ತಿಂಗಳ 50 ರೂ. ಗಳನ್ನು ಒಂದು ರೀತಿ incentive bonus ನಂತೆ ಹೆಚ್ಚಿಗೆ ಕೊಡುವುದಾದರೆ ಹೆಚ್ಚಿನ ಸಂಖ್ಯೆಯಲ್ಲಿ ಡಾಕ್ಟರುಗಳು ಹಳ್ಳಿಗಳಿಗೆ ಬರಲು ಇಷ್ಟಪಡುತ್ತಾರೆ. ಈ ರೀತಿಯಾದ ಒಂದು ತರಹೆ incentive ಕೊಡುವುದರ ಬಗ್ಗೆ ಸರಕಾರ ಪರಿಶೀಲಸಬೇಕೆಂದು ಕೇಳಿಕೊಳ್ಳುತ್ತೇನೆ.

ಮೆಡಿಕಲ್ ಕಾಲೇಜುಗಳಲ್ಲಿ ಸೀಟುಗಳನ್ನು ಕೊಡುವಾಗ ಈಗ ಮೆರಿಟ್ಟಿನ ಮೇಲೆ ಸೀಟುಗಳನ್ನು ಕೊಡಬೇಕೆಂದು ಮಾಡಿದ್ದಾರೆ. ಆದರೆ ಇದರಂತೆ ಸೀಟಿಗಾಗಿ ಬರುವವರೆಲ್ಲ ಪಟ್ಟಣಗಳಿಗೆ ಸೇರಿದ ವಿದ್ಯಾರ್ಥಿಗಳೆ ಬರುತ್ತಾರೆಯೇ ಹೊರತು, ಹಳ್ಳಿಗಾಡಿನಿಂದ ಬಂದ ಹುಡುಗರಿಗೆ ಸೀಟುಗಳು ಸಿಗುತ್ತಿಲ್ಲ ಸರಕಾರದವರು ಈ ಕ್ರಮವನ್ನು ಅನುಸರಿಸುತ್ತಿರುವುದರಿಂದ ದೊಡ್ಡ ದೊಡ್ಡ ಪಟ್ಟಣಗಳಿಗೇ ಸೇರಿದ ವಿದ್ಯಾರ್ಥಿಗಳಿಗೇ ಮಾತ್ರ ಸೀಟುಗಳು ದೊರೆಯುತ್ತಿದೆ. ಈ ನೀತಿಯನ್ನನುಸರಿಸುವುದಕ್ಕೆ ಬದಲಾಗಿ ಹಳ್ಳಿಗಾಡಿನಿಂದ ಬರುವ ವಿದ್ಯಾರ್ಥಿಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಸೀಟುಗಳನ್ನು ಕೊಟ್ಟರೆ ಹಳ್ಳಿಗಾಡಿಗೆ ಹೆಚ್ಚಿನ ಡಾಕ್ಟರುಗಳನ್ನು ಬರುವಂತೆ ಮಾಡಿಕೊಳ್ಳಬಹುದು. ಇದರಿಂದ ಹಳ್ಳಿಗಳಲ್ಲಿ. ಡಾಕ್ಟರುಗಳ ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸಬಹುದೆಂದು ಸಲಹೆ ಮಾಡುತ್ತೇನೆ. ಈ ಬಗ್ಗೆ ಸರಕಾರ ತೀವ್ರಗಮನಕೊಡುತ್ತದೆಂದು ಆಶಿಸುತ್ತೇನೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಪಿ. ಘಾಯದೆ (ಅಂಕೋಲ).—ಮಾನ್ಯ ಸಭಾಪತಿಗಳೇ, ವೈದ್ಯಕೀಯ ಮತ್ತು ಜನಾರೋಗ್ಯ ರಕ್ಷಣಾ ಇಲಾಖೆಯ ಡಿಮ್ಯಾಂಡುಗಳನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತೇನೆ.

ಈ ಸಂದರ್ಭದಲ್ಲಿ ಸರಕಾರಕ್ಕೆ ನನ್ನ ಜಿಲ್ಲೆಯ ಬಗ್ಗೆ ಇರುವ ಕೆಲವು ತೊಂದರೆಗಳನ್ನು ತಮ್ಮ ಮೂಲಕ ತಿಳಿಸಬೇಕೆಂದು ಆಶಿಸುತ್ತೇನೆ. ಈ ಬಗ್ಗೆ ಕಳೆದ ಸೆಷಿನ್ನಿನಲ್ಲಿ ಒಂದು ಪ್ರಶ್ನೆ ಕೇಳಿದಾಗ, ಈ ದೇಶದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಡಾಕ್ಟರುಗಳಿಲ್ಲ ಎಂದು ಹೇಳಿದರು. ನಮ್ಮ ಜಿಲ್ಲೆಯಲ್ಲೂ ಎಷ್ಟೋ ದವಾಖಾನೆಗಳಲ್ಲಿ ಡಾಕ್ಟರುಗಳಿಲ್ಲದೆ ಖಾಲಿ ಇವೆ ಎಂದು ಕೇಳಿದ್ದೇನೆ. ಈ ಬಗ್ಗೆ ಎಷ್ಟು ಇದೆ ಎನ್ನುವ ಮಾಹಿತಿಯನ್ನು ಕೂಡ ನಾನು ಕೇಳಿದ್ದೆ. ಅದೂ ಕೂಡ ಸಿಗಲಿಲ್ಲ. ಸಾಧಾರಣವಾಗಿ ಶೇಕಡ ಐವತ್ತರಷ್ಟು ದವಾಖಾನೆಗಳಲ್ಲಿ ಡಾಕ್ಟರುಗಳಿಲ್ಲದೆ ಖಾಲಿ ಇವೆ ಎಂದು ನನಗೆ ತಿಳಿದು ಬಂದಿದೆ. ಎರಡು ಮೂರು ಉದಾಹರಣೆಗಳನ್ನು ಹೇಳುತ್ತೇನೆ. ಮುಂಡಗೋಡಗೆ ಸೇರಿದ ತಾತೂರ ಗ್ರಾಮದಲ್ಲಿ ಒಂದು ಮೊಬೈಲ್ ಡಿಸ್‌ಪೆನ್‌ಸರಿ ಇದೆ. ಮೊಬೈಲ್ ವ್ಯಾನ್ ಇದೆ. ಡ್ರೈವರು ಇದ್ದಾರೆ, ಎಲ್ಲರೂ ಇದ್ದಾರೆ. ಆದರೆ ಡಾಕ್ಟರರೇ ಇಲ್ಲ. ಇಷ್ಟು ಕಾಲವಾದರೂ ಇಲ್ಲಿಗೆ ಡಾಕ್ಟರರನ್ನು ಇನ್ನೂ ನೇಮಕ ಮಾಡಿದ ಹಾಗಿಲ್ಲ. ಈ ಮೊಬೈಲ್ ಡಿಸ್‌ಪೆನ್ಸರಿಯಲ್ಲಿ ಡ್ರೈವರು ಇತರ ಎಲ್ಲಾ ನೌಕರರೂ ಇದ್ದಾರೆ ಮುಖ್ಯವಾದ ಡಾಕ್ಟರುಗಳೇ ಇಲ್ಲದಿದ್ದರೆ ಇದರಿಂದ ಜನಕ್ಕೆ ಉಪಯೋಗ ಹೇಗೆ ಸಿಗುತ್ತದೆ. ಇದರ ಬಗ್ಗೆ ಹಿಂದೆ ಒಂದು ಪ್ರಶ್ನೆ ಕೇಳಿದಾಗ ಮುಂಡಗೋಡು ತಾಲ್ಲೂಕಿನ ಡಾಕ್ಟರುಗಳೇ ಅಲ್ಲಿಗೆ ಹೋಗಿ ಬರುವಂತೆ ವ್ಯವಸ್ಥೆ ಮಾಡಿದೆ ಎಂದು ಹೇಳಿದರು. ಇದರಿಂದ ಎಷ್ಟುಮಟ್ಟಿಗೆ ಹಳ್ಳಿಯವರೆಗೆ ಉಪಯೋಗವಾಗುತ್ತದೆ ಎನ್ನುವುದನ್ನು ತಾವೇ ವಿಚಾರ ಮಾಡಬೇಕು. ತಹಶೀಲಿನಲ್ಲಿರುವ ಒಬ್ಬರು ಡಾಕ್ಟರು ಹಳ್ಳಿಗಳಿಗೆ ಬಂದು ಒಂದು ತಾಸು ಹಳ್ಳಿಗಳಲ್ಲಿ ಔಷಧಿ ಕೊಡುತ್ತ ಹೋದರೆ, ಅದರಿಂದ ಹಳ್ಳಿಯ ಜನಕ್ಕೆ ಏನು ಉಪಯೋಗವಾಗುತ್ತದೆ, ಅವರ ಕಷ್ಟಗಳನ್ನು ತಿಳಿಯುವುದಕ್ಕೆ ಹೇಗೆ ಸಾಧ್ಯವಾಗುತ್ತದೆ. ಈ ರೀತಿ ಎಷ್ಟೋ ತಾಲ್ಲೂಕುಗಳಲ್ಲಿವೆ. ಅಂಕೋಲದಲ್ಲಿರುವ ರಾಮನಹಳ್ಳಿ ಆಸ್ಪತ್ರೆ ಇದೆ. ಅಲ್ಲಿಯೂ ಕೂಡ ಬಹುಕಾಲದಿಂದಲೂ

(ಶ್ರೀ ಎಸ್. ಪಿ. ಫಾಯಿದೆ)

ಡಾಕ್ಟರಿಲ್ಲ. ಎಂದು ಹೇಳುವುದು ಬಹಳ ವಿಷಾದದ ಸಂಗತಿ. ಹಾಗೆ ಮುಂಚಕೇರೆಯಲ್ಲಿ ಡಿಸ್‌ಪೆನ್‌ಸರಿಯಲ್ಲಿಯೂ ಡಾಕ್ಟರಿಲ್ಲದೆ ಎಂಟು ತಿಂಗಳಾಗಿವೆ. ಇನ್ನೂ ಇಲ್ಲಿಯ ಜನಕ್ಕೆ ಡಾಕ್ಟರರ ಸಹಾಯ ಸಿಕ್ಕಿಲ್ಲ. ಅಲ್ಲಿ ಇನ್ನೂ ಪರಿಹಾರ ಸಿಕ್ಕಿಲ್ಲ. ಪ್ರೈವೇಟ್ ಪ್ರಾಕ್ಟೀಶನರ್ಸ್ ಯಾರೂ ಇಲ್ಲ. ಈ ರೀತಿಯಾದರೆ ಅಲ್ಲಿಯ ಜನರ ಅವಸ್ಥೆ ಏನಾಗಬಹುದು ಎನ್ನುವುದನ್ನು ಸರಕಾರ ಯೋಚನೆ ಮಾಡಬೇಕು. ದೇಶದಲ್ಲಿ ಇಂದು ಡಾಕ್ಟರರ ಅಭಾವ ಹೆಚ್ಚಾಗಿದೆ. ನಮ್ಮ ತಾಲ್ಲೂಕಿನಲ್ಲಿ ಒಂದು ಕಡೆ ಡಾಕ್ಟರ್ ಇಲ್ಲದೆ 8 ತಿಂಗಳಾಯಿತು. ಡಿಸ್ಪೆನ್ಸರಿ ಖಾಲಿ ಇಡುವದರಿಂದ ಜನರಿಗೆ ಏನು ತೊಂದರೆಯಾಗುತ್ತದೆ ಎಂಬುದಕ್ಕೆ ಮಾನ್ಯ ಸಚಿವರು ಲಕ್ಷ್ಯ ವಹಿಸಬೇಕು. ಈ ರೀತಿ ಮಾಡಬಾರದು ಎಂದು ಕೇಳಿಕೊಳ್ಳುತ್ತೇನೆ.

ನಮ್ಮ ಮುಂಬಯಿ ಕರ್ನಾಟಕ ಭಾಗದಲ್ಲಿ ಎಸ್. ಎಂ. ಪಿ. ಡಿಸ್ಪೆನ್ಸರೀಜ ಇವೆ. ಅದರಲ್ಲಿ ಆಯುರ್ವೇದ ಅಲೋಪಥಿ ಎರಡೂ ಇವೆ. ನಮ್ಮ ಹಲ್ಯಾಳ ತಾಲ್ಲೂಕಿನಲ್ಲಿ ಮುರಕವಾಡದಲ್ಲಿ ಒಂದು SMP dispensary ಇದೆ. ಅಲ್ಲಿಗೆ ಅಲೋಪಥಿ ಡಾಕ್ಟರರು ಯಾರೂ ಬರಲಿಲ್ಲ. ಅಲ್ಲಿ ಆಯುರ್ವೇದ ಡಾಕ್ಟರರ ನೇಮಕಮಾಡಿ ಎಂದು ಅಲ್ಲಿಯ ಪಂಚಾಯತಿ ಕಮಿಟಿಯವರು ತಾಲ್ಲೂಕ್ ಬೋರ್ಡ್ ಅವರಿಗೆ ವಿನಂತಿ ಮಾಡಿಕೊಂಡರು. ಆದರೂ ಸಹ ಡಾಕ್ಟರರ ನೇಮಕ ಮಾಡಿಲ್ಲ. ಅಲೋಪಥಿ ಡಾಕ್ಟರ್ ಸಿಕ್ಕದೇ ಇದ್ದರೆ ಆಯುರ್ವೇದ ಡಾಕ್ಟರರನ್ನಾದರೂ ಕೊಡಬಹುದಾಗಿತ್ತು. ಯಾರೂ ಇಲ್ಲದೇ ಬಹಳ ಕಾಲ ಖಾಲಿ ಇರುವುದು ವಿಷಾದಕರ. ಇದರಲ್ಲಿರುವ ಅಡಚಣೆಗಳನ್ನು ಆದಷ್ಟು ಬೇಗ ಪರಿಹರಿಸಬೇಕು. ಮತ್ತು ಈ ವಿಚಾರದಲ್ಲಿ ಬೇಗ ನಿರ್ಣಯ ಮಾಡಬೇಕು. ಯಾಕಂದರೆ ಮಲೆನಾಡು ಪ್ರದೇಶದಲ್ಲಿ ಡಾಕ್ಟರರ ಅಭಾವ ಬಹಳ ದಿವಸ ಇಡಬಾರದು. ಎರಡು ಮೂರು ತಿಂಗಳಿನಲ್ಲಿ ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ತಾಲ್ಲೂಕ್ ಬೋರ್ಡ್ ಡಿಸ್ಪೆನ್ಸರಿಗಳು ಮೆಡಿಕಲ್ ಇಂಡೆಂಟ್ ಮೆಡಿಕಲ್ ಸ್ಟೋರ್ಸಿಗೆ ಮಾಡಬೇಕಾಗುತ್ತದೆ. ಮೆಡಿಸಿನ್ಸ್ ಸಕಾಲದಲ್ಲಿ ಬರುವದಿಲ್ಲ. ಇದರಿಂದ ಬಹಳ ತೊಂದರೆಯಾಗುತ್ತಿದೆ. ಮೆಡಿಸಿನ್ಸ್ ಮೆಡಿಕಲ್ ಸ್ಟೋರ್ಸಿನಿಂದ ಸಿಕ್ಕದೇ ಹೋದರೆ ಅಲ್ಲಲ್ಲಿಯೇ ಅವರು ಕೊಂಡುಕೊಳ್ಳುವ ವ್ಯವಸ್ಥೆ ಮಾಡಬೇಕು. ನಾನು ತಿಳಿಸಿದ ತೊಂದರೆಗಳ ನಿವಾರಣೆಗೆ ಲಕ್ಷ್ಯ ವಹಿಸಿ ಸೂಕ್ತ ಸಲಹೆ ಮಾಡಬೇಕೆಂದು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, ವೈದ್ಯಕೀಯ ಇಲಾಖೆ ಮತ್ತು ಜನಾರೋಗ್ಯ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡುವುದು ದುರ್ದೈವದ ಸಂಗತಿಯಾಗಿದೆ. ವೈದ್ಯಕೀಯ ಇಲಾಖೆಗೆ ಒಬ್ಬ ಡೈರೆಕ್ಟರ್ ಮತ್ತು ಜನಾರೋಗ್ಯ ಇಲಾಖೆಗೆ ಪ್ರತ್ಯೇಕವಾದ ಡೈರೆಕ್ಟರ್ ಹೀಗೆ ಎರಡು ಡೈರೆಕ್ಟರುಗಳು ಕೆಲಸ ಮಾಡುತ್ತಿರುವದರಿಂದ ಎತ್ತು ಏರಿಗೆ ಎಳೆದರೆ ಕೋಣ ನೀರಿಗೆ ಎಂಬಂತಾಗಿ ಯಾವ ಹೊಂದಾಣಿಕೆಯಿಲ್ಲ. ಜನತೆಯ ಆರೋಗ್ಯ ರಕ್ಷಣೆಯಾಗುತ್ತಿಲ್ಲ ಈ ಎರಡು ಇಲಾಖೆಗಳನ್ನು ಬೈಫರ್‌ಕೇಟ ಮಾಡಿರುವದರಿಂದ ಯಾವ ಹೊಂದಾಣಿಕೆಯಿಲ್ಲ. ಎಜ್ಯುಕೇಷನ್ ಡಿಪಾರ್ಟ್‌ಮೆಂಟಿನ ಮೇಲೆ ಯಾವ ರೀತಿ ಟೀಕೆ ಟಿಪ್ಪಣಿಗಳು ಆಗುತ್ತಿವೋ ಅದೇ ರೀತಿ ಎರಡು ಇಲಾಖೆಗಳಲ್ಲಿಯೂ ಇದೆ. ಶಿಕ್ಷಣ ಇಲಾಖೆಯಂತೆ ಈ ಎರಡು ಇಲಾಖೆಗಳಲ್ಲಿಯೂ ರಾಜಕೀಯ ಮನೆ ಮಾಡಿಕೊಂಡಿದೆ. ಸರಕಾರ ಇದನ್ನು ಯೋಚನೆ ಮಾಡಬೇಕು.

Sri K. NAGAPPA ALVA.—We have already taken a decision.

Sri C. J. MUCKANNAPPA.—We do not know what happens tomorrow. Some Amavasya will come and you will decide to change the decision because some Director has to be accommodated some where and trouble will crop up.

ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಇದು ರಾಜಕೀಯದ ತೌರಮನೆಯಾಗಿದೆ. ಎಲ್ಲ ಕಡೆ ರಾಜಕೀಯ ಬೆಳೆದಿದೆ. ಡಾಕ್ಟರ್ ನೇಮಕವಾಗಲಿ, ಔಷಧ ತರಿಸುವುದು ಆಗಲಿ, ಮೆಡಿಕಲ್ ಕಾಲೇಜಕ್ಕೆ ಸೀಟು ಕೊಡುವುದು ಆಗಲಿ ಎಲ್ಲದರಲ್ಲೂ ರಾಜಕೀಯ ಬೆಳೆದಿದೆ. ನಮ್ಮ ಆರೋಗ್ಯ ಮಂತ್ರಿಗಳ ಬಗ್ಗೆ ನಾನು ಅಪಾರ ಗೌರವ ಇಟ್ಟುಕೊಂಡಿದ್ದೇನೆ. ಆದರೆ ಈ ಇಲಾಖೆಗೆ ಒದಗಿಸುವ ಹಣದ ದುರುಪಯೋಗವಾಗುತ್ತದೆಂಬ ಭಯವಿದೆ. ಆದ ದರಿಂದ ಮಾನ್ಯ ಸಚಿವರು ಧೈರ್ಯಶಾಲಿಗಳಾಗಿ ದಿಟ್ಟತನದಿಂದ ಹೆಜ್ಜೆ ಇಟ್ಟು ತೀರ್ಮಾನ ತೆಗೆದುಕೊಳ್ಳಬೇಕು. ಈ ಬಗ್ಗೆ ಸ್ಟೇಟಮೆಂಟ್ ಕೊಟ್ಟು ಎಂಟು ದಿನಗಳಾದುವು. ಅಸೆಂಬ್ಲಿ ಪ್ರಾರಂಭವಾಗಿ ಒಂದು ತಿಂಗಳಾಯಿತು. ಗೆಜೆಟ್

ನೋಟಿಫಿಕೇಷನ್ ಆಗಲಿ ಗವರ್ನಮೆಂಟ್ ಆರ್ಡರ್ ಆಗಲಿ ಆಗಿಲ್ಲ. ಡಾಕ್ಟರ್ ನಾಗಪ್ಪ ಆಳ್ವಾ ಅವರಿಗೆ ಸ್ವಲ್ಪ ನಿಧಾನವಾಗಿ ಮಾಡುವ ಪ್ರವೃತ್ತಿಯಿದೆ. ಈ ಕೆಲಸ ಚುರುಕಾಗಿ ಮಾಡಬೇಕೆಂದು ಹೇಳುತ್ತೇನೆ.

ಗ್ರಾಮಾಂತರ ಪ್ರದೇಶದಲ್ಲಿ ಸಾಕಷ್ಟು ಔಷಧಾಲಯಗಳಿಲ್ಲ. ಔಷಧಾಲಯವಿದ್ದರೆ ಡಾಕ್ಟರರು ಇಲ್ಲ. ಔಷಧಾಲಯ ವೈದ್ಯರು ಇದ್ದರೆ ಔಷಧಗಳಿರುವದಿಲ್ಲ. ಔಷಧೋಪಚಾರದ ಸೌಲಭ್ಯ ಈ ರೀತಿ ಇದೆ. ಹಳ್ಳಿಗಾಡಿಗೆ ಡಾಕ್ಟರರು ಹೋಗುವದಿಲ್ಲ. ಡಾಕ್ಟರರು ಹಳ್ಳಿಗಾಡಿಗೆ ಹೋಗಿ ಕೆಲಸ ಮಾಡುವ ಹಾಗೆ ಮಾಡಬೇಕಾದುದು ಅಗತ್ಯವಾಗಿದೆ. ಮೆಡಿಕಲ್ ಕಾಲೇಜಕ್ಕೆ ಅಡ್ಮಿಷನ್ ಕೊಡುವಾಗ್ಗೆ ಕಟ್ಟುನಿಟ್ಟಾಗಿ ನಿರ್ಬಂಧ ಹಾಕಬೇಕು. ಪಾಸ್ ಆದ ಮೇಲೆ ಹಳ್ಳಿಗಾಡಿನಲ್ಲಿ ಸರ್ವಿಸ್ ಮಾಡಬೇಕೆಂದು ಅವರಿಗೆ ಹೇಳಬೇಕು. ಈಗ ಇರತಕ್ಕ ಡಾಕ್ಟರರನ್ನು ಟ್ರಾನ್ಸ್‌ಫರ್ ಮಾಡಿದರೆ ಹಳ್ಳಿಗಾಡಿಗೆ ಹೋಗುವದಿಲ್ಲ. ಇಂದು ಹಳ್ಳಿಗಾಡಿನಲ್ಲಿ 400 ಆಸ್ಪತ್ರೆಗಳಲ್ಲಿ ಡಾಕ್ಟರರಿಲ್ಲ. ಡಾಕ್ಟರರನ್ನು ಕಳಿಸುವುದಕ್ಕೆ ಆಗಿಲ್ಲ. ಇದರಲ್ಲಿ ಕಷ್ಟವಿದೆ. ಸ್ವಲ್ಪ ಯೋಚನೆ ಮಾಡಬೇಕು ಈ ಡಾಕ್ಟರರ ನೇಮಕಗಳಲ್ಲಿ ಪೊಲಿಟಿಕಲ್ ವೈರ್ ಪುಲ್ಲಿಂಗಗೆ ಅವಕಾಶ ಕೊಡಬಾರದು. ಎಲ್ಲ ಆಸ್ಪತ್ರೆಗಳಲ್ಲಿಯೂ ಡಾಕ್ಟರರನ್ನು ತುಂಬುವ ಶಕ್ತಿ ನಿಮಗೆ ಕೊಡಲಿ ಎಂದು ದೇವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನೀವು ಈವಾಗ ಯೋಚನೆ ಮಾಡಿ, ಎಲ್ಲಿ ಡಾಕ್ಟರ್ ಇಲ್ಲ, ಎಲ್ಲ ಕೌಂಪೌಂಡರ್ ಇಲ್ಲ ಅನ್ನುವುದನ್ನು ಶ್ರೀಮಾನ್ ಲಕ್ಷ್ಮೀಪತಿಯವರು ಹೇಳಿದರು: ಆಸ್ಪತ್ರೆಗಳಲ್ಲಿ ನರ್ಸುಗಳಿದ್ದರೆ, ಡಾಕ್ಟರುಗಳು ಇಲ್ಲ, ಡಾಕ್ಟರುಗಳಿದ್ದರೆ ನರ್ಸುಗಳಿಲ್ಲ, ನರ್ಸುಗಳು ಡಾಕ್ಟರುಗಳು ಇದ್ದರೆ ಕೌಂಪೌಂಡರು ಇಲ್ಲ, ಇದೆಲ್ಲಾ ಇದ್ದರೆ ಔಷಧಿ ಇಲ್ಲ, ಔಷಧಿ ಸರಬರಾಜು ಆಸ್ಪತ್ರೆಗಳಿಗೆ ಸರಿಯಾಗಿಲ್ಲ. ಔಷಧಿ ಸರಬರಾಜಾಗುವುದಕ್ಕೆ ನೀವು ಕೊಂಡುಕೊಂಡದ್ದಕ್ಕೆ ದುಡ್ಡು ಕೊಟ್ಟರೆತಾನೆ ಮೆಡಿಕಲ್ ಸ್ಟೋರಿಗೆ ಸಪ್ಲೈ ಮಾಡಿರತಕ್ಕಂಥ ಔಷಧಿಗಳ ಬಿಲ್ಲುಗಳು ಪೆಂಡೆನ್ಸಿ ಎಷ್ಟು ಹೆವಿಯಾಗಿದೆ, ಗೊತ್ತೆ. ಬಿಲ್ಲುಗಳ ಹಣ ಕೊಡದೆ ಇಷ್ಟು ದೀರ್ಘಾವಧಿ ಕಾಲ ಉಳಿದರೆ ನಿಮಗೆ ಔಷಧ ಯಾರು ಸಪ್ಲೈ ಮಾಡುವವರು. ಬಿಲ್ಲುಗಳು ಹಣವನ್ನು ಕಾಲ ಕಾಲಕ್ಕೆ ವಿನಿಯೋಗ ಮಾಡಿದರೆ, ನಿಮಗೆ ಸಾಲ ಕೊಡುತ್ತಾರೆ. ಇಲ್ಲದೆ ಹೋದರೆ ಸರ್ಕಾರದಲ್ಲಿ ನಂಬಿಕೆ ಇಟ್ಟುಕೊಂಡು ಸಾವಿರಾರು ರೂಪಾಯಿಗಳ heavy pendency ಇಟ್ಟುಕೊಳ್ಳುವುದಕ್ಕೆ ಔಷಧಿ ವ್ಯಾಪಾರಸ್ಥರು ತಯಾರಿಸುತ್ತಾರೆಯೇ ನಿಮ್ಮ ಮೆಡಿಕಲ್ ಸ್ಟೋರಿಗೇ ಮೆಡಿಸನ್ ಸಪ್ಲೈ ಇಲ್ಲದಿದ್ದರೆ ಹಳ್ಳಿಗಾಡಿಗೆ ನೀವು ಔಷಧ ಹಂಚುವುದು ಹೇಗೆ. ಇದರಲ್ಲಿ ತಪ್ಪು ಎಲ್ಲಿದೆ ನೋಡಿ, ತಪ್ಪಿರತಕ್ಕಂಥ ಸ್ಥಳದಲ್ಲಿ ಸರಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

12-30 P.M.

ತುಂಕೂರು ಆಸ್ಪತ್ರೆಯಲ್ಲಿ ಒಂದೂ ಸರಿಯಾಗಿ ನಡೆಯುತ್ತಾ ಇಲ್ಲ. ಅವ್ಯವಸ್ಥೆ ತುಂಬಾ ಇದೆ, ಇದನ್ನು ವಿಚಾರ ಮಾಡಿ, ತಪ್ಪಿತಸ್ಥರನ್ನು ಶಿಕ್ಷೆಮಾಡಿ ಎಂದು ಹೇಳಿದರೆ, ಆ ಡಾಕ್ಟರನ್ನು ಬೇರೆ ಕಡೆಗೆ ಟ್ರಾನ್ಸ್‌ಫರ್ ಮಾಡಿದರೇ ಹೊರತು, ಅವರ ಮೇಲೆ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಡೆಲಿವರಿ ಆಗತಕ್ಕಂಥ ಹೆಣ್ಣು ಮಕ್ಕಳನ್ನು ಡೆಲಿವರಿ ಟೇಬಲ್ ಮೇಲೆ ಮಲಗಿಸಿ, ಆಸ್ಪತ್ರೆ ಚಾರ್ಜಿನಲ್ಲಿರತಕ್ಕಂಥ ಒಬ್ಬ ಮನುಷ್ಯ ಪಾಪಗಡಕ್ಕೆ ಹೋದರೆ ಅವರನ್ನು ಬೇರೆ ಕಡೆಗೆ ವರ್ಗ ಮಾಡಿದರೆ, ದಂಡನೆ ವಿಧಿಸಿದ ಹಾಗಾಯಿತೆ. ಡೆಲಿವರಿ ಅಂದರೆ ಹೆಣ್ಣು ಮಕ್ಕಳು ತಿರುಗಿ ಬದುಕಿ ಬಂದು ಹುಟ್ಟಿದ ಹಾಗೆ. ಅಂಥ ಮುಖ್ಯವಾದ ವಿಷಯದಲ್ಲಿ ತಪ್ಪು ಮಾಡಿದ ಅಧಿಕಾರಿಗಳ ಮೇಲೆ ಯಾವ ಯಾವ ಕ್ರಮವನ್ನು ತೆಗೆದುಕೊಂಡು ಹೇಳುತ್ತೀರ ? ತಾವು ಸ್ವಲ್ಪ ಕೋಪ ಮಾಡಿಕೊಳ್ಳಕೂಡದು, ಸಾವಧಾನದಿಂದ ಕೇಳಿ ತಪ್ಪಿರುವ ಕಡೆ ಸರಿ ಮಾಡಿ ಜನತೆಯ ಶಹಭಾಸ್ ಪಡೆಯಿರಿ.

ತಮುಕೂರು ಆಸ್ಪತ್ರೆ ಸ್ವಲ್ಪ ನೋಡಿದ್ದೀರ ? ಕ್ಷಯ ರೋಗದ ಆಸ್ಪತ್ರೆ ನೋಡಿದ್ದೀರ ? ದೇವರಾವ್ ಶಿವರಾಂ ಕ್ಷಯರೋಗದ ಆಸ್ಪತ್ರೆ ನೋಡಿದ್ದೀರ. ದಯೆಯಿಟ್ಟು ನೋಡಿ. ಮೊನ್ನೆ ಪ್ರಶ್ನೆ ಕೇಳಿದರೆ ಉತ್ತರ ಹೇಳುವುದಕ್ಕಾಗುವುದಿಲ್ಲ, ನೋಟಿಸು ಬೇಕು ಎಂದು ಹೇಳಿದಿರಿ. ನಿಮ್ಮ ಜಾಗದಲ್ಲಿ ನಾನೇ ಇದ್ದು ಇಕ್ಕಟ್ಟಿನ ಪ್ರಸಂಗ ಬಂದರೆ ನಾನೂ ಹಾಗೆ ಹೇಳುತ್ತಿದ್ದೆನೋ ಏನೋ, ಒಂದು ನಿಜಾಂಶವಿದ್ದರೆ ಒಪ್ಪಿಕೊಳ್ಳಬಾರದೇಕೆ ? Waiting list ನಲ್ಲಿ ಎಷ್ಟೋ ಜನ ರೋಗಿಗಳು ಇದ್ದಾರೆಂದು ನೋಡಿದ್ದೀರ ? ಕ್ಷಯರೋಗಕ್ಕೆ ತುತ್ತಾಗಿರತಕ್ಕಂಥ ಜನಕ್ಕೆ, ಕ್ಷಯರೋಗ ಏತಕ್ಕೆ ಬಂದಿತು, ಅದಕ್ಕೆ ಉಚಿತವಾಗಿ ಏನು ಪರಿಹಾರ ಕೊಡಬೇಕು ಎಂಬುದನ್ನು ಸರ್ಕಾರದವರು ಯೋಚನೆ ಮಾಡಿದ್ದೀರ ? ಕ್ಷಯ ರೋಗದ ರೋಗಿಗಳಿಗೆ ಸರಿಯಾದ treatment ದೊರೆಯುವುದಕ್ಕೆ ಹೆಚ್ಚಿನ ಸಾಹಸ ಮಾಡಿದ್ದೀರ ?

ಶ್ರೀ ಕೆ. ನಾಗಪ್ಪ ಆಳ್ವ.—ಈ ಪ್ರಶ್ನೆಗೆ ಸರಿಯಾಗಿ ಉತ್ತರ ಕೊಟ್ಟಿದ್ದೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸರಿಯಾಗಿ ಹೇಳಿದ್ದೀರ ಅಂತ ಹೇಳಿದ್ದೇನೆ. ಈ ಜನತಂತ್ರ ರಾಜ್ಯದಲ್ಲಿ ಜನ ಹೇಳಿದ್ದನ್ನು ಅರ್ಥ ಮಾಡಿಕೊಳ್ಳಬೇಕು. ಕ್ಷಯ ರೋಗದ ಆಸ್ಪತ್ರೆಯಲ್ಲಿ ವೇಟಿಂಗ್ ಲಿಸ್ಟಿನಲ್ಲಿರುವವನ ಟ್ರೀಟ್‌ಮೆಂಟಿಗೆ ಏನು ವ್ಯವಸ್ಥೆ ಮಾಡಿದ್ದೀರಿ ? 100 ಜನ ರೋಗಿಗಳು ಕ್ಷಯ ರೋಗದಿಂದ ನರಳುತ್ತಿದ್ದರೆ ಆ ಜನಗಳ ಕ್ಷಯರೋಗ ನಿವಾರಣೆಗೆ ಏನು ಅವಕಾಶ ಮಾಡಿ ಕೊಟ್ಟಿದ್ದೀರ. ಅವರು ಸತ್ತ ಮೇಲೆ ಅವರಿಗೆ ಅವಕಾಶ ಸಿಗುತ್ತದೆಯೇ ? ಮೈಸೂರಿನಲ್ಲಿ ಕ್ಷಯ ಎನ್ನುವ ರೋಗದಿಂದ ನರಳುತ್ತಿರುವವರಿಗೆ ಸಾಕಷ್ಟು ಪ್ರಮಾಣದಲ್ಲಿ ಪರಿಹಾರ ಕೊಟ್ಟು, ಈ ರೋಗ ರುಜಿನವನ್ನು ನಿವಾರಣೆ ಮಾಡುವ ದಾರಿಯಲ್ಲಿ ಏನು ಮಾಡಬೇಕೆಂಬುದರ ಬಗ್ಗೆ ಸರ್ಕಾರ ತೀವ್ರ ಯೋಚನೆ ಮಾಡಬೇಕೆಂದು ಹೇಳಿದರೆ, ತಾವು ಪ್ರಶ್ನೆಗೆ ಕೊಟ್ಟ ಉತ್ತರದಲ್ಲಿ ಈ ಮಾತೇ ಇಲ್ಲ. ಕ್ಷಯರೋಗದ ಆಸ್ಪತ್ರೆಗಳಲ್ಲಿ ಬೆಡ್ ಸ್ಟ್ರೆಂಗ್‌ತ್ ಇನ್‌ಕ್ರೀಸ್ ಮಾಡಬೇಕು, ಇಲ್ಲ additional annexures ಮಾಡಬೇಕು, ಏನೊಂದಾದರೂ ಮಾಡಬೇಕು. ಹೀಗೆ ದೇಶದಲ್ಲಿ ಸೂಕ್ತ ಕ್ರಮ ತೆಗೆದುಕೊಂಡು ಸರಿಯಾದ ಪರಿಹಾರ ಹುಡುಕುತ್ತೀರೆಂದು ನಂಬಿದ್ದೇನೆ.

ಮಾರ್ಚಿ 1962 ರೊಳಗೆ ಒಬ್ಬ ಮಷ್ಯನಿಗೆ ಚೇಳು ಕಡಿದರೆ, ಮಧ್ಯಾಹ್ನ 12 ಘಂಟೆ ಹೊತ್ತಿಗೇ ಗುತ್ತಿಗವರೆಗೆ ಕುಡಿದಿರುವ ಅಲ್ಲಿಯ ಡಾಕ್ಟರು ಚೇಳು ಔಷಧಿಯಿಂದ ಚಿಕಿತ್ಸೆ ಮಾಡದೆ, ಚೇಳು ಕಚ್ಚಿದ್ದ ಬೆಟ್ಟನ್ನೇ ಕತ್ತರಿಸಿಹಾಕಿಬಿಟ್ಟ. ಈ ವಿಷಯವನ್ನು ಇದೇ ಸಭೆಯಲ್ಲಿ ಹೋದಸಲ ಹೇಳಿದ್ದರಮೇಲೆ ಆ ಡಾಕ್ಟರ ಮೇಲೆ ಏನು ಕ್ರಮ ತೆಗೆದುಕೊಂಡಿರಿ ?

ಶ್ರೀ ಕೆ. ನಾಗಪ್ಪ ಆಳ್ವ.—ತಾವು ಕಂಪ್ಲೇಂಟ್ ಕೊಟ್ಟರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೆನು, ಇಷ್ಟರವರೆಗೆ ಅವರು ಕೊಡಲಿಲ್ಲ.

ಶ್ರೀ ಜೆ. ಮುಕ್ಕಣ್ಣಪ್ಪ.—ಇಲ್ಲಿ ಸ್ಟೇಟ್‌ಮೆಂಟ್ ಮಾಡಿದರೆ, ಈ ಸಭೆಯಲ್ಲಿ ಒಬ್ಬ ಸದಸ್ಯರು ಹೇಳಿದ್ದರ ಮೇಲೆ ಪರೀಕ್ಷೆಮಾಡಿ ಅವರು ಹೇಳಿದ್ದು ಸರಿಯೋ ಇಲ್ಲವೋ ಎಂದು ನೋಡಬಾರದೇ ? Why do you reduce a member of the State Legislature to the position of a petitioner ? ನಾವು ಹೇಳಿದ್ದರಲ್ಲಿ ಸತ್ಯವಿದ್ದರೆ ಸತ್ಯ ಎಂದು ಹೇಳಿ, ಅಸತ್ಯವಿದ್ದರೆ ಅಸತ್ಯವೆಂದು ಹೇಳಿ. You can say whether a statement made by a Member of this House is true or not. ನಾವು ಹೇಳಿದ್ದನ್ನು ತಾವು ಪರೀಕ್ಷೆ ಮಾಡಿ, ನಾವು ಸುಳ್ಳು ಹೇಳಿದ್ದರೆ, ನೀವು ಹೇಳಿರುವುದು ಬೇಸ್‌ಲೆಸ್, ಇಲ್ಲ fact, ಇಲ್ಲ ನಿಜಾಂಶ, ಯಾವುದಾದರೂ ಹೇಳಿ, ಒಪ್ಪಿಕೊಳ್ಳುತ್ತೇವೆ. ಇಂಥ ನಾಗರೀಕ ಡಿಪಾರ್ಟ್‌ಮೆಂಟಿನಲ್ಲಿ ಒಬ್ಬ ಡಾಕ್ಟರು 24 ಗಂಟೆಯೂ ಭಟ್ಟಿ ಷರಾಬು ಕುಡಿದಿರುತ್ತಾನೆಂದು ಈ ಸಭೆಯಲ್ಲಿ ಹೇಳಿದರೆ ಸಾಲದೇ, ಅವನ ಮೇಲೆ ಆಕ್ಷನ್ ತೆಗೆದುಕೊಳ್ಳಲು personal request ಮಾಡಬೇಕೇ ? ಒಬ್ಬ ಮನುಷ್ಯನಿಗೆ ತುಕ್ಕು ಹಿಡಿದ ಸೂಜಿಯಿಂದ ಇಂಟ್ರಾಮಸ್ಕ್ಯುಲರ್ ಇಂಜೆಕ್ಷನ್ ಕೊಡುವುದಕ್ಕೆ ಹೋದಾಗ, ಡಾಕ್ಟರಿಗೆ ತುಕ್ಕು ಹಿಡಿದಿದೆ ಸೂಜಿಗೆ ಎಂದು ಹೇಳಿದರೆ, ಡಾಕ್ಟರು ಹೇಳಿದರು, ''ತೀಟೆ ಇದ್ದರೆ ತೆಗೆದುಕೋ, ಇಲ್ಲದೆ ಹೋದರೆ ಹೊರಟು ಹೋಗು'' ಎಂದು.

ಪರೋಪಕಾರ, ಸೇವೆ ಮಾಡುವುದಕ್ಕೆ ವೈದ್ಯಕೀಯ ವೃತ್ತಿಯಂಥ ಇನ್ನೊಂದು ವೃತ್ತಿ ಇಲ್ಲ. ತಂದೆ ತಾಯಿಗಳು ಪ್ರಾಣದಾನ ಮಾಡಿದ್ದರೆ, ಮನುಷ್ಯನು ಯಾವುದಾದರೂ ರೋಗ ರುಜಿನಕ್ಕೆ ಸಿಕ್ಕಿದರೆ, ಅದರಿಂದ ಪಾರು ಮಾಡಿ ಪ್ರಾಣ ರಕ್ಷಣೆ ಮಾಡುವ ಕಾರ್ಯ ಡಾಕ್ಟರುಗಳದು, ಅದಕ್ಕಿಂತ ಉತ್ಕೃಷ್ಟ ಸೇವೆ ಇಲ್ಲ. ಆದರೆ ಡಾಕ್ಟರ ಕೈಲಿ ಸೂಜಿ, ಸ್ಟೆಥಸ್ಕೋಪ್, ಚಾಕು,ಬಾಕು,ಕತ್ತರಿ, ಇವನ್ನು ಉಪಯೋಗಿಸುವಾಗ ಅವುಗಳು ಪರಿಶುದ್ಧವಾಗಿವೆಯೇ, ಪರಿಶುದ್ಧ ಮಾಡಬೇಡವೇ ಎಂದು ಮೊದಲು ನೋಡಬೇಕು. ನನಗೆ ಗಾಯವಾಗಿದೆ, ಒಂದು ಇಂಜಕ್ಷನ್ ಕೊಡಿ ಎಂದು ನಮ್ಮ ಡಾಕ್ಟರಿಗೆ ನಿನ್ನೆ ಹೇಳಿದರೆ ಯಾವುದೋ ಒಂದು ಔಷಧ ಪ್ರಿಸ್‌ಕ್ರೈಬ್ ಮಾಡಿದರು, ಅದನ್ನು ತೆಗೆದುಕೊಂಡು ಬಂದರೆ, ಇಂಜಕ್ಷನ್ ಕೊಡುವಾಗ ಅದರ ಸೂಜಿಮೇಲೆ ಡಸ್ಟ್ ಇದೆ ಎಂದು ಹೇಳಿದರೆ ಡಾಕ್ಟರು ಕಣ್ಣು ಮುಚ್ಚಿಕೊಂಡು ಇಂಜಕ್ಷನ್ ತೆಗೆದುಕೊಂಡುಬಿಡಿ ಎಂದು ಹೇಳಿದರು. ಇನ್ನು ಜಾಸ್ತಿ ಹೇಳಿದರೆ ಎಲ್ಲರ ಮೇಲೆ ವ್ಯಾಜ್ಯ ಮಾಡುತ್ತೇವೆಂದು ಹೇಳುತ್ತಾರೆ. ಹೀಗೆ ನಮ್ಮ ಕಣ್ಣೆದುರಿಗಿರುವ ಆಸ್ಪತ್ರೆಯ ವೈಶಿಷ್ಟ್ಯ ಇದು. ಲೆಜಿಸ್ಲೇಟರುಗಳ ಉಪಯೋಗಕ್ಕಾಗಿ ಒಂದು ಆಸ್ಪತ್ರೆ ಇಟ್ಟಿದ್ದಾರೆ. ಅದನ್ನು ನೋಡಿ, ಅಲ್ಲಿ ಎಷ್ಟರಮಟ್ಟಿಗೆ ಮಾನ್ಯ ಸದಸ್ಯರುಗಳಿಗೆ ಟ್ರೀಟ್‌ಮೆಂಟ್ ದೊರೆಯುತ್ತಾ ಇದೆ, ಮುಖಂಡರಿಗೆ ಈ ರೀತಿ ಏರ್ಪಾಡು ಮಾಡಿರುವಾಗ, ಇನ್ನು ಆಸ್ಪತ್ರೆಗಳಲ್ಲಿ ಸಾಮಾನ್ಯ ಜನಗಳಿಗೆ ಎಷ್ಟರ ಮಟ್ಟಿಗೆ ವೈದ್ಯಕೀಯ ಸೌಲಭ್ಯ ದೊರೆಯುತ್ತಾ ಇದೆ ಎಂದು ಊಹಿಸಿಕೊಳ್ಳಬಹುದು. ಆಸ್ಪತ್ರೆಯಲ್ಲಿರುವ ನಮ್ಮ ಅಧಿಕಾರಿಗಳನ್ನು approach ಮಾಡುವುದೇ ಕಷ್ಟ. ಸರ್ಕಾರಿ ನೌಕರಿಯಲ್ಲಿರುವ ಡಾಕ್ಟರುಗಳಲ್ಲಿ ಐರ್‌ಸೀನ್ಸ್ ಬಹಳ ಬಂದಿದೆ ಡಾಕ್ಟರು

ಗಳು ಇಲ್ಲಿಗೆ ಬಂದು ನಿಮ್ಮ ಹತ್ತಿರ ಮಾತನಾಡಿಕೊಂಡು ಹೋಗುತ್ತಾರೆ. ಅವರಿಗೂ ನಮಗೂ ನೇರವಾದ ಸಂಬಂಧವಿಲ್ಲವೆಂದು ಅಂದುಕೊಂಡು ಬಿಟ್ಟಿದ್ದಾರೆ. ಮಂತ್ರಿಗಳ ಹತ್ತಿರ ಸರಿಯಾಗಿದ್ದು ಬಿಟ್ಟರೆ ತಮಗೆ ಅಪಾಯ ಬರುವುದಿಲ್ಲವೆಂದು ಸರ್ಕಾರಿ ನೌಕರರು ತಿಳಿದುಕೊಂಡಿದ್ದಾರೆ. ಸರ್ಕಾರಿ ನೌಕರರು ಈ ರಾಜ್ಯದಲ್ಲಿ ಅವರು, ನಾವೂ, ನೀವೂ ಬೇರೆ ಬೇರೆ ರಾಜ್ಯದಲ್ಲಿದ್ದೇವೆ ಎಂಬ ಮನೋಭಾವದಿಂದ ಕೆಲಸ ಮಾಡುತ್ತಾರೆ. ಇಂಥ ರಾಜಕೀಯ ಭೂತ ವೈದ್ಯಕೀಯ ಇಲಾಖೆಯಲ್ಲಿ ಹಿಡಿದಿದೆ, ನಿಮ್ಮ ಹತ್ತಿರ ಅದು ಬಂದಿಲ್ಲ. ನಿಮ್ಮ ಮೈ ಮೇಲೆ ಆ ಭೂತ ಇಲ್ಲದೆ ಹೋದರೂ, ಅದು ಇಲಾಖೆಯಲ್ಲಿ ಅಧಿಕಾರಿಗಳಲ್ಲಿ ಸೇರಿಕೊಂಡಿದೆ. ಅವರಲ್ಲಿ ಮರಳುಗೊಳಿಸಿವೆ. ಅದಕ್ಕೋಸ್ಕರ ತಮ್ಮ ಕೈಗೆಳಗಿರುವ ಅಧಿಕಾರಿಗಳನ್ನು whip ಮಾಡಿ, ರಾಜ್ಯದಲ್ಲಿ ವೈದಕೀಯ ಸೌಕರ್ಯಗಳಿಲ್ಲದೆ ಏನೇನು ತೊಂದರೆಗಳಿವೆಯೋ, ಅವುಗಳನ್ನೆಲ್ಲಾ ನಿವಾರಿಸಿ ಇಲಾಖೆಯನ್ನು ದುರಸ್ತುಮಾಡಿ ಉತ್ತಮ ಸ್ಥಿತಿಗೆ ತರಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಈ ಆರೋಗ್ಯ ಕೇಂದ್ರಗಳಲ್ಲಿ Government of India pattern, Mysore pattern ಎಂಬ ಹೆಸರು ಇಟ್ಟುಬಿಟ್ಟಿದ್ದಾರೆ. ಇವುಗಳನ್ನು ಸ್ಥಾಪನೆ ಮಾಡಬೇಕಾದರೂ ರಾಜಕೀಯವೆಲ್ಲ, ಬಿಲ್ಡಿಂಡ್ ಕೊಟ್ಟಿರುತ್ತಾರೆ, ಕೆಲಸ ಮಾಡುತ್ತಿರುತ್ತಾರೆ, ರಾಜಕೀಯ ಬಂದು ಅಲ್ಲಿಗೆ ಕೇಂದ್ರ ಕೊಡುವುದಿಲ್ಲ. ಬೇರೆ ಕಡೆಗೆ ಕೊಟ್ಟುಬಿಟ್ಟಿರುತ್ತೀರಿ, ಏಕೆ ? ಕಾರಣವೇನು ಸ್ವಲ್ಪ ಹೇಳುತ್ತೀರಾ ? ಒಂದು ಜಾಗ ಸರಿಯಾಗಿದ್ದರೆ, ಅಲ್ಲಿಗೆ ಏಕೆ ಇಲ್ಲ ? ನಿಮ್ಮ ಕಾಂಗ್ರೆಸ್ಸಿನವರು ಅಲ್ಲಿ ಗೆದ್ದಿದ್ದಾರೆಯೋ, ಪಿ. ಎಸ್. ಪಿ. ಯವರು ಅಲ್ಲಿ ಗೆದ್ದಿದ್ದಾರೆಯೆ, ಮುಕ್ಕಣ್ಣಪ್ಪ ಗೆದ್ದು ಬಂದಿದ್ದಾನೆಯೋ ? ಈ ರಾಜಕೀಯವೇಕೆ ? ಕಾಂಗ್ರೆಸ್ ರಾಜ್ಯ ಇರುತ್ತದೆಯೋ ಹೋಗುತ್ತದೆಯೋ. ಒಂದು ಆಸ್ಪತ್ರೆ, ಒಂದು ಕೇಂದ್ರ, ಒಂದು ವೈದ್ಯಕೀಯ ಸೌಕರ್ಯ ಕೊಡಬೇಕಾಗಿದ್ದರೆ ಮುಕ್ಕಣ್ಣಪ್ಪನಿಗೆ ಬೆಲೆ ಇದೆಯೋ ಇಲ್ಲವೋ ಅನ್ನುವುದನ್ನು ನೋಡಿ ಕೊಡಬೇಕೆ ? ಇದು ನನ್ನ ಕ್ಷೇತ್ರದಲ್ಲಿ ನಡೆದಿಲ್ಲ, ನನ್ನ ಕ್ಷೇತ್ರದ ಅಕ್ಕಪಕ್ಕದಲ್ಲಿ ನಡೆದಿರತಕ್ಕಂಥ ವಿಷಯ ಹೇಳುತ್ತಿದ್ದೇನೆ.

ಶ್ರೀ ಕೆ. ನಾಗಪ್ಪ ಆಳ್ವ.—Specific instance ಹೇಳಿ ಎಲ್ಲೆಲ್ಲಿ ರಾಜಕೀಯವಿದೆಯೋ ಅದನ್ನು ತೆಗೆದು ಹಾಕಲಿಕ್ಕೆ ಪ್ರಯತ್ನ ಪಡುತ್ತಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶಹಭಾಸ್, ಬಹಳ ಧನ್ಯ, ಒಪ್ಪಿಕೊಳ್ಳುತ್ತೇನೆ. ಇದು ಹೇಳಲಿಕ್ಕೆ ಎಂತಹ ಧೈರ್ಯ ನಿಮಗೆ ?

Mr. SPEAKER.—Has the Honble Member agreed ?

Sri C. J. MUCKANNAPPA.—I have agreed Sir. ಇಂಥ ಆಶ್ವಾಸನ ಕೊಡತಕ್ಕಂಥ ಸರ್ಕಾರವಿದ್ದರೆ ಬಹಳ ಕೃತಕೃತ್ಯ. ರಾಜಕೀಯವನ್ನು ಬೆರಸಬೇಡಿ, ಇದನ್ನು ಬೆರೆಸಿ ಸ್ವಚ್ಛವಾಗಿರುವ ನಿಮ್ಮ ಮುಖಕ್ಕೆ ಟಾರ್ ಬಳಿದುಕೊಳ್ಳಬೇಡಿ.

ಸರ್ವೀಸಿನಲ್ಲಿ ಸಮಾಧಾನ ಇದೆಯೇ ? ಒಬ್ಬರಿಗೊಂದು ಮಾಡುತ್ತೀರಿ ಇನ್ನೊಬ್ಬನಿಗೆ ಇನ್ನೊಂದು ಮಾಡುತ್ತೀರಿ. ಯಾವುದಾದರು ಒಂದು ಜಾಗ ಖಾಲಿ ಬಿದ್ದರೆ ಅದನ್ನು ಜಾಗ್ರತೆ ಏಕೆ ಭರ್ತಿಮಾಡಬಾರದು? ವಿಕ್ಟೋರಿಯಾ ಆಸ್ಪತ್ರೆಯ ಫೇಮಸ್ ಫಿಸಿಷಿಯನ್, ಗೋವಿಂದಶೆಟ್ಟರು ಸತ್ತು ಹೋದರು. ಅವರ ಜಾಗದಲ್ಲಿ ಯಾರನ್ನು ನೇಮಕಮಾಡಿದ್ದೀರಿ ? ಅವರು ಸತ್ತು ಎಷ್ಟು ದಿವಸ ಆಯಿತು ? ಇಷ್ಟು ನಿಧಾನವಾಗುವುದಕ್ಕೆ ಕಾರಣವೇನು ? ಇದರಲ್ಲಿ ರಾಜಕೀಯ ಇದೆಯೋ ಅವರಂತೆ ಕೆಲಸ ಮಾಡತಕ್ಕ ಜನ ಇಲ್ಲವೆ ? ಅವರಷ್ಟು ಕ್ವಾಲಿಫಿಕೇಷನ್ ಇರುವವರು ಇಲ್ಲವೇ ಎಂದು ಕೇಳುತ್ತೇನೆ.

ವಿಕ್ಟೋರಿಯಾ ಆಸ್ಪತ್ರೆಗೆ ಹೋಗಿ ನೋಡಿದೆ. ಪಾಪ ಆ ಜನ ಪಡುವ ಕಷ್ಟವನ್ನು ತಪ್ಪಿಸಿ ಎಂದು ಹೊರಗೂ ಒಳಗೂ ಪ್ರಾರ್ಥನೆಮಾಡುತ್ತೇನೆ. ಅಲ್ಲಿಗೆ ಹೋದರೆ ಧೀನ್, ಧೀನ್ ಅಂತ ಅವೇನು ಧೀನ್ ಧೀನೋ ಗೊತ್ತಿಲ್ಲ (ನಗು !) ಈ ದೀನ್ (Dean) ಗಳ ಕಾಟ ತಪ್ಪಿಸಿ. ಅವರ ಅಟ್ಟಹಾಸ ಏನು ; ಅವರ ಠೀವಿ ಏನು ; ಇದನ್ನು ತಪ್ಪಿಸಿ, ಜನರ ಸೇವೆಗೆ ಇದ್ದೇವೆ ಎಂದ ಮೇಲೆ ಜನರ ಸೇವೆ ಮಾಡುವುದಕ್ಕೆ ಕಲಿತುಕೊಳ್ಳೋಣ. ತಾನು ಏನೇ ಇರಲಿ, ಆ ಧೀನ್ ಇರುವುದು ಪ್ರತಿಷ್ಠೆಗೆ ಅಲ್ಲ, ರೋಗರುಜಿನ ಅನುಭವಿಸತಕ್ಕ ಜನಗಳಿಗೆ ತೊಂದರೆಯಾಗದಹಾಗೆ ನೋಡಿಕೊಳ್ಳಬೇಕು. ಕಡಪಾಕಲ್ಲಿನ ಮೇಲೆ ಮಲಗಿಕೊಂಡರೆ ಅದೆಂಥದೋ ಖಾಯಿಲೆ ಬರುತ್ತದೆ ಎಂದು ಹೇಳುತ್ತೀರಿ. ರೋಗಿಗಳನ್ನು ಕಾರಿಡಾರ್‌ನಲ್ಲಿ ಕಡಪಾಕಲ್ಲಿನ ಮೇಲೆ ಮಲಗಿಸಿದ್ದೀರಿ. ನನಗೆ ಒಂದು ಅನ್ನಿಸುತ್ತದೆ ಆರೋಗ್ಯಭಾಗ್ಯ ಸಿಕ್ಕಬೇಕು, ಜನ ಆರೋಗ್ಯವಾಗಿರಬೇಕು ಎಂದು ಹೇಳಿದರೆ ಆಸ್ಪತ್ರೆಯಲ್ಲಿ ಜಾಗ ಇಲ್ಲದೇ ಹೋದರೆ ಸ್ವೇಚ್ಛೆಯಾಗಿ ವೆಚ್ಚವಾಗತಕ್ಕ ಬೇರೆ ಖಾತೆಗಳಿಂದ ದುಡ್ಡು ತೆಗೆದುಕೊಂಡು ಇನ್ನು 100 ಹಾಸಿಗೆಗಳನ್ನು ಹಾಕಿ. ಕಡಪಾಕಲ್ಲಿನ ಮೇಲೆ ರಾತ್ರಿ ಹೊತ್ತು ಉದ್ದಕ್ಕೂ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಮಲಗಿಸಿದ್ದೀರಿ, ಇದು ಒಳ್ಳೆಯದೇ ಮನುಷ್ಯತ್ವವೇ; ಮನುಷ್ಯ ಮಾತ್ರದವರು ನೋಡುವುದಕ್ಕೆ ಸಾಧ್ಯವೇ? ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಯಾರೂ ಕಂಡೂ ಕಾಣದ ದಾರಿಯಲ್ಲಿ ಸುತ್ತಿಕೊಂಡು ಬರಬೇಕು ಆಗ ಅಲ್ಲಿ ಯಾವ ಪರಿಸ್ಥಿತಿ ಇದೆ, ಯಾವ ತೊಂದರೆ ಇದೆ ಎನ್ನುವುದು ಗೊತ್ತಾಗುತ್ತದೆ. ಯಾವಾಗಲೂ ನಮ್ಮ ಸಂಬಳ ಸಾರಿಗೆ ಅಂತ ಹೇಳಿ ವ್ಯವಹಾರ ನಡೆಯುತ್ತಾ ಇರುತ್ತದೆ. ನಮ್ಮ ಸಂಬಳ ಕಡಿಮೆ ಮದರಾಸಿನಲ್ಲಿ ಜಾಸ್ತಿ ಕೊಡುತ್ತಾರೆ. ಇಂಗ್ಲೆಂಡಿನಲ್ಲಿ ಹಾಗೆ, ಬೊಂಬಾಯಿ ನಲ್ಲಿ ಹೀಗೆ ಅಂತ ಹೇಳಿ ನಮ್ಮ ರಾಜ್ಯದಲ್ಲಿ ನಮ್ಮ ಜನ ಕೊಟ್ಟಂಥ ಹಣ ವೆಚ್ಚಮಾಡಿ, ವಿದ್ಯಾಭ್ಯಾಸ ಮಾಡಿದಂಥ ಜನ ನಮ್ಮ ಜನಗಳ ಸೇವೆ ಮಾಡಬೇಕೆಂದು ಅಭಿಮಾನ ಹೊಂದದೆ, ನಿರಭಿಮಾನಿಗಳಾಗಿ ಅನ್ನದ ಮೇಲೆ, ಕುಂಕುಮದ ಮೇಲೆ, ಬಟ್ಟೆಯ ಮೇಲೆ ಸುಂಕ ತೆತ್ತು ವಿದ್ಯಾವಂತರನ್ನಾಗಿ ಮಾಡಿದ ಜನರ ಸೇವೆ ಮಾಡುವುದಕ್ಕೆ ಇಚ್ಛೆ ಇಲ್ಲದೇ ಬೊಂಬಾಯಿಗೆ ಹೋಗುತ್ತೇವೆ, ಮದರಾಸಿಗೆ ಹೋಗುತ್ತೇವೆ ಅಲ್ಲಿ ಜಾಸ್ತಿ ಸಂಬಳ ಕೊಡುತ್ತಾರೆ, ಅಲ್ಲಿ ಆ ಅಲೋಯನ್ಸ್ ಇದೆ. ಇಲ್ಲಿ ಈ ಅಲೋಯನ್ಸ್ ಇದೆ ಎಂದು ಹೇಳುತ್ತಾರೆಯಲ್ಲಾ ಇದು ನಿಜವಾಗಿಯೂ ಕೂಡ ಸಲ್ಲದು. ನಮ್ಮಲ್ಲೇ ಬೆಳೆದು ಡಾಕ್ಟರುಗಳಾಗುತ್ತಾರೆ. ವೈದ್ಯಕೀಯ ವೃತ್ತಿ ಅವಲಂಬಿಸುತ್ತಾರೆ. ಅವರಿಗೆ ಸ್ವಲ್ಪ ಜನಾಭಿಮಾನ, ದೇಶಾಭಿಮಾನ ಇರಬೇಕು. ಹಣದ ಆಶೆ ಇಟ್ಟುಕೊಳ್ಳಬಾರದು. ಹಣದ ಆಶೆ ಹೆಚ್ಚಾಗಿ ಇಟ್ಟುಕೊಳ್ಳದೆ ಜನ ಸೇವೆ ಮಾಡಬೇಕೆಂಬ ಆಶೆ ಅವರಲ್ಲಿ ಮೂಡಬೇಕು. ಯುವಕರಲ್ಲಿ ಅಂಥ ಒಳ್ಳೆಯ ಬುದ್ಧಿ ಉತ್ಪನ್ನವಾಗಲಿ, ಜನಸೇವೆ ಮಾಡತಕ್ಕ ಆಕಾಂಕ್ಷೆ ಬರಲಿ ಎಂದು ಹೇಳಿ ಯುವಜನರನ್ನು ಈ ಸಭೆಯ ಮೂಲಕ, ತಮ್ಮ ಮೂಲಕ ಪ್ರಾರ್ಥನೆಮಾಡಿಕೊಳ್ಳುತ್ತೇನೆ.

ಇನ್ನು ಒಂದೇ ಒಂದು ವಿಷಯ ಹೇಳಿ ಮುಗಿಸುತ್ತೇನೆ. ಸುಪ್ರೀಂ ಕೋರ್ಟ್, ಹೈಕೋರ್ಟ್ ತೀರ್ಮಾನ ಮಾಡಿದಂಥಾ ಒಬ್ಬ ಡಾಕ್ಟರಿಗೆ ನೀವು ಕೊಟ್ಟಂಥ ಟ್ರೀಟ್‌ಮೆಂಟ್ ಏನು? ರೆಡ್ ಹ್ಯಾಂಡೆಡ್ ಆಗಿ ಹಿಡಿದು ಹಣ ತಿಂದಿದ್ದಾನೆ ಎಂದು ಹೇಳಿ ಆಂಟಿಕರಪ್ಷನ್ ಡಿಪಾರ್ಟ್‌ಮೆಂಟಿಗೆ ದೂರು ಕೊಟ್ಟರೆ ಯಾರ ಮೇಲೆ ದೂರು ಕೊಟ್ಟರೂ, ಅವನ ಬದುಕಿದ್ದರೂ, ಗಂಡ ಹೆಂಡತಿ ಜೀವಂತವಾಗಿದ್ದರೂ ಗಂಡ ಸತ್ತುಹೋದ ಎಂದು ಹೆಂಡತಿ ಹತ್ತಿರ ಸ್ಟೇಟ್‌ಮೆಂಟ್ ರೆಕಾರ್ಡ್ ಮಾಡಿಸಿ 5 ಸಾವಿರ ರೂಪಾಯಿ ಕೊಟ್ಟಿದ್ದಾರೆ.

ಶ್ರೀ ಎಸ್. ಗೋಪಾಲ ಗೌಡ.—ಇದು ನಡೆದದ್ದು ಎಲ್ಲಿ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದೇ ಊರಿನ ಹುಚ್ಚಾಸ್ಪತ್ರೆಯಲ್ಲಿ ನಡೆದಂಥ ಪ್ರಕರಣ ಇದು

ಶ್ರೀ ಎಸ್. ಗೋಪಾಲ ಗೌಡ.—ಹುಚ್ಚಾಸ್ಪತ್ರೆ ಆದರೆ ಪರವಾಗಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಏಕೆ ಹೇಳುತ್ತೇನೆ ಎಂದರೆ ಒಂದು ಉನ್ನತ ನ್ಯಾಯಾಲಯ, ಈ ಭಾರತ ಭೂವಿ ಯಲ್ಲಿ ಶ್ರೇಷ್ಠ ನ್ಯಾಯಾಲಯ ಕೊಟ್ಟಂಥ ತೀರ್ಮಾನಕ್ಕೆ ತಲೆಬಾಗದ ಜನ ತಾವೂ ಅವರು ಎಲ್ಲಾ ಒಂದೇ.

ಶ್ರೀ ಕೆ. ನಾಗಪ್ಪ ಆಳ್ವ.—ತಲೆ ಬಾಗಲಿಲ್ಲ ಎಂದು ಹೇಳುತ್ತೀರಿ, ಅದು ಏನು ಎಂದು ಅರ್ಥವಾಗಲಿಲ್ಲ. ಸುಪ್ರೀಂ ಕೋರ್ಟಿನ ತೀರ್ಮಾನಕ್ಕೆ ನಾವು ಯಾವಾಗಲೂ ತಲೆಬಾಗಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಲೆಬಾಗಿದ್ದೀರಿ. ಪರಮಾತ್ಮ, ದೇವರು ಸೃಷ್ಟಿಮಾಡಿ ನಿಮ್ಮನ್ನು ಏಕೆ ಕಳುಹಿಸಿದನೋ ಎಂದು ದೇವರನ್ನು ಶಪಿಸುತ್ತಾ ಇದ್ದೇನೆ. ಇಂಥಾ ಒಳ್ಳೆಯ ಜನಗಳ ಕೈಯಲ್ಲಿ ಅಧಿಕಾರ ದುರುಪಯೋಗ ಮಾಡತಕ್ಕ, ಮಾಡಿದಂಥಾ ಷಿಕ್ಮಿದಾರರು ಇದ್ದಾರೆಯಲ್ಲಾ ಎಂದು ವ್ಯಸನಪಡುತ್ತೇನೆ. ರೀ ಇನ್ಸ್ಟೇಟ್ ಮಾಡಿ. ಕೊಡತಕ್ಕ ಹಣ ಕೊಡಿ. ನ್ಯಾಯವಾಗಿದೆಯೇ, ತಕರಾರು ಇದೆಯೇ ಎಂಬುದನ್ನು ನೋಡಿ. ಈ ದೇಶದಲ್ಲಿ ನ್ಯಾಯದೊರೆಯುತ್ತದೆ ಎಂದು ಧೈರ್ಯವಾಗಿ ಮಾಡಿ. ಅನ್ಯಾಯವಾಗಿದ್ದರೆ ಕೋರ್ಟುಗಳು ಇವೆ. ಇಷ್ಟು ಮಾತ್ರ ಹೇಳುತ್ತೇನೆ. ಪ್ರತಿಯೊಂದು ಹೆಜ್ಜೆಯನ್ನು ದಿಟ್ಟತನದಿಂದ, ಧೈರ್ಯವಾಗಿ ಯಾವ ಕಳಂಕವನ್ನೂ ಕಂಡು ಹಿಡಿಯುವುದಕ್ಕಾಗುವುದಿಲ್ಲ ಎನ್ನುವ ರೀತಿಯಲ್ಲಿ, ನಿಮ್ಮ ಕೈಗೆಳಗಿರತಕ್ಕ ಖಾತೆಯನ್ನು ಸರಿಯಾದ ರೀತಿಯಲ್ಲಿ ಕೆಲಸಮಾಡುವಂತೆ ದುರಸ್ತಪಡಿಸಬೇಕೆಂದು ಹೇಳಿ 15 ನಿಮಿಷ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಾದ ತಮಗೂ ವಂದಿಸಿ ಈ ವೈದ್ಯಕೀಯ ಮತ್ತು ಜನಾರೋಗ್ಯ ಖಾತೆ ಎಲ್ಲಾ ಖಾತೆಗಿಂತಲೂ ಹೆಚ್ಚಿನ ರೀತಿಯಲ್ಲಿ ಕೆಲಸಮಾಡಿ ಜನತೆಯಪ್ರೀತಿ ವಿಶ್ವಾಸಕ್ಕೆ ಪಾತ್ರವಾಗಲೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಶರಣಪ್ಪ (ದೇವದುರ್ಗ).—ಸ್ವಾಮಿ, ಸಭಾಪತಿಯವರೇ ಈಗ ಮೆಡಿಕಲ್ ಮತ್ತು ಹೆಲ್ತ್‌ಡಿಮ್ಯಾಂಡ್ ಬಗ್ಗೆ ಇದುವರೆಗೂ ಸಾಕಾದಷ್ಟು ಜನ ಸದಸ್ಯರು ಕೇವಲ ಟೀಕೆ ಟಿಪ್ಪಣಿಗಳನ್ನು

ಅಷ್ಟೇ ಮಾಡದೇ ಸಲಹೆ ಸೂಚನೆಗಳನ್ನು ಕೂಡ ಕೊಟ್ಟಿದ್ದಾರೆ. ಈ ಎರಡು ಡಿಮಾಂಡುಗಳಿಗೂ ಸುಮಾರು 7 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಈ 7 ಕೋಟಿ ರೂಪಾಯಿಗಳನ್ನು ನಾವು ನಮ್ಮ ರಾಜ್ಯದ ಜನ ಸಂಖ್ಯೆಯ ದೃಷ್ಟಿಯಿಂದ ನೋಡಿದ್ದೇ ಆದರೆ ಒಬ್ಬ ಮನುಷ್ಯನಿಗೆ ಕೇವಲ 3 ರೂಪಾಯಿನಂತೆ ಆರೋಗ್ಯ ಮತ್ತು ಔಷಧಿಗೆ ಖರ್ಚು ಮಾಡುತ್ತೇವೆ ಎಂದು ಅಂದಾಜು ಕಂಡುಬರುತ್ತದೆ. 100ಕ್ಕೆ 85ರಷ್ಟು ಗ್ರಾಮಾಂತರ ಪ್ರದೇಶಗಳಲ್ಲಿ ಜನರು ಇರುವುದಾದರೂ ಅವರ ಔಷಧಿ ಮತ್ತು ಚಿಕಿತ್ಸೆ, ಸಹಾಯ, ಅನುಕೂಲತೆ ಒದಗಿಸುವುದಕ್ಕೆ ಕೇವಲ 100ಕ್ಕೆ 10–15ರಷ್ಟು ಮಾತ್ರ ಖರ್ಚು ಬರುವುದು ಕಂಡು ಬರುತ್ತದೆ. ಈ ಡಿಮ್ಯಾಂಡಿನಲ್ಲಿ ತೋರಿಸಿದ ಹಣದ ಬಗ್ಗೆ ವಿಚಾರ ಮಾಡಿದ್ದೇ ಆದರೆ ನಮ್ಮ ದೇಶಕ್ಕೆ ಅಥವಾ ನಮ್ಮ ರಾಜ್ಯಕ್ಕೆ ಈ 7 ಕೋಟಿ ರೂಪಾಯಿಗಳು ಸಾಲದು ಎಂದು ನನ್ನ ಅಭಿಪ್ರಾಯ. ಮಹತ್ವದ ಈ ಅವಧಿಯಲ್ಲಿ ಈ ಒಂದು ತುರ್ತು ಪರಿಸ್ಥಿತಿಯಲ್ಲಿ ನಮ್ಮ ಮಂತ್ರಿಗಳಲ್ಲಿ ಕೆಲವೊಂದು ಸಲಹೆಗಳನ್ನು ಹೇಳಲು ಬಯಸುತ್ತಾ ಇದ್ದೇನೆ. ಈಗ 7 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದರೂ ಕೂಡ ಸಾಕಾದಷ್ಟು ಜನರಿಗೆ ಸಾಕಾದಷ್ಟು ಹಳ್ಳಿಗಳಲ್ಲಿ ದವಾಖಾನೆ, ಡಾಕ್ಟರುಗಳು ಮತ್ತು ಇತರ ಸೌಕರ್ಯಗಳನ್ನು ಒದಗಿಸಿದ್ದರೂ ಇನ್ನೂ ತೃಪ್ತಿಕರವಾಗಿಲ್ಲ ಎಂದು ಶಂಕೆ, ಸಂದೇಹ ಬರುತ್ತಾ ಇದೆ. ಆದಕ್ಕೆ ಅನೇಕ ಕಾರಣಗಳು ಇವೆ ಎಂದು ನನ್ನಭಾವನೆ ಇದೆ. ಒಂದನೇಯದು ಅನೇಕ ದವಾಖಾನೆಗಳನ್ನು ತೆರೆದಿದ್ದರೂ ಅದರಲ್ಲಿ ಡಾಕ್ಟರುಗಳಲ್ಲ. ಎರಡನೇಯದು ಡಾಕ್ಟರುಗಳು ಇದ್ದರೂ ದವಾಖಾನೆಯಲ್ಲಿ ಸಾಕಾದಷ್ಟು ಔಷಧಿ ಸೌಕರ್ಯ ಇಲ್ಲ. ಔಷದಿಯಿಲ್ಲ ಅಂತ ಅಂದರೆ ಅಲ್ಲಿ ದರವೊಂದೂ ಇಲ್ಲ ಅಂತಲೇ ಹೇಳುತ್ತಾರೆ. ಎಲ್ಲಿಯಾದರೊಂದು ಕ್ರಿಮಿನಲ್ ಕೇಸೋ, ಬಡಿದಾಟಾನೋ ಆದಾಗ ಪೋಲೀಸರು ಆ ಘಾಯಗೊಂಡವರನ್ನು ದವಾಖಾನೆಗೆ ಇಲಾಜಿಗೆ ಕರೆದುಕೊಂಡು ಹೋದಾಗ ಆಗ ಸಹಿತ ಆ ಬ್ಯಾಂಡೇಜ್ ಬಟ್ಟೆ ಕೂಡ ಇಲ್ಲ ಅಂತ ಹೇಳುತ್ತಾರೆ. ಆಗ ಆ ಘಾಯಗೊಂಡವನು ತನ್ನ ಸಂಬಂಧಿಗಳನ್ನೋ ಅಥವಾ ಮತ್ತೆ ಯಾರನ್ನಾದರೂ ಪೇಟೆಗೆ ಕಳುಹಿಸಿ ಆ ಅರಿವೆ ಬಟ್ಟೆತಂದು ಕೊಟ್ಟರೆ ಆಗ ಅವರು ಡ್ರೆಸ್ಸಿಂಗ್ ಮಾಡುತ್ತಾರೆ. ಆ ನಮ್ಮ ರಾಯಚೂರು ಜಿಲ್ಲೆಯಲ್ಲಿ ಇಂದು ಇಂಥ ಒಂದು ಪರಿಸ್ಥಿತಿಯುಂಟಾಗಿದೆ. ಹೀಗೆ ಯಾವಾಗ ಸರ್ಕಾರಿ ದವಾಖಾನೆಗಳಲ್ಲಿ ಸರಿಯಾಗಿ ಸಾಕಷ್ಟು ಔಷದಿಗಳಿರುವುದಿಲ್ಲವೋ ಆಗ ಅಲ್ಲಿರತಕ್ಕ ಅನಾನುಕೂಲಗಳನ್ನೆಲ್ಲ ನೋಡಿಕೊಂಡು ಈ ಪ್ರೈವೇಟ್ ಪ್ರಾಕ್ಟೀಷನರುಗಳು ಹೀಗೂ ಸರ್ಕಾರದ ವತಿಯಿಂದ ನಡೆಯುತ್ತಿರುವ ದವಾಖಾನೆಗಳೆಲ್ಲ ನಿರುಪಯೋಗವಾಗಿರುವುದರಿಂದ ತಮಗೆ ಲಾಭ ಆಗುತ್ತದೆಂತಲೇ ಅವರು ದವಾಖಾನೆಗಳನ್ನು ತೆಗೆಯುವುದಕ್ಕೆ ಅವಕಾಶ ಉಂಟಾಗಿದೆ. ಈ ದಿವಸ ಸರ್ಕಾರದ ವತಿಯಿಂದ ಈ ದವಾಖಾನೆಗಳು ಸರಿಯಾಗಿ ನಡೆಯದೆ ಇರುವ ಸಂದರ್ಭ ಪ್ರಾಯಿವೇಟ್ ದವಾಖಾನೆಗಳವರಿಗೆ ಒಂದು ಹೆಚ್ಚಿನ ಪ್ರೋತ್ಸಾಹವನ್ನುಂಟುಮಾಡಿದೆ ಅಂತ ಹೇಳದೆ ವಿಧಿಯಿಲ್ಲ. ಈ ದಿವಸ ಒಂದೊಂದು ದವಾಖಾನೆಗೂ ಸುಮಾರು 25 30 ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಇದರಲ್ಲಿ ಕೇವಲ ಔಷಧಿಗೆ ಖರ್ಚಾಗತಕ್ಕ ಮೊಬಲಗು ವರ್ಷಕ್ಕೆ 500-600 ರೂ. ಗಳು ಮಾತ್ರ. ಇನ್ನುಳಿದ ಹಣವೆಲ್ಲ ದವಾಖಾನೆಯ ಶಿಬ್ಬಂದಿ ವೆಚ್ಚಕ್ಕೆ ಖರ್ಚಾಗುತ್ತಿದೆ. ಇಂಥ ಒಂದೊಂದು ದವಾಖಾನೆ ಇರತಕ್ಕ ಪ್ರದೇಶದಲ್ಲಿ ಪ್ರಜಾಸಂಖ್ಯೆಯಾದರೋ ಹತ್ತು ಸಾವಿರಕ್ಕೆ ಕಡಮೆ ಇಲ್ಲದೆ ಒಂದು ಲಕ್ಷದವರೆಗೂ ಇರಬಹುದು. ಹೀಗೆ ಲಕ್ಷಾಂತರ ಜನಗಳಿರತಕ್ಕ ಒಂದು ದವಾಖಾನೆಗೆ ವರ್ಷಕ್ಕೆ 500-600 ರೂ. ಗಳನ್ನು ಔಷಧಿಗಾಗಿ ಒದಗಿಸಿರುವಾಗ ಇನ್ನು ಎಷ್ಟರಮಟ್ಟಿಗೆ ಆ ಜನರು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಅವಕಾಶವಿದೆ ಎಂಬುದನ್ನು ಸರ್ಕಾರದವರೇ ಗಮನಿಸಬೇಕಾಗಿ ಅವರಲ್ಲಿ ಪ್ರಾರ್ಥಿಸಿಕೊಳುತ್ತೇನೆ.

ಇನ್ನು ಕೆಲವು ತಾಲ್ಲೂಕುಗಳಲ್ಲಿ ದವಾಖಾನೆಗಳೇನೋ ಇವೆ. ಆದರೆ ಅಲ್ಲಿ ಇಂಪೇಷಂಟುಗಳಿಗೆ ಅವಕಾಶವಿರುವುದು ಒಬ್ಬರಿಗೋ ಅಥವಾ ಇಬ್ಬರಿಗೋ ಅಷ್ಟೇನೆ. ಇನ್ನು ಕೆಲವು ಆ ತಾಲ್ಲೂಕುಗಳ ದವಾಖಾನೆಯಲ್ಲಿ ಇಷ್ಟೂ ಕೂಡ ಇಲ್ಲ. ಅಂದರೆ ಈಗ ಈ ದವಾಖಾನೆಗಳ ಪರಿಸ್ಥಿತಿ ಎಲ್ಲಿಗೆ ಬಂದಿದೆಯೆಂದರೆ-ದವಾಖಾನೆಗಳಲ್ಲಿ ರೋಗಿಗಳಿಗೆ ಸಾಕಷ್ಟು ಚಿಕಿತ್ಸೆ ಮಾಡಲು ಔಷಧಿಗಳಿಲ್ಲ. ಕೆಲವು ಆಸ್ಪತ್ರೆಗಳಲ್ಲಿ ಡಾಕ್ಟರುಗಳೇ ಇರುವುದಿಲ್ಲ, ಇನ್ನು ಕೆಲವು ದವಾಖಾನೆಗಳಲ್ಲಿ ರೋಗಿಗಳಿಗೆ ಇರಲು ಜಾಗವಿಲ್ಲ ಅಂತ ಅಂದಾಗ ಅಲ್ಲಿ ಜನರ ಆರೋಗ್ಯ ಎಷ್ಟರಮಟ್ಟಿಗೆ ಇರಬಹುದು ಎಂಬುದನ್ನು ಸರ್ಕಾರದವರೇ ಊಹಿಸಬೇಕು. ಈ ದವಾಖಾನೆಗಳ ವ್ಯವಸ್ಥೆಗೆ ಸರ್ಕಾರದವರು ಕೂಡಲೆ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಈ ದಿವಸ ಸರ್ಕಾರದವರು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನಗಳ ಮೇಲೆ ರೂಪಾಯಿ ಒಂದಕ್ಕೆ 9 ನ. ಪೈ. ಗಳ ಹೆಲ್ತ್‌ಸೆಸ್ಸನ್ನು ಹಾಕಿದ್ದಾರೆ. ಇದರಿಂದ ಈಗ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿಗಳ ಸಂಪಾದನೆಯಾಗುತ್ತಿದೆ. ಹೀಗೆ ಈ ದಿವಸ ಹಳ್ಳೀ ಜನರಮೇಲೆ ಈ ಹೆಲ್ತ್‌ಸೆಸ್ಸನ್ನು ಹಾಕಿ ಅದರಿಂದ ಬರತಕ್ಕ ಹಣದಿಂದ ಈಗ ನಗರ-ಪಟ್ಟಣಗಳಲ್ಲಿರತಕ್ಕ ಜನರಿಗೆ ಔಷಧಿ ಸೌಕರ್ಯ

(ಶ್ರೀ ಎ. ಶರಣಪ್ಪ)

ವನ್ನು ಮಾಡಿಕೊಟ್ಟಂತಾಗಿದೆ. ಇಷ್ಟು ಹೊರತಾಗಿ ಇದರಿಂದ ಹಳ್ಳಿ ಜನರಿಗೆ ಈ ಹಣದಿಂದ ಯಾವ ಪ್ರಯೋಜನವೂ ಆಗಿಲ್ಲ. ಇದಕ್ಕಾಗಿ ನನ್ನ ಒಂದು ಸಲಹೆಯೇನೆಂದರೆ-ಈ ದಿವಸ ಸರ್ಕಾರದವರು ಯಾವ ರೀತಿ ಈ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಒಕ್ಕಲುತನದವರ ಮೇಲೆ ಈ ರೂಪಾಯಿಗೆ ಒಂಭತ್ತು ನಯಾಪೈಸಾ ಹೆಲ್ತ್ ಸೆಸ್ಸನ್ನು ಸರ್‌ಛಾರ್ಜನ್ನು ಹಾಕಿದ್ದಾರೊ ಹಾಗೇ ಪಟ್ಟಣಗಳಲ್ಲೂ-ನಗರಗಳಲ್ಲೂ ಇರತಕ್ಕ ಜನರಮೇಲೆ ಅವರ ಪ್ರಾಪರ್ಟಿಮೇಲೆ ಈ ಒಂದು ಟ್ಯಾಕ್ಸ್‌ನ್ನು ಹಾಕಿದರೆ ಆಗ ಸರ್ಕಾರಕ್ಕೆ ಇನ್ನೂ ಹೆಚ್ಚು ಉತ್ಪತ್ತಿ ಇದರಿಂದ ಬಂದಹಾಗಾಗುತ್ತದೆ. ಇದರಿಂದ ಹೆಚ್ಚು ಜನರಿಗೆ ಔಷಧಿ ಸರಬರಾಯಿ ಮಾಡಲು ಅವಕಾಶವಾಗುತ್ತದೆ. ಆದ್ದರಿಂದ ಈ ರೀತಿ ಮಾಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥಾನೆ ಮಾಡಿಕೊಳ್ಳುತ್ತೇನೆ.

ಆದರೆ ಈಗಾಗಲೇ ಈ ದವಾಖಾನೆಗಳಬಗ್ಗೆ-ಡಾಕ್ಟರುಗಳಬಗ್ಗೆ ಔಷಧಿಗಳಬಗ್ಗೆ ಮಾನ್ಯ ದಸ್ಯರನೇಕರು ಬೇಕಾದಷ್ಟು ಹೇಳಿದ್ದಾರೆ. ಆದುದರಿಂದ ನನ್ನ ಕೊನೆಯ ಒಂದು ಪ್ರಾರ್ಥನೆ ಏನೆಂದರೆ;—ನಾನೀಗ ಕಡೇದಾಗಿ ಆ ರಾಯಚೂರು-ಗುಲ್ಬರ್ಗ ಮತ್ತು ಬೀದರ್ ಆ ಮೂರು ಜಿಲ್ಲೆಗಳ ಪರವಾಗಿ ಒಂದೆರಡು ಮಾತುಗಳನ್ನಾಡಬೇಕೆಂದು ನಿಂತಿದ್ದೇನೆ. ಈ ಮೂರು ಜಿಲ್ಲೆಗಳಲ್ಲೂ ಸಾಕಷ್ಟು ಪ್ರಮಾಣದಲ್ಲಿ ದವಾಖಾನೆಗಳಿಲ್ಲ. ಅನೇಕ ದವಾಖಾನೆಗಳಲ್ಲಿ ಡಾಕ್ಟರುಗಳು ಇರುವುದಿಲ್ಲ. ಅಲ್ಲೊಂದು ಇಲ್ಲೊಂದು ದವಾಖಾನೆಗಳಲ್ಲಿದ್ದರೂ ಅಲ್ಲಿನ ಪರಿಸ್ಥಿತಿ ಬಹಳ ಕಷ್ಟಕರವಾಗಿದೆ. ಈ ಮೂರು ಜಿಲ್ಲೆಗಳ ಜನ ಸಂಖ್ಯೆಯನ್ನು ವಿಚಾರ ಮಾಡುವುದಾದರೆ ಅದು 30 ಲಕ್ಷಕ್ಕೂ (Thirty Lakhs) ಮೇಲ್ಪಟ್ಟಿದೆ. ಈ ಮೂರು ಜಿಲ್ಲೆಗಳೇನಿವೆ ಅಲ್ಲಿ ಆದಷ್ಟು ಹಳ್ಳಿ ಜನ ಸಂಖ್ಯೆಯೇ ಜಾಸ್ತಿಯಾಗಿದೆ. ಅಲ್ಲಿ ಸರಿಯಾಗಿ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಕೂಡ ಇರುವುದಿಲ್ಲ. ಕೆಲವೊಂದು ಹಳ್ಳಿಗಳಲ್ಲಿ ಕುಡಿಯುವ ನೀರಿಗಾಗಿ ಎಷ್ಟೇ ಪ್ರಯತ್ನ ಪಟ್ಟಾಗ್ಯೂ ಕುಡಿಯುವ ನೀರು ದೊರೆಯುತ್ತಿಲ್ಲ. ಹೀಗೆಲ್ಲ ಅಲ್ಲಿ ತೊಂದರೆಗಳಿವೆ. ಆ ಕ್ಷೇತ್ರದ ಜನರು ತಮ್ಮ ಒಂದು ಆರೋಗ್ಯವನ್ನು ಕಾಪಾಡಿಕೊಂಡು, ಅವರ ಭವಿಷ್ಯವನ್ನು ಕಟ್ಟಿಕೊಳ್ಳಲು ಆ ಕ್ಷೇತ್ರದ ಜನರನ್ನು ತಯಾರು ಮಾಡಲು ನಮ್ಮ ಕಲ್ಲುಬುರ್ಗಿಯಲ್ಲಿ ಈ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಆ ಪ್ರದೇಶಕ್ಕೆ ಎರಡು ಮೆಡಿಕಲ್ ಕಾಲೇಜುಗಳನ್ನು ಮಂಜೂರು ಮಾಡುವುದಾಗಿ ಕೇಂದ್ರ ಸರ್ಕಾರ ಒಪ್ಪಿಕೊಂಡಿದೆ. ಈ ವರ್ಷವೇ ಆ ಎರಡು ಮೆಡಿಕಲ್ ಕಾಲೇಜುಗಳನ್ನು ಅಲ್ಲಿ ಮಾಡಿಯೇ ತೀರಬೇಕು ಅಂತ ನಾನೀಗ ಸರ್ಕಾರದವರಲ್ಲೂ, ಮಾನ್ಯ ಮುಖ್ಯಮಂತ್ರಿಗಳವರಲ್ಲೂ ಮತ್ತು ಈ ಬಾಬಿಗೆ ಸಂಬಂಧಪಟ್ಟ ಮಂತ್ರಿಗಳವರಲ್ಲೂ ವಿನಯಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆದರೆ ಅಲ್ಲಿಗೆ ಈ ಮೆಡಿಕಲ್ ಕಾಲೇಜುಗಳನ್ನು ಕೊಡತಕ್ಕಬಗ್ಗೆ ಏನೋ ಒಂದು ವಿಷಯ ನನ್ನ ಕಿವಿಗೆ ಬಿದ್ದಿದೆ. ಅದನ್ನು ತಮ್ಮ ಮುಂದೆ ಈಗ ಸ್ಪಷ್ಟಪಡಿಸಲು ನಿಂತಿದ್ದೇನೆ. ನಮ್ಮ ಭಾರತವು ಸ್ವಾತಂತ್ರವನ್ನು ಸಂಪಾದಿಸುವ ಮುನ್ನ ಭಾರತೀಯರು ನಮಗೆ ಸ್ವಾತಂತ್ರ್ಯ ಕೊಡಬೇಕೆಂದು ಆ ಬ್ರಿಟಿಷರನ್ನು ಕೇಳುತ್ತಿದ್ದಾಗ-ಅವರು ಆ ಮುಸಲ್ಮಾನರು ಹಾಗೆ ಹೇಳುತ್ತಾರೆ, ಹಿಂದೂಗಳು ಹೀಗೆ ಹೇಳುತ್ತಾರೆ, ಆದ್ದರಿಂದ ನೀವೂ-ಅವರೂ ಅದನ್ನೆಲ್ಲ ಬಗೆ ಹರಿಸಿಕೊಂಡುಬನ್ನಿ ಆನಂತರ ನೋಡೋಣ ಎಂತ ಏನು ಅವರು ಹೇಳುತ್ತಿದ್ದರೋ ಅದೇ ಒಂದು ಭಾವನೆ ಮತ್ತು ನೀತಿ ಈ ದಿವಸ ಈ ನಮ್ಮ ಕಾಲೇಜುಗಳ ವಿಚಾರದಲ್ಲೂ ಬಂದಿರುವಂತೆ ಕಾಣುತ್ತಿದೆ. ಈ ದಿವಸ ಆ ಗುಲ್ಬರ್ಗದಲ್ಲಿರುವ ಜನರು ರಾಯಚೂರು ಜಿಲ್ಲೆಗೆ ಬೇಡ ಅನ್ನುತ್ತಾರೆ, ಹಾಗೆ ರಾಯಚೂರು ಜಿಲ್ಲೆಯವರು ಗುಲ್ಬರ್ಗ ಜಿಲ್ಲೆಗೆ ಬೇಡ ಅನ್ನುತ್ತಾರೆ ಏನು ಮಾಡುವುದು ಅಂತ ಹೇಳುತ್ತಿದ್ದಾರಂತೆ. ಆದರೆ ನಮ್ಮಲ್ಲಿ ಯಾವ ಕಾಲಕ್ಕೂ ಇಂಥ ಭೇದಭಾವನೆಗಳಿಲ್ಲ. ಸರ್ಕಾರದವರು ಈ ಸೌಲಭ್ಯವನ್ನು ರಾಯಚೂರಿಗೆ ಕೊಟ್ಟರು ಸಂತೋಷವೇ ಇಲ್ಲ ಗುಲ್ಬರ್ಗಕ್ಕೆ ಕೊಟ್ಟರೂ ಸಂತೋಷವೇ. ಒಟ್ಟಿನಲ್ಲಿ ಈ ಎರಡೂ ಒಂದೇ ದೇಶದಲ್ಲಿರುತ್ತವೆ. ಒಟ್ಟಿನಲ್ಲಿ ಆ ಕ್ಷೇತ್ರದ ಜನರ ಆರೋಗ್ಯದೃಷ್ಟಿ ಮುಖ್ಯ. ಅಲ್ಲಿಗೆ ಸರ್ಕಾರದವರು ತೀವ್ರವಾಗಿ ಈ ಮೆಡಿಕಲ್ ಕಾಲೇಜನ್ನಕೊಟ್ಟು ಅದನ್ನು ಕಾರ ರೂಪಕ್ಕೆ ಬೇಗ ಅತಿ ತೀವ್ರವಾಗಿ ತರಬೇಕೆಂದು ಕೇಳಿಕೊಳ್ಳುತ್ತೇನೆ. ಈ ಸ್ಥಳ ನಿರ್ಧರದಬಗ್ಗೆ-ಗುಲ್ಬರ್ಗ ಸೂಕ್ತವೆಂತ ಕಂಡು ಬಂದರೆ ಅಲ್ಲಿ ಮಾಡಲಿ, ಇಲ್ಲವೇ ರಾಯಚೂರಿನಲ್ಲಿ ಸೂಕ್ತ ಅಂತ ಕಂಡುಬಂದರೆ ಅಲ್ಲಾದರೂ ಮಾಡಬಹುದು. ಅಂತೂ ಕೆಲಸವನ್ನು ಕೂಡಲೇ ಕೈಗೊಳ್ಳಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಂಡು ನನಗೆ ಇಷ್ಟು ವಿಷಯ ಮಾತನಾಡಲು ಕೆಲವು ನಿಮಿಷಗಳಕಾಲಾವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri P. F. D'MELLOW (Nominated).—Mr. Speaker, Sir, I should like to touch on just a few points—When discussing the question of Medical Demand.

Last year, we heard from the Hon'ble Minister for Health that the Government intended to provide suitable hospitals for the treatment of incurable diseases. I am making these observations on this occasion so that the Hon'ble Minister will be able to assure us that we are somewhat nearer that goal.

Sir, the second point I would like to draw the attention of the Government is the question of *Hansen's* disease. I had some personal experience when I used to be attached to the Beggar Relief Committee in this State. To my mind Sir, it is a great pity that anybody should reach the state of disfigurement in what we see so many cases of leprosy. There is really no scientific reason why anybody who is suffering from *Hansen's* disease, should not as a matter of right be provided with facilities for early diagnosis. I submit for the consideration of the Hon'ble Minister that today it is a blot on our civilised society and Government.....

Mr. SPEAKER.—The House will now rise and meet again on Monday at 1 P.M. Sri D'Mellow may continue this speech on Monday.

The House adjourned at One of the Clock to meet again at One of the Clock on Monday, the 18th March 1963.

THE
MYSORE LEGISLATIVE ASSEMBLY
DEBATES

OFFICIAL REPORT
OF THE
PROCEEDINGS OF THE TWENTIETH DAY
OF THE
THIRD SESSION

MONDAY, 18TH MARCH 1963

Vol. III—No. 20

MYSORE LEGISLATURE LIBRARY
BANGALORE.

BANGALORE:
PRINTED BY THE DIRECTOR OF PRINTING, STATIONERY AND
PUBLICATIONS AT THE GOVERNMENT PRESS
1963

Price : 25 nP.

CONTENTS

PAGES

Starred Questions and Answers ... 1375—1391

Questions for answers on the day (but not taken up) ... 1392—1396

Member's Representations ... 1396—1397

Budget Estimates for 1963-64—Demands for Grants—

Demand No. 18. Medical
Demand No. 19. Public Health (Voted) ... } 1397—1427

Demand No. 31. Public Works—(Debate not concluded) 1427—1439

MYSORE LEGISLATURE LIBRARY
BANGALORE.

MYSORE LEGISLATIVE ASSEMBLY

TWENTIETH DAY.

Monday, 18th March 1963.

The House met in the Assembly Hall, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.), in the Chair.

STARRED QUESTIONS

(to which oral answers were given)

Number of Loan Applications recommended by the Primary Co-operative Land Mortgage Bank, Ltd., in Belgaum and Gulbarga Divisions.

* *Q.*—58. **Sri C. S. HULKOTI** (Mundargi).—

Will the Government be pleased to state :—

(*a*) the total number of loan applications recommended by each of the Primary Co-operative Land Mortgage Bank, Ltd., in Belgaum and Gulbarga Revenue Divisions to the Central Co-operative Land Mortgage Bank, Ltd., Mysore State, Bangalore, in 1960, 1961 and 1962 ;

(*b*) out of the total number of such applications received how many applications were sanctioned and how many were rejected ;

(*c*) what is the minimum and maximum period of time taken by the Central Land Mortgage Bank, Ltd., for sanctioning an application in the said Belgaum and Gulbarga Divisions ;

(*d*) what is the minimum and maximum time taken for despatching the loan amount sanctioned to the Primary Land Mortgage Banks after the requisition for sending the amount sanctioned is made by a Primary Co-operative Land Mortgage Bank, Ltd. ;

(*e*) whether it has come to the notice of the Government that there is a general complaint by the applicants that they are getting loans from Co-operative Land Mortgage Bank, Ltd., after great length of time even after a year and year and half ?

A.—**Sri KONDAJJI BASAPPA** (Deputy Minister for Co-operation).—

(*a*) and (*b*) *Vide* statement given below.

(*c*) Normally 2 to 4 months.

(*d*) Normally 30 to 40 days.

(*e*) Yes.

Statement showing Loan Applications received in the Central Land Mortgage Bank from the Primary Land Mortgage Banks of Belgaum and Gulbarga Divisions for the years 1960, 1961 and 1962.

Belgaum Division

		1960			1961			1962			Total		
Sl. No.	Name of L. M. Bank	Recommended	Sanction	Rejection	Recommended	Sanction	Rejection	Recommended	Sanction	Rejection	Recommended	Sanction	Rejection
1	2	3	4	5	6	7	8	9	10	11	12	13	14
1	Belgaum	33	33	...	28	29	1	15	18	...	76	80	1
2	Hubli	19	14	...	10	2	...	6	4	...	35	20	...
3	Dharwar	49	37	..	48	36	...	40	34	1	137	107	1
4	Gadag	11	10	...	39	27	...	20	22	...	70	59	...
5	Haveri	24	21	...	17	15	1	16	15	...	57	51	1
6	Bijapur	72	33	3	115	83	5	47	57	3	234	173	11
7	Sirsi	4	8	...	20	9	...	32	15	3	56	32	3
8	Jamkhandi	...	...	...	...	...	...	52	28	1	52	28	1
9	Bailhongal	...	...	...	...	...	...	70	21	2	70	21	2
10	Gakak	...	...	...	...	...	...	10	2	1	10	2	1
11	Raibagh	...	...	...	...	...	...	6	3	...	6	3	...
	Total ...	212	156	3	277	201	7	314	219	11	803	576	21

Gulbarga Division.

		1960			1961			1962			Total		
Sl. No.	Name of L. M. C. Society.	Recommended	Sanction	Rejection	Recommended	Sanction	Rejection	Recommended	Sanction	Rejection	Recommended	Sanction	Rejection
1	2	3	4	5	6	7	8	9	10	11	12	13	14
1	Yadgir	26	20	...	84	46	1	19	11	...	129	77	1
2	Gangavati	48	11	1	91	56	5	81	74	...	220	141	6
3	Bhalki	...	...	...	8	...	...	6	3	...	14	3	...
4	Yelburga	...	...	...	4	2	1	4	1	...	8	3	1
5	Alland	...	...	...	16	7	1	9	13	..	25	20	1
6	Deodurga	...	...	...	...	...	...	84	49	1	84	49	1
7	Raichur	...	...	...	...	...	...	15	8	1	15	8	1
8	Shorapur	...	...	...	...	...	...	69	20	...	69	20	...
9	Kushtagi	..	...	...	...	...	...	45	19	...	45	19	...
10	Koppal	...	...	...	...	...	...	46	2	1	46	2	1
11	Humnabad	...	...	...	...	...	...	9	2	...	9	2	...
12	Aurad	...	...	...	...	...	...	5	1	...	5	1	...
	Total	74	31	1	203	111	8	392	203	3	669	345	12

Note.—The number of loan applications is more in some years on account of the loan cases of previous years being sanctioned during the accounting year.

Sri C. S. HULKOTI.—May I know, Sir, why the loan applications are delayed for three to four months for sanction ?

† **Sri KONDAJJI BASAPPA.**—Yes, it is admitted.

Mr. SPEAKER.—Why should there be any delay ? Could it not be expedited ? Is that period necessary ?

---

†Indicates that the remarks or speeches have not been revised by the member concerned.

Sri KONDAJJI BASAPPA.—Yes, Sir, because the primary land mortgage banks which are recently formed in Gulbarga Division and Belgaum Division have not got the assistance of legal advocate and also many of them have not got even a trained personnel as secretary. They also do not have land valuation officers. For these reasons, the applications which were received by the Central Land Mortgage Banks as recommended by the Primary Banks have to be sent back for certain clarifications. The delay was only due to that.

Sri C. S. HULKOTI.—Is the Government aware that in Dharwar District, the loan applications are transmitted to Central Banks after the completion of scrutiny and there is no necessity to send back the applications for clarification ?

Sri KONDAJJI BASAPPA.—In some cases, probably Gadag and Dharwar which were formed earlier than the merger in 1956, they have legal advisers. But even there, the legal advisers at the Central Bank differ from the legal advisers at the Primary Land Mortgage Banks. Two lawyers do not always agree. And therefore the loan applications are sent back to Primary Land Mortgage Banks and hence there is delay.

Sri C. S. HULKOTI.—Is the Government aware that in the Land Mortgage Banks, Co-operative Conference, it is recommended that some of the powers of sanction of loans to some extent should be entrusted to the Primary Co-operative Land Mortgage Banks ?

Sri KONDAJJI BASAPPA.—Yes. Not only the Co-operative Conference at Mysore, even the All-India Co-operative Conference held in 1958 have recommended that procedure should be simplified for the sanction of loans. They have said in their recommendation that the Primary Land Mortgage Bank may be authorised to sanction up to Rs. 3,000 so that we can eliminate 75 per cent of the loan applications which are now received by the Central Bank to be finalised by the Primary Banks themselves. That is number one. The further recommendation that they have sent is : we are now insisting upon a 23 year encumbrance certificate. But they have said that 12 years encumbrance certificate will do. Probably if these two points are settled at the Government level, delay may be eliminated to a large extent. We are examining these at the Government level and we are likely to issue an order on these aspects very shortly.

Sri C. S. HULKOTI.—May I know, Sir, whether within a month or two the orders will be issued by the Government ?

Sri KONDAJJI BASAPPA.—I can assure the House that within a month or two orders will be issued.

Sri D. M. SIDDAIYA.—In the answers it is said that applications are held over for a year or more.

Sri KONDAJJI BASAPPA.— I have said that, yes. The answers are there.

Sri D. M. SIDDAIYA.—The Hon'ble Minister was pleased to say that they are decided normally within 2 to 4 months.

Sri KONDAJJI BASAPPA.—That is answer to (*d*) pertaining to Gulbarga and Belgaum Divisions only. Normally the loan applications are sanctioned within 2 to 4 months. In the case of Gulbarga and Belgaum where they have no legal assistance and trained Secretary, it is found necessary to send back applications for clarifications and the delay is due to that.

Sri D. M. SIDDAIYA.—Does it mean to say that the sanction of the loan applications are held up by a year or even more throughout the State ?

Sri KONDAJJI BASAPPA.—No, in old Mysore area, they are getting sanctioned earlier.

Sri C. S. HULKOTI.—Sir, even after sanction, to realise the amount, it takes about three or four months : has it come to the notice of the Government ?

Sri KONDAJJI BASAPPA. When the loan is sanctioned, the primary land mortgage bank has to send the mortgage deed executed by the parties. Immediately the deed is received, the amount is paid.

ಶ್ರೀ ಸಿದ್ದಯ್ಯ ಕಾಶೀಮಠ.—ಬೆಳಗಾಂ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಅರ್ಜಿ ಕಳುಹಿಸಿರುವುದನ್ನು ಹೇಳಿದ್ದೀರಿ. ಅರ್ಜಿ ಕಳುಹಿಸದೇ ಇರತಕ್ಕ ಬ್ಯಾಂಕುಗಳು ಎಷ್ಟು ಇವೆ ?

ಶ್ರೀ ಕೊಂಡಜ್ಜಿ ಬಸಪ್ಪ.—ಪಟ್ಟಿಯಲ್ಲಿ ಅದೂ ಇದೆ.

ಶ್ರೀ ಸಿದ್ದಯ್ಯ ಕಾಶೀಮಠ.—ಅರ್ಜಿ ಕಳುಹಿಸದೇ ಇರತಕ್ಕ ಬ್ಯಾಂಕುಗಳು ಎಷ್ಟು ಅನ್ನುವುದು ಇಲ್ಲಿ ಇಲ್ಲ.

Sri KONDAJJI BASAPPA.—Sir, in Belgaum Division, as I have mentioned, there are only 11 Banks.

ಶ್ರೀ ಸಿ. ಎಸ್. ಹುಲಕೋಟಿ.—ಈ ಮೊಬಲಗನ್ನು ಡೈರೆಕ್ಟರುಗಳೇ ಮಂಜೂರು ಮಾಡಲಿಕ್ಕೆ ಸಾಧ್ಯವಾಗುವಂತೆ ಅನುಕೂಲ ಕಲ್ಪಿಸಲು ಏನಾದರೂ ವಿಚಾರ ಮಾಡುತ್ತಾ ಇದ್ದೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ಅದು ಸ್ವಲ್ಪ ಕಷ್ಟವಾಗಬಹುದು. It is a matter for further examination.

ಶ್ರೀ ಎಚ್. ಆರ್. ಕೇಶವಮೂರ್ತಿ.—12 ವರ್ಷದ ಎನ್‌ಕಂಬರೆನ್ಸ್ ಸರ್ಟಿಫಿಕೇಟ್ ಸಾಕು ಎಂದು ಹೇಳುತ್ತೀರಿ. ಲೋಕಲ್ ಕಮಿಟ್‌ಮೆಂಟ್ ಏನಿದೆ ಎಂಬ ಸಂಪೂರ್ಣ ಸಮಾಚಾರ ಸಿಕ್ಕತ್ತದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—Adverse position ಎಂದರೆ 12 ವರ್ಷ. 12 ವರ್ಷ ಸಾಕು ಎಂದು ಆಲ್ ಇಂಡಿಯಾ ಕಾನ್‌ಫರೆನ್ಸ್‌ನಲ್ಲಿ ಮತ್ತು ಮೈಸೂರು ಸಂಸ್ಥಾನ ಕಾನ್‌ಫರೆನ್ಸ್‌ನಲ್ಲಿ ಸಿಫಾರ್ಸು ಮಾಡಿದ್ದಾರೆ. We are examining all aspects, whether it is desirable to follow. ಯೋಚನೆಮಾಡಿ ಇಷ್ಟರಲ್ಲೇ ಒಂದು ಗವರ್ನ್‌ಮೆಂಟ್ ಆರ್ಡರ್ ಹೊರಡಿಸುತ್ತೇವೆ.

Profit or Loss in each of the Government Silk Filatures in the State.

*_Q._—95. **Sri S. KARIAPPA** (Kanakapura).—

Will the Government be pleased to state :—

(*a*) the profit or loss in each of the Government Silk Filatures in the State during the years 1960-61, 1961-62, and 1962-63 :

1. Government Silk Filature, Mysore,
2. Government Silk Filature, Kollegal,
3. Government Silk Filature, Kanakapura ;

(SRI S. KARIAPPA)

(*b*) the various suggestions made by the Committee constituted for the purpose of getting suggestions for improvement of Filature;

(*c*) the extent to which they have been adopted;

(*d*) the results after adoption of them?

A.—**Sri R. DAYANAND SAGAR** (Deputy Minister for Sericulture).—

(*a*)	1960-61	1961-62	1962-63
	Rs. nP.	Rs. nP.	
(1)	—6,14,06 —54	—6,72,713—82	Accounts will be ready only after 31st March 1963.
(2)	—4,34,210—59	—3,25,909—86	
(3)	—3,93,748—29	—1,34,084—02	

(*b*) The Committee constituted by Government in their Order No: CI 13 SFL 60, dated 20th April 1960 did not take up the work in view of the fact that the Central Silk Board, subsequently during April 1961, constituted a Fact Finding Committee with Dr. H. L. Dey, Retired Chairman of the Indian Tariff Commission and Member, International Monetary Fund, to go into the working of the Filatures and to suggest measures for placing them on sound lines. The main recommendations of that Committee are;

(i) to increase the active filature reeling capacity to 1,250 basins by 1963-64 from the current level of 750 basins;

(ii) to increase production of filature raw silk in the State from 1.60 lakhs lbs. 4.00 lakhs lbs. by the end of 1965-66;

(iii) to increase the number of cottage basins in the State from 2,000 to 4,900 by the end of 1965-66;

(iv) to bring down progressively the cost of filature silk in Government Filatures to Rs. 38 per lb. by the end of 1965-66.

(v) to establish and effectively operate the regulated cocoon markets with immediate effect as provided in the Mysore Silkworm Seed and Cocoon (Regulation of the Production, Supply and Distribution) Act, 1959.

(*c*) (i) Government have passed orders agreeing in principle to increase the number of basins from present level to 1,450 basins.

(ii) When the number of working basins are gradually increased as above, the production of filature silk is expected to increase gradually from 1.60 lakhs to 4 lakhs lbs. per annum by the end of 1965-66.

(iii) The number of cottage basins has already been increased to about 3,000.

(iv) When the production is increased gradually as per programme indicated under item (i) above, the cost is expected to be reduced. The extent to which it could be reduced depends upon many actors like, cost of raw-materials, labour and other charges.

(v) Thirty-three Cocoons Markets have also been established in Chamarajanagar and Kollegal Divisions of Mysore State and it is proposed to establish similar markets in Channapatna, Mysore Divisions during the year 1963-64.

(*d*) Results will be known after implementation of the recommendations of the Committee in full.

ಶ್ರೀ ಎಸ್. ಕರಿಯಪ್ಪ.—ಈಗ ಸುಮಾರು 15 ವರ್ಷಗಳಿಂದ ಇದೇ ರೀತಿ ನಷ್ಟವಾಗುತ್ತಾ ಇದ್ದರೂ ಕೂಡ ಇದನ್ನು ಸರಿಪಡಿಸುವುದಕ್ಕೆ ಆಗದೇ ಇರುವುದನ್ನು ನೋಡಿದರೆ ಈ ವಿಷಯದಲ್ಲಿ ಸರ್ಕಾರ ಅಸಮರ್ಥವಾಗಿದೆ ಎಂದು ಭಾವಿಸೋಣವೇ ?

ಶ್ರೀ ಆರ್. ದಯಾನಂದ ಸಾಗರ್.—15 ವರ್ಷದಿಂದ ಹೀಗೆಯೇ ಇಲ್ಲ. ಆದಷ್ಟು ಮಟ್ಟಿಗೆ ನಷ್ಟ ಕಡಿಮೆ ಮಾಡುವುದಕ್ಕೆ ಏರ್ಪಾಡುಮಾಡಿದ್ದೇವೆ. ಲೆಕ್ಕಪತ್ರ ನೋಡಿದರೆ 1960-61ರಲ್ಲಿ ಇದ್ದ ನಷ್ಟಕ್ಕಿಂತ 1961-62ರಲ್ಲಿ ಕಡಿಮೆಯಾಗಿದೆ.

ಶ್ರೀ ಎಸ್. ಕರಿಯಪ್ಪ.—ಈ ವರ್ಷ 3 ಲಕ್ಷ ರೂಪಾಯಿಗಳಿಗೂ ಮೇಲೆ ನಷ್ಟವಾಗಿದೆ ಎನ್ನುವುದನ್ನು ತಾವು ಗಮನ ಇಟ್ಟು ನೋಡಿದ್ದೀರಾ ?

ಶ್ರೀ ಆರ್. ದಯಾನಂದ ಸಾಗರ್.—ಈ ವರ್ಷದ ಲೆಕ್ಕ ಪತ್ರ ಬಂದಿಲ್ಲ; 31-3-1963ರ ಮೇಲೆ ಬರುತ್ತದೆ. ಆಗ ತಮಗೆ ವಿಷಯ ತಿಳಿಸುತ್ತೇನೆ.

ಶ್ರೀ ಸಿ. ಅರ್. ರಂಗೇಗೌಡ.—ಈ ಎರಡು ತಾಲ್ಲೂಕಿನಲ್ಲೂ ಫಿಲೇಚರ್ಸ್‌ನಲ್ಲಿ ನಷ್ಟವಾಗಿರುವುದು ಕಾಣುತ್ತಾ ಇದೆ. ಇದನ್ನು ತಪ್ಪಿಸಿ ಆದಾಯ ಬರುವಂತೆ ಮಾಡಬೇಕಾದರೆ ಫಿಲೇಚರ್‌ಗೆ ಒಬ್ಬ ಡೈರೆಕ್ಟರು, ಸಿರಿಕಲ್ಚರ್‌ಗೆ ಒಬ್ಬ ಡೈರೆಕ್ಟರು ತಜ್ಞರಾಗಿರುವವರನ್ನು ನೇಮಕಮಾಡಿ ರೈತರಿಗೆ ಅನುಕೂಲ ಮಾಡಿಕೊಡುತ್ತಿರಾ ?

ಶ್ರೀ ಆರ್. ದಯಾನಂದ ಸಾಗರ್.—ಅದನ್ನು ಪರ್ಯಾಲೋಚನೆ ಮಾಡುತ್ತೇವೆ.

ಶ್ರೀ ಎಸ್. ಕರಿಯಪ್ಪ.—ಫ್ಯಾಕ್ಟ್ಸ್‌ಫೈಂಡಿಂಗ್ ಕಮಿಟಿ ಅವರ ರಿಪೋರ್ಟಿನ ಮೇಲೆ ಸರ್ಕಾರದ ಆರ್ಡರ್ ಸಾದರುಮಾಡಿದ್ದು ಯಾವಾಗ ?

ಶ್ರೀ ಆರ್. ದಯಾನಂದ ಸಾಗರ್.—ಅವರು ರಿಪೋರ್ಟ್ ಕೊಟ್ಟ ತಕ್ಷಣ ಮೂರು ತಿಂಗಳ ಒಳಗೆ ಸಾದರು ಮಾಡಿದ್ದೇವೆ.

ಶ್ರೀ ಎಸ್. ಕರಿಯಪ್ಪ.—ಜಾರಿಗೆ ಬಂದ ಮೇಲೆ ಇದರ ಸ್ಥಿತಿಗತಿ ಉತ್ತಮಗೊಳ್ಳಬಹುದು ಎಂದು ಹೇಳಿದ್ದೀರಿ, ಇನ್ನೂ ಜಾರಿಗೆಬರದೇ ಇರುವುದಕ್ಕೆ ಕಾರಣವೇನು ?

ಶ್ರೀ ಆರ್. ದಯಾನಂದ ಸಾಗರ್.—ಹಂತಹಂತವಾಗಿ ಜಾರಿಗೆ ಬರಬೇಕಾಗಿದೆ. 1965-66ರ ಒಳಗೆ ಪೂರ್ಣವಾಗಿ ಜಾರಿ ಆಗುವ ನಿರೀಕ್ಷೆ ಇದೆ, ಸ್ಕೀಂ ನಡೆಯುತ್ತಾ ಇದೆ.

ಶ್ರೀ ಎಸ್. ಕರಿಯಪ್ಪ.—ಈಗ ಜಾರಿಗೆ ಬಂದಿರತಕ್ಕ ಅಲ್ಪ ಅವಧಿಯಲ್ಲಿ ಏನಾದರೂ ಸ್ವಲ್ಪ ಬದಲಾವಣೆ ಆಗಿರುವುದನ್ನು ನೋಡಿದ್ದೀರಾ ?

ಶ್ರೀ ಆರ್. ದಯಾನಂದ ಸಾಗರ್.—ಆಗುತ್ತಾ ಇದೆ. ಅದನ್ನು ನೋಡುತ್ತಾ ಇದ್ದೇವೆ.

ಶ್ರೀ ಡಿ. ಎಂ. ಸಿದ್ದಯ್ಯ.—ಫ್ಯಾಕ್ಟ್ಸ್‌ಫೈಂಡಿಂಗ್ ಕಮಿಟಿಯವರು 5 ಶಿಫಾರಸುಗಳನ್ನು ಮಾಡಿದ್ದಾರೆ. ಅದರಲ್ಲಿ ಎಷ್ಟು ಶಿಫಾರಸುಗಳನ್ನು ಜಾರಿಗೆ ತಂದಿದ್ದೀರಿ ?

ಶ್ರೀ ಆರ್. ದಯಾನಂದ ಸಾಗರ್.—ಎಲ್ಲವನ್ನೂ ಕೊಂಚಮಟ್ಟಿಗೆ ತಂದಿದ್ದೇವೆ. ಹಂತಹಂತವಾಗಿ ಬರುತ್ತದೆ ಎಂದು ಆಗಲೇ ಹೇಳಿದೆ.

ಶ್ರೀ ಟಿ. ಮಾದಯ್ಯಗೌಡ.—ಫ್ಯಾಕ್ಟ್ಸ್‌ಫೈಂಡಿಂಗ್ ಕಮಿಟಿಯವರು ನಮ್ಮ ದೇಶದವರಲ್ಲ. ನಮ್ಮ ಸ್ಥಳದ ಸ್ಥಿತಿಗತಿಗಳನ್ನು ತಿಳಿಯದೇ ಇದ್ದವರು ಆ ಕಮಿಟಿಯಲ್ಲಿ ಇದ್ದು ಎಷ್ಟರ ಮಟ್ಟಿಗೆ ಆ ಶಿಫಾರಸುಗಳು ನಮಗೆ ಅನ್ವಯವಾಗುತ್ತದೆಯೋ, ಇಲ್ಲವೊ ಗೊತ್ತಿಲ್ಲ. ಆದರೆ ತಾವು ಮಾಡಿದಂಥ ಕಮಿಟಿ ಏಕೆ ಕೆಲಸ ಮಾಡಬಾರದಾಗಿತ್ತು ? ಅವರೇಕೆ ಈ ವಿಷಯಗಳನ್ನು ತಿಳಿದುಕೊಂಡು ಕೂಲಂಕಷವಾಗಿ ತಮಗೆ ರಿಪೋರ್ಟ್ ಮಾಡಬಾರದಾಗಿತ್ತು ಎಂಬುದನ್ನು ದಯವಿಟ್ಟು ತಿಳಿಸುತ್ತಿರಾ ?

ಶ್ರೀ ಆರ್. ದಯಾನಂದ ಸಾಗರ್.—ಸೆಂಟ್ರಲ್ ಸಿಲ್ಕ್ ಬೋರ್ಡಿನವರು ಅನೇಕ ಪಾಲಸಿಗಳನ್ನು ಹಾಕುತ್ತಾರೆ. ಅದರ ಪ್ರಕಾರ ನಾವೂ ಕೂಡ ಕೆಲಸ ಮಾಡಬೇಕಾಗುತ್ತದೆ. ಶ್ರೀಯುತ ಎಸ್. ಕೆ. ಡೇ ಅವರು ಪ್ರತಿಭಾವಂತ ವ್ಯಕ್ತಿಗಳು ಅವರ ಮುಖಂಡತ್ವದಲ್ಲಿ ಈ ಕಮಿಟಿ ನೇಮಕವಾಗಿತ್ತು, ಅವರು ಸಲಹೆ ನೀಡಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮೊನ್ನೆ ತಾನೆ ಮಾನ್ಯ ಮಂತ್ರಿಗಳು ಆಯವ್ಯಯ ಪಟ್ಟಿಯ ಚರ್ಚೆಗೆ ಉತ್ತರ ಕೊಡತಕ್ಕ ಕಾಲದಲ್ಲಿ ಈ 15 ಲಕ್ಷ ರೂ.ಗಳ ಲುಕ್ಸಾನನ್ನು 7-8 ಲಕ್ಷಕ್ಕೆ ಇಳಿಸಿರುವುದಾಗಿ ತಿಳಿಸಿದ್ದರು. ಆದರೆ ಈಗ ಇಲ್ಲಿ ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ಲೆಕ್ಕ ಹಾಕಿ ನೋಡಿದರೆ ಹಾಗೆ ಕಾಣುವುದಿಲ್ಲ. ಆದಾಗ್ಯೂ ಮಂತ್ರಿಗಳು ಹೇಗೆ ಕಡಮೆ ಮಾಡಿದ್ದೇವೆಂತ ಅ ದಿವಸ ಹೇಳಿದರು ?

ಶ್ರೀ ಆರ್. ದಯಾನಂದ ಸಾಗರ್.—ಈ ವರ್ಷದ ಲೆಕ್ಕ ಪತ್ರಗಳು ಇನ್ನೂ ಆಡಿಟ್ಟಾಗಿಲ್ಲ ಎಂತ ಆಗಲೆ ಉತ್ತರ ಕೊಟ್ಟಿದ್ದೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವು ಹೇಳುತ್ತಿರುವ ಆಡಿಟ್ ಸಮಾಚಾರ ಮೂರನೇ ವರ್ಷಕ್ಕೆ ಸಂಬಂಧಪಟ್ಟದ್ದು. ನಾನೀಗ ಕೇಳುತ್ತಿರುವುದು ಇದರ ಹಿಂದಿನ ಎರಡು ವರ್ಷಗಳಲ್ಲಿ ಎಷ್ಟು ನಷ್ಟವನ್ನು ಕಡಮೆ ಮಾಡಿದ್ದೀರಾ ಎಂಬುದಕ್ಕೆ ಅಂಕಿ ಅಂಶಗಳನ್ನು ಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—ನಾನು ಆ ದಿವಸ ಹೇಳಿದ್ದು ವರ್ಷೆ ವರ್ಷೆ ನಮಗೆ ಈ ಬಾಬಿನಲ್ಲಿ 15 ಲಕ್ಷ, 12 ಲಕ್ಷ ಹೀಗೆಲ್ಲಾ ನಷ್ಟವಾಗುತ್ತದೆ. ಈ ನಷ್ಟವನ್ನು ಆದಷ್ಟೂ ಪ್ರಯತ್ನಪಟ್ಟು 1962-63ರ ಆಖೈರಿನೊಳಗಾಗಿ ಈಗಾಗುತ್ತಿರುವ ನಷ್ಟದಲ್ಲಿ ಅರ್ಧಭಾಗವನ್ನಾದರೂ ಕಡಮೆ ಮಾಡುವುದಕ್ಕೆ ಪ್ರಯತ್ನಮಾಡುತ್ತಿದ್ದೇವೆಂತ ಹೇಳಿದ್ದೆನು. ಆದರೆ ಈಗ 62-63ನೇ ಸಾಲಿನ ಲೆಕ್ಕಪತ್ರಗಳೆಲ್ಲ ಆಡಿಟ್ಟಾಗಿ ಮಾರ್ಚಿ ಆಖೈರಿಗೆ ಬರುತ್ತವೆ. ಈಗಾಗಲೇ ನಾವು ಶ್ರೀ ಎಸ್. ಕೆ. ಡೇ ಅವರ ಸಲಹೆಗಳನ್ನು ಬಹಳ ಮಟ್ಟಿಗೆ ಜಾರಿಗೆ ತಂದಿದ್ದೇವೆ. ಅದರಿಂದ ಈ ವರ್ಷದಲ್ಲಿ ಈ ನಷ್ಟ ಕಡಮೆ ಇರುತ್ತೆ ಅಂತ ಹೇಳಿದ್ದೇನೆ.

ಶ್ರೀ ಟಿ. ಮಾದಯ್ಯಗೌಡ.—ಖಾಸಗೀ ಸಂಸ್ಥೆಗಳವರು ಈ ಉದ್ಯಮದಲ್ಲಿ ಲಾಭ ಸಂಪಾದನೆ ಮಾಡುತ್ತಿರುವಾಗ ಸರ್ಕಾರಿ ಉದ್ಯಮದಲ್ಲಿ ಹೀಗೆ ವರ್ಷೆ ವರ್ಷೆ ಲುಕ್ಸಾನಾಗುತ್ತಿರುವುದಕ್ಕೆ ಕಾರಣವೇನು ?

ಶ್ರೀ ಆರ್. ದಯಾನಂದ ಸಾಗರ್.—ಖಾಸಗೀ ಜನರು ಲಾಭ ಸಂಪಾದಿಸುತ್ತಿದ್ದಾರೆಂಬುದಾಗಿ ಅವರು ಹೇಳಿದ್ದನ್ನು ನಾನು ಒಪ್ಪುವುದಿಲ್ಲ. ಆದರೆ ಸರ್ಕಾರದವರು ಈ ಉದ್ಯಮವನ್ನು ಬಡ ಜನರಿಗೆ ಜೀವನೋಪಾಯವನ್ನು ಕಲ್ಪಿಸತಕ್ಕ ದೃಷ್ಟಿಯಿಂದಲೂ ಕೈಗೊಂಡಿದ್ದಾರೆ. ಈ ದಿವಸ ಈ ಕೈಗಾರಿಕೆಯಲ್ಲಿ ಉತ್ಪತ್ತಿಯಾಗತಕ್ಕ ಕಕೂನಿನಲ್ಲಿ ಶೇ. 20 ರಷ್ಟನ್ನು ನಾವು ಕೊಂಡುಕೊಳ್ಳುತ್ತಿರುವುದರಿಂದ ಅಷ್ಟರಮಟ್ಟಿಗೆ ಈ ಕಸುಬಿನಲ್ಲಿರತಕ್ಕ ಜನರಿಗೆ ಇದರಿಂದ ಅನುಕೂಲವಾಗಿದೆ.

ಶ್ರೀ ಡಿ. ಎಂ. ಸಿದ್ಧಯ್ಯ.—ಈಗ ತಾವು ಚಾಮರಾಜನಗರ ಮತ್ತು ಕೊಳ್ಳೇಗಾಲ ತಾಲ್ಲೂಕುಗಳಲ್ಲಿ ಮೂರು ಕಕೂನ್ ಮಾರ್ಕೆಟ್‌ಗಳನ್ನು ಸ್ಥಾಪಿಸಲಾಗಿದೆ ಎಂತ ಹೇಳೋಣವಾಗಿದೆ. ಹಾಗೇ ಈ ಚನ್ನಪಟ್ಟಣ ತಾಲ್ಲೂಕಿನಲ್ಲಿ ಯಾವಾಗ ಈ ಕಕೂನ್ ಮಾರ್ಕೆಟ್ಟನ್ನು ಸ್ಥಾಪನೆ ಮಾಡುತ್ತೀರಿ ?

ಶ್ರೀ ಆರ್. ದಯಾನಂದ ಸಾಗರ್.—ಅಲ್ಲಿಯೂ ಕೂಡ ಈ ವರ್ಷದ ಏಪ್ರಿಲ್ ತಿಂಗಳಾಖೈರೊಳಗಾಗಿ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ.

Repair to Adalli Guruvinakatte Tank in Santhebachanalli Hobli, Krishnarajapet Taluk.

*Q.—484. **Sri N. NANJE GOWDA** (Krishnarajapet).—

Will the Government be pleased to state:—

(a) the year in which Adalli Guruvinakatte tank in Santhebachanalli Hobli, Krishnarajapet Taluk, was constructed ;

(b) when it breached ;

(c) the persons responsible therefor ;

(d) when they propose to repair this tank ?

A.— **Sri ALUR HANUMANTHAPPA** (Deputy Minister for Minor Irrigation).—

(a) This is a very old tank. The restoration work was taken up during the year 1958.

(*b*) On 28th October 1960.
(*c*) The matter is under examination.
(*d*) During 1963-64.

ಶ್ರೀ ಎಚ್. ನಂಜೇಗೌಡ.—ಈ ಗುರುವಿನ ಕಟ್ಟೆ ಒಡೆದು ಇಲ್ಲಿಗೆಷ್ಟು ವರ್ಷಗಳಾಯಿತು ?

†ಶ್ರೀ ಆಲೂರು ಹನುಮಂತಪ್ಪ.—ಉತ್ತರದಲ್ಲೇ ತಿಳಿಸಿದೆ 28-10-1960 ಎಂತ.

ಶ್ರೀ ಎಚ್. ನಂಜೇಗೌಡ.—ಇಲ್ಲಿಯವರೆಗೇಕೆ ಅದನ್ನಿನ್ನೂ ದುರಸ್ತು ಮಾಡಲಿಲ್ಲಾ ?

ಶ್ರೀ ಆಲೂರು ಹನುಮಂತಪ್ಪ.—ಈ ಕೆಲಸವೆಲ್ಲ ಸಂಪೂರ್ಣವಾಗಿ ಈ ವರ್ಷದ ಕೊನೆಯೊಳಗೆ ಮುಗಿಯುತ್ತದೆಂದು ನನ್ನ ಮುಂದಿರತಕ್ಕ ವರದಿಯಿಂದ ಗೊತ್ತಾಗುತ್ತದೆ.

ಶ್ರೀ ಟಿ. ಮಾದಯ್ಯಗೌಡ.—ಈ ಕೆರೆ 1958ರಲ್ಲಿ ರೆಸ್ಟೋರ್ ಆಗಿ ಮತ್ತೆ 1960 ರಲ್ಲೇ ಒಡೆದು ಹೋಗಿದೆ. ಈ ವಿಚಾರ ತನಿಖೆಮಾಡುತ್ತಿದ್ದೇವೆಂತ ಹೇಳುತ್ತಿದ್ದವರು ಈ ವಿಚಾರಣೆಯನ್ನು 1958ನೇ ಮಾರ್ಚಿಯಿಂದ ಇಲ್ಲಿಯವರೆಗೂ ಏಕೆ ಮುಗಿಸಲಿಲ್ಲ ? ಮುಗಿದಿದ್ದರೆ ಈ ಕೆಲಸ ಇಷ್ಟು ನಿಧಾನವಾಗಲು ಕಾರಣವೇನು ?

ಶ್ರೀ ಆಲೂರು ಹನುಮಂತಪ್ಪ.—ಇದೊಂದು ಬಹಳ ಹಳೇ ಕೆರೆ. ಹಳೇ ಕೆರೆಗಳನ್ನು ಈಗ ಅಲ್ಲಲ್ಲೇ ರೆಸ್ಟೋರ್ ಮಾಡಲಾಗುತ್ತಿದೆ. ಈ ಕೆರೆ ರೆಸ್ಟೋರಾದಮೇಲೂ ಒಡೆದುಹೋಯಿತು. ನಮ್ಮ ಸಪ್ಲೈ ರಿಜಿಷ್ಟರ್‌ನಲ್ಲಿ ನಮೂದಾಗಿರುವಂತೆ ಈ ಕೆರೆ 50 ವರ್ಷಗಳ ಹಿಂದಿನದು ಬಹಳ ಚಿಕ್ಕಕೆರೆ. 15 ಎಕ್ರೆ ಅಚ್ಚುಕಟ್ಟಿದೆ. ಈಗ ಬ್ರೀಚ್ಡ್ ಆಗಿರುವ ಪೋರ್ಷನ್ನಿನಲ್ಲಿ ಮರಳು ಜಾಸ್ತಿಯಾಗಿತ್ತು ಎಂತ ಇಂಜಿನಿಯರುಗಳು ವರದಿ ಮಾಡಿದ್ದಾರೆ.

ಶ್ರೀ ಟಿ. ಮಾದಯ್ಯಗೌಡ.—ಈ ವಿಚಾರಣೆಯನ್ನು ಇಲಾಖೆಯವರು ಮಾಡುತ್ತಾರೋ, ಆಂಟಿ ಕರಪ್ಷನ್ ಇಲಾಖೆಯವರು ಮಾಡುತ್ತಾರೋ ?

ಶ್ರೀ ಆಲೂರು ಹನುಮಂತಪ್ಪ.—ಇಲಾಖೆಯವರೇ ಮಾಡುತ್ತಿದ್ದಾರೆ. ಅಲ್ಲಿ ಭಾರಿ ಮಳೆ ಬಂದುದರಿಂದ ಆ ಕಟ್ಟೆ ಕಿತ್ತು ಹೋಗಿದೆ ಎಂತ ವರದಿ ಮಾಡಿದ್ದಾರೆ. ಆ ಬ್ರೀಚ್ಡ್ ಏರಿಯ 50 ಅಡಿ ಇದೆ. ಹಾಗೆ ಬ್ರೀಚಾದುದಕ್ಕೆ ಕಾರಣವೇನೆಂಬುದನ್ನು ಕಂಡುಹಿಡಿಯಬೇಕೆಂದು ಸರ್ಕಾರದಿಂದ ಅವರಿಗೆ ಆಜ್ಞೆ ಹೋಗಿದೆ.

Survey work of the Channel from Sangenahalli Tank to Naikanahatti Doddakere in Jagalur Taluk

Q*—558. **Sri M. N. KRISHNA SINGH (Jagalur).—

Will the Government be pleased to state:—

whether in conducting the survey work of the channel from Sangenahalli tank to Naikanahatti Doddakere in Jagalur Taluk, they would consider the desirability of conducting the survey work *via* Mustur village so as to provide channel facility to that village ?

A.—**Sri S. NIJALINGAPPA** (Chief Minister).—

As no surveys have been conducted for feeder channel from Sangenahalli tank to Naikanahatti Hirekere, this question does not arise.

ಶ್ರೀ ಎಚ್. ಕೃಷ್ಣಸಿಂಗ್.—ಈ ಪ್ರಶ್ನೆ ಉದ್ಭವಿಸುವುದಿಲ್ಲ ಅಂತ ಉತ್ತರದಲ್ಲಿ ತಿಳಿಸಿದೆ. ಆದರೆ ಈ ನಾಲೆಯನ್ನು ನಿರ್ಮಿಸಬೇಕೆಂದು ನಾಯಕನಹಟ್ಟಿ ಜನರು ಸರ್ಕಾರದಲ್ಲಿ ಮನವಿಮಾಡಿಕೊಂಡಿರಲಿಲ್ಲವೇ ?

†ಶ್ರೀ ಎಸ್. ನಿಜಲಿಂಗಪ್ಪ.—ಮನವಿ ಮಾಡಿಕೊಂಡಿದ್ದರು.

ಶ್ರೀ ಎಚ್. ಕೃಷ್ಣಸಿಂಗ್.—ಅವರ ಮನವಿಯನ್ನು ಪರಿಶೀಲನೆಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಆದರೆ ಈಗ ಈ ನಾಯಕನಹಟ್ಟಿ ಕೆರೆಗೆನೀರನ್ನು ಕೊಟ್ಟರೆ ಸಂಗೇನಹಳ್ಳಿ ಕೆರೆಯಲ್ಲಿ ಸಾಕಷ್ಟು ನೀರು ನಿಲ್ಲುತ್ತದೆಯೇ ಎಂಬ ವಿಚಾರದಲ್ಲಿ ಸಂದೇಹ ಉಂಟಾಗಿದೆ. ಜಿನಿಗೆಹಳ್ಳದ ಕನೆಕ್ಷನ್ ತೆಗೆದುಕೊಂಡು ಈ ಸಂಗೇನಹಳ್ಳಿ ಕೆರೆ ಏರಿಯನ್ನು ಎತ್ತರಿಸಿದಲ್ಲಿ ನಾಯ್ಕನಹಟ್ಟಿ ದೊಡ್ಡ ಕೆರೆಗೆ ನೀರನ್ನು ಕೊಡಲು ಸಾಧ್ಯವಾದರೂ ಆಗಬಹುದೇನೋ.

ಶ್ರೀ ಎಚ್. ಕೃಷ್ಣಸಿಂಗ್.—ಈ ನಾಲೆ ನಿರ್ಮಿಸುವುದಾದರೆ ಇದರ ಅನುಕೂಲ ಆ ಮುಸೂರು ಗ್ರಾಮಕ್ಕೂ ಆಗುವಂತೆ ಪರಿಶೀಲಿಸುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಪರಿಶೀಲನೆ ಮಾಡೋಣ.

ಶ್ರೀ ಬಿ. ಎಲ್. ಗೌಡ.—ಈ ವಿಷಯ ಈಗಿನ ರಾಜಕೀಯಕ್ಕಿಂತಲೂ ಬಹಳ ಹಳೇದು. ಆದುದರಿಂದ ಇದನ್ನು ಬೇಗ ಸರ್ವೆ ಮಾಡಿಸುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅಂಥಾದ್ದೇನೂ ಕಂಡುಬರಲಿಲ್ಲ. ಸರ್ವೆ ಮಾಡಿಸಲಾಗುತ್ತದೆ.

Construction of Mathighatta Channel in Krishnarajapet Taluk

Q.*—485. **Sri N. NANJE GOWDA (Krishnarajapet).—

Will the Government be pleased to state:—

(*a*) when the construction of Mathighatta Channel in Krishnarajapet Taluk, Kasaba Hobli, was commenced;

(*b*) the estimated cost of the same and the amount spent during the year 1957;

(*c*) the total area that would be irrigated under this Channel;

(*d*) the difficulties in the way of completing the work of the channel;

(*e*) the time required to complete the same?

A.—**Sri ALUR HANUMANTHAPPA** (Deputy Minister for Minor Irrigation).—

(*a*) In 1950-51.

(*b*) Estimated cost: Rs. 18,400. No amount was spent during the year 1957.

(*c*) 60 acres.

(*d*) and (*e*) Do not arise since the work is completed.

ಶ್ರೀ ಎಚ್. ನಂಜೇಗೌಡ.—ಈ ನಾಲೆ ಕಾರ್ಯ 50-51ರಲ್ಲೇ ಪ್ರಾರಂಭವಾಗಿದ್ದರೂ 1962 ಆದರೂ ಆ ಕೆಲಸವಿನ್ನೂ ಪೂರ್ತಿಯಾಗದಿರಲು ಕಾರಣವೇನು ?

† ಶ್ರೀ ಆಲೂರು ಹನುಮಂತಪ್ಪ.—ಒಂದೂವರೆ ವರ್ಷದ ಕೆಳಗೆ ಈ ನಾಲೆಯ ದುರಸ್ತಿ ಬಗ್ಗೆ 18,400 ರೂ. ಗಳಿಗೆ ಒಂದು ಅಂದಾಜು ತಯಾರಾಗಿತ್ತು. ಆದರ ಪ್ರಕಾರ ಈಗಾಗಲೇ 16,900 ರೂ.ಗಳು ಖರ್ಚಾಗಿದೆ. ಆದರೆ ಈಗಿರತಕ್ಕ ಚಾನಲ್ಗೆ ಒಂದು ಫೀಡರ್ ಚಾನಲ್ ಮಾಡಲು 8,300 ರೂ. ಗಳಿಗೆ ಒಂದು ಅಂದಾಜು ತಯಾರಾಗಿ, ಆ ಕೆಲಸ ಈಗ ನಡೆಯುತ್ತಿದೆ.

ಶ್ರೀ ಎಚ್. ನಂಜೇಗೌಡ.—ಈ ಫೀಡರ್‌ಚಾನಲ್ಲಿನ ಕೆಲಸ ನಡೆಯಬೇಕೆಂಬ ಆಲೋಚನೆ ಮೊದಲು ಇರಲಿಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಈ ಫೀಡರ್‌ಚಾನಲ್ಲಿನಲ್ಲಿ ಸಾಕಷ್ಟು ನೀರು ಬರುತ್ತದೆಯೋ—ಇಲ್ಲವೋ ಎಂಬ ಸಂಶಯವಿತ್ತು. ಈಚೆಗೆ ಅದರಿಂದ ಹೆಚ್ಚಿನ ಅನುಕೂಲವಿದೆ ಎಂತ ತಿಳಿಯಬಂದುದರಿಂದ ಅದನ್ನು ಕೈಗೊಳ್ಳಲಾಯಿತು. ಆದರೆ ಈಗ ಅಕ್ವಿಜಿಷನ್ ಪ್ರೋಸಿಡಿಂಗ್ಸ್‌ನ ಕೆಲಸ ನಡೆಯುತ್ತಿದೆ.

ಶ್ರೀ ಎನ್. ನಂಜೇಗೌಡ.—ಆ ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಕೆಲಸ ಪೂರೈಸಲು 13 ವರ್ಷಗಳು ಬೇಕಾಯಿತೇ ?

ಶ್ರೀ ಆಲೂರು ಹನುಮಂತಪ್ಪ.—ಒಂದು ಭಾಗದ ಕೆಲಸವೆಲ್ಲ ಪೂರೈಸಿದೆ. ಈ ಫೀಡರ ಚಾನಲ್ಲಿನ ಅಕ್ವಿಜಿಷನ್ ಕೆಲಸ ಮಾತ್ರ ಈಗ ನಡೆಯುತ್ತಿದೆ.

ಶ್ರೀ ಟಿ. ಮಾದಯ್ಯ ಗೌಡ.—1950-51ರಲ್ಲಿ ಕೈಗೊಂಡ 18,400 ರೂ. ಗಳ ಕೆಲಸ ಇಷ್ಟು ವರ್ಷಗಳಕಾಲವಾದರೂ ಮುಗಿಯದಿರಲು ಕಾರಣವೇನು ?

Sri ALUR HANUMANTHAPPA.—Sir, the work was taken up in 1950-51 and was completed in 1957. There was some delay of course. The delay was due to non-availability of proper contractors and delay in the land acquisition procedure.

ಶ್ರೀ ಎನ್ ನಂಜೇಗೌಡ.—ಈ ಕಾಲುವೆಯನ್ನೂ ತೂಬಿನಿಂದ ತೆಗೆದುಕೊಳ್ಳಬೇಕೆಂದು ಮೊದಲು ಅಂದಾಜು ಮಾಡಿತ್ತಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಬಲಗಡೆಯ ತೂಬಿನಿಂದ ಕಾಲುವೆ ತೆಗೆಯಬೇಕೆಂದು ಮಾಡಿತ್ತು.

ಶ್ರೀ ಟಿ. ಮಾದಯ್ಯಗೌಡ.—1957ನೆಯ ಇಸವಿಯಲ್ಲಿ ಕೆಲಸ ಮುಗಿಯಿತು ಎಂದು ಹೇಳಿದರು. ಆಚ್ಚಾದ ಉತ್ತರದಲ್ಲಿ No amount was spent during the year 1957 ಎಂದು ಹೇಳಿದ್ದಾರೆ. ಇದು ಸರಿಯಾಗಿದೆಯೇ ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—1957ರಲ್ಲಿ ಕೆಲಸ ಮುಗಿದಿದೆ ಎಂದು ಹೇಳಿದೆ.

ಶ್ರೀ ಎನ್. ನಂಜೇಗೌಡ.—ನಾಲೆ ಕೆಲಸ ಪೂರೈಸಿದ್ದರೆ ತರೀ ವ್ಯವಸಾಯ ಮಾಡುತ್ತಿದ್ದಾರೇಯೇ ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—ನಾಲೆ ಕೆಲಸವನ್ನು ಪೂರ್ತಿ ಮಾಡಿಕೊಟ್ಟಮೇಲೆ ಆಗಲೇ ಬೇಕಲ್ಲವೇ ?

ಶ್ರೀ ಎಚ್. ಆರ್. ಕೇಶವಮೂರ್ತಿ.—Sixty acres would be irrigated ಎಂದು ಹೇಳಿದ್ದೀರಿ, ಈಗ ಎಷ್ಟು ಜಮೀನು ನೀರಾವರಿಯಾಗಿರುತ್ತದೆ ?

ಶ್ರೀ ಆಲೂರು ಹನುಮಂತಪ್ಪ.—ಮೊದಲು ಮಾಡದಂಥ ಅಂದಾಜಿನಲ್ಲಿ 60 ಎಕರೆ ನೀರಾವರಿಗೆ ಬರುವುದಕ್ಕೆಸಾಧ್ಯವಾಗುತ್ತದೆಂದು ಇತ್ತು. ಈಗ ಮತ್ತೊಂದು feeder channel ಮಾಡಬೇಕೆಂದು ವ್ಯವಸ್ಥೆ ಮಾಡಿದೆ. ಅದಾದ ಮೇಲೆ 60 ಎಕರೆಗೆ ಸಂಪೂರ್ಣವಾಗಿ ನೀರು ಬರುತ್ತದೆ.

ಶ್ರೀ ಟಿ. ಮಾದಯ್ಯಗೌಡ.—1957 ನೆಯ ಇಸವಿಯಲ್ಲಿ ಕಾಲುವೆ ಕೆಲಸ ಪೂರ್ತಿಯಾದ ಮೇಲೆ ಅದರ ಕೆಳಗೆ ಇರತಕ್ಕ ಅಚ್ಚುಕಟ್ಟು ಪ್ರದೇಶವೆಷ್ಟು ?

ಶ್ರೀ ಅಲೂಗು ಹನುಮಂತಪ್ಪ.—ಆ ಮಾಹಿತಿ ಇಲ್ಲ. ಬೇಕಾದರೆ ತರಿಸಿಕೊಡುತ್ತೇನೆ.

Reservation of Seats in Technical Schools, Medical Schools and Colleges to the Students coming from Villages.

*Q.—486. **Sri N. NANJE GOWDA** (Krishnarajapet).—

Will the Government be pleased to state :—

(*a*) whether it has come to their notice that as per the present system, students coming from villages are not getting seats in Technical Schools, Medical Schools and Colleges according to the villages population ;

(*b*) if so, whether they intend to allot seats to students coming from villages by way of reserving seats according to the villages population ?

A.—**Sri S. R. KANTHI** (Minister for Education).—

(*a*) No.

(*b*) Does not arise.

ಶ್ರೀ ಎಚ್. ನಂಜೇಗೌಡ.—ಹಳ್ಳಿಯಿಂದ ಬರುವ ವಿದ್ಯಾರ್ಥಿಗಳಿಗೆ ಸೀಟು ಸಿಕ್ಕುತ್ತಿಲ್ಲವೆನ್ನುವುದಕ್ಕೆ 'ನನ್ನ ಗಮನಕ್ಕೆ ಬಂದಿಲ್ಲ'ವೆಂದು ಹೇಳಿದ್ದೀರಿ. ಯಾವ ಆಧಾರದ ಮೇಲೆ ಹೀಗೆ ಹೇಳುತ್ತೀರಿ ?

† ಶ್ರೀ ಎಸ್. ಆರ್. ಕಂಠಿ.—ಹಳ್ಳಿಯಿಂದ ಬಂದಂಥ ವಿದ್ಯಾರ್ಥಿಗಳಿಗೆ ಹಳ್ಳಿಯ ಜನಸಂಖ್ಯೆಯ ಪ್ರಮಾಣದಲ್ಲಿ ಸಿಕ್ಕುವುದಿಲ್ಲವೆಂದು ಕೇಳಿದ್ದಕ್ಕೆ ನನಗೆ ಗೊತ್ತಿಲ್ಲವೆಂದು ಹೇಳಿದ್ದೇನೆ.

Sri C. J. MUCKANNAPPA.—What is the basis on which this information is obtained ?

ಶ್ರೀ ಎಸ್. ಆರ್. ಕಂಠಿ.—ನಾವು ಏನು ಸೀಟುಗಳನ್ನು ಹಂಚುತ್ತಿದ್ದೇವೆ ಅದನ್ನೂ merit ಮೇಲೆ ಕೊಡಬೇಕು, Backward classesಗೆ ಕೊಡಬೇಕು ಎಂದು ರಾಜ್ಯಾಂಗದ 15 (IV) ವಿಧಿ ಪ್ರಕಾರ ಏನು ಇದೆ ಆ ಪ್ರಕಾರ ಕೊಡುತ್ತಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಳ್ಳಿಯವರೇ ಇಲ್ಲ ಎಂದು ಅರ್ಥ ಬರುತ್ತದೆ. ಹಳ್ಳಿಯವರು ಇಲ್ಲ ಎಂದು ಯಾವ ಆಧಾರದ ಮೇಲೆ ತೀರ್ಮಾನಕ್ಕೆ ಬಂದಿರಿ ?

ಶ್ರೀ ಎಸ್. ಆರ್. ಕಂಠಿ.—ಹಳ್ಳಿಯವರಿಲ್ಲ ಎಂದು ಹೇಳಿಲ್ಲ. ಹಳ್ಳಿಯವರಿಗೆ ಸೀಟು ಸಿಕ್ಕುವುದಿಲ್ಲವೆಂದು ಹೇಳಿದ್ದಾರೆ. ಹಾಗೇನೂ ಇಲ್ಲ ಎಂದು ನಾನು ಹೇಳಿದ್ದೇನೆ.

ಶ್ರೀಮತಿ ಸುಶೀಲಾಬಾಯಿ ಹೀರಾಚಂದ್‌ಷಾ.—ಸೀಟುಗಳನ್ನು ಹಂಚುವುದು ಹಳ್ಳಿಯ ಜನ ಸಂಖ್ಯೆಯ ಮೇಲೆ ಇದೆಯೋ ಅಥವಾ ಮೆರಿಟ್ ಮೇಲ್ಲೆ ಇದೆಯೋ ?

ಶ್ರೀ ಎಸ್. ಆರ್. ಕಂಠಿ.—ಆಗಲೇ ಹೇಳಿದೆ. ಸೀಟುಗಳು ಮೆರಿಟ್ ಮೇಲೆ ಎಂದರೆ ಅವರು ಪರೀಕ್ಷೆಯಲ್ಲಿ ತೆಗೆದುಕೊಂಡ marks, ಇಂಟರ್‌ವ್ಯೂನಲ್ಲಿ ಅವರು ತೆಗೆದುಕೊಂಡಿರುವ marks ಈ ಆಧಾರದ ಮೇಲೆ ಕೊಡಲಾಗುತ್ತದೆ. ಕೆಲವು Backward classes, Schedule castes and Schedule tribes ಇವರಿಗೆ reservation ಇದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಹಿಂದುಳಿದಿರತಕ್ಕ ಮಲೆನಾಡು ಪ್ರದೇಶಗಳಿಗೆ ಡಾಕ್ಟರುಗಳು ಹೋಗದೆ ಇರುವುದರಿಂದ ಹಿಂದೆ ಸರ್ಕಾರದವರು ಕೆಲವು ಸೀಟುಗಳನ್ನು ಮಲೆನಾಡು ಪ್ರದೇಶಕ್ಕೆ ರಿಸರ್ವ್ ಮಾಡುತ್ತಿದ್ದರು. ಅಂಥ ಅವಕಾಶವನ್ನು ಈಗಲೂ ಕಲ್ಪಿಸಿಕೊಡುವುದಕ್ಕಾಗುತ್ತದೆಯೇ ?

ಶ್ರೀ ಎಸ್. ಆರ್. ಕಂಠಿ.—ಮಲೆನಾಡು, ಮೈದಾನ ಎಂದು ವಿಭಾಗ ಮಾಡಿ ರಿಸರ್ವ್ ಮಾಡಿಕೊಡುವುದಕ್ಕಾಗುವುದಿಲ್ಲ. ಆದರೆ ರಾಜ್ಯಾಂಗದ 15 (IV) ವಿಧಿ ಯಾವ ಪ್ರಕಾರವಿದೆ ಆ ಪ್ರಕಾರ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಮಲೆನಾಡು ಪ್ರದೇಶಕ್ಕೆ ಡಾಕ್ಟರುಗಳು ಹೋಗದೆ ಅಲ್ಲಿರುವ ಆಸ್ಪತ್ರೆಗಳು ಪಾಳುಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಆ ವಿಚಾರ ನನಗೆ ಗೊತ್ತಿಲ್ಲ.

ಶ್ರೀ ಸಿ. ಆರ್. ರಂಗೇಗೌಡ.—ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ, ಕಾಲೇಜುಗಳಿಗೆ ಸೇರಿಸಿಕೊಳ್ಳಬೇಕಾದರೆ merit ಬೇಕು ಎಂದು ಹೇಳುತ್ತೀರಿ. ಹಳ್ಳಿಯಿಂದ ಬರುವ ಮಕ್ಕಳಿಗೆ ವಿದ್ಯುಚ್ಛಕ್ತಿದೀಪದ ಸೌಕರ್ಯವಿರುವುದಿಲ್ಲ, ಪ್ರತ್ಯೇಕ ಓದುವ ಕೋಣೆಯ ಸೌಕರ್ಯವಿರುವುದಿಲ್ಲ, Cattle atmosphereನಿಂದ ಬರುತ್ತಾರೆ. ಪಟ್ಟಣದಲ್ಲಿರುವವರಿಗೆ ಎಲ್ಲ ಸೌಕರ್ಯಗಳೂ ಇದ್ದು ಪುಸ್ತಕಭಂಡಾರದ ಸೌಕರ್ಯವೂ ಇರುತ್ತದೆ. ಆದುದರಿಂದ ಹಳ್ಳಿಗಾಡಿನ ಜನರಿಗೆ ಕೆಲವು ಸೀಟುಗಳನ್ನು ಮೀಸಲಾಗಿಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಯಾವುದೇ ಕ್ರಮವನ್ನು ತೆಗೆದುಕೊಂಡರೂ ಅದು ರಾಜ್ಯಾಂಗದ ನಿಯಮಗಳಿಗೆ ಒಳಪಟ್ಟಿರಬೇಕು. ಇಷ್ಟು ದಿವಸ ಜಾತಿಯ ಮೇಲೆ Backward classes ಎಂದು ಮಾಡುತ್ತಿದ್ದೆವು. ಆ ಪ್ರಕಾರ ಮಾಡುವುದು ತಪ್ಪು ಎಂದು ಸುಪ್ರೀಂ ಕೋರ್ಟ್ ತೀರ್ಪು ಇತ್ತಿದೆ. ಆದ್ದರಿಂದ Backward classes ಎನ್ನುವುದಕ್ಕೆ ಏನು criterion ಇರಬೇಕು ಎಂಬುದರ ಬಗ್ಗೆ ರಾಜ್ಯಾಂಗದ 15 (IV) ವಿಧಿಯನ್ನನುಸರಿಸಿ ಮಾಡಬೇಕಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ವಿದ್ಯಾ ಮಂತ್ರಿಗಳು ಬಡ್ಜೆಟ್ ಮೇಲಿನ ಚರ್ಚೆಗೆ ಉತ್ತರ ಹೇಳುವಾಗ ಬರೀ merit ಎನ್ನುವುದನ್ನೇ consider ಮಾಡುವುದಕ್ಕಾಗುವುದಿಲ್ಲ. ಬೇರೆ ಒಂದು

ಮಾರ್ಗವನ್ನೂ ಕಂಡು ಹಿಡಿಯಬೇಕು ಎಂದು ಹೇಳಿದ್ದರು. ಅದಕ್ಕೋಸ್ಕರವಾಗಿ ಹಳ್ಳಿಗಾಡಿನವರಿಗೆ ಜಾಗ ದೊರೆಯಬೇಕಾದರೆ ಮಂತ್ರಿಗಳ ಮನಸ್ಸಿನಲ್ಲಿರುವ ಬೇರೆ ಮಾರ್ಗ ಯಾವುದು ?

ಶ್ರೀ ಎಸ್ ಆರ್. ಕಂಠಿ.—ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಮೊನ್ನೆ ಹೇಳಿದ್ದಕ್ಕೂ ಈಗ ಹೇಳಿದ್ದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಆದರೆ Backward classes ಎನ್ನುವುದನ್ನು ಯಾವ ರೀತಿ ಅಳೆಯಬೇಕು ಎನ್ನುವ ಪ್ರಶ್ನೆ ನಮ್ಮ ಮುಂದೆ ಇದೆ. ಅದನ್ನೂ ಪರಿಶೀಲನೆ ಮಾಡುತ್ತಿದ್ದೇವೆ.

Sri S. SIVAPPA.—Residing in a village is not one of the factors for determination of Backward classes ?

ಶ್ರೀ ಎಸ್. ಆರ್. ಕಂಠಿ.—ನಿಶ್ಚಿತವಾಗಿ ಹಾಗೆ ಹೇಳುವುದಕ್ಕಾಗುವುದಿಲ್ಲ. ಅವರಿಗೆ ನ್ಯಾಯ ದೊರಕಿಸುವ ದೃಷ್ಟಿಯಿಂದ ಯಾವ ಪ್ರಕಾರ ಮಾಡಬೇಕೆಂದು ನೋಡುತ್ತಿದ್ದೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಕಾಲೇಜುಗಳಲ್ಲಿ ಸೀಟು ಕೊಡುವಾಗ ಪಿ. ಸಿ. ಬಿ., ಸಿ. ಬಿ. ಜಡ್, ಆಗಿರುವವರಿಗೆ ಜಾಸ್ತಿ ಕೊಡುತ್ತಾರಲ್ಲವೆ ?

ಶ್ರೀ ಎಸ್. ಆರ್. ಕಂಠಿ.—ಆ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ.—"If Mohammed cannot go to the mountain, mountain should go to Mohammed" ಎಂದು ಒಂದು ಗಾದೆ ಇದೆ. ಆದುದರಿಂದ ಹಳ್ಳಿಯವರಿಗೆ ನಗರಗಳಲ್ಲಿರುವ institutions ನಲ್ಲಿ ಸ್ಥಳಸಿಕ್ಕದೆ ಇದ್ದರೆ, ಹಳ್ಳಿಯಲ್ಲಿಯೇ ಕೆಲವು ತಾಂತ್ರಿಕ ಶಾಲೆಗಳನ್ನು ಸರ್ಕಾರದವರು ಸ್ಥಾಪಿಸಿದರೆ ಹಳ್ಳಿಯ ಮಕ್ಕಳಿಗೆ ಅನುಕೂಲವಾಗುವುದಿಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ತಾಂತ್ರಿಕ ಶಾಲೆಗಳನ್ನು ಪ್ರಾರಂಭ ಮಾಡುವ ಪ್ರಶ್ನೆ ಇಲ್ಲಿ ಬರುವುದಿಲ್ಲ. ಎಲ್ಲಿ ಪ್ರಾರಂಭ ಮಾಡಿದರೂ ಕೂಡ ರಾಜ್ಯಾಂಗದ ವಿಧಿಗಳಿಗನುಸಾರವಾಗಿ ಸೀಟುಗಳನ್ನು ಕೊಡಬೇಕಾಗುತ್ತದೆ. ಹಳ್ಳಿಗಳಲ್ಲಿ ತಾಂತ್ರಿಕ ಶಾಲೆಗಳನ್ನು ಪ್ರಾರಂಭ ಮಾಡಿದ ಮಾತ್ರಕ್ಕೆ ಹಳ್ಳಿಯವರಿಗೆಲ್ಲಾ ಅಡ್ಮಿಷನ್ ಸಿಕ್ಕುತ್ತದೆಂದು ಹೇಳುವುದಕ್ಕಾಗುವುದಿಲ್ಲ.

Sri N. O. SAMAJI.—(Marathi)

ಶ್ರೀ ಎಸ್. ಆರ್. ಕಂಠಿ.—ಗ್ರಾಮೀಣ ಪ್ರದೇಶದಿಂದ ಬಂದವರಿಗೆ ನಾವು ಅಡ್ಮಿಷನ್ ಕೊಡಬೇಕು ಎಂದರೆ ಹಾಗೆ ಮಾಡುವುದಕ್ಕೆ ಆಗುವುದಿಲ್ಲ. ಹಿಂದುಳಿದವರಿಗೆ ರಿಸರ್ವೇಷನ್ ಕೊಡಲು ಸಿದ್ಧವಾಗಿದ್ದರೂ, ಯಾವ ಪ್ರಕಾರ ಕೊಡಬೇಕು ಎನ್ನುವುದಕ್ಕೆ ರಾಜ್ಯಾಂಗ ಘಟನೆಯಲ್ಲಿ 15 (IV) ಪ್ರಕಾರ ಪ್ರಾವಿಷನ್ ಇದೆ. ಗ್ರಾಮದಲ್ಲಿದ್ದವರೆಲ್ಲ ಹಿಂದುಳಿದವರು ಎಂದು ಹೇಳುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಟಿ. ಮಾದಯ್ಯಗೌಡ.—ಗ್ರಾಮಾಂತರ ಜನರ ಪ್ರಮಾಣದ ಪ್ರಕಾರ ಹಳ್ಳಿಯವರಿಗೆ ಸೀಟುಗಳು ಸಿಕ್ಕಿಲ್ಲವೆನ್ನುವುದು ಸರ್ಕಾರದ ಗಮನಕ್ಕೆ ಬಂದಿಲ್ಲಪಾದ್ದರಿಂದ 'No' ಎಂದು ಉತ್ತರ ಕೊಟ್ಟಿರುವುಧಾಗಿ ಹೇಳಿದರು. ಹಾಗಿದ್ದರೆ ಈಗ ಗ್ರಾಮಾಂತರ ಜನಗಳಿಗೆ ಸಿಕ್ಕುತ್ತಿರುವ ಪ್ರಮಾಣವೇನು ಎನ್ನುವುದನ್ನೂ ವಿಚಾರ ಮಾಡಿದ್ದಾರೆಯೋ ?

ಶ್ರೀ ಎಸ್. ಆರ್. ಕಂಠಿ.—ಆ ಪ್ರಶ್ನೆ ಇಲ್ಲಿ ಬರುವುದಿಲ್ಲ. ಗ್ರಾಮೀಣ ಮತ್ತು ಪಟ್ಟಣಗಳಲ್ಲಿರುವವರಿಗೆ ಯಾವ ಯಾವ ಪ್ರಮಾಣದಲ್ಲಿ ಸೀಟುಗಳು ಸಿಕ್ಕಿವೆ ಎಂದು ಹೇಳುವುದಕ್ಕಾಗುವುದಿಲ್ಲ.

1—30 P. M.

ಶ್ರಿ ಸಿ. ಜೆ. ಮುಕ್ಕಣ್ಣಪ್ಪ.—ಹಣಕಾಸಿನ ಮಂತ್ರಿಗಳು ಮುಖ್ಯಮಂತ್ರಿಗಳಾಗಿದ್ದಾಗ ನೇಮಕ ಮಾಡಿದ್ದ ಡಾ॥ ನಾಗನಗೌಡ ಕಮಿಟಿ ರಿಪೋರ್ಟು ಹಾಗೇ ಸರ್ಕಾರದಲ್ಲಿ ನಿಂತು ಹೋಗಿದೆ. ಅದರ ಮೇಲೆ ಸುಪ್ರೀಂ ಕೋರ್ಟಿನ ಒಂದು ತೀರ್ಮಾನ ಬಂದಿರುವುದರಿಂದ ಇದರಲ್ಲಿ ಯಾವುದು ಸರಿ ಮತ್ತು ಯಾವುದು ಅಲ್ಲ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ತಾವು ಹೇಳುವುದು ನನಗೆ ಗೊತ್ತಾಗಲಿಲ್ಲ. ಈ ವಿಷಯವಾಗಿ ನಾನು ಏನನ್ನೂ ಹೇಳಲಾರೆ.

ಶ್ರೀಮತಿ ವಸಂತಲತಾ ವಿ. ಮಿರ್ಜಂಕರ್.—ಗೋವಾ ಪ್ರದೇಶದಲ್ಲಿರುವ ಹಿಂದುಳಿದ ಕನ್ನಡಿಗರಿಗೆ ಮೆಡಿಕಲ್ ಮತ್ತಿತರ ಕಾಲೇಜುಗಳಲ್ಲಿ ಅಡ್ಮಿಷನ್ನುಗಳನ್ನು ಕೊಡುವಾಗ ಇಂತಿಷ್ಟು ಸೀಟುಗಳು ಎಂದು ರಿಸರ್ವ್ ಮಾಡುತ್ತಿದ್ದೀರಾ ?

ಶ್ರೀ ಎಸ್. ಆರ್. ಕಂಠಿ.—ಗೋವಾದಿಂದ ಬರತಕ್ಕವರಿಗೆ ರಿಸರ್ವೇಷನ್ನು ಮಾಡಬೇಕೆಂದು ಹೋದ ವರ್ಷವೇ ಆರ್ಡರು ಮಾಡಲಾಗಿತ್ತು. ಈ ಸಲವೂ ಅದೇ ಆರ್ಡರು ಜಾರಿಯಲ್ಲಿರುತ್ತದೆ.

ಶ್ರೀ ಜಿ. ಮರುಳಪ್ಪ.—ಹಳ್ಳಿಗಳಿಂದ ಮತ್ತು ಪಟ್ಟಣಗಳಿಂದ ಬರುವ ವಿದ್ಯಾರ್ಥಿಗಳಲ್ಲಿ ಪಟ್ಟಣದವರು ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೋ ಅಥವಾ ಹಳ್ಳಿಗಳಿಂದ ಬರತಕ್ಕವರು ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೋ ?

ಶ್ರೀ ಎಸ್. ಆರ್. ಕಂಠಿ.—ಅದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಶಿವಪ್ಪ.—ವಿದ್ಯಾಕ್ಷೇತ್ರದಲ್ಲಿ ಗ್ರಾಮಾಂತರ ಪ್ರದೇಶದಿಂದ ಬಂದಿರುವವರು ಹಿಂದುಳಿದಿದ್ದಾರೆ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಇದರಲ್ಲಿ ಅನೇಕ ವಿಚಾರಗಳು ಬರುತ್ತವೆ. ಅವನ್ನೆಲ್ಲಾ ನಾವು ಪರಿಶೀಲನೆ ಮಾಡಬೇಕಾಗಿದೆ.

Sri N. O. SAMAJI.—(Marathi).

ಶ್ರೀ ಎಸ್. ಆರ್. ಕಂಠಿ.—ಈ ಪ್ರಶ್ನೆಗೆ ಆಗಲೇ ಉತ್ತರ ಕೊಟ್ಟಿದ್ದೇನೆ. ಅವರು ಗ್ರಾಮಾಂತರ ಪ್ರದೇಶದಲ್ಲಿ ಜನ ಜಾಸ್ತಿ ಇರುವುದರಿಂದ ಅವರಿಗೆ ತಕ್ಕಂತೆ ಅಡ್ಮಿಷನ್ನುಗಳ ಕಾಲದಲ್ಲಿ ಸೀಟುಗಳು ಸಿಗುತ್ತದೆಯೋ ಎಂದು ಕೇಳಿದರು. ಇದಕ್ಕೆ ಉತ್ತರ ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಎಸ್. ಶಿವಪ್ಪ.—ಶ್ರೇಷ್ಠ ನ್ಯಾಯಸ್ಥಾನದ ತೀರ್ಪಿನ ಪ್ರಕಾರ ಈಗ ಯಾವ ರೀತಿ ಹಿಂದುಳಿದಿರುವವರು ಎಂಬುದನ್ನು ನಿರ್ಧರಿಸುತ್ತೀರಿ ? ಗ್ರಾಮಾಂತರ ಪ್ರದೇಶದಲ್ಲಿ ಹಿಂದುಳಿದ ಪ್ರದೇಶಗಗಳಿಂದ ಬರುವವರನ್ನು ಹಿಂದುಳಿದವರೆಂದು ಹೇಗೆ ಪರಿಶೀಲಿಸುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಯಾವ ರೀತಿ ಮಾಡಬಹುದು ಎನ್ನುವುದರ ಬಗೆಗೆ ಸರಕಾರಕ್ಕೆ ಸೂಚನೆ ಮಾಡಿದ್ದಾರೆ. ಇವೆಲ್ಲವನ್ನು ಕೂಲಂಕಷವಾಗಿ ವಿಚಾರ ಮಾಡುತ್ತೇವೆ.

Sri N. O. SAMAJI.—(Marathi).

ಶ್ರೀ ಎಸ್. ಆರ್. ಕಂಠಿ.—ಇದರಲ್ಲಿ ಯಾರು ಹಿಂದುಳಿದವರು ಯಾರು ಮುಂದುವರಿದವರು ಎನ್ನುವುದು ಕೇಂದ್ರ ಸರಕಾರದ ಪ್ರಶ್ನೆಯಾದರೂ ಇದು ಒಂದೊಂದು ರಾಜ್ಯದಲ್ಲಿ ಒಂದೊಂದು ತರಹ ಇರುವುದರಿಂದ ಬೇರೆ ರೀತಿಯಿಂದ ಇದನ್ನು ನಿರ್ಧಾರ ಮಾಡಬೇಕಾಗುತ್ತದೆ. ಆದರೂ ರಾಜ್ಯಾಂಗಕ್ಕೆ ಅಡ್ಡಿಬಾರದಂತೆ ಒಂದು ಸಂಪೂರ್ಣವಾದ ಧೋರಣೆ ಇಟ್ಟುಕೊಂಡು ಇದನ್ನು ಮಾಡಿದ್ದೇವೆಂದು ಹೇಳಿದರೆ ಕೇಂದ್ರ ಸರಕಾರದವರು ಅಡ್ಡಿ ಮಾಡುವುದಿಲ್ಲ ಎಂದು ನಾನು ಭಾವನೆ ಮಾಡುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸುಪ್ರೀಂ ಕೋರ್ಟಿನ ತೀರ್ಮಾನವಾದ ಮೇಲೆ ನಾಗನಗೌಡರ ಕಮಿಟಿ ರಿಪೋರ್ಟು ಇನ್ನೂ ಜೀವಂತವಾಗಿದೆಯೋ ಇಲ್ಲವೋ ?

ಶ್ರೀ ಎಸ್. ಆರ್. ಕಂಠಿ.—ನಾಗನಗೌಡ ಕಮಿಟಿಯನ್ನು ಒಂದು ಕಡೆ ಇಟ್ಟುಕೊಂಡು, ಸುಪ್ರೀಂ ಕೋರ್ಟಿನ ತೀರ್ಮಾನವನ್ನು ಒಂದು ಕಡೆ ಇಟ್ಟುಕೊಂಡು ಮಾನ್ಯ ಸದಸ್ಯರು ಓದಿಕೊಂಡರೆ ಎಲ್ಲಾ ಅವರಿಗೇ ಅರ್ಥವಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಕೇಳುತ್ತಿರುವುದು ಸರಕಾರ ಏನು ನಿರ್ಧಾರ ತೆಗೆದುಕೊಳ್ಳುತ್ತಾರೆ ಎಂದು. ಸುಪ್ರೀಂ ಕೋರ್ಟಿನ ತೀರ್ಮಾನವಾದ ಮೇಲೆ ನಾಗನಗೌಡ ಕಮಿಟಿ ರಿಪೋರ್ಟು ಇನ್ನೂ ಜೀವಂತವಾಗಿದೆಯೋ ಇಲ್ಲವೇ ?

ಶ್ರೀ ಎಸ್. ಆಗ್. ಕಂಠಿ.—ನಾಗನಗೌಡ ಕಮಿಟಿ ರಿಪೋರ್ಟಿನಲ್ಲಿ ಜಾತೀಯತೆಯ ಮೇಲೆ ಪ್ರವೇಶ ಕೊಡಬೇಕು ಎಂದಿದ್ದುದರಿಂದ ಸುಪ್ರೀಂ ಕೋರ್ಟಿನವರು ಇದನ್ನು ಎತ್ತಿ ಹಿಡಿಯಲಿಲ್ಲ ಎನ್ನುವುದು ಸ್ವಾಭಾವಿಕವಾಗಿಯೇ ತಿಳಿಯುತ್ತದೆ.

ಶ್ರೀ ಸಂಜೀವನಾಥ ಐಕಳ.—ಮೈಸೂರು ಪ್ರಾಂತ್ಯಕ್ಕೆ ಕಾಸರಗೋಡಿನ ಕಡೆಯಿಂದ ಬರುವ ಮಕ್ಕಳಿಗೆ ಇಲ್ಲಿನ ಟೆಕ್ನಿಕಲ್ ಕಾಲೇಜುಗಳಲ್ಲಿ ಸೀಟುಗಳನ್ನೇನಾದರೂ ರಿಸರ್ವ್ ಮಾಡುತ್ತಿದ್ದೀರಾ ?

ಶ್ರೀ ಎಸ್ ಆರ್. ಕಂಠಿ.—ಆ ಪ್ರಶ್ನೆ ಇಲ್ಲಿ ಬರುವುದಿಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಈಗ ಹಳ್ಳಿಗಳ ಕಡೆಯಿಂದ ಬರತಕ್ಕವರಿಗೆ ಹೆಚ್ಚಿಗೆ ಪ್ರಾತಿನಿಧ್ಯ ಕೊಡದೆ ಇರುವುದರಿಂದ ಹಾಲಿ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಯಾರು ಹೆಚ್ಚಿಗೆ ಸೀಟುಗಳನ್ನು ಪಡೆಯುತ್ತಿದ್ದಾರೋ ಅವರು ಪರೀಕ್ಷೆಯಲ್ಲಿ ತೇರ್ಗಡೆಯಾದ ಮೇಲೆ ಗ್ರಾಮಾಂತರ ಪ್ರದೇಶಕ್ಕೆ ಬರಲು ಇಷ್ಟಪಡುತ್ತಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಅವರು ಸೂಚನೆ ಮಾಡುತ್ತಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತೇವೆ.

Sri N. O. SAMAJI.—(Marathi).

ಶ್ರೀ ಎಸ್. ಆರ್. ಕಂಠಿ.—ಇದಕ್ಕೆ ಆಗಲೇ ಉತ್ತರ ಹೇಳಿದ್ದೇನೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಗ್ರಾಮಾಂತರದಿಂದ ಬಂದ ವಿದ್ಯಾರ್ಥಿಗಳಿಗೆ, ತಾಂತ್ರಿಕ ವಿದ್ಯಾಭ್ಯಾಸದಲ್ಲಿ ಸರಿಯಾದ ಮತ್ತು ತೃಪ್ತಿಕರವಾದ ಶಿಕ್ಷಣ ಸಿಗುತ್ತಿಲ್ಲ ಎನ್ನುವುದನ್ನು ಸರಕಾರ ತಿಳಿದುಕೊಂಡಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಇದು ಅವರು ಊಹೆ ಮಾಡಿ ಕೇಳುತ್ತಿದ್ದಾರೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಇಲ್ಲಿ ವಿದ್ಯಾಭ್ಯಾಸ ಮಾಡುವವರಿಗೆ C. B. Z. combination ಕೊಡುವುದಕ್ಕೆ P. C. M· ನಲ್ಲೇ ಓದಬೇಕೆಂದು ಹೇಳುತ್ತಿರುವುದು ಸರಕಾರಕ್ಕೆ ಗೊತ್ತಿದೆಯೇ?

ಶ್ರೀ ಎಸ್. ಆರ್. ಕಂಠಿ.—ಇದು ಇಲ್ಲಿ ಕೇಳುವ ಪ್ರಶ್ನೆಯಲ್ಲ.

ಶ್ರೀ ಎನ್. ಹುಚ್ಚ ಮಾಸ್ತಿಗೌಡ.—ಗ್ರಾಮಾಂತರ ಪ್ರದೇಶದಿಂದ ಬರತಕ್ಕ ಮಕ್ಕಳುಗಳಿಗೆ ಈಗ ಸೀಟುಗಳು ಸಿಗದೇ ಇರುವುದರಿಂದ, ಸಿಟಿಗಳಿಂದ ಬರುವವರಿಗೇ ಹೆಚ್ಚಿನ ಸೀಟುಗಳು ಸಿಗುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಎಷ್ಟೇ ಇದ್ದರೂ ಕಾನ್ಸ್ಟಿಟ್ಯೂಷನ್ ಪ್ರಕಾರ ಕೆಲಸಮಾಡಬೇಕಾಗಿದೆ. ರಿಸರ್ವೇಷನ್ನನ್ನು ಸುಪ್ರೀಂ ಕೋರ್ಟಿನ ತೀರ್ಮಾನದಂತೆ ನಿರ್ಧಾರಮಾಡುವಾಗ ಯಾವುದು Backwardness ಆಗುತ್ತದೆ ಎನ್ನುವ ಕ್ರೈಟೀರಿಯವನ್ನು ನಿರ್ಧಾರಮಾಡಬೇಕಾಗಿದೆ.

Sri J. P. SARWESH.—Do Government consider providing a sufficient number of seats to students coming from the various Divisions ?

Mr. SPEAKER.—Is it possible for Government to distribute the seats divisionwise or territorywise ?

Sri J. P. SARWESH.—I am asking whether it is possible in the future.

ಶ್ರೀ ಎಸ್. ಆರ್. ಕಂಠಿ.—ಬೇರೆ ಬೇರೆ ಡಿವಿಜನ್ನುಗಳಿಗೆಂದು ಹಾಗೆ ತೀರ್ಮಾನಮಾಡುವುದಕ್ಕಾಗುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಳ್ಳಿಗಾಡಿನ ಮಕ್ಕಳಿಗೆ ಸ್ಥಳ ದೊರಕಿಸಿಕೊಡುವುದಕ್ಕಾಗಿ ಈಗಿರತಕ್ಕ ಕಾನೂನುಗಳು ಅಡ್ಡಿ ಬಂದರೆ ಅವುಗಳನ್ನು ಸರಿಪಡಿಸಲು ಸರ್ಕಾರ ತೀರ್ಮಾನಿಸಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಪುನಃ ಪುನಃ ಅದೇ ಹೇಳಬೇಕಾಗುತ್ತದೆ. ಕಾನ್ಸ್ಟಿಟ್ಯೂಷನ್ನು ಬಿಟ್ಟು ಹೋಗುವುದಕ್ಕಾಗುವುದಿಲ್ಲ. ಕಾನ್ಸ್ಟಿಟ್ಯೂಷನ್ನು ಇಟ್ಟುಕೊಂಡು ಯಾವರೀತಿಯಿಂದ ಬ್ಯಾಕ್ ವರ್ಡ್ ಕ್ರೈಟಿರಿಯವನ್ನು ನಿರ್ಧರಿಸಬೇಕು ಎಂಬುದನ್ನು ಯೋಚನೆಮಾಡಬೇಕಾಗುತ್ತದೆ.

ಶ್ರೀ ಡಿ. ಎಂ. ಸಿದ್ದಯ್ಯ.—ಸುಪ್ರೀಂ ಕೋರ್ಟು ಆರ್ಥಿಕಸ್ಥಿತಿಗಳ ಆಧಾರದ ಮೇಲೆ ಬ್ಯಾಕ್‌ವರ್ಡ್‌ನೆಸ್‌ನ್ನು ತೀರ್ಮಾನ ಮಾಡಬೇಕೆಂದು ಹೇಳುತ್ತಿದೆ. ಇದು ಕಾನೂನಿಗೆ ವಿರೋಧವಿಲ್ಲದೆ ಇರಬಹುದು. ಆದರೆ ಆರ್ಥಿಕ ಸ್ಥಿತಿಯೇ ಮುಖ್ಯವೆಂದು ಇಟ್ಟುಕೊಂಡರೆ, ಬ್ಯಾಕ್‌ವರ್ಡ್ ಆಗಿರುವ ಹಳ್ಳಿಗಾಡಿನವರಿಗೆ ತೊಂದರೆಯಾಗುತ್ತದೆ ಎನ್ನುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಸುಪ್ರೀಂ ಕೋರ್ಟಿನವರು ಜಾತೀಯತೆಯನ್ನೇ ಮುಖ್ಯವಾಗಿಟ್ಟುಕೊಂಡು ಹಿಂದುಳಿದವರೆನ್ನುವುದಕ್ಕೆ ಆಗುವುದಿಲ್ಲ ಎನ್ನುವ ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ ಆರ್ಥಿಕ ದೃಷ್ಟಿಯಿಂದ ಪ್ರಸ್ತಾಪಿಸಬೇಕೆಂದಾಗ ಬ್ಯಾಕ್‌ವರ್ಡು ಕ್ಲಾಸನ್ನು ಕಂಡು ಹಿಡಿಯುವುದು ಅಷ್ಟು ಸುಲಭವಾದ ಪ್ರಶ್ನೆಯಲ್ಲ. ಇಂತಹ ಪ್ರಶ್ನೆಗಳನ್ನು ರಾಜ್ಯ ಸರಕಾರಗಳು ಕೂಲಂಕಷವಾಗಿ ಯೋಚನೆಮಾಡಬೇಕು. ಅಲ್ಲದೆ ಇದನ್ನು ಹೇಳುವ ಕಾಲಕ್ಕೆ ಆರ್ಥಿಕಸ್ಥಿತಿ ಬಡತನ ಇವುಗಳನ್ನು ಸಹ Backwardness ನ ಒಂದು ಅಂಗವೆಂಬುದಾಗಿ ಪರಿಗಣಿಸಬೇಕೆಂದು ಹೇಳಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಳ್ಳಿಯವರೆಲ್ಲರೂ ಹಿಂದುಳಿದವರು ಎಂದು ಪರಿಗಣಿಸಿ ಹಿಂದುಳಿದವರಿಗೆ ಸೀಟು ಹಂಚುವುದಕ್ಕೆ ತೀರ್ಮಾನ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಈ ಅಭಿಪ್ರಾಯವನ್ನು ಕೂಲಂಕಷವಾಗಿ ವಿಚಾರ ಮಾಡುತ್ತೇವೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಕಮ್ಯುನಲ್ ರೀಜನಲ್, ಮತ್ತು ಎಕನಾಮಿಕಲ್ ಎಂದು ಯೂನಿಟ್ ಮಾಡದೆ, ಫಾಮಿಲಿ ಒಂದು ಯೂನಿಟ್ ಎಂದು ಪರಿಗಣಿಸುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಪ್ರತಿಯೊಂದು ಫಾಮಿಲಿಯೂ ಒಂದು ಯೂನಿಟ್ ಎಂದು ಎಣಿಕೆ ಮಾಡುವುದಕ್ಕಾಗುವದಿಲ್ಲ. ಒಂದು ಬ್ರಾಡ್ ಪ್ರಿನ್ಸಿಪಲ್ ಇಟ್ಟುಕೊಂಡು ಮಾಡಬೇಕಾಗುತ್ತದೆ. ಸ್ಕಾಲರಷಿಪ್ ಹಂಚುವುದರಲ್ಲಿ ಬ್ರಾಡ್ ಪ್ರಿನ್ಸಿಪಲ್ ಇಟ್ಟುಕೊಡು ಮಾಡಬೇಕಾಗುತ್ತದೆ. ಇದನ್ನು ಕೂಲಕಂಷವಾಗಿ ವಿಚಾರ ಮಾಡಲಾಗುವುದು.

Salient facts of the Gulhati Commission Report.

***Q.—388. Sri D. M. SIDDIAH** (Biligere).—

Will the Government be pleased to state :—

(a) what are the salient facts of the Gulhati Commission Report with reference to Mysore State ;

(b) whether the Commission has recommended to allow the water of Godavari to Krishna and thus make use of that water for the irrigation of Hyderabad-Karnataka area ;

(c) what is the outcome of the talks of the Mysore Government with that of the States of Andhra and Maharashtra ;

(d) the action Government proposed to take if the due share of Krishna-Godavari waters is not given to Mysore ?

A.—Sri S. NIJALINGAPPA (Chief Minister).—

(a) and (b) The Report is confidential.

(c) Our Government had no talks with the other State Governments.

(d) It is hypothetical.

Sri D. M. SIDDIAH.—Is it not a fact that one of the recommendations of the Gulhati Commission is to allow the water of Godavari to Krishna and this has lead to vexed question of sharing of water ?

†Sri S. NIJALINGAPPA.—I have made it specifically clear that it is a confidential document, contents of which cannot be published now.

Sri D. M. SIDDIAH.—Sir, when you visited Delhi, not recently, but on a subsequent occasion, you were kind enough to say that you had met the Chief Minister of Andhra Pradesh. May I know what was the discussion ?

Sri S. NIJALINGAPPA.—I have not met the Chief Minister of Andhra Pradesh after the Southern Zonal Council meeting, which was held about 3 months ago.

Sri D. M. SIDDIAH.—The Parliament members of the three States are discussing this matter of sharing of Krishna and Godavari waters, in Delhi, and it is reported that they are submitting the report within the 20th of this month. May I know what is the binding over the Members of the Parliament to discuss this matter and where exactly our State stand in this matter ?

Sri S. NIJALINGAPPA.—Those friends have come forward to help and solve this problem. They can give their opinion and it is not binding on anybody.

Sri D. M. SIDDIAH.—From your recent visit, are we sure of getting our due share of the Krishna river waters for irrigation purposes ?

Sri S. NIJALINGAPPA.—I have not met any Chief Minister in Delhi. I met the Prime Minister and the concerned Minister and we are awaiting the outcome of my discussion.

Sri S. SIVAPPA.—Since the Gulhati Commission's report is still not published and the outcome of the report is not known, may I know whether any State is empowered to take up projects on Krishna waters before the decision of the Central Government ?

Sri S. NIJALINGAPPA.—My friend has very often said that the Andhra Pradesh is going on with the projects. He is giving the information.

Sri S. SIVAPPA.—Has the State Government made any report to the Central Government that even the Andhra Pradesh Government is proceeding with the projects before any decision is taken on the Gulhati Commission Report, and that it is *ultra vires* ?

Sri S. NIJALINGAPPA.—That matter was made very clear.

Sri C. J. MUCKANNAPPA.—May I know the outcome of the mission of the Chief Minister to Delhi, Sir ?

Mr. SPEAKER.—The 'mission' is not the subject matter of this interpellation. The Hon'ble Member may ask at any other time, but it does not arise out of this question.

ಶ್ರೀ ಎಸ್. ಗೋಪಾಲ ಗೌಡ.—ಗುಲ್ಹಾಟಿ ಕಮಿಟಿಯು ವರದಿ ಈ ತಿಂಗಳ 15ನೇ ತಾರೀಖಿಗೆ ಹೊರಬೀಳುತ್ತದೆಂದು ತಾವು ಹೇಳಿದ್ದಿರಿ. ಅದು ಯಾವಾಗ ಹೊರಬರುತ್ತದೆ ?

ಶ್ರೀ ಎಸ್. ನಿಜಲಿಂಗಪ್ಪ.—15ನೇ ತಾರೀಖಿಗೆ ಹೊರಬರುತ್ತದೆಂದು ನಾನು ಹೇಳಲಿಲ್ಲ. ಹಾಗೆ ಕೆಲವರ ನಿರೀಕ್ಷಣೆಯಿದ್ದಿತು. ಹಾಗೆ ಪೇಪರ್‌ನಲ್ಲೂ ಬಂದಿತ್ತು.

Sri D. M. SIDDIAH.—Has it come to the notice of the Chief Minister that the Chief Minister of Andhra Pradesh has stated yesterday that the Sri Shailam project will be continued and that there is no worry in getting the sanction of the Central Government ?

Sri S. NIJALINGAPPA.—That is what is published in the Papers.

ಶ್ರೀ ಕೆ. ದೇವಯ್ಯ.—ಬೊಂಬಾಯಿ ಸರಕಾರದವರು ತಮಗೆ ಮೂರನೇ ಒಂದು ಭಾಗ ಕೃಷ್ಣಾ-ಗೋದಾವರಿ ನೀರು ದೊರೆಯಬೇಕೆಂದು ಹೇಳಿರುವ ಬೇಡಿಕೆ ನಿಮಗೆ ಬಂದಿದೆಯೆ ?

ಶ್ರೀ ಎಸ್. ನಿಜಲಿಂಗಪ್ಪ.—ಅವರು ಹೇಳಿದ್ದಾರೆ.

ಶ್ರೀ ಎಸ್. ಶಿವಪ್ಪ.—ಆಂಧ್ರ ಸರಕಾರ ನಾಗಾರ್ಜುನ ಸಾಗರ ಮತ್ತು ಶ್ರೀಶೈಲ ಪ್ರೊಜೆಕ್ಟ್‌ಗಳನ್ನು ಗುಲ್ಹಾಟಿ ಕಮಿಷನ್ ವರದಿಯನ್ನು ನಿರಾಕರಿಸಿ ಅದು ಹೊರ ಬರುವದಕ್ಕೆ ಮುಂಚೆ ಕಟ್ಟಿಬಿಟ್ಟರೆ ಮೈಸೂರು ದೇಶಕ್ಕೆ ಬಹಳ ಅಪಾಯವಾಗುವುದಿಲ್ಲವೆ ?

ಶ್ರೀ ಎಸ್. ನಿಜಲಿಂಗಪ್ಪ.—ಅದಕ್ಕೋಸ್ಕರವೇ ಆ ರೀತಿ ಆಗಕೂಡದು ಎಂದು ಹೇಳತ್ತಿದ್ದೇವೆ.

ಶ್ರೀ ಎಸ್. ಶಿವಪ್ಪ.—ಈ ಬಗ್ಗೆ ತೀವ್ರವಾದ ಪ್ರತಿಭಟನೆ ಸಲ್ಲಿಸಿ ಪ್ರಾಜೆಕ್ಟ್ ಕೆಲಸವನ್ನು ನಿಲ್ಲಿಸಬೇಕೆಂದು ಅವರಿಗೆ ತಿಳಿಸಿ, ನಮ್ಮ ರಾಜ್ಯದಲ್ಲಿ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಸೇರಿಸುವುದಕ್ಕೆ ಅಧಿಕಾರ ಹೊಂದಿದ್ದೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಈ ಸಭೆಯಲ್ಲಿ ಪ್ರತಿಭಟನೆ ಸಾಕಷ್ಟು ಆಗಿದೆ. ಎಲ್ಲ ಕಡೆ ತೀವ್ರ ಪ್ರತಿಭಟನೆಯಾಗುತ್ತಾ ಇದೆ.

ಶ್ರೀ ಡಿ. ಎಂ. ಸಿದ್ದಯ್ಯ.—ಅದು ಕಾನ್‌ಫಿಡೆನ್ಷಿಯಲ್ ರಿಪೋರ್ಟ ಎಂದು ಹೇಳಿದ್ದಿರಿ. ಅದನ್ನು ಈ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಅಧಿಕಾರ ಇದೆಯೆ ?

ಶ್ರೀ ಎಸ್. ನಿಜಲಿಂಗಪ್ಪ.—ಇಲ್ಲ.

Sri V. S. PATIL—Sir, when the matter is seized by the Central Government by appointing the Gulhati Commission, why the people of the States, *i.e.*, Maharastra, Andhra Pradesh and Mysore, are agitating this on the floor of the House and outside ?

Mr. SPEAKER.—I disallow two-thirds of the Hon'ble Member's question and one-third has been sufficiently answered. Question time is over.

QUESTIONS FOR ANSWERS ON THE DAY

(but not taken up)

Number of villages that have been granted Loans under Rural Housing Scheme in Kanakapura Taluk

*Q.—255. **Sri K. L. SHIVALINGE GOWDA** (Virupakshipura).—

Will the Government be pleased to state :—

(*a*) the number of villages that have been granted loans under Rural Housing Scheme in Kanakapura Taluk for the last three years;

(*b*) the number of people that have been granted loan in each village;

(*c*) the number of people who have received loans without having sites in their possession and how many of them received loan without actually living in the village;

(*d*) is it true that the records pertaining to this matter have been taken by the Anti-Corruption Department, for investigation from Block Development Officer's Office ?

A.—**Sri RAMAKRISHNA HEGDE** (Minister for Co-operation and Development).—

(*a*) Seven Villages.

(*b*)

(1)	Harohally	24
(2)	Thungani	33
(3)	Alanartha	18
(4)	T. Gollahalli	59
(5)	Kodihalli	25
(6)	Doddakabballi	26
(7)	Mallapura	36
	Total ...	221

(*c*) Nil

(*d*) Yes.

Merging of the Social Welfare Board with the Women Welfare Department

*Q.—265. **Sri B. HUTCHE GOWDA** (Turuvekere).—

Will the Government be pleased to state :—

(*a*) whether it is a fact that the Social Welfare Board is going to be merged with the Women Welfare Department;

(*b*) whether it is a fact that some Welfare Extension Projects would be closed ;

(*c*) if so, the number of personnel that would be affected by the above proposal ?

A.—**Smt. YASHODARA DASAPPA** (Minister for Social Welfare).—

(*a*) No.
(*b*) No.
(*c*) Does not arise in view of answer to clause (*b*).

Demand by the Public of Kolar Taluk to take up several roads by the Public Works Department and to convert them into Pucca Roads.

Q.*—278. **Sri P. VENKATAGIRIYAPPA (Kolar).—

Will the Government be pleased to state :—

(*a*) whether they are aware that there is a longstanding demand by the public of Kolar Taluk to take up the following roads by the Public Works Department and convert them into pucca roads ;

(i) road from Mudduvadi to Korhamangala *via* Nayakarahalli and Bandarahalli ;
(ii) road from Haralakunte to Avani *via* Shahpur ;
(iii) road from Settimadamangala to Ammanallur cross (Bangalore-Chintamani road) *via* Cholagatta, Thippanahalli ; and
(iv) road from Chakarasanahalli to Madivala *via* Balamaranahalli ;

(*b*) whether they have prepared any estimates in respect of these roads ;

(*c*) if so, what is the estimated cost of each work and the action taken in the matter ?

A.—**Sri VEERENDRA PATIL** (Minister for Public Works).—

(*a*) Yes.

(*b*) Yes, except item No. (ii).

(*c*) (i) *Muduvadi-Kothamangala Road*—		
Estimated cost (work completed)	...	Rs. 15,000
(ii) *Haralakunte-Avani Road*—		
No estimate prepared.		
(iii) *Settimadamangala-Ammanallur Road*		
Estimated cost	...	Rs. 14,000
Outlay	...	Rs. 28,949
(iv) *Chakarasanahalli-Madivala Road*—		
Estimated cost	...	Rs. 41,000
Outlay	...	Rs. 14,484

Number of Co-operative farming Societies in Tumkur District.

*_Q._—295 Sri K. P. REVANNA SIDDAPPA (Tiptur).

Will the Government be pleased to state:—

(_a_) the number of Co-operative Farming Societies in Tumkur District;

(_b_) the places where they have been started;

(_c_) the extent of land allotted to these Societies;

(_d_) the number of shareholders at the commencement of these Societies; and whether they are still continuing as such and if not, the reasons therefor;

(_e_) the amount of grant-in-aid and loan granted by them to each Society;

(_f_) whether they have been working satisfactorily;

(_g_) if so, the dividend distributed to the shareholders either in cash or kind;

(_h_) the amount of profit or loss with reference to each Society?

_A._—Sri RAMAKRISHNA HEGDE (Minister for Co-operation and Development)

(_a_) and (_b_) Five; as shown below:—

1. Nagasandra, Kunigal Taluk.
2. Maranagere, Tiptur Taluk.
3. Kasavanahalli, Tiptur Taluk.
4. Karejeevanahalli, Sira Taluk.
5. Bikkeguddakaval, Gubbi Taluk.

(_c_) 733 acres.

(_d_) 153. The membership in one Society has been reduced by as against 40 as they being absentee members could not be continued.

(_e_)

	Name of Society	_Loan_ Rs	_Subsidy._ Rs.
1.	Nagasandra Joint Farming C.S.	7,750	1,950
2.	Maranagere Joint Farming C.S.	4,500	4,000
3.	Kasavanahalli Co-operative Collective Farming Co-operative Society.	4,000	900
4.	Gandhi Harijan Farming Co-operative Society Karijeevanahalli.	...	21,000
5.	Bikkegudda Joint Farming Co-operative Society.	7,750	1,850

Yes.

(*g*) No dividend has been distributed by the above Farming Societies except Maranagere Farming Society.

Dividend declared by the Maranagere Farming Society.

Rs· 4 per cent *i.e.*, Rs· 688–05 nP.

(*h*)	*Name of the Society*	*Profit*	*Loss.*
		Rs.	
1.	Nagasandra Joint Farming Co-operative Society.	27	...
2.	Maranagere Joint Farming Co-operative Society.	3,528	...
3.	Kasavanahalli Joint Farming Co-operative Society.	405	...
4.	Gandhi Harijan Co-operative Farming Co-operative Society Karijeevanahalli.	Being audited	
5.	Bikkegudda Joint Farming Co-operative Society.		

Work of ths Bridge at Sankalakariya in Mangalore Taluk, South Canara District.

Q.*—505. **Sri B. BHASKARA SHETTY (Kaup).—

Will the Government be pleased to state:—

(*a*) the estimated cost for the bridge at Sankalakariya in Mangalore Taluk, South Kanara District;

(*b*) the date on which the work started;

(*c*) the date on which the work was completed?

A.—**Sri VEERENDRA PATIL** (Minister for Public Works).

(*a*) Rs. 2,53,000

(*b*) 18-12-1958.

(*c*) The work is not yet completed.

Number of Mariamma Temples that are functioning under H. R. and C. Endowments in Kaup Town of South Kanara District.

*Q.—508 **Sri B. BHASKARA SHETTY** (Kaup).—

Will the Government be pleased to state :—

(*a*) the number of Mariamma Temples that are functioning under H. R. and C. Endowments in Kaup Town of South Kanara District ;

(*b*) the total amount of income of each Mariamma temple for the last three years ;

(*c*) whether they receive the yearly audited statement of accounts of each of these temples, up to the Fasli 1370 ;

(*d*) what are the assets in immovable and movable properties of the temple ?

A.—**Sri M. V. KRISHNAPPA** (Minister for Revenue).—

(*a*) Three.

1. Sri Hale Mariamma Temple, Kaup
2. Sri Hosa Mariamma ,, ,,
3. Third Marigudi temple, Uliargoli Village.

(*b*)

	F.1368	*F.1369*	*F.1370*
	Rs.	Rs.	Rs.
1.	9.893	9,457	10,385
2.	8,887	Not assessed	10,484
3.	2,989	2,715	3,946

(*c*) The accounts are yet to be audited.

(*d*) 1. Hosamarigudi :
Movable ... Rs. 17,044–44 nP.
Immovable ... 42 acres 21 guntas assessed at Rs. 151–87 nP. (not valved).

2. Halemarigudi temple (Kaup) :
Movable ... Rs. 11,866–17 nP.
Immovable ... Rs. 13,000–00.

3. Third Marigudi temple :
Movable ... Rs. 4,142–75.
Immovable ... Nil

Member's Representations

Sri SIDDIAH KASIMATH (ಶಿರಹಟ್ಟಿ).—I had sent a calling attention motion about the Hesarghatta Farm. What has happened to it ?

Mr. SPEAKER.—I believe the 'Agriculture Demand' is coming up for discussion in the course of the Debate, and so, I have disallowed it.

Sri SANJEEVANATH AIKALA (Suratkal).—Sir, there are still ten minutes left for the Question Hour. Question No. 508 about Mariamma Temples is an important question and may please be taken up.

Mr. SPEAKER.—There are other questions also, and I cannot make a distinction.

Sri C. J. MUCKANNAPPA (Sira).—Sir, when I requested the Hon'ble Chief Minister about his Mission to Delhi, he had promised that he would make a statement on the 18th.

Sri S. NIJALINGAPPA (Chief Minister).—Sir, I had stated that I would make a statement in reply to the Debate which is going to be on the 18th. The reply will be given either to-day or to-morrow.

BUDGET ESTIMATES FOR 1963-64—DEMANDS FOR GRANTS.

(*Debate continued.*)

Sri P. F. D'MELLOW (Nominated).—Mr. Speaker, Sir, when the house ose last Saturday, I was about to remark that it was a pity to find so many young people in this State disfigured and mutilated as the result of Hansen's disease or Leprosy as it is better known. Is there any reason why we should lag behind other States by not providing ourselves with facilities for surgical repair and rehabilitation of such patients? I am told that there is a hospital in Mysore City which is willing to undertake such work, if it could be provided with the means to acquire the additional accommodation that it needs for in-patients stricken by leprosy. I ask our Hon'ble Health Minister to please examine the possibility of providing such accommodation.

Sir, while on the subject of Hansen's disease, I am not sure whether we possess the authority to separate children of parents found with active disease. It has been long established that in India the greater majority of Leprosy patients are infected before their 20th year, many even before their 15th year. So, if we could only provide for the children of patients suffering from active or open leprosy to be separated from their parents and taken care of in suitable schools, there is no reason why we should not succeed in finally eradicating the disease of leprosy from our midst.

Sir, I shall now revert to the subject of the 'care of the Aged'. I do not claim that there is anything particularly original in what I suggest. But as one who has spent some time in this particular field of medicine, I have never ceased to hope that somebody we in this country will have a Plan of our own, one that concerns every one of intimately, for we all hope one day, to be happy in our old age.

(Sri P. F. D'MELLOW)

Sir, with our eyes rivetted on that future we plan to build for the country, we are apt to overlook a problem that grows more acute every year, and one that should concern us both as citizens, and taxpayers. The problem of our Aged citizen, who thanks to advances in both preventive and curative medicine, better housing, nutrition and the rise in the general standard of living, will remain with us very longer than they used to in years gone by.

I should like to offer to our Hon'ble Minister for Health, the suggestion that he appoints a Committee on the lines of that which produced a valuable report in 1949, on behalf of the British Medical Association, a blue print for the "Care and Treatment of the Aged and Infirm" in the United Kingdom.

We are shortly to have yet another medical college and hospital in Bangalore, one for which a large sum of money has been made available from the private sector. I now ask the Government, to invite the Governing Body of the new St. John's Medical College and Hospital to accept the responsibility of undertaking comprehensive research in the subject of *Geriatrics*, and help both the State and the country to evolve a Plan of its own, one that will later allow for the establishment of geriatric departments in all our lyrger hospitals, working in co-operation with such voluntary agencies as are willing to undertake the "After care" of the "long stay geriatric patient".

Mr. SPEAKER.—I am convinced that there is enormous scope for research in the peculiar ways in which diseases work out and the knowledge so gained can then be applied all over the country. Sir, I commend this for the serious consideration of Government and I hope that when he comes to reply to this debate, the Hon'ble Minister for Health will find it possible to hold out some such hope and promise to the increasingly large population of the Aged who have come to make their homes in the salubrious climate of Mysore State.

There remain one more point which I should like to mention, and that is while I have had no personal experience of such, I have heard from medical colleagues of their experiences in coming across many undesirable side effects and sequel in the matter of mass vaccination against small pox. My Hon'ble colleague Dr. Gowdiah appears to be aware of such instances, and I would suggest that our Public health authorities cause an enquiry into the causes, if only to ensure that the campaign for eradication of small pox does not suffer.

Before concluding I should like to touch on the decision to introduce the mid-day meals scheme in our schools.

As we are all aware, recent surveys have revealed serious protein deficiency in the children of poorer families in this State and so I hope the need to supplement this deficiency will be kept in mind. More than quantity of food comes the manner of its presentation and variation combined with scrupulous cleanliness in its preparation and our Health Department must be associated with this scheme in all its stages.

I should like to conclude with one more request. The Hon'ble Minister 12 months ago held out a hope of a hospital for aged incurables within two years. I sincerely trust that today when he replies he is going to give us an assurance that we are indeed 12 months nearer.

ಶ್ರೀ ಸಂಜೀವನಾಥ ಐಕಲ (ಸುರತ್‌ಕಲ್).—ಮಾನ್ಯ ಸಭಾಪತಿಗಳೇ ನಾನು ಇದೇ ಮೆಡಿಕಲ್ ಡಿಮ್ಯಾಂಡಿನ ವಿಷಯದಲ್ಲಿ ಕಳೆದ ವರ್ಷ ಮಾತನಾಡುವಾಗ ಆಯುರ್ವೇದದ ಅಭಿವೃದ್ಧಿಗೆ ಆಯುರ್ವೇದ ಶಾಲೆಗಳಿಗೆ, ಆಯುರ್ವೇದ ಕಾಲೇಜುಗಳಿಗೆ ಮತ್ತು ಆಯುರ್ವೇದ ಸಂಸ್ಥೆಗಳಿಗೆ ಸರ್ಕಾರದವರು ತೋರಿಸುತ್ತಿರುವ ಮಲತಾಯಿ ಧೋರಣೆಯನ್ನು ಕುರಿತು ಮಾತನಾಡಿದ್ದೆ. ಒಂದು ವರ್ಷದ ಅವಧಿಯಲ್ಲಿ ನಾವು ಹೇಳಿದಂಥಾ ಅಭಿಪ್ರಾಯಗಳನ್ನು ಸರ್ಕಾರದವರು ತಿಳಿದುಕೊಂಡು ಅದರಲ್ಲಿ ಅನುಸರಿಸಬೇಕಾದ ಯಾವ ಕಾರ್ಯಕ್ರಮಗಳಿವೆ, ಯಾವ ತಮ್ಮ ಧೋರಣೆಗಳಿವೆ ಅವುಗಳನ್ನು ಬದಲಾಯಿಸಿ ಆಯುರ್ವೇದಕ್ಕೆ ಒದಗಿಸಬೇಕಾದ ಹಣವನ್ನು ಮತ್ತು ಇತರ ಸೌಲಭ್ಯಗಳನ್ನು ಸರ್ಕಾರದವರು ಒದಗಿಸಿ ಆಯುರ್ವೇದ ಶಾಸ್ತ್ರಕ್ಕೆ ನ್ಯಾಯ ಸಮ್ಮತವಾಗಿ ಯಾವ ಸಹಾಯ ಸೌಲಭ್ಯಗಳು ಸಿಕ್ಕಬೇಕೋ ಅವುಗಳು ಸಿಕ್ಕಬಹುದು ಎಂದು ನಾನು ಆಶಿಸಿದ್ದೆ. ಆದರೆ ಈ ಒಂದು ವರ್ಷದ ಅವಧಿಯಲ್ಲಿ ಈ ಆಯುರ್ವೇದ ಶಾಸ್ತ್ರದಬಾಬಿಗೆ ಸರ್ಕಾರದವರು ಮಾಡಿರತಕ್ಕ ಸಹಾಯ ಸೌಲಭ್ಯಗಳನ್ನು ನೋಡಿದರೆ ಮಲತಾಯಿ ಧೋರಣೆ ಹೆಚ್ಚಾಗಿದೆ. ಯಾವ ರೀತಿಯಲ್ಲೂ ಅದನ್ನು ನಿವಾರಣೆ ಮಾಡಲು ಪ್ರಯತ್ನಿಸಿರುವಂಥ ಅಂಶಗಳು ಕಂಡು ಬರುವುದಿಲ್ಲ. ಈ ಆಯುರ್ವೇದಕ್ಕೆ ಸಂಬಂಧಪಟ್ಟ ಹಾಗೆ ಒಂದು ಆಕ್ಟನ್ನು ತಯಾರಿಸಿ ಅದರಲ್ಲಿ ಈ ಆಯುರ್ವೇದದ ಅಭಿವೃದ್ಧಿಗೆ ಬೇಕಾದಂಥ ಅನೇಕ ಸೌಲತ್ತುಗಳನ್ನು ಸೂಚಿಸಲಾಗಿದೆ. ಆ ಆಕ್ಟಿನಲ್ಲಿರುವ ಅನೇಕ ಸೌಲತ್ತುಗಳನ್ನು ಸರ್ಕಾರ ಜಾರಿಗೆ ತರುವುದರಲ್ಲಿ ತುಂಬಾ ಅಸಮರ್ಥನೀಯವಾಗಿದೆ. ಆಯುರ್ವೇದ ಶಾಸ್ತ್ರಕ್ಕೆ ಸಂಬಂಧಪಟ್ಟ ಹಾಗೆ ಒಂದು ಬೋರ್ಡನ್ನು ನೇಮಿಸಬೇಕೆಂದು ಆ ಶಾಸನದಲ್ಲಿ ಸೂಚಿಸಿದೆ. ಇಲ್ಲಿಯ ತನಕ ಆ ಬೋರ್ಡನ್ನು ನೇಮಿಸುವ ಯಾವ ಒಂದು ಕಾರ್ಯಕ್ರಮವನ್ನೂ ಸರ್ಕಾರದವರು ಕೈಗೊಂಡಿಲ್ಲ. ಈ ಆಯುರ್ವೇದದ ಬಗ್ಗೆ ಡೈರೆಕ್ಟರ್ ಆಫ್ ಆಯುರ್ವೇದ ಮೆಡಿಸಿನ್ ಎಂದು ಒಂದು ಪ್ರತ್ಯೇಕವಾದ ಪೋಸ್ಟನ್ನು ಮಾಡಬೇಕೆಂದು ಶಾಸನದಲ್ಲಿ ಸೂಚಿಸಿದೆ ಅದನ್ನು ಸಹ ಸರ್ಕಾರದವರು ಈ ತನಕ ಮಾಡಿಲ್ಲ. ಒಬ್ಬ ಪ್ರತ್ಯೇಕ ಆಯುರ್ವೇದ ಡೈರೆಕ್ಟರನ್ನು ಇದುವರೆಗೂ ನೇಮಿಸಿಲ್ಲ.

ಇನ್ನು ಆಯುರ್ವೇದ ಡಿಸ್‌ಪೆನ್ಸರಿಗಳ ವಿಷಯದಲ್ಲಿ ಹೇಳುವುದಾದರೆ ಸರ್ಕಾರದವರು ನಡೆಸುತ್ತಿರುವ ಆಯುರ್ವೇದ ಆಸ್ಪತ್ರೆಗಳಲ್ಲಿ ಅಲ್ಲಿನ ಪರಿಸ್ಥಿತಿಯನ್ನು ನೋಡಿದರೆ ಸರ್ಕಾರದವರು ಏತಕ್ಕೆ ಈ ರೀತಿಯಲ್ಲಿ ಬೇಜವಾಬ್ದಾರಿಯಿಂದ ಈ ಬಾಬನ್ನು ನೋಡುತ್ತಿದ್ದಾರೋ ಎಂದು ಮನಸ್ಸಿಗೆ ಖೇದವಾಗುತ್ತಿದೆ.

ನಮ್ಮ ಪ್ರಾಂತ್ಯದಲ್ಲಿ ಅನೇಕ ಆಯುರ್ವೇದ ಡಿಸ್‌ಪೆನ್ಸರಿಗಳು ಇವೆ ? ಒಂದೆರಡು ಆಯುರ್ವೇದ ಹಾಸ್ಪೆಟಲುಗಳಿವೆ, ಒಂದು ಆಯುರ್ವೇದ ಕಾಲೇಜಿದೆ. ಮೈಸೂರಿನಲ್ಲಿರುವಂತೆ ಒಂದು ಆಯುರ್ವೇದ ಕಾಲೇಜು (School of Indian Medicine) ಇಲ್ಲದೆ, ಈ ಪದ್ಧತಿಯನ್ನು ಕಲಿಸಲಿಕ್ಕೆ ಬೇಕಾದ ಅನುಕೂಲತೆಗಳಿಲ್ಲ; ಕಟ್ಟಡಗಳೂ ಇಲ್ಲ; ಕಲಿಸಲಿಕ್ಕೆ ಬೇಕಾದ equipments ಗಳು ತುಂಬ ಕಡಿಮೆ ಇವೆ. ಕೇವಲ ಯಾವುದೇ ಒಂದು ಪುರಾತನ ಸಂಪ್ರದಾಯಕ್ಕೆ ಕಟ್ಟು ಬಿದ್ದು, ನಮ್ಮ ಪಾಲಿಗೆ ಇದು ಬಂದುಬಿಟ್ಟಿದೆ, ಅನುಭವಿಸೋಣ ಅನ್ನುವಹಾಗಿದೆ ; ಕೆಳಗಡೆ ನೀರಿನಿಂದಲೇ ಸಂತೃಪ್ತಿಗೊಳ್ಳಲಿ ಎಂದು ಸರ್ಕಾರ ಭಾವಿಸಿಕೊಂಡಹಾಗಿದೆ. ಬಜೆಟ್ಟಿನಲ್ಲಿ ಆಯುರ್ವೇದಕ್ಕೆ ಇಟ್ಟಿರುವ ಹಣ ನೋಡಿದರೆ ಈ ರೀತಿ ನಡೆದಿದೆ ಎಂದು ಕಾಣುತ್ತದೆ.

2.00 P.M.

ಆಯುರ್ವೇದ ಪದ್ಧತಿಯಿಂದ ಚಿಕಿತ್ಸೆ ಹೊಂದುವಷ್ಟು, ಗುಣವಾಗುವಷ್ಟು ಮಂದಿ, ಅಲೋಪತಿಯಲ್ಲಿ ಇಲ್ಲ. ನಮ್ಮ ದುರಾದೃಷ್ಟವೇನೋ, ಹೆಲ್ತ್ ಮಿನಿಷ್ಟರಾಗುವಂಥವರೆಲ್ಲಾ ಅಲೋಪತಿ ಡಾಕ್ಟರೇ ಆಗಿದ್ದಾರೆ, western system of medicine ಕಲಿತಂಥವರೇ ಆಗಿದ್ದಾರೆ. ಅಲೋಪತಿ ಪರಿಕ್ಷೆಗಳಲ್ಲಿ ತೇರ್ಗಡೆ ಹೊಂದಿದವರೇ ಹೆಲ್ತ್ ಮಿನಿಸ್ಟರುಗಳಾಗಿರುವುದರಿಂದ ಆಯುರ್ವೇದ ಪದ್ಧತಿಯ, ಸಂಸ್ಕೃತಿಯ ಜೀವನದಲ್ಲಿ ಒಂದು ಹೊಸ ಕ್ರಾಂತಿಯನ್ನು ಹುಟ್ಟಿಸಲು ಸಾಧ್ಯವಾಗಿಲ್ಲ. ಆಯುರ್ವೇದ ಪದ್ಧತಿಯ ಗಂಧವೇ ಗೊತ್ತಿಲ್ಲದವರು ಈ ಇಲಾಖೆಯ ಮಂತ್ರಿಗಳಾಗುವುದರಿಂದ ಸ್ವಾಬಾವಿಕವಾಗಿ ಈ ಪದ್ಧತಿಗೆ ಪ್ರೋತ್ಸಾಹ ಕೊಡದಂಥ ಮನಸ್ಸು ಉತ್ಪನ್ನವಾಗುತ್ತದೆ.

ಆಯುರ್ವೇದ ಪದ್ಧತಿ ಕೇವಲ ಒಂದು ಔಷಧಿ, ಮಾತ್ರೆ, ಕಷಾಯ ಕೊಡುವ system ಅಲ್ಲ. ಅದು ಒಂದು science of life, ಜೀವಂತ ಶಾಸ್ತ್ರ ತಿಳಿಸುವ ದೊಡ್ಡ ಶಾಸ್ತ್ರ. ಆ ಶಾಸ್ತ್ರದಲ್ಲಿ ನಮ್ಮ

(ಶ್ರೀ ಸಂಜೀವನಾಥ ಐಕಳ)

ದೇಶದ ಸಂಸ್ಕೃತಿ ಪರಂಪರೆಯಾಗಿ ಬೆಳೆದ ಕೊಂಡು ಬಂದಿದೆ. ಈ ಪದ್ಧತಿಗೆ ಅಂಥ ದೊಡ್ಡ ಪರಂಪರೆಯಾದ ಹಿನ್ನೆಲೆ ಇರುತ್ತದೆ. ಸರ್ಕಾರ ಈ ಪದ್ಧತಿಗೆ ಮಲತಾಯಿ ಧೋರಣೆ ತೋರಿಸುತ್ತಲೇ ಬೆಳೆದು ಕೊಂಡು ಬಂದಿದೆ. ಈ ಒಂದು ಪದ್ಧತಿಯಿಂದ ನಮ್ಮ ದೇಶದ ಹಳ್ಳಿಗಳಲ್ಲಿರುವ ಬಹು ಜನರಿಗೆ ಪ್ರಯೋಜನ ದೊರಕಬೇಕಾದರೆ ಸರ್ಕಾರ ಅದಕ್ಕೆ ಪ್ರೋತ್ಸಾಹ ಕೊಟ್ಟು ಅದನ್ನು ಬೆಳೆಸಬೇಕು. ಅದರಿಂದ ಭಯದ ರೀತಿಯಲ್ಲಿ ಚಿಕಿತ್ಸೆ ಪಡೆಯುವ ಅಗತ್ಯವಿಲ್ಲ. ಈ ಪದ್ಧತಿಯ ಬಗ್ಗೆ ಆ ಅಭಿಪ್ರಾಯ ಇದ್ದರೆ, ಹಾಗೆಯೇ ತೀರ್ಮಾನ ತೆಗೆದುಕೊಂಡು ಈ ಪದ್ಧತಿಯ ಶಾಲೆಗಳನ್ನೂ, ಹಾಸ್ಪಿಟಲುಗಳನ್ನೂ, ಕಾಲೇಜುಗಳನ್ನೂ ಮುಚ್ಚಬಿಡಿರಿ. ಈ ರೀತಿ ಅರ್ಧಂಬರ್ಧ ಸಹಾಯಮಾಡಿ, ಈ ಪದ್ಧತಿಯಿಂದ ಚಿಕಿತ್ಸೆ ಕೊಡಿಸಿದರೆ ಉಪಯೋಗವಿಲ್ಲ ಎಂಬ ಅಪವಾದವನ್ನು ಹೊರಿಸುವುದು ಸರಿಯಲ್ಲ. ಹಲವರು ಹೇಳಿದಹಾಗೆ, ಎರಡು ಮಕ್ಕಳಿದ್ದರೆ, ಒಂದು ಮಗುವಿಗೆ ಬೇಕಾದ ತಿಂಡಿ ತೀರ್ಥಗಳನ್ನು ಕೊಟ್ಟು ಪೋಷಣೆಮಾಡಿ ಇನ್ನೊಂದು ಮಗುವಿಗೆ ಏನೂ ಆಧಾರ ಸೌಕರ್ಯ ಕೊಡದೆ, "ನೋಡಿ, ಈ ಅಲೋಪತಿ ಮಗು ಹೇಗೆ ಪುಷ್ಟಿಯಾಗಿ ಬೆಳೆಯುತ್ತದೆ, ಅದೇ ಆಯುರ್ವೇದ ಮಗು ಕ್ಷೀಣವಾಗಿದೆ" ಎಂದು ಹೇಳುವುದು ಯೋಗ್ಯ ಸಾಮ್ಯ (comparison) ಅಲ್ಲ ಸರ್ಕಾರದವರು ಆಯುರ್ವೇದ ಪದ್ಧತಿಗೆ ಇಷ್ಟರವರೆಗೆ ತೋರಿಸಿದ ಧೋರಣೆಯನ್ನು ಮುಂದಕ್ಕೆ ತಿದ್ದಿಕೊಂಡು ಅದಕ್ಕೂ ಯೋಗ್ಯ ರೀತಿಯಲ್ಲಿ ಬೆಳೆಯುವಂತೆ ಅನುಕೂಲ ಮಾಡಿ ಕೊಡಬೇಕೆಂಬುದು ನನ್ನ ಆಸೆ.

ಇನ್ನು ಆಯುರ್ವೇದ ಪದ್ಧತಿಯನ್ನು ಪ್ರಾಕ್ಟೀಸ್ ಮಾಡತಕ್ಕಂಥ ಅನೇಕ ಪಂಡಿತರುಗಳ ಅವಸ್ಥೆ ಬಹಳ ಬೇಸರಕರವಾಗಿದೆ. ಅವರು ಮಾರುವಂಥ, ತಯಾರಿಸುವಂಥ ಭಸ್ಮ, ಇತರ ಮಾತ್ರೆಗಳಿಗೆ, ರಸಾಯನಕ್ಕೆ ಲೆಕ್ಕ ಇಡಬೇಕೆಂದು ಸರ್ಕಾರದ ಆಜ್ಞೆಯಾಗಿದೆ. ಇದರಿಂದ ಈ ಪಂಡಿತರುಗಳಿಗೆ ಬಹಳ ಕಠಿಣ ಸನ್ನಿವೇಶ ಒದಗಿದೆ. ಹಳ್ಳಿಗಳಲ್ಲಿ ವಂಶಪಾರಂಪರ್ಯವಾಗಿ ಈ ಆಯುರ್ವೇದ ಚಿಕಿತ್ಸೆಯನ್ನು ನಡೆಸಿಕೊಂಡು ಬಂದಿರುವವರೂ ಪಂಡಿತರುಗಳ ಮೇಲೆ ಇಂಥ ಒಂದು ಕಷ್ಟಕರವಾದ ಆಜ್ಞೆಯನ್ನು ಹಾಕುವುದು ತಪ್ಪು. "ಅಷ್ಟರಿಷ್ಟ"ದಲ್ಲಿ, ಯಾವವಿಧದಲ್ಲಿಯೂ ಪ್ರೊಹಿಬಿಷನ್ನಿಗೆ ವಿರುದ್ಧವಾದ ಆಲ್ಕೋಹಾಲುಗಳು ಇರುವುದಿಲ್ಲ. ಆದರೆ ನಮ್ಮ ಸರ್ಕಾರದವರು ಈ "ಅಷ್ಟರಿಷ್ಟ"ದಲ್ಲಿ ಆಲ್ಕೋಹಾಲ್ ಇದೆಯೆಂದು ತಿಳಿದುಕೊಂಡು ಇದನ್ನು ತಯಾರಿಸುವಂಥವರು ಲೆಕ್ಕ ಇಟ್ಟು ಕೊಳ್ಳಬೇಕೆಂದು ಹೇಳಿದ್ದಾರೆ, ಇದರಿಂದ ಪಂಡಿತರೊಳಗೆ ಬಹಳ ದೊಡ್ಡದಾದ ಕಷ್ಟವಾಗಿದೆ. ಆ ಔಷಧಿ ಮೇಲೆ ಹಾಕಿರುವ ಆಜ್ಞೆ ಬಹಳ ಅನ್ಯಾಯ.

ಅನೇಕ ಕಡೆಗಳಲ್ಲಿ ಹಳ್ಳಿಗಳಲ್ಲಿ ಆಯುರ್ವೇದ ಪಂಡಿತರುಗಳು, ಪಾಶ್ಚಾತ್ಯ ಪದ್ಧತಿಯಲ್ಲಿ ಗುಣವಾಗದ ತುಂಬಾ ಭಯಂಕರವಾದ cronic case ಗಳನ್ನು, ಗುಣ ಮಾಡುವುದರಲ್ಲಿ ಹೆಸರು ಪಡೆದಿದ್ದಾರೆ. ಇಂಥ ಎಷ್ಟೋ ಪಂಡಿತರುಗಳು ಹಳ್ಳಿಗಳಲ್ಲಿ ಇರುತ್ತಾರೆ. ಈಗ ಸರ್ಕಾರದವರು ಅವರಮೇಲೆ ಹೊರಿಸಿರುವ ಆಜ್ಞೆಯಿಂದ ಬಹಳ ತೊಂದರೆಯಾಗಿ, ದೊಡ್ಡ ದೊಡ್ಡ ಆಯುರ್ವೇದ ಪಂಡಿತರುಗಳು practice ಮಾಡಲಿಕ್ಕೆ ಅನುಕೂಲವಾಗದೆ ಅವರುಗಳಿಂದ ಜನಗಳಿಗೆ ದೊರಕುತ್ತಿದ್ದ ಯೋಗ್ಯ ಸಹಾಯವು ತಪ್ಪಿಹೋಗುತ್ತದೆ. ಇನ್ನು ಮುಂದಾದರೂ ಆಯುರ್ವೇದ ಪದ್ಧತಿ ಬದುಕಿಕೊಳ್ಳಬೇಕಾದರೆ, ಉಳಿಯಬೇಕಾಗಿದ್ದರೆ, ಹಳ್ಳಿಗಾಡಿನ ಜನರಿಗೆ ಅವರಿಂದ ಚಿಕಿತ್ಸೆ ಸಿಗಬೇಕಾಗಿದ್ದರೆ, ಈ ಪಂಡಿತರುಗಳ ಸಂಸ್ಕೃತಿ ಶಕ್ತಿ ಬೆಳೆಯಲು ಅವಕಾಶ ಕೊಟ್ಟು, ಈ ಪದ್ಧತಿಗೆ ಯೋಗ್ಯವಾದ ಹಣ ಸಹಾಯವಾಗಬೇಕು ಪಾಶ್ಚಾತ್ಯ ಪದ್ಧತಿಗೆ 100 ರೂಪಾಯಿ ಖರ್ಚು ಮಾಡಿದರೆ, ಆಯುರ್ವೇದ ಡಿಸ್ಪೆನ್ಸರಿಗಳಿಗೆ, ಹಾಸ್ಪಿಟಲುಗಳಿಗೆ, ಕಾಲೇಜುಗಳಿಗೆ ಅದರ ಶೇಕಡ ಮೂರರಷ್ಟು ಖರ್ಚು ಮಾಡುತ್ತೀರೆಂದರೆ, ಆಯುರ್ವೇದ ಪದ್ಧತಿ ಮೇಲೆ ಎಷ್ಟು ಕಮ್ಮಿ ಹಣ ಖರ್ಚು ಮಾಡುತ್ತೀರಿ? ಇಷ್ಟು ಕಮ್ಮಿ ಖರ್ಚು ಮಾಡಿದರೆ ಆಯುರ್ವೇದ ಪದ್ಧತಿ ಯಾವ ರೀತಿಯಲ್ಲಿ ಬೆಳೆಯುತ್ತದೆ?

ಈ ಡಿಪಾರ್ಟ್‌ಮೆಂಟಿನಲ್ಲಿರುವ ಲೋಪ ದೋಷಗಳನ್ನು ಕುರಿತು ಮಾತನಾಡುವುದಾದರೆ, ಒಂದು ವಿಷಯ ಹೇಳಬೇಕಾಗಿದೆ. ಬೆಂಗಳೂರಿನಲ್ಲಿ ಚಾಮರಾಜ ಪೇಟೆಯಲ್ಲಿ ನರ್ಸುಗಳಿಗಾಗಿ ಹೆಚ್ಚು ಕಡಿಮೆ 340 ಕೋಣೆಗಳನ್ನೊಳಗೊಂಡ 2-3 ಕಟ್ಟಡಗಳನ್ನು ಕಟ್ಟಿದ್ದಾರೆ. ಈ ಕಟ್ಟಡಗಳ ಕೆಲಸ ಪೂರ್ತಿಯಾಗಿ ಆರೇಳು ತಿಂಗಳುಗಳು ಆಯಿತು. ಎಲೆಕ್ಟ್ರಿಸಿಟಿ ಕೆಲಸ, ನೀರು ಸರಭರಾಜು ಎಲ್ಲಾ ಆಗಿದೆ. ಆದರೆ ನರ್ಸುಗಳನ್ನು ಅಲ್ಲಿಗೆ ಸ್ಥಳಾಂತರಿಸಲಿಲ್ಲ. ಅದರ ಬದಲು ಕೆಲವು ಕೋಣೆಗಳಲ್ಲಿ post-graduate ಗಳನ್ನು ನಿಲ್ಲಲು ಹೇಳಿದ್ದಾರೆ. ಕಾರಣವೇನೆಂದರೆ, ನರ್ಸುಗಳು ಅಲ್ಲಿ ಕಟ್ಟಿರುವ ಬ್ಲಾಕುಗಳು ಬಹಳ ಸಣ್ಣದಾಗಿವೆ ಎಂದು ಹೇಳಿ, ಹೋಗಲಿಕ್ಕೆ ಇಷ್ಟಪಡಲಿಲ್ಲ. ಸರ್ಕಾರದವರು ಇಂಜನಿಯರುಗಳನ್ನು consult ಮಾಡಿ ನಿರ್ಮಿಸಿದಂಥ ಇಂಥ ಕಟ್ಟಡಗಳಿಗೆ, ಅವರ ಕೈಕೆಳಗಿರುವ ನರ್ಸುಗಳು ಹೋಗುವುದಿಲ್ಲವೆಂದರೆ ಅರ್ಥವೇನು? ನರ್ಸುಗಳಿಗಾಗಿ ಅನುಕೂಲವಾಗು

ವಂಥ ತಯಾರಿಸಿದ ಕಟ್ಟಡವನ್ನು ನರ್ಸುಗಳಮೇಲೆ ಸರ್ಕಾರದವರು ಹೊರಿಸಲು ಅಸಮರ್ಥರಾದುದು ಬೇಸರಕರವಾದ ಸಂಗತಿ.

ತಾಲ್ಲೂಕುಬೋರ್ಡ್ ಆಸ್ಪತ್ರೆಗಳ ವಿಷಯ ಈ ಮಾನ್ಯ ಸಭೆಯಲ್ಲಿ ಮೊನ್ನೆ ಸದಸ್ಯರು ಮಾತನಾಡುತ್ತಾ, ಅಲ್ಲಿ ಇರುವಂಥ ಔಷದಗಳ ಅನಾನುಕೂಲತೆಗಳನ್ನು ಸರಿಪಡಿಸದೆ ಇರುವುದರಿಂದ ಅನೇಕ ರೀತಿಯ ತೊಂದರೆಗಳಾಗುತ್ತವೆ ಎಂದು ಹೇಳಿದರು. ಇಂಥ ಸರ್ಕಾರಿ ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ವೈದ್ಯಕೀಯ ಅಧಿಕಾರಿಗಳು ಯಾರಿದ್ದಾರೆಯೋ ಅವರಿಗೆ ಸಲ್ಲುತ್ತಾ ಇರುವಂಥ ವೇತನ ಬಹಳ ಕೆಳಮಟ್ಟಿನದು ಇದೆ. ಅಂಥ ಕಡೆಗಳಲ್ಲಿ ಕೆಲಸ ಮಾಡಲು ಡಾಕ್ಟರುಗಳು ನಿಜವಾಗಿ ಅಪೇಕ್ಷಿಸುವುದಿಲ್ಲ ಎಂದು ಈ ಸಭೆಯ ತುಂಬ ಸದಸ್ಯರು ಹೇಳಿದರು. ಅದು ನಿಜ : ಹಳ್ಳಿಗಾಡಿನ ಆಸ್ಪತ್ರೆಗಳಿಗೆ ಅಥವಾ ತಾಲ್ಲೂಕು ಹೆಡ್‌ಕ್ವಾರ್ಟರ್‌ಗಳಲ್ಲಿರುವ ಆಸ್ಪತ್ರೆಗಳಿಗೆ ಡಾಕ್ಟರುಗಳು ಹೋಗಲಿಕ್ಕೆ ಒಡಂಬಡುವುದಿಲ್ಲ. ಅಲ್ಲಿ ಕೊಡತಕ್ಕ ವೇತನ ಮತ್ತು ಇತರ ಸೌಲಭ್ಯಗಳು ಬಹಳ ಕಡಿಮೆಯಾಗಿವೆ.

ಈ ವೇತನ ನಿರ್ಣಯದಲ್ಲಿ ಒಂದು ಸುಧಾರಣೆಯನ್ನು ಮಾಡಬೇಕೆಂದು ನಾನು ಇಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಫ್ಯಾಮಿಲಿ ಪ್ಲಾನಿಂಗ್ ವಿಚಾರದ ಬಗ್ಗೆ ಸರ್ಕಾರದವರ ಕ್ರಮವನ್ನು ಕುರಿತು ಒಂದೆರಡು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಯೋಜನೆಯ ತಾತ್ವಿಕ ಹಿನ್ನಲೆಯನ್ನು ನಾನು ಈಗ ಚರ್ಚಿಸುವುದಿಲ್ಲ. ಇವತ್ತು ಸರ್ಕಾರದವರು ಈ ವಿಚಾರದಲ್ಲಿ ತೆಗೆದುಕೊಳ್ಳುತ್ತಿರುವ ಕಾರ್ಯಕ್ರಮದ ದೃಷ್ಟಿಯನ್ನು ನೋಡುವುದಾದರೆ ಈ ಫ್ಯಾಮಿಲಿ ಪ್ಲಾನಿಂಗ್ ಅಥವಾ ಕುಟುಂಬ ನಿಯಂತ್ರಣ ಯೋಜನೆಯನ್ನು ಕಾರ್ಯಗತ ಮಾಡುವುದೇ ಒಂದು ದೊಡ್ಡ ಕಾರ್ಯಕ್ರಮ ಸರ್ಕಾರದವರಿಗೆ ಆಗಿಹೋಗಿದೆ. ನಾವು ಒಂದು ಗಾದೆಯನ್ನು ಆಗಾಗ್ಗೆ ಕೇಳುತ್ತಿರುತ್ತೇವೆ. ಅದೇನೆಂದರೆ "ಉಂಟು ಮಾಡಿದ ದೇವರು ಊಟಕೊಡದೆ ಇರಲಾರ" ಎಂದು ಮಕ್ಕಳು ಎಷ್ಟಾದರೂ ಆಗಲಿ. ಉದಾಹರಣೆಗಾಗಿ ಮನುಷ್ಯನಿಗೆ ಒಂದು ಬಾಯಿ ಇದೆ ಎರಡು ಕೈಗಳಿವೆ ಎರಡು ಕೈಗಳಿಗೆ 10 ಬೆರಳುಗಳಿವೆ. ಹಾಗೆ ದೇಶದಲ್ಲಿ ಸಂತಾನ ಜಾಸ್ತಿಯಾದರೆ ಅದರಿಂದೇನೂ ತೊಂದರೆಯಾಗಲಿಕ್ಕಿಲ್ಲ. ಆದರೆ ಸರ್ಕಾರದವರು ಏನೋ ಒಂದು ಆಧಾರದ ಮೇಲೆ ಕುಟುಂಬ ನಿಯಂತ್ರಣ ಯೋಜನೆಯನ್ನು ಜಾರಿ ಮಾಡಬೇಕೆಂದು ಒಂದು ಕಾಯಿದೆಗೆ ಬಲಬದ್ದು ಈ ಯೋಜನೆಯನ್ನು ಅಪ್ರಾಸಂಗಿಕವಾದ ರೀತಿಯಲ್ಲಿ ನಡೆಸಿಕೊಂಡು ಬರುತ್ತಿದ್ದಾರೆ. ಇದರಲ್ಲಿ ಇತ್ತೀಚೆಗೆ ದುರ್ನೀತಿ ವ್ಯವಹಾರ ಜಾಸ್ತಿಯಾಗಿದೆ. ಇದಕ್ಕೆ ಬೇಕಾದ ಸೆಮಿನಾರ್‌ಗಳನ್ನು, ವಿಚಾರ ಗೋಷ್ಠಿಗಳನ್ನು, ಚರ್ಚಾ ಕೂಟಗಳನ್ನು ಮತ್ತು ಸ್ಟಡಿ-ಗ್ರೂಪ್‌ಗಳನ್ನು ಮಾಡಿಕೊಂಡು ಬೇರೆ ಹೋಗುತ್ತಿದ್ದಾರೆ. ಕುಟುಂಬ ನಿಯಂತ್ರಣ ಯೋಜನೆಗೆ ಈ ವ್ಯವಸ್ಥೆಗಳನ್ನು ಮಾಡುವುದರಲ್ಲೂ ತುಂಬಾ ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದಾರೆ.

ಶ್ರೀ ಎಂ. ವಿ. ಕೃಷ್ಣಪ್ಪ (ಕಂದಾಯ ಶಾಖೆಯ ಮಂತ್ರಿಗಳು).— ಬೇಜವಾಬ್ದಾರಿಯಿಂದಲ್ಲ ; ಜವಾಬ್ದಾರಿಯಿಂದಲೇ ಅವನ್ನೆಲ್ಲಾ ಮಾಡುತ್ತಿದ್ದೇವೆ.

ಶ್ರೀ ಸಂಜೀವನಾಥ ಐಕಳ.—ಅಷ್ಟು ಬೇಜವಾಬ್ದಾರಿಯಿಂದ ಇವನ್ನೆಲ್ಲಾ ಮಾಡಲೇ ಬಾರದು. ಇದು ನಿಜವಾಗಿ ದುರ್ನೀತಿಗೆ ಎಡೆ ಕೊಟ್ಟ ಹಾಗಾಗುತ್ತದೆ. ಖಂಡಿತವಾಗಿ ಇದರ ಅವಶ್ಯಕತೆಯಿಲ್ಲ. ಈ ವಿಷಯವನ್ನು ಆಯಾ ವ್ಯಕ್ತಿಗಳಿಗೇ ಬಿಡುವುದು ಒಳ್ಳೆಯದು. ಕುಟುಂಬ ನಿಯಂತ್ರಣದ ಯೋಜನೆ ಬಗ್ಗೆ ಪ್ರಚಾರ ಮಾಡಬೇಕೆಂದು ಹೋಗುವುದು ಬಹಳ ಸಣ್ಣ ಕೆಲಸ. ಮುಖ್ಯವಾಗಿ ಇದನ್ನು ವ್ಯಕ್ತಿಯ ವಿಚಾರಕ್ಕೇ ಬಿಡಬೇಕು ಇನ್ನೂ ಕೆಲವು ಸಣ್ಣ ಸಂಘ ಸಂಸ್ಥೆಗಳಿವೆ. ಉದಾಹರಣೆಗೆ ಹೇಳುವುದಾದರೆ ಸೋಷಿಯಲ್ ವೆಲ್‌ಫೇರ್, ಭಾರತ ಸೇವಾ ಸಮಾಜ—ಇಂತಹುಗಳಿವೆ. ಇಂತಹ ಸಣ್ಣ ಸಾಮಾಜಿಕ ಕಾರ್ಯಕ್ಷೇತ್ರ ಸಂಘಗಳಿಗೆ ಆ ವಿಚಾರಗಳನ್ನು ಬಿಡಬೇಕು. ಸರ್ಕಾರದವರು ಇದಕ್ಕಾಗಿ ಒಂದು ಪ್ರತ್ಯೇಕ ಇಲಾಖೆಯನ್ನು ತೆರೆಯುವುದು, ಅಲ್ಲಿ ಸಾಕಷ್ಟು ಸಿಬ್ಬಂದಿಯನ್ನು ನೇಮಿಸಿಕೊಂಡು ಅವರಿಗೆ ಕಾಲ ಪರಿಸ್ಥಿತಿಗೆ ಅನುಗುಣವಾದ ಸಂಬಳವನ್ನು ಕೊಟ್ಟು, ಸರ್ಕಾರದ ಹಣವನ್ನು ನಷ್ಟ ಮಾಡಿಕೊಂಡು ದುರ್ನೀತಿ ಪ್ರಚಾರ ಮಾಡುವುದಕ್ಕೆ ಖರ್ಚು ಮಾಡುವುದು ನ್ಯಾಯವಾದುದಲ್ಲ. ಈ ಕುಟುಂಬ ನಿಯಂತ್ರಣದ ಯೋಜನೆ ಪ್ರಚಾರ ಏಸಿದೆ ಇದನ್ನು ಸೆಮಿನಾರ್ ಮೂಲಕ ವಿಶೇಷವಾಗಿ ಮಾಡದೆ ಕೇವಲ ಸಣ್ಣ ಸಂಘ ಸಂಸ್ಥೆಗಳೇ ಈ ಯೋಜನಾ ಕ್ರಮವನ್ನು ಯೋಗ್ಯ ರೀತಿಯಲ್ಲಿ ನಡೆಸಿಕೊಂಡು ಹೋಗುವಂತೆ ವ್ಯವಸ್ಥೆ ಮಾಡಬೇಕೆಂದು ಸರ್ಕಾರದವರನ್ನು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಎಷ್ಟೋ ಆಸ್ಪತ್ರೆಗಳಲ್ಲಿ ಆಯುರ್ವೇದ ಕಾಲೇಜು ನಡೆಸುವವರು ಅಲ್ಲಿ ವಿದ್ಯೆ ಕಲಿಯುವ ವಿಧ್ಯಾರ್ಥಿಗಳಿಗೆ ಆ ಆಸ್ಪತ್ರೆಯಿಂದ ತಕ್ಕ ಸೌಲಭ್ಯಗಳನ್ನು ಒದಗಿಸಿ ಕೊಡಬೇಕೆಂದು ಕೇಳಿಕೊಂಡಿದ್ದೇನೆ. ಮೈಸೂರು ಪ್ರಾಂತದಲ್ಲಿ 10-11 ಆಯುರ್ವೇದಿಕ್ ಪ್ರೈವೇಟ್ ಕಾಲೇಜುಗಳಿವೆ. ಆ ಖಾಸಗೀ ಸಂಸ್ಥೆಯವರು ತಮ್ಮ ವಿಧ್ಯಾರ್ಥಿಗಳನ್ನು ಅಂದರೆ ಅಲ್ಲ ಈ ವಿದ್ಯೆಯನ್ನು ಕಲಿಯುವ

(ಶ್ರೀ ಸಂಜೀವನಾಥ ಐಕಳ)

ವಿಧ್ಯಾರ್ಥಿಗಳಿಗೆ ಆಸ್ಪತ್ರೆಯ ಸೌಲಭ್ಯವನ್ನು ಒದಗಿಸಿ ಕೊಡಬೇಕೆಂದು ಕೇಳಿದ್ದಾರೆ. ಆದರೆ ಸರ್ಕಾರದವರು ಎಂ. ಬಿ. ಬಿ. ಎಸ್. ವಿಧ್ಯಾರ್ಥಿಗಳಿಗೆ ಈ ಸೌಕರ್ಯವನ್ನು ಒದಗಿಸುತ್ತಿರುವಂತೆ ಈ ಆಯುರ್ವೇದಿಕ್ ಕಾಲೇಜು ಆಸ್ಪತ್ರೆಗಳಲ್ಲಿಯೂ ಇಂತಹ ಅನುಕೂಲತೆಗಳನ್ನು ಏಕೆ ಒದಗಿಸಬಾರದು ಎಂಬುದಾಗಿ ನಾನು ಪ್ರಶ್ನೆ ಮಾಡುತ್ತೇನೆ. ಅವರಿಗೂ ಕೂಡ ಪ್ರಾಕ್ಟಿಕಲ್ ಟ್ರೈನಿಂಗ್ ಅನುಕೂಲತೆಯನ್ನು ಸರ್ಕಾರದವರು ಕೊಡುವ ಹಾಗೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಟಿ. ಮಾದಯ್ಯ ಗೌಡ (ರಾಮನಗರಂ).—ಸ್ವಾಮಿ, ನಮ್ಮ ಮುಂದಿರತಕ್ಕ ವೈದ್ಯಕೀಯ ಮತ್ತು ಜನಾರೋಗ್ಯ ರಕ್ಷಣೆಯ ಬೇಡಿಕೆಯನ್ನು ಸ್ವೀಕರಿಸುತ್ತಾ ಈ ವೈದ್ಯಕೀಯ ಮತ್ತು ಜನಾರೋಗ್ಯ ಇಲಾಖೆಗಳು ಒಂದು ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಾ ಇವೆ ಯೆಂದು ಹೇಳಿ ಈ ವಿಚಾರವಾಗಿ ನಾನು ಸರ್ಕಾರದವರನ್ನು ಅಭಿನಂದಿಸಲು ಇಚ್ಛೆಪಡುತ್ತೇನೆ. ನನಗೆ ಗೊತ್ತಿರುವ ಹಾಗೆ ಸುಮಾರು 40-50 ವರ್ಷಗಳ ಹಿಂದೆ ನಮ್ಮ ದೇಶದಲ್ಲಿ ಸಾಂಕ್ರಾಮಿಕ ರೋಗಗಳು ಉಲ್ಬಣವಾಗಿ ಪ್ರತಿವರ್ಷವೂ ಪ್ಲೇಗು, ಕಾಲರಾ, ವಾಂತಿ ಭೇದಿ ಇತ್ಯಾದಿ ರೋಗಗಳಿಗೆ ಸಾವಿರಾರು ಜನ, ಲಕ್ಷಾಂತರ ಜನ ತುತ್ತಾಗುತ್ತಿದ್ದರು. ಅಂಥಾದ್ದನ್ನೆಲ್ಲಾ ಈ ದಿವಸ ತಡೆಹಿಡಿದು ನಿಲ್ಲಿಸಿದ್ದಾರೆ. ಈಗ ಸಾಂಕ್ರಾಮಿಕ ಜಾಡ್ಯಗಳು ದೇಶದಲ್ಲಿ ಕೇಳುವುದೇ ದುಸ್ತರವಾಗಿದೆ. ಇದಕ್ಕೋಸ್ಕರವಾಗಿ ಸರ್ಕಾರದವರು ಹೆಚ್ಚು ಹೆಚ್ಚಾಗಿ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಮತ್ತು ತುಂಬಾ ಮೆಹನತ್ತು ಮಾಡುತ್ತಿದ್ದಾರೆ. ಇದು ನಿಜವಾಗಿಯೂ ಅಭಿನಂದನೀಯವಾದ ವಿಚಾರ. ಇಷ್ಟು ವಿಷಯಗಳನ್ನು ಹೇಳಿ ಕೆಲವು ಸಲಹೆಗಳನ್ನು ಈ ಇಲಾಖೆಗೆ ನಾನು ಕೊಡಲು ಇಚ್ಛಿಸುತ್ತೇನೆ. ಕೆಲವು ವರ್ಷಗಳ ಹಿಂದೆ ನಾನು ಡೆನ್ಮಾರ್ಕ್ ದೇಶಕ್ಕೆ ಹೋಗಿದ್ದೆ. ಅಲ್ಲಿ ಒಂದು ಆಸ್ಪತ್ರೆಗೆ ಹೋಗಬೇಕಾದ ಪ್ರಸಂಗ ಬಂತು. ನನ್ನ ಜೊತೆಯಲ್ಲಿದ್ದ ಸ್ನೇಹಿತರು ಆಮಶಂಕೆಯಿಂದ ಆಸ್ಪತ್ರೆಗೆ ಸೇರಬೇಕಾಯಿತು. ಅವರು ಅಲ್ಲಿ ಅಡ್ಮಿಟ್ ಆದಮೇಲೆ ನಾನು ಅವರನ್ನು ನೋಡುವುದಕ್ಕೆ ಆಗಾಗ್ಗೆ ಹೋಗುತ್ತಿದ್ದೆ. ಅಲ್ಲಿನ ವೈದ್ಯರು ಅವರಲ್ಲಿದ್ದಂಥ ಒಂದು ದಯಾಪೂರಿತವಾದ ಹೃದಯದಿಂದ ಕಾಯಿಲೆಗಳನ್ನು ವಾಸಿ ಮಾಡುತ್ತಿದ್ದರೋ ಅಥವಾ ಔಷಧಿಗಳನ್ನು ಕೊಟ್ಟು ವಾಸಿ ಮಾಡುತ್ತಿದ್ದರೋ ನನಗೆ ಗೊತ್ತಾಗಲಿಲ್ಲ. ಅಲ್ಲಿನ ವೈದ್ಯರೆಲ್ಲರೂ ರೋಗಿಗಳ ವಿಚಾರದಲ್ಲಿ ಅಷ್ಟು ದಯಪೂರಿತವಾಗಿ ವರ್ತಿಸುತ್ತಿದ್ದಾರೆ. ಕಾಯಿಲೆಯವರನ್ನು ಕಂಡರೆ ತುಂಬಾ ಪ್ರೀತಿಯಿಂದ ನೋಡುತ್ತಿದ್ದರು. ಬಹುಶಃ ಅದರಿಂದಲೇ ಅವರ ಕಾಯಿಲೆಗಳು ವಾಸಿಯಾಗುತ್ತಿತ್ತೋ ಏನೋ ಎಂದು ನನಗನ್ನಿಸಿತು. ಬಹುಶಃ ಮಂತ್ರಿಗಳು ಈ ಮಾತನ್ನು ಒಪ್ಪಲಾರರು ಎಂಬುದಾಗಿ ನಾನು ಅಂದುಕೊಂಡಿದ್ದೇನೆ. ಎಲ್ಲಾ ಕಾಯಿಲೆಗಳಿಗೆ ನಿಜವಾಗಿ ಅವರ ಪ್ರೇಮ ಪೂರಿತವಾದ ಉಪಚಾರವೇ ಉತ್ತಮ ಔಷಧಿ ಯೆಂಬುದಾಗಿ ನಾನು ಅಂದುಕೊಂಡೆ. ಅಲ್ಲಿನ ವೈದ್ಯರುಗಳು ಹಸನ್ಮುಖರಾಗಿ, ಪ್ರೇಮ ಪೂರಿತವಾದ ಮಾತುಕತೆಗಳನ್ನು ರೋಗಿಗಳೊಡನೆ ಆಡುತ್ತಿದ್ದುದ್ದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಗುತ್ತಿತ್ತು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕವಿ ವರ್ಣನೆ ಮಾಡಿದಂತೆ ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರಲ್ಲಾ !

ಶ್ರೀ ಟಿ. ಮಾದಯ್ಯ ಗೌಡ.—ಆಸ್ಪತ್ರೆಯಲ್ಲಿ ಕಾಯಿಲೆ ಇದ್ದಂಥ ನನ್ನ ಸ್ನೇಹಿತರು 8 ದಿವಸಗಳ ಮೇಲೆ ಸಂಪೂರ್ಣವಾಗಿ ಗುಣ ಹೊಂದಿ ಹೊರಗಡೆ ಬರುವಾಗ ಇನ್ನು ನಾಲ್ಕು ದಿವಸಗಳು ಆಸ್ಪತ್ರೆಯಲ್ಲಿ ಇದ್ದು ಬರಬೇಕು ಎಂದು ನನಗೆ ಹೇಳಿದರು. ಅಂದರೆ ಅಲ್ಲಿನ ಆಸ್ಪತ್ರೆಯಲ್ಲಿ ಎಷ್ಟರಮಟ್ಟಿಗೆ ರೋಗಿಗಳಿಗೆ ಉಪಚಾರ, ಒಳ್ಳೆಯ ಸಹವಾಸ, ಒಳ್ಳೆಯ ಔಷಧಿ ಕೊಡುತ್ತಿದ್ದರು ಎಂದು ನನಗೆ ಚೆನ್ನಾಗಿ ಅನುಭವವಾಯಿತು. ಆದರೆ ನಮ್ಮ ಆಸ್ಪತ್ರೆಯಲ್ಲಾದರೋ ನಮ್ಮ ಡಾಕ್ಟರುಗಳು ಕೇವಲ ವೈದ್ಯರಾಗಿರುವುದೇ ಅಲ್ಲದೆ ಅಲ್ಲಿನವರ ಹಾಗೆ ರೋಗಿಗಳ ಬಗ್ಗೆ ದಯಪೂರಿತರಾಗಿಯೂ ಇರಬೇಕೆಂದು ನಾನು ಆಶಿಸುತ್ತೇನೆ. ಆದ್ದರಿಂದ ನಮ್ಮ ಮೆಡಿಕಲ್ ಕಾಲೇಜುಗಳಲ್ಲಿ ಕೇವಲ ವೈದ್ಯಕೀಯ ವಿಚಾರಗಳನ್ನೇ ಹೇಳದೆ ಡಾಕ್ಟರುಗಳು ಸಂಪೂರ್ಣವಾಗಿ ಮಾನವೀಯತೆಯ ಮಾರ್ಗದಲ್ಲಿ ವರ್ತಿಸುವ ಮನೋಧರ್ಮವನ್ನು ಪಡೆಯುವಹಾಗೆ ಅವರಿಗೆ ತರಪೇತು ಮಾಡಬೇಕು. ಎಂಬುದಾಗಿ ನನಗಾದರೂ ಅನ್ನಿಸುತ್ತದೆ. ಇನ್ನು ಮತ್ತೊಂದು ವಿಚಾರವನ್ನು ನಾನು ಪಾಶ್ಚಿಮಾತ್ಯ ದೇಶದಲ್ಲಿ ನೋಡಿದ್ದನ್ನು ಈ ಸಭೆಯ ಮುಂದೆ ತಿಳಿಸಲು ಅಪೇಕ್ಷಿಸುತ್ತೇನೆ. ಅಲ್ಲಿ ಕೆಲವು ಸ್ಕೂಲುಗಳಿಗೆ ನಾನು ಹೋಗತಕ್ಕ ಪ್ರಸಂಗ ನನಗೆ ದೊರಕಿತು. ಸುಮಾರು 500-1000 ವಿದ್ಯಾರ್ಥಿಗಳಿರತಕ್ಕ

ಒಂದೊಂದು ಸ್ಕೂಲಿನಲ್ಲಿ ಒಂದೊಂದು ಆಸ್ಪತ್ರೆ ಇರುತ್ತಿತ್ತು. ಅಲ್ಲಿನ ಮಕ್ಕಳನ್ನು ಅಲ್ಲಿನ ಆಸ್ಪತ್ರೆ ಡಾಕ್ಟರು ಆಗಾಗ್ಗೆ ಪರೀಕ್ಷೆ ಮಾಡಿ ಅವರಿಗೆ ತಿಳುವಳಿಕೆಯನ್ನು ಕೊಡುತ್ತಿದ್ದರು. ಅವರ ಹಲ್ಲು, ಕಿವಿ, ಮೂಗು, ಗಂಟಲು ಇತ್ಯಾದಿಗಳನ್ನು ಪರೀಕ್ಷೆ ಮಾಡಿ ಅವುಗಳಲ್ಲಿ ಏನಾದರೂ ದೋಷವಿದ್ದರೆ ಅವನ್ನು ಜಾಗ್ರತೆಯಾಗಿ ನಿವಾರಣೆ ಮಾಡುತ್ತಿದ್ದರು. ಪ್ರತಿ ಮಗುವಿಗೂ ಒಂದು ರಿಜಿಸ್ಟರ್‌ನಲ್ಲಿ ಒಂದೊಂದು ಪುಟವನ್ನು ಬಿಟ್ಟು ಇಂತಹ ದಿವಸ ಪರೀಕ್ಷೆ ಮಾಡಿದೆ ಇಂತಹ ದಿವಸ ಹೀಗಿತ್ತು-ಈ ತರಹ ಎಲ್ಲಾ ಮಕ್ಕಳನ್ನು ಪರೀಕ್ಷೆ ಮಾಡಿ ತಿಳುವಳಿಕೆ ಕೊಡುತ್ತಿದ್ದರು. ಎರಡು-ಮೂರು ತಿಂಗಳಿಗೊಂದು ಸಾರಿ ಪರೀಕ್ಷೆ ಮಾಡುವುದನ್ನು ಮುಂದುವರಿಸಿಕೊಂಡು ಅವರು ಆ ದೇಶದ ಮಕ್ಕಳ ಯೋಗಕ್ಷೇಮಕ್ಕಾಗಿ ಆಗಾಗ್ಗೆ ವೈದ್ಯಕೀಯ ಪರೀಕ್ಷೆಗಾಗಿ ಅವರನ್ನು ಒಳಪಡಿಸಿ ಎಲ್ಲ ಜನಾಂಗದ ಒಂದು ಆರೋಗ್ಯಾಭಿವೃದ್ಧಿಗೆ ಎಷ್ಟರಮಟ್ಟಿಗೆ ವೈದ್ಯರು ನೆರವಾಗುತ್ತಿದ್ದುದನ್ನು ನಾನು ನೋಡಿದೆ. ನಮ್ಮ ದೇಶದಲ್ಲಿ ನಾವೂ ಕೂಡ ಮಕ್ಕಳ ವೈದ್ಯ ಪರೀಕ್ಷೆಗೋಸ್ಕರ ಫೀಸ್ ಕೊಡುತ್ತೇವೆ. ಆದರೆ ನಮ್ಮ ಮಕ್ಕಳಿಗೆ ಯಾವ ಡಾಕ್ಟರೂ ಕೂಡ ನಾಲ್ಕು ವರ್ಷಗಳಿಗೊಂದು ಸಾರಿಯಾದರೂ ಪರೀಕ್ಷೆ ಮಾಡಿದ್ದನ್ನು ನಾನು ನೋಡಲಿಲ್ಲ. ಇದು ಸರಿಯಾದುದಲ್ಲ. ನಾವು ಫೀಜು ಕಟ್ಟಿದ ಮೇಲೂ ಮಕ್ಕಳಿಗೆ ವೈದ್ಯ ಪರೀಕ್ಷೆ ನಡೆಸದೇ ಹೋದರೆ ಅದು ನ್ಯಾಯವಲ್ಲ, ಧರ್ಮವಲ್ಲ ಎನಿಸುತ್ತದೆ. ವೈದ್ಯಪರೀಕ್ಷೆಗಾಗಿ ಕೊಡತಕ್ಕ ಫೀಜು ವಿದ್ಯಾಭ್ಯಾಸದ ಇಲಾಖೆಯಲ್ಲಿ ಸಾವಿರಾರು ರೂಪಾಯಿ ವಸೂಲಾಗುತ್ತದೆ, ಇದನ್ನು ಯಾವರೀತಿ ಖರ್ಚುಮಾಡುತ್ತಾರೋ ಗೊತ್ತಿಲ್ಲ. ವೈದ್ಯ ಇಲಾಖೆಯವರು ಈ ವಿಷಯಕ್ಕೆ ಗಮನಕೊಡುವುದು ಅತ್ಯಗತ್ಯ. ಜನರ ಆರೋಗ್ಯಭಾಗ್ಯವನ್ನು ಕಾಪಾಡುವುದು ಬಹಳ ಮುಖ್ಯ. ನಮ್ಮ ಮಕ್ಕಳಿಗೆ ವಿದ್ಯೆ ಹೇಗೆ ಅವಶ್ಯಕವೋ ಹಾಗೆಯೇ ಅವರ ಆರೋಗ್ಯವೂ ಮುಖ್ಯ. ಚಿಕ್ಕವಯಸ್ಸಿನಲ್ಲಿ ಆರೋಗ್ಯವನ್ನು ಕಾಪಾಡಿಕೊಂಡರೆ, ಮುಂದಿನ ಪ್ರಜೆಗಳಾಗುವ ನಮ್ಮ ಮಕ್ಕಳು ಆರೋಗ್ಯವಂತರಾದ-ದೃಢಕಾಯರಾದ ಪ್ರಜೆಗಳಾಗಿ ಬೆಳೆಯಲು ಅವಶ್ಯಕವಾಗುತ್ತದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಯಾರಾದರೂ ಕಾಹಿಲೆಯವರು ಹೋದರೆ ಈ ವೈದ್ಯಪದ್ಧತಿ ಆ ವೈದ್ಯಪದ್ಧತಿ ಎಂದು ಹೇಳಿ ಔಷಧವನ್ನು ಕೊಡುವುದಿಲ್ಲ. ಅವರು ಕೊಡುವುದು ಕಾಹಿಲೆ ವಾಸಿಯಾಗತಕ್ಕ ಔಷಧ. ಯಾವ ಪದ್ಧತಿಯದಾದರೂ ಆಗಿರಬಹುದು; ಅಲೋಪತಿ, ಆಯುರ್ವೇದ, ಹೋಮಿಯೋಪತಿ, ಯಾವುದಾದರೂ ಆಗಿರಬಹುದು. ಕಾಹಿಲೆ ಗುಣವಾಗಲು ಯಾವುದಾದರೇನು ? ಭಗವಂತ ಸೃಷ್ಟಿಮಾಡಿರುವುದರಲ್ಲಿ ಯಾವುದನ್ನಾದರೂ ಕಾಹಿಲೆ ಗುಣವಾಗುವುದಕ್ಕೆ ಕೊಡಬೇಕು. ನಮ್ಮ ಪದ್ಧತಿಯೇ ಸರಿ ಎಂದು ಹೇಳುವುದು ಸೂಕ್ತವಲ್ಲ. ಪಾಶ್ಚಿಮಾತ್ಯ ದೇಶಗಳಲ್ಲಿ ಈ ರೀತಿ ಹೇಳುವುದಿಲ್ಲವೆಂದು ತಿಳಿದುಕೊಂಡಿದ್ದೇನೆ. ಕಾಹಿಲೆ ಗುಣವಾಗಲು ತಕ್ಕ ಔಷಧ ಯಾವಪದ್ಧತಿಯದಾದರೇನೋ ನನಗೆ ಅರ್ಥವಾಗುವುದಿಲ್ಲ. ಹೀಗಿರುವಾಗ ನಾವು ಕಾಲೇಜಿನಲ್ಲಿ ಇದು ಅಲೋಪತಿ, ಆಯುರ್ವೇದ, ಹೋಮಿಯೋಪತಿ ಕಾಲೇಜು ಎಂದೇಕೆ ಬೇರೆ ಬೇರೆ ವಿಭಾಗ ಇದೆಯೋ ನನಗೆ ಅರ್ಥವಾಗುವುದಿಲ್ಲ. ಅಥವಾ ಈ ವಿಚಾರದಲ್ಲಿ ನಾನೇ ತಪ್ಪುಭಾವನೆಯನ್ನಿಟ್ಟುಕೊಂಡಿದ್ದೇನೋ ಗೊತ್ತಿಲ್ಲ; ಇದನ್ನು ಮಂತ್ರಿಗಳು ಹೇಳಬೇಕು. ಎಲ್ಲಾ ಪದ್ಧತಿಗಳಲ್ಲಿಯೂ ಅತ್ಯುತ್ತಮವಾದುದೇನಿದೆಯೋ ಅದನ್ನು ತೆಗೆದುಕೊಂಡು ಅಭ್ಯಾಸಮಾಡಿ ಏಕೆ ಉಪಯೋಗಮಾಡಿಕೊಳ್ಳಬಾರದು, ಏಕೆ ಜನರ ರೋಗಗಳನ್ನು ಗುಣಪಡಿಸಬಾರದು ಎನ್ನಿಸುತ್ತದೆ. ಆಯುರ್ವೇದಕ್ಕೆ ತಕ್ಕ ಪ್ರೋತ್ಸಾಹವಿಲ್ಲ, ಇದು ನಮ್ಮ ದೇಶದ ವೈದ್ಯ, ಇದನ್ನು ಏನಾದರೂ ಅಭಿವೃದ್ಧಿ ಮಾಡಬೇಕೆಂದು ಕೆಲವರು ಸ್ನೇಹಿತರು ಹೇಳಿದರು. ನಿಜವಾಗಿ ಆಯುರ್ವೇದದಲ್ಲಿ ಏನು ಒಳ್ಳೆಯ ಪ್ರಯೋಗವಿದೆಯೋ ಅದನ್ನು ಆದಷ್ಟು ಬೇಗ ನಾವು ಹೊಂದಿಸಿಕೊಳ್ಳಬೇಕಾಗುತ್ತದೆ, ಆಯುರ್ವೇದದ ಜೊತೆಗೆ ಬೇರೆ ವೈದ್ಯವನ್ನು ಸೇರಿಸಬಾರದೆಂದು ಕಟುಕತರವಾದ ಭಿನ್ನಾಭಿಪ್ರಾಯವಿರುವುದು ಸೂಕ್ತವಲ್ಲ. ಆಯುರ್ವೇದಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ಇತ್ತೀಚೆಗೆ ನಮ್ಮ ಸರಕಾರದವರೂ Council of Indian Medicines ಅವರೂ ಮಾಡಿದ್ದಾರೆ. ಅಲ್ಲಿ ಅವರು ಆಯುರ್ವೇದ, ಯುನಾನಿ, ಹೋಮಿಯೋಪತಿ ಪದ್ಧತಿಗಳಿಗೆ ಗಮನಕೊಟ್ಟು ಯೋಚನೆ ಮಾಡುತ್ತಿದ್ದಾರೆ. ಆದರೆ ಇದು ಸಾಲದು. ಆಯುರ್ವೇದ, ಯುನಾನಿ ಇತ್ಯಾದಿ ಪದ್ಧತಿಗಳಲ್ಲಿ ಸಂಶೋಧನೆ ಏನು ನಡೆಯಬೇಕೋ, ಈ ಕಾಲಕ್ಕೆ ತಕ್ಕ ಹಾಗೆ ಔಷಧಗಳನ್ನು ತಯಾರುಮಾಡುವುದು, ಪ್ರಯೋಗ ಮಾಡುವುದು ಮುಂತಾದುವು ಸೂಕ್ತ ರೀತಿಯಲ್ಲಿ ನಡೆಯುತ್ತಿಲ್ಲ. ಇನ್ನೂ ಅಭಿವೃದ್ಧಿಸ್ಥಿತಿಗೆ ಬರಬೇಕು. ನಮ್ಮ ದುರದೃಷ್ಟದಿಂದ ಅಲೋಪತಿ ಮೇಲುಗೈ ಆಗಿದೆ. ಆಯುರ್ವೇದ, ಯುನಾನಿ ಪದ್ಧತಿಗಳಿದ್ದರೂ ಅಲೋಪತಿಕ್ ಡಾಕ್ಟರುಗಳು ಬಾಕಿ ಪದ್ಧತಿಗಳ ಮೇಲೆ prejudice ಇಟ್ಟುಕೊಂಡಿದ್ದಾರೋ ಎಂಬ ಸಂಶಯ ಅನೇಕ ಸಲ ಬರುತ್ತದೆ. ಹಾಗಿದ್ದರೆ, ಇದು ಸರಿಯಿಲ್ಲ. ಅಲೋಪತಿಯಿಂದ ನಮ್ಮ ದೇಶದ ಹಣ ಹೊರದೇಶಗಳಿಗೆ ಹೋಗುತ್ತದೆ. ಇದನ್ನು ತಡೆಯಲು ನಮ್ಮ ಪದ್ಧತಿಗಳನ್ನು ಅಭಿವೃದ್ಧಿ ಪಡಿಸಿಕೊಂಡು ನಮ್ಮ ದೇಶದ ಔಷಧಗಳಿಗೆ ಹೆಚ್ಚು ಮಾನ್ಯತೆ ಬರುವಹಾಗೆ ಮಾಡುವುದು ಯೋಗ್ಯವೆಂದು ನಾನಾದರೂ ಅಭಿಪ್ರಾಯ ಪಡುತ್ತೇನೆ. ಆದುದರಿಂದ ನಮ್ಮಲ್ಲಿ

(ಶ್ರೀ ಟಿ. ಮಾದಯ್ಯಗೌಡ)

ಸಂಶೋಧನೆಗೆ ಹೆಚ್ಚು ಅವಕಾಶವಿರಬೇಕು. ನಮ್ಮಲ್ಲಿರುವ ಒಳ್ಳೆಯ ಮೂಲಿಕೆಗಳು ಪರದೇಶಗಳಲ್ಲಿಲ್ಲ. ಅವರು ನಮ್ಮಿಂದ ಅನೇಕ ಒಳ್ಳೆಯ ಮೂಲಿಕೆಗಳನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ ಅವುಗಳಿಂದ ಔಷಧಗಳನ್ನು ತಯಾರುಮಾಡಿ ಹೆಚ್ಚಿನ ಬೆಲೆಗೆ ನಮ್ಮ ಮೇಲೆ ತಂದು ಹೊರಿಸುತ್ತಿದ್ದಾರೆ. ಉದಾಹರಣೆಗೆ, ಸರ್ಪಗಂಧಿ ನಮ್ಮ ದೇಶದ ಮೂಲಿಕೆ. ಇದನ್ನು ಇಲ್ಲಿಂದ ತೆಗೆದುಕೊಂಡು ಹೋಗಿ ಅಲ್ಲಿ ಔಷಧಮಾಡಿ ಹೃದಯದ ರೋಗಕ್ಕೆ ಉಪಯೋಗಿಸುತ್ತಿದ್ದಾರೆ. ಹೀಗೆ ಅನೇಕ ಮೂಲಿಕೆಗಳು ನಮ್ಮಲ್ಲಿರುವುದು ಪರದೇಶಗಳಲ್ಲಿಲ್ಲ. ನಮ್ಮ ಔಷಧಗಳನ್ನು ಉಪಯೋಗ ಮಾಡಬೇಕಾದರೆ ಮೂಲಿಕೆಗಳನ್ನು ಬೆಳೆಸುವುದಕ್ಕೆ ಹೆಚ್ಚಿನ ಗಮನ ಕೊಡಬೇಕು. ಸಂಶೋಧನ ಮಾಡುವುದಕ್ಕೂ ಪ್ರಯೋಗ ಮಾಡುವುದಕ್ಕೂ ಹೆಚ್ಚು ಶ್ರದ್ಧವಹಿಸಬೇಕೆಂದು ಹೇಳುತ್ತೇನೆ.

ನಮ್ಮ ದೇಶದಲ್ಲಿ ವೈದ್ಯ ಸಹಾಯ ಗ್ರಾಮಾಂತರಗಳಲ್ಲಿ ಇನ್ನೂ ಸ್ವಲ್ಪ ಹೆಚ್ಚು ನಡೆಯಬೇಕು. ಇದು ಅತ್ಯಂತ ತುರ್ತಿನ ಕೆಲಸವೆಂದು ಹೇಳುತ್ತೇನೆ. ಗ್ರಾಮವಾಸಿಗಳು ಪ್ರಕೃತಿ ಜನ್ಯವಾದ ವಾತಾವರಣದಲ್ಲಿ ಬೆಳೆಯುತ್ತಿದ್ದರೂ ಅನೇಕ ರೋಗಗಳಿಗೆ ತುತ್ತಾಗುತ್ತಾರೆ. ಅವರಿಗೆ ಈ ಚಿಕಿತ್ಸೆಗೆ ಸರಿಯಾದ ವ್ಯವಸ್ಥೆಯಿಲ್ಲ. ಯಾವುದಾದರೂ ಪ್ರದೇಶದ ಜನರಿಂದ ಧನ ಸಹಾಯ ಬರಲಿಲ್ಲವೆಂದು ಆ ಪ್ರದೇಶವನ್ನು ಉಪೇಕ್ಷೆಮಾಡುವ ಸಂಭವವಿದೆ. ಉದಾಹಣೆಗೆ, ನನ್ನ ಕ್ಷೇತ್ರದಲ್ಲಿ ಕೂಟಗಲ್ಲು ಹೋಬಳಿಯಿದೆ. ಅದು ದೊಡ್ಡ ಹೋಬಳಿ. ಅಲ್ಲಿ ಆಸ್ಪತ್ರೆಯಿಲ್ಲ. ಹಿಂದೆ ಒಬ್ಬ ಸೂಲಗಿತ್ತಿ ಮಾತ್ರ ಇದ್ದುದ್ದು ಈಗ ಅವರೂ ಕೂಡ ಇಲ್ಲ. ಇದು ಶೋಚನೀಯವಾದ ಸ್ಥಿತಿ. ಇದ್ದವರನ್ನು ಯಾವುದೋ ಹಳ್ಳಿಗೆ ವರ್ಗಮಾಡಿದಮೇಲೆ ಪುನಃ ಅಲ್ಲಿಗೆ ಬೇರೆಯಾರೂ ಬರಲಿಲ್ಲ. ಇಂಥಾದ್ದನ್ನು ನೋಡಿ ಸರಿಯಾದ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸಲಪೇಕ್ಷಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸರ್ಕಾರದವರು Birth control ಮಾಡಬೇಕೆಂದು ಹೇಳುತ್ತಿದ್ದರೆ ನೀವು ಸೂಲಗಿತ್ತಿ ಇಲ್ಲವೆಂದು ಹೇಳುತ್ತೀರಲ್ಲ!

ಶ್ರೀ ಟಿ. ಮಾದಯ್ಯಗೌಡ.—ಅದಕ್ಕೆ ಆಮೇಲೆ ಉತ್ತರ ಹೇಳುತ್ತೇನೆ

ಹೋಮಿಯೋಪತಿ ವೈದ್ಯ ಪದ್ಧತಿಯನ್ನು ಬಹಳ ಸುಲಭವಾಗಿ ಕಲಿಯಬಹುದೆಂದು ಬಹಳ ಜನ ತಜ್ಞರು ಅಭಿಪ್ರಾಯ ಪಡುತ್ತಾರೆ. ಈ ಪದ್ಧತಿಯನ್ನು ನಮ್ಮ ನೆರೆ ಪ್ರಾಂತಗಳಾದ ಆಂಧ್ರ ಮತ್ತು ಮದರಾಸು ಪ್ರಾಂತಗಳಲ್ಲಿ ಬಹಳ ಉಪಯೋಗಿಸಿ, ಅಲ್ಲಿ ಹೋಮಿಯೊಪತಿ ವೈದ್ಯರನ್ನು ಸರ್ಕಾರದವರು ನೇಮಕಮಾಡಿಕೊಂಡಿದ್ದಾರೆ. ಹಾಗೆಯೇ ಇಲ್ಲಿಯೂ ಮಾಡಲು ಹೋಮಿಯೋಪತಿಕ್ ಕಾಲೇಜನ್ನು ಸ್ಥಾಪನೆಮಾಡಿ ಉತ್ತೇಜನ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಹೋಮಿಯೊಪತಿ, ಆಯುರ್ವೇದ ಮತ್ತು ಯುನಾನಿ ವೈದ್ಯ ಪದ್ಧತಿಗಳ ರಿಜಿಸ್ಟ್ರೇಷನ್ ಸಂಬಂಧವಾದ ಮಸೂದಾ ಕಾನೂನನ್ನು ಸುಮಾರು ಎರಡು ವರ್ಷದ ಹಿಂದೆಯೇ ಪಾಸ್ ಮಾಡಿದ್ದೆವು, ಅದನ್ನು ಜಾರಿಗೆ ಕೊಡಲಿಲ್ಲವೆಂದು ಮಿತ್ರರು ಹೇಳುತ್ತಿದ್ದಾರೆ ಅದನ್ನು ಜಾರಿಗೆ ಕೊಡುವುದರಿಂದ ಈಗ ನಮ್ಮ ದೇಶದಲ್ಲಿರುವ ಪಂಡಿತರು ಮತ್ತು ಡಾಕ್ಟರುಗಳನ್ನು ರಿಜಿಸ್ಟರ್ ಮಾಡಿಕೊಂಡು ಅವರು ಯಾರು, ಎಲ್ಲೆಲ್ಲಿದ್ದಾರೆಂದು ಗೊತ್ತುಮಾಡಿಕೊಳ್ಳುವುದಕ್ಕನುಕೂಲವಾಗುತ್ತದೆ. ರಿಜಿಸ್ಟರಾದ ಡಾಕ್ಟರುಗಳಿರುವುದರಿಂದ ಜನರಿಗೂ ಅನುಕೂಲವಾಗುತ್ತದೆ. ಆದುದರಿಂದ, ಆ ಕಾನೂನನ್ನು ಆದಷ್ಟು ಜಾಗ್ರತೆ ಜಾರಿಗೆ ಕೊಡುವುದುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕೆಂದು ಸೂಚಿಸುತ್ತೇನೆ.

Family Planning ವಿಚಾರವನ್ನು ಮಿತ್ರರು ಹೇಳಿದರು. ನನಗೆ ಮೊದಲು ಈ ವಿಷಯಯದಲ್ಲಿ ಒಂದು ರೀತಿಯ ಅಭಿಪ್ರಾಯವಿತ್ತು. ಮೇಧಾವಿಗಳೂ, ತಿಳಿವಳಿಕಸ್ಥರೂ ಈ ಮಿತ ಸಂತಾನ ಮಾಡುವುದು ಬೇಡ, ದೇವರು ಹೇಗಿದ್ದರೂ ನಮಗೆ ಕೈಕಾಲುಗಳನ್ನು ಕೊಟ್ಟಿದ್ದಾನೆ, ಹುಟ್ಟಿಸಿದ ದೇವರು ಹುಲ್ಲುಮೇಯಿಸುತ್ತಾನೆಯೋ ಎಂದು ಹೇಳುತ್ತಿದ್ದರೂ, ನನಗೂ ಆರೀತಿ ಅನಿಸಿತ್ತು. ಆದರೆ ಈಗಿನ ಪರಿಸ್ಥಿತಿಯನ್ನು ನೋಡಿದರೆ, ಸಂತತಿ ನಿರೋಧ ಮಾಡಬೇಕಾಗುತ್ತದೆ. ಇತರ ದೇಶಗಳಿಗಿಂತ ನಮ್ಮ ದೇಶದಲ್ಲಿ ಇದು ಹೆಚ್ಚು ಅಗತ್ಯವಾಗಿದೆ. ಪ್ರಜಾಸಂಖ್ಯೆ ಬೆಳೆದಂತೆ ಹೆಚ್ಚು ಆಹಾರ ಬೇಕಾಗುತ್ತದೆ. ಮಕ್ಕಳಿಗೆ ಬೇಕಾದ ವಿದ್ಯೆ, ವಿವೇಕ ತಕ್ಕಷ್ಟಿಲ್ಲವಾಗುತ್ತದೆ..

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಈ ದೇಶದಲ್ಲಿ ಪುತ್ರಕಾಮೇಷ್ಟಿ ಯಾಗಮಾಡಿ ಮಕ್ಕಳನ್ನು ಪಡೆಯುತ್ತಿದ್ದರು ; ನೀವು ಹೀಗೆ ಹೇಳಬಹುದೆ ?

ಶ್ರೀ ಟಿ. ಮಾದಯ್ಯಗೌಡ.—ಪುತ್ರಕಾಮೇಷ್ಟಿ ಯಾಗಮಾಡುತ್ತಿದ್ದ ಕಾಲದಲ್ಲಿ ಹೋಟೆಲುಗಳು, ಸಿನೆಮಾಗಳು, ಡಾಲ್ಡಾ ಮುಂತಾದವು ಇರಲಿಲ್ಲ. ಇವುಗಳಿರುವುದರಿಂದ ಈಗ ಮಕ್ಕಳು ಜಾಸ್ತಿಗುತ್ತಿವೆ. ಈಗಿನ ನವನಾಗರಿಕತೆಯ ಕಾಲದಲ್ಲಿ ಜಾಗ್ರತೆ ಹೆಚ್ಚು ಹೆಚ್ಚು ಮಕ್ಕಳಾಗಲು ಅವ

ಕಾಶವಿದೆ. ಪುತ್ರಕಾಮೇಷ್ಟಿಯ ಕಾಲ ಬೇರೆ, ಈಗ ಬೇರೆಕಾಲ. ಈಗ ಬೆಳೆಯುತ್ತಿರುವ ಪ್ರಜಾ ಸಂಖ್ಯೆಯಿಂದ ಆಗುವ ಅನಿಷ್ಟವನ್ನು ಹೋಗಲಾಡಿಸಲು ಏನಾದರೂ ಮಾಡಬೇಕು.

ಶ್ರೀ ಸಂಜೀವನಾಥ ಐಕಳ.—ಸಂತತಿ ಸಂಯಮ ಮಾಡಬೇಕು, ವಿರೋಧವಲ್ಲ.

Mr. CHAIRMAN.—The Hon'ble members time is over.

†**ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).**—ಸ್ವಾಮಿ, ವೈದ್ಯಕೀಯ ಮತ್ತು ಜನಾರೋಗ್ಯ ರಕ್ಷಣೆ ಸಂಬಂಧದಲ್ಲಿ ಮಾನ್ಯ ಆರೋಗ್ಯ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕಂಥ ಈ ಎರಡು ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಹೇಳಬೇಕೆಂದು ಆಶೆಪಡುತ್ತೇನೆ.

2.30 P.M.

ಸುಮಾರು 6½—7 ಕೋಟಿ ರೂಪಾಯಿಗಳನ್ನು ನಾವು ಈ ಎರಡು ಬಾಬುಗಳಿಗಾಗಿ ಖರ್ಚು ಮಾಡುತ್ತಿದ್ದೇವೆ. ಆದಾಗ್ಯೂ ನಮ್ಮ ಆವಶ್ಯಕತೆಗಳನ್ನು ಪೂರೈಸಲು ಸಾಧ್ಯವಾಗಿಲ್ಲ. ಮುಖ್ಯವಾಗಿ ಹಳ್ಳಿಗಳಲ್ಲಿ ವೈದ್ಯಕೀಯ ಉಪಚಾರ ಬಹಳ ಕಡಮೆಯಾಗಿ ದೊರೆಯುತ್ತಿದೆ, ಅನೇಕ ವೇಳೆ ಅದೂ ಕೂಡ ದೊರೆಯುವುದಿಲ್ಲ. ನಮ್ಮ ಮಂಗಳೂರು ಜಿಲ್ಲೆಯಿಂದ ಬಂದಿರುವ ಮಾನ್ಯ ಸದಸ್ಯರು ಅಧ್ಯಕ್ಷತೆ ವಹಿಸಿದ್ದಾರೆ. ಅವರು ತಮ್ಮ ವೃತ್ತಿಯಲ್ಲಿ ಬಹಳ ಹೆಸರು ಗಳಿಸಿರುವ ಹಾಗೆ ಡಾ॥ ನಾಗಪ್ಪ ಆಳ್ವರವರೂ ಸಹ ಮಂಗಳೂರಿನಲ್ಲಿ ಬಹಳ ದೊಡ್ಡ ವೈದ್ಯರು. ಈಗಿನ ಆರೋಗ್ಯ ಮಂತ್ರಿಗಳಾದ ನಾಗಪ್ಪ ಆಳ್ವರವರು ಅಧಿಕಾರಕ್ಕೆ ಬಂದ ತಕ್ಷಣ ಅವರ ಹಿಂದಿನ ಆರೋಗ್ಯ ಸಚಿವರು ತೆರೆದಿದ್ದ ಎರಡು ಮೆಡಿಕಲ್ ಸ್ಕೂಲುಗಳನ್ನೂ ಮುಚ್ಚಿದರು. ಕಾರಣ ಮೆಡಿಕಲ್ ಸ್ಕೂಲು ಇರಬಾರದೆಂದು ಮೆಡಿಕಲ್ ಕೌನ್ಸಿಲ್ ಅಭಿಪ್ರಾಯಪಟ್ಟಿತು, ಮತ್ತು ಮೆಡಿಕಲ್ ಸ್ಕೂಲನಿಂದ ಹೊರಬಂದವರ ಜ್ಞಾನಪೂರ್ಣವಾಗಿರುವುದಿಲ್ಲ ಅಥವಾ ಅವರು ಪೂರ್ಣ ಡಾಕ್ಟರಾಗಿರುವುದಿಲ್ಲ, ಅದಕ್ಕೆ M.B.B.S. ಆಗಬೇಕು, ಸರ್ಜರಿಯಲ್ಲಿ ಒಳ್ಳೆಯ ಅನುಭವವಿರಬೇಕು ಎಂಬ ಕಾರಣದಿಂದ ಮೆಡಿಕಲ್ ಸ್ಕೂಲನ್ನು ಕೈಬಿಡಬೇಕೆಂದು ಆ ಕೌನ್ಸಿಲ್ ಸೂಚಿಸಿತು. ಆದರೆ ಮಾನ್ಯ ಮಂತ್ರಿಗಳ ಗಮನವನ್ನು ಒಂದು ವಿಷಯದ ಕಡೆ ಸೆಳೆಯುತ್ತೇನೆ. ಈಗ ಬಹಳ ಜನ L.M.P. ಆದ ಡಾಕ್ಟರುಗಳಿದ್ದಾರೆ, ಅವರಲ್ಲಿ ಕೆಲವರು ಹೊರಗಡೆ ಪ್ರಾಕ್ಟೀಸ್ ಮಾಡುತ್ತಿದ್ದಾರೆ. ಅವರಲ್ಲಿ ಕೆಲವರಿಗೆ M.B.B.S.ಗೆ ಹೋಗಲು ಅವಕಾಶ ಕೊಡುತ್ತಿದ್ದಾರೆ. ಸರ್ಕಾರದವರು ಒಂದು ವಯಸ್ಸಿನ ಮಿತಿಹಾಕಿ ಈಗಿರುವ ಎಲ್ಲಾ L.M.P. ಡಾಕ್ಟರುಗಳು M.B.B.S.ಗೆ ಹೋಗಲು ಅವಕಾಶಕೊಟ್ಟು ಅವರಿಗೆ ಒಂದೇ ರೀತಿಯ ಸ್ಕೇಲ್, ಸಂಬಳ ಇವುಗಳ ವ್ಯವಸ್ಥೆ ಮಾಡುವುದು ಒಳ್ಳೆಯದೆಂದು ಕಾಣುತ್ತದೆ. ಇದೇ ಸಂದರ್ಭದಲ್ಲಿ ಇನ್ನೂ ಒಂದು ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದು ಏನೆಂದರೆ ಹಳೆಯ ಮೈಸೂರಿನಲ್ಲಿ ಹೆಚ್ಚು ಪ್ರಮಾಣದಲ್ಲಿ ಹೆಲ್ತ್ ಯೂನಿಟ್, ಲೋಕಲ್ ಫಂಡ್ ಡಿಸ್ಪೆನ್ಸರಿ ಮುಂತಾದುವನ್ನು ತೆರೆಯಲಾಗಿದೆ. ಆದರೆ ಇವತ್ತು M.B.B.S. ಆಗಿರುವ ಒಬ್ಬ ಡಾಕ್ಟರು ತೀರ್ಥಹಳ್ಳಿ ತಾಲ್ಲೂಕು ಅರಳುಮಲ್ಲಿಗೆ ಗ್ರಾಮಕ್ಕೆ ಹೋಗಬೇಕೆಂದರೆ ಅಲ್ಲಿ ಸಂಸಾರ ಹೂಡತಕ್ಕವರಿಗೆ ವಿದ್ಯಾಭ್ಯಾಸಕ್ಕೆ ಮಕ್ಕಳನ್ನು ಕಳುಹಿಸಲು ಅಲ್ಲಿ ಹೈಸ್ಕೂಲನ ಸೌಕರ್ಯವಿಲ್ಲ. ಏಕೆಂದರೆ ಹೈಸ್ಕೂಲಿಗೆ ಆರು ಮೈಲಿ ದೂರ ಹೋಗಬೇಕು, ಕಾಲೇಜಿಗೆ ಶಿವಮೊಗ್ಗಕ್ಕೆ ಹೋಗಬೇಕು, ಹೆಚ್ಚಿನ ವಿದ್ಯಾಭ್ಯಾಸಕ್ಕೆ ಬೆಂಗಳೂರಿಗೆ ಮಕ್ಕಳನ್ನು ಕಳುಹಿಸಬೇಕು. ಅದಕ್ಕಾಗಿ ಆತ ಮಕ್ಕಳಿಗಾಗಿ ಒಂದು ಮನೆ, ತನಗಾಗಿ ಒಂದು ಮನೆ ಹೀಗೆ ಬೇರೆ ಬೇರೆ ಏರ್ಪಾಡು ಮಾಡಲು ಸಾಧ್ಯವಾಗುವುದಿಲ್ಲ. ತಾಲ್ಲೂಕ್ ಹೆಡ್‌ಕ್ವಾರ್ಟರುಗಳಿಗೆ ಹೋಗುವುದಕ್ಕೂ ಕೂಡ M.B.B.S. ಆಗಿರುವವರು ಹಿಂದು ಮುಂದೆ ನೋಡುತ್ತಾರೆ. ಅಂಥ ಸಂದರ್ಭದಲ್ಲಿ ಸಣ್ಣ ಸಣ್ಣ ಆಸ್ಪತ್ರೆಗಳಲ್ಲಿ ಯಾವ ಡಾಕ್ಟರುಗಳಿಗೆ ವಹಿಸಬೇಕೆಂದು ಸರ್ಕಾರ ಇಷ್ಟಪಡುವುದು ಅಥವಾ ಏರ್ಪಾಡು ಮಾಡುವುದಿದೆ ಎಂಬುದು ಸ್ಪಷ್ಟವಾಗಬೇಕು. ನಮ್ಮಲ್ಲಿ ಕೆಲವು ಆಸ್ಪತ್ರೆಗಳಲ್ಲಿ ಎರಡು ವರ್ಷಗಳಾದರೂ ಡಾಕ್ಟರೇ ಇಲ್ಲದೆ ಹಾಗೆಯೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ಸರ್ಕಾರ ಯಾವ ರೀತಿಯ ಯೋಜನೆ ಮಾಡಿವೆ ಎನ್ನುವುದನ್ನು ನಮ್ಮ ಮಾನ್ಯ ಮಂತ್ರಿಗಳು ಸ್ವಲ್ಪ ತಿಳಿಸಬೇಕು. ಈ ವಿಷಯದಲ್ಲಿ ಒಂದು ಸಲಹೆ ಮಾಡುವುದೇನೆಂದರೆ ತಾಲ್ಲೂಕು ಕೇಂದ್ರಗಳಲ್ಲಿ ಒಂದು ಸಂಪೂರ್ಣ ಸುಸಜ್ಜಿತವಾದ ಆಸ್ಪತ್ರೆಯಿರಬೇಕು, ಅದಕ್ಕೆ ಒಂದು ಮೊಬೈಲ್ ವ್ಯಾನ್ ಇರಬೇಕು. ಅಲ್ಲಿನವರು ಆ ತಾಲ್ಲೂಕಿನಲ್ಲಿರುವ ಎಲ್ಲಾ ಹೆಲ್ತ್ ಯೂನಿಟ್ಟುಗಳು ಮತ್ತು ಆಸ್ಪತ್ರೆಗಳಿಗೆ ಹೋಗಿ ವಾರಕ್ಕೆ ಎರಡು ದಿವಸಗಳಾದರೂ ಸಹಾಯ ಮಾಡಬೇಕು. ಸೀರಿಯಸ್ ಆಗಿರುವ ಕೇಸುಗಳಿದ್ದರೆ ತಕ್ಷಣ ನೋಡಿ ಚಿಕಿತ್ಸೆ ನಡೆಸಬೇಕು. ಇಂಥ ಕ್ರಮ ಅನುಸರಿಸುವುದರಿಂದ ಮಾತ್ರ ಹಳ್ಳಿಗಳಿಗೆ ನೀವು ಯೋಗ್ಯ ಸೌಲಭ್ಯ ಒದಗಿಸಲು ಸಾಧ್ಯವೇ ಹೊರತು ಎಲ್ಲಾ ಗ್ರಾಮಗಳಲ್ಲೂ ಆಸ್ಪತ್ರೆ ತೆರೆದು

(ಶ್ರೀ ಎಸ್. ಗೋಪಾಲಗೌಡ)

ಅಲ್ಲಿಗೆ ಒಳ್ಳೆಯ ಡಾಕ್ಟರು, ಔಷಧಿ, ನರ್ಸು ಇತ್ಯಾದಿ ಸೌಲಭ್ಯಗಳನ್ನೆಲ್ಲಾ ಒದಗಿಸುವದಕ್ಕೆ ಹಣ ಕಾಸಿನ ದೃಷ್ಟಿಯಿಂದ ಕಷ್ಟವಾಗಬಹುದು. ಮತ್ತು ತರಬೇಕಾದ ಡಾಕ್ಟರು, ನರ್ಸುಗಳಿಲ್ಲದಿರುವುದರಿಂದ ಇಂದು ನಾನು ಹೇಳಿದ ಏರ್ಪಾಡನ್ನು ಜಾರಿಗೆ ತರುವುದನ್ನು ಸರ್ಕಾರ ಬಹಳ ತೀವ್ರವಾಗಿ ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಆಸ್ಪತ್ರೆಗಳ ವಿಷಯದಲ್ಲಿ ಈಗ ಹೇಗೆ ನಡೆಯುತ್ತಿದೆಯೆಂದು ಆಗಲೆ ಹೇಳಿದ್ದೇನೆ. ಆಸ್ಪತ್ರೆಯಿದ್ದರೆ ಡಾಕ್ಟರಿಲ್ಲ, ಡಾಕ್ಟರಿದ್ದರೆ ಔಷಧಿಯಿಲ್ಲ, ನರ್ಸ್ ಇಲ್ಲ, ಇತ್ಯಾದಿ ಸೌಲಭ್ಯಗಳಿಲ್ಲದೆ ತೊಂದರೆಯಾಗುತ್ತಿದೆಯೆಂಬುದು ಸಾಮಾನ್ಯವಾದ ಟೀಕೆಯಾಗಿದೆ. ಇದರಲ್ಲಿ ಬಹಳ ನಿಜ ಕೂಡ ಇದೆ. ಆಸ್ಪತ್ರೆಗಳಿಗೆ ಒದಗಿಸುತ್ತಿರುವ ಆಹಾರ, ಹಾಲು, ಮೊಟ್ಟೆ, ಹಣ್ಣು ಮುಂತಾದವುಗಳ ಕಡೆ ಸರ್ಕಾರ ಹೆಚ್ಚು ನಿಗ ವಹಿಸಬೇಕು. ಇದಕ್ಕೆ ಕೊಡುವ ಹಣ ಅನೇಕ ಸಲ ಪೂರ್ಣವಾಗಿ ಖರ್ಚಾಗುವುದಿಲ್ಲ, ಇದರಲ್ಲಿ ಬಹಳ ನಷ್ಟವಾಗುತ್ತಿದೆ ಮತ್ತು ಎಲ್ಲಾ ರೀತಿಯಲ್ಲೂ ಅದು ದುರುಪಯೋಗವಾಗುತ್ತಿದೆ ಎಂದು ಹೇಳಿದ್ದೇವೆ. ಔಷಧಿ ಕೊಡುವುದು ಕೂಡ ಹಳೇಕಾಲದ ರೀತಿಯಲ್ಲೇ ನಡೆದುಕೊಂಡು ಹೋಗುತ್ತಿದೆ. ಅನೇಕ ಆಸ್ಪತ್ರೆಗಳಲ್ಲಿ ಔಷಧಿಯೇ ಇರುವುದಿಲ್ಲ. ತೀರ್ಥಹಳ್ಳಿಯ ಕಡೆ ಯಾರಾದರೂ ಕಾಯಿಲೆ ಬಿದ್ದರೆ ಔಷಧಿ ತೆಗೆದುಕೊಂಡು ಹೋಗಿ ಕೊಟ್ಟರೆ 'ಆಸ್ಪತ್ರೆಯಿಂದ ತಂದೆಯಾ' ಎಂದು ರೋಗಿ ಕೇಳುವುದುಂಟು. 'ಹೌದು' ಎಂದರೆ ಅದರಿಂದ ಕಾಯಿಲೆ ಬೇಗ ಗುಣವಾಗುವುದಿಲ್ಲ ಎಂದು ಹೇಳುತ್ತಾರೆ. ಅದಕ್ಕೆ 'ಆಸ್ಪತ್ರೆ ನೀರು' ಎಂದು ಸಾಮಾನ್ಯವಾಗಿ ಹೇಳುವುದುಂಟು. ಪ್ರೈವೇಟ್ ಪ್ರಾಕ್ಟೀಷನರುಗಳಿಂದ ಔಷಧಿ ತಂದು ಕುಡಿದರೆ ಎರಡೇ ದಿವಸಗಳಲ್ಲಿ ಗುಣವಾಗುವುದೆಂಬ ಅಭಿಪ್ರಾಯವಿದೆ. ಮಂಗಳೂರಿನಲ್ಲೂ ಹೀಗೆಯೇ ಇರಬಹುದು. ಮಂತ್ರಿಗಳಿಗೆ ಇದು ಗೊತ್ತಿರಬಹುದು. ಮಂಗಳೂರಿನವರು ಡಾಕ್ಟರ್ ನಾಗಪ್ಪ ಆಳ್ವರವರನ್ನೇ ಹುಡುಕಿಕೊಂಡು ಹೋಗುತ್ತಿದ್ದರೆಂದು ಹೇಳುತ್ತಾರೆ. ಕಾರಣ ಗೊತ್ತಿದೆ. ಒಂದು ತಾಲ್ಲೂಕಿನಲ್ಲಿ, ಜಿಲ್ಲೆಯಲ್ಲಿ ಹತ್ತಾರು ಜನ ಪ್ರಗತಿಪರರಾದ ಡಾಕ್ಟರುಗಳಿರಬಹುದು. ಜನರು ಅವರಲ್ಲೇ ಹೋಗುವುದುಂಟು. ಅವರಿಗೆ ಹೆಚ್ಚು ಹಣ ದೊರೆಯುತ್ತದೆ. ಶಿವಮೊಗ್ಗ ಅಥವಾ ಬೆಂಗಳೂರಿನಲ್ಲಿ ಬೌರಿಂಗ್ ಆಸ್ಪತ್ರೆ, ವಿಕ್ಟೋರಿಯಾ ಆಸ್ಪತ್ರೆ ಮುಂತಾದ ದೊಡ್ಡ ದೊಡ್ಡ ಆಸ್ಪತ್ರೆಗಳಿವೆ. ಅಲ್ಲಿ ಲಕ್ಷಗಟ್ಟಲೆ ಖರ್ಚುಮಾಡಿ ಬಹಳ ಅತ್ಯುತ್ತಮವಾದ ಆಧುನಿಕ ಉಪಕರಣಗಳನ್ನಿಟ್ಟು ಸತ್ತವನನ್ನು ಕೂಡ ಬದುಕಿಸಬಹುದು ಅನ್ನಿಸುವ ಹಾಗೆ ವ್ಯವಸ್ಥೆ ಮಾಡಿದ್ದರೂ ಜನಗೇಕೆ ಆ ಆಸ್ಪತ್ರೆಗಳಿಗೆ ಹೋಗಲು ಹಿಂದುಮುಂದೆ ನೋಡುತ್ತಾರೆ ಎಂಬುದನ್ನು ಮಂತ್ರಿಗಳು ಸ್ವಲ್ಪ ವಿಚಾರ ಮಾಡಿ ನೋಡಬೇಕು. ಮತ್ತು ಈ ಅಭಿಪ್ರಾಯವನ್ನು ಹೋಗಲಾಡಿಸುವುದು ಈ ಎರಡು ಇಲಾಖೆಗಳ ಪ್ರಥಮ ಕರ್ತವ್ಯವಾಗಬೇಕು. ಇಲ್ಲದಿದ್ದರೆ ಅವು ಸೇವೆ ಮಾಡಿದಂತಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ.

ನಾನು ಜನರ ಸೇವೆ ಮಾಡಿ ಅವರನ್ನು ಬದುಕಿಸಬೇಕು ಎಂಬ ಆದರ್ಶ ಎಂ.ಬಿ.ಬಿ.ಎಸ್. ಓದಿದವರಿಗೂ, ಇಂಜನಿಯರಿಂಗ್ ಪಾಸ್ ಮಾಡಿದವರಿಗೆ ಈ ಹಣದಿಂದ ಉತ್ತಮ ಸೇತುವೆ ಕಟ್ಟಬೇಕು ಜನರ ಸೇವೆಸಲ್ಲಿಸಬೇಕು ಎನ್ನುವುದು ಬಹಳ ಮುಖ್ಯ. ಇದರಿಂದ ಒಂದು ಅನ್ಯೋನ್ಯತೆ ಬರುತ್ತದೆ. ಡಾಕ್ಟರ್ ಅಡಿಸ್‌ಸ್ಕಡ್ಡರ್ ಅನ್ನತಕ್ಕವರು ವೆಲ್ಲೂರು ಆಸ್ಪತ್ರೆ ಸ್ಥಾಪನೆ ಮಾಢಿದ ಆ ಮಹಾತಾಯಿ. ಒಂದು ವೇಳೆ ಚಿಕ್ಕಂದಿನಲ್ಲಿ, ಅವರ ತಂದೆಯಿಂದ ಹೆರಿಗೆಗಾಗಿ ಬಂದವರು, ಗಂಡಸರ ಹತ್ತಿರ ಹೆರಿಗೆ ಮಾಡಿಸಿಕೊಳ್ಳುವುದಿಲ್ಲ ಎಂದು ಹೇಳಿ ಗರ್ಭಿಣಿಸ್ತ್ರೀಯರು ಅವರ ತಂದೆಗೆ ಅವಕಾಶ ಕೊಡದೇ ಸತ್ತುಹೋದರು. ಅದನ್ನು ನೋಡಿ ಅಡಿಸ್‌ಸ್ಕಡ್ಡರ್ ತನ್ನದೇಶಕ್ಕೆ ಹೋಗಿತಾನೇ ಎಂ. ಬಿ. ಬಿ. ಎಸ್. ವೈದ್ಯಕೀಯ ಪರೀಕ್ಷೆ ಪಾಸ್ ಮಾಡಿ ಈ ದೇಶಕ್ಕೆ ಪುನಃ ಬಂದು, ಹಣವನ್ನು ಒಟ್ಟುಗೂಡಿಸಿ ಕಟ್ಟಿರತಕ್ಕ ವೆಲ್ಲೂರು ಆಸ್ಪತ್ರೆಯನ್ನು ಇವತ್ತು ತಾವೆಲ್ಲರೂ ನೋಡಬಹುದು. ತಾನೇ ಸ್ವತಃ ಹೆಣ್ಣುಮಕ್ಕಳಿಗೆ ವೈದ್ಯಕೀಯ ಕೊಡಬಹುದು ಎಂಬ ಆಕೆಯ ಆ ಒಂದು ಆದರ್ಶ ಏನಿದೆ ಅದು ನಮ್ಮ ಡಾಕ್ಟರುಗಳ ಕಣ್ಣುಮುಂದೆ ಇರಬೇಕು. ಅದು ಬಹಳ ಸಲ ಇರುವುದಿಲ್ಲ. ಅವರ ಇನ್‌ಕ್ರಿಮೆಂಟ್ ವಿಷಯ, ವರ್ಗದ ವಿಷಯ. ತಮ್ಮ ಸ್ಥಾನಮಾನದ ವಿಷಯ, ಏನು ಮಾಡಬೇಕು ಎನ್ನುವ ವಿಷಯ, ಮನುಷ್ಯ ಸಹಜವಾದ ಒಂದು ತಾಪತ್ರಯ ಇರುತ್ತದೆ. ಅವರಿಗೂ ಹೆಂಡತಿ ಮಕ್ಕಳು-ಮರಿ ಸಂಸಾರ ಇರುತ್ತದೆ. ಕೆಲವು ಮಟ್ಟಿನ ದುಡ್ಡಿನ ಆಶೆಯೂ ಬಂದಿರುತ್ತದೆ. ಮೆಡಿಕಲ್ ಸ್ಟೋರ್ಸ್ ಯಾವುದು ಎಷ್ಟು ಕೊಟ್ಟಿರುತ್ತಾರೆಯೋ ಅಷ್ಟೇ, ಆಯಿತು ಎಂಬ ಅಭಿಪ್ರಾಯ ಕೆಲವರಿಗೆ ಬರುತ್ತದೆ. ಇದು ಮಾನವ ಸಹಜವಾದ ಒಂದು ದೌರ್ಬಲ್ಯ ಎಂದು ಹೇಳಬಹುದು. ದೇಶದಲ್ಲಿ ಇಂಥಾ ಜನರನ್ನು ಇಟ್ಟು ಹಣವನ್ನು ಯಾರ ಸ್ವಾರ್ಥಕ್ಕೋ ಉಪಯೋಗಿಸಬಾರದು. ಡಾಕ್ಟರುಗಳು ಮತ್ತು ಅದರಲ್ಲೂ ರಾಜಕಾರಣಿಗಳು ಯಾರಿದ್ದಾರೆ ಅವರ ಕೈ ಶುದ್ಧವಾಗಿರಬೇಕು. ಸೇವಾ

ಮನೋಭಾವ ಇಟ್ಟು, ತನುಮನ ಧನ ಉಪಯೋಗಿಸಿ ಕೆಲಸಮಾಡಬೇಕೆಂದು ಜನ ಹೇಗೆ ನಿರೀಕ್ಷೆ ಮಾಡುತ್ತಾರೆಯೋ ಹಾಗೆ ತಾವೂ ಕೂಡ ಎಂದರೆ ಈ ದೇಶದ ವೈದ್ಯರೂ ಕೂಡ ಜನರ ಸೇವೆಯೇ ತಮ್ಮ ಜೀವನದ ಉದ್ದೇಶ ಅಂತ ಹೇಳಿ ಜೀವನವನ್ನೇ ಧಾರೆ ಎರೆದು ಈ ಕ್ಷೇತ್ರಕ್ಕೆ ಬಂದು ಕಾಲಿಟ್ಟ ಮೇಲೆ ಅವರು ತಮ್ಮ ಆದರ್ಶ ಮರೆಯ ಕೂಡದು. ಯಾವನೇ ಬರಲಿ ಅವನ ಖಾಯಿಲೆ ಅನುಸರಿಸಿ ಚಿಕಿತ್ಸೆ ಆಗಬೇಕೇ ಹೊರತು ದೊಡ್ಡವನು, ಸಣ್ಣವನು, ಯಾವ ಜಾತಿಯವನು ಎಂಬ ಭೇಧ ಭಾವ ತಾರತಮ್ಯ ಇಲ್ಲದೆ ಕೆಲಸಮಾಡಿ ನಮ್ಮ ಇಲಾಖೆಗೆ ಕೀರ್ತಿಯನ್ನು ತರುತ್ತಾರೆ ಎಂದು ಆಶಿಸುತ್ತೇನೆ.

ಈ ಎರಡು ಇಲಾಖೆಗಳನ್ನು ಒಂದು ಮಾಡತಕ್ಕ ಮಾತು ಬಹಳ ದಿವಸದಿಂದ ಇದೆ. ಡಾಕ್ಟರ್ ಆಳ್ವರವರು ಬಂದಮೇಲೆ ಆಶ್ವಾಸನ ಕೊಟ್ಟಿದ್ದಾರೆ. ಇದು ಮಾಡಿಯೇ ಮಾಡುತ್ತೇನೆ ಎಂದು ಆದರೆ ಕೆಲವುಕಾಲ ತೊಡರು ಬಂದಿದೆ ಎಂದು ಕೇಳುತ್ತೇನೆ. ಜನಾರೋಗ್ಯ ರಕ್ಷಣೆ ಅಧೀನದಲ್ಲಿ ವೈದ್ಯಕೀಯ ಇಲಾಖೆ ಕೆಲಸಮಾಡುವುದು ಎಲ್ಲಾ ದೇಶದಲ್ಲೂ ಇದೆ. ಇಲ್ಲೂ ಆಗಬೇಕಾದ್ದು ಅವಶ್ಯಕ. ಕೆಲವಾರು ಹುದ್ದೆಗಳಲ್ಲಿ ಹೆಚ್ಚು ಕಡಿಮೆ ಆಗಬಹುದು. ಹೇಗೆ ಅವರ ಕೆಳಗೆ ಕೆಲಸ ಮಾಡುವುದು ಎಂದು ಕಸವಿಸಿಯಾಗಬಹುದು. ಆದರೆ ಒಂದೇ ರೀತಿಯ ವ್ಯವಸ್ಥೆ ಇರಬೇಕು. ಮುಖ್ಯವಾಗಿ ಇವತ್ತು ಹೇಳುವುದಾದರೆ ಹಿಂದೆ ನಾವು ಯಾವ ಖಾಯಿಲೆ ಹೆಸರು ಕೇಳಿಯೇ ನಡುಗುತ್ತಾ ಇದ್ದೆವೋ ಕಾಲರಾ, ಪ್ಲೇಗು, ಇವೆಲ್ಲ ಇನ್‌ಫ್ಲುಯೆಂಜಾ ಇಂಥಾ ಅನೇಕ ಖಾಯಿಲೆಗಳು ಸ್ವಲ್ಪಮಟ್ಟಿಗೆ ಮೈಲಿ ಇಂಥಾ ಖಾಯಿಲೆಗಳನ್ನು ತಡೆಗಟ್ಟಲು ಜನಾರೋಗ್ಯ ರಕ್ಷಣೆ ಇಲಾಖೆಯವರು ಮಾಡಿರತಕ್ಕ ಕೆಲಸ ಕಾರ್ಯಗಳಿಂದ ಬಹಳವಾಗಿ ಕಡಿಮೆಯಾಗಿದೆ. ಬಹಳ ರೀತಿಯಲ್ಲಿ ಅವುಗಳನ್ನು ನಿರ್ಮೂಲನ ಮಾಡುವುದಕ್ಕೆ ಸಾಧ್ಯವಾಗಿದೆ ಎಂದು ಹೇಳಬಹುದು. ಇನ್ನು ಕೆಲವು ಖಾಯಿಲೆಗಳು ಇವೆ. ಸೊರಬದಲ್ಲಿ ಮಂಗನ ಖಾಯಿಲೆ ಎಂದು ಬರುತ್ತದೆ ವೈರಸ್‌ಯಿಂದ ಇವತ್ತುಕೂಡ ಮೈಲಿ ವಿಷಯದಲ್ಲಿ ಡೀಮೆರೋ ಅವರು ವ್ಯಾಕ್ಸೀನ್‌ನಲ್ಲಿ ಏನೋ ತೊಂದರೆ ಇದ್ದಹಾಗೆ ಇದೆ ಎಂದು ಹೇಳಿದರು. ಬಿ.ಸಿ.ಜಿ. ವ್ಯಾಕ್ಸೀನ್ ಬಗ್ಗೆ ಕೂಡ ವಿವಾದ ಇದೆ. ಆದ್ದರಿಂದ ಜನಾರೋಗ್ಯ ರಕ್ಷಣೆಯ ಕೆಲಸ ಬಹಳ ಮುಖ್ಯವಾಗಿರುತ್ತದೆ. ಏಕೆಂದರೆ ಖಾಯಿಲೆ ಬರದಂತೆ ನೋಡಿಕೊಳ್ಳುವುದು ಬಹಳ ಮುಖ್ಯ. ಒಳ್ಳೆಯ ಆಹಾರ ಕೊಡಬೇಕು. ಖಾಯಿಲೆ ಬರದಂತೆ ತಡೆಗಟ್ಟಬೇಕು. ಒಂದು ವೇಳೆ ಅಕಸ್ಮಾತ್ತಾಗಿ ಖಾಯಿಲೆ ಬಂದರೆ ಚಿಕಿತ್ಸೆ ಕೊಡಬೇಕು. ಈ ಎರಡು ಇಲಾಖೆಗಳು ಬಹಳ ಮುಖ್ಯ ಹೆಲ್ತ್ ಇಲಾಖೆಯಿಂದ ಉಪಯೋಗವೇ ಇಲ್ಲ ಎಂಬ ಅಭಿಪ್ರಾಯ ಇದ್ದರೆ ಅದು ಸರಿಯಾದ ಅಭಿಪ್ರಾಯವಲ್ಲ. ಆದ್ದರಿಂದ ಈ ಎರಡು ಇಲಾಖೆಯನ್ನು ಒಟ್ಟಿಗೆ ಸೇರಿಸಿ ಒಂದು ರೀತಿಯಲ್ಲಿ ವ್ಯವಸ್ಥೆ ಮಾಡಬೇಕು. ಹೆಲ್ತ್ ಯೂನಿಟ್ ಮಾಡುವಾಗ ಮೈಸೂರಿನವರ ಹೆಲ್ತ್ ಯೂನಿಟ್ಟು, ಇಂಡಿಯಾ ಗವರ್ನಮೆಂಟಿನ ಹೆಲ್ತ್ ಯೂನಿಟ್ಟು ಎಂದು ಮಾಡಿದ್ದಾರೆ G.O.I.P. ಪ್ಯಾಟರ್ನ್ ಅಂತ ಇವನ್ನೆಲ್ಲಾ ಕಡಿಮೆ ಮಾಡಿ ಒಂದು ಒಳ್ಳೆಯ ವ್ಯವಸ್ಥೆಮಾಡಬೇಕು. ಆಸ್ಪತ್ರೆಗಳಲ್ಲಿ ಕನಿಷ್ಟಪಕ್ಷ ಇಂಥಾ ಔಷಧಿ ಇರಬೇಕು ಎಂದು ಏನಿದೆಯೋ ಅವನ್ನೆಲ್ಲಾ ಇಡಬೇಕು,

ಇನ್ನೊಂದು ಮಾತು ಆಯುರ್ವೇದದ ಬಗ್ಗೆ ಮೊದಲಿನಿಂದಲೂ ಹೇಳುತ್ತಾ ಇದ್ದೇನೆ. ನಾನು ಆಯುರ್ವೇದದ ಪ್ರೇಮಿಯೇ : ಆಯುರ್ವೇದದ ಬಗ್ಗೆ, ಅಲೋಪಥಿ ಬಗ್ಗೆ, ಹೋಮಿಯೋಪಥಿ ಬಗ್ಗೆ, ಯುನಾನಿ ಬಗ್ಗೆ ಅವರವರಲ್ಲೇ ಅನೇಕ ರೀತಿಯ ಭಿನ್ನಾಭಿಪ್ರಾಯ ಇದೆ. ಅದನ್ನೆಲ್ಲಾ ಒಟ್ಟಿಗೆ ಸೇರಿಸಿ ಯಾವುದರಿಂದ ಹೆಚ್ಚು ಸುಲಭವಾಗಿ ಒಳ್ಳೆಯ ರೀತಿಯಲ್ಲಿ, ಪರಿಣಾಮಕಾರಿಯಾಗಿ ಗುಣವಾಗುತ್ತದೆಯೋ ಅದನ್ನು ಚೆನ್ನಾಗಿ ತಿಳಿದುಕೊಂಡು ಒಂದು ಇಂಟಿಗ್ರೇಟೆಡ್ ಸಿಸ್ಟಂ ಅಂತ ಹೇಳಬಹುದು. ಉತ್ತಮವಾದ ವೈದ್ಯ ಎಂದರೆ ಎಲ್ಲಾ ಗೊತ್ತಿರಬೇಕು. ಸಣ್ಣ ಉಗುರಿನಲ್ಲಿ ಹೋಗುವುದಕ್ಕೆ ದೊಡ್ಡ ಕೊಡಲಿ ತೆಗೆದುಕೊಳ್ಳದೆ ಇದ್ದಹಾಗೆ ನಮ್ಮ ದೇಶ ಬಡದೇಶ ಬಹಳ ಹಣವನ್ನು ಹೊರಗಿನಿಂದ ತರಿಸತಕ್ಕ ಔಷಧಿಗೆ ಖರ್ಚು ಮಾಡುತ್ತಾ ಇದ್ದೇವೆ. ನಾರುಬೇರಿನಿಂದ ಖಾಯಿಲೆ ಹೋಗುವುದಕ್ಕೆ ಔಷಧಿ ಬೇಕೆಂದರೆ 10 ರೂಪಾಯಿ ಅನ್ನುತ್ತಾನೆ. ಟಾನಿಕ್ ಅಂತ ಏನು ಹೇಳುತ್ತಾರೆ ಅದನ್ನು ಕಷಾಯದಲ್ಲಿ ಪಡೆದುಕೊಳ್ಳಬಹುದು. 8 ಆಣೆಯಲ್ಲಿ ವಾಸಿಯಾಗುವ ಖಾಯಿಲೆಗೆ 10 ರೂಪಾಯಿನ ಔಷಧಿ ಬರೆದುಕೊಡುತ್ತಾರೆ. ಬಡವನಿಗೆ ಅದು ಎಟುಕುವುದಿಲ್ಲ. ಆದ್ದರಿಂದ ನಮ್ಮ ದೇಶೀಯ ಪದ್ಧತಿ ಏನಿದೆ ಅದರ ಬಗ್ಗೆ ಪರಿಣಾಮ ಮತ್ತು ಉಳಿತಾಯದ ವಿಷಯದಲ್ಲಿ ಯಾವ ಸಂದೇಹವೂ ಇಲ್ಲ. ಅಂಥಾ ಔಷಧಿಗಳನ್ನು ತಯಾರುಮಾಡುವುದು ಮತ್ತು ಅದಕ್ಕೆ ತಕ್ಕ ವೈದ್ಯಕೀಯ ವ್ಯವಸ್ಥೆ ಮಾಡುವುದೂ ಒಳ್ಳೆಯದೆಂದು ತಿಳಿದುಕೊಂಡಿದ್ದೇನೆ. ಡಾಕ್ಟರುಗಳ ಅಭಿಪ್ರಾಯ ಹೇಗಿದೆಯೋ ಗೊತ್ತಿಲ್ಲ. ಅವರು ಅಲೋಪಥಿಯವರು ಬೇರೆ ಪದ್ಧತಿಗಳ ಬಗ್ಗೆ ಬೇಸರ ಅಥವಾ ತಾತ್ಸಾರ ಇಲ್ಲದೇ ಇರಬಹುದು. ಆದ್ದರಿಂದ ಈ ವಿಷಯವನ್ನು ಪರಿಶೀಲಸಬೇಕೆಂದು ಹೇಳಿ ಅವರನ್ನು ಕೇಳಿಕೊಂಡು ನನ್ನ ಎರಡು ಮಾತನ್ನು ಮುಗಿಸುತ್ತೇನೆ.

Sri M. GHOUSE MOHIUDDIN (Raichur).—Mr. Speaker Sir, I am grateful to you for granting me a chance at least today.

Sir, human life is precious. Every State is bound to provide facilities for medical as well as public health. This Demand has been debated since two days. So, it is not necessary for me to elaborate more. But one point I will put up. Our country, India, consists of population living in villages only. There are few cities and towns. Majority of population resides in villages. From this point of view, we have to see that arrangements for medical and public health are made and what facilities they have provided for this population living in the villages. At the headquarters of the districts, there are hospitals and in cities there are several hospitals. These hospitals at the district level are not fully equipped. There are no facilities and amenities for them. At the level of the taluka, there are no doubt hospitals, but there are no meternity homes. It is necessary to establish maternity homes at every taluka so that all the villagers of that taluka may have the facility of maternity home.

In like manner, at the headquarters of a Panchayet, there must be one dispensary to serve all the villages that come under that Panchayet. Sir, last year, there was one Cess Bill which was passed in this House and at that time the Hon'ble Minister for Finance assured us that the income derived through that Cess would be solely provided for medical and public health facilities to all the villages. Now, we have to see as to how far this promise has been implemented by Medical and Health Departments.

Sir, besides all party there are two systems of medicines called Ayurvedic and Unani and these are very cheap. But we are sorry to see that these two systems are not duly encouraged by Government. For instance, at Raichur there is one Unani Dispensary. The population of Raichur is 80,000. But, you will be surprised to know that the provision made for that dispensary is only one rupee per day and the medicines are supplied from Bangalore which are not genuine medicine. The Unani Hakim complains that some medicines which ought to be prepared with honey are prepared with jaggery. If jaggery is used for the preparation instead of honey, what effect it would have may just be imagined. All this is because there are no separate Directorates. So, it is necessary that a separate Directory is constituted for these two systems.

Sir, I want to point out one important thing in this connection and I request the Hon'ble Chief Minister to kindly take note of this. Sir, according to the Fazal Ali Commission, States were reorganised mostly on linguistic basis. But what is happening now in regard to human treatment is the point which I would like to bring to the notice of the House and the Chief Minister. Sir, recently, a girl suffering from bone T. B. was taken to Hyderabad hospital. She was not admitted there because she belonged to Mysore State. This is the inhuman attitude that is developing in some hospitals in the States. Because a patient belongs to another State, it should not be a bar for the admission of that patient to any hospital of any State. This is a point to be tackled at the State level and I request the Hon'ble Chief Minister to please look into this question.

Sri C. J. MUCKANNAPPA.—Is there anything in the S.R.C. Repor' about this?

Sri M. GHOUSE MOHIUDDIN.—No; but that is the feeling create as a result of the States Reorganisation. Then, Sir, I would be failing in my duty if I do not bring some of the affairs of the Raichur Dispensary. There was a Doctor by name Dr. Rama Rao and there were so many complaints about him. He was the District Surgeon.

Sri C. J. MUCKANNAPPA.—Sir, there is a ruling that name of a particular individual should not be dragged here. What is the complaint? Is it corruption or nepotism?

Sri M. GHOUSE MOHIUDDIN.—Corruption, nepotism and ill-treatment and so many allegations.

Sri K. NAGAPPA ALVA (Minister for Health).—Enquiry was held, Sir.

Sri M. GHOUSE MOHIUDDIN.—As far as I know, no officer came there for any enquiry. But, he was transferred and we are glad for that. But, another District Surgeon is thrust on our heads (laughter). Eversince he came, the public have so many grievances which I will enumerate. Sir, the designation of that person is District Surgeon but he is a raw hand in operation. I will give an instance. For tonsil operation three girls of the age of 10 and 11 were taken to him and every girl was very anxious that she should be operated first. One girl was taken for operation and when he conducted the operation for tonsil the girl expired there itself. The other two girls ran away. He has conducted so many operations and all of them have failed. About the administration of that dispensary, I will give one instance. There was a patient in the hospital and he died; he was a villager. The body was kept in the mortuary room. According to rule, the body should be kept in the mortuary room for three days. The next day a man came to inquire about the patient and he was informed that he expired and the body was kept in the mortuary room and that the same may be removed. He said that he was alone and he would go to the village and bring some more persons to remove the dead body. After twelve days there was a murder case and that dead body was brought for post-mortem to the mortuary room. When they put this dead body on the table, they found that there was another dead body lying there. Then, they recollected that they had kept the dead body of the villager there. The police was informed in the night. It was not possible for the police to take the dead body then. So, in the morning the Sub-Inspector of Somwarpet Police Station went to the Hospital but the body could not be removed as it was decomposed and lot of foul smell was eminating from it He was a clever S.I. He spent three rupees from his pocket and gave drinks to some people and got the body removed. In a drunken state, they took the dead body from the mortuary.

Mr. CHAIRMAN.—Now the House will rise for half-an-hour and meet again at 3–30 P.M.

The House adjourned for recess at Three of the Clock and re-assembled at Thirty Minutes past Three of the Clock.

[MR. CHAIRMAN (SRI M. SREENIVASA NAYAK) in the Chair]

Sri M. GHOUSE MOHIUDDIN.—Sir, I was speaking about the dead body which was kept in mortuary room of Raichur dispensary for 12 days. This matter was reported in 'Lokvani', a Kannada weekly of Raichur District and the 'Blitz' of Bombay. I myself sent a report to the Hon. Minister for Health, the Chief Minister and the Director of Medical Services. To the extent I am aware, no action has been taken. The District Surgeon is still working in Raichur.

About this District Surgeon working at Raichur, I have much to say. Women of any caste do not like to expose their bodies naked before any man. But in some cases she has to expose her body, say, before a doctor for an operation. At Raichur there are 2 lady doctors, One is a qualified, M.B.B.S lady doctor who conducts operations. Whenever she conducts operations on women, this District Surgeon is in the habit of going into the operation theatre. To this attitude of the District Surgeon, the people of Raichur have expressed resentment and objections. Why should he go there unnecessarily when his services are not needed? Again, Government supplies good quantities of medicines to all hospitals but in Raichur we have complaint. The District Surgeon does not supply the medicines from the stores. Some of the medicines become time-barred. I came to know all these from some sources.

I would like the Hon. Minister for Health to investigate some aspects of the past career of this gentleman. Why he returned from England without acquiring any qualifications; why he could not remain in Tumkur for more than three months, what was the protest at Karwar about him?

Sri NAGAPPA ALVA.—An inquiry has been held. Another inquiry is being conducted about this person.

Sri GHOUSE MOHIUDDIN.—In this connection, the Director of Medical Services came to Raichur. He did not send his programme beforehand. On 22nd he sent a letter to me saying that I could see him on 22nd and 24th. That letter was also sent to Agadi Sanganna, Ex-M.P., Srimati Basavarajeswari, M.L.A and Siddaramappa-Patil. It shows that all these people have sent complaints about this D.S. As the Chief Minister came for a function on 22nd I went to see the Director on 24th morning. I was asked to see him at the hospital. I went there and waited for 20 minutes but as he did not turn up, I want to know what steps have been taken by the higher authorities in respect of the complaints made by me and other distinguished persons of that place.

I request the Hon. Minister for Health to consider my suggestion for establishing an outpatient dispensary at Raichur Town. The new building which has been constructed is very far away from Raichur town. It is more than 2 miles from certain areas in Raichur town and in some cases it is 3 miles away. No action has been taken in this regard.

These dispensaries are meant for the poor people but in practice we find poor people are not wanted there. The Hyderabad Karnatak area is backward in medical facilities and I request the Government to provide more medical amenitities in this area.

† ಶ್ರೀ ಸಿದ್ಧಯ್ಯ ಕಾಶೀಮಠ (ಶಿರಹಟ್ಟಿ).—ಅಧ್ಯಕ್ಷರೇ, ರಾಜ್ಯದ ಆರೋಗ್ಯ ಮಂತ್ರಿಗಳು ಈ ಸಭೆಯಮುಂದೆ ಇಟ್ಟ ವೈದ್ಯಕೀಯ ಹಾಗೂ ಜನಾರೋಗ್ಯ ರಕ್ಷಣೆಯ ಬೇಡಿಕೆಗಳನ್ನು ಸ್ವಾಗತಿಸಿ, ಈ ಸಮಯದಲ್ಲಿ ಸರ್ಕಾರಕ್ಕೆ ಒಂದೆರಡು ಸಲಹೆಗಳನ್ನು ಮಾಡಲು ಅಪೇಕ್ಷಿಸುತ್ತೇನೆ, ಸರ್ಕಾರದವರು ಜನಾರೋಗ್ಯ ರಕ್ಷಣೆಯ ಸಲುವಾಗಿ ಸಾಕಷ್ಟು ಪ್ರಚಾರವನ್ನು ಕೈಕೊಳ್ಳುವುದು ನಮ್ಮೆಲ್ಲರಿಗೂ ತಿಳಿದ ವಿಷಯ. ಆ ಪ್ರಚಾರದಂತೆ ಇವೊತ್ತು ಕಾರ್ಯಗತ ಮಾಡಲಿಕ್ಕೆ ವಿಳಂಬವಾಗುವುದನ್ನು ನೋಡಿ ಅದಕ್ಕೆ ವಿಷಾದ ಪಡಬೇಕಾಗಿದೆ. ಸರ್ಕಾರ ಸಾಕಷ್ಟು ಹಣವನ್ನು ಇವೊತ್ತಿನ ದಿವಸ ಜನಾರೋಗ್ಯ ರಕ್ಷಣೆಯ ಸಲುವಾಗಿ ಇಟ್ಟಿದೆ. ಆ ಹಣವನ್ನು ಹೇಗೆ ಉಪಯೋಗ ಮಾಡಬೇಕು ಎನ್ನುವುದನ್ನು ಅಲ್ಲಿಯ ಆಡಳಿತ ವರ್ಗದವರು ಸರಿಯಾಗಿ ಮಾಡುತ್ತಿಲ್ಲವೆಂದು ಸರ್ಕಾರಕ್ಕೆ ಹೇಳಬಯಸುತ್ತೇನೆ.

ಸರ್ಕಾರದವರು ಹಳ್ಳಿಯವರಿಗೆ ಸರಿಯಾದ ಔಷಧೋಪಚಾರ ಸಿಕ್ಕಲೆಂದು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪನೆ ಮಾಡಿ ಅದರ ಮುಖಾಂತರವಾಗಿ ಔಷಧಿಗಳನ್ನು ಒದಗಿಸಬೇಕೆಂಬ ಹವ್ಯಾಸವನ್ನಿಟ್ಟುಕೊಂಡಿದ್ದಾರೆ. ಆದರೆ ಎಷ್ಟು ಆರೋಗ್ಯ ಕೇಂದ್ರಗಳಲ್ಲಿ ಡಾಕ್ಟರುಗಳು, ನರ್ಸ್‌ಗಳು, ಹೆಲ್ತ್ ವಿಸಿಟರುಗಳು ಇದ್ದಾರೆನ್ನುವುದು ವಿಚಾರ ಮಾಡತಕ್ಕ ಸಂಗತಿ. ಸಾಕಷ್ಟು ಆರೋಗ್ಯ ಕೇಂದ್ರಗೆಳಲ್ಲಿ ಡಾಕ್ಟರಿದ್ದ ಕಡೆ ಉಳಿದ ಸಿಬ್ಬಂದಿಯಿಲ್ಲ ; ಉಳಿದ ಸಿಬ್ಬಂದಿ ಇದ್ದರೆ ಡಾಕ್ಟರುಗಳಿಲ್ಲ. ಈ ತೆರನಾದ ಪರಿಸ್ಥಿತಿ ಬಂದಿದೆ. ಇದಕ್ಕಾಗಿ ಆದಷ್ಟು ಹೆಚ್ಚಿಗೆ ಡಾಕ್ಟರುಗಳನ್ನು ಒದಗಿಸಲೇಬೇಕಾಗಿದೆ. ಆರೋಗ್ಯ ಕೇಂದ್ರಗಳನ್ನು ತೆರೆದು ಅದರ ಮುಖಾಂತರ ಸವಲತ್ತುಗಳನ್ನು ಒದಗಿಸಬೇಕೆಂದು ಸರ್ಕಾರಕ್ಕೆ ಈ ಸಮಯದಲ್ಲಿ ಹೇಳುತ್ತೇನೆ. ಆರೋಗ್ಯ ಕೇಂದ್ರಗಳನ್ನು ಕೊಡಬೇಕಾದರೆ 15 ಸಾವಿರ ಜನಸಂಖ್ಯೆ ಇರಬೇಕು ಎಂದು ಯೋಜನೆಯನ್ನಿಟ್ಟುಕೊಂಡಿದ್ದಾರೆ. ಮತ್ತು ಹೊಸದಾಗಿ ಯಾರಾದರೂ ಆರೋಗ್ಯ ಕೇಂದ್ರಗಳನ್ನು ಕೇಳಿದಾಗ ಅವರು 17 ಸಾವಿರ recurring ಮತ್ತು 17½ ಸಾವಿರ ರೂಪಾಯಿ non-recurring charges ಯಾರು ಕೊಡುತ್ತಾರೆಯೋ ಅಂಥವರಿಗೆ ಮಾತ್ರ ಆರೋಗ್ಯ ಕೇಂದ್ರಗಳನ್ನು ಕೊಡಬೇಕೆಂದು ಮಾಡಿದ್ದಾರೆ. ಆದರೆ ಇವೊತ್ತಿನ ದಿವಸ ತಾಲ್ಲೂಕು ಬೋರ್ಡಿನವರು ಕೂಡ ಭಾಗವಹಿಸುವ ಪರಿಸ್ಥಿತಿಯೊಳಗೆ ಇಲ್ಲ. ತಾಲ್ಲೂಕು ಬೋರ್ಡಿನಲ್ಲಿ ಹಣ ಕಡಮೆಬಂದಾಗ ಯಾವ ರೀತಿ ಈ ಕೇಂದ್ರಗಳನ್ನು ನಡೆಸಬೇಕೆನ್ನುವುದು ತಿಳಿಯದಾಗಿದೆ.

ಬೊಂಬಾಯಿ ಕರ್ಣಾಟಕದ ಬಗ್ಗೆ ಹೇಳುವುದಾದರೆ ಅಲ್ಲಿ ಒಂದೊಂದು ತಾಲ್ಲೂಕಿನಲ್ಲಿ ಒಂದೊಂದು ಕೇಂದ್ರವಿದೆ. ಮತ್ತೊಂದು ಕೇಂದ್ರವನ್ನು ಸ್ಥಾಪನೆ ಮಾಡಬೇಕು ಎಂದರೆ ಹಣವಿಲ್ಲವೆಂದು ಕೂಡ ತಕ್ಕ ಪರಿಸ್ಥಿತಿ ಬಂದಿದೆ

ಬೊಂಬಾಯಿ ಕರ್ಣಾಟಕ ಭಾಗದಲ್ಲಿ ನಾಲ್ಕೈದು ಹಳ್ಳಿಗಳನ್ನು ಜೋಡಿಸಿ S.M.P. centres ಎಂದು ತೆಗೆದು ಒಂದು ರೀತಿ ಮಾಡಿದ್ದಾರೆ. ಅವು ಅತ್ಯುತ್ತಮವಾಗಿ ಕೆಲಸ ಮಾಡಿಕೊಂಡು ಬಂದಿವೆ ಎಂದು ನನ್ನ ಅನುಭವವಿದೆ. ಈ ಕೇಂದ್ರಗಳಿಗೆ ಆಯುರ್ವೇದ ಡಾಕ್ಟರುಗಳನ್ನು ಹಾಕಿ ಅದಕ್ಕೆ ಸಂಬಂಧಪಟ್ಟಂತೆ 300-400 ರೂಪಾಯಿ ಆಯುರ್ವೇದ ಔಷಧಿಗಳನ್ನು ಸಪ್ಲೈ ಮಾಡುತ್ತ ಬಂದಿದ್ದಾರೆ. ಈ S.M.P. Cntres ನಲ್ಲಿರುವ ಆಯುರ್ವೇದ ವೈದ್ಯರಿಗೆ ಅಲೋಪಥಿಯಲ್ಲಿ ಮೂರು ನಾಲ್ಕು ತಿಂಗಳು ಟ್ರೈನಿಂಗ್ ಕೊಟ್ಟು ಅವರಿಗೆ ನೂತನ ಔಷಧಿ ಸಾಮಗ್ರಿಗಳನ್ನು ಒದಗಿಸಲು ಸರ್ಕಾರ ಪ್ರಯತ್ನ ಮಾಡಿದರೆ ಡಾಕ್ಟರುಗಳ ಅಭಾವ ಕಡಮೆಯಾಗಬಹುದು ಎಂದು ನಾನು ಸೂಚನೆ ಮಾಡಬಯಸುತ್ತೇನೆ.

S.M.P. ಸೆಂಟರ್‌ಗಳನ್ನು ಪ್ರತಿಯೊಂದು ಕಡೆಯೂ ತೆಗೆದು ಡಾಕ್ಟರನ್ನು ಪೋಸ್ಟ್ ಮಾಡಿ ವೈದ್ಯಕೀಯ ಸೌಲಭ್ಯವನ್ನು ಒದಗಿಸಿಕೊಡಬೇಕು.

ಪ್ರೈಮರಿ ಹೆಲ್ತ್ ಸೆಂಟರುಗಳ ಬಗ್ಗೆ ಒಂದೆರಡು ವಿಷಯ ಹೇಳಬೇಕೆಂದರೆ ಅಲ್ಲಿ ಕೆಲಸ ಮಾಡುವ ಡಾಕ್ಟರು ಮುಂಜಾನೆ ಆಸ್ಪತ್ರೆಯಲ್ಲಿದ್ದು, ಮಧ್ಯಾಹ್ನ ಜೀಪಿನಲ್ಲಿ ಹಳ್ಳಿಗಳಿಗೆ ಹೋಗಿ ಸಂದರ್ಶಿಸಿಕೊಂಡು ಬರತಕ್ಕ ಪರಿಸ್ಥಿತಿ ಇದೆ. ಈ ಪ್ರಾಥಮಿಕ ಹೆಲ್ತ್ ಯೂನಿಟ್ಟಿಗೆ ಸಂಬಂಧಿಸಿದ ಸಿಬ್ಬಂದಿ

(ಶ್ರೀ ಸಿದ್ದಯ್ಯ ಕಾಶೀಮಠ)

20 ಸಾವಿರ ಜನಸಂಖ್ಯೆಗೆ ಒಳಪಡುವ ಹಳ್ಳಿಗಳಿಗೆ ಭೇಟಿಕೊಡತಕ್ಕ ವಿಚಾರದಲ್ಲಿ ಕೆಲವೊಂದು ಸಲಹೆಗಳನ್ನು ಕೊಡಬೇಕೆಂದಿದ್ದೇನೆ.

ಇದರಿಂದ ಏನಾಗಿದೆ ಎಂದರೆ ಹಾಸ್ಪಿಟಲ್ಲುಗಳಲ್ಲಿ ಡಾಕ್ಟರುಗಳಿಲ್ಲದಂತಾಗಿದೆ. ಅದಕ್ಕಾಗಿ ಇಂತಹ ಹಾಸ್ಪಿಟಲ್ಲುಗಳಲ್ಲಿ ಒಬ್ಬೊಬ್ಬರು ಅಸಿಸ್ಟೆಂಟರುಗಳನ್ನಾದರೂ ನೇಮಕ ಮಾಡಿದರೆ, ಡಾಕ್ಟರುಗಳಿಲ್ಲದಿದ್ದರೂ ಅಲ್ಲಿಗೆ ಬಂದಂತಹ ಜನಗಳಿಗೆ ಇಂತಹ ಅಸಿಸ್ಟೆಂಟರುಗಳಿಂದ ಅನುಕೂಲವಾಗುತ್ತದೆ. ಇದರ ಬಗ್ಗೆ ಸರಕಾರ ಯೋಚನೆ ಮಾಡಬೇಕು.

ಪ್ರೈಮರಿ ಹೆಲ್ತ್ ಯೂನಿಟ್ಟುಗಳಲ್ಲಿರುವ ಆಸ್ಪತ್ರೆಗಳಿಗೆ ಔಷಧಿಗಳನ್ನು ಒದಗಿಸತಕ್ಕ ವಿಚಾರದಲ್ಲಿ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಈ ಆಸ್ಪತ್ರೆಗಳಿಂದ ಔಷಧಿಗಳಿಗಾಗಿ ಇಂಡೆಂಟನ್ನು ಕಳುಹಿಸಿದರೆ, ನಿರ್ದಿಷ್ಟವಾದ ಔಷಧಿಗಳನ್ನು ಕೊಳ್ಳಬೇಕಾದರೆ ಸರ್ಕಾರದಿಂದ ಮನ್ನಣೆ ಪಡೆದಂತಹ ಸ್ಟೋರುಗಳಿಂದಲೇ ಈ ಔಷಧಿಗಳನ್ನು ಕೊಳ್ಳಬೇಕೆಂದು ಮಾಡಿದ್ದಾರೆ. ಇವೊತ್ತಿನ ದಿವಸ ನಮ್ಮ ಬಿಜಾಪುರ ಜಿಲ್ಲೆಗೆ ಔಷಧಿ ಬೇಕಾದರೆ ಬೆಂಗಳೂರಿನಲ್ಲಿರುವ ಮನ್ನಣೆ ಪಡೆದಂತಹ ಸ್ಟೋರುಗಳಿಗೆ ಬಂದು ಔಷಧಿಗಳನ್ನು ಕೊಂಡುಕೊಳ್ಳಬೇಕಾದರೆ ಬಹಳ ಕಷ್ಟವಾಗುತ್ತದೆ. ಅಲ್ಲದೆ ಕೆಲವು ವೇಳೆ ಇಲ್ಲಿಂದ ಇಂಡೆಂಟು ಕಳುಹಿಸುವ ಔಷಧಿಗಳೂ ಅಂತಹ ಸಮಯದಲ್ಲಿ ಸಿಗುವುದಿಲ್ಲ ಇದರಿಂದ ರೋಗವನ್ನು ವಾಸಿ ಮಾಡಲು ಅನುಕೂಲವಾದ ಔಷಧಿಗಳೂ ಸಿಗುವುದಿಲ್ಲ. ಅದಕ್ಕಾಗಿ ಆದಷ್ಟು ಮಟ್ಟಿಗೆ ಆಯಾ ಜಿಲ್ಲೆಗೆ ಸಂಬಂಧಪಟ್ಟಂತೆ ಹತ್ತಿರವಿರುವ ಊರುಗಳಲ್ಲಿ ಮನ್ನಣೆ ಪಡೆದಂತಹ ಸ್ಟೋರ್ಸುಗಳನ್ನು ತೆರೆದು ಅಲ್ಲಿಂದ ಸರಳವಾಗಿ ಮತ್ತು ಸುಲಭವಾಗಿ ಔಷಧಿಗಳು ದೊರೆಯುವಂತೆ ಮಾಡಿದರೆ, ಇಂತಹ ತೊಂದರೆಗಳು, ಅನಾನುಕೂಲಗಳು ತಪ್ಪುತ್ತವೆ ಎಂದು ಈ ಸಮಯದಲ್ಲಿ ಹೇಳುತ್ತೇನೆ.

ನಮ್ಮ ಭಾಗದಲ್ಲಿ ಕರ್ನಾಟಕ ಮೆಡಿಕಲ್ ಹಾಸ್ಪಿಟಲ್ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ಇಲ್ಲಿಗೆ ಹೆಚ್ಚಿನ ಅನುಕೂಲಗಳು ಸಿಗುತ್ತೆ ಎಂದು ಹೆಚ್ಚುಹೆಚ್ಚಾಗಿ ಜನರು ಬರುತ್ತಿದ್ದಾರೆ. ಆದರೆ ಇಲ್ಲಿ ಕೆಲಸ ಮಾಡಲು ಸಾಕಷ್ಟು ಸಂಖ್ಯೆಯಲ್ಲಿ ಡಾಕ್ಟರುಗಳಿಲ್ಲ. ಇಲ್ಲಿ ಇನ್ನೂ ಹೆಚ್ಚಾಗಿ ಡಾಕ್ಟರಗಳನ್ನು ನೇಮಿಸಿದರೆ ಇಲ್ಲಿನ ಜನಕ್ಕೆ ಅನುಕೂಲವಾಗುತ್ತದೆ. ಇಲ್ಲಿಗೆ ಇನ್ನೂ ಒಬ್ಬರು ಡಾಕ್ಟರೂ ಒಬ್ಬರು ಲೇಡಿ ಡಾಕ್ಟರನ್ನಾದರೂ ಬೇಗನೆ ನೇಮಿಸಿದರೆ, ಇಲ್ಲಿಗೆ ಅನುಕೂಲವಾಗುತ್ತದೆ. ಇದರ ಬಗ್ಗೆ ವಿಚಾರ ಮಾಡಬೇಕು. ಅಲ್ಲದೆ ಈಗಿರುವ ಒಬ್ಬೊಬ್ಬ ಡಾಕ್ಟರುಗಳೂ ದಿವಸಕ್ಕೆ ಹನ್ನೆರಡು ಗಂಟೆಗಳಷ್ಟು ಕಾಲ ಕೆಲಸ ಮಾಡಬೇಕಾಗಿದೆ. ಇದಕ್ಕೆ ಬದಲಾಗಿ ಆರುತಾಸುಗಳಷ್ಟು ಕೆಲಸ ಮಾಡಲು ನಾಲ್ಕು ಷಿಫ್ಟುಗಳಂತೆ ಮಾಡಿದರೂ ಅನುಕೂಲವಾಗುತ್ತದೆ. ಕೆಲವು ವೇಳೆ 24 ಗಂಟೆಗಳ ಕಾಲವೂ ಕೆಲಸ ಮಾಡಬೇಕಾಗಿ ಬರುತ್ತದೆ. ಇದರ ಕಡೆಗೆ ಸ್ವಲ್ಪ ಗಮನ ಕೊಡಬೇಕು.

ಇನ್ನು ಊಟವನ್ನು ಕೊಡುವ ವಿಚಾರದಲ್ಲಿ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ಇಲ್ಲಿ ಕೊಡುವ ರೊಟ್ಟಿ ಮತ್ತಿತರ ಆಹಾರಗಳನ್ನು ಸರಿಯಾಗಿ ತಯಾರು ಮಾಡದೇ ಕೊಡುತ್ತಿದ್ದಾರೆ. ಅಲ್ಲದೆ ಕೊಳೆತ ಹಣ್ಣುಗಳನ್ನು ಕೊಡುತ್ತಿದ್ದಾರೆಂದು ತಿಳಿದುಬರುತ್ತದೆ. ಇದರ ಬಗ್ಗೆ ಆಹಾರವನ್ನು ಸರಬರಾಜು ಮಾಡುವ ಅಧಿಕಾರಿಗಳು ಸರಿಯಾದ ಆಹಾರವನ್ನು ಸಪ್ಲೈ ಮಾಡಲು ತಕ್ಕ ಕ್ರಮ ಕೈಗೊಳ್ಳಬೇಕೆಂದು ಸೂಚಿಸುತ್ತೇನೆ.

ಇನ್ನೊಂದು ವಿಷಯ ಅದು ರೋಗಿಗಳಿಗೆ ಕೊಡುವ ಡ್ರೆಸ್ಸಿನ ವಿಚಾರ. ಇಲ್ಲಿ ಕೊಡುವ ಡ್ರೆಸ್ಸುಗಳನ್ನು ನೋಡಿದರೆ, ಇದು ಖೈದಿಗಳೂ ಕೂಡ ಉಡದಂತಹ ಡ್ರೆಸ್ಸು ಆಗಿದೆ ಎಂತ ಹೇಳಬಹುದು. ರೋಗಿಗಳ ಮನಸ್ಸಿನಮೇಲೆ ಸರಿಯಾದ ಪರಿಣಾಮವಾಗತಕ್ಕಂತೆ ಇವರಿಗೆ ಡ್ರೆಸ್ಸುಗಳನ್ನು ಕೊಡಲಿಕ್ಕೆ ಪ್ರಯತ್ನ ಮಾಡಬೇಕು. ಈಗ ಕೊಡುತ್ತಿರುವ ಬಟ್ಟೆ ಬಹಳ Rough ಆದುದು. ಇದನ್ನು ಬದಲಾಯಿಸಿ ಮೃದುವಾಗಿರುವಂತಹ ಮತ್ತು ಚೆನ್ನಾಗಿರುವ ಡ್ರೆಸ್ಸನ್ನು ಕೊಡಬೇಕು ಎಂದು ಹೇಳುತ್ತೇನೆ. ಇದಕ್ಕಾಗಿ ಸರಕಾರ ರೊಕ್ಕ ಕೊಡುತ್ತಿರುವುದರಿಂದ ಕೊಳ್ಳುವಾಗ ಸ್ವಲ್ಪ ಮೆತ್ತಗಿರತಕ್ಕ ಬಟ್ಟೆಗಳನ್ನು ತೆಗೆದು ಮತ್ತು ಶುಚಿಯಾಗಿ ಮಾಡಿರುವ ಬಟ್ಟೆಗಳನ್ನು ಇಲ್ಲಿನ ರೋಗಿಗಳಿಗೆ ಕೊಡಬೇಕೆಂದು ಹೇಳುತ್ತೇನೆ. ಅಲ್ಲದೆ ಈ ಆಸ್ಪತ್ರೆಗೆ ಬೇಕಾದ ಕೆಲವೊಂದು ಸಾಮಗ್ರಿಗಳನ್ನು ಇನ್ನೂ ಒದಗಿಸಿಲ್ಲ ಎಂದು ತಿಳಿದುಬರುತ್ತದೆ. ಇವನ್ನೆಲ್ಲಾ ತಿಳಿದುಕೊಂಡು ತೀವ್ರವಾಗಿ ಒದಗಿಸಿದರೆ ಈ ಆಸ್ಪತ್ರೆಯಿಂದ ಜನಗಳಿಗೆ ಬಹಳ ಒಳ್ಳೆಯದಾಗುತ್ತದೆ. ಇದರ ಕಡೆಗೆ ಸ್ವಲ್ಪ ಪ್ರಯತ್ನ ಮಾಡಬೇಕು.

ಹುಬ್ಬಳ್ಳಿಯಲ್ಲಿ ಬಹಳ ಉತ್ತಮವಾಗಿ ಕೆಲಸ ಮಾಡತಕ್ಕ ಡಾಕ್ಟರಗಳು ಇಲ್ಲಿರುವ ಒಂದು ಕೋ-ಆಪರೇಟಿವ್ ಹಾಸ್ಪಿಟಲ್ಲಿನಲ್ಲಿದ್ದಾರೆ. ಈ ಕೋ-ಆಪರೇಟೀವ್ ಸಂಸ್ಥೆಯವರಿಂದ ಈ ಆಸ್ಪತ್ರೆ ಚೆನ್ನಾಗಿ ಕೆಲಸ ಮಾಡುತ್ತಿರುವುದರಿಂದ ಜನಗಳೂ ಇದಕ್ಕೆ ಹೆಚ್ಚಾಗಿ ಹೋಗುತ್ತಿದ್ದಾರೆ. ಇದರ

ಬಗ್ಗೆ ಸರಕಾರದವರು ಸ್ವಲ್ಪ ಗ್ರ್ಯಾಂಟನ್ನು ಕೊಡುತ್ತಿದ್ದಾರೆ. ಇದನ್ನು ಸರಕಾರ ಗಮನಿಸಿ ಇನ್ನೂ ಸ್ವಲ್ಪ ಹೆಚ್ಚಿನ ಗ್ರ್ಯಾಂಟನ್ನು ಕೊಟ್ಟು ಸಹಾಯ ಮಾಡಿದರೆ ಇನ್ನೂ ಹೆಚ್ಚಿನ ಅನುಕೂಲವಾಗುತ್ತದೆ.

Sri B. D. JATTI (Minister for Finance).—It is a private institution.

Sri SIDDIAH KASIMAT.—It is a co-operative hospital.

Sri B. D. JATTI.—The point is this; the grant that is given is given as a matter of discretion. They cannot compel Government to give so much grant. After all, it is a private institution.

ಶ್ರೀ ಸಿದ್ದಯ್ಯ ಕಾಶೀಮಠ್.—ಆದಷ್ಟೂ ಇಲ್ಲಿನ ಜನಕ್ಕೆ ಹೆಚ್ಚಾಗಿ ಉಪಯೋಗವಾಗುತ್ತದೆ. ಏಕೆಂದರೆ ಇಲ್ಲಿಯೂ ಕೂಡ ಕೆಲವರಿಗೆ ಉಚಿತವಾಗಿ ಔಷಧಿಗಳನ್ನು ಕೊಡುತ್ತಿದ್ದಾರೆ. ಇಂತಹ ಸಂಸ್ಥೆಗಳಿಗೆ ಸರಕಾರ ಇನ್ನೂ ಹೆಚ್ಚಿನ ಪ್ರೋತ್ಸಾಹ ಕೊಟ್ಟು ಸಹಾಯ ಮಾಡಿದರೆ ಬಹಳ ಜನರಿಗೆ ಸಹಾಯ ಮಾಡಿದಂತಾಗುತ್ತದೆ ಎಂದು ಈ ಸಮಯದಲ್ಲಿ ಹೇಳುತ್ತೇನೆ. ಹೋದವರ್ಷ ಸಹ ಸ್ವಲ್ಪ ಸಹಾಯ ಮಾಡಿದ್ದಾರೆ. ಈ ರೀತಿ ಈ ಸಲವೂ ಸ್ವಲ್ಪ ಹೆಚ್ಚಿನ ಸಹಾಯ ಮಾಡಬಹುದು ಎಂದು ಸಲಹೆ ಮಾಡುತ್ತೇನೆ.

[MR. SPEAKER in the Chair]

ಇವೂತ್ತು ನೀರಾವರಿ ಯೋಜನೆಯಲ್ಲಿ ಕೃಷ್ಣ ಗೋದಾವರಿ ನೀರಿನ ವಿಚಾರ ಮುಖ್ಯವಾದುದು ಇದಕ್ಕಿಂತಲೂ ಮುಖ್ಯವಾದ ಮತ್ತು ತುರ್ತಾದ ವಿಚಾರವೆಂದರೆ ಕಾವೇರಿ ಮತ್ತು ಇತರ vallayಗಳಲ್ಲಿರುವ ಪ್ರಾಜೆಕ್ಟ್‌ಗಳ ವಿಚಾರ. ಇದರ ವಿಷಯ ಹೇಳುವುದಾದರೆ ಕಾವೇರಿ ಬಗ್ಗೆ ಮೈಸೂರು ಸರ್ಕಾರಕ್ಕೂ ಮದ್ರಾಸ್ ಸರ್ಕಾರಕ್ಕೂ ಒಪ್ಪಂದವಾಗಿದೆ. ಅದರ ಪ್ರಕಾರವಾಗಿ ಕಾವೇರಿ ನೀರನ್ನು ಉಪಯೋಗಿಸಿಕೊಂಡು ಯಾವ ಪ್ರಾಜೆಕ್ಟನ್ನು ಕಟ್ಟಬೇಕಾಗಿದ್ದರೂ 1974 ನೆಯ ಇಸವಿಯೊಳಗೆ ಕಟ್ಟಬೇಕಾಗಿದೆ. ಆದುದರಿಂದ ತಾವು ದಯವಿಟ್ಟು ಈ Canvery vallay ಯಲ್ಲಿ ಏನೇನು ಕಾಮಗಾರಿಗಳನ್ನು ತೆಗೆದುಕೊಳ್ಳಲು ಯೋಚನೆ ಮಾಡಿದ್ದೀರೋ ಅವುಗಳನ್ನು ಬಹಳ ಶೀಘ್ರವಾಗಿ ಮಾಡಿ ಪ್ರತಿಯೊಂದು ತೊಟ್ಟು ನೀರನ್ನೂ ಕೂಡ ಉಪಯೋಗಿಸಿಕೊಳ್ಳುವುದಕ್ಕೆ ಹೆಚ್ಚಿನ ಶ್ರಮ ವಹಿಸಿ ಕೆಲಸಮಾಡಬೇಕು. ಇದರಲ್ಲಿ ತಾವು ಈಗಾಗಲೇ ಹಾರಂಗಿ, ಕಂಬದ ಕಡ ಪ್ರಾಜೆಕ್ಟ್‌ಗಳ ವಿಚಾರದಲ್ಲಿ ಅನೇಕ ವಿಧವಾದ controversies ಇವೆ, ವಾದ ವಿವಾದಗಳು ನಡೆದಿವೆ ದೇಶದ ಹಿತದೃಷ್ಟಿಯಿಂದ ರಾಜಕೀಯವನ್ನು ಮರೆತು ಮೈಸೂರು ಸರ್ಕಾರ ಆ ಪ್ರದೇಶದಲ್ಲಿರುವ ಜನತೆಯ ಹಿತದೃಷ್ಟಿಯಿಂದ ಹಾರಂಗಿ, ಕಂಬದಕಡ ಮತ್ತು ಹೇಮಾವತಿ ಪ್ರಾಜೆಕ್ಟ್‌ಗಳನ್ನು ಕಾರ್ಯಗತ ಮಾಡಬೇಕು. ಹೇಮಾವತಿ ನಮ್ಮ ಜಿಲ್ಲೆಗೆ ಸೇರಿದ್ದು. ಹಾಸನ ಜಿಲ್ಲೆಯಲ್ಲಿ ಈ ಯೋಜನೆಯನ್ನು ಬಿಟ್ಟರೆ ಬೇರೆ

ಯಾವನದಿಯೂ ಕೂಡ ಇಲ್ಲ. ಈ ಯೋಜನೆಗಳನ್ನು ಬಹಳ ತ್ವರಿತದಿಂದ ತೆಗೆದುಕೊಂಡು ಅದಷ್ಟು ಜಾಗ್ರತೆ ಮುಗಿಸಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ವ್ಯವಸಾಯಾಭಿವೃದ್ಧಿ ಮತ್ತು ಆಹಾರೋತ್ಪತ್ತಿ ಜಾಸ್ತಿಯಾಗಬೇಕು, ಅದಕ್ಕೋಸ್ಕರವಾಗಿ minor irrigation ಗೆ ಬಹಳ ಹಣವನ್ನು ಒದಗಿಸುತ್ತಿದ್ದೀರಿ. ಇದು ಬಹಳ ಸ್ತುತ್ಯವಾದ ಕೆಲಸವೆಂದು ನಾನು ಮೇಲಿಂದ ಮೇಲೆ ಹೇಳಿದ್ದೇನೆ. ಇವೊತ್ತು, ಕೂಡ ತುರ್ತು ಪರಿಸ್ಥಿತಿಯಲ್ಲಿ ಕೂಡ ಹೆಚ್ಚು ಆಹಾರ ಬೇಕಾಗಿರುವ ಸಮಯದಲ್ಲಿ minor irrigation ಗೆ ಹೆಚ್ಚು ಗಮನ ಕೊಡುತ್ತೇವೆಂದು ಹೇಳಿರುವುದು ನಿಜವಾಗಿಯೂ ಬಹಳ ಸ್ತುತ್ಯವಾದ ಕೆಲಸ. ಈ ಮೈನರ್ ಇರಿಗೇಷನ್ ವಿಚಾರದಲ್ಲಿ ಮಾತನಾಡುವಾಗ ನಮ್ಮ ದೇಶದಲ್ಲಿ ಆದಿಕಾಲದಿಂದಲೂ ಇರುವಂಥ ಕೆರೆಗಳು ಸಹಸ್ರಾರು ಸಂಖ್ಯೆಯಲ್ಲಿವೆ. ಆ ಕೆರೆಗಳನ್ನು ಸರಿಯಾಗಿ, ಶೀಘ್ರವಾಗಿ ರಿಪೇರಿ ಮಾಡಿದರೆ ಖಂಡಿತವಾಗಿಯೂ ನಮ್ಮ ದೇಶದಲ್ಲಿ ಅನೇಕ ಲಕ್ಷ ಎಕರೆಗಳಲ್ಲಿ ಬಹಳ ಸುಲಭವಾಗಿ ವ್ಯವಸಾಯ ಮಾಡತಕ್ಕ ಸೌಲಭ್ಯವಿದೆ. ಇದನ್ನು ತಾವು ಹೆಚ್ಚಿನ ಕಾರ್ಯರೂಪಕ್ಕೆ ತರಬೇಕೆಂದು ಹೇಳುತ್ತೇನೆ.

ಮೈನರ್ ಇರಿಗೇಷನ್ ವಿಚಾರವಾಗಿ ಮಾತನಾಡುವಾಗ ಒಂದು ವಿಷಯವನ್ನು ಹೇಳಬೇಕಾಗಿದೆ. ಮೊದಲು ಇದಕ್ಕಾಗಿಯೇ ಪ್ರತ್ಯೇಕವಾಗಿ minor irrigation circle ಎಂದು ಇತ್ತು. ಅದನ್ನು ಈಗ ತೆಗೆದು amalgamate ಮಾಡಿದ್ದಾರೆ.

ಕೆಲಸ ಚೆನ್ನಾಗಿಮಾಡಲು ಅನುಕೂಲವಾಗುವಂತೆ ಇರಿಗೇಷನ್ ಶಾಖೆಯನ್ನು ಡಿವಿಜನ್ ಮತ್ತು ಸರ್ಕಲ್‌ಗಳನ್ನಾಗಿಮಾಡಿ ಈ ಬಾಬಿನಿಂದ ಹೆಚ್ಚಿನ ಅನುಕೂಲ ಪಡೆಯಲು ವ್ಯವಸ್ಥೆ ಮಾಡಬೇಕಾಗಿದೆ.

ತಮಗೆ ಇನ್ನೊಂದು ಸಲಹೆ ಮಾಡಬೇಕಾಗಿದೆ. ಈಗ ತಾವು ಮಾಡಿರುವ ಇಂಜನೀಯರಿಂಗು ಡಿವಿಜನ್ನುಗಳು ಮತ್ತು ಸರ್ಕಲ್ಲುಗಳು ಏನಿವೆ, ಅವು ಶಾಸ್ತ್ರೀಯವಾಗಿ ಆಗಿಲ್ಲ. ಕೆಲವು ಕಡೆ ಎಲ್ಲಿ ಕೆಲಸ ಕಡಿಮೆ ಇದೆಯೋ ಅಲ್ಲಿ ಕೆಲಸಮಾಡಲು ಹೆಚ್ಚಿನ ಇಂಜನೀಯರುಗಳಿದ್ದಾರೆ. ಎಲ್ಲಿ ಜಾಸ್ತಿ ಕೆಲಸಗಳಾಗಬೇಕಾಗಿದೆಯೋ ಅಲ್ಲಿ ಇಂಜನೀಯರುಗಳು ಕಡಿಮೆ ಸಂಖ್ಯೆಯಲ್ಲಿರುತ್ತಾರೆ. ಆದ್ದರಿಂದ ತಾವು ಇದನ್ನು ಶಾಸ್ತ್ರೀಯವಾಗಿ ರೀ-ಆರ್ಗನೈಜು ಮಾಡಬೇಕು. ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಈಗ ಎಲ್ಲಾ ಭಾಗದಲ್ಲಿಯೂ ಇವೆ. ಅಲ್ಲಿ ಏನಾದರೂ ರಸ್ತೆ ಕೆಲಸ ಮಾಡಬೇಕಾದರೆ ಅಲ್ಲಿ ಒಬ್ಬರು ಸಬ್-ಓವರ್‌ಸೀಯರಿರುತ್ತಾರೆ. ಅವರ ಕೈಯಲ್ಲಿ ಇಂತಹ ರಸ್ತೆ ಕೆಲಸಗಳನ್ನೆಲ್ಲಾ ಮಾಡಲು ಸಾಧ್ಯವಾಗುವುದಿಲ್ಲ. ಇನ್ನೂ ದೊಡ್ಡ ದೊಡ್ಡ ಶರಾವತಿ ಯೋಜನೆಯ ಕೆಲಸಗಳಲ್ಲಿ, ore carrying roadsಗಳ ಡಿವಿಜನ್ನುಗಳಲ್ಲಿ ನೋಡಿದರೆ ಅಲ್ಲಿ ಇಂಜನೀಯರುಗಳು ಹೇರಳವಾಗಿದ್ದಾರೆ. ಆದುದರಿಂದ ತಾವು ಡೀಟೇಲ್‌ಆಗಿ ಪರಿಶೀಲನೆ ಮಾಡಿ ರೀ-ಆರ್ಗನೈಜು ಮಾಡಿ ಇಂಜನೀಯರುಗಳ ಹಂಚಿಕೆಯ ಕೆಲಸವನ್ನು ಶಾಸ್ತ್ರೀಯವಾಗಿ ತೆಗೆದುಕೊಂಡು ಮಾಡಬೇಕೆಂದು ತಮ್ಮ ಮೂಲಕ ಸರಕಾರಕ್ಕೆ ಸಲಹೆ ಮಾಡುತ್ತೇನೆ.

ಮತ್ತೆ ದೊಡ್ಡ ದೊಡ್ಡ ಪ್ರಾಜೆಕ್ಟುಗಳ ವಿಚಾರ ಮಾಡುವಾಗ ತಮ್ಮಲ್ಲಿ ಪ್ರತಿಸಾರಿಯೂ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿರುತ್ತೇವೆ. ಈಗಲೂ ಸಹ ಬಿಚ್ಚುಮನಸ್ಸಿನಿಂದ ಒಂದು ವಿಚಾರ ಹೇಳುತ್ತೇನೆ. ಇದರ ಬಗ್ಗೆ ಈ ದೇಶದಲ್ಲಿ ನಿಜವಾಗಿಯೂ ಒಂದು ಸಂಶಯವಿದೆ. ನೀವು ಕೋಟಿ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡುತ್ತಿದ್ದೀರಿ. ಹೀಗೆ ಕೋಟಿಗಟ್ಟಲೆ ಹಣ ಖರ್ಚು ಮಾಡುತ್ತಿರುವುದು ಸರಿಯಾಗಿ ಖರ್ಚು ಆಗುತ್ತೊ ಇಲ್ಲವೋ ಎಂದು ಸಂಶಯ ಬಂದಿದೆ. ಇದರಲ್ಲೇನೋ ಲೋಪವಾಗಿದೆ ಎಂದು ಜನತೆ ಹೇಳುತ್ತಿದ್ದಾರೆ. ಲೋಕೋಪಯೋಗಿ ಶಾಖೆಯಲ್ಲಿ ತರುಣರಾದ ತಾವು ಸಚಿವರಾಗಿರುವಾಗ ಇದರ ಬಗ್ಗೆ ತಾವು ಕಟ್ಟುನಿಟ್ಟಾದ ನೀತಿಯನ್ನೂ ಇಟ್ಟುಕೊಂಡು ಇದನ್ನು ಪರಿಶೀಲಿಸಬೇಕು. ದೇಶದ ಜನತೆಯ ದುಡ್ಡು, ಕೋಟಿಗಟ್ಟಲೆಯಲ್ಲಿ ವಸೂಲು ಮಾಡಿ ಉಪಯೋಗಿಸುತ್ತಿರುವಾಗ ಅವರು ಕೊಟ್ಟ ಪ್ರತಿಯೊಂದು ಕಾಸೂ ಸರಿಯಾಗಿ ವಿನಿಯೋಗವಾಗುವುದರ ಕಡೆಗೆ ತಾವು ಗಮನ ಕೊಡಬೇಕು. ಈ ವಿಚಾರವನ್ನು ನಾನೀಗ ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ—ಬಹಳ ಪ್ರಭಾವವಿರತಕ್ಕಂಥ ಕೆಲವು ವ್ಯಕ್ತಿಗಳು ಇವೊತ್ತಿನ ದಿವಸ ದೊಡ್ಡ ದೊಡ್ಡ ಪ್ರಗತಿದಾಯಕವಾದ ಇಂಥ ದೊಡ್ಡ ಯೋಜನೆಗಳಲ್ಲಿ ಕೆಲಸಗಳನ್ನು ಹಿಡಿದು ಸುಲಭ ರೀತಿಯಲ್ಲಿ ಹಣ ಸಂಪಾದನೆ ಮಾಡುತ್ತಿದ್ದಾರೆಂದು ಈ ದೇಶದಲ್ಲಿ ಜನತೆಯ ಮನಸ್ಸಿಗೆ ಒಂದು ಸಂಶಯ ಬಂದಿದೆ. ಅವರು ತಮ್ಮಂತಹವರ ಮೇಲೆ ಪ್ರಭಾವ ಬೀರಿ ವಿಶ್ವಾಸ ಸಂಪಾದಿಸುತ್ತಾರೆ. ಅದರಲ್ಲೂ ಇಂತಹ ಕಾಮಗಾರಿಯ ಕೆಲಸಗಳಲ್ಲಿರುವ ಒಳ್ಳೆಯ ಅಧಿಕಾರಿಗಳು ಕೂಡ ಯಾವ ರೀತಿಯಾಗಿ ಹಣ ದುರುಪಯೋಗ ಮಾಡಬಹುದು ಎಂಬುದನ್ನೂ ನಮ್ಮ ದೇಶದ ಜನತೆಗೆ ಹೇಳಿಕೊಡಬೇಕಾಗಿಲ್ಲ. ಅವರೇ ಹಂಚಿಕೊಂಡು ಕೆಲಸ ಮಾಡಿಕೊಳ್ಳಬಲ್ಲರು. ಇಲಾಖೆಯಲ್ಲಿ ಒಳ್ಳೆಯವರೂ ಇರುತ್ತಾರೆ. ನಾನು ಈ ವಿಚಾರದಲ್ಲಿ ಯಾವ ವ್ಯಕ್ತಿಗಳ ಮೇಲೆಯೂ ಆರೋಪಣೆ ಮಾಡುವ ಗೋಜಿಗೆ ಹೋಗುವುದಿಲ್ಲ. ಈ ದೇಶದಲ್ಲಿ ಈ ಇಲಾಖೆಯಲ್ಲಿ ಏನೇನು ನಡೆಯುತ್ತಿದೆ ಎಲ್ಲೆಲ್ಲಿ ಏನೇನು ಆಗುತ್ತಿದೆ ಎನ್ನುವುದು ಜನಕ್ಕೆ ಚೆನ್ನಾಗಿ ವಿಧಿತವಾಗಿದೆ. ನಾನು ಈ ಬಗ್ಗೆ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದು

(ಶ್ರೀ ಎಸ್. ಶಿವಪ್ಪ)

ಏನೆಂದರೆ—ಅವರು ಇದನ್ನೆಲ್ಲಾ ಕಟ್ಟುನಿಟ್ಟಾಗಿ ವಿಚಾರಣೆ ಮಾಡಬೇಕು ಎಂದು ಅನೇಕ ಸಾರಿ ಹೇಳಿದ್ದೇನೆ. ಅದರಂತೆ ಈಗಲೂ ಹೇಳಿ ತಮ್ಮ ಮೂಲಕ ಸಚಿವರ ಗಮನವನ್ನು ಇತ್ತ ಸೆಳೆಯುತ್ತಿದ್ದೇನೆ.

ಮತ್ತೆ ಈಗಾಗಲೇ ಮಾನ್ಯ ಮಂತ್ರಿಗಳು ಹೇಳಿದ ರೀತಿಯಲ್ಲಿ ನಮ್ಮ ದೇಶದಲ್ಲಿ ರಸ್ತೆಗಳ ಕೆಲಸಗಳನ್ನು ಮಾಡಲು ಸಾಕಷ್ಟು ಹಣವಿಲ್ಲ. ಈ ಸಾರಿ ರಸ್ತೆ ಕೆಲಸಗಳನ್ನು ಬಹಳ ಕಡಿಮೆ ಮಾಡಬೇಕಾಗಿದೆ ಎಂದು ಹೇಳಿದರು ಇದು ಬಹಳ ತಪ್ಪು ಭಾವನೆ. ಇವೊತ್ತಿನ ತುರ್ತಿನ ಪರಿಸ್ಥಿತಿಯಲ್ಲಿ ಆಹಾರದ ಸಂಪತ್ತು ಜಾಸ್ತಿಯಾಗಬೇಕಾದರೆ, ನಮ್ಮ ದೇಹದಲ್ಲಿ ರಕ್ತನಾಳಗಳು ದೇಹಕ್ಕೆ ಹೇಗೆ ಅಗತ್ಯವೋ ಹಾಗೇ ನಮ್ಮ ದೇಶದಲ್ಲಿ ಕೈಗಾರಿಕೆ ಮತ್ತು ವ್ಯವಸಾಯ ಕ್ಷೇತ್ರಗಳು ಬೆಳೆಯಬೇಕಾಗಿದ್ದರೆ ರಸ್ತೆಗಳು ಅಷ್ಟೇ ಪ್ರಾಮುಖ್ಯವಾದದ್ದು. ಇದರ ಬಗ್ಗೆ ಮೈಸೂರಿನ ಅಂಕಿ ಅಂಶಗಳನ್ನೂ ನಾನು ನೋಡಿದ್ದೇನೆ. ಅದರಂತೆ ನಮ್ಮ ದೇಶದ ಪರ್ಸೆಂಟೇಜ ಬಹಳ ಕಡಿಮೆಯಾಗಿದೆ. ಆಲ್ ಇಂಡಿಯಾ ಲೆವೆಲ್ಲಿನಲ್ಲಿಯೂ ನೋಡಿದರೆ ಭಾರತದಲ್ಲಿಯೂ ಕೂಡ ರಸ್ತೆಗಳ ಪರ್ಸೆಂಟೇಜು ಕಡಿಮೆ. ಅದರಂತೆ ನಮ್ಮ ಮೈಸೂರು ದೇಶದಲ್ಲಿಯೂ ಕೂಡ ರಸ್ತೆಗಳು ಬಹಳ ಕಡಿಮೆ. ಹಳ್ಳಿಗಳಿಂದ ಹಳ್ಳಿಗಳಿಗೆ ಹೋಗುವುದಕ್ಕೂ ಕೂಡ ಸರಿಯಾದ ರಸ್ತೆಗಳಿಲ್ಲ ಎಂದು ಹೇಳಲು ಬಹಳ ವಿಷಾದವಾಗುತ್ತದೆ. ಇದರ ಬಗ್ಗೆ ನಾನು ಹೇಳತಕ್ಕದ್ದು ರಸ್ತೆಗಳ ವಿಚಾರದಲ್ಲಿ ತಾವು ಇನ್ನೂ ಸ್ವಲ್ಪ ಹೆಚ್ಚಿನ ಹಣ ಕೊಟ್ಟು ಗ್ರಾಮಾಂತರ ರಸ್ತೆಗಳ ನಿರ್ಮಾಣಕ್ಕೆ ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ. ಇವೊತ್ತಿನ ದಿವಸ ಗ್ರಾಮಾಂತರ ರಸ್ತೆಗಳ ವಿಚಾರಗಳಲ್ಲಿ ನಾನು ತಮಗೆ ಹೊಸದಾಗಿ ಹೇಳಬೇಕಾಗಿಲ್ಲ. ಕೆಲವು ಗ್ರಾಮಗಳು ದ್ವೀಪದಂತಿವೆ. ಅಲ್ಲಿಗೆ ಯಾರೂ ಹೋಗುವುದಕ್ಕೂ ಸಾಧ್ಯವಿಲ್ಲ. ಯಾವ ಕಡೆಯಿಂದಲೂ ಹೋಗಲಿಕ್ಕೆ ಸಾಧ್ಯವಿಲ್ಲ. ಅದರಲ್ಲೂ ನಮ್ಮ ದೇಶದ ಹೈದರಾಬಾದು ಕರ್ಣಾಟಕದ ಭಾಗಗಳಲ್ಲಿ ನಾನೂ ಹೋಗಿ ಸಂಚಾರ ಮಾಡಿ ನೋಡಿದ್ದೇನೆ. ಅಲ್ಲಿ ಕೆಲವು ಊರುಗಳಿಗೆ ಹೋಗಲು ಸರಿಯಾದ ರಸ್ತೆಗಳೇ ಇಲ್ಲ. ಅದರಲ್ಲೂ ತಾಲ್ಲೂಕು ಹೆಡ್ ಕ್ವಾರ್ಟರುಗಳಿಗೆ ಹೋಗುವುದಕ್ಕೂ ಆಗುವುದಿಲ್ಲ. ಇಂತಹ ಭಾಗದಲ್ಲ ಖಂಡಿತವಾಗಿಯೂ ರಸ್ತೆಗಳನ್ನು ನಿರ್ಮಾಣ ಮಾಡಿ, ತಾಲ್ಲೂಕು ಹೆಡ್ ಕ್ವಾರ್ಟರುಗಳಿಗೆ ಜನ ಹೋಗಲು ಸೌಕರ್ಯ ಮಾಡಿಕೊಡಬೇಕು. ಇಲ್ಲಿರುವ ರಸ್ತೆಗಳು ನಿಜವಾಗಿಯೂ ಬಹಳ ಶೋಚನೀಯ ಪರಿಸ್ಥಿತಿಯಲ್ಲಿದೆ. ಅದಕ್ಕಾಗಿ ಮೈಸೂರು ದೇಶದ ಎಲ್ಲಾ ಪ್ರದೇಶದ ಗ್ರಾಮಾಂತರ ಪ್ರದೇಶಗಳಲ್ಲಿರುವ ಎಲ್ಲಾ ಭಾಗಗಳಿಗೂ ಹೆಚ್ಚಿನ ಹಣವನ್ನು ರಸ್ತೆಗಳಿಗಾಗಿ ಒದಗಿಸಿಕೊಟ್ಟು ಈ ಕಾರ್ಯವನ್ನು ಚನ್ನಾಗಿ ಮಾಡಬೇಕು ಎಂದು ಸೂಚನೆ ಮಾಡಬೇಕಾಗಿದೆ.

ಇನ್ನು ಬಿಲ್ಡಿಂಗುಗಳ ವಿಚಾರದಲ್ಲಿ ನೀವೇನೋ ತುರ್ತಿನ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ ಎಂದು ಹೇಳಬಹುದು. ಆದರೆ Necessity ಇರುವಂತಹ ರಸ್ತೆಗಳಿಗೂ ಹಾಗೂ ಸ್ಕೂಲು ಕಟ್ಟಡಗಳಿಗೂ ಮಾತ್ತು ಎಲ್ಲಿ ರಸ್ತೆ ಅಥವಾ ಶಾಲಾ ಕಟ್ಟಡಗಳ ಕೆಲಸ ಸ್ವಲ್ಪ ಆಗಿದ್ದು ಆ ಕಲಸ ಪೂರ್ತಿಯಾಗಿ ಮುಗಿಸದೆ ಅರ್ಧಕ್ಕೆ ಬಿಟ್ಟುಬಿಟ್ಟಿದ್ದಾರೋ ಅಂಥ ಬಾಬುಗಳಿಗೆ ಹಣವನ್ನೊದಗಿಸಲೇ ಬೇಕು. ಇಲ್ಲವಾದರೆ ಹಳ್ಳಿಗಾಡಿನ ಜನತೆಗೆ ಎಷ್ಟೋ ಕಷ್ಟವಾಗುತ್ತದೆ. ತಾವು ಕೆಲವುಕಡೆ ಹಳ್ಳಿಗಳಲ್ಲಿ ನೋಡಿರಬಹುದು. ಹಳ್ಳಿಗಳಲ್ಲಿರುವ ಮಕ್ಕಳು ಶಾಲಾ ಕಟ್ಟಡವಿಲ್ಲದೆ ಮುರುಕು ಚಾವಡಿಯಲ್ಲೋ ಮುರುಕಲು ದೇವಸ್ಥಾನದಲ್ಲೋ ಕುಳಿತು ಓದುತ್ತಿರುತ್ತಾರೆ. ಅದರಲ್ಲೂ ಕೆಲವು ಕಡೆ ಈ ಚಿಕ್ಕ ಪುಟ್ಟ ಮಕ್ಕಳನ್ನು ಮರದ ಕೆಳಗೆ ಕೂರಿಸಿ ಓದಿಸುತ್ತಿದ್ದಾರೆ. ಇದಕ್ಕಿಂತ ಶೋಚನೀಯವಾದ ಪರಿಸ್ಥಿತಿ ಬೇರೆ ಯಾವುದೂ ಇಲ್ಲ. ಎಷ್ಟೋ ಖರ್ಚು ಆಗುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಬೇಕಾದರೆ ಬೇರೆ ಯಾವುದಾದರೂ ಒಂದು ಪ್ರಾಜೆಕ್ಟಿಗೆ ಕೊಡುವ ಹಣವನ್ನು ತಪ್ಪಿಸಿ ಓದುವ ಮಕ್ಕಳಿಗೆ ಸ್ಕೂಲುಗಳನ್ನು ಕಟ್ಟಿಸಿಕೊಡಬೇಕಾದುದು ನಮ್ಮ ದೇಶದ ಆದ್ಯ ಕರ್ತವ್ಯ. ಸುಖೀರಾಜ್ಯ ಸ್ಥಾಪನೆ ಮಾಡುವಾಗ ನಮ್ಮ ನಾಡಿನ ಮಕ್ಕಳು ಬೆಳೆಯುವುದಕ್ಕಾಗಿ ತಕ್ಕ ಅವಕಾಶವನ್ನೂ ಕಲ್ಪಿಸಿಕೊಡಬೇಕು. ಅದಕ್ಕಾಗಿ ಸ್ಕೂಲು ಕಟ್ಟಡಗಳಿಗಾಗಿ ಸ್ವಲ್ಪ ಹೆಚ್ಚಿನ ಹಣವನ್ನು ಒದಗಿಸಿಕೊಡಬೇಕೆಂದು ತಮ್ಮಲ್ಲಿ ನಾನು ಸೂಚನೆ ಮಾಡುತ್ತೇನೆ.

ಇನ್ನೊಂದು ವಿಚಾರವನ್ನು ಮಾತ್ರ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಪಿ. ಡಬ್ಲ್ಯು. ಡಿ. ವಿಚಾರದಲ್ಲಿ ಮಾತನಾಡುವಾಗ, ನಾನು ಈ ಇಲಾಖೆಯ ಮೇಲೆ ಬಹಳ ಗೌರವ ಇಟ್ಟುಕೊಂಡಿದ್ದೇನೆ. ಈ ದೇಶದ ಗೌರವವನ್ನು ಉತ್ಪತ್ತಿ ಮಾಡುವಂತಹ ಶಾಖೆ. ಈ ಲೋಕೋಪಯೋಗಿ ಖಾತೆ ಎಂಬ ಒಳ್ಳೆಯ ಹೆಸರನ್ನುಳಿಸಿಕೊಳ್ಳಬೇಕಾದರೆ ಲೋಕದಜನಕ್ಕೆ ಈ ಖಾತೆ ಉಪಯೋಗವಾಗಿರಬೇಕೇ ಹೊರತು ಇದು ಲೋಕಕ್ಕೆ ಮಾರಿಯಾಗಿರಬಾರದು. ಈ ಇಲಾಖೆ ಅಂತಹ ಒಳ್ಳೆಯ ಕೆಲಸ ಮಾಡುವಂತೆ ಮಾಡತಕ್ಕ ಭಾರ ತಮ್ಮದು. ತಾವು ಲೋಕೋಪಯೋಗಿ

ಖಾತೆಯಲ್ಲಿರತಕ್ಕ ಅನೇಕ ಅಂತಸ್ತಿನ ಅಧಿಕಾರಿಗಳು ಅವರವರ ಕೆಲಸಗಳನ್ನು ಅವರು ಚೆನ್ನಾಗಿ ನೆರವೇರಿಸುವಂತೆ ಏರ್ಪಾಡು ಮಾಡಿ ಜನತೆಯ ವಿಶ್ವಾಸ ಮತ್ತು ಗೌರವವನ್ನು ಸಂಪಾದನೆ ಮಾಡುವಂತೆ ವ್ಯವಸ್ಥೆ ಮಾಡಬೇಕು. ಈ ಇಲಾಖೆಯಲ್ಲಿ ದಕ್ಷತೆಯಿಂದ ಚೆನ್ನಾಗಿ ಕೆಲಸಮಾಡುವ ವ್ಯಕ್ತಿಗಳಿದ್ದಾರೆ. ಏನೋ ಒಂದು ಅಧಿಕಾರ ಇವೊತ್ತಿನ ದಿವಸ ಅವರ ಕೈಯಲ್ಲಿದೆ, ಅಂತಹ ಅಧಿಕಾರವನ್ನು ಸರಿಯಾಗಿ ಉಪಯೋಗಿಸದಿದ್ದರೆ ದೇಶಕ್ಕೇನೂ ಅನುಕೂಲವಾಗುವುದಿಲ್ಲ. ಈ P. W. D. ಇಲಾಖೆಯಲ್ಲಿರುವ ಅಧಿಕಾರಿಗಳ ಆಡಳಿತ ಚೆನ್ನಾಗಿಲ್ಲ ಎನ್ನುವ ಮಾತುಗಳು ಕೇಳಿಬರುತ್ತಿವೆ. ನಾನು ಈ ಇಲಾಖೆಯಲ್ಲೇ ಯಾರೂ ಅರ್ಹರಿಲ್ಲ ಬುದ್ಧಿವಂತರಿಲ್ಲ ಎಂದು ಹೇಳುತ್ತಿಲ್ಲ. ಒಳ್ಳೆಯವರೂ ಬುದ್ಧಿವಂತರೂ, ಆಡಳಿತದಲ್ಲಿ ದಕ್ಷರಾದವರೂ ಇದ್ದಾರೆ. ಆದುದರಿಂದ ಅಪಾರ ಹಣವನ್ನು ವೆಚ್ಚ ಮಾಡುವ ಈ ಇಲಾಖೆಯ ಹೊಣೆಯನ್ನು ಹೊತ್ತಿರತಕ್ಕವರು, ದೇಶದ ಕೆಲಸವನ್ನು ದಕ್ಷತೆಯಿಂದ ಮಾಡಿದರೆ ನಿಜವಾಗಿಯೂ ನಮ್ಮ ದೇಶಕ್ಕೆ ಮತ್ತು ನಮ್ಮ ಮಂತ್ರಿಗಳಿಗೆ ಒಳ್ಳೆಯ ಹೆಸರು ಬರುತ್ತದೆ. ಅದರಲ್ಲೂ ನಮ್ಮ ಮೈಸೂರು ದೇಶದಲ್ಲಿ ಕೀರ್ತಿಯನ್ನು ಗಳಿಸಿದ ದಿವಂಗತ ಶ್ರೀಮಾನ್ ವಿಶ್ವೇಶ್ವರಯ್ಯನವರು ಮೈಸೂರು ದೇಶ ಮತ್ತು ಭಾರತದಲ್ಲೇ ಅಲ್ಲದೆ ಇಡೀ ಪ್ರಪಂಚದಲ್ಲೇ ಕೀರ್ತಿಯನ್ನು ಗಳಿಸಿ ಒಬ್ಬ ಖ್ಯಾತಿವೇತ್ತ ಇಂಜನೀಯರಾಗಿದ್ದರು. ಇಡೀ ಭಾರತದಲ್ಲೇ ನಮ್ಮ ಮೈಸೂರು ದೇಶದ ಇಂಜನೀಯರುಗಳು ಬಹಳ ಒಳ್ಳೆಯ ಹೆಸರನ್ನು ಸಂಪಾದಿಸಿರತಕ್ಕವರು ಎನ್ನುವ ವಿಚಾರ ಎಲ್ಲರಿಗೂ ತಿಳಿದಿದೆ. ಮೊನ್ನೆ ತಾನೇ ಮಾನ್ಯ ಶ್ರೀಮಾನ್ ರಾಜಗೋಪಾಲಾಚಾರಿಯವರು ಒಂದು ಕಡೆ ಮಾತನಾಡುತ್ತಾ ಅವರು " P. W. D. is my enemy No. I " ಎಂದು ಹೇಳಿದರು.

Mr. SPEAKER.—He might have had reasons which could not prevail here.

ಶ್ರೀ ಎಸ್, ಶಿವಪ್ಪ.—ಮೈಸೂರು ದೇಶದಲ್ಲಿ ಭಾರತದಲ್ಲಿರುವ ಇತರ ದೇಶಗಳಿಗಿಂತ ಖ್ಯಾತರಾದ ಬುದ್ಧಿವಂತರಾದ ಇಂಜನೀಯರುಗಳಿದ್ದಾರೆ ಎಂದು ಇಲ್ಲಿನ ಜನತೆಗೆ ಅಪಾರವಾದ ಗೌರವವಿದೆ. ನಮ್ಮ ದೇಶದ ಅನೇಕ ಇಂಜನೀಯರುಗಳು ಅನೇಕ ಯೋಜನೆಗಳನ್ನು ಕಟ್ಟಿಸಿದ್ದಾರೆ. ಮೈಸೂರು ದೇಶವನ್ನು ಒಂದು ಮಾದರಿ ರಾಜ್ಯವನ್ನಾಗಿ ಮಾಡಬೇಕೆಂದು ಅವರ ಉದ್ದೇಶವಾಗಿತ್ತು. ಅಂತಹ ಒಳ್ಳೆಯ ಉದ್ದೇಶವನ್ನೇ ಇಟ್ಟುಕೊಂಡು ಈ ದೇಶವನ್ನು ಮುಂದಕ್ಕೆ ತರಬೇಕೆಂದೂ, ಎಲ್ಲದರಲ್ಲಿಯೂ ಮುಂದುವರಿದು, ಮಾದರಿಯಾಗಿರತಕ್ಕ ರೀತಿಯಲ್ಲಿ ನಮ್ಮ ಮೈಸೂರು ದೇಶದ ಮೇಲ್ಮೆಯನ್ನು ಇನ್ನೂ ಹೆಚ್ಚುವಂತೆ ಮಾಡಿ ಎಂದು ಹೇಳುತ್ತೇನೆ. ತಮ್ಮ ಇಲಾಖೆ ಇನ್ನೂ ಚನ್ನಾಗಿ ಬೆಳೆಯಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ. ಎಂ. ಸಿದ್ದಯ್ಯ (ಬಿಳಿಗೆರೆ).—ಸ್ವಾಮಿ, ಈಗತಾನೇ ಮರಾಮತ್ತು ಶಾಖೆಯ ಸಚಿವರು ಮಂಡಿಸಿದ ಬೇಡಿಕೆಗಳನ್ನು ಸಮರ್ಥನೆಮಾಡುತ್ತಾ, ಹಾಗೂ ಇದರೊಡನೆ ಇರುವ ಮೂರು ಬೇಡಿಕೆಗಳನ್ನು ಒಟ್ಟುಗೂಡಿಸಿದರೆ ಸುಮಾರು ಅರವತ್ತು ಕೋಟಿಯಷ್ಟು ರೂಪಾಯಿಗಳ ಬೇಡಿಕೆಗಳಿಗೂ ನನ್ನ ಪೂರ್ಣ ಅನುಮೋದನೆಯನ್ನು ಕೊಡುತ್ತೇನೆ. ಈ ಬೇಡಿಕೆಗಳಲ್ಲಿ ಮುಖ್ಯವಾದುದು ನೀರಾವರಿ ಯೋಜನೆಗಳು. ಇದರಲ್ಲಿ ದೊಡ್ಡ ನೀರಾವರಿಯೂ ಬೇಕು, ಸಣ್ಣ ನೀರಾವರಿಯೂ ಬೇಕು. ದೊಡ್ಡ ನೀರಾವರಿ ಯೋಜನೆಗಳನ್ನು ನಮ್ಮ ಸರಕಾರದವರು ಕೈಗೊಂಡು ಅದನ್ನು ಬಹಳ ತ್ವರಿತದಿಂದ ಸಾಧಿಸಿಕೊಂಡು ಬಂದಿದ್ದಾರೆ. ಇಂತಹ ಯೋಜನೆಗಳು ನಮ್ಮ ದೇಶಕ್ಕೆ ಬಹಳ ಮುಖ್ಯವಾದವುಗಳು ಮತ್ತು ಇದರಿಂದ ಲಕ್ಷಾಂತರ ಎಕರೆ ಜಮೀನು ನೀರಾವರಿಯಾಗಿ ಬಹಳ ಪ್ರಾಮುಖ್ಯವಾದ ಆಹಾರ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಜನಗಳಿಗೆ ಇದು ಅತ್ಯವಶ್ಯಕವಾಗಿ ಬೇಕಾಗಿದೆ. ಹೆಚ್ಚು ಆಹಾರದ ಉತ್ಪತ್ತಿಯನ್ನು ಮಾಡುವಂಥ ಮಹತ್ಕಾರ್ಯಕ್ಕೆ ಈ ಇಲಾಖೆಯವರು ಈಗ ಹೆಚ್ಚಿನ ಗಮನ ಕೊಟ್ಟಿದ್ದಾರೆ.

ಮಾನ್ಯ ಮಂತ್ರಿಗಳು ನಂಜನಗೂಡು ಸಬ್‌ಡಿವಿಜನ್ನಿನಲ್ಲಿ ಪ್ರವಾಸ ಮಾಡಿದ್ದಾರೆ. ಆಗ್ಗೆ ಅವರ ಗಮನಕ್ಕೆ ಈ ವಿಷಯ ತರಲಾಗಿದೆ. ಅಲ್ಲಿ ಸುವರ್ಣಾವತಿ ಯೋಜನೆ ಒಂದು ದೊಡ್ಡ ನೀರಾವರಿ ಯೋಜನೆಯಾಗಿದೆ. ಆದರೆ ನಮ್ಮ ದುರದೃಷ್ಟವಶಾತ್ ಈ ಯೋಜನೆಯು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಲಿಲ್ಲ. ಇದರಿಂದ 60,000 ಎಕರೆ ಜಮೀನು ನೀರಾವರಿಯಾಗುತ್ತದೆ. ಇದನ್ನು ಮೂರನೇ ಯೋಜನೆಯಲ್ಲಿ ಸೇರಿಸಬೇಕು. ಯಾಕೆಂದರೆ ನಮ್ಮ ಭಾಗ ಬಹಳ ಹಿಂದುಳಿದ ಪ್ರದೇಶ. ಇತ್ತ ಕಡೆ ಉಪೇಕ್ಷೆ ಮಾಡಬಾರದು. ಇನ್ನೊಂದು ಚಿಕ್ಕ ಯೋಜನೆಯಾದ ಚಿಕ್ಕೋಡೆ ಯೋಜನೆ ಪ್ರಾರಂಭವಾಗಿದೆ. ಇದರಿಂದ 6,000 ಎಕರೆ ನೀರಾವರಿಯಾಗುತ್ತದೆ. ಇದರ ಕೆಲಸ ಈಗ ನಡೆದಿದೆ. ಆದರೆ ಮುಖ್ಯವಾಗಿ ಗಮನಕ್ಕೆ ತರಬೇಕಾದುದು ಸುವರ್ಣಾವತಿ ಯೋಜನೆ. ಇದನ್ನು ಅತಿಮುಖ್ಯವಾಗಿ ಮೂರನೇ ಯೋಜನೆಯಲ್ಲಿ ಸೇರಿಸಬೇಕು ಎಂದು ಹೇಳುತ್ತೇನೆ. ಈ ವರ್ಷದ ಬಜೆಟ್ಟಿನಲ್ಲಿ ಮೇಜರ್ ಇರಿಗೇಷನ್ನಿಗೆ ಹಣ ಕಡಿಮೆ ಮಾಡಿದ್ದೀರಿ. ದೇಶದಲ್ಲಿ ಇಂದು ಆಹಾರ ಉತ್ಪಾದನೆ ಜಾಸ್ತಿಯಾಗಬೇಕಾಗಿದೆ. ಆದ್ದರಿಂದ ಮಧ್ಯಮ ಪ್ರೊಜೆಕ್ಟುಗಳನ್ನು ಯೋಜನೆ

(ಶ್ರೀ ಡಿ. ಎಂ. ಸಿದ್ದಯ್ಯ)

ಯಲ್ಲಿ ಸೇರಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಯಳಂದೂರ ತಾಲ್ಲೂಕಿನಲ್ಲಿ ಮಾನ್ಯಮಂತ್ರಿಗಳು ಪ್ರವಾಸ ಮಾಡಿದ್ದಾರೆ. ಇಲ್ಲಿ ಒಂದು ಯೋಜನೆ ಮಾಡಿದರೆ ಮುಕ್ಕಾಲು ಭಾಗ ಕೊಳ್ಳೇಗಾಲ ತಾಲ್ಲೂಕಿಗೂ ನೀರಾವರಿಯಾಗುತ್ತದೆ. ಇಲ್ಲಿ ಭತ್ತ ಬೆಳೆಯುವುದಕ್ಕೆ ಅನುಕೂಲವಾಗುವುದು. ಈ ಬಗ್ಗೆ ಮನವಿ ಮಾಡಿಕೊಂಡಾಗ್ಗೆ ಸಹಾನುಭೂತಿಯಿಂದ ಪರಿಶೀಲಿಸುತ್ತೇವೆಂದು ಭರವಸೆ ಕೊಟ್ಟಿದ್ದಾರೆ. ಆದ್ದರಿಂದ ಈ ಯೋಜನೆಯ ಬಗ್ಗೆ ಸಹಾನುಭೂತಿಯಿಂದ ನೋಡಿ ಅದನ್ನು ಕಾರ್ಯಗತ ಮಾಡುವ ವ್ಯವಸ್ಥೆ ತೀವ್ರ ಮಾಡಬೇಕೆಂದು ಸರಕಾರಕ್ಕೆ ಸೂಚನೆ ಕೊಡುತ್ತೇನೆ.

5-30 P.M.

ಈ ವರ್ಷ ತುರ್ತುಪರಿಸ್ಥಿತಿಯ ಮೂಲಕ ಉಪಯುಕ್ತವಾದ ಮೈನರ್ ಇರಿಗೇಷನ್ ಕೈಕೊಂಡಿರುವುದು ಬಹಳ ಸೂಕ್ತವಾದ ಕೆಲಸ. ನಮ್ಮ ತಾಲ್ಲೂಕಿನಲ್ಲಿ ನೀರಿನ ಸೌಕರ್ಯವಿಲ್ಲ. ಒಂದು ಸಣ್ಣ ಯೋಜನೆಗಾಗಿ ಮೂರುಲಕ್ಷ ಎಸ್ಟಿಮೇಟು ಸ್ಯಾಂಕ್ಷನ್ ಆಗಿದೆ. ಕೆಲಸ ಪ್ರಾರಂಭವಾಗುವ ಸಿದ್ಧತೆಯಲ್ಲಿದೆ. ಇದರಿಂದ ಒಂದು ಸಾವಿರ ಎಕರೆ ಜಮೀನು ನೀರಾವರಿಯಾಗಿ ಅನುಕೂಲವಾಗುತ್ತದೆ. ಅನೇಕ ಸಣ್ಣಪುಟ್ಟ ಕೆರೆಗಳ ದುರಸ್ತು ಕೆಲಸವಾಗಬೇಕಾಗಿದೆ. ಸಣ್ಣ ಕೆರೆಗಳ ಪಿಕ್‌ಅಪ್‌ನಿಂದ ಯಥೇಚ್ಛವಾಗಿ ನೀರು ಹರಿದುಬರುವುದರಿಂದ ಉಪಯೋಗವಾಗುತ್ತದೆ. ಸಣ್ಣ ನೀರಾವರಿ ಯೋಜನೆಯ ಉಪಮಂತ್ರಿಗಳು ನಮ್ಮ ತಾಲ್ಲೂಕಿನಲ್ಲಿ ಪ್ರವಾಸ ಮಾಡಿ ಇಲ್ಲಿಯ ವಿಷಯ ಚೆನ್ನಾಗಿ ತಿಳಿದುಕೊಂಡು ತಜ್ಞರಿಂದ ಪಶಿಶೀಲಿಸಿ ಎಸ್ಟಿಮೇಟು ಸ್ಯಾಂಕ್ಷನ್ ಮಾಡಿಸಿ ಜನರಿಗೆ ಸೌಕರ್ಯವಾಗುವ ಕೆಲಸ ಮಾಡಿದ್ದಾರೆ. ನಮ್ಮಕಡೆ ಕೆರೆಗಳ ಸಣ್ಣಸಣ್ಣ ಯೋಜನೆ ಮಾಡಿ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಯೋಜನೆ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ನೀರಾವರಿ ಯೋಜನೆಯು ಸಣ್ಣದೇ ಆಗಲಿ ದೊಡ್ಡದೇ ಆಗಲಿ ಈಗಿನ ಯುದ್ಧದ ಸ್ಥಿತಿಯಲ್ಲಿ ಮಾಡಬೇಕಾದುದು ಅಗತ್ಯ. ಈಗ ಆಹಾರ ಬಹಳ ಮುಖ್ಯವಾದುದು. ಯುದ್ಧದ ಪರಿಸ್ಥಿತಿಯಲ್ಲಿ ಮದ್ದುಗುಂಡುಗಳಷ್ಟೇ ಆಹಾರವೂ ಪ್ರಾಮುಖ್ಯವಾದುದು. ಆದುದರಿಂದ ಆಹಾರ ಉತ್ಪಾದನೆಯನ್ನು ಹೆಚ್ಚಿಸಬಲ್ಲ ಯಾವ ಯೋಜನೆಯನ್ನು ಕೈಬಿಡಬಾರದು. ಆಹಾರ ಬೆಳೆಯುವುದರಲ್ಲಿ ನಾವು ಸ್ವಯಂಪೂರ್ಣರಾಗಬೇಕು. ಮತ್ತು ಚೀಣೀಯರನ್ನು ದೇಶದಿಂದ ಓಡಿಸಬೇಕು. ನಮ್ಮ ರಕ್ಷಣಾಮಂತ್ರಿ ಚವ್‌ಹಾಣ ಅವರು ನಾವು ಯುದ್ಧಕ್ಕಾಗಿ ಸದಾ ಸಿದ್ಧರಾಗಿರಬೇಕೆಂದು ಅಪ್ಪಣೆ ಕೊಡಿಸಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಏನುಮಾಡುತ್ತಾರೋ ಗೊತ್ತಿಲ್ಲ. ಯಾವರೀತಿಯಿಂದಲಾದರೂ ಆಹಾರ ಉತ್ಪಾದನೆ ಹೆಚ್ಚಿಸಬೇಕೆಂದು ಸೂಚನೆ ಮಾಡುತ್ತೇನೆ.

ಇನ್ನು ರಸ್ತೆಯ ವಿಚಾರ. ರಸ್ತೆ ಸೌಕರ್ಯ ಒದಗಿಸುವುದು ಬಹಳ ಮುಖ್ಯವಾದುದು. ನ್ಯಾಷನಲ್ ಹೈವೇಜ್, ದೊಡ್ಡದೊಡ್ಡ ರಸ್ತೆಗಳನ್ನು ಮಾಡಬೇಕಾದುದು ಮುಖ್ಯ. ಆದರೆ ಅತಿಮುಖ್ಯವಾದ ವಿಶೇಷ ಶ್ರದ್ಧೆಯಿಂದ ಮಾಡಬೇಕಾದುದು Inter village communication roads. ಇವು ಡಿಸ್ಟ್ರಿಕ್ಟ್‌ಬೋರ್ಡ್ ಅಧೀನದಲ್ಲಿದ್ದ ರಸ್ತೆಗಳು. ಜನರ ಅನುಕೂಲತೆಗೋಸ್ಕರ ಸರಕಾರ ಶೀಘ್ರವಾಗಿ ಮಾಡಬೇಕೆಂದು ಸೂಚಿಸುತ್ತೇನೆ. Inter village communication roads ಎಷ್ಟು ಮುಖ್ಯವಾಗಿದೆ ಎಂದರೆ ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ಹೋಗುವುದು ಕಷ್ಟವಾಗಿದೆ. ಚಾಮರಾಜನಗರಕ್ಕೆ ಮಂತ್ರಿಗಳು ಬಂದಾಗ್ಗೆ ನಮ್ಮ ಹಳ್ಳಿಗೆ ಅವರನ್ನು ಕರೆದುಕೊಂಡು ಬರಬೇಕಾದರೆ ಎರಡು ಮೈಲಿ ದೂರ ಅವರ ಕಾರು ನಿಂತುಹೋಯಿತು. ವ್ಯಾನಿನಲ್ಲಿ ಅವರನ್ನು ಕರೆದುಕೊಂಡು ಬರಬೇಕಾಯಿತು. ಅಂಥ ರಸ್ತೆಗಳಲ್ಲಿ ಮೋಟಾರ್‌ಕಾರ್ ತರಲು ಶಕ್ಯವಿಲ್ಲ. ಇದರಿಂದ ಅನಾನುಕೂಲವಾಗಿದೆ. ಆದುದರಿಂದ ಮರಾಮತ್ ಇಲಾಖೆಯ ಸಚಿವರು ಇದನ್ನು ಗಮನಿಸಬೇಕು. ಈ ರಸ್ತೆಗಳಲ್ಲಿ ವಾಹನ ಸಂಚಾರಕ್ಕೆ ಸಾಕಷ್ಟು ನಿಗಾ ಕೊಟ್ಟಿಲ್ಲವೆಂದು ವಿಷಾದದಿಂದ ತಿಳಿಸಬೇಕಾಗಿದೆ. ನ್ಯಾಷನಲ್ ಹೈವೇಜಿಗೆ ಕೋಟ್ಯಂತರ ರೂಪಾಯಿ ಖರ್ಚು ಮಾಡತಕ್ಕಂಥಾದ್ದು ಅಗತ್ಯ. ಪ್ರಜಾಪ್ರಭುತ್ವದಲ್ಲಿ ಅಧಿಕಾರ ವಿಕೇಂದ್ರೀಕರಣ ಮಾಡಿ ಪಂಚಾಯತಿರಾಜ್ಯ ಸ್ಥಾಪನೆ ಮಾಡಿದ್ದಾಯಿತು. ತಾಲ್ಲೂಕ್‌ಬೋರ್ಡ್ ರಚನೆಯಾಯಿತು. ರಾಜಕೀಯ ಸ್ವಾತಂತ್ರ್ಯ ದೊರೆತು ಎಲ್ಲರೂ ನಾಗರೀಕರಾಗಬೇಕು. ಈ ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಯಶಸ್ವಿಯಾಗಿ ಪಾತ್ರವಹಿಸಬೇಕು ಎಂಬ ಆಶೆ ಆಕಾಂಕ್ಷೆ ಇಟ್ಟುಕೊಂಡಿರುವುದರಿಂದ ಹಳ್ಳಿಗಾಡಿನ ಜನರಿಗೆ ಅವರ ಆವಶ್ಯಕತೆಗಳನ್ನು ಒದಗಿಸಿಕೊಡಬೇಕು. ಅಂದರೆ ಪ್ರಜಾಪ್ರಭುತ್ವ ಯಶಸ್ವಿಯಾಗುತ್ತದೆ. ಇಲ್ಲದಿದ್ದರೆ ಯಶಸ್ವಿಯಾಗಲಾರದು. ಇವತ್ತಿನ ದಿವಸ Inter village communication ರೋಡ್ಸ್ ಅಂದರೆ ಗ್ರಾಮಾಂತರ ಸಾರಿಗೆಗಳಿಗೆ ಸಾಕಷ್ಟು ನಿಗಾ ಕೊಟ್ಟಿಲ್ಲ. ಸಾರಿಗೆ ಮುಂತಾದ ಕನಿಷ್ಠ ಸೌಕರ್ಯ

ಒದಗಿಸದಿದ್ದರೆ ಪ್ರಜಾಪ್ರಭುತ್ವ ಯಶಸ್ವಿಯಾಗಲಾರದು. ಆದುದರಿಂದ ಗ್ರಾಮಾಂತರ ಸಾರಿಗೆಗೆ ಸಾಕಷ್ಟು ನಿಗಾ ಕೊಟ್ಟು ಅದಕ್ಕೆ ಹೆಚ್ಚು ಹಣ ಒದಗಿಸಿ, ಡಿಸ್ಟ್ರಿಕ್ಟ್‌ಬೋರ್ಡ್ ರಸ್ತೆಗಳನ್ನು ನಿಮ್ಮ ಇಲಾಖೆಗೆ ಸೇರಿಸಿಕೊಂಡು ಚೆನ್ನಾಗಿ ರಸ್ತೆ ಮಾಡಿಸಬೇಕು ಎಂದು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಈ ಇಲಾಖೆಯಲ್ಲಿ ಉನ್ನತ ಅಧಿಕಾರಿಗಳು ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಆದರೆ ಕೆಲವುಕಡೆ ಇರತಕ್ಕಂಥ ಅಧಿಕಾರಿಗಳು ಕೆಲಸ ಮಾಡುವುದು ಕಷ್ಟವಾಗಿದೆ. ನಮ್ಮಲ್ಲಿ ಹಣ ಒದಗಿಸುತ್ತೇವೆಂದರೆ ಹಣ ಕೊಡುವುದು ಬೇಡ ಎಂದು ಅಸಿಸ್ಟೆಂಟ್ ಎಂಜಿನಿಯರರು ಹೇಳುತ್ತಾರೆ. ಒಂದು ಭಾಗದಲ್ಲಿ ಕೆಲಸ ಮಾಡಿದರೆ, ಇನ್ನೊಂದು ಭಾಗದಲ್ಲಿ ಕೆಲಸ ಮಾಡುವದಿಲ್ಲ. ಏನಾದರೂ ಒಂದು ನೆಪ ಹೇಳುತ್ತಾರೆ. ಕೆಲಸ ಕಾರ್ಯಗಳನ್ನು ಸೇವಾ ಮನೋಭಾವನೆಯಿಂದ ಮಾಡಬೇಕು, ಶ್ರದ್ಧೆಯಿಂದ ಮಾಡಬೇಕು ಎಂದು ಅನೇಕ ಅಧಿಕಾರಿಗಳ ಮನಸ್ಸಿನಲ್ಲಿ ಇಲ್ಲವೆಂದು ಹೇಳದೆ ವಿಧಿಯಿಲ್ಲ. ನಮ್ಮ ತಾಲ್ಲೂಕಿನಲ್ಲಿ ನೀರಾವರಿ ಯೋಜನೆಯ ಕೆಲಸ ನಿಧಾನವಾಗಿದೆ. ಲಕ್ಷಾಂತರ ರೂಪಾಯಿ ಸ್ಯಾಂಕ್ಷನ್ ಆಗಿದ್ದರೂ ಕೂಡ ಕೆಲಸ ನಿಧಾನವಾಗಿ ಮಂಜೂರು ಮಾಡಿದ ಹಣ ಲ್ಯಾಪ್ಸ್ ಆಗುತ್ತದೆ. ಉದಾಹರಣೆಗಾಗಿ ಹೇಳುವದಾದರೆ ನಮ್ಮ ತಾಲ್ಲೂಕಿನಲ್ಲಿ ಯಾವ ನೀರಾವರಿ ಸೌಕರ್ಯವಿಲ್ಲ, ಎರಡು ಕೆರೆಗಳ ಯೋಜನೆಯಿಂದ 500 ಎಕರೆ ಮತ್ತು 200 ಎಕರೆ ನೀರಾವರಿಯಾಗುತ್ತದೆ.

ಇನ್ನೂರು ಎಕರೆ ಇರತಕ್ಕಂಥ ದೊಡ್ಡಮರೆಕೆರೆ ಎನ್ನುವುದು ಇದೆ. ಸುಮಾರು ಐದಾರು ವರ್ಷಗಳಿಂದಲೂ ಆ ಕೆರೆಯ ಕೆಲಸ ಪೂರ್ತಿಯಾಗಿಲ್ಲ. ಈ ವಿಷಯ ಸರ್ಕಾರಕ್ಕೂ ಗೊತ್ತಿದೆ. ಈ ಸಂಬಂಧದಲ್ಲಿ ನಾನು ಎಗ್ಸಿಕ್ಯುಟೀವ್ ಇಂಜಿನಿಯರನ್ನು ನೋಡಿದಾಗ ಆ ಕೆರೆಯ ಎಸ್ಟಿಮೇಟ್ ಮಾಡುತ್ತಿದ್ದೇವೆಂದು ಹೇಳಿದರು. ಆ ಕೆರೆಯನ್ನು ಕಟ್ಟಿದರೆ ಅಲ್ಲಿ ಸುಮಾರು ನೂರಾರು ಎಕರೆ ಇರಿಗೇಟ್ ಆಗುತ್ತದೆ. ಆ ವಿಷಯದಲ್ಲಿ ಅಧಿಕಾರಿಗಳನ್ನು ಎಷ್ಟೇ ಒತ್ತಾಯ ಮಾಡಿದರೂ ಕೂಡ ಅವರು ಯಾವ ದೃಷ್ಟಿಯಿಂದಲೋ ಏನೋ ಆ ಕೆಲಸವನ್ನು ಸಕಾಲದಲ್ಲಿ ಮಾಡದೆ ಅಶ್ರದ್ಧ ಮನೋಭಾವವುಳ್ಳವರಾಗಿದ್ದಾರೆ, ತಾತ್ಸಾರ ಮನೋಭಾವವುಳ್ಳವರಾಗಿದ್ದಾರೆ. ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ಕೊಟ್ಟು ಸಾಮಾನ್ಯ ಮನುಷ್ಯ ಅದರ ಸುಖವನ್ನು ಅದರ ಫಲವನ್ನು ಅನುಭವಿಸಲಿ ಎಂದು ಹೇಳಿದರೆ ಅದು ತಲುಪದೆ ನಿಜವಾಗಿ ಜನತೆಗೆ ತೊಂದರೆಯಾಗುತ್ತಿದೆ ಎನ್ನುವ ಮಾತನ್ನು ನಾನು ಸರ್ಕಾರದವರ ಮುಂದೆ ಹೇಳುತ್ತಿದ್ದೇನೆ. ಮರಾಮತ್ ಶಾಖೆಯ ಮಂತ್ರಿಗಳಿಗೂ ಈ ವಿಷಯ ಗೊತ್ತಿದೆ. ನಾನು ಅನೇಕ ವೇಳೆ ಅವರಿಗೆ ಈ ವಿಷಯವನ್ನು ತಿಳಿಸಿದ್ದೇನೆ. ಆ ಕೆಲಸವನ್ನು ಮಾಡುವುದಕ್ಕೆ ಸರ್ಕಾರದವರಿಗೆ ಏನು ಕಷ್ಟವಿದೆಯೋ ನನಗಂತೂ ಗೊತ್ತಿಲ್ಲ. ಆ ವಿಷಯದಲ್ಲಿ ನಾನು ಬಹಳ ಕಠಿಣವಾಗಿ ಕಾಗದವನ್ನು ಬರೆದಿದ್ದೇನೆ. ನಮ್ಮ ಮಾನ್ಯ ಸ್ನೇಹಿತರು ಮಂತ್ರಿಗಳಾಗಿದ್ದರೆ, ನಾನು ಮೆಂಬರಾಗಿದ್ದೇನೆ. ಅದು ಕೂಡ ಅವರಿಗೆ ಅಸಮಾಧಾನವಾಗುವುದಾದರೆ ನಾನು ರಾಜೀನಾಮೆಯನ್ನು ಕೊಡುತ್ತೇನೆ. ನಾವು ಜನಗಳಿಂದ ಚುನಾಯಿತರಾಗಿ ಬಂದು ಜನಗಳ ಪರವಾಗಿ, ಸಾರ್ವಜನಿಕರ ಹಿತದೃಷ್ಟಿಯಿಂದ ಕೆಲಸ ಮಾಡಬೇಕು. ಸರ್ಕಾರದಲ್ಲಿ ಅದಕ್ಕೆ ಸಂಬಂಧಪಟ್ಟ ಉನ್ನತ ಮಟ್ಟದ ಅಧಿಕಾರಿಗಳಿಂದ ಎಲ್ಲಾ ಕೆಲಸ ಕಾರ್ಯಗಳನ್ನೂ ಸ್ಯಾಂಕ್ಷನ್ ಮಾಡಿಸಿ ಕೊಟ್ಟರೂ ಕೂಡ ಅದು ಎಲ್ಲಿಗೆ ತಲುಪಬೇಕೋ ಅಲ್ಲಿಗೆ ತಲುಪದೇ ಹಾಗೇ ನಿಂತುಕೊಂಡರೆ ಅದರಿಂದ ಜನಗಳಿಗೆ ನಿರುತ್ಸಾಹವಾಗುತ್ತದೆ. ಅವರಿಗೆ ಯಾವ ಪ್ರಯೋಜನವೂ ಆಗುವುದಿಲ್ಲ. ಒಮ್ಮೆ ಜನಗಳು ತಾವು ಚುನಾವಣೆ ಮಾಡಿ ಇಲ್ಲಿಗೆ ಕಳುಹಿಸಿರತಕ್ಕ ಜನ ಕೆಲಸಕ್ಕೆ ಬಾರದ ಜನ, ಅಧಿಕಾರಿಗಳಲ್ಲಿ ಮತ್ತು ಮಂತ್ರಿಮಂಡಲದಲ್ಲಿ ಇವರಿಗೆ ಗೌರವವಿಲ್ಲ ಎನ್ನುವ ಭಾವನೆ ಬರಬಹುದು. ಅದಕ್ಕಿಂತ ಹೆಚ್ಚಾಗಿ ನಮ್ಮ ಕ್ಷೇತ್ರದಲ್ಲಿ ನೀವು ಏನು ಕೆಲಸ ಮಾಡಿದಿರಿ ಎಂದು ಜನಗಳು ಕೇಳಿದರೆ ನಿರಪರಾಧಿಗಳಾದ ನಾವು ಜನಗಳ ಮುಂದೆ ತಲೆ ಬಾಗಿಸಿ ನಿಲ್ಲಬೇಕಾಗುತ್ತದೆ. ಎಂದು ನಾನು ಹೇಳಬಯಸುತ್ತೇನೆ. ಅಧಿಕಾರಿಗಳು ಎಲ್ಲೆಲ್ಲಿ ಸರಿಯಾಗಿ ಕೆಲಸ ಮಾಡುವದಿಲ್ಲವೋ ಅಲ್ಲೆಲ್ಲಾ ಸರ್ಕಾರದವರು ಅವರಿಗೆ ಸರಿಯಾಗಿ ವಿವೇಕವನ್ನು ಹೇಳಿ ಅದು ಯಾವುದೇ ಕೆಲಸ ಆಗಿರಲಿ ಅದನ್ನು ಮಾಡುವುದಕ್ಕೆ ಹೇಗೆ ಮಾಡಬೇಕೋ, ಮತ್ತು ಯಾವ ರೀತಿ ತಹಬಂದಿಗೆ ತರಬೇಕೋ ತಂದು ಸರ್ಕಾರದವರು ಖರ್ಚು ಮಾಡುತ್ತಿರುವ ಕೋಟ್ಯಾಂತರ ರೂಪಾಯಿಗಳು ಪ್ರಜೆಗಳಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡಬೇಕು ಎಂದು ನಾನು ಈ ಖಾತೆಗೆ ಸಂಬಂಧಪಟ್ಟ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಇಂಟರ್ ಕಮ್ಯುನಿಕೇಷನ್ ರೋಡ್ಸ್, ತಾಲ್ಲೂಕು ಬೋರ್ಡು ಮತ್ತು ಡಿಸ್ಟ್ರಿಕ್ಟ್ ಬೋರ್ಡು ಆಡಳಿತದಲ್ಲಿರುವ ರಸ್ತೆಗಳು ಇವುಗಳ ವಿಷಯವನ್ನು ಹೇಳುವುದಾದರೆ ಒಂದು ತಾಲ್ಲೂಕಿನಲ್ಲಿ ಕೊನೆಯ ಪಕ್ಷ 50 ಮೈಲಿಗಳ ರಸ್ತೆಯನ್ನು ಮಾಡಬೇಕೆಂದು ಸರ್ಕಾರದವರು ಒಂದು ಕಾರ್ಯಕ್ರಮವನ್ನು ಹಾಕಿ ಕೊಂಡಿದ್ದಾರೆ. ಕೆಲವು ಕಡೆ ಒಂದು ತಾಲ್ಲೂಕಿನಲ್ಲಿ 400 ಮೈಲಿ 500 ಮೈಲಿ

(ಶ್ರೀ ಡಿ. ಎಂ. ಸಿದಯ್ಯ)

ಉದ್ದದ ರಸ್ತೆಗಳು ಆಗಿರುತ್ತವೆ, ಕೆಲವು ಕಡೆ 20-25 ಮೈಲಿ ರಸ್ತೆ ಕೂಡ ಆಗಿರುವುದಿಲ್ಲ. ಪ್ರತಿ ತಾಲ್ಲೂಕಿಗೂ ಕೊನೆಯ ಪಕ್ಷ 100 ಮೈಲಿ ರಸ್ತೆಯನ್ನು ಮಾಡಬೇಕು, 50 ಮೈಲಿ ಮಿನಿಮಮ್ ಮಾಡಬೇಕು. ಹಳ್ಳಿಗಾಡಿನ ಸ್ಥಿತಿ ತುಂಬಾ ಕೆಟ್ಟಿದೆ. ದೊಡ್ಡವರು ಹಳ್ಳಿಗಳ ಕಡೆ ಬರಬೇಕು. ಮೋಟಾರಿನಲ್ಲಿ ತಿರುಗಾಡುವವರು ಅಲ್ಲಿಗೆ ಬಂದರೆ ಅಲ್ಲಿನ ಸ್ಥಿತಿ ಅವರಿಗೆ ಚೆನ್ನಾಗಿ ಗೊತ್ತಾಗುತ್ತದೆ. ಸ್ಕೂಲು, ಸೋಷಿಯಲ್ ವೆಲ್‌ಫೇರ್ ಬೋರ್ಡ್‌ನ ಶಾಖೆಗಳು ಹೆಲ್ತ್‌ಸೆಂಟರು ಮತ್ತು ರಸ್ತೆ ಇವುಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ಹರಡಿದರೆ ಮಾತ್ರ It will be open out for the civilization ಅದಕ್ಕೋಸ್ಕರ ವಿಲೇಜ್ ಕಮ್ಯುನಿಕೇಷನ್ ರೋಡ್ಸ್ ಮತ್ತು P.W.D. ರೋಡ್ಸ್ ಮಟ್ಟಿಗೆ ತೆಗೆದುಕೊಂಡು ಆ ರಸ್ತೆಗಳಿಗೆ ಹೆಚ್ಚು ಹಣವನ್ನು ಕೊಟ್ಟು ರಸ್ತೆಗಳನ್ನು ಸುವ್ಯವಸ್ಥಿತವಾದ ರೀತಿಯಲ್ಲಿ, ಇಡಬೇಕೆಂದು ನಾನು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಆಮೇಲೆ ವಿದ್ಯುಚ್ಛಕ್ತಿ ವಿಷಯದಲ್ಲಿ ಹೇಳುವುದಾದರೆ ಈಗಾಗಲೇ ಶರಾವತಿಯ ಕೆಲಸ ಪ್ರಾರಂಭವಾಗಿದೆ, 1962ನೇ ಇಸವಿಯಲ್ಲಿ ಕರೆಂಟ್ ಕೊಡುತ್ತೇವೆಂದು ಹೇಳಿದ್ದರು. ಈಗ 64ನೇ ಇಸವಿಗೆ ಕೊಡುತ್ತೇವೆಂದು ಹೇಳುತ್ತಿದ್ದಾರೆ. 1962ನೇ ಇಸವಿಯಲ್ಲಿ ಆ ಕೆಲಸ ಮುಗಿಯದೆ ಇರುವುದಕ್ಕೆ ಸರ್ಕಾರದವರು ಅನೇಕ ಕಾರಣಗಳನ್ನು ಕೊಟ್ಟಿದ್ದಾರೆ. ಫಾರಿನ್ ಸಾಮಾನುಗಳು ಬರುವುದು ಡಿಲೇ ಆದದ್ದು, ಮಳೆಗಾಲ ಬಂದದ್ದು ಇತ್ಯಾದಿ ಕಾರಣಗಳನ್ನು ಕೊಟ್ಟಿದ್ದಾರೆ. ಏನೇ ಆದರೂ ಸಹ ಆ ಕೆಲಸ ಕಾರ್ಯಗಳು ಬಹಳ ಚುರುಕಾಗಿ ನಡೆಯಬೇಕು. ಪವರ್ ಅವಶ್ಯಕವಾಗಿ ಬೇಕೇ ಬೇಕು. ಇವೊತ್ತಿನ ದಿವಸ ನೀರಾವರಿ ಬಾವಿಗಳಿಗೆ I.P. ಸೆಟ್ಟುಗಳನ್ನು ಕೊಡುವುದರ ಜೊತೆಗೆ, ನಮಗೆ ಎಲೆಕ್ಟ್ರಿಸಿಟಿ ಬೇಕು ಎಂದು ಹಳ್ಳಿಗಳಲ್ಲಿ ಜನರ ಆಶೆ ಆಕಾಂಕ್ಷೆ ಜಾಸ್ತಿಯಾಗುತ್ತಿದೆ. ಹಳ್ಳಿಗಳಿಗೆ ದೀಪ ಬರಬೇಕು. ಬೆಂಗಳೂರು ಮತ್ತು ಮೈಸೂರು ಪಟ್ಟಣಗಳನ್ನು ನೋಡಿ ಹಳ್ಳಿಗಳಿಗೆ ಹೋದರೆ ಬೆಳಕಿನಿಂದ ಕತ್ತಲೆಗೆ ಹೋದ ಹಾಗಾಗುತ್ತದೆ. ಹಳ್ಳಿಗಳಲ್ಲಿ ಡೈನಮೋ ಇಟ್ಟುಕೊಂಡು ಎಷ್ಟೋ ಜನ ರೇಡಿಯೋ ಕೇಳುತ್ತಿದ್ದಾರೆ. ನೀರಾವರಿ ಸೌಕರ್ಯ ಬೇಕು, ಎಲೆಕ್ಟ್ರಿಸಿಟಿ ಬೇಕೆಂದು ಜನಗಳು ಸರ್ಕಾರಕ್ಕೆ ಮನವಿಗಳನ್ನು ಕಳುಹಿಸಿದ್ದಾರೆ, ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಪ್ರಾಂತ್ಯಕ್ಕೆ ಪ್ರವಾಸ ಬಂದಿದ್ದಾಗ ಸುಮಾರು ಸಾವಿರಾರು ಜನಗಳು ಅವರನ್ನು ಕಂಡು ನಮಗೆ ನೀರಾವರಿ ಸೌಕರ್ಯವನ್ನು ಒದಗಿಸಬೇಕು, ವಿದ್ಯುಚ್ಛಕ್ತಿಯನ್ನು ಒದಗಿಸಬೇಕೆಂದು ಕೇಳಿದ್ದಾರೆ. ಪ್ರತಿ ಹಳ್ಳಿಯಲ್ಲಿಯೂ ಕೂಡ ನೂರಾರು ಜನ ಸಾವಿರಾರು ಜನ ಸೇರಿ ನಮಗೆ ದೀಪಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ರೆಪ್ರೆಜೆಂಟೇಷನ್ ಕೊಟ್ಟರು. ಈಗ ತುರ್ತುಪರಿಸ್ಥಿತಿಯಾಗಿರುವುದರಿಂದ ವ್ಯವಸಾಯಕ್ಕೆ ಮಾತ್ರ ನಾವು ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆಂದು ಹೇಳಿದರು. ಶರಾವತಿಯ ಕೆಲಸ ಜಾಗ್ರತೆಯಾಗಿ ಮುಗಿದು ಅದರಿಂದ ಜನಗಳಿಗೆ ಪ್ರಯೋಜನವಾಗಬಹುದು ಎಂದು ಜನಗಳು ತಮ್ಮ ಬೇಡಿಕೆಯನ್ನು ಸರ್ಕಾರದ ಮುಂದೆ ಇಡುತ್ತಿದ್ದಾರೆ. ಹಳ್ಳಿಗಳಿಗೆ ಮುಖ್ಯವಾಗಿ ಸರ್ಕಾರದವರು ಒಂದು ರಸ್ತೆ, ಒಂದು ಆಸ್ಪತ್ರೆ ದೀಪ ಇವುಗಳನ್ನು ಒದಗಿಸಲೇಬೇಕು. ಯುದ್ಧ ಪರಿಸ್ಥಿತಿ ಮತ್ತು ತುರ್ತುಪರಿಸ್ಥಿತಿ ದೇಶದಲ್ಲಿ ಕಂಡುಬಂದಿರುವುದರಿಂದ ಹೆಚ್ಚು ಉತ್ಪಾದನೆಗೋಸ್ಕರ ಸಕ್ಕಾರದವರು ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದಾರೆ. ಬಾವಿಗೋಸ್ಕರ ಐ.ಪಿ. ಸೆಟ್ ತೆಗೆದುಕೊಳ್ಳಲು ಎನ್‌ಕಂಬರೆನ್ಸ್ ಸರ್ಟಿಫಿಕೇಟ್ ತೆಗೆದುಕೊಳ್ಳುವುದಕ್ಕೆ ಅರ್ಜಿ ಹಾಕಿದರೆ ಅದನ್ನು ತೆಗೆದುಕೊಳ್ಳಬೇಕಾದರೆ 6 ತಿಂಗಳಾಗುತ್ತಿತ್ತು. ಈಗ ಅದನ್ನು ಸರ್ಕಾರದವರು ಪರಿಹರಿಸಿ ಐ.ಪಿ. ಸೆಟ್ ತೆಗೆದುಕೊಳ್ಳಲು ಅರ್ಜಿ ಕೊಟ್ಟರೆ 8 ದಿವಸಗಳಲ್ಲಿ ಹಣ ಕೊಡಬೇಕೆಂದು ಮಾಡಿದ್ದಾರೆ. ಇದರಿಂದ ರೈತರಿಗೆ ಅನುಕೂಲವಾಗಿದೆ. ಈಗ ರೈತರು ಒಬ್ಬರಮೇಲೊಬ್ಬರು ಬಂದು ಸರ್ಕಾರಕ್ಕೆ ಅರ್ಜಿಹಾಕಿ ಬಾವಿಗಳಿಗೋಸ್ಕರ ಹಣವನ್ನು ಪಡೆಯುತ್ತಿದ್ದಾರೆ. ಹಳ್ಳಿಗಾಡಿನಲ್ಲಿ ಜನಗಳು ನಮಗೆ ಬಾವಿಗೆ ವಿದ್ಯುಚ್ಛಕ್ತಿಬೇಕು, ಮನೆಗಳಿಗೆ ವಿದ್ಯುಚ್ಛಕ್ತಿಬೇಕು ಎನ್ನುವ ಆಶೆ ಆಕಾಂಕ್ಷೆಗಳನ್ನುಳ್ಳವರಾಗಿದ್ದಾರೆ. ಜನಗಳು ಏನೇನು ಪಡೆಯದೆ ಇದ್ದರೂ ಕೇವಲ ಮನುಷ್ಯನಾಗಿ ನಾಗರೀಕನಾಗಿ ಬದುಕಬೇಕಾದರೆ ಏನು ಅಗತ್ಯವಾಗಿ ಬೇಕೋ ಅಂಥಾ ಸಾಮಾನ್ಯ ಬೇಡಿಕೆಗಳನ್ನು ಸರ್ಕಾರದವರು ಪೂರೈಸದೆ ಇದ್ದ ಪಕ್ಷದಲ್ಲಿ ಅವರಿಗೆ ನಿರಾಶೆಯುಂಟಾಗುತ್ತದೆ. ಅಂಥಾ ಸೌಕರ್ಯಗಳನ್ನು ನಾವು ಜನತೆಗೆ ಒದಗಿಸದೆ ಇದ್ದರೆ ಯಾವ ಉಪಕಾರಕ್ಕಾಗಿ ನಾವು ಇಲ್ಲಿಗೆ ಎರಡು ತಿಂಗಳು ಗಟ್ಟಲೆ ಮೀಟಿಂಗ್ ಮಾಡಿ ಲಕ್ಷಾಂತರ ರೂಪಾಯಿಗಳನ್ನು ಏತಕ್ಕೆ ಖರ್ಚು ಮಾಡಬೇಕು ? ಇವೊತ್ತಿನ ದಿವಸ ಮೈಸೂರು ಅಥವಾ ಭರತಖಂಡದ ಪ್ರತಿಯೊಬ್ಬ ಪ್ರಜೆಯೂ ಕೂಡ ಪ್ರಜಾಪ್ರಭುತ್ವದ ಸುಖ ಸಂಪತ್ತನ್ನು ಪಡೆದು ತಾನು ನಾಗರೀಕನಾಗಿ ಉತ್ತಮವಾದ ಮನುಷ್ಯನಾಗಿ ಬಾಳುತ್ತೇನೆ ಎನ್ನುವ ಒಂದು ಆಶೆ ಆತನಲ್ಲಿ ಮೂಡಿ

ಆತನು ಮನುಷ್ಯನಾಗಿ ಬದುಕಬೇಕಾದರೆ ಅವನಿಗೆ ಬೇಕಾದ ಸೌಕರ್ಯಗಳನ್ನು ಸರ್ಕಾರದವರು ಒದಗಿಸಬೇಕು. ಇವೊತ್ತು ಮಾನ್ಯ ಪಬ್ಲಿಕ್ ವರ್ಕ್ಸ್ ಶಾಖೆಯ ಮಂತ್ರಿಗಳು ತಮ್ಮ ಬೇಡಿಕೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ರಸ್ತೆಗಳು, ನೀರಾವರಿ ಯೋಜನೆಗಳು, ಮತ್ತು ಎಲೆಕ್ಟ್ರಿಸಿಟಿ ಇವುಗಳು ಬಹಳ ಪ್ರಾಮುಖ್ಯವಾದುವುಗಳು. ಇವುಗಳನ್ನು ಸರ್ಕಾರದವರು ರೈತನಿಗೆ ಒದಗಿಸಬೇಕು.

ಇನ್ನು ಕೊನೆಯದಾಗಿ ಒಂದು ಮಾತನ್ನು ನಾನು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ದೊಡ್ಡ ದೊಡ್ಡ ರಸ್ತೆಗಳನ್ನು, ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮಾಡುವುದರ ಜೊತೆಗೆ ಹಳ್ಳಿಗಾಡಿನ ಕಡೆಗೂ ಸರ್ಕಾರದವರು ಹೆಚ್ಚು ನಿಗಾ ಇಟ್ಟು ಹಳ್ಳಿಗಾಡಿನವರಿಗೂ ಅಂಥಾ ಸೌಲಭ್ಯಗಳನ್ನೂ ಒದಗಿಸಿ ಕೊಡಬೇಕು. ಹಳ್ಳಿಗಾಡಿನ ರೈತರಿಂದ ಏನು ಮನವಿಗಳು ಬರುತ್ತವೆಯೋ, ಅವರು ಏನು ಅಪೇಕ್ಷೆ ಮಾಡುತ್ತಾರೆಯೋ ಅವುಗಳ ಕಡೆ ಸರ್ಕಾರದವರು ಹೆಚ್ಚು ಶ್ರದ್ಧೆ ಹೆಚ್ಚು ವಿಶ್ವಾಸ ಹೆಚ್ಚು ನಿಗಾ ಇಟ್ಟು ಹಣವನ್ನು ಒದಗಿಸಿ ಆದನ್ನು ಅಧಿಕಾರಿಗಳು ಸರಿಯಾಗಿ ವಿನಿಯೋಗಿಸುವಂತೆ ಮತ್ತು ಸರಿಯಾಗಿ ಕೆಲಸ ಕಾರ್ಯಗಳನ್ನು ಮಾಡುವಂತೆ ಬಹಳ ಮುಖ್ಯವಾಗಿ ಸರ್ಕಾರದವರು ನೋಡಿಕೊಳ್ಳಬೇಕು. ಮಾರ್ಚಿ ತಿಂಗಳು ಒಂದೇ ತಿಂಗಳಿನಲ್ಲಿ ಲಕ್ಷಾಂತರ ರೂಪಾಯಿಗಳ ರಸ್ತೆಗಳನ್ನು ಮಾಡಬೇಕು, ಮತ್ತು ಮುಖ್ಯವಾದ ಇತರೆ ಕೆಲಸಗಳನ್ನು ಮಾಡಬೇಕು ಎಂದು ಎಷ್ಟೇ ಶ್ರದ್ಧೆಯನ್ನು ವಹಿಸಿದರೂ ಕೂಡ ಎಷ್ಟೋ ಹಣ ಲ್ಯಾಪ್ಸಾಗುತ್ತದೆ. ಆದ್ದರಿಂದ ಎರಡು ತಿಂಗಳು ಮುಂಚಿತವಾಗಿ ಆ ಕೆಲಸಗಳನ್ನು ಮಾಡಿದ ಪಕ್ಷದಲ್ಲಿ ನಮ್ಮ ಕ್ಷೇತ್ರಗಳ ಕೆಲಸ ಕಾರ್ಯಗಳಿಗೆ ಎಷ್ಟು ಹಣವನ್ನು ಒದಗಿಸಿರುತ್ತಾರೆಯೋ ಅಷ್ಟು ಹಣವನ್ನೂ ಸಹ ಖರ್ಚು ಮಾಡಿದರೆ ಅದರಿಂದ ಜನಗಳಿಗೆ ಅನುಕೂಲವಾಗುತ್ತದೆ ಎಂದು ನಾನು ಸರ್ಕಾರದ ಮುಂದೆ ಬಿನ್ನವಿಸಿ ಕೊಳ್ಳುತ್ತೇನೆ. ಸರ್ಕಾರದವರು ಏನೇನು ಕೆಲಸ ಕಾರ್ಯಗಳನ್ನು ಮಾಡಬೇಕೆಂದು ಉದ್ದೇಶಪಟ್ಟಿರುತ್ತಾರೆಯೋ ಮತ್ತು ಹಣವನ್ನು ಒದಗಿಸಿರುತ್ತಾರೆಯೋ ಅದೆಲ್ಲವನ್ನೂ ಮಾಡಿ ಈ ಮರಾಮತ್ತು ಇಲಾಖೆಯಲ್ಲಿ ಗತಿಸಿದ ಸರ್ ಎಂ. ವಿಶ್ವೇಶ್ವರಯ್ಯನವರು ಏನು ಒಂದು ಅದ್ಭುತ ಕೆಲಸವನ್ನು ಮಾಡಿ ಒಂದು ಒಳ್ಳೆಯ ಹೆಸರನ್ನು ಸಂಪಾದನೆಮಾಡಿದ್ದಾರೋ ಅದನ್ನು ಉಳಿಸಿಕೊಂಡು ಲೋಕೋಪಯೋಗಿ ಖಾತೆ ಎಂದು ಏನು ಒಂದು ಒಳ್ಳೆಯ ಹೆಸರಿದೆ ಅದನ್ನು ಉಳಿಸಿಕೊಂಡು ನಮ್ಮ ದೇಶಕ್ಕೆ ಕೀರ್ತಿಯನ್ನು ತರುತ್ತೀರೆಂದು ನಂಬಿ ಈ ಲೋಕೋಪಯೋಗಿ ಶಾಖೆಯ ಬೇಡಿಕೆಗೆ ನಾನು ಮನಸಾರೆ ಒಪ್ಪಿ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, ಎಷ್ಟು ಹಣ ಖರ್ಚುಮಾಡುತ್ತೇವೆಂತಾ ಇದ್ದಿರೋ ಅದರ ಲೆಕ್ಕ ಇಟ್ಟುಕೊಂಡು, ಕೆಲಸ ಎಷ್ಟುವೇಗವಾಗಿ, ಉತ್ತಮವಾಗಿ ಆಗುತ್ತಿದೆ ಅನ್ನುವುದನ್ನು ಲೆಕ್ಕ ಹಾಕಿಕೊಂಡರೆ, ಈ ಹೊಗಳಿಕೆ ತೆಗಳಿಕೆಗಳನ್ನು ಒಂದು ಕಡೆ ಇಟ್ಟರೆ, ಮಾಡಬೇಕಾದ ಕೆಲಸ ಮಾಡಿದ್ದಾರೆಯೇ ಎನ್ನುವುದು ಅರ್ಥವಾಗುತ್ತದೆ. 64,49,21,000 ರೂಪಾಯಿ ಖರ್ಚುಮಾಡುತ್ತೀರ. ಲೋಕೋಪಯೋಗಿ ಖಾತೆಯವರು 31, 48, 49, 29, 30, 45, 46, 43, 47, 32, 50 ಈ ಡಿಮ್ಯಾಂಡುಗಳಿಗೆ ರಾಜ್ಯದಲ್ಲಿರುವ ಹಣದಲ್ಲಿ ಮುಕ್ಕಾಲು ಭಾಗವನ್ನು ಖರ್ಚು ಮಾಡುತ್ತಾರೆ. ಇಷ್ಟು ಅಗಾಧವಾದ ಹಣಖರ್ಚುಮಾಡುವಾಗ ಕೆಲಸ ಎಷ್ಟು ವೇಗವಾಗಿ ಇರಬೇಕು, ಎಷ್ಟು ತ್ವರಿತವಾಗಿ ಕೆಲಸ ಮಾಡಬೇಕು. ಎಷ್ಟರಮಟ್ಟಿಗೆ ಕೆಲಸವಾಗಿ ದೇಶದ ಅಭ್ಯುದಯ, ಕಲ್ಯಾಣವಾಗಿರಬೇಕು, ಒಬ್ಬ ಅಧಿಕಾರಿಯನ್ನು ತೆಗಳಬೇಕೋ, ಹೊಗಳಬೇಕೋ ಅನ್ನುವುದು ಬೇಡ. ಅಧಿಕಾರಿಗಳನ್ನು ಹೊಗಳಿದರೆ ತೆಗಳಿದರೆ ರಾಜ್ಯದ ಕಲ್ಯಾಣವಾಗುವುದಿಲ್ಲ. ಅಧಿಕಾರಿಗಳು ನಮ್ಮ ಊರಿನವರು ಎಂದು ತಿಳಿದುಕೊಂಡು ಕೆಲಸಮಾಡಬೇಕು.

ಒಟ್ಟಿನಲ್ಲಿ ಈ ಲೋಕೋಪಯೋಗಿ ಖಾತೆಗೆ ಕೊಟ್ಟಿರತಕ್ಕಂಥ ಹಣವನ್ನು ಖರ್ಚು ಮಾಡುತ್ತೇವೆಂದು ಹೇಳುತ್ತಾರೆ ಇದರಲ್ಲಿ ರಾಜಕೀಯ ಇಲ್ಲವೆಂದು ನಾನು ತಿಳಿದುಕೊಂಡಿಲ್ಲ. ಈ ಬಜೆಟ್ಟಿನ ಬಗ್ಗೆ ಮಾತನಾಡುತ್ತಾ ಶ್ರೀ ಕಡಿದಾಳ್ ಮಂಜಪ್ಪನವರು, ಹೋದ ವರ್ಷ ಬಡ್ಜೆಟ್ ತಯಾರುಮಾಡಿದ್ದನ್ನೂ ಈ ವರ್ಷ ತಯಾರುಮಾಡಿದ್ದನ್ನೂ ನೋಡಿದರೆ ಇದರಲ್ಲಿ ಏನೋ ಗುಪ್ತ ಮನೋಭಾವ ಅಡಕವಾಗಿದೆ, ಯಾವ ಯಾವ ಕ್ಷೇತ್ರಕ್ಕೆ ಎಷ್ಟೆಷ್ಟು ಖರ್ಚುಮಾಡಬೇಕು, ಗುಂಪು ಗೂಂಪಿಗೂ ಇಷ್ಟಿಷ್ಟು ಉಪಯೋಗ ಬೇಕು ಎಂಬ ಉದ್ದೇಶವನ್ನು ಸರ್ಕಾರ ಮನಸ್ಸಿನಲ್ಲಿಟ್ಟುಕೊಂಡು ಈ ರೀತಿ ಆಯವ್ಯಯ ಅಂದಾಜನ್ನು ತಯಾರಿಸಿದೆ ಅನ್ನುವ ರೀತಿಯಲ್ಲಿ ಹೇಳಿದರು. ಇದರಲ್ಲಿ ಅದು ಇಲ್ಲ ಅಂತ ಹೇಳುವ ಸಾಮರ್ಥ್ಯ ನನಗಿಲ್ಲ. ಅವರು ಹೇಳಿದ್ದು ನೂರಕ್ಕೆ ನೂರರಷ್ಟು ದಿಟ. ನಿಮ್ಮ ಕೈನಲ್ಲಿ ದುಡ್ಡು ಕೊಡುವಾಗ, ನೀವು ಬಜೆಟ್ ತಯಾರುಮಾಡುವಾಗ ಬೇರೆ ಬೇರೆಯಾಗಿ ಮೈನರ್ ಇರಿಗೇಷನ್ನಿಗೆ ಎಷ್ಟು, ಎಲೆಕ್ಟ್ರಿಸಿಟಿಗೆ ಎಷ್ಟು, ರಸ್ತೆಗಳು, ಬ್ರಿಡ್ಜ್‌ಗಳು ಮುಂತಾದುವುಗಳಲ್ಲಿ ಯಾವು ಯಾವುದರಮೇಲೆ ಎಷ್ಟೆಷ್ಟು ಹಣ ಖಚಿತವಾಗಿ ಖರ್ಚಾಗುತ್ತದೆ, ಇವುಗಳಮೇಲೆ ಎಸ್ಟಿಮೇಟೆಷ್ಟು, ಎಷ್ಟು ಪೂರೈಸುತ್ತೀರ ? ಅನ್ನುವುದನ್ನು ಹೇಳದೆ,

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಎಲ್ಲಾಸೇರಿಸಿ ತಯಾರಿಸಿದ್ದೀರಿ. ನಾನು 1953ರಲ್ಲಿ ಅಸೆಂಬ್ಲಿಗೆ ಬಂದಾಗಿನಿಂದ ಬಜೆಟ್ಟುಗಳನ್ನು ನೋಡುತ್ತಿದ್ದೇನೆ. ಇದರಲ್ಲಿ ಲೇಟೆಸ್ಟ್ ಕೆಲಸಗಳಿವೆಯೇ ಹೊರತು ಅದಕ್ಕಿಂತ ಮುಂಚಿನವು ಬಜೆಟ್ಟಿನಲ್ಲಿ ಎಲ್ಲಿಯೂ ಕಾಣುತ್ತಿಲ್ಲ. ಇದರಲ್ಲಿ ಸ್ವಲ್ಪ ಯೋಚನೆ ಮಾಡಿದರೆ ಪ್ರತಿಭಾವಂತರು, ಪ್ರತಿಷ್ಠಾವಂತರು, ಅಥವಾ ಇನ್ಯಾರಾದರೂ ದೊಡ್ಡ ಮನುಷ್ಯರು ಹೇಳಿದರೆ ಆ ಕೆಲಸ ನೋಡಿಕೊಳ್ಳುತ್ತೀರ ಅಂತ ಕಾಣುತ್ತೆ. ನಮ್ಮ ಮಾನ್ಯ ಸ್ನೇಹಿತರಾದ ಶ್ರೀ ಸಿದ್ಧಯ್ಯನವರು ಬಹಳ ಎಚ್ಚರಿಕೆಯಿಂದ ಸರ್ಕಾರದ ಕಣ್ಣನ್ನು ತೆರಸತಕ್ಕಂಥ ರೀತಿಯಲ್ಲಿ ಮಾತನಾಡಿದರು. ಅಧಿಕಾರಿಗಳು ಲೊಪದೋಷ ಮಾಡುತ್ತಿದ್ದರೆ, ಅವನ್ನು ಸರಿಮಾಡಿ ಅಂತ ಹೇಳಿದರು. ನಿಮಗೆ ಒಂದು ಖಾತೆ ಕೊಟ್ಟಿದ್ದಾರೆ. ನೀವು ಎಷ್ಟು ಬಿಲ್ಡಿಂಗ್, ಮಾಡಬಹುದು, ಎಷ್ಟು ಸೇತುವೆಗಳಾಗುತ್ತವೆ, ಎಷ್ಟು ರಸ್ತೆ ಆಗುತ್ತದೆ, ಕಾಂಕ್ರೀಟ್ ಎಷ್ಟಕ್ಕೆ ಹಾಕುತ್ತೀರ, ಆಸ್‌ಫಾಲ್ಟ್ ಎಷ್ಟಕ್ಕೆ ಮಾಡುತ್ತೀರ, ಎಲ್ಲೆಲ್ಲಿ ಮಾಡುತ್ತೀರ ಅನ್ನುವುದನ್ನು ಸ್ವಲ್ಪ ಪ್ರತ್ಯೇಕವಾಗಿ ತೋರಿಸುತ್ತೀರಾ ?

ರಸ್ತೆ, ಸೇತುವೆ, ಬಿಲ್ಡಿಂಗುಗಳಿಗಾಗಿ ಒಂದು ಪ್ರತ್ಯೇಕ ಮಂತ್ರಿ ಜಾಗವಿದೆಯೋ ಗೊತ್ತಿಲ್ಲ. ನಾವು ಹೋದ ಸಾರಿಯೇ ಹೇಳಿದೆವು. ಎಮರ್ಜನ್ಸಿ ಬಂದುಬಿಟ್ಟಿತು. ರಸ್ತೆ, ಬಿಲ್ಡಿಂಗ್, ಬ್ರಿಜ್‌ಸ್ ಕಟ್ಟುವುದನ್ನು ನಿಲ್ಲಿಸಿಬಿಡಿ, ಆಹಾರ ಬೆಳೆಯುತಕ್ಕಂಥ ಮೈನರ್ ಇರಿಗೇಷನ್ನಿಗೆ ಜಾಸ್ತಿ ಗಮನಕೊಟ್ಟು ಆಹಾರ ಜಾಸ್ತಿ ಉತ್ಪನ್ನ ಮಾಡಬೇಕು. ಎಲೆಕ್ಟ್ರಿಸಿಟಿ ಜಾಸ್ತಿ ಪ್ರೊಡ್ಯೂಸ್ ಮಾಡಬೇಕು. ಅದನ್ನು ಹಳ್ಳಿ ಹಳ್ಳಿಗೆ ಹಂಚಬೇಕು. ರಾಗಿ, ಭತ್ತ, ಬೆಳೆಯಬೇಕು ಎಂದು ಹೇಳಿದೆವು. ಹಾಗೆಯೇ ಮುಖ್ಯಮಂತ್ರಿಗಳು ಒಂದು ಚಾರ್ಟ್‌ಹಾಕಿ ಅದರಂತೆ ಕೆಲಸ ನಡೆಯುವಂತೆಮಾಡಿ, ನೀವು ಒಂದು ಸೂಪರ್‌ವೈಸರಿ ಕಂಟ್ರೋಲ್ ಕೂಡ ಇಟ್ಟುಕೊಂಡು ಇರಿ ಎಂದು ಪ್ರಾರ್ಥನೆ ಮಾಡಿಕೊಂಡೆವು. ಮುಖ್ಯಮಂತ್ರಿಗಳು P.W.D. ಮಂತ್ರಿಗಳೂ ಆಗಿರುವುದರಿಂದ, P.W.D. ಮಂತ್ರಿಗಳಿಗೆ ಏನೇನೂ ಕೆಲಸವಿಲ್ಲ. ಆ ಮಂತ್ರಿಗಳಿಗೇ P.W.D. ಕೆಲಸವನ್ನೆಲ್ಲಾ ವಹಿಸಿಬಿಡಿ. ಇಷ್ಟು ಹಣದ ಜವಾಬ್ದಾರಿಹೊತ್ತು, ನಿಮ್ಮಲ್ಲಿರತಕ್ಕಂಥ ಸಣ್ಣ ಪುಟ್ಟ ವ್ಯಾಜಗಳನ್ನು ಬಗೆಹರಿಸಿಕೊಂಡು, ಯಾರಿಗೆ ಏನೇನು ಕೊಡಬೇಕೆಂದು ತಲೆ ಕೆಡಿಸಿಕೊಂಡು, ಈ ಖಾತೆಯ ಹಣ ಹಂಚುವುದಕ್ಕೆ ವೇಳೆ, ಅವಕಾಶವೆಲ್ಲಿದೆ ? ಲೋಕೋಪಯೋಗಿ ಖಾತೆಯನ್ನು ಸಂಪೂರ್ಣವಾಗಿ P.W.D. ಮಂತ್ರಿಗಳಿಗೇ ಬಿಟ್ಟುಕೊಡಿ. ಮುಖ್ಯಮಂತ್ರಿಗಳು P.D.W. ಮಂತ್ರಿಗಳೂ ಅಂದರೆ ನನಗೆ ಅರ್ಥವಾಗುವುದಿಲ್ಲ. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಗಮನಿಸಬೇಕು.

ಚೀಣಾದಿಂದ ಒದಗಿದ ಎಮರ್ಜನ್ಸಿ ಹೋಗಿಬಿಟ್ಟಿತು ಅಂದು ನೀವು ತಿಳಿದುಕೊಂಡ ಹಾಗಿದೆ. ಅದು ದೂರವಾಗಿಲ್ಲ, ಹಿಂದಿಗಿಂತ ಹತ್ತಿರ ಬರುತ್ತಿದೆ. ಅದಕ್ಕೋಸ್ಕ ಎರಚ್ಚರಿಕೆಯಿಂದ ಇರಬೇಕೆಂದು, ಎಂಟು ದಿವಸಗಳ ಕೆಳಗೆ ಪ್ರಧಾನ ಮಂತ್ರಿಗಳು ಹೇಳಿದರು. ಇಂಥ ಪರಿಸ್ಥಿಗೆ ಏನು ಮಾಡಬೇಕು : October, November, December, January, February, March ಆರು ತಿಂಗಳು ಆಗಿಹೋಯಿತು. ಆಹಾರೋತ್ಪತ್ತಿ ಜಾಸ್ತಿ ಮಾಡುತ್ತೇವೆಂದು ಹೇಳಿದ್ದಿರಿ. ಅದಕ್ಕೆ ಎಷ್ಟು ಬಾವಿ ತೆಗಿಸಿದಿರಿ, ಎಷ್ಟು ಪಿಕ್‌ಅಪ್ ಹಾಕಿದಿರಿ, ಕೆರೆಕಟ್ಟೆಗಳು, ರಸ್ತೆ ಎಷ್ಟು ಮಾಡಿದಿರಿ, ಎಷ್ಟು sanction ಆಗಿದೆ, ಎಷ್ಟಕೆ ಎಸ್ಟಿಮೇಟ್ ಮಾಡಿದ್ದೀರಿ, ಮಾಡತ್ತಾ ಇದ್ದೀರಿ, ಎಮರ್ಜನ್ಸಿಗೋಸ್ಕರ ಎಷ್ಟು sanction ಮಾಡಿದ್ದೀರ, ಅವುಗಳನ್ನು ಯಾವಾಗ ಪೂರೈಸುತ್ತೀರ, ಈ ಅಂಶಗಳಿಗೆಲ್ಲ ತಾವು ಸರಿಯಾದ ರೀತಿಯಲ್ಲಿ ಉತ್ತರ ಕೊಡುತ್ತೀರಾ ! ಮೈನರ್ ಇರಿಗೇಷನ್ ಕೆಲಸ ಏನಾದರೂ ಒಂದು ರೀತಿಯಲ್ಲಿ ವೇಗದಿಂದ ಚಲನೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರ ? ನನಗಾದರೂ ಅನ್ನಿಸುತ್ತದೆ : ನಾವು ಇಲ್ಲಿ ಬೇಕಾದಷ್ಟು ಮಾತನಾಡುತ್ತೇವೆ, ನೀವೂ ಅದಕ್ಕೆ ಉತ್ತರ ಕೊಡುತ್ತೀರ, ಇಬ್ಬರೂ ಹೊರಟು ಹೋಗುತ್ತೇವೆ, ಅದರಿಂದ ಏನೂ ಉಪಯೋಗವಾಗದೆ ನಾವೂ ನೀವೂ ದುಃಖ ಪೀಡಿತ ಸನ್ನಿವೇಶ ದೇಶದಲ್ಲಿ ತರುತ್ತೇವೆ. ಲೋಕೋಪಯೋಗಿ ಖಾತೆಯವರು ಹೆಚ್ಚು ಆಹಾರ ಬೆಳೆಯುವುದಕ್ಕೆ ಎಷ್ಟು ಕೆರೆಗಳನ್ನು ರಿಪೇರಿ ಮಾಡಿದ್ದೀರ, ಮತ್ತು ಇಂಥ ಬೇರೆ ಸೌಕರ್ಯಗಳನ್ನು ಎಷ್ಟು ವೇಗದಿಂದ ಒದಗಿಸಿ ಕೊಟ್ಟಿದ್ದೀರ ? ನಮ್ಮ ಮೈಸೂರಿನಲ್ಲ ಏಳು ಎಕರೆ ಮಾತ್ರ ಕರಿಭೂಮಿ ಇದ್ದರೆ. ಆಂಧ್ರದಲ್ಲಿ 24 ಎಕರೆ, ಮದ್ರಾಸಿನಲ್ಲಿ 42 ಎಕರೆ, ಕೇರಳದಲ್ಲಿ ಇನ್ನೆಷ್ಟೇ ಎಕರೆ ಇದೆ ಎಂದು ಹೇಳುತ್ತೀರೇ ಹೊರತು, ನೀವು ಏನು ಮಾಡಿದ್ದೀರ ? ನಿಮ್ಮ ಕಾಂಗ್ರೆಸ್ ಸರ್ಕಾರವೇ ಅಲ್ಲಿಯೂ ಇರುವುದು, ಇಲ್ಲಿಯೂ ಇರುವುದು. ಅಲ್ಲಿಯೂ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ, ಇಲ್ಲಿಯೂ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಇಲ್ಲಿಯೂ Chief Engineer, Superintending Engineers, Executive Engineers, ವಗೈರೆ ಇಟ್ಟುಕೊಂಡು, ಅತಿ ವೇಗದಲ್ಲಿ ಏಕೆ ಹೋಗಲಿಲ್ಲ ? ಕೊನೆಯ ಪಕ್ಷ 100 ಎಕರೆಗೆ 20 ಎಕರೆಯಾದರೂ ನೀರಾವರಿ ಸಾಗುವಳಿಗೆ ಬಂದಿದೆಯೇ ? ಬರದಿದ್ದರೆ, ಏಕೆ ಮಾಡಿಸಲಿಲ್ಲ ? over-night, 5 ಸಾವಿರ ಪಂಪುಸೆಟ್ ಹಂಚುತ್ತೇವೆ, 5 ಸಾವಿರ ಬಾವಿ ತೋಡಿಸು

ತ್ತೇವೆ, ಕೇಂದ್ರ ಸರ್ಕಾರದಿಂದ ಒಂದು ಕೋಟಿ ರೂಪಾಯಿ ತಂದು ಕೊಡುತ್ತೇವೆಂದು, ಪ್ರಿಂಟ್ ಮಾಡಿಸಿ ಹೇಳುತ್ತೀರ. ಈ ಎಲ್ಲಾ ಭಾಷಣಗಳನ್ನು ಕೇಳುವುದರಿಂದ ಏನು ಪ್ರಯೋಜನ ? ಒಂದು ಲಕ್ಷ ಟನ್ ಹೆಚ್ಚಿಗೆ ಆಹಾರ ಬೆಳೆಯುವುದಕ್ಕೆ ಏನಾದರೂ ಮಾರ್ಗ ಮಾಡಿದ್ದೀರಾ ! ನಿಜವಾಗಿಯೂ ಇದು ಮೈಸೂರಿನ ದುರ್ದೈವ ! ಲೋಕೋಪಯೋಗಿ ಖಾತೆ ಸರಿಯಾದ ರೀತಿಯಲ್ಲಿ ಹೋಗುತ್ತಾ ಇಲ್ಲ. ಯಾವ ಅಧಿಕಾರಿಯನ್ನು ತೆಗೆಯಬೇಕು, ಯಾರನ್ನು promote ಮಾಡಬೇಕು, ಯಾರನ್ನ demote ಮಾಡಬೇಕು ಅಂತಹೇಳಿ ಇದರಲ್ಲಿ ನಿಮ್ಮ ಕಾಲ ಹೋಗುತ್ತಿದೆಯೇ ವಿನಾ ಅಧಿಕಾರಿಗಳನ್ನು wipe ಮಾಡಿ. ಅವರುಗಳಿಂದ ಕೆಲಸ ತಗೆದುಕೊಂಡು, ಇಲಾಖೆಯನ್ನು ಸರಿಯಾಗಿ ನಡೆಸಿಕೊಂಡು ಹೋಗುವುದರಲ್ಲಿ ವಿನಿಯೋಗವಾಗುವುದಿಲ್ಲ, ದೇಶ ಕಲ್ಯಾಣವಾಗತಕ್ಕಂಥ ಕೆಲಸ ಮಾಡುವ ಮಾರ್ಗದಲ್ಲಿ ನೀವು ಕುಂಟಿದ್ದೀರ ಅಂದರೆ, ಅದು ಸೋಜಿಗದ ಮಾತಲ್ಲ. ನೀವು ವಯಸ್ಸಿನಲ್ಲಿ ಚಿಕ್ಕವರು.

Mr. SPEAKER.—The age of the Minister does not come in.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದನ್ನು ಯಾವ Context ನಲ್ಲಿ ಹೇಳಿದನೆಂಬುದನ್ನು ತಾವು ಅರ್ಥಮಾಡಿಕೊಳ್ಳಬೇಕು. ವಯಸ್ಸಿನಲ್ಲಿ ಚಿಕ್ಕವರಾಗಿರುವುದರಿಂದ, ಬುದ್ಧಿ ಅಷ್ಟು ಚುರುಕಾಗಿ ಓಡುತ್ತದೆ, ಅಷ್ಟೂ ಭಾರ ಹೊರಬಲ್ಲರು. ಅದಕ್ಕೋಸ್ಕರ ರಾತ್ರಿ ಹಗಲೂ ದುಡಿಯಬಲ್ಲರು.

Mr. SPEAKER.—Whatever may be the reason, the age of the Minister cannot come in during the discussion of Budget.

Sri C. J. MUCKANNAPPA.—May I submit that we are giving a huge amount of money into the hands of the P.W.D. Minister ? Unless he is wise and rich in experience......

Mr. SPEAKER.—Please come to the subject and speak.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ರೈಟ್. ಅದಕ್ಕೋಸ್ಕರವಾಗಿ P.W.D. ಮಂತ್ರಿಗಳಿಗೆ ನಾನು ಹೇಳುತ್ತಾ ಇದ್ದೇನೆ : ಚೀಫ್ ಮಿನಿಸ್ಟರಿಗೆ ಕೇಳಿ : ''ಖಾತೆ ಎಲ್ಲಾ ಕೊಡಿ, ಎಲ್ಲಾ ಖಾತೆ ವಹಿಸಿಬಿಡಿ. ಹಾಗಾಗದಿದ್ದರೆ ನನಗೆ ಏನೊಂದೂ ಕೊಡಬೇಡಿ, ನನಗೆ ಸಂಬಳ ಸಾಕು'', ಎಂದು. ಇಲ್ಲದೆ ಹೋದರೆ ನಾನು ಹೇಳುತ್ತೇನೆ, ನೀವು ದೇಶಕ್ಕೆ ನ್ಯಾಯ ಮಾಡದೆ ಹೋದರೆ ದೇವರಿಗೆ ಉತ್ತರ ಹೇಳಬೇಕಾಗುತ್ತದೆ. ದೇವರು ''ನೀನು P.W.D. ಮಂತ್ರಿಯಾಗಿ ಏನೇನು ಮಾಡಿದೆ'' ಎಂದು ಕೇಳುತ್ತಾನೆ ದೇವರು ಅವನ ಬುಕ್ ತೆಗೆದುಕೊಂಡರೆ, ಅವನ ಕೈಯಲ್ಲಿ ನೀವು ಮಾಡಿದ್ದೆಲ್ಲಾ ಇರುತ್ತದೆ. ಅದಕ್ಕೋಸ್ಕರ, ಆದ್ದರಿಂದ ನಿಮ್ಮ ಕೈಲಿ ಕೊಟ್ಟಂಥ ಹಣದಿಂದ ಜನಗಳಿಗೆ ಉಪಯೋಗವಾಗಲು ಎಲ್ಲಾ ಯೋಜನೆಗಳನ್ನು implement ಮಾಡುವುದಕ್ಕೆ ಪ್ರಯತ್ನ ಮಾಡಬೇಕು.

Mr. SPEAKER.—The House will now rise and meet tomorrow at 1 p. m. and the Hon'ble Member will have only ten more minutes to speak.

The House adjourned at Six of the Clock to meet again at one of the Clock on Tuesday, the 19th March 1963.

THE
MYSORE LEGISLATIVE ASSEMBLY
DEBATES

OFFICIAL REPORT

OF THE

PROCEEDINGS OF THE TWENTY-FIRST DAY

OF THE

THIRD SESSION

TUESDAY, 19TH MARCH 1963

Vol. III—No. 21

MYSORE LEGISLATURE LIBRARY.
BANGALORE.

BANGALORE :
PRINTED BY THE DIRECTOR OF PRINTING, STATIONERY AN
PUBLICATIONS AT THE GOVERNMENT PRESS
1963

Price : 25 nP.

CONTENTS

PAGES

Starred Questions and Answers ... 1441—1461

Short Notice Questions and Answers ... 1462—1466

Questions for answers on the day (but not taken up) ... 1466—1467

Budget Estimates for 1963-64—Demands for Grants—
Demand No. 31-50. Public Works—(Debate not concld.) 1467—1500

MYSORE LEGISLATURE LIBRARY, BANGALORE.

MYSORE LEGISLATIVE ASSEMBLY

TWENTY-FIRST DAY

Tuesday, 19th March 1963.

The House met in the Assembly Hall, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Disforestment of forest land in North Kanara District for residential purposes.

Q.*—160. **Smt. V. V. MIRJANKAR (Kumta).—

Will the Government be pleased to state :—

(*a*) whether they have received any proposals from the District of North Kanara of disforestment of forest lands for residential purposes ;

(*b*) the policy of the Government regarding the same ?

A.—**Sri B. RACHAIAH** (Minister for Forests and Fisheries).—

(*a*) Yes.

(*b*) According to the policy laid down by Government, the Deputy Commissioner, North Kanara, is competent to order the disforestment of 5 acres for housing purposes in consultation with the Forest Department, and more than 5 acres will be sanctioned by Government. Also, as per orders in vogue, an area of 10 guntas in each individual case out of Betta S Nos. can be granted for constructing residential purposes.

Smt. V. V. MIRJANKAR.—What is the area so far released by Government in each of the taluks of Karwar District ?

Sri B. RACHIAH.—In Karwar taluk 80 acres 36 guntas ; in Ankola 28 acres 11 guntas ; Yellapur 16 acres 20 guntas ; Mundgod 48 acres 5 guntas ; Banavar 109 acres 20 guntas and Kumta 39 acres 36 guntas.

ಶ್ರೀಮತಿ ವಿ. ವಿ. ಮಿರ್ಜಾಂಕರ್.—ಈ ಜಮೀನನ್ನೆಲ್ಲಾ ಈಗ ಡಿಸ್ಟ್ರಿಬೂಟ್ ಮಾಡಿದ್ದಾರೆಯೇ ?

Sri B. RACHIAH.—This has been referred to the Forest Settlement Officers to disforest the area and fix the boundaries. In some cases, distribution has taken place.

ಶ್ರೀಮತಿ ವಿ. ವಿ. ಮಿರ್ಜಾಂಕರ್.—ಹರೆಹಾಳ್ ಗ್ರಾಮದ 309ನೇ ಸರ್ವೆ ನಂಬರಿನಲ್ಲಿ ಹರಿಜನರು ಒಂದು ಪ್ಲಾಟನ್ನು ಕೇಳಿದ್ದರು. ಅವರಿಗೆ ಅದನ್ನು ಡಿಸ್ಟ್ರಿಬ್ಯೂಟ್ ಮಾಡಿದ್ದಾರೆಯೆ ?

ಶ್ರೀ ಬಿ. ರಾಚಯ್ಯ.—ತಾವು ಕಳುಹಿಸಿದ್ದ ಪ್ರಶ್ನೆ ಜನರಲ್ ಸ್ವಭಾವದಾಗಿತ್ತು. ಇದರಲ್ಲಿ ಇಂಡಿವಿಜಿಯಲ್‌ಗಳ ಪ್ರಶ್ನೆ ಉದ್ಭವಿಸುವುದಿಲ್ಲ. ತಮಗೆ ಆ ವಿಚಾರ ಬೇಕಾಗಿದ್ದರೆ ಪ್ರತ್ಯೇಕವಾಗಿ ಬರೆದು ಅದನ್ನು ತರಿಸಿಕೊಡುತ್ತೇನೆ.

ಶ್ರೀ ಎಸ್. ಪಿ. ಫಾಯದೆ.—ನಮ್ಮ ಕಡೆಗಳಲ್ಲಿ ಅದರಲ್ಲೂ ಅಂಕೋಲಾದಲ್ಲಿ ವಸತಿ ಸೌಕರ್ಯವಿಲ್ಲದೆ ಜನರಿಗೆ ಬಹಳ ತೊಂದರೆಯಾಗಿರತಕ್ಕ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ರಾಚಯ್ಯ.—ಕೆಲವು ಕಡೆ ತೊಂದರೆ ಇದೆ ಎಂದು ಸರ್ಕಾರದವರಿಗೂ ತಿಳಿದುಬಂದಿದೆ. ಅದಕ್ಕಾಗಿಯೇ ಈಗ ಫಾರೆಸ್ಟ್ ಪ್ರದೇಶದಿಂದ ಜಮೀನನ್ನು ಸೈಟುಗಳಿಗಾಗಿ ರಿಜರ್ವ್ ಮಾಡಿಕೊಳ್ಳಲಾಗಿದೆ.

ಶ್ರೀ ಎಸ್. ಪಿ. ಫಾಯದೆ.— ಗ್ರಾಮ ಠಾಣದ ಪ್ರದೇಶಕ್ಕೆ ಬೇಗ ಜಮೀನು ಬಿಟ್ಟುಕೊಡಲು ಏನು ಕ್ರಮ ಕೈಗೊಂಡಿದ್ದಾರೆ ?

ಶ್ರೀ ಬಿ. ರಾಚಯ್ಯ.—ಐದು ಎಕರೆಗಳಿಗೆ ಕಡಮೆ ಪ್ರದೇಶವಿರತಕ್ಕದ್ದನ್ನು ಡಿ. ಸಿ. ಅವರು ಮತ್ತು ಫಾರೆಸ್ಟ್ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳೂ ಅಲ್ಲೇ ಕನ್ಸಲ್ಟ್ ಮಾಡಿ ವಿಲೇವಾರಿ ಮಾಡಬಹುದೆಂದು ತಿಳಿಸಿದೆ. ಐದು ಎಕರೆಗೆ ಮೇಲ್ಪಟ್ಟ ಕೇಸುಗಳು ಮಾತ್ರ ಸರ್ಕಾರದ ಮಂಜೂರಾತಿ ಪಡೆಯಬೇಕಾಗಿದೆ ಎಂದು ತಿಳಿಸಿದೆ.

ಶ್ರೀ ವಿ. ಎಂ. ದೇವ್.—ನಾರ್ತ್ ಕೆನರಾ ಜಿಲ್ಲೆಯ ಫಾರೆಸ್ಟ್ ಪ್ರದೇಶದಲ್ಲಿ ಈಗ ಬಿಟ್ಟುಕೊಟ್ಟಿರತಕ್ಕ ಭಾಗವು ಶೇಕಡ ಎಷ್ಟು ಪಾಲು ಆಗುತ್ತದೆ ?

ಶ್ರೀ ಬಿ. ರಾಚಯ್ಯ.—ಅಲ್ಲಿ ಶೇಕಡ 81 ಫಾರೆಸ್ಟ್ ಇದೆ. ಅದರಲ್ಲೀಗ 346 ಎಕರೆಗಳನ್ನು ಬಿಡಿಸಿ ಕೊಡಲಾಗಿದೆ.

ಶ್ರೀ ಜಿ. ವಿ. ಗೌಡ.—ಇದನ್ನು ಅಪ್‌ಸೆಟ್ ಬೆಲೆಗೆ ಕೊಡಲಾಗುತ್ತಿದೆಯೋ ? ಹೇಗೆ ?

ಶ್ರೀ ಬಿ. ರಾಚಯ್ಯ.—ಮಲೆನಾಡು ಕನ್ಸೆಷನ್ ರೂಲ್ಸ್ ಪ್ರಕಾರ ಕೊಡಲಾಗುತ್ತದೆ.

Quota of stainless steel, zinc and copper allotted to the Mysore State during 1961-62.

*_Q._—272. **Sri S. SIVAPPA** (Sravanabelagola).—

Will the Government be pleased to state :—

(_a_) what is the quota of stainless steel, zinc and copper allotted to the Mysore State during the year 1961-62 ;

(_b_) how it is distributed ?

(_c_) the basis on which it is distributed ?

_A._—**Sri K. MALLAPPA** (Minister for Industries and Commerce).—

(_a_)—	_Period_	_Copper_	_Zinc_	_Stainless Steel_
	April-September, 1961.	500	400	126
	October, 1961 March, 1962.	500	400	307

(*b*) The material is distributed to Small Scale Industries Units under the following categories :—

(i) Wire drawing units ;
(ii) Alloy Castings ;
(iii) Rolling Mills;
(iv) Press Button Manufactures.
(v) Other units and utensil manufactures.

(*c*) The distribution is made on the basis of the production capacity of the machinery installed by the Small Scale Industries Units and their past consumption.

Sri S. SIVAPPA.—Sir, some figures are given in the answer. May I know whether they are tons or sheets or what they are ?

†**Sri K. MALLAPPA.**—It indicates ton, Sir.

Sri S. SIVAPPA.—Will the Government be pleased to state whom this quota has been distributed in Bangalore City ?

Sri K. MALLAPPA.—I have not got the list ; I can give the purpose. It is given to various persons.

Sri S. SIVAPPA.—I want to know where those factories are situated

Sri K. MALLAPPA.—Sir, all over the State they are situated, places like Bangalore, Mysore, Gulbarga, Belgaum, Hubli and so on.

Sri S. SIVAPPA.—May I know the number of tons of products that have been produced out of this raw material supplied to them ?

Sri K. MALLAPPA.—I have no information ; if the Hon'ble Member wants, I will be too happy to get it. But, I can only say that equivalent quantity has been produced.

ಶ್ರೀ ಸಿ. ಆರ್. ರಂಗೇಗೌಡ.—(ಸಿ) ಪ್ರಶ್ನೆಗೆ ಉತ್ತರವಾಗಿ ಯಂತ್ರದ ಉತ್ಪಾದನಾ ಸಾಮರ್ಥ್ಯ ಹಾಗೂ ಅವುಗಳ ಹಿಂದಿನ ಬಳಕೆ ಪ್ರಮಾಣದ ಆಧಾರದ ಮೇಲೆ ತಾಮ್ರ ಇತ್ಯಾದಿ ಲೋಹಗಳನ್ನು ಹಂಚಲಾಗುತ್ತಿದೆ ಎಂದು ತಿಳಿಸಲಾಗಿದೆ. ಆದರೆ ಹಿಂದಿನಿಂದಲೂ ಈ ಕೈ ಕೆಲಸದಲ್ಲೇ ಪಾತ್ರೆ ಪಡಗಳನ್ನು ಮಾಡಿಕೊಂಡಿದ್ದ ಜನರಿಗೇನು ಅನುಕೂಲ ಮಾಡಿಕೊಟ್ಟಿದ್ದಾರೆ?

ಶ್ರೀ ಕೆ. ಮಲ್ಲಪ್ಪ.—ಅವರೆಲ್ಲರೂ ಈ ಹಿಂದೆ ಎಷ್ಟು ಪ್ರಮಾಣದಲ್ಲಿ ಈ ಕೈಗಾರಿಕೆ ನಡೆಸುತ್ತಿದ್ದರೆಂಬುದನ್ನು ನೋಡಿ ಅವರಿಗೂ ಕೊಡಲಾಗುತ್ತಿದೆ.

ಶ್ರೀ ಸಿ. ಆರ್. ರಂಗೇಗೌಡ.—ಸರ್ಕಾರದವರು ಕೊಡತಕ್ಕ ಕೋಟಾಕ್ಕೆ ಅಥವಾ ಮೆಟೀರಿಯಲ್ಸ್‌ಗೆ ಸರಿಯಾಗಿ ಅವರ ಉತ್ಪನ್ನವಿರುತ್ತೆಂಬುದನ್ನು ಯಾವ ರೀತಿ ಪರಿಶೀಲನೆ ಮಾಡುತ್ತಾರೆ, ಯಾರು ಸೂಪರ್‌ವೈಸ್ ಮಾಡುತ್ತಾರೆ?

ಶ್ರೀ ಕೆ. ಮಲ್ಲಪ್ಪ.—ಅದಕ್ಕೆ ಸಂಬಂಧಪಟ್ಟ ಹಾಗೆ ಯಾವ ಸಮಿತಿಯೂ ಇಲ್ಲ. ಅಂಥ ದುರುಪಯೋಗವಾಗತಕ್ಕ ವಿಚಾರ ಸರ್ಕಾರದವರ ಗಮನಕ್ಕೆ ತಂದರೆ ಅದನ್ನು ವಿಚಾರ ಮಾಡುತ್ತೇವೆ.

Sri G. V. GOWDA.—Out of this allotment made, are they able to meet the demand in the State ?

Sri K. MALLAPPA.—The demand is much more ; it is more than twice.

---

†Indicates that the remarks or speeches have not been revised by the member concerned.

Sri G. V. GOWDA.—What steps have Government taken to meet the demand of raw material ?

Sri K. MALLAPPA.—We have made representation to the Central Government.

Sri S. SIVAPPA.—Has it come to the notice of the Government that the stainless steel supplied to the so called manufacturers are not utilised by them but they send it outside the State in black-market ?

Sri K. MALLAPPA.—We have received information that the quota given so far as stainless is concerned is not used and it being black-marketted.

Sri C. J. MUCKANNAPPA.—Out of the quota shown in the answer, may I know how many are getting this quota in this State ?

Sri K. MALLAPPA.—The particulars are not immediately available with me on the file. If the Hon'ble Member wants, I will get the information and furnish.

ಶ್ರೀಮತಿ ಸುಶೀಲಾ ಬಾಯಿ ಹೀರಾಚಂದ್ ಷಾ.—ಈಗ ತಾವು ಕೊಡುತ್ತಿರುವ ತಾಮ್ರದ ಕೋಟ ಜನರಿಗೆ ಸಕಾಲಕ್ಕೆ ದೊರೆಯದೆ 4-6 ತಿಂಗಳು ಲೇಟಾಗುತ್ತದೆ. ಆ ತಾಮ್ರದ ಕೆಲಸಗಾರರು ಈ ಕೈಗಾರಿಕೆಗೆ 3-4 ಜನ ಆಳುಗಳನ್ನಿಟ್ಟುಕೊಂಡಿರುತ್ತಾರೆ. ಅವರಿಗೆ ಕೊಡತಕ್ಕ ಕೋಟಾದಲ್ಲಿ ಒಂದೊಂದಾವರ್ತಿ ಅರ್ಧ ಕೋಟ-ಕಾಲು ಕೋಟ ದೊರೆಯುತ್ತಿರುವುದರಿಂದ ಅವರಿಗೆ ಆಳುಗಳನ್ನಿಟ್ಟುಕೊಳ್ಳುವುದಕ್ಕೂ ಆಗುತ್ತಿಲ್ಲ—ಅವರನ್ನು ಕೈಬಿಟ್ಟು ಈ ಕೈಗಾರಿಕೆ ನಡೆಸುವುದಕ್ಕೂ ಆಗುತ್ತಿಲ್ಲ. ಇಂಥ ತೊಂದರೆ ಇದೆ. ಇದರ ನಿವಾರಣೆಗೆ ಸರ್ಕಾರದವರೇನು ಆಲೋಚನೆ ಮಾಡಿದ್ದಾರೆ ?

ಶ್ರೀ ಕೆ. ಮಲ್ಲಪ್ಪ.—ಒಂದು ವರ್ಷದಲ್ಲಿ ಬರತಕ್ಕ ಕೋಟಾದಲ್ಲಿ ಸ್ವಲ್ಪ ಕಡಮೆ ಬಿದ್ದರೆ ಅದು ಮುಂದಿನ ವರ್ಷದಲ್ಲಿ ಬಂದೇ ಬರುತ್ತೆ. ಇದರಿಂದ ಅವರ ಉದ್ಯಮಕ್ಕೇನೂ ತೊಂದರೆಯಾಗುವುದಿಲ್ಲ.

ಶ್ರೀಮತಿ ಚಂಪಬಾಯಿ ಭೋಗಳೆ.—ಈ ಕೈಗಾರಿಕೆಗಳು ಮುಂದುವರಿಯಲು ರಾ ಮೆಟೀರಿಯಲ್ಸ್ ಸರಿಯಾಗಿ ಸಪ್ಲೈ ಆಗುತ್ತಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ? ಇದು ಕಾಲಾ ಬಜಾರಿನಲ್ಲಿ ಮಾರಾಟವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಈ ಕೋಟಾ ಹೋಲ್ಡರುಗಳೇ ಕಾಲಾ ಬಜಾರಿನಲ್ಲಿ ಮಾರಾಟ ಮಾಡಬೇಕು. ಅದಕ್ಕೆ ಕೋಟಾ ಹೋಲ್ಡರೇ ಕಾರಣ.

ಶ್ರೀಮತಿ ಚಂಪಾಬಾಯಿ ಭೋಗಳೆ.—ಅದನ್ನು ತಡೆಗಟ್ಟಲೇನು ಪ್ರಯತ್ನ ಮಾಡಿದ್ದೀರಿ ?

ಶ್ರೀ ಕೆ. ಮಲ್ಲಪ್ಪ.—ಅಂಥ ನಿದರ್ಶನಗಳು ನಮ್ಮ ಗಮನಕ್ಕೆ ಬಂದರೆ ಅವರಿಗೆ ಶಿಕ್ಷೆಯಾಗುತ್ತದೆ. ಅವರಿಗೆ ಕೊಟ್ಟಿದ್ದ ಕೋಟಾ ಸಹ ಕ್ಯಾನ್ಸಲ್ ಆಗುತ್ತೆ.

ಶ್ರೀ ಎಸ್. ಶಿವಪ್ಪ.—ಇಲ್ಲಿ ನಮೂದಿಸಿರುವ Stainless Steel, Zinc and Copper ಇವುಗಳಲ್ಲಿ ಹತ್ತಾರು ವರ್ಷಗಳಿಂದ ಇದೇ ವೃತ್ತಿಯನ್ನು ಅವಲಂಬಿಸಿಕೊಂಡು ಬಂದಿರುವವರಿಗೆ ಎಷ್ಟು ಕೋಟಾ ಕೊಟ್ಟಿದ್ದೀರಿ ಮತ್ತು ಇತ್ತೀಚೆಗೆ ಹೊಸದಾಗಿ ಬಂದಿರುವವರಿಗೆ ಎಷ್ಟು ಕೋಟಾ ಕೊಟ್ಟಿದ್ದೀರಿ.

ಶ್ರೀ ಕೆ. ಮಲ್ಲಪ್ಪ.—ವಿವರಗಳು ನನ್ನ ಹತ್ತಿರ ಇಲ್ಲ. ಮೊದಲಿನಿಂದಲೂ ಯಾರು ಕೆಲಸ ಮಾಡುತ್ತಿದ್ದಾರೆಯೋ ಅವರಿಗೆ first preference ಕೊಟ್ಟು ಹೊಸದಾಗಿ ಈ ವೃತ್ತಿಯನ್ನು ಅವಲಂಬಿಸಿರುವವರಿಗೆ next preference ಕೊಟ್ಟು ಹಂಚುವುದಕ್ಕೆ ಏರ್ಪಾಡು ಮಾಡಿದ್ದೇವೆ.

ಶ್ರೀ ಕೆ. ಲಕ್ಕಪ್ಪ.—ಸಣ್ಣ ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡಬೇಕು ಎಂದು ಕೋಟಾ ಹಂಚುವಾಗ ಮೊದಲು ಅವರಲ್ಲಿ ಯಂತ್ರೋಪಕರಣಗಳಿವೆಯೋ ಎಂದು inspection ಮಾಡುವುದಕ್ಕೆ ಏನಾದರೂ ಸಿಬ್ಬಂದಿಯನ್ನು ಇಟ್ಟಿದ್ದೀರಾ ?

ಶ್ರೀ ಕೆ. ಮಲ್ಲಪ್ಪ.—ಉತ್ತರದಲ್ಲೇ, ತಿಳಿಸಿದೆ. ಅವರಲ್ಲಿರುವ ಉತ್ಪಾದನಾ ಶಕ್ತಿ ಏನು, machinery ಏನಿದೆ, ಎಂಬುದನ್ನೆಲ್ಲ ಗಮನಿಸಿ ಆಮೇಲೆ ಹಂಚಲಾಗುತ್ತದೆ. ಅದಕ್ಕೆ ಬೇಕಾದ ಸಿಬ್ಬಂದಿ ಇದೆ. Deputy Director, Assistant Director, Inspecting Officers ಇದ್ದಾರೆ. ಅವರ ಶಿಫಾರಸುಗಳನ್ನು ಅಂಗೀಕರಿಸಿ ವಿಚಾರ ಮಾಡಿ ಹಂಚಲಾಗುತ್ತಿದೆ.

ಶ್ರೀ ಸಿದ್ದಯ್ಯ ಕಾಶೀಮಠ.—ಪಾತ್ರೆಗಳ ತಯಾರಿಕರಿಗೆ ಎರಡು ವರ್ಷಗಳಿಂದ ತಾಮ್ರವನ್ನು ಕೊಟ್ಟಿಲ್ಲವೆಂಬುದು ಸರ್ಕಾರದ ಗಮನದಲ್ಲಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಎಲ್ಲೆಲ್ಲಿ ಯಾರು ಯಾರು ಕೈಗಾರಿಕೆಯನ್ನು ನಡೆಸುತ್ತಿದ್ದಾರೆಯೋ ಅವರಿಗೆ ಹಂಚಿಕೆಯಾಗುತ್ತಿದೆ. ಕೇಳಿದಷ್ಟು ಪ್ರಮಾಣದಲ್ಲಿ ಕೊಡದೆ ಇದ್ದರೂ ನಮಗೆ ಬರುವ ಪ್ರಮಾಣವನ್ನನುಸರಿಸಿ ಕೊಡುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ತಯಾರಕರು ‘ಟ್ರೇಡ್ ಮಾರ್ಕ್’ ಮತ್ತು ‘ಬ್ರಾಂಡ್’ ರಿಜಿಸ್ಟರ್ ಮಾಡಿದ್ದಾರೆಯೇ ?

ಶ್ರೀ ಕೆ. ಮಲ್ಲಪ್ಪ.—ಸಾಮಾನ್ಯ ಕೈಗಾರಿಕೆಗಳಲ್ಲಿ ‘ಟ್ರೇಟ್ ಮಾರ್ಕ್’ ಮತ್ತು ‘ಬ್ರಾಂಡ್’ ರಿಜಿಸ್ಟರ್ ಮಾಡತಕ್ಕ ಅಗತ್ಯವಿಲ್ಲ. ವಿಶೇಷವಾದ ತಯಾರಿ ಇದ್ದರೆ ಮಾತ್ರ ಆ ಪ್ರಶ್ನೆ ಬರುತ್ತದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ರಾಜ್ಯದಲ್ಲಿ ಇದುವರೆಗೂ ತಾಮ್ರ ಮತ್ತು ಸ್ಟೀಲ್ ಕೋಟ ಕೊಟ್ಟದ್ದನ್ನು ಸರಿಯಾಗಿ ಉಪಯೋಗ ಮಾಡದೆ ಇರತಕ್ಕವರಲ್ಲಿ ಎಷ್ಟು ಜನರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಂಡಿದ್ದೀರಿ, ಲೈಸನ್ಸ್ ವಜಾ ಮಾಡಿದ್ದೀರಿ ಮತ್ತು ಶಿಕ್ಷೆ ವಿಧಿಸಿದ್ದೀರಿ ?

ಶ್ರೀ ಕೆ. ಮಲ್ಲಪ್ಪ.—ಶಿಕ್ಷೆ ವಿಧಿಸಿಲ್ಲ, ಎರಡನೆಯ ಹಂಚಿಕೆ ಮಾಡುವಾಗ ಅವರ ಕೋಟಾ ಕೊಡುವುದಿಲ್ಲ.

Sri C. S. HULKOTI.—Is any quota fixed for particular industries ?

ಶ್ರೀ ಕೆ. ಮಲ್ಲಪ್ಪ.—ಇಷ್ಟೇ percentage ಎಂದು ಗೊತ್ತುಮಾಡುವುದಕ್ಕಾಗುವುದಿಲ್ಲ. ಅವರು ಎಷ್ಟು ವರ್ಷದಿಂದ ಕೈಗಾರಿಕೆಯನ್ನು ನಡೆಸುತ್ತಿದ್ದಾರೆ, ಅವರ ಆವಶ್ಯಕತೆಗಳೇನು ಎಂದು ನಿರೀಕ್ಷಿಸಿ ಹಂಚಿಕೆ ಮಾಡುತ್ತೇವೆಯೇ ವಿನಾ ಇಷ್ಟೇ percentage ಎಂದು ನಿಗದಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ,—ಎಷ್ಟುಜನರಿಗೆ ಲೈಸನ್ಸ್ ವಜಾ ಮಾಡಿದ್ದೀರಿ ?

ಶ್ರೀ ಕೆ. ಮಲ್ಲಪ್ಪ.—ಕೆಲವರ ಲೈಸನ್ಸ್ ವಜಾ ಆಗಿದೆ. ಇಷ್ಟೇ ಜನರದ್ದು ಎಂದು ಹೇಳಲು ನನ್ನ ಹತ್ತಿರ ಮಾಹಿತಿ ಇಲ್ಲ. ಬೇಕಾದರೆ ಮಾನ್ಯ ಸದಸ್ಯರಿಗೆ ಕೊಡುತ್ತೇನೆ.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ರಾಜ್ಯಕ್ಕೆ ಸಾಕಷ್ಟು ಪ್ರಮಾಣದಲ್ಲಿ ಕೋಟ ಸಿಕ್ಕುತ್ತಿಲ್ಲವೆನ್ನುವ ಕಾರಣ ಹೆಚ್ಚಿನ ಕೋಟ ಪಡೆಯುವುದಕ್ಕೆ ಏನಾದರೂ ಪ್ರಯತ್ನ ಮಾಡಿದ್ದೀರಾ ?

ಶ್ರೀ ಕೆ. ಮಲ್ಲಪ್ಪ.—ನಮಗೆ ಇಂಡಿಯಾ ಸರ್ಕಾರದವರು ಕೊಡುತ್ತಾರೆ. ಅವರು ಕೊಡುವುದು ಸಾಲದು, ಹೆಚ್ಚಿಗೆ ಕೊಡಬೇಕು ಎಂದು ಬರೆದಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ತಾವು ಒಂದು ಆಧಾರದ ಮೇಲೆ ಹಂಚುತ್ತಿದ್ದೀರಿ. ಕೊಡುವ ಕೋಟ ಸಾಲದು ಎನ್ನುವಾಗ ಅದನ್ನು ತೆಗೆದುಕೊಂಡವರು ತಾವು ಉಪಯೋಗಿಸದೆ ಬೇರೆಯವರಿಗೆ ಕೊಡುವುದಕ್ಕೆ ಹೇಗೆ ಸಾಧ್ಯ ?

ಶ್ರೀ ಕೆ. ಮಲ್ಲಪ್ಪ.—ಈಗ ಕೆಲವರಿಗೆ ಅದೇ ಒಂದು ವೃತ್ತಿಯಾಗಿದೆ. ಯಾವಾಗ ಅಭಾವ ಉಂಟಾಗುತ್ತದೆಯೋ ಆವಾಗ ಇದೆಲ್ಲ ಉದ್ಭವವಾಗುತ್ತದೆ. ಕೊಟ್ಟದ್ದನ್ನು ತೆಗೆದುಕೊಂಡು ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರುತ್ತಾರೆ. ಇದು ಸರ್ಕಾರದ ತಿಳುವಳಿಕೆಗೂ ಬಂದಿದೆ.

ಶ್ರೀ ಎಚ್. ನಂಜೇಗೌಡ.—ಲೈಸನ್ಸ್ ವಜಾ ಮಾಡುತ್ತೇವೆಂದು ಹೇಳಿದಿರಿ. ಹೀಗೆ ಮಾಡಿದರೆ ಅನೇಕ ವೇಳೆ ಇದನ್ನು ನಂಬಿಕೊಂಡಿರುವ ಕೆಲಸಗಾರರರಿಗೆ ತೊಂದರೆಯಾಗುವುದರಿಂದ ಕಾಳಸಂತೆ ವ್ಯಾಪಾರ ಮಾಡುವವರಿಗೆ ಶಿಕ್ಷೆ ಮಾಡಿ, ಕೈಗಾರಿಕೆ ನಡೆಯುವಂತೆ ಮಾಡುವುದು ಅಗತ್ಯವಲ್ಲವೇ ?

ಶ್ರೀ ಕೆ. ಮಲ್ಲಪ್ಪ.—ಕೆಟ್ಟವರ ಸಹವಾಸ ಬಿಟ್ಟು ಒಳ್ಳೆಯವರ ಸಹವಾಸಕ್ಕೆ ಹೋಗಬೇಕು.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಸ್ಟೇನ್ ಲೆಸ್ ಸ್ಟೀಲ್ ಕಾರ್ಖಾನೆಗಳು ಎಷ್ಟೆಷ್ಟು ಪ್ರಮಾಣದಲ್ಲಿ ಯಾವ ಯಾವ ಊರಿನಲ್ಲಿ ಕೆಲಸ ಮಾಡುತ್ತಿವೆ ಸ್ವಾಮಿ ?

ಶ್ರೀ ಕೆ. ಮಲ್ಲಪ್ಪ —ಪಾತ್ರೆಗಳನ್ನು ಮಾಡುತ್ತಿದ್ದಾರೆ Surgical instruments ಎಂದು ಆಸ್ಪತ್ರೆಗಳಲ್ಲಿ ಉಪಯೋಗಿಸತಕ್ಕ basin ವಗೈರೆ ಮಾಡುತ್ತಿದ್ದಾರೆ.

ಶ್ರೀ ಆರ್. ಎಚ್. ಲಕ್ಷ್ಮೀಪತಿ.—ಕಾಳಸಂತೆ ವ್ಯಾಪಾರವಾಗುವುದನ್ನು ತಡೆಗಟ್ಟುವುದಕ್ಕೆ ಏನೇನು ಕಾರ್ಯಕ್ರಮ ಸರ್ಕಾರ ತೆಗೆದುಕೊಂಡಿದೆ ?

ಶ್ರೀ ಕೆ. ಮಲ್ಲಪ್ಪ.—ಕಾಳಸಂತೆ ವ್ಯಾಪಾರವನ್ನು ಕಂಡುಹಿಡಿಯುವುದು ಕಷ್ಟ. ಒಳ್ಳೆಯವರಿಗೆ ಕೊಟ್ಟರೆ ಅವರೂ ಕೂಡ ಕಾಳಸಂತೆಯಲ್ಲಿ ಮಾರುತ್ತಾರೆ. ಕಾಳಸಂತೆ ಕ್ರಯ ಬಹಳ ಹೆಚ್ಚು. ಐದಾರು ಸಾವಿರ ರೂಪಾಯಿ ಒಂದು ಟನ್‌ಗೆ ಅಸಲು ಬೆಲೆಯಾಗುತ್ತದೆಂದು ಕೇಳಿದ್ದೇನೆ. ಕಾಳಸಂತೆಯಲ್ಲಿ ಇಪ್ಪತ್ತು ಸಾವಿರ ರೂಪಾಯಿ ಆಗುತ್ತದೆ. ಆದುದರಿಂದ ಒಳ್ಳೆಯವರೂ ಕೆಟ್ಟವರಾಗುತ್ತಾರೆ. ಯಂತ್ರೋಪಕರಣಗಳನ್ನಿಟ್ಟುಕೊಂಡಿದ್ದಾರೆ, ಲೈಸೆನ್ಸ್ ಇದೆ, ಎಲ್ಲ ಇದೆ. ಅವರನ್ನು ಹೋಗಿ ಕೇಳಿದರೆ ಸೇಲ್ಸ್ ಟ್ಯಾಕ್ಸ್ ಕೊಟ್ಟಿದ್ದಕ್ಕೆ ರಸೀತಿಗಳನ್ನು ತೋರಿಸುತ್ತಾರೆ. ಅಂಥವರೇ

(ಶ್ರೀ ಕೆ. ಮಲ್ಲಪ್ಪ)

ಬ್ಲಾಕ್ ಮಾರ್ಕೆಟ್ ಮಾಡುತ್ತಾರೆ. ಆದುದರಿಂದ ಇಂಥವರನ್ನು ಕಂಡು ಹಿಡಿಯುವುದು ಕಷ್ಟವಾಗುತ್ತದೆ. ಈಗ ಇದನ್ನೆಲ್ಲ ಸರಿ ಮಾಡಬೇಕೆಂದು, ಒಳ್ಳೆಯವರಿಗೆ, ಯಾರು ಸರಿಯಾಗಿ ಕೆಲಸ ಮಾಡುತ್ತಾರೆಯೋ ಅಂಥವರಿಗೆ stainless steel ಕೊಡತಕ್ಕ ಉದ್ದೇಶದಿಂದ ಒಂದು ಕಮಿಟಿಯನ್ನು ಏರ್ಪಾಡು ಮಾಡುತ್ತೇವೆ. ಆ ಕಮಿಟಿಯವರು ಎಲ್ಲ ವಿಚಾರಗಳನ್ನೂ ಗಣನೆಗೆ ತೆಗೆದುಕೊಂಡು inspection ವಗೈರೆ ಮಾಡಿ ಯೋಗ್ಯರಿಗೆ ಕೊಡುವಂತೆ ಮಾಡಿ ಆದಷ್ಟು ಮಟ್ಟಿಗೆ ಭದ್ರಪಡಿಸಬೇಕೆಂದು ಎಲ್ಲ ಪ್ರಯತ್ನಗಳನ್ನೂ ಸರ್ಕಾರ ಮಾಡುತ್ತಿದೆ.

ಶ್ರೀ ಇ. ನಾರಾಯಣಗೌಡ.—ಮೊದಲನೆಯ ಸಲ ಕೋಟ ಪಡೆದವರು ಸದುಪಯೋಗ ಪಡಿಸಿದ್ದಾರೆಯೋ ದುರುಪಯೋಗ ಪಡಿಸಿದ್ದಾರೆಯೋ ಎಂದು ಸರಿಯಾದ ವಿಚಾರಣೆ ನಡೆಸಿ ಎರಡನೆಯ ಸಲ ಕೋಟ ಕೊಡುವಾಗ ಒಂದು ರಿಪೋರ್ಟ್ ತರಿಸಿಕೊಂಡು ಕೊಡುವುದು ಉತ್ತಮವಲ್ಲವೇ ?

ಶ್ರೀ ಕೆ. ಮಲ್ಲಪ್ಪ.—ಮೊದಲನೆಯ ಸಲ ಕೊಟ್ಟ ಕೋಟಾ ಸದುಪಯೋಗವಾಗಿದೆಯೋ ಅಥವಾ ದುರುಪಯೋಗವಾಗಿದೆಯೋ ಎಂಬುದನ್ನು ತಿಳಿದುಕೊಂಡು ಎರಡನೆಯ ಕೋಟಾ ಹಂಚುವ ಏರ್ಪಾಡು ಮಾಡುತ್ತೇವೆಂಬ ಭರವಸೆಯನ್ನು ನಾನು ಕೊಡುತ್ತೇನೆ.

Amount spent for the construction of new Tank at Nagarabhavi in Manchenahalli Hobli, Gauribidanur Taluk.

Q.*—371. **Sri R. N. LAKSHMIPATHI (Gauribidanur).—

Will the Government be pleased to state :—

(*a*) whether they have spent any amount for the construction of new tank at Nagarabhavi in Manchenahally Hobli, Gauribidanur Taluk, and if so, the amount spent ;

(*b*) at what stage the work of the tank is pending now ?

A.—**Sri ALUR HANUMANTHAPPA** (Deputy Minister for Minor Irrigation).—

(*a*) Yes ; Rs. 46,716.

(*b*) The question of continuance of the work or otherwise is under examination.

ಶ್ರೀ ಆರ್. ಎನ್. ಲಕ್ಷ್ಮೀಪತಿ.—46,716 ರೂಪಾಯಿ ಕೆರೆಗೋಸ್ಕರ ಖರ್ಚು ಮಾಡಿದೆಯೆಂದು ಹೇಳಿದೆ. ಇದು ಯಾವಾಗ ಮಂಜೂರಾಯಿತು, ಖರ್ಚು ಮಾಡಿ ಎಷ್ಟು ವರ್ಷವಾಯಿತು ?

Sri ALUR HANUMANTHAPPA.—This restoration work was sanctioned in 1954 but afterwards the Chief Engineer inspected the spot and found that the restoration was not feasible. He wanted to change the tank by alignment and construction of new tank. After that, estimates were prepared but there were some working and technical difficulties with regard to this work.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈ ಒಂದು ನ್ಯೂನತೆಯನ್ನು ಕಂಡುಹಿಡಿದದ್ದು 46 ಸಾವಿರ ರೂಪಾಯಿ ಖರ್ಚು ಮಾಡುವುದಕ್ಕೆ ಮೊದಲೋ ಅಥವಾ ಖರ್ಚು ಮಾಡಿದ ಮೇಲೋ ?

ಶ್ರೀ ಆಲೂರು ಹನುಮಂತಪ್ಪ.—ಮೊದಲೇ ಕಂಡುಹಿಡಿದರು. ಕಂಡುಹಿಡಿದು ಕೆರೆಯನ್ನು restore ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ದೊಡ್ಡ ಹಳ್ಳವಿರುವುದರಿಂದ ಒಡೆದಿರುವ ಸ್ಥಳವನ್ನು ತುಂಬುವುದಕ್ಕೆ ಆಗುವುದಿಲ್ಲ.

They preferred the construction of a new tank. They called for tenders but the tenderers quoted abnormal rates. So they decided to carry on the work on a piece-work basis. But labour was difficult to secure and it could not be worked on a piece-work system. Materials had to be collected from long distances. Therefore the work prolonged. Now we have received the revised estimates from the Chief Engineer and we will take further action.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಹಣವನ್ನು ಖರ್ಚು ಮಾಡುವುದರಿಂದ ಸ್ಥಳದ ಜನಗಳಿಗೆ ಕೆರೆ ಖಾತ್ರಿಯಾಗಿ ಆಗುತ್ತದೆಂಬ ನಂಬಿಕೆ ಇದೆ. ಆದುದರಿಂದ ಈಗಲಾದರೂ ಹೊಸದಾಗಿ ಎಸ್ಟಿಮೇಟ್ ತಯಾರಿಸಿ ಅದನ್ನು ಮಂಜೂರ್ಮಾಡಿ ಕೆರೆಯನ್ನು ಕಟ್ಟಿಸಿಕೊಡುತ್ತೀವೆಂಬ ಭರವಸೆಯನ್ನು ಕೊಡುತ್ತೀರಾ ಸ್ವಾಮಿ ?

Sri ALUR HANUMANTHAPPA.—We are examining the whole thing. The revised estimates are before the Government. We are considering that.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಹಾಗೆ ತಾವು ಹೊಸದಾಗಿ ಮಂಜೂರು ಮಾಡಿ ಕಟ್ಟಿಸದೇ ಇದ್ದ ಪಕ್ಷದಲ್ಲಿ 46 ಸಾವಿರ ರೂಪಾಯಿ waste ಆಗುತ್ತದೆ. ಇದಕ್ಕೆ ಯಾರು ಜವಾಬ್ದಾರರು ಸ್ವಾಮಿ ?

ಶ್ರೀ ಆಲೂರು ಹನುಮಂತಪ್ಪ.—ಖರ್ಚು ಮಾಡಿದ್ದನ್ನು ನಷ್ಟ ಮಾಡಿಕೊಳ್ಳಬೇಕೆಂಬುದು ಸರ್ಕಾರದ ಉದ್ದೇಶವಲ್ಲ. ಯಾವ ರೀತಿ ಮಾಡಬೇಕೆಂದು ನಾವು ಪರ್ಯಾಲೋಚನೆ ಮಾಡಿದ್ದೇವೆ. ಆದಷ್ಟು ಜಾಗ್ರತೆ ಅದನ್ನು ತೀವ್ರತೆಯಿಂದ ತೆಗೆದುಕೊಳ್ಳುತ್ತೇವೆ.

Sri S. RAJAGOPAL.—What is the revised estimate expenditure ?

Sri ALUR HANUMANTHAPPA.—Rs. 3,20,000.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಹೊಸದಾಗಿ ಬಂದಿರುವ ಎಸ್ಟಿಮೇಟಿನ ಅಂದಾಜು ಎಷ್ಟು ?

ಶ್ರೀ ಆಲೂರು ಹನುಮಂತಪ್ಪ.–3,20,000 ರೂಪಾಯಿಗಳಿಗೆ ಅಂದಾಜಾಗಿದೆ ಎಂದು ಆಗಲೇ ಹೇಳಿದೆ.

Proposals for the amendment of the Corporation Act.

*Q.—377. **Sri B. NANJAPPA** (Cubbonpet).—

Will the Government be pleased to state :—

(a) whether the Corporation of the City of Bangalore have sent proposals for the amendment of the Corporation Act ;

(b) the stage at which the matter is pending at present ;

(c) when they intend to take necessary action in the matter ?

A.—**Sri K. PUTTASWAMY** (Minister for Municipal Administration).—

(a) Yes.

(b) and (c) Certain amendments have been approved and enacted as Mysore Act No. 32 of 1961. Other amendment proposed are under consideration.

The question of approving other amendments is likely to be finalised soon.

Sri B. NANJAPPA.—How long the amendments are pending before Government ?

Sri K. PUTTASWAMY.—These amendments are not pending now with the Government. After certain consideration, the Corporation has been informed about the tentative decisions Government have taken and the opinion of the Corporation is awaited.

Sri B. NANJAPPA.—Is it a fact that these amendments are now before Government ?

Sri K. PUTTASWAMY.—I said that these amendments were before Government. The proposals sent by the Corporation were considered by Government and the opinion of Government has been communicated to the Corporation and their reaction awaited.

ಶ್ರೀ ಕೆ. ದೇವಯ್ಯ.–ಕಾರ್ಪೊರೇಷನ್ನು ಆಕ್ಟ್‌ಗೆ 1954 ನೇ ಇಸವಿಯಲ್ಲೇ ಅಮೆಂಡ್‌ಮೆಂಟ್‌ಗಳನ್ನು ಕಳುಹಿಸಿರುವುದು ನಿಮ್ಮಲ್ಲೇ ಇದೆ. ಇದಕ್ಕೆ ಸಾಮರ್ತಿಕವಾದ ಯಾವ ರೀತಿಯ ಉತ್ತರಗಳನ್ನಾದರೂ ಕೊಟ್ಟಿದ್ದೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಹಿಂದೆ ಕೆಲವು ತಿದ್ದುಪಡಿಗಳು ಈ ಸಭೆಯಮುಂದೆ ಬಂದು ಪಾಸಾಗಿ ಅದು ಆಗಲೇ ಕಾನೂನಾಗಿದೆ. ಇನ್ನೂ ಕೆಲವು ತಿದ್ದುಪಡಿಗಳನ್ನು ಕಾರ್ಪೊರೇಷನ್ನಿನವರು ಸೂಚಿಸಿದ್ದಾರೆ. ಅವನ್ನೆಲ್ಲಾ ಪರಿಶೀಲನೆಮಾಡಿ ಅದನ್ನು ಈ ಸಭೆಯಮುಂದೆ ತರಬೇಕಾಗಿದೆ. ಸಭೆ ಒಪ್ಪಿದ ಮೇಲೆ ಕಾನೂನಾಗುತ್ತದೆ.

Sri K. S. SURYANARAYANA RAO.—In view of the fact that a large number of amendment are due to the Corporation Act, do the Government consider having a uniform legislation in this matter ?

Sri K. PUTTASWAMY.—At present there are two Acts governing the Corporation—one, the Bombay Corporation Act. It governs the administration of Hubli and Dharwar ? The other is, the Bangalore Corporation Act. Now Government are seriously considering to bring in a Bill before this House for a uniform legislation which will be made applicable to both the Corporations and also for Corporations that may hereafter come into existence.

ಶ್ರೀ ಬಿ. ನಂಜಪ್ಪ.—*(b)* ಗೆ ಉತ್ತರವಾಗಿ "other amendments proposed are under consideration" ಎಂದಿದೆ. ಹಾಗಾದರೆ ಇವು ಇನ್ನೂ ಸರಕಾರದಲ್ಲಿವೆಯೆ ?

ಶ್ರೀ ಕೆ. ಪುಟ್ಟಸ್ವಾಮಿ.—ಸರಕಾರ ಇದನ್ನು ಪರಿಶೀಲನೆ ಮಾಡಲೇಬೇಕು ಮತ್ತು ಬೇಕಾದರೆ ಪರಿಶೀಲನೆ ಮಾಡಿ ಈ ಸಭೆಯಮುಂದೆ ಒಪ್ಪಿಗೆಗಾಗಿ ಇಡಬೇಕು.

ಶ್ರೀ ಕೆ. ದೇವಯ್ಯ.—ನಾವು ಕಾರ್ಪೊರೇಷನ್ನಿನ ಕಡೆಯಿಂದ ಕಳುಹಿಸಿದ ತಿದ್ದುಪಡಿಗಳನ್ನು ತಾವು ಇಲ್ಲಿ ಇನ್ನೂ ಪಾಸುಮಾಡದೆ ಇರುವುದರಿಂದ ಪ್ರತಿ ವರ್ಷವೂ ಅನೇಕ ಕೇಸುಗಳಲ್ಲಿ ಕೋರ್ಟಿನಲ್ಲಿ ತೀರ್ಮಾನವಾಗಿ ಕಾರ್ಪೊರೇಷನ್ನಿನವರಿಗೆ ಅನಾನುಕೂಲಗಳಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿವೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಕೆಲವು ತಿದ್ದುಪಡಿಗಳನ್ನು ಆಗಲೇ ಮಾಡಿ ಕಾರ್ಪೊರೇಷನ್ನಿಗೆ ಕಳುಹಿಸಿದೆ. ಇನ್ನೂ ಕೆಲವು ತಿದ್ದುಪಡಿಗಳು ಅವಶ್ಯಕವಾಗಿವೆ. ಅವನ್ನೆಲ್ಲಾ ಸರಕಾರ ಒಪ್ಪಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಅವು ಈ ಸಭೆಯಮುಂದೆ ಬಂದಾಗ ಸರಕಾರ ಅದರ ಮೇಲೆ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ.

Sri K. S. SURYANARAYANA RAO.—When could we expect uniform legislation to come before this House ?

Sri K. PUTTASWAMY.—Government are now taking steps to have it drafted.

ಶ್ರೀ ಬಿ. ನಂಜಪ್ಪ.—ಅವಶ್ಯಕತೆ ಇರುವ ತಿದ್ದುಪಡಿಗಳನ್ನಾದರೂ ಬೇಗನೆ ಈ ಸಭೆಯಮುಂದೆ ತರುವ ಭರವಸೆ ಕೊಡುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಆ ರೀತಿ ಭರವಸೆಯನ್ನು ಕೊಡುವುದಕ್ಕೆ ಆಗುವುದಿಲ್ಲ. ಈಗಾಗಲೇ ಕೆಲವು ಮಸೂದೆಗಳನ್ನು ಈ ಸಭೆಯಲ್ಲಿ ಮಂಡಿಸಲು ಅವಕಾಶ ಸಿಕ್ಕದೇ ಇರುವುದರಿಂದ ಇದು ಸಾಧ್ಯವಾಗುತ್ತದೆಯೇ ಎನ್ನುವುದನ್ನೂ ನೋಡಬೇಕಾಗುತ್ತದೆ.

ಶ್ರೀ ಬಿ. ನಂಜಪ್ಪ.—ತಿದ್ದುಪಡಿಗಳು ಬಾರದೇ ಇರುವುರಿಂದ ಕಾರ್ಪೊರೇಷನ್ನಿನ ಕೆಲಸ ಕಾರ್ಯಗಳಿಗೆ ಅಡಚಣೆಯಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಅಡಚಣೆಗಳಿರುವುದರಲ್ಲಿ ಅವಶ್ಯವಾದ ಕೆಲವು ತಿದ್ದುಪಡಿಗಳನ್ನು ಮಾಡಬೇಕು ಅದರ ಬಗ್ಗೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗಿದೆ.

ಶ್ರೀ ಬಿ. ನಂಜಪ್ಪ.—ಇದೇ ಅಧಿವೇಶನದಲ್ಲೇ ಈ ಕಾನೂನಿಗೆ ಅವಶ್ಯಕವಾದ ತಿದ್ದುಪಡಿಗಳನ್ನಾದರೂ ತರಲು ಪ್ರಯತ್ನ ಪಡುತ್ತಾರೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಅದಷ್ಟು ಪ್ರಯತ್ನ ಮಾಡುತ್ತೇನೆ.

Number of Acres of Land Irrigated by the Marconahalli Reservoir.

Q.*—480. **Sri T. N. MADAPPA GOWDA (Nagamangala).—

Will the Government be pleased to state :—

(*a*) the total length of the right bank canal of the Marconahalli Reservoir that is flowing in Nagamangala Taluk, and the number of acres of land that is being irrigated for the present in that canal;

(*b*) what is the designed irrigable area (acres) for this Canal;

(*c*) in which taluk is the site of the Marconahalli Dam and the submerged area located;

(*d*) the reason for not giving water to the stipulated number of acres in the right bank canal of the reservoir;

(*e*) whether they will take steps at least now to supply water to the area which was fixed originally to get water when the reservoir was designed and built ?

A.—**Sri ALUR HANUMANTHAPPA** (Deputy Minister for Irrigation).—

(*a*) 5 miles; 895 acres in all.

(*b*) 1,488 acres.

(*c*) The site of Marconahalli dam lies in Kunigal Taluk and the submerged area lies both in Kunigal and Nagamangala Taluks.

(*d*) Due to the shortage in supply of water to the Reservoir.

(*e*) This will be examined.

ಶ್ರೀ ಟಿ. ಎನ್. ಮಾದಪ್ಪ ಗೌಡ.—ಐದು ಮೈಲಿಗಳಷ್ಟು ನಾಲಾ ತೆಗೆದು ನಿಗದಿಯಾಗಿರುವಷ್ಟು ನೀರನ್ನು ಕೊಡದೆ ಇರಲು ಏನು ಕಾರಣ ?

† ಶ್ರೀ ಆಲೂರು ಹನುಮಂತಪ್ಪ.—ನಾಲಾ ತೆಗೆದಿದ್ದರೂ ಅದಕ್ಕೆ ಪೂರ್ತಿಯಾಗಿ ನೀರು ಸಿಕ್ಕುವುದಿಲ್ಲ. ಅಲ್ಲಿಂದ ಈಗ ನಾಗಮಂಗಲ ತಾಲ್ಲೂಕಿಗೆ ಸೇರಿದ ಕೆಲವು ಭಾಗಗಳಿಗೆ ಸುಮಾರು 455 ಎಕರೆಯಷ್ಟು ಭೂಮಿಗೆ ನೀರು ಹೋಗುತ್ತಿದೆ.

ಶ್ರೀ ಟಿ. ಎನ್. ಮಾದಪ್ಪ ಗೌಡ.—ನಾಲಾ ತೆಗೆಯಬೇಕೆಂದು ಮಾಡಿದಾಗ, ಎಷ್ಟುದೂರ ನೀರು ಕೊಡುತ್ತೆನ್ನುವುದನ್ನು ಮೊದಲೇ ತೀರ್ಮಾನ ಮಾಡಬೇಕಾಗಿರಲಿಲ್ಲವೇ ?

Sri ALUR HANUMANTHAPPA.—The entire reservoir has got the capacity of 8,890 units. But due to scarcity of rain and other things they have now in Nagamangala taluk and Kunigal Taluk, under the right bank channel about 895 acres are under irrigation and the supply of water to the right bank channel may be considered after the Mangalapura reservoir is taken up and completed.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ತಾವು ಉತ್ತರದಲ್ಲಿ ಪರಿಶೀಲಿಸಲಾಗುವುದು ಎಂದು ಹೇಳಿದ್ದೀರಿ. ಈಗಾಗಲೇ ಕೆರೆ ಕಟ್ಟಿದಮೇಲೆ ಸುಮಾರು ಇಪ್ಪತ್ತು ವರ್ಷಗಳಿಂದಲೂ ಪರಿಶೀಲನೆ ಮಾಡಿ ಇನ್ನು ಹೆಚ್ಚಿನ ಅಚ್ಚುಕಟ್ಟಿಗೆ, ನೀರು ಕೊಡುವುದಕ್ಕಾಗುವುದಿಲ್ಲ ಎಂದರೆ ತಾವು ಎಷ್ಟು ಎಕರೆಗಳಿಗೆ ನೀರು ಕೊಡಬಹುದು ?

ಶ್ರೀ ಆಲೂರು ಹನುಮಂತಪ್ಪ.—1,488 ಎಕರೆಗಳಲ್ಲಿ ಸುಮಾರು 600 ಎಕರೆಗಳಷ್ಟು ಭೂಮಿಗೆ ನೀರು ಸಿಗುವುದಿಲ್ಲ ಎಂದು ವರದಿ ಬಂದಿದೆ. ಅದನ್ನು ಪರಿಶೀಲಿಸಬೇಕಾದರೆ, ಮಂಗಳ ರಿಸರ್ವಾಯರು ಆದಮೇಲೆ ಮಾಡಬೇಕು.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ನಾಲಾ ತೆಗೆದಮೇಲೆ ಒಂದೊಂದು ವರ್ಷ ಒಂದೊಂದು ತರಹ ಕೆಪಾಸಿಟಿ ಬದಲಾವಣೆಯಾದರೆ ಹೇಗೆ ?

ಶ್ರೀ ಆಲೂರು ಹನುಮಂತಪ್ಪ.—600 ಎಕರೆಗಳಷ್ಟು ಜಮೀನಿಗೆ ನೀರು ಸಿಗುವುದಿಲ್ಲ ಎಂದು ವರದಿ ಇದೆ. ಅದಕ್ಕಾಗಿ ಮಂಗಳ ಯೋಜನೆಯಾದಮೇಲೆ ಇನ್ನು ಪರಿಶೀಲಿಸಬೇಕಾಗುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—ತಾವು ಮಳೆಯು ಸರಾಸರಿ ಇಷ್ಟು ಬರುತ್ತದೆ ಎನುವ ಲೆಕ್ಕಗಳನ್ನು ಇಟ್ಟುಕೊಂಡು. ನಾಲಾ ತೆಗೆಯುವ ಕೆಲಸವನ್ನು ನಿರ್ಧಾರ ಮಾಡುತ್ತೀರಾ ಹೇಗೆ ?

ಶ್ರೀ ಆಲೂರು ಹನುಮಂತಪ್ಪ.—ಮಾರ್ಕೋನಹಳ್ಳಿ ಜಲಾಶಯ ಮೊದಲು ಮಂಜೂರಾದದ್ದು 1937 ರಲ್ಲಿ. 1939 ರಲ್ಲಿ ಅದರ ನಾಲಾ ತೆಗೆದದ್ದು. 1940 ರಲ್ಲಿ ಬಿಸನಾಲೆ, ತೊರೆಹಳ್ಳಿ, ದುಡುಗನಹಳ್ಳಿ, ನಾಗಮಂಗಲಕ್ಕೆ ಸೇರಿದ ಗ್ರಾಮಗಳು ಇಲ್ಲಿರುವ ರೈತರಿಂದ ಅರ್ಜಿ ಬಂದುದರಿಂದ ಅದರಂತೆ ಎಸ್ಟಿಮೇಟು ತಯಾರಿಸಿ, 455 ಎಕರೆಯಷ್ಟಕ್ಕೆ ಮಾತ್ರ ನೀರು ಸಿಗುತ್ತದೆ, 600 ಎಕರೆಗಳಿಗೆ ಸಿಗುವುದಿಲ್ಲ. ಮಂಗಳ ಪ್ರಾಜೆಕ್ಟು ಆದಮೇಲೆ ಇದಕ್ಕೆ ನೀರು ಬರುವಂತಹ ಸೂಚನೆ ಇದೆ ಎಂದು ಮೊದಲೇ ಹೇಳಿದ್ದಾರೆ.

1-30 P.M.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಮಳೆ ಹೆಚ್ಚಿಗೆ ಬಂದರೆ ಹೆಚ್ಚು ನೀರು ಕೊಡುತ್ತೇವೆಂದು ಹೇಳಿದಿರಿ. ಮಳೆ ಹೆಚ್ಚಿಗೆ ಬಿದ್ದಾಗ ಈ ಐದು ಮೈಲಿ ವಿಸ್ತೀರ್ಣವುಳ್ಳ ಜಮೀನಿಗೆ ಈ ನಾಲೆಯಿಂದ ಎಷ್ಟು ಸಾರಿ ನೀರು ಕೊಟ್ಟಿದ್ದೀರಿ ?

ಶ್ರೀ ಆಲೂರು ಹನುಮಂತಪ್ಪ.—ಮಳೆ ಹೆಚ್ಚಿಗೆ ಬಿದ್ದಾಗ ಎನ್ನುವುದೇ ಅಲ್ಲ. ಜೂನ್ 10ನೇ ತಾರೀಖು ಈ ರಿಜರ್‌ವಾಯರ್‌ನಿಂದ ನೀರು ಬಿಡುತ್ತೇವೆ. ಸೆಪ್ಟೆಂಬರ್‌ವರೆಗೂ ಮಳೆಗಾಲವಿರುವುದರಿಂದ ಈ ಜಲಾಶಯಕ್ಕೆ ನೀರು ಹೆಚ್ಚಿಗೆ ಬರುತ್ತದೆ. Tail end of the area ಎಂದರೆ ಸುಮಾರು 11,500 ಎಕರೆ ಜಮೀನಿಗೆ ನೀರು ಸಿಗುತ್ತದೆಂದು ನಾನು ಹೇಳಿದ್ದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಎಡದಂಡೆ ನಾಲೆಯಿಂದ ಸುಮಾರು 12½ ಸಾವಿರ ಎಕರೆ ಅಚ್ಚುಕಟ್ಟಾಗಿದೆ ಎಂದು ಹೇಳುವಾಗ ಪ್ರತಿವರ್ಷವೂ ಅಲ್ಲಿಯ ರೈತರಿಗೆ ಸಾಕಷ್ಟು ನೀರು ಸಿಗದೆ ತೊಂದರೆಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಹೌದು. ಅದಕ್ಕೆ ಸರ್ಕಾರದಿಂದ ನೇಮಿತವಾದ ಒಂದು ಕಮಿಟಿ ಇದೆ. ಆ ಕಮಿಟಿಯವರು ಅಲ್ಲಿನವರೆಗೆ ಸೆಮಿ-ಡ್ರೈ-ಕ್ರಾಪ್ ಬೆಳೆಯಬೇಕೆಂದು ಸೂಚನೆ ಕೊಟ್ಟಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—Tail-end ಜಮೀನುಗಳಿಗೆ ಆಗಸ್ಟ್-ಸೆಪ್ಟೆಂಬರ್‌ನಲ್ಲಿ ಯಥೇಚ್ಛವಾಗಿ ನೀರನ್ನು ಕೊಡುವುದಕ್ಕೆ ಸಾಧ್ಯವೆಂದು ಹೇಳುತ್ತೀರಿ. ಹಾಗಾದರೆ ಈ ವರ್ಷವಾದರೂ ನೀರು ಸರಬರಾಜು ಮಾಡಲು ತಕ್ಕ ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—600 ಎಕರೆಗೆ ನೀರು ಈಗ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಮಂಗಳ ಪ್ರಾಜೆಕ್ಟ್ ಆದ ಮೇಲೆ 600 ಎಕರೆಗೆ ನೀರು ಕೊಡಲಿಕ್ಕೆ ಸಾಧ್ಯವೆಂದು ಹೇಳಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕಮಿಟಿಯವರು ಸೆಮಿ-ಡ್ರೈ-ಕ್ರಾಪ್ಸ್ ಬೆಳೆಯಬೇಕೆಂದು ಸೂಚನೆ ಕೊಟ್ಟಿದ್ದಾರೆಂದು ಹೇಳಿದಿರಿ. ಒಂದು ವೇಳೆ ಆಗ ನೀರು ಸಾಕಾಗುತ್ತದೆಂದು ತಮಗೆ ಅನುಭವ ಬಂದಮೇಲೆ ಸಾಕಷ್ಟು ನೀರನು ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಚಾನಲ್‌ನಲ್ಲಿ ನೀರು ಹೋಗುವುದೆಲ್ಲಾ ಎಡದಂಡೆಗೇ ಹೋಗುತ್ತಿದೆ. ಬಲದಂಡೆ ಚಾನಲ್ಲಿನಲ್ಲಿ ನೀರು ಎಷ್ಟಿದೆ, ಎಷ್ಟು ಹರಿಯುತ್ತದೆ ಎಂಬುದನ್ನು ನೋಡಬೇಕು.

ಶ್ರೀ ವಿ. ಎಂ. ದೇವ್.—ಹೋದ 10 ವರ್ಷಗಳಲ್ಲಿ ಯಾವ್ಯಾವ ವರ್ಷದಲ್ಲಿ ಎಷ್ಟೆಷ್ಟು ಯೂನಿಟ್ಟುಗಳ ನೀರು ಕೆರೆಗಳಲ್ಲಿ ತುಂಬಿತ್ತು ಎಂಬ ಬಗ್ಗೆ ತಪ್ಸೀಲು ಕೊಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಒಂದೆರಡು ವರ್ಷಗಳ ವಿನಹ ಬಾಕಿ ವರ್ಷಗಳಲ್ಲಿ ಕೆರೆಗಳಲ್ಲಿ ನೀರಿಲ್ಲದೆ ತೊಂದರೆಯಾಗಲಿಲ್ಲ. ಸೆಮಿ-ಡ್ರೈ-ಕ್ರಾಪ್ಸ್ ಬೆಳೆಯುವುದಕ್ಕೆ ಯೋಚನೆ ಮಾಡುತ್ತಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—ಸೆಮಿ-ಡ್ರೈ-ಕ್ರಾಪ್ಸನ್ನು ಬೆಳೆಯುವುದಕ್ಕೆ ಯೋಚನೆ ಮಾಡುತ್ತಿದ್ದೇವೆ. ಇದಕ್ಕೆ ಬೇಕಾದ ಸೈಟು ನಾಗಮಂಗಲ ತಾಲ್ಲೂಕಿನಲ್ಲಿದೆಯೆಂದು ಹೇಳಿದಿರಿ. ಅದನ್ನೇನೋ ಒಪ್ಪುತ್ತೇನೆ. ಆ ಪ್ರಕಾರ catchment area ಮಾಡಲಾಯಿತು ಎಂದು ಹೇಳಿದ್ದೀರಿ. ನಾಳೆ ಈ ತಾಲ್ಲೂಕಿನವರಿಗೆ ಕಟ್ಟುನಿಟ್ಟಾಗಿ ಇಂತಹ ಬೆಳೆಯನ್ನೇ ಬೆಳೆಯಬೇಕೆಂದು ಹೇಳುತ್ತೀರಿ. ಆದರೆ ಇದೇ ರೀತಿ ಹಿಂದೆ ವಾಗ್ದಾನ ಮಾಡಿದ್ದಂತಹ ಕುಣಿಗಲ್‌ಗೆ ಮೊದಲು ಪ್ರೈಯಾರಿಟಿ ಕೊಡಬೇಡವೇ ?

ಶ್ರೀ ಆಲೂರು ಹನುಮಂತಪ್ಪ.—ನಾಗಮಂಗಲ ತಾಲ್ಲೂಕಿನಲ್ಲಿ ಟ್ಯಾಂಕ್‌ಸೈಟ್ ಕುಣಿಗಲ್ ತಾಲ್ಲೂಕಿನಲ್ಲಿ ಕ್ಯಾಚ್‌ಮೆಂಟ್ ಏರಿಯಾ—ಹೀಗೆ ಎರಡರಲ್ಲೂ ಬಂದಿದೆ. ಕೆರೆ ಕಟ್ಟಿದರೆ ಸಾಮಾನ್ಯವಾಗಿ ನೀರು ಕೊಡುವುದಕ್ಕೆ ರೈತರ ದೃಷ್ಟಿಯಿಂದ ಅನುಕೂಲವಾಗುತ್ತದೆ. ಆದರೆ ಇಲ್ಲಿ ಬಲದಂಡೆ ಚಾನಲ್ಲಿನಲ್ಲಿ ಸಾಕಷ್ಟು ನೀರು ಹೋಗದೇ ಇರುವುದರ ದೆಸೆಯಿಂದ ಮಂಗಳ ಪ್ರಾಜೆಕ್ಟ್ ಆದಮೇಲೆ 600 ಎಕರೆ ಜಮೀನಿಗೆ ಮಾತ್ರ ನೀರು ಕೊಡುವುದಕ್ಕೆ ಸಾಧ್ಯವೆಂದು ಹೇಳಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ.—ಮಂತ್ರಿಗಳು ಟೂರ್ ಹೋದಾಗ ಆ ಸ್ಥಳವನ್ನಾದರೂ ಪರಿಶೀಲನೆ ಮಾಡುತ್ತಾರೆಯೇ ?

ಶ್ರೀ ಆಲೂರು ಹನುಮಂತಪ್ಪ.—ಅದು ದೊಡ್ಡ ಕೆರೆ. ನೋಡುತ್ತೇನೆ.

ಶ್ರೀ ಟಿ. ಮಾದಯ್ಯಗೌಡ.—ಈ ಜಲಾಶಯದ ಬಲದಂಡೆಯಲ್ಲಿ ಐದು ಮೈಲಿಗಳ ನಾಲೆಯನ್ನು ಮಾಡಿದ್ದೇವೆಂದು ಹೇಳಿದ್ದೀರಿ. ಇನ್ನೂ ಈಗ ಮಂಗಳ ಪ್ರಾಜೆಕ್ಟು ಕಟ್ಟಬೇಕೆಂಬ ಯೋಜನೆಯೊಂದಿದೆ ಎಂದು ಹೇಳುತ್ತೀರಿ. ಅಂದಮೇಲೆ ಈಗ ಐದು ಮೈಲಿಗಳ ನಾಲೆಯನ್ನು ಮಾಡುವಾಗ ವೇಸ್ಟ್ ಎಷ್ಟಾಗಿದೆ, ಅದನ್ನು ಯಾರು ಮಾಡಿದ್ದಾರೆಂಬುದನ್ನು ವಿಚಾರಿಸುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಈ ಮಂಗಳ ಪ್ರಾಜೆಕ್ಟು ಬಹಳ ದಿವಸಗಳಿಂದ ಆಗಬೇಕೆಂದು ಸರ್ಕಾರದ ಮುಂದಿದೆ. ಅದಕ್ಕೆ ಹಣ ಮಂಜೂರಾಗಿವೆ ; ಸ್ವಲ್ಪ ಹಣ ಖರ್ಚೂ ಆಗಿದೆ.

ಶ್ರೀ ಟಿ. ಡಿ ದೇವೇಂದ್ರಪ್ಪ.—ಜಮೀನಿಗೆ ನೀರು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದಿರಿ. ಹಾಗಾದರೆ ಜಮೀನಿನ ಮೇಲೂ ಕೂಡ ವಾಟರ್‌ರೇಟ್ ಕಾಂಟ್ರಿಬ್ಯೂಷನನ್ನು ವಸೂಲು ಮಾಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಸಾಮಾನ್ಯವಾಗಿ ನೀರು ಕೊಡದಿದ್ದರೆ ವಾಟರ್ ರೇಟನ್ನು ಕೇಳಿದರೂ ರೈತರು ನಮಗೆ ಕೊಡುವುದಿಲ್ಲ. ಆದರೆ ಮಂಗಳ ಪ್ರಾಜೆಕ್ಟು ಕಟ್ಟಿದಮೇಲೆ ಆ ತೆರಿಗೆ ಬರುತ್ತದೆ.

ಶ್ರೀ ಅಂದಾನಯ್ಯ.—ಈ ಮಂಗಳ ಪ್ರಾಜೆಕ್ಟ್ ಯಾವಾಗ ಮುಗಿಯುತ್ತದೆ.

ಶ್ರೀ ಆಲೂರು ಹನುಮಂತಪ್ಪ.—ಈ ವರ್ಷದ ಬಡ್ಜೆಟ್ಟಿನಲ್ಲಿ 1 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಇನ್ನೂ 6 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂದಿದ್ದೇವೆ.

ಶ್ರೀ ಟಿ. ಎನ್. ವ ದಪ್ಪಗೌಡ.—ಇಷ್ಟೆಲ್ಲಾ ತಕರಾರು ಬಂದುದು ಈ ಒಂದು ಕಮಿಟಿ ರಚನೆಯಾದ ಮೇಲಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಸಾಮಾನ್ಯವಾಗಿ ಇಂತಹ ದೊಡ್ಡ ಕೆರೆಗಳಿಗೆ ಕಮಿಟಿ ಮಾಡಿದರೆ ಅಲ್ಲಿನ ಕೆಲಸ ಎಫೆಕ್ಟಿವ್ ಆಗಿ ನಡೆಯುತ್ತದೆಂಬುದು ಸರ್ಕಾರದ ಉದ್ದೇಶ. ಈಗ ಸುಮಾರು 11,500 ಎಕರೆ ಜಮೀನಿಗೆ ನೀರಾವರಿ ಸೌಕರ್ಯ ಕೊಡತಕ್ಕ ಒಂದು ದೊಡ್ಡ ರಿಜರ್ವಾಯರ್‌ಗೆ ಒಂದು ಕಮಿಟಿ ಮಾಡಿರುವುದರಿಂದ ಅಲ್ಲಿನ ಕೆಲಸ ಎಫೆಕ್ಟೀವ್ ಆಗಿ, ಎಫಿಷಿಯಂಟಾಗಿ ನಡೆಯುತ್ತಿದೆಯೆಂದು ಸರ್ಕಾರಕ್ಕೆ ವರದಿ ಬಂದಿದೆ.

Economy measures proposed and given effect to in the present Emergency Conditions.

Q.*—482. **Sri G. A. THIMMAPPA GOWDA (Arkalgud).—

Will the Government be pleased to state :—

(*a*) the economy measures proposed and given effect to in the present Emergency conditions ;

(*b*) the extent of economy effected by those measures in various Departments of the State ?

A.—**Sri B. D. JATTI** (Minister for Finance).—

(*a*) Instructions regarding the special austerity and economy measures to be observed with immediate effect in all Government Offices in the State, have been issued in G. O. No. GAD 129 OOM 62, dated 21st November 1962 and G.O. No. FD 189 BUD 62, dated 3rd December 1962 (opies placed on the Table of the House); placed in the Mysore Legislature Library *vide* Nos. 6/L.A. Bud. 68.

(*b*) It is too early to assess the extent of economy effected.

Sri G. A THIMMAPPA GOWDA.—Is Government in a position now to say regarding the approximate amount that may be saved by effecting these economy measures ?

Sri B. D. JATTI.—Sir, I hope to save 1½ Crores of Rupees.

Sri G. V. GOWDA.—May I know whether any periodical report is being called for from the Heads of Departments to know that these instructions with regard to the special austerity measures are being observed ?

Sri B. D. JATTI.—Government will get necessary information from the Heads of Departments and Government will know what action has been taken.

Sri G. V. GOWDA.—May I know for what period the Government hopes to save 1½ Crores of Rupees ?

Sri B. D. JATTI.—For one year.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಈ ಮಿತವ್ಯಯವನ್ನು ಸರ್ಕಾರೀ ಅಪೀಸುಗಳಲ್ಲಿ ಮಾಡಿದ್ದೇವೆಂದು ಹೇಳಿದ್ದೀರಿ. ಯಾವ ನಮೂನೆಯಲ್ಲಿ ಅದನ್ನು ಮಾಡಿದ್ದೀರಿ ? ಅಥವಾ ಈಗಿರತಕ್ಕ ಅಧಿಕಾರಿಗಳನ್ನು ನಿವೃತ್ತಿಗೊಳಿಸಿರುವ ರೀತಿಯಲ್ಲಿ ಮಿತವ್ಯಯ ಮಾಡಿದ್ದೀರಾ ?

Sri B. D. JATTI.—In addition to the two Government Orders which have been mentioned in the reply, I can give additional information to the Hon'ble Member that a 10 per cent cut has been made in the provision in the Budget for 1963-64 under T.A., Contingency and other items. Similarly, action has been taken to treat 10 per cent of sanctioned staff in all Departments as surplus and absorb them in future vacancies or posts to be created for Plan Schemes.

Sri C. J. MUCKANNAPPA.—Sir, may I know what is the economy measure implemented in the General Administration Department and the State Legislature Secretariat ?

Mr. SPEAKER.—With regard to the Legislature Secretariat, you can ask me and not the Minister.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಿಮ್ಮ ಲೆಜಿಸ್ಲೇಚರ್ ಸೆಕ್ರೆಟೇರಿಯಟ್ ವಿಷಯ ಬೇಡವೆಂದು ಹೇಳುತ್ತೀರಾ ? ಹಾಗಾದರೆ ಅದು ಬೇಡ, ಬಿಡಿ ಸ್ವಾಮಿ, ಜಿ. ಎ. ಡಿ. ಯಿಂದ ಮಾತ್ರ ಎಷ್ಟು ಹಣ ಉಳಿತಾಯವಾಗುತ್ತದೆ ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಈ ಕಡೆ ಲಕ್ಷ್ಯವಿಡಲಿಲ್ಲವೆಂದು ಕಾಣುತ್ತದೆ. ಒಟ್ಟು 1½ ಕೋಟಿ ರೂಪಾಯಿಗಳು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಜನರಲ್ ಅಡ್ಮಿನಿಸ್ಟ್ರೇಷನ್ನಿನಲ್ಲಿ ಒಂದೂವರೆ ಕೋಟಿ ರೂಪಾಯಿಗಳೇ !

Sri B. D. JATTI.—No Sir, for the whole State.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಕೇಳಿರುವುದು ಜಿ.ಎ.ಡಿ. ವಿಷಯ, ಇದುವರೆಗೆ ಅಲ್ಲಿ ಎಷ್ಟು ಎಕಾನಮಿಯನ್ನು ಇಂಪ್ಲಿಮೆಂಟ್ ಮಾಡಿದ್ದೀರಿ, ಎಷ್ಟು ಲಕ್ಷ ರೂಪಾಯಿಗಳನ್ನು ಉಳಿತಾಯ ಮಾಡಿದ್ದೀರಿ ?

Sri B. D. JATTI.—Sir, the cut is applicable to all the Departments and in all the Departments, General Administration Department is included.

Sri C. J. MUCKANNAPPA.—I want to know what is the amount saved particularly from the General Administration Department ?

Sri B. D. JATTI.—Sir, it is impossible for anybody to calculate separately on the spot.

ಶ್ರೀ ಇ. ನಾರಾಯಣಗೌಡ.—ಕೆಲವು ಆಫೀಸುಗಳಲ್ಲಿ ನಿವೃತ್ತರಾದ ನೌಕರರನ್ನು ಪುನಃ ನೇಮಿಸಬಾರದು ಎಂದು ಸರ್ಕಾರೀ ಆಜ್ಞೆಗಳಲ್ಲಿ ಆದೇಶವನ್ನು ಕೊಟ್ಟಿದ್ದಾರೆ. ಆದರೆ ಇನ್ನೊಂದು ಕಡೆ ಡೆಪ್ಯೂಟಿ ತಹಸೀಲ್‌ದಾರ್, ಅಡಿಷನಲ್ ಜಿಲ್ಲಾಧಿಕಾರಿಗಳು, ಅಡಿಷನಲ್ ತಹಸೀಲ್‌ದಾರರನ್ನು ಹೆಚ್ಚು ಮಾಡುತ್ತಿದ್ದಾರೆ. ಇದರ ಅರ್ಥವೇನು ?

Sri B. D. JATTI.—Both are correct. The general policy of the Government is not to give extension and not to re-employ, but whenever it is necessary in some offices, judging on the work-load, we will appoint.

Sri S. SIVAPPA.—After the introduction of 10 per cent cut in the staff of various Departments, may I know the number that will be thrown out of employment ?

Sri B. D. JATTI.—The policy of the Government is not to throw out any of the Government officers or officials. Vacancies will not be filled in.

Sri D. M. SIDDAIAH.—You were pleased to say that on account of introduction of economy measures in G. A. D. and also Finance Department, Rs. 1½ crores is saved. What about other Departments ?

Sri B. D. JATTI.—The total saving is from all the Departments.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಮಿತವ್ಯಯ ಮಾಡುವುದರಲ್ಲಿ ಯಾವ ಇಲಾಖೆಯಲ್ಲಿ ಹೆಚ್ಚು ಉಳಿತಾಯವಾಗಿದೆ ?

ಶ್ರೀ ಬಿ. ಡಿ. ಜತ್ತಿ.—ಅದನ್ನು ಹೇಳುವುದು ಕಷ್ಟ. ಕೆಲವು ಮಟ್ಟಿಗೆ ಪಬ್ಲಿಕ್‌ವರ್ಕ್ಸ್ ಇಲಾಖೆಯಲ್ಲಿ ಉಳಿತಾಯ ಹೆಚ್ಚಾಗಬಹುದು.

Sri G. V. GOWDA.—You were pleased to say that 10 per cent of the existing staff will be treated as surplus and they have to be posted to vacancies that are usually created or for plan postings. May I know in how many cases this surplus 10 per cent officers have been posted ?

Sri B. D. JATTI.—Whenever new vacancies arise, instead of appointing new persons, these persons will be sent there and they will be appointed.

Sri G. V. GOWDA.—How many such instances are there ?

Sri B. D. JATTI.—These are details and they cannot be collected in a day or two. If necessary they will be collected and supplied.

Sri J. P. SARWESH.—There are Departments in which Officers have no work at all. For example, District Social Welfare Officers. Will the Government consider the question of abolishing such Departments which have no work ?

Sri B. D. JATTI.— That may be the opinion of the Hon'ble Member. But from that he should not presume that it is the opinion of the Members and the Hon'ble House.

Sri K. S. SURYANARAYANA RAO.—Are these appointments of Special Deputy Commissioners made subsequent to the economy drive or prior to it ?

Sri B. D. JATTI.—Prior to it.

ಶ್ರೀ ಎಸ್. ಎಂ. ಗುರ್ರೆಡ್ಡಿ.—ಕನ್ನಡ ಪ್ರೈಮರಿ ಶಾಲೆಯ ಶಿಕ್ಷಣಕ್ಕೆ 10 ಪರ್ಸೆಂಟ್ ಕಟ್ ಮಾಡಿದ್ದಾರೆಂದು ಕೇಳಿದ್ದೇನೆ. ಅದರ ಪರಿಣಾಮ ಕೆಡುಕು ಆಗುವುದಿಲ್ಲವೇ ?

Sri B. D. JATTI.—Education Department is not covered by this Order.

ಶ್ರೀ ಟಿ. ಮಾದಯ್ಯಗೌಡ.—ತುರ್ತು ಪರಿಸ್ಥಿತಿಯಲ್ಲಿ ವ್ಯವಸಾಯ ಇಲಾಖೆಗೆ ಮತ್ತು ಮೈನರ್ ಇರಿಗೇಷನ್ನಿಗೆ ಕಟ್‌ಮಾಡಿ ಸೇವಿಂಗ್ಸ್ ತೋರಿಸುವುದು ಯುಕ್ತವಲ್ಲ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಎಲ್ಲಿ ಮಿತವ್ಯಯ ಮಾಡುವುದು ಅನಾವಶ್ಯಕವೋ ಅಲ್ಲಿ ಮಾಡುವುದಿಲ್ಲ.

Sri S. SIVAPPA.—After economy measures have been introduced how many new posts have been created ?

Sri B. D. JATTI.—Unless development of economic activities damand it, it is not necessary to introduce any new posts.

ಶ್ರೀ ಎಸ್. ಗೋಪಾಲಗೌಡ.—ಮಂತ್ರಿ ಮಂಡಲಕ್ಕೆ ಸಂಬಂಧಪಟ್ಟಹಾಗೆ ಏನೇನು ಉಳಿತಾಯ ಕ್ರಮಗಳನ್ನು ಕೈಗೊಂಡಿದ್ದೀರಿ, ಮಂತ್ರಿ ಮಂಡಲದ ಸಂಖ್ಯೆಯನ್ನು ಕಡಿಮೆ ಮಾಡುವ ಯೋಚನೆ ಇದೆಯೇ ?

Sri B. D. JATTI.—One question does not arise here and that is the number of the Ministers. That is not a matter for eliciting information.

Sri C. J. MUKKANNAPPA.—We are not bothered about your size.

Sri B. D. JATTI.—Even if the Hon'ble Member is bothered, he cannot do anything. I am sure about it. Regarding saving in expenses in the Ministers Establishment, I have already explained while replying to the Budget that T. A. and Contingencies and other items have been reduced and we have been saving some money.

ಶ್ರೀ ಎನ್. ನಂಜೇಗೌಡ.—ವಿದ್ಯಾಭ್ಯಾಸ ಇಲಾಖೆಯಲ್ಲಿ ಅಸಿಸ್ಟೆಂಟ್ ಡಿ. ಇ. ಓ. ಎಂದು ನೇಮಕ ಮಾಡಿದ್ದಾರೆ. ಆ ಸಿಬ್ಬಂದಿ ಅನಾವಶ್ಯಕವೆಂದು ಕಾಣುತ್ತದೆ. ಅದನ್ನು ವಜಾ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

Sri B. D. JATTI.—The report is not before the Government. If that is the opinion of the Department, we will consider.

Sri G. V. GOWDA.—It is said that the appointment of additional Deputy Commissioners was contemplated or given effect to prior to this Order. In view of this Order will the Government stop appointing additional Deputy Commissioners ?

Sri B. D. JATTI.—It is not a continuing process. Additional work was there in some of the Districts. In order to collect arrears and do additional work, temporary posts have been created for a period of one year and the Government will reconsider it after the period is over.

Sri K. DEVIAH.—Primary and Middle schools are run in two shifts and the teachers are getting full pay for doing half a day's work. They are paying Rs. 15,000 per year for them. Whereas at a cost of about Rs. 1,500 per year, you can have additional accommodation for these schools. So, will the Government consider the question of saving money by abolishing shift system and provide additional accommodation and get full work from the teachers ?

Sri B. D. JATTI.—Teachers who are working know how many hours they have to work. If they are not working according to schedule, they will not be kept there. Again shift system is introduced because it is difficult for Government to spare money for additional buildings. In order to teach more students we are running it. There is no question of economy as the Hon'ble Member thinks.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈಗ ಮೈಸೂರು ಸಂಸ್ಥಾನದಲ್ಲಿ ಸುಮಾರು 30 ಕಡೆಗಳಲ್ಲಿ ಬೆಟರ್‌ಮೆಂಟ್‌ಲೆವ್ಹಿ ಸಬ್‌ಡಿವಿಜನ್ ಆಫೀಸರುಗಳು ಇದ್ದಾರೆ. ಇವರಿಗೆ ಒಂದು ವರ್ಷಕ್ಕೆ ಸುಮಾರು 50 ಸಾವಿರ ರೂಪಾಯಿಗಳು ಖರ್ಚಾಗುತ್ತವೆ. ಇವರಿಗೆ ಯಾವ ಕೆಲಸವೂ ಇಲ್ಲ. ಇವರನ್ನು ಈಗ ಸುಮಾರು ಎರಡು ವರ್ಷಗಳಿಂದಲೂ ನೇಮಕ ಮಾಡಿಕೊಂಡು ಮುಂದುವರಿಸಿಕೊಂಡು ಬಂದಿದ್ದಾರೆ. ಇದನ್ನು ಏನಾದರೂ ಏಕಾನಮಿ ಮೆಷರ್ಸ್‌ನಲ್ಲಿ ಸೇರಿಸಿದ್ದೀರಾ ?

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಹೇಳಿದ ಉದಾಹರಣೆ ನಮಗೆ ಕಂಡು ಬಂದಿಲ್ಲ. ಅದನ್ನು ಪರಿಶೀಲನೆ ಮಾಡಿ ಉಳಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

Sri H. R. KESHAVA MURTHY.—In ade veloping economy, if 10 per cent cut is made in the establishment will it not hamper progress of the country by hampering daily routine work ?

Sri B. D. JATTI.—The Government will take all precautionary measures not to allow hampering of any progress.

Sri S. SIVAPPA.—Has it come to the notice of Government that after introduction of these economy measures they have increased the number of members in the Public Service Commission ?

Sri B. D. JATTI.—That will not come under the economy measures.

ಶ್ರೀಮತಿ ಸುಶೀಲಾಬಾಯ್ ಹೀರಾಚಂದ್ ಷಾ.—ಬಿಜಾಪುರದೊಳಗೆ ಸೆಟ್ಲ್‌ಮೆಂಟ್ ಜೈಲಿನಲ್ಲಿ 50 ಎಕರೆ ಜಮೀನು ಇದೆ. ಅಲ್ಲಿ ಬಹಳ ಕಡಿಮೆ ಸಂಖ್ಯೆಯಲ್ಲಿ ಖೈದಿಗಳಿರುತ್ತಾರೆ. ಅದಕ್ಕೆ ಸುಮಾರು 50 ಲಕ್ಷ ರೂಪಾಯಿಗಳು ಖರ್ಚಾಗುತ್ತಾ ಇದೆ. ಆದ್ದರಿಂದ ಆ ಜೈಲು ಬೇಡ ಎಂದು ಹೇಳಿದ್ದೇವೆ. ಅದರ ದೆಶೆಯಿಂದ ಏನು ಮಾಡಿದ್ದೀರಿ ?

ಶ್ರೀ ಬಿ. ಡಿ. ಜತ್ತಿ.—ಅಲ್ಲಿಗೆ ಎರಡು ಕಡೆಗಳಿಂದ ಜನ ಬರುತ್ತಿದ್ದಾರೆ. ಅದರ ಬಗ್ಗೆ ಮಹಾರಾಷ್ಟ್ರದವರು ಒಪ್ಪಿಕೊಂಡಿದ್ದಾರೆ. ಆದರೆ ಗುಜರಾತಿನವರು ಅದುಬೇಕು ಎಂದು ಹೇಳಿದ್ದಾರೆ. ಅದನ್ನು ಯೋಚನೆ ಮಾಡುತ್ತೇವೆ.

The Functions of the Mysore State Coir Advisory Board.

Q.*—506. **Sri B. BHASKAR SETTY (Kaup).—

Will the Government be pleased to state:—

(*a*) the functions of the Mysore State Coir Advisory Board;

(SRI B. BHASKAR SETTY)

(*b*) who are its present members ;

(*c*) the amount allocated to this Board since its constitution (yearwise figures may be given) ;

(*d*) the total amount spent by way of T. A. and D. A. and honorarium to the Chairman, Members and also salary and establishment expenses of the staff of the Board (yearwise figures may be given);

(*e*) the number of Coir Co-operative Societies that are functioning at present in South Kanara District ;

(*f*) the amount of loans and subsidies given to each of these Societies ?

A.—**Sri K. MALLAPPA** (Minister for Industries and Commerce).—

(*a*) 1. To advise Government generally on coir industry and in particular to consider ways and means of promoting the growth of this industry by suggesting ways for meeting their financial needs and to make efforts to start more and more coir industries by creating a favourable atmosphere and organising Co-operative Societies for this industry in the State.

2. To advise Government on specific problems relating to the industries which might be placed before the Board by Government from time to time.

3. To indicate the availability of raw materials and the technical requirements of such units.

4. To advise Government about the general policy regarding the nature and amount of Government assistance necessary in the case of units to be set up under the public sector.

5. To review at such periodical intervals as may be determined from time to time the working of the units so far started and to make suggestions for their expansion or development.

6. To advise the Government in organising production to meet the requirements of Government departments, industrial establishments and for export.

(*b*)— *Chairman*

1. The Deputy Minister for Sericulture.

Non-Official Members

2. Sri R. S. Hegde, B. A., LL. B., Honnavar, North Kanara District.
3. A. C. Chandra Gowda, Cocoanut Planter and President, Taluk Development Board, Kadur
4. Sri V. M. Deo, M. L. A., Gubbi
5. Sri K. Rangappa, Landlord, Narainagowdanahalli, Holalkeer.
6. Sri T. Madiah Gowda, M. L. A., Ramanagaram
7. Sri T. Ramesh Pai, Udipi, South Kanara

Official Members

8. The Joint Director, S. I., Bangalore
9. The Deputy Director in-charge of Coir (Sri K. Vijayam), Secretary.

(*c*)—

Year	*Amount*
	Rs. nP.
1959-60	6,089-98
1960-61	23,400-00
1961-62	20,000-00
1962-63	20,000-00

(*d*)—

Year.	Conveyance Allowance and House Rent to the Chairman.	Pay and D. A. to Establishment.	T. A. to the Chairman, members and staff.	Contingency.	Total.
	Rs. nP.	Rs. nP.	Rs. nP.	Rs. nP.	Rs. nP
1959–60	1,500–00	196–94	3,130–04	1,263–00	6,089–98
1960–61	3,600–00	1,514–33	5,305–48	1,871–92	12,291–73
1961–62	3,600–00	2,454–67	4,653–14	2,981–12	13,688–93
1962–63 (to end of November 1962)	2,700–00	2,170–84	675–91	441–37	5,989–12
Total ...	11,400–00	6,336–78	13,764–57	6,557–41	38,058–76

(*e*) Ten (10).

(SRI K. MALLAPPA)

(*f*)—

Name of the Co-operative Society	Financial assistance given			
	Working Capital Loan.	Share Capital Loan.	Grant	Total
1	2	3	4	5
1957–58	Rs.	Rs.	Rs.	Rs.
1 Udipi Coir Workers Co-operative Production and Sales Society. Malpe, South Kanara District.	50,000	Nil	10,800	60,800
2 Ullal Coir Workers Production and Sales Society, Ullal.	20,000	Nil	8,400	28,400
1959–60.				
3 Mulki Coir Works Cottage Industrial Co-operative Society.	12,200	1,000	7,200	20,400
4 Gangoli Coir Workers Co-operative Cottage Industrial Society Ltd. Coondapur.	17,700	1,000	7,200	25,900
1960–61.				
5 Brahmavar Huri Hagga Kushala Kaigarika Sahakari Sanga Ltd. Brahmavar.	12,500	—	6,300	18,800
6 Kalyanpur Huri Hagga Kaigarika Kelasagarara Sangh, Ltd., Kalyanpur.	12,500	1,000	6,300	19,800
7 Kaup Huri Hagga Thayarikara Sahakari Gudi Kaigarika Sangha Ltd., Kaup, Udipi Taluk.	12,500	1,000	6,300	19,800
1961–62.				
8 Shiroor Huri Hagga Mathu Narina Thayarakegarara Kushala Sangha, Ltd.,	15,580	1,000	1,500	18,080
9 Angalli Coir Workers Co-op. Cottage Industrial Society, Ltd., Coondapur.	15,000	1,000	1,500	17,500
1962–63				

	1	2	3	4	5
10	Thekkatte Coir Workers Cottage Industrial Co-operative Society.	...	...	...	...
	Total ...	1,67,9980	6,000	55,500	2,29,480

ಶ್ರೀ ಬಿ. ಭಾಸ್ಕರ ಶೆಟ್ಟಿ.—ಮೈಸೂರು ರಾಜ್ಯದ ಕಾಯರ್ ಬೋರ್ಡಿನ ಸಲಹಾ ಮಂಡಲಿಯವರಿಗೆ ಪ್ರಯಾಣ ಭತ್ಯ ಮತ್ತು ದಿನಭತ್ಯ ಹಾಗೂ ಅಧ್ಯಕ್ಷರು ಮತ್ತು ಸದಸ್ಯರುಗಳ ಗೌರವ ಸಂಭಾವನೆ ಮತ್ತು ಸಿಬ್ಬಂದಿ ವರ್ಗದವರ ವೆಚ್ಚ ಇವುಗಳಿಗೆ 38,058–76 ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಕಾಯರ್ ಕೋ-ಆಪರೇಟೀವ್ ಸೊಸೈಟಿಗಳಿಗೆ ಒಟ್ಟು 1,67,980 ರೂಪಾಯಿಗಳನ್ನು ಸಾಲವಾಗಿಯೂ ಮತ್ತು 55 ಸಾವಿರ ರೂಪಾಯಿಗಳ ಗ್ರಾಂಟನ್ನು ಕೊಟ್ಟಿದ್ದೀರಿ. ಹಾಗಾದರೆ ಇದುವರೆಗೆ ಕಾಯರ್ ಬೋರ್ಡಿನಲ್ಲಿ ಒಟ್ಟು ಎಷ್ಟು ಉತ್ಪತ್ತಿಯಾಗಿದೆ ಮತ್ತು ಹೊರಗಡೆಗೆ ಎಷ್ಟು ರಫ್ತು ಮಾಡಿದ್ದೀರಿ?

†ಶ್ರೀ ಕೆ. ಮಲ್ಲಪ್ಪ.—ಪ್ರೊಡಕ್ಷನ್ ಹೊಸದಾಗಿ ಕೇಳುತ್ತಿದ್ದೀರಿ. ಆ ವಿವರಣೆಗಳನ್ನು ತುಂಬಾ ಸೊಸೈಟಿಗಳಿಂದ ಸಂಗ್ರಹಣೆ ಮಾಡಬೇಕು. ಈಗ ಆ ಇನ್‌ಫರ್‌ಮೇಷನ್ ನನ್ನ ಹತ್ತಿರ ಇಲ್ಲ.

Sri G. V. GOWDA.—Is it a fact that on the advice of the Coir Board, a Show Room was opened in Bangalore ?

Sri K. MALLAPPA.—Yes, it has been recently opened.

Sri G. V. GOWDA.—May I know the establishment charges per month for that Show Room ?

Sri K. MALLAPPA.—The information is not available.

ಶ್ರೀ ಎಂ. ಸಿ. ಬಸಪ್ಪ.—ಈ ಕೈಗಾರಿಕೆಯಲ್ಲಿ training ಕೊಟ್ಟಿದ್ದನ್ನು follow-up ಮಾಡಲು ಕೆಲವು ಸಹಕಾರ ಸಂಘಗಳಿಗೆ ಸೌಕರ್ಯ ಕೊಟ್ಟಿಲ್ಲ. ಈ ವಿಚಾರದಲ್ಲಿ Advisory Boardನವರು ಏನು ಶಿಫಾರಸು ಮಾಡಿದ್ದಾರೆ?

ಶ್ರೀ ಕೆ. ಮಲ್ಲಪ್ಪ.—Advisory Committeeಯವರು ಏನೂ ಶಿಫಾರಸು ಮಾಡಿಲ್ಲ. ಕೆಲವು ಸಾಮಗ್ರಿಗಳನ್ನು ಪರದೇಶದಿಂದ ಒದಗಿಸಬೇಕಾಗುತ್ತದೆ; ಇದಕ್ಕೆ ವಿದೇಶಿ ವಿನಿಮಯ ಬೇಕಾಗುತ್ತದೆ. ಅದಕ್ಕೆ ಬೇಕಾದಂಥ ಏರ್ಪಾಡುಗಳನ್ನು ಸರ್ಕಾರದವರು ಮಾಡುತ್ತಾ ಇದ್ದಾರೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಹೊಸ Advisory Committee ಯಾವಾಗ ಆಯಿತು? ಹಿಂದಿನ ಕಮಿಟಿಯಲ್ಲಿದ್ದ ಮೆಂಬರುಗಳು ಯಾರ್ಯಾರು ?

ಅಧ್ಯಕ್ಷರು.—ಹಿಂದಿನ ಕಮಿಟಿಯ ವಿಷಯವನ್ನು ಈಗ ಕೇಳುತ್ತಾ ಇದ್ದೀರಾ ?

ಶ್ರೀ ಕೆ. ಮಲ್ಲಪ್ಪ.—ಈ ಕಮಿಟಿ ಹೊಸದು. ಹಾಲಿ ಇರತಕ್ಕಂಥ ಕಮಿಟಿ ರಚನೆಯಾದುದು ಡಿಸೆಂಬರ್ ತಿಂಗಳಿನಲ್ಲಿ ಹಿಂದಿನ ಕಮಿಟಿಯಲ್ಲಿ ಯಾರ್ಯಾರಿದ್ದರು ಅನ್ನುವುದು ನನ್ನ ಫೈಲಿನಲ್ಲಿಲ್ಲ. ಪ್ರತ್ಯೇಕವಾಗಿ ಮಾನ್ಯ ಸದಸ್ಯರಿಗೆ ಕೊಡುತ್ತೇನೆ.

Sri SANJEEVANATH AIKALA.—How many are directly connected as manufacturers, or traders ?

ಶ್ರೀ ಕೆ. ಮಲ್ಲಪ್ಪ.—ಇದರಲ್ಲಿ ಕೆಲವರು ಸ್ವತಃ ಅಭ್ಯಾಸ ಮಾಡುತ್ತಿದಾರೆ ಕೆಲವು ಪರದೇಶಗಳ ವಿಷಯ ತಿಳಿದುಕೊಂಡಿರುವವರೂ ಇದ್ದಾರೆ. South Kanara, North Kanara, Tumkur Districtನವರೂ ಇದ್ದಾರೆ. ಈ ಕೈಗಾರಿಕೆಯನ್ನು ಹೊಸದಾಗಿ ಪ್ರಾರಂಭ ಮಾಡಬೇಕಾಗಿದೆ. ಅಭಿವೃದ್ಧಿ ಆಗಿಲ್ಲ. ಅದನ್ನು ಅಭಿವೃದ್ಧಿ ಮಾಡುವ ದೃಷ್ಟಿಯಿಂದ ಪರದೇಶದಲ್ಲಿರತಕ್ಕ ಕೈಗಾರಿಕೆ ಅನುಭವವಿರುವವರು ಇದ್ದಾರೆ.

ಶ್ರೀ ಕೆ. ಲಕ್ಕಪ್ಪ.—Coir industryಅನ್ನು ಯಾವ ಯಾವ ಕಡೆ ಮಾಡಬೇಕೆಂದು ಈ ಬೋರ್ಡಿನ ಸದಸ್ಯರುಗಳು ಸಲಹೆ ಕೊಟ್ಟಿದ್ದಾರೆ ?

ಶ್ರೀ ಕೆ. ಮಲ್ಲಪ್ಪ.—ಸಾಮಾನ್ಯವಾಗಿ advice ಕೊಟ್ಟಿಲ್ಲ. ಹೊಸದಾಗಿ ಈಗತಾನೇ ರಚನೆಯಾಗಿದೆ. ಈಗ ಎಲ್ಲಿ ಮಾಡಬೇಕೆಂಬ ಆಲೋಚನೆ ಸಾಮಾನ್ಯವಾಗಿ ಸರ್ಕಾರಕ್ಕೂ ಇದೆ, ಸದಸ್ಯರಿಗೂ ಇದೆ.

ಶ್ರೀ ಎಸ್. ಗೋಪಾಲಗೌಡ.—ಈ ಬೋರ್ಡಿಗೆ ಕೇಂದ್ರದವರು ಏನಾದರೂ ಹಣ ಸಹಾಯ ಮಾಡಿದ್ದಾರೆಯೇ ?

ಶ್ರೀ ಕೆ. ಮಲ್ಲಪ್ಪ.—ಬರುತ್ತಿದೆ. ಕೆಲವು ಸ್ಕೀಮುಗಳಿಗೆ ಶೇಕಡ 75ರಷ್ಟು, ಕೆಲವಕ್ಕೆ ಶೇಕಡ 50ರಷ್ಟು ಕೇಂದ್ರದಿಂದ ಸಹಾಯ ಬರುತ್ತಿದೆ.

ಶ್ರೀ ಎಂ. ಸಿ. ಬಸಪ್ಪ.—ಹೊರದೇಶದಿಂದ ಬರುವ ಸಾಮಾನುಗಳನ್ನು ಬಿಟ್ಟು ಸ್ಥಳೀಯ ಕಚ್ಚಾ ಸಾಮಾನುಗಳನ್ನು ಉಪಯೋಗಿಸಿಕೊಂಡು ಕೈಗಾರಿಕೆ ನಡಸುವವರಿಗೆ ಯಾವ ರೀತಿ ಸಹಾಯ ಮಾಡುತ್ತೀರಿ ?

ಶ್ರೀ ಕೆ. ಮಲ್ಲಪ್ಪ.—ಸರ್ಕಾರ ಸಹಕಾರ ಸಂಘಗಳನ್ನು ಏರ್ಪಾಡು ಮಾಡಿ ಅವುಗಳ ಮೂಲಕ ಈ ಕೈಗಾರಿಕೆ ನಡೆಸತಕ್ಕಂಥವರಿಗೆ ಸಾಲ ಒದಗಿಸುತ್ತಾರೆ; ಅವರಿಗೆ ಬೇಕಾದಂಥ ಕಚ್ಚಾ ಸಾಮಾನುಗಳನ್ನು ಒದಗಿಸಿ ಕೊಡುತ್ತಾರೆ. ಮಾರಾಟ ಮಾಡುವುದಕ್ಕೆ Marketing Society ಸೌಕರ್ಯವನ್ನು ಒದಗಿಸುತ್ತಾ ಇದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಕೈಗಾರಿಕೆಯಲ್ಲಿ ಎಷ್ಟು ಜನಕ್ಕೆ ಉದ್ಯೋಗ ಕಲಿಸಿದ್ದೀರಿ ? ಈ ಸಲಹಾಸಮಿತಿಯಲ್ಲಿ ತೆಂಗು ಬೆಳೆಯುವ ಜಾಗದಲ್ಲಿರತಕ್ಕಂಥ ಜನಗಳನ್ನು ಹಾಕಿದ್ದೀರಾ, ಅಥವಾ ಟೆಕ್ನಿಕಲ್ ಜ್ಞಾನ ತರಬೇಕೆಂದು ಇಂಥಿಂಥದ್ದನ್ನು ಓದಿದವರನ್ನು ಅಪಾಯಿಂಟ್ ಮಾಡಿದ್ದೀರಾ ?

ಶ್ರೀ ಕೆ. ಮಲ್ಲಪ್ಪ.—ಮೊದಲೇ ತಿಳಿಸಿದ ಹಾಗೆ ಈ ಕೈಗಾರಿಕೆ ಅಷ್ಟೊಂದು ಬೆಳೆದಿಲ್ಲ. ತಿರುವಾಂಕೂರಿನಲ್ಲಿ ಎಷ್ಟರಮಟ್ಟಿಗೆ ಬೆಳೆದಿದೆಯೋ, ಅಷ್ಟರಮಟ್ಟಿಗೆ ನಮ್ಮ ರಾಜ್ಯದಲ್ಲಿ ಬೆಳೆದಿಲ್ಲ. ಇದನ್ನು ಬೆಳೆಸಬೇಕಾಗಿದೆ. ಉದ್ಯೋಗ ಒದಗಿಸಬೇಕೆಂಬ ದೃಷ್ಟಿಯಿಂದ ಒಂದು ಸಮಿತಿ ರಚನೆ ಮಾಡಿದೆ. ಅವರು ಅನೇಕ ಸಮಸ್ಯೆಗಳ ಬಗ್ಗೆ ವಿಚಾರ ನಡೆಸುತ್ತಾ ಇದ್ದಾರೆ. ಇದರಲ್ಲಿ ಸಾಮಾನ್ಯವಾಗಿ, Mysore District, Bangalore District, Tumkur District, Hassan District, Chitradurg, South Kanara and North Kanara Districtಗಳಲ್ಲಿ ವಿಶೇಷವಾಗಿ ತೆಂಗಿನ ಬೆಳೆಯಾಗುತ್ತದೆ. ಇಲ್ಲಿ ಕಚ್ಚಾ ಸಾಮಾನು ವಿಶೇಷವಾಗಿ ಸಿಗುತ್ತದೆ. ಈ ಸ್ಥಳಗಳಲ್ಲಿ ಕೈಗಾರಿಕೆಯನ್ನು ನಡೆಸಿದರೆ ಆದರಿಂದ ಪ್ರಯೋಜನವಾಗುತ್ತದೆಂದು ತಿಳಿದುಕೊಂಡು ಈ ಡಿಸ್ಟ್ರಿಕ್ಟುಗಳಿಂದ ಬರತಕ್ಕಂಥ ಸದಸ್ಯರನ್ನು ಈ ಸಮಿತಿಗೆ ನಾಮಕರಣ ಮಾಡಿದ್ದೇವೆ.

Representation to Harijans and Girijans in all the Committees constituted by the Government.

*Q**.—512. **Sri R. KENCHAPPA** (Pavagada).—

Will the Government be pleased to state:—

(*a*) whether they have issued a Government Order to the effect that at least one or two persons from amongst Harijans and Girijans must be represented on all the Committees of the Government to be constituted at Taluk, District and State levels together with the date of issue the said Government Order ;

(*b*) the number of Committees constituted since the issue of the above Government Order ?

A.—**Sri S. NIJALINGAPPA** (Chief Minister).—

(*a*) Though there is no such order, the policy of Government is to give fair representation, as far as possible, to Harijans and Girijans, provided suitable persons are available and there are no difficulties in the way.

(*b*) Does not arise.

ಶ್ರೀ ಆರ್. ಕೆಂಚಪ್ಪ.-ಪ್ರಾತಿನಿಧ್ಯ ಕೊಡಬೇಕಾದರೆ ಇರಬೇಕಾದ ಅರ್ಹತೆಗಳೇನು ?

†ಶ್ರೀ ಎಸ್. ನಿಜಲಿಂಗಪ್ಪ.—ಯಾವ ಯಾವ ಕೆಲಸಕ್ಕೆ ಯಾರ್ಯಾರು ಯೋಗ್ಯರೋ, ಅವರೇ ಅರ್ಹರು.

ಶ್ರೀ ಆರ್. ಕೆಂಚಪ್ಪ.—ನೇಮಕ ಮಾಡುವುದಕ್ಕೆ ಯಾವ ಅಡ್ಡಿ ಆತಂಕಗಳೂ ಇರಕೂಡದು ಎಂದು ಹೇಳಿದ್ದೀರಿ. ಆತಂಕಗಳು ಎಂದರೆ ಏನು ಎಂದು ವಿವರಣೆ ಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಎಲ್ಲಿದೆ ಆತಂಕ ? ಯೋಗ್ಯರು ಇದ್ದರೆ ನೇಮಕ ಮಾಡುತ್ತೇವೆ. ಯಾರೂ ಇಲ್ಲದೆ ಹೋದರೆ ಆತಂಕವಾಗುತ್ತದೆ.

ಶ್ರೀ ಆರ್. ಕೆಂಚಪ್ಪ.—ಯೋಗ್ಯರೆಂದು ಪರಿಗಣಿಸಬೇಕಾದರೆ ಅವರಿಗೆ ನಿರ್ದಿಷ್ಟ ಅರ್ಹತೆಗಳೇನಿರಬೇಕು ?

ಶ್ರೀ ಎಸ್. ನಿಜಲಿಂಗಪ್ಪ.—ಬುದ್ಧಿವಂತರಾಗಿರಬೇಕು, ವಿದ್ಯಾವಂತರಾಗಿರಬೇಕು, ವಿಚಾರಗಳನ್ನು ತಿಳಿದುಕೊಂಡಿರಬೇಕು, ಸಾಕಷ್ಟು ಪ್ರತಿಭಾವಂತರೂ ಆಗಿರಬೇಕು.

Improvements to Bharamasagara Major tank in Chitradurga Taluk.

*Q.—555. Sri **M. N. KRISHNASINGH** (Jagalur).—

Will the Government be pleased to state.—

(a) whether estimates have been prepared for the improvements of Bharamasagara Major Tank in Chitradurga Taluk ;

(b) if so, the reasons as to why the work has not been carried out as per the estimate made ;

(c) whether they will take steps to commence the works at least now ?

A.—Sri **ALUR HANUMANTHAPPA** (Deputy Minister for Minor Irrigation).—

(a) No.

(b) Does not arise in view of reply to clause (a)

(c) Do do

ಶ್ರೀ ಎಂ. ಎನ್. ಕೃಷ್ಣಸಿಂಗ್.—ಅಂದಾಜು ತಯಾರಿಸಿಲ್ಲ ಎಂದು ಹೇಳಿದ್ದೀರಿ. ಮೊನ್ನೆ ಭಾರಿ ಮಳೆ ಬಂದು, ಏರೀ ಮೇಲೆ ನೀರು ವಿಪರೀತವಾಗಿ ಹರಿದು ಸ್ಥಳದ ಅಧಿಕಾರಿಗಳು ಧಾವಿಸಿ, ಹಿಂದಿರುವ ಹಳ್ಳಿಗಳಿಗೆ ನೀರು ನುಗ್ಗದಂತೆ ನೋಡಿಕೊಂಡದ್ದು ತಮ್ಮ ಗಮನಕ್ಕೆ ಬಂದಿದೆಯೇ ?

†ಶ್ರೀ ಆಲೂರು ಹನುಮಂತಪ್ಪ.—Detailed estimate ತಯಾರಾಗಿಲ್ಲ. ಆದರೆ ಏರಿ raise ಮಾಡಬೇಕೆಂದು instructions ಕೊಟ್ಟಿದೆ. ತೂಬು ಜಖಂ ಆಗಿರುವುದನ್ನು ಸರಿ ಮಾಡಲು 1930 ರೂಪಾಯಿ ಅಂದಾಜು ಮಾಡಿದೆ. Ageney ಸಹ fix ಮಾಡುವುದರಲ್ಲಿ ಇದೆ. ಕೆಲಸ ತೆಗೆದುಕೊಳ್ಳುವಂತೆ ಮಾಡುತ್ತೇವೆ.

ಶ್ರೀ ಎಂ. ಎನ್. ಕೃಷ್ಣಸಿಂಗ್.—ಕೆಲಸ ತೆಗೆದುಕೊಳ್ಳಲು ಯಾವ ಕ್ರಮ ತೆಗೆದುಕೊಂಡಿದ್ದೀರಾ

ಶ್ರೀ ಆಲೂರು ಹನುಮಂತಪ್ಪ.—Agency fix ಮಾಡುವ stageನಲ್ಲಿ ಇದೆ.

ಶ್ರೀ ವಿ. ಮುನಿಯಪ್ಪ.—ಮುಂದಿನ ಮಳೆ ಬಂದು ಆ ಕೆರೆ ಅಪಾಯಕ್ಕೆ ಈಡಾಗುವರೊಳಗೆ ಈ ಬೇಸಿಗೆಯಲ್ಲಿಯೇ ಕಾಂಗಾರಿ ಪೂರೈಸುತ್ತಿಲ್ಲ.

ಶ್ರೀ ಆಲೂರು ಹನುಮಂತಪ್ಪ.—ಹೌದು, ಹೌದು ಅಂಥ ಕೆಲಸಗಳನ್ನು ಆದಷ್ಟು ಭೇಗ execute ಮಾಡುತ್ತೇವೆಂದು ಆಶ್ವಾಸನೆ ಕೊಡುತ್ತೇವೆ.

ಶ್ರೀ ಎಂ. ಎನ್. ಕೃಷ್ಣಸಿಂಗ್.—ಮತ್ತೆ ಅಂದಾಜಿಲ್ಲ ಅಂತ ಹೇಳಿದ್ದೀರಿ ?

ಶ್ರೀ ಆಲೂರು ಹನುಮಂತಪ್ಪ—ಇದು Detailed estimates ಅಲ್ಲ. Damaged ವೇಸ್ಟ್ ವೇರ್‌ಗೆ, ಸ್ಲೂಸಿಗೆ 2,400 ರೂಪಾಯಿ ಹಾಕಿ ನೀರು ನಿಲ್ಲಿಸಬೇಕೆಂದು ಹೇಳಿದ್ದೇವೆ. ಹಾಗೆಯೇ quard stageಗಳನ್ನು ಹಾಕುವುದಕ್ಕೆ 2,550 ರೂಪಾಯಿ ತಗುಲುವುದಿದೆ,

SHORT NOTICE QUESTIONS.

Mr. SPEAKER.—I propose to take up all the three Short Notice Questions together.

Arrangement made to alleviate the grievances of workers affected by Gold Control Order.

Q.—1. **Sri S. SHIVAPPA** (Shravanabelagola).—

Will the Government be pleased to state :—

(*a*) when the Gold Control Order came into effect in the State:

(*b*) the number of workers employed in the industry that are affected by the Gold Control Order in the State ;

(*c*) the arrangements made to alleviate the grievances of these workers ?

A.— **Sri B. D. JATTI** (Minister for Finance).—

(*a*) In January 1963.

(*b*) The total number including employers, employees and workers may be 30,000. Number of workers may be about 15,000 to 20,000, but the actual number affected by the Gold Control Order is not available. It must be small as ornaments of silver also are prepared by the same class of workers.

(*c*) If genuine case of unemployment are brought to notice and they are suitable, the question of providing employment to workers seeking employment in various jobs in industrial concerns or other suitable places can be considered. Some of the applications are already under consideration of the industrial concerns.

Number of people likely to be thrown out of employment on account of Gold Control Order.

Q.—3. **Sri T. MADAIAH GOWDA** (Ramanagaram).—

Will the Government be pleased to state:—

(*a*) the number of people that are likely to be thrown-out of employment in Mysore State on account of Gold Control Order;

(*b*) whether Government have thought of any measures to give relief to such people ;

(*c*) if so, what are they ?

A.— **Sri B. D. JATTI** (Minister for Finance).—

(*a*) The number cannot be assessed with any degree of accuracy as goldsmiths were not dealing entirely with gold ornaments.

(*b*) Yes.

(c) If genuine cases of unemployment are brought to notice and if they are suitable, the question of providing employment to workers seeking employment in various jobs in industrial concerns or other suitable places can be considered. Some of the applications are already under consideration of the industrial concerns.

Steps taken to give relief to workers affected by Gold Control Order.

Q.—4. **Sri C. R. RANGE GOWDA** (Magadi).—

Will the Government be pleased to state:—

(*a*) whether it has come to the notice of the Government that a large number of goldsmiths are thrown out of employment on account of Gold Control Order;

(*b*) whether they have taken any steps to give relief to these workers?

A.—**Sri B. D. JATTI** (Minister for Finance).—

(*a*) Representations have been received that a number of goldsmiths are thrown out of employment on account of the Order.

(*b*) If genuine cases of unemployment are brought to notice and they are suitable, the question of providing employment to workers seeking employment in various jobs in industrial concerns or other suitable places can be considered. Some of the applications are already under consideration of the industrial concerns.

Sri S. SIVAPPA.—The Government are pleased to state that there are 30,000 workers in this industry including the persons who work on silver. May I know how many workers have applied to the Government seeking for employment?

Sri B. D. JATTI.— 4,379 persons have applied.

Sri S. SIVAPPA.—Has it come to the notice of the Government that several hundreds of people have applied for employment in various Districts?

Sri B. D. JATTI.—The total number of applications which have been received at Bangalore is 4,379, Some of the District Officers have forwarded these applications to the Headquarters.

Sri S. SIVAPPA.—How can the Government employ these persons immediately?

Sri B. D. JATTI.—The Hon'ble Deputy Minister for Municipal Administration has held a number of meetings and he has invited representatives of the Government of India Undertakings, the State industries and private people who are running industries. All of them have been good enough to receive the applications and employ them. Some of them have suggested that training should be given and then appointed.

2-00 P.M.

Sri T. MADIAH GOWDA.—It is said that if they are suitable they will be employed. How do you judge the suitability of these applicants ?

† **Sri B. D. JATTI.**—It is the people who are to employ who will find out whether they are suitable or not and not ourselves.

Sri T. MADIAH GOWDA.—May I know whether you have consulted them and know who are the suitable persons whose applications are to be recommended to them ?

Sri B. D. JATTI.—All the applications are recommended to different managements and they have received them well. To-day I am told that some of the applicants have also been appointed.

ಶ್ರೀ ಸಿ. ಆರ್ ರಂಗೇಗೌಡ.—ನನ್ನ (ಎ) ಪ್ರಶ್ನೆಗೆ ಉತ್ತರವಾಗಿ ಅಕ್ಕಸಾಲಿಗರಿಂದ ನಿರುದ್ಯೋಗಿಗಳಾಗಿರುವ ಬಗ್ಗೆ ಮನವಿಗಳು ಬಂದಿವೆ ಎಂತಲೂ ಮತ್ತು (ಬಿ) ಪ್ರಶ್ನೆಗೆ ಉತ್ತರವಾಗಿ ಕೆಲವು ಅರ್ಜಿಗಳು ಈಗಾಗಲೇ ಕೈಗಾರಿಕಾ ಸಂಸ್ಥೆಗಳವರ ಪರಿಶೀಲನೆಯಲ್ಲಿವೆ ಎಂದು ಹೇಳಿದ್ದಾರೆ. ಅಂದ ಮೇಲೆ ಅವರನ್ನು ಯಾವ್ಯಾವ ಕೈಗಾರಿಕೆಗಳಲ್ಲಿ ನೇಮಕ ಮಾಡುವ ವ್ಯವಸ್ಥೆ ಮಾಡಿದ್ದಾರೆ ?

ಶ್ರೀ ಬಿ. ಡಿ. ಜತ್ತಿ.—ನಾನು ಈಗಾಗಲೇ ಹೇಳಿದಂತೆ ಕೇಂದ್ರ ಸರ್ಕಾರದವರು ನಡೆಸತಕ್ಕ ಎಲ್ಲಾ ಕೈಗಾರಿಕೆ ಸಂಸ್ಥೆಗಳಿಗೂ ಮನವಿಗಳನ್ನು ಕಳುಹಿಸಲಾಗಿದೆ. ಅದೇ ರೀತಿಯಲ್ಲಿ ಸಂಸ್ಥಾನ ಸರ್ಕಾರ ನಡೆಸತಕ್ಕ ಕಾರ್ಖಾನೆಗಳಿಗೆ ಮತ್ತು ಖಾಸಗೀ ಸಂಸ್ಥೆಗಳಿಗೂ ಅವರ ಅರ್ಜಿಗಳನ್ನು ಕಳುಹಿಸಿದ್ದೇವೆ.

ಶ್ರೀ ಸಿ. ಆರ್. ರಂಗೇಗೌಡ.—ಮಾನ್ಯ ಶ್ರೀ ಶಿವಪ್ಪನವರ (ಬಿ) ಪ್ರಶ್ನೆಗೆ ಉತ್ತರವಾಗಿ ಮಾಲೀಕರು, ನೌಕರರು ಹಾಗೂ ಕೆಲಸಗಾರರನ್ನೊಳಗೊಂಡ ಒಟ್ಟು ಸಂಖ್ಯೆ 30,000 ಆಗಬಹುದು ಎಂದು ಹೇಳಿದ್ದೀರಿ. ಆದರೆ ಈ Gold Control Act ಕೇವಲ ಅಕ್ಕ ಸಾಲಿಗರಿಗೆ ಮಾತ್ರವೇ ಅಲ್ಲದೆ Gold thread manufacturersಗೂ ಅನ್ವಯವಾಗುತ್ತದೆಯೇ ?

ಶ್ರೀ ಬಿ. ಡಿ. ಜತ್ತಿ.—ಅಷ್ಟು ವಿವರಗಳು ಗೊತ್ತಿಲ್ಲ. ಆ ಬಗ್ಗೆ ಸರ್ವೆ ಏನೂ ಮಾಡಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಅಲ್ಲಿನ ನೌಕರರಿಗೆ ಸರ್ಕಾರದವರು ಪೂರ್ವಭಾವಿಯಾಗಿ ಯಾವ ಸೂಚನೆಯನ್ನು ಕೊಡದೆ ಈ ಸುವರ್ಣನಿಯಂತ್ರಣ ಕಾನೂನನ್ನು ಜಾರಿಗೆ ತಂದಿರುವುದರಿಂದ, ಅವರು ನಿರುದ್ಯೋಗಿಗಳಾಗಿರುವ ಕಾಲದಲ್ಲಿ ಅವರಿಗೇನಾದರೂ ಪರಿಹಾರವನ್ನು ಕೊಡುವುದಕ್ಕೆ ಸರ್ಕಾರಧವರು ಯೋಚನೆ ಮಾಡಿದ್ದಾರೆಯೇ ?

ಶ್ರೀ ಬಿ. ಡಿ. ಜತ್ತಿ.—ಕೇಂದ್ರ ಸರ್ಕಾರದವರು ಈ ಆಜ್ಞೆಯನ್ನು ಮಾಡಿದ್ದಾರೆ. ಅದರ ಪರಿಣಾಮವಾಗಿ ಅಂತಹವರಿಗೆ ಎಲ್ಲಾ ಕಡೆಯೂ ಈ ತರಹ ತೊಂದರೆಯಾಗಿದೆ. ನಮ್ಮ ಸಂಸ್ಥಾನ ಸರ್ಕಾರಕ್ಕೂ ಕೇಂದ್ರದವರು ಈ ಬಗ್ಗೆ ಏನಾದರೂ ಸಹಾಯ ಮಾಡಬೇಕೆಂದು ನಾವೂ ಸಹ ಕೇಳುತ್ತಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈ ಸುವರ್ಣ ಹತೋಟಿ ಆಜ್ಞೆ ಬರುವುದಕ್ಕೆ ಪೂರ್ವಭಾವಿಯಾಗಿ ಈ ಕಾರ್ಖಾನೆಗಳಲ್ಲಿ ಕೆಲಸಬೇಕು ಎಂದು ಅರ್ಜಿಕೊಟ್ಟವರಿಗೆ ಕೆಲಸಗಳನ್ನು ಇದುವರೆಗೂ ಕೊಡದೇ ಇರುವುದರಿಂದ ಅಕ್ಕಸಾಲಿಗರಿಗೆ ಮೊದಲು ಫ್ರಿಫರೆನ್ಸ್ ಕೊಡದೇ ಹೋದರೆ ಏನು ಬಹು ಮುಖ್ಯವಾದ ಕ್ರಮಗಳನ್ನು ತೆಗೆದುಕೊಂಡಿದ್ದೀರಿ !

ಶ್ರೀ ಬಿ. ಡಿ. ಜತ್ತಿ.—ಅವರಿಗೆ ಮಾತ್ರ ಪ್ರಿಫರೆನ್ಸ್ ಕೊಡಬೇಕೆಂದು ಕೇಳಿದ್ದೇವೆ. ಈಗಾಗಲೇ ಕೆಲವು ಕಡೆ ಪ್ರಿಫರೆನ್ಸ್ ಕೊಡುತ್ತಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇವರ ಅರ್ಜಿಗಳೆಲ್ಲಾ ಸರ್ಕಾರಕ್ಕೆ ನೇರವಾಗಿ ಬಂದಿವೆಯೋ ಅಥವಾ ಕಾರ್ಖಾನೆಗಳಿಂದ ಬಂದಿವೆಯೋ ?

ಶ್ರೀ ಬಿ. ಡಿ. ಜತ್ತಿ.—ಸರ್ಕಾರಕ್ಕೇ ಬಂದಿವೆ. ನಾವು ಬೇರೆ ಬೇರೆ ಕಾರ್ಖಾನೆಗಳಿಗೆ ಕಳುಹಿಸಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಯಾವ್ಯಾವ ಕಾರ್ಖಾನೆಗಳಿಗೆ ಎಷ್ಟೆಷ್ಟು ಕಳುಹಿಸಿದ್ದೀರಿ ?

ಶ್ರೀ ಬಿ. ಡಿ. ಜತ್ತಿ.—ಅವು ಈ ರೀತಿ ಇವೆ:

H.M.T. ...	1772	Rural Industrial Training Centre	61
H.A.L. ...	721	Central Industrial Workshop	66
I.T.I. ...	560	Remco	75
B.E.L. ...	610	Government Porcelain Factory	20
M.S.R.T.C. ...	100	B.W.C. and Silk Mills	250
Government Printing-and Stationery	62	Krishna Flour Mills	30
Corporation ...	52		
		Total ...	502
Total ...	3877		

ಶ್ರೀ ಎಸ್. ಶಿವಪ್ಪ.—ಈಗಾಗಲೇ ಮೈಸೂರು ಸಂಸ್ಥಾನದಲ್ಲಿರತಕ್ಕ ಕಾರ್ಖಾನೆಗಳಲ್ಲಿ ನಿರುದ್ಯೋಗಿಗಳ ಸಂಖ್ಯೆ ವಿಪರೀತವಾಗಿರುವುದರಿಂದ, ಅಕ್ಕಸಾಲಿಗರಿಗಾಗಿ ಅವರ ಒಂದು ವೈಶಿಷ್ಟ್ಯ ವೃತ್ತಿಯನ್ನೇ ಅವಲಂಬಿಸಿ ಪ್ರತ್ಯೇಕವಾಗಿ ಒಂದು ಸಣ್ಣ ಸೊಸೈಟಿಯನ್ನು ಸ್ಥಾಪನೆ ಮಾಡಿ 14 ಕ್ಯಾರೆಟ್‌ನಲ್ಲಿ ಚಿನ್ನದ ಆಭರಣಗಳನ್ನು ಮಾಡತಕ್ಕ ಕಾರ್ಯದಲ್ಲಿ ಸರ್ಕಾರದವರೇನಾದರೂ ಒಂದು ಸ್ಪಷ್ಟವಾದ ನಿಲುವನ್ನು ತೆಗೆದುಕೊಳ್ಳಲು ಪರಿಶೀಲನೆ ಮಾಡಿದ್ದಾರೆಯೇ ?

Sri B. D. JATTI.—Government has already thought about it and Government has suggested the formation of either co-operative societies or associations. Government will help them to meet the managerial cost and will also help them with loans and, if neccssary, by giving them technical know-how.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈ ಕೈಗಾರಿಕಾ ಸಂಸ್ಥೆಗಳಲ್ಲಿ ಅಕ್ಕಸಾಲಿಗರೆಲ್ಲರಿಗೂ ಉದ್ಯೋಗಸಿಗುವುದರಲ್ಲಿ ತೊಂದರೆಯಾಗಿರುವುದರಿಂದ, ಗ್ರಾಮಾಂತರ ಪ್ರದೇಶಗಳಲ್ಲಿ ಜಮೀನುಗಳನ್ನು ಕೊಟ್ಟು ಅವರಿಗೆಲ್ಲರಿಗೂ ವ್ಯವಸಾಯ ಕಸುಬನ್ನು ತೋರಿಸುವುದು ಉತ್ತಮವಲ್ಲವೇ ?

Sri B. D. JATTI.—That is a proposal pending before the Government, will consider it carefully.

Smt VIJAYA RAGHAVENDRA RAO DESAI.—In view of the fact that the new engineering work at Shahabad is going to come up, will Government consider the desirability of corresponding with the A.C.C. management and ask them to employ such persons if they are suitable ?

Sri B. D. JATTI.—By all means.

Sri SANJEEVANATH AIKALA.—How many cases of starvation and suicide have been reported among the goldsmiths since the promulgation of the Gold Control Order ?

Sri B. D. JATTI.—Government has not got any information. If the Hon'ble Member has got any special arrangement for knowing such things, he can bring them to the notice of the Government.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ ಕೆಲಸಗಾರರ ಮಕ್ಕಳಿಗೆ ನಿರುದ್ಯೋಗದ ದೆಸೆಯಿಂದ ಏನಾದರೂ ಫೀಸ್‌ಮನ್ನಾ ಮಾಡುವುದಾಗಲೀ ಅಥವಾ ವಿದ್ಯಾರ್ಥಿ ವೇತನವನ್ನು ಕೊಡುವುದಾಗಲೀ ಏರ್ಪಾಡು ಮಾಡಿದ್ದೀರಾ ?

Sri B. D. JATTI.—That is also being considered ..

ಶ್ರೀ ಪಿ. ವೆಂಕಟಗಿರಿಯಪ್ಪ.—ಇದುವರೆಗೂ ತಾವು ಮಾಡಿರತಕ್ಕ ಪ್ರಯತ್ನದ ಫಲವಾಗಿ ಯಾವ್ಯಾವ ಕಾರ್ಖಾನೆಗಳಲ್ಲಿ ಎಷ್ಟೆಷ್ಟು ಜನರಿಗೆ ಇಷ್ಟರವರೆಗೆ ಕೆಲಸ ಸಿಕ್ಕಿದೆ ?

ಶ್ರೀ ಬಿ. ಡಿ. ಜತ್ತಿ.—ನಾನಾ ಕಡೆಗಳಿಂದ ನನಗೆ ಈಗ ವರದಿಗಳು ಬರುತ್ತಿವೆ. ಅವಿನ್ನೂ ಪೂರ್ತಿಯಾಗಿಲ್ಲ, ಪೂರ್ತಿ ಪಟ್ಟಿಯಾದ ನಂತರ ಮಾನ್ಯ ಸದಸ್ಯರಿಗೆ ಆ ಮಾಹಿತಿಯನ್ನು ಕೊಡುತ್ತೇನೆ.

ಶ್ರೀ ಇ. ನಾರಾಯಣ ಗೌಡ.—ಗ್ರಾಮಾಂತರ ಪ್ರದೇಶಗಳಲ್ಲಿ ಇವರಿಗೋಸ್ಕರ ಸಣ್ಣ ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದರ ಮೂಲಕ ಇವರಿಗೆ ಸಹಾನುಭೂತಿಯಿಂದ ಸಹಾಯ ಮಾಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಅದಕ್ಕಾಗಲೇ ಉತ್ತರ ಹೇಳಿದ್ದೇನೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಕೆಲವು ಕಾರ್ಖಾನೆಗಳಿಗೆ ಅರ್ಜಿಗಳನ್ನು ಕಳುಹಿಸಲಾಗಿದೆ ಎಂದು ಮಂತ್ರಿಗಳು ಈಗತಾನೆ ಹೇಳಿದರು. ಭದ್ರಾವತಿ ಕಾರ್ಖಾನೆಗೆ ಏಕೆ ಕೆಲವಾರು ಅರ್ಜಿಗಳನ್ನು ಕಳುಹಿಸಲಿಲ್ಲ ?

ಶ್ರೀ ಬಿ. ಡಿ. ಜತ್ತಿ.—ಭದ್ರಾವತಿಯೊಳಗೆ ದೊಡ್ಡ ದೊಡ್ಡ ಕೆಲಸಗಳನ್ನು ಮಾಡುವುದು ಅವರ ಕೈಲಿ ಆಗುವುದಿಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ.—4,300 ಅರ್ಜಿಗಳಲ್ಲಿ ಸೌತ್ ಕೆನರಾದಿಂದ ಅರ್ಜಿಗಳು ಎಷ್ಟು ಬಂದಿವೆ ?

ಶ್ರೀ ಬಿ. ಡಿ. ಜತ್ತಿ.—ಜಿಲ್ಲಾವಾರು ಪ್ರತ್ಯೇಕವಾಗಿ ಏನೂ ಕೊಟ್ಟಿಲ್ಲ. ಮಾನ್ಯ ಸದಸ್ಯರಿಗೆ ಬೇಕಾದರೆ ಅದನ್ನು ಒದಗಿಸುತ್ತೇನೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಅಕ್ಕಸಾಲಿಗರು ಸೌತ್ ಕೆನರಾದಲ್ಲಿ ನಿರುದ್ಯೋಗಿಗಳಾಗುವುದಕ್ಕೆ ಅದರ ವಿಶೇಷವೇನು ?

ಶ್ರೀ ಬಿ. ಡಿ. ಜತ್ತಿ.—ನಾವು ಯಾರಿಗೂ ಈ ಬಗ್ಗೆ ಅರ್ಜಿಗಳನ್ನು ಕೊಡಬಾರದು ಎಂದು ಹೇಳಲಿಲ್ಲ ಸಿಂಪತಿಟಿಕ್ ಕನ್ಸಿಡರೇಷನ್ ಮಾಡುವುದಿಲ್ಲವೆಂದು ಏನೂ ಹೇಳಲಿಲ್ಲ.

ಶ್ರೀ ಕೆ. ಲಕ್ಕಪ್ಪ.—ಗ್ರಾಮಾಂತರ ಪ್ರದೇಶಗಳಲ್ಲಿ ಅಕ್ಕ ಸಾಲಿಗರಿಗೆ ನಿರುದ್ಯೋಗ ಸಮಸ್ಯೆ ಜಾಸ್ತಿಯಾಗಿರುವುದರಿಂದ ಅವರು ಮಾಡತಕ್ಕ ಕಸುಬಿಗೆ ಈಗ ಧಕ್ಕೆ ಬಂದಿರುವುದರಿಂದ, ಮುಂದೆ ಅವರು ಜೀವನ ಮಾಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಅವರ ಕಡೆಯಿಂದ ಅಂತಹ ಸಲಹೆ ಏನೂ ಬಂದಿಲ್ಲ. ಮಾನ್ಯ ಸದಸ್ಯರು ಅವರ ಸಂಘದ ಪರವಾಗಿ ಜವಾಬ್ದಾರಿ ತೆಗೆದುಕೊಂಡರೆ, ವಿಚಾರ ಮಾಡುತ್ತೇನೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.— ಸರ್ಕಾರದವರ ಆಜ್ಞೆ ಪ್ರಕಾರ 14 ಕ್ಯಾರೆಟ್‌ನಲ್ಲಾದರೂ ಚಿನ್ನದ ಆಭರಣಗಳನ್ನು ಅಕ್ಕಸಾಲಿಗರು ಮಾಡುವುದನ್ನೇನೂ ನಿಲ್ಲಿಸಿಲ್ಲ. ಆದರೆ ಎಲ್ಲರನ್ನೂ ಬೇರೆ ಕಡೆಗೆ ಉದ್ಯೋಗಗಳ ಮೇಲೆ ಕಳುಹಿಸಿಕೊಟ್ಟರೆ ಮುಂದೆ ಚಿನ್ನದ ಕೆಲಸಗಳನ್ನು ಮಾಡುವುದಕ್ಕಾಗಿ ಯಾರನ್ನು ತರುತ್ತೀರಿ ?

ಶ್ರೀ ಬಿ. ಡಿ. ಜತ್ತಿ.—ಎಲ್ಲರನ್ನೂ ಕಳುಹಿಸುತ್ತೇವೆ ಎಂಬುದಾಗಿ ಹೇಳಲಿಲ್ಲ. ಅದು ತಮ್ಮ ಅಭಿಪ್ರಾಯದ ಮಾತು. ನಮ್ಮ ಅಭಿಪ್ರಾಯ ಆ ರೀತಿ ಇಲ್ಲ.

QUESTIONS FOR ANSWERS ON THE DAY

(but not taken up)

Promotions given in the Department of Animal Husbandry.

Q*.—129. **Sri C. V. VENKATARAYAPPA (Chickballapur).—

Will the Government be pleased to state :—

(*a*) whether it is a fact that Cadre and Recruitment Rules have not been followed in the Department of Animal Husbandry while giving promotions ;

(*b*) whether it is a fact that the High Court has issued Writ of Mandamus staying all promotions in the above Department since the Department did not follow Cadre and Recruitment Rules.

(*c*) whether it is not a fact that the Department did not advertise the vacancies in spite of the fact that the Public Service Commission reminded the Department ?

A.—**Sri M. V. KRISHNAPPA** (Minister for Revenue).—

(*a*) The Cadre and Recruitment Rules which came into force on 13th March 1959 are being followed while giving promotions in the Department.

(*b*) The High Court had issued a stay order in respect of promotions in the Department. The writ petitions has since been dismissed.

(*c*) No.

Bifurcation and Decentralisation of Industries Department.

Q.*—471. **Sri R. A. KOPPAL (Hubli City).—

Will the Government be pleased to state :—

whether it is proposed to bifurcate Industries Department and decentralise the same ; and if so, the time required for implementation of such a scheme ;

A.—**Sri K. MALLAPPA** (Minister for Industries and Commerce).—
No.

Intimation of Release of a Member.

Mr. SPEAKER.—Before we take up the other work, I have to bring to the notice of the House that the Government under order dated 16th March 1963 have directed the release of Sri A. Krishna Shetty, M.L.A., detained in the Central Jail, Bellary,

BUDGET ESTIMATES FOR 1963-64—DEMANDS FOR GRANTS—DEMAND No. 31-50 PUBLIC WORKS

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, ನಾನು ನಿನ್ನೆ ಲೋಕೋಪಯೋಗಿ ಖಾತೆಯ ಮೇಲೆ ಮಾತನಾಡುತ್ತಿದ್ದೆ. ನಮ್ಮಲ್ಲಿ ಮೈನರ್ ನೀರಾವರಿಯ ಅಗತ್ಯ ಹೆಚ್ಚಾಗಿದೆ, ಆದರೆ ಕೆಲಸ ಕಡಮೆಯಾಗಿದೆ. ಇದರ 'ಟೆಂಪೋ' ಹೆಚ್ಚು ಮಾಡಬೇಕಾದರೆ, ಬರಿಯ ಭಾಷಣಗಳನ್ನೂ, ಹೇಳಿಕೆಗಳನ್ನೂ ಮಾಡಿಕೊಂಡು ಹೋದರೆ ಪ್ರಯೋಜನವಿಲ್ಲ. ಹೆಚ್ಚು ಆಹಾರ ಬೆಳೆಯಬೇಕು, ಹೆಚ್ಚು ಕೆಲಸ ಆಗಬೇಕು ಎಂದು ಸರ್ಕಾರದವರು ಸೂಚನೆ ಕೊಡುತ್ತಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿಗಳು ಅಲ್ಲಲ್ಲಿ ಹೇಳಿಕೆಗಳನ್ನು ಕೊಡುತ್ತಾ ಬಂದಿದ್ದಾರೆ. ಹಳ್ಳಿಗಳಲ್ಲಿ ಸಣ್ಣ ಕೆರೆ ಕಟ್ಟೆಗಳನ್ನು ಮಾಡಿಸಬೇಕಾದರೆ ನೀವು ಹಣಕೊಡಿ, ನಿಮ್ಮ ಕಾಂಟ್ರಿಬ್ಯೂಷನ್ ಕೊಡಿ, ಸರ್ಕಾರಕ್ಕೆ ಹಣ ಬೇಕಾಗಿದೆ, ನೀವು ಕೊಟ್ಟರೆ ನಿಮಗೂ ಅನುಕೂಲ ಸರ್ಕಾರಕ್ಕೂ ಅನುಕೂಲ ಎಂದು ಹೇಳುತ್ತಿದ್ದಾರೆ. ನಾವು ಹಣಕೊಡಲು ಮುಂದೆ ಬಂದರೆ ಸರಿ ಇಲ್ಲದಿದ್ದರೆ ಕೇಳಬೇಡಿ ಎಂದು ಅವರು ಹೇಳುವುದು ಎಂದು ನಾನು ಅರ್ಥಮಾಡಿಕೊಂಡಿದ್ದೇನೆ.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಅದು ನಿಮ್ಮ ಅರ್ಥ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಿಮ್ಮ ಅರ್ಥವೂ ಹಾಗೆಯೇ.

ಸರ್ಕಾರ ಹಾಗೆ ಕೇಳುವುದಕ್ಕೆ ಬದಲು ಬೇರೆ ರೀತಿ ಮಾಡಬಹುದು. ಬೇರೆ ಅಭಿವೃದ್ಧಿ ಕೆಲಸಗಳಿಗೆ ಅವರಿಗೆ ಹಣ ಬೇಕಾದರೆ ಸಾಲ ಮಾಡುತ್ತಾರೆ. ಹಾಗೆಯೇ ಮೈನರ್ ಮತ್ತು ಮೀಡಿಯಮ್ ನೀರಾವರಿ ಕೆಲಸಗಳಿಗೆ ಸರ್ಕಾರದವರು 25-30 ಕೋಟಿ ರೂಪಾಯಿ ಸಾಲಮಾಡಲಿ. ಒಂದು ಲೋನ್ ಎತ್ತಿ ಅದನ್ನು ಇದಕ್ಕೆ ಖರ್ಚು ಮಾಡುತ್ತೇವೆಂದು ಹೇಳಲಿ. ಇದು ಬಿಟ್ಟು ಹಳ್ಳಿಯವರನ್ನು ಕೇಳಿದರೆ, ಒಂದು ಗ್ರಾಮದಲ್ಲಿ ಯಾರಾದರೂ ಹತ್ತು ಜನರು ಹಣಕೊಡಲು ಮುಂದೆ ಬರಬಹುದು; ಎರಡು ಸಾವಿರ ಕೊಡುತ್ತೇವೆಂದು ಹೇಳಬಹುದು. ಇದರಿಂದ ಕಾಮಗಾರಿಗಳಾಗುವುದಿಲ್ಲ. ನಿಜವಾಗಿಯೂ ಸರ್ಕಾರದವರು ಮೈನರ್ ನೀರಾವರಿ ಕೆಲಸವನ್ನು ಕೈಗೊಂಡು ಮೂರನೇ ಯೋಜನೆ ಮುಗಿಯುವುದರಲ್ಲಿ ಕೊನೆಯ ಪಕ್ಷ ಬೇರೆ ರಾಜ್ಯಗಳಲ್ಲಿರುವಂತೆ ಸೇಕಡ 20ರಷ್ಟು

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ನೀರಾವರಿಯನ್ನಾದರೂ ಮಾಡಬೇಕಾದರೆ ಜನರನ್ನು ನೀವು ಹಣಕೊಡಿ ಎಂದು ಹೇಳುವ ಬದಲು ಒಂದು ಸಾಲ ಎತ್ತುವುದು ಸಮಂಜಸವಾಗಿದೆ. ಸರ್ಕಾರ ಇದನ್ನು ತೀವ್ರವಾಗಿ ಆಲೋಚನೆ ಮಾಡಬೇಕೆಂದು ಸೂಚಿಸುತ್ತೇನೆ. ಮೈನರ್ ನೀರಾವರಿಯ ಕಾರ್ಯವನ್ನು ಚುರುಕುಗೊಳಿಸಬೇಕೆಂಬ ಉದ್ದೇಶದಿಂದ, ಆಹಾರೋತ್ಪತ್ತಿಯನ್ನು ಹೆಚ್ಚಿಸಬೇಕೆಂಬ ದೃಷ್ಟಿಯಿಂದ ಒಂದು ಕೋಟಿ ಹದಿನೇಳು ಲಕ್ಷ ರೂಪಾಯಿನಷ್ಟು ಹಣವನ್ನು ಪಂಪ್ ಸೆಟ್ಟುಗಳನ್ನು ಕೊಳ್ಳುವುದಕ್ಕಾಗಿ ಮಂಜೂರು ಮಾಡಿದರು ಸರ್ಕಾರದವರು. ಆದರೆ ವಿದ್ಯುಚ್ಛಕ್ತಿ ಬೋರ್ಡಿನವರು ಕೊಟ್ಟಿಲ್ಲ. ಈವರೆಗೆ ಪಂಪುಗಳನ್ನು ಎಷ್ಟು ಕೊಟ್ಟಿದ್ದಾರೆ, ಎಷ್ಟು ಜನರು ಹಾಕಿದರು ಎಂಬುದನ್ನು ನೋಡಿದರೆ, ಸರ್ಕಾರ ಹೇಳುವುದನ್ನು ಕಾರ್ಯಗತ ಮಾಡುವ ಯಂತ್ರ ಏನಿದೆಯೋ ಅದು lethargic ಆಗಿದೆ. ಅದಕ್ಕೆ ಬೆಣ್ಣೆ ಹಾಕಬೇಕು, ಎಣ್ಣೆ ಹಾಕಬೇಕು ಅದು ಸರಿಯಾಗಿ ಕೆಲಸ ಮಾಡುವುದಕ್ಕೆ ಎಂದು ಹೇಳುತ್ತಾರೆ. ಈ ಯಂತ್ರದಿಂದ ಸರಿಯಾಗಿ ಕೆಲಸ ಮಾಡಿಸಬೇಕಾದರೆ, ಮುಖ್ಯಮಂತ್ರಿಗಳು ತಮ್ಮ ಕೆಲಸವನ್ನು ಸ್ವಲ್ಪ ಹಗುರ ಮಾಡಿಕೊಂಡು ಈ ಕಡೆ ದೃಷ್ಟಿ ಇಡಬೇಕು. ಯಾವ ಯಾವ ಕೆಲಸ ಹೇಗೆ ಹೇಗೆ ನಡೆಯುತ್ತಿದೆ ಎಂದು ನೋಡಬೇಕು. ಹಾಗೆ ಮಾಡುವುದು ಬಿಟ್ಟು ಅಧಿಕಾರಿಗಳ ವರ್ಗಗಳು, ಪ್ರಮೋಷನ್‌ಗಳು ಇಂಥವುಗಳ ಕಡೆ ನೋಡಿದರೆ ಪ್ರಯೋಜನವಿಲ್ಲ. ಅವರ ಕಾಲವನ್ನು ಇದಕ್ಕೆ ವಿನಿಯೋಗ ಮಾಡುವ ಬದಲು ಮೈನರ್ ನೀರಾವರಿಯ ಕೆಲಸವನ್ನು ನೋಡಲಿ. ಅವರು ಮುಖ್ಯಮಂತ್ರಿಗಳಾದ ತಕ್ಷಣ ಆಯಾ ಜಿಲ್ಲೆಯಲ್ಲಿರುವ ಎಂ.ಎಲ್.ಎ.ಗಳನ್ನು ಕರೆಸಿ, ಅಲ್ಲಿ ಯಾವ ಯಾವ ನೀರಾವರಿ ಕೆಲಸಗಳಾಗಬೇಕು, ಎಂದು ಕೇಳಿ ಮೈನರ್ ನೀರಾವರಿ ಅಭಿವೃದ್ಧಿಯಾಗಲು ಪ್ರಯತ್ನಿಸುತ್ತಾರೆಂಬ ಆಸೆ ಇತ್ತು. ಆದರೆ ಈ ಆಶೆ ಈಡೇರಲು ಅನೇಕ ಎಡರುತೊಡರುಗಳಿವೆ. ಈ ಕಡೆ ಅವರು ದೃಷ್ಟಿಯಿಟ್ಟು ಅವರು ಹೇಳಿದ ಕೆಲಸವನ್ನು ಮಾಡದೇಯಿರುವ ಅಧಿಕಾರಿಗಳು, ಅವರ ಆಶಯವನ್ನು ಕಾರ್ಯರೂಪಕ್ಕೆ ತರದೆಯಿರುವ ಜನರು ಇದ್ದರೆ ಅವರ ಮೇಲೆ ಸೂಕ್ತಕ್ರಮ ತೆಗೆದುಕೊಳ್ಳಬೇಕು. ಒಂದು ಕೆಲಸವನ್ನು ಮಾಡಬೇಕೆಂದು ಎಕ್ಸಿಕ್ಯೂಟಿವ್ ಇಂಜನಿಯರಿಗೆ ಹೇಳಿದರೆ, ಅವರು ಅವರ ಬೆನ್ನ ಹಿಂದೆ ಚೀಫ್ ಇಂಜಿನಿಯರನ್ನು ಕೇಳುವುದು, ಸೂಪರಿಂಟೆಂಡಿಂಗ್ ಇಂಜಿನಿಯರಿಗೆ ಹೇಳಿದರೆ ಅವರು ಚೀಫ್ ಇಂಜಿನಿಯರನ್ನು ಕೇಳುವುದು ಅವರ ಬೆನ್ನ ಹಿಂದೆ, ಹೀಗೆ ಮಾಡಬಾರದು. ಈ ರೀತಿ ಅಧಿಕಾರಿಗಳಿದ್ದರೆ ದೇಶಕ್ಕೆ ಅನ್ಯಾಯವಾಗುತ್ತದೆ. ಅಧಿಕಾರಿಗಳು ಈಗಿನ ಪ್ರಜಾಪ್ರಭುತ್ವಕ್ಕೆ ಹೊಂದಿಕೊಂಡು ಹೋಗಬೇಕು. ಚಾಡಿ ಮಾತು ಕೇಳಿಕೊಂಡು, ರಾಜಕೀಯ ಗುಂಪುಗಳೊಡನೆ ಸೇರಿಕೊಂಡು ಎಳೆಯುವುದಕ್ಕೆ power politics ಗೆ ಇಳಿಯಬಾರದು. ಮೈನರ್ ನೀರಾವರಿ ಅಭಿವೃದ್ಧಿ ಮಾಡಬೇಕು, ಮೇಜರ್ ನೀರಾವರಿ, ಎಂದರೆ ಕೃಷ್ಣಾ, ಗೋದಾವರಿ, ಮಲಪ್ರಭಾ, ತುಂಗಾ ಇವುಗಳ ಯೋಜನೆಗಳು ಮುಂತಾದುವನ್ನು ನೋಡಿಕೊಳ್ಳಬೇಕು, ಹೆಚ್ಚಿನ ಕೆಲಸವಿದೆ ಎಂದು ಮೇಜರ್ ನೀರಾವರಿ ಕಾರ್ಯಗಳಿಗೇ ಒಬ್ಬರು ಚೀಫ್ ಇಂಜಿನಿಯರನ್ನು ನೇಮಕ ಮಾಡಿದರು. ಹೀಗೆ ಮೇಜರ್ ನೀರಾವರಿ ಚೀಫ್ ಇಂಜಿನಿಯರ್ ಎಂದು ಮಾಡಿದ ಮೇಲೆ ಇವರಿಗೆ ಬೇರೆ ಇಲಾಖೆಯ ಜವಾಬ್ದಾರಿಯನ್ನೇಕೆ ಕೊಡಬೇಕು. ಯಾವ ಶಾಲೆಯಲ್ಲಿ ಎಷ್ಟೆಷ್ಟು ವಿದ್ಯಾರ್ಥಿಗಳು ಓದುತ್ತಿದ್ದಾರೆ, ಯಾವ ಲೆಕ್ಚರರನ್ನು ಎಲ್ಲಿಗೆ ವರ್ಗಮಾಡಿ ಬೇಕು ಎಂಬುದನ್ನೆಲ್ಲಾ ನೋಡಿಕೊಳ್ಳಲು ಟೆಕ್ನಿಕಲ್ ಎಜ್ಯುಕೇಷನ್ ಡೈರೆಕ್ಟರಾಗಿ ಮಾಡಿ ಈ ಕೆಲಸವನ್ನು ಅವರಿಗೇ ಕೊಟ್ಟರೆ ಹೇಗಾಗುತ್ತದೆ? ಈ ಕೆಲಸವನ್ನೂ ಪೂರ್ತಿಮಾಡುವ ಹಾಗಿಲ್ಲ, ಆ ಕೆಲಸವನ್ನೂ ಪೂರ್ತಿ ಮಾಡುವ ಹಾಗಿಲ್ಲ, ಹೀಗಾಗಿದೆ. ಯಾವ ಮನುಷ್ಯನಿಗೆ ಒಂದು ನಿರ್ದಿಷ್ಟವಾದ ಕೆಲಸವನ್ನು ವಹಿಸಿದ್ದಾರೋ ಅದನ್ನು ಸರಿಯಾಗಿ ಮಾಡಲು ಸರ್ಕಾರದವರೇ ಹೀಗೆ ಅಡ್ಡಿಮಾಡುತ್ತಿದ್ದಾರೆ. ಮೈನರ್ ನೀರಾವರಿ ಚೀಫ್ ಇಂಜಿನಿಯರ್, ಮೇಜರ್ ನೀರಾವರಿ ಚೀಫ್ ಇಂಜಿನಿಯರ್ ಎಂದು ನೇಮಕ ಮಾಡಿದ ಮೇಲೆ ಅವರಿಗೆ ಬೇರೆ ಕೆಲಸಗಳನ್ನು ಕೊಡಬಾರದು. ಎಷ್ಟು ಕಾಲದಲ್ಲಿ ನೀರಾವರಿ ಕಾರ್ಯವನ್ನು ಜಯಪ್ರದವಾಗಿ ಮಾಡಬೇಕೆಂಬ ಉದ್ದೇಶವನ್ನಿಟ್ಟು ಕೊಂಡಿದ್ದಾರೋ ಅದಕ್ಕೆ ದಾರಿ ಮಾಡಬೇಕು. ಒಬ್ಬನು ಮಾಡಬಹುದಾದಷ್ಟು ಕೆಲಸಕ್ಕಿಂತ ಹೆಚ್ಚು ಕೆಲಸವನ್ನು ಕೊಟ್ಟು ಎಲ್ಲಿ ಕೆಲಸಗಳನ್ನೂ ಕುಂಠಿತ ಮಾಡಬಾರದು. ಮೇಜರ್ ನೀರಾವರಿ ಚೀಫ್ ಇಂಜಿನಿಯರು ಕೃಷ್ಣಾ, ಗೋದಾವರಿ, ಮಲಪ್ರಭಾ ಮುಂತಾದ ಯೋಜನೆಗಳ ಅಭಿವೃದ್ಧಿಗೆ ಗಮನಕೊಟ್ಟು ಪ್ರತಿಯೊಂದು ಹನಿ ನೀರನ್ನೂ ಉಪಯೋಗ ಮಾಡಿ ನೀರಾವರಿ ಸಮಸ್ಯೆಯನ್ನು ನಿವಾರಿಸುವ ಕಡೆ ಗಮನಕೊಡಬೇಕು. ಈ ದೃಷ್ಟಿಯಿಂದ, ಮೇಜರ್ ನೀರಾವರಿ ಚೀಫ್ ಇಂಜಿನಿಯರಿಂದ ಟೆಕ್ನಿಕಲ್ ಶಿಕ್ಷಣದ ಡೈರೆಕ್ಟರ ಕೆಲಸವನ್ನು ತಪ್ಪಿಸಬೇಕು. ಈ ಸ್ಥಾನವನ್ನು ಯಾರಿಗೆ ಕೊಡಬೇಕೆಂಬ ವಿಚಾರವನ್ನು ನಾನು ಹೇಳುತ್ತಿಲ್ಲ. ಕೃಷ್ಣಾ, ಗೋದಾವರಿ ಮುಂತಾದ ದೊಡ್ಡ ದೊಡ್ಡ ನದಿಗಳ ನೀರಿನ ಉಪಯೋಗದ ಬಗ್ಗೆ ಯೋಜನೆಗಳ ಸರ್ವೆ ಮತ್ತು ಅಂದಾಜು ಇವುಗಳನ್ನು ಮಾಡತಕ್ಕ ಕಾರ್ಯ ಕುಂಠಿತವಾದರೆ ತುಂಗಭದ್ರಾ,

ಮಲಪ್ರಭಾ ಮುಂತಾದ ದೊಡ್ಡ ಯೋಜನಿಗಳು ತೀವ್ರವಾಗಿ ಆಗಬೇಕು, ಆಗಿಲ್ಲ ಎಂದು ಹೇಳಿಕೊಂಡು ಹೋದರೆ ಅದು ಬರಿಯ ಬಾಯ ಮಾತಾಗುತ್ತದೆ. ಆದುದರಿಂದ ಪ್ರತ್ಯೇಕ ಮೇಜರ್ ನೀರಾವರಿ ಚೀಫ್ ಇಂಜಿನಿಯರು ತಮ್ಮ ಕೆಲಸವನ್ನು ಯಶಸ್ವಿಯಾಗಿ ಮಾಡುವಂತಿರಬೇಕು.

ಮೈನರ್ ನೀರಾವರಿ ಚೀಫ್ ಇಂಜಿನಿಯರ ಕಚೇರಿಯಲ್ಲಿ ಎಷ್ಟೋ ವರ್ಷಗಳಿಂದ ಅನೇಕ ಫೈಲ್‌ಗಳು ಕೊಳೆಯುತ್ತಿವೆ. ಅಲ್ಲಿ ಏನಾದರೂ ಕೆಲಸ ಕಾರ್ಯಗಳಾಗುತ್ತಿವೆಯೆ, ಫೈಲ್‌ಗಳು ಬೇಗ ತೀರ್ಮಾನವಾಗುತ್ತಿವೆಯೆ ಎಂಬುದನ್ನು ವಿಮರ್ಶೆ ಮಾಡಬೇಕು. ಅಲ್ಲಿಗೇನಾದರೂ ಫೈಲ್‌ಗಳು ಹೋದರೆ ಹೊರಗೇ ಬರುವುದಿಲ್ಲ, ಯಾವ ಕೆಲಸವೂ ಆಗುವುದಿಲ್ಲ. ಅಲ್ಲಿ ಕೆಲವರು ಕದೀಮರು ಬೇರೂರಿದ್ದಾರೆ, ಅವರನ್ನು ಸ್ಥಳಪಲ್ಲಟ ಮಾಡಿದರೆ ಕೆಲಸ ಸರಿಯಾಗಿ ನಡೆಯುತ್ತದೆಂದು ಕಾಣುತ್ತದೆ. ಜಿಲ್ಲಾಧಿಕಾರಿಗಳು ಮತ್ತು ಇತರ ಅಧಿಕಾರಿಗಳು ಒಂದು ಸ್ಥಳದಲ್ಲಿ ಎರಡು ಮೂರು ವರ್ಷಕ್ಕೆ ಮೇಲ್ಪಟ್ಟು ಇರಬಾರದೆಂದು ಮಾಡಿದ್ದಾರೆ. ಆದರೆ ಮೈನರ್ ನೀರಾವರಿ ಚೀಫ್ ಇಂಜಿನಿಯರ ಕಚೇರಿಯಲ್ಲಿ ಕೆಲವರು ಹತ್ತು ವರ್ಷಗಳಿಂದ ಅಲ್ಲೇ ಇದ್ದಾರೆ, ಇದನ್ನು ಮುಖ್ಯಮಂತ್ರಿಗಳೂ ಚೀಫ್ ಇಂಜಿನಿಯರೂ ಯೋಚನೆ ಮಾಡಬೇಕು. ಆ ಕಚೇರಿಯಲ್ಲಿ ಒಂದು ಅಭ್ಯಾಸ ಬೆಳೆದು ಬಂದಿದೆ. ಪೂರ್ವಕಾಲದಲ್ಲಿ ‘ಬ್ಯೂರೋ ಕ್ರಾಟಿಕ್’ ಸರ್ಕಾರವಿದ್ದಾಗ ಅನುಸರಿಸುತ್ತಿದ್ದ ನೀತಿಯನ್ನೇ ಅನುಸರಿಸುತ್ತಿದ್ದಾರೆ. ಅದಕ್ಕೆ ತರ್ಪಣಕೊಟ್ಟು ಹೊಸ ಮಾರ್ಗವನ್ನು ಕಂಡು ಹಿಡಿದು, ಶೀಘ್ರವಾಗಿ ಜನರ ಆಕಾಂಕ್ಷೆ ಈಡೇರುವುದಕ್ಕೆ ಏರ್ಪಾಡು ಮಾಡಬೇಕೆಂದು ಸೂಚಿಸುತ್ತೇನೆ.

ಸಧ್ಯದಲ್ಲೇ ವಿದ್ಯುಚ್ಛಕ್ತಿಯನ್ನು ಬೇಕಾದಷ್ಟು ಕೊಟ್ಟುಬಿಡುತ್ತೇವೆ ಎಂದು ಹೇಳುತ್ತಾರೆ. ಆದರೆ ವಿದ್ಯುಚ್ಛಕ್ತಿಗೆ ಬಡ್ಜೆಟ್‌ನಲ್ಲಿ ಎರಡೂವರೆ ಕೋಟಿ ರೂಪಾಯಿ ಕಡಮೆ ಇಟ್ಟಿದ್ದಾರೆ. ಹೋದ ವರ್ಷಕ್ಕಿಂತ ಈ ಸಾರಿ ಇಷ್ಟು ಕಡಮೆಕೊಟ್ಟು ಏಪ್ರಿಲ್, ಮೇ ಹೊತ್ತಿಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆಂದು ಹೇಳುತ್ತಿದ್ದಾರೆ. ಸಪ್ಲಿಮೆಂಟರಿ ಗ್ರಾಂಟಿಗಾಗಿ ನಮ್ಮ ಮುಂದೆ ಬರುತ್ತಾರೋ ಏನೋ. ಶರಾವತಿ ಯೋಜನೆ ಒಂದು ದೊಡ್ಡ ಕತೆ. ಇದರಲ್ಲಿ ಮುಖ್ಯಮಂತ್ರಿಗಳನ್ನು ಚಿತ್ರಿಸದೇ ಹೋದರೂ, ಇದರಲ್ಲಿ ಏನಾಗಿದೆಯೆಂಬುದನ್ನು ಈಗಿನ ಮುಖ್ಯಮಂತ್ರಿಗಳು ಅಧಿಕಾರಕ್ಕೆ ಬಂದ ದಿನದಿಂದಲೂ ಹೇಳುತ್ತಿದ್ದೇವೆ. ಇದರ ಕಾರ್ಯತ್ವರಿತವಾದ ವೇಗದಲ್ಲಿ ನಡೆಯುತ್ತಿಲ್ಲ. ತ್ವರಿತವಾಗಿ ಕೆಲಸನಡೆಯದಿರುವುದಕ್ಕೆ ಕಾರಣ ಕಂಟ್ರಾಕ್ಟರುಗಳ ಅಶಕ್ತತೆ, ಅನುಭವ ಸಾಲದಿರುವಿಕೆ ಅಥವಾ ಸರ್ಕಾರ ವಶೀಲಿ ಬಾಜಿಗೆ ಸಿಕ್ಕಿರುವುದು ಅಥವಾ ಅವರ ಜೇಬಿನಲ್ಲಿ ನೀವು ಅಥವಾ ನಿಮ್ಮ ಜೇಬಿನಲ್ಲಿ ಅವರು ಸಿಕ್ಕಿಬಿದ್ದಿರುವುದು ಎಂಬ ಅನುಕೂಲವಿದೆ. ಒಮ್ಮೆ ಇಷ್ಟು ಹಣಕೊಟ್ಟಿದೆ, ಒಪ್ಪಂದವಾಗಿದೆ, ಮುಂದೆ ತೊಂದರೆಯಾಗುವುದಿಲ್ಲ ಎಂದು ಹೇಳಿದರು. ನಾವು ಒಕ್ಕೊರಳಿನಿಂದ ಹೇಳುವುದು ಕಂಟ್ರಾಕ್ಟರುಗಳಿಗೆ ಹಣ ಹೆಚ್ಚಾಗಿಕೊಡುವುದು ಮುಂತಾದ ಕ್ರಮವೇನು ಕೈಕೊಂಡಿದೆ ಅದು ಸ್ವಲ್ಪ ಸರಿಯಾಗಿಲ್ಲ. ಆ ವಿಚಾರದಲ್ಲಿ ಈ ಸಭೆಗಿರುವ ಅನುಮಾನವನ್ನು ಪರಿಹಾರಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಇದುವರೆಗೆ ಎಷ್ಟೋ ಸಲ ಈ ವಿಚಾರ ಹೇಳಿದರೂ ಸರಿಯಾಗಿ ಗಮನ ಕೊಟ್ಟಿಲ್ಲ. ತಮ್ಮ ಪಕ್ಷದ ಹಿಂದಿನ ಕಂದಾಯ ಮಂತ್ರಿಗಳೇ ಶರಾವತಿ ವಿಷಯದಲ್ಲಿ ಜನರಲ್ಲೇನೋ ಅನುಮಾನವಿದೆ, ಮಾಡಬಾರದ್ದನ್ನು ಸರ್ಕಾರ ಮಾಡಿದೆ ಎಂಬ ಶಂಕೆಯಿದೆ ಅದನ್ನು ಜಾಗ್ರತೆ ಪರಿಹಾರ ಮಾಡಬೇಕು ಎಂದು ಹೇಳಿದ್ದಾರೆ. ಈ ವಿಚಾರದಲ್ಲಿ ಸರ್ಕಾರ ಮೌನವಾಗಿರುವುದರಿಂದ ಜನತೆಯ ಅನುಮಾನಕ್ಕೆ ಬೆಂಬಲ ಕೊಟ್ಟಂತಾಗುತ್ತದೆ. ಈಗ ಹಿರಿಯರಾದ ಮೈಸೂರು ರಾಜಕಾರಣಿಗಳಾದ ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾರೆ. ಅವರು ಈ ವಿಚಾರವನ್ನು ಪರಿಶೀಲಿಸಬೇಕು. ತಪ್ಪಿಲ್ಲದಿದ್ದರೆ ಯಾವ ಎನ್‌ಕ್ವೈರಿಗಾದರೂ ತಾವು ಸಿದ್ಧರಾಗಿ ಒಂದು ದಿಟ್ಟ ಹೆಜ್ಜೆಯನ್ನಿಡಬೇಕು. ಇಲ್ಲದಿದ್ದರೆ ಶರಾವತಿ ಯೋಜನೆಯ ಸಂಬಂಧದಲ್ಲಿ ಲಂಚತೆಗೆದುಕೊಂಡರು, ದುಡ್ಡು ಹೊಡೆದರು, ಹಾಗಾಯಿತು, ಹೀಗಾಯಿತು ಎಂದು ಜನರು ಮುಂದೆ ಕೂಡ ಮಾತನಾಡಿಕೊಳ್ಳಲು ಅವಕಾಶವಾಗುತ್ತದೆ. ಅದಕ್ಕೆ ಅವಕಾಶವಿಲ್ಲದಂತೆ ಈ ಬಗ್ಗೆ ಸೂಕ್ತ ಗಮನ ಕೊಟ್ಟು ಉತ್ತರ ಹೇಳುವಾಗ ಸರಿಯಾಗಿ ಜವಾಬುಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಮಂಗಳೂರು ಬಂದರಿಗೆ ಹಣ ತರುತ್ತೇವೆ, ಕೇಳಿದಷ್ಟು ಹಣಕೊಡುತ್ತಾರೆ ಎಂದು ಹೇಳಿದ್ದರು. ಆದರೆ ಬಡ್ಜೆಟ್ಟಿನಲ್ಲಿ ಮಂಗಳೂರಿನ ಬಂದರಿಗೆ ಹಣ ಒದಗಿಸಿಲ್ಲ. ಬಂದರಿನ ಅಭಿವೃದ್ಧಿಗೆ, ಕೋಸ್ಟಲ್ ಲೈನ್ ಡೆವಲಪ್‌ಮೆಂಟಿಗೆ ಎಷ್ಟು ಹಣ ಒದಗಿಸುತ್ತಾರೆ, ಕೇಂದ್ರ ಸರ್ಕಾರ ಎಷ್ಟು ಕೊಡುವುದು, ಯಾವ ರೀತಿ ಇದನ್ನು ತ್ವರಿತಗೊಳಿಸುತ್ತೀರಿ ಎಂದು ಉತ್ತರ ಹೇಳುವಾಗ ತಿಳಿಸಬೇಕು ಎಂದು ಪ್ರಾರ್ಥಿಸಿ ಇಷ್ಟು ಕಾಲಾವಕಾಶಕೊಟ್ಟ ಅಧ್ಯಕ್ಷರಿಗೆ ಕೃತಜ್ಞತೆಯನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಸ್ವಾಮಿ ಅಧ್ಯಕ್ಷರೆ, ಈ ದಿವಸ ನಮ್ಮ ಮುಂದಿಟ್ಟಿರುವ ಸಾರ್ವಜನಿಕ ಕಾಮಗಾರಿಗಳು, ಸಣ್ಣ ನೀರಾವರಿ ಕಾಮಗಾರಿಗಳು, ದೊಡ್ಡ ದೊಡ್ಡ

(ಶ್ರೀ ಟಿ. ಡಿ. ದೇವೇಂದ್ರಪ್ಪ)

ಇರಿಗೇಷನ್ ಕಾಮಗಾರಿಗಳು ಮುಂತಾದುವುಗಳಿಗೆ ಸಂಬಂಧಿಸಿದ ಡಿಮ್ಯಾಂಡನ್ನು ಸ್ವಾಗತಿಸುತ್ತೇನೆ. ಇದಕ್ಕಾಗಿ 61 ಕೋಟಿ ರೂಪಾಯಿಗಳ ಹಣ ಕೊಟ್ಟಿರುವುದು ಕಡಮೆ. ಇನ್ನೂ ಹೆಚ್ಚು ಹಣವನ್ನು ಈ ಅಭಿವೃದ್ಧಿಕಾರ್ಯಗಳಿಗೆ ಕೊಡಬೇಕಾಗಿತ್ತು. ದೇಶದಲ್ಲಿ ರಸ್ತೆಗಳು, ಸೇತುವೆಗಳು, ದೊಡ್ಡ ದೊಡ್ಡ ಅಣೆಕಟ್ಟುಗಳು, ವಿದ್ಯುಚ್ಛಕ್ತಿ ಯೋಜನೆ, ಅಗತ್ಯವಾಗಿ ಸರ್ಕಾರಕ್ಕೆ ಬೇಕಾಗಿರುವ ಕಟ್ಟಡಗಳು, ಹೀಗೆ ರಾಜ್ಯದಲ್ಲಿ ಅತಿ ಮುಖ್ಯವಾಗಿ ಮಾಡಬೇಕಾದ ಕೆಲಸಗಳನ್ನು ಲೋಕೋಪಯೋಗಿ ಎಂಬ ಹೆಸರುಳ್ಳ ಲೋಕವನ್ನೇ ಅಭಿವೃದ್ಧಿಪಡಿಸುವ ಇಲಾಖೆಯು ವಹಿಸಿಕೊಂಡು ದಕ್ಷತೆಯಿಂದ ಬಹಳ ಚೆನ್ನಾಗಿ ಕೆಲಸಮಾಡುತ್ತಿದೆ. ಸ್ವಾತಂತ್ರ್ಯ ಗಳಿಸಿದ ನಂತರ 15 ವರ್ಷಗಳ ಕಾಲದಲ್ಲಿ ಈ ಇಲಾಖೆಯು ಪ್ರಾಮುಖ್ಯವಾಗಿ ಜನರಿಗೆ ಎದ್ದುಕಾಣುವಂತೆ ಸಾಧನೆಯನ್ನು ಮಾಡಿಕೊಂಡು ಬಂದಿದೆ. ನಮ್ಮ ರಾಜ್ಯದಲ್ಲಿರುವ ಇಂಜನಿಯರುಗಳು ಬಹಳ ಶ್ರೇಷ್ಠ ದರ್ಜೆಯವರು ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ಕೆಲವರು ಕೆಟ್ಟವರಿರಬಹುದು. ಹಿಂದಿನ ಕಾಲದಲ್ಲಿದ್ದ ಮಿರ್‌ಸಾದಕ್ ನಂಥವರು ಕೆಲವರಿರಬಹುದು. ಹಾಗಿದ್ದ ಮಾತ್ರಕ್ಕೆ ಲೋಕೋಪಯೋಗಿ ಇಲಾಖೆಯನ್ನೇ ದೂರುವುದು ಅಷ್ಟು ಸೂಕ್ತವಲ್ಲ. ಕಳೆವ 15 ವರ್ಷಗಳಲ್ಲಿ ರಾಜ್ಯದಲ್ಲಿರುವ ಇಂಜನಿಯರುಗಳು ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ನಿರ್ಮಿಸಿದ್ದಾರೆ. ಈಗಾಗಲೆ ಅವುಗಳಿಂದ ಪ್ರತಿಫಲ ದೊರೆಯುತ್ತಿದೆ. ಉದಾಹರಣೆ ಹೇಳುವುದಾದರೆ ಇಲ್ಲಿರುವ ವಿಧಾನಸೌಧವೇ ಸಾಕ್ಷಿ. ಈ ಇಲಾಖೆಯು ಇನ್ನೂ ದಕ್ಷತೆಯಿಂದ ಕೆಲಸ ಮಾಡಬಹುದು. ನೀರಾವರಿ ಕೆಲಸಗಳನ್ನು ಅತಿಮುಖ್ಯವಾಗಿ ಗಮನಿಸಬೇಕಾದ್ದು ಸರ್ಕಾರದ ಕರ್ತವ್ಯ. ಈ ನೀರಾವರಿ ಪ್ರದೇಶಗಳಲ್ಲಿ ನೀರಿನ ಒತ್ತಡ ಜಾಸ್ತಿಯಾಗಿ ಜಮೀನಿನ ಬಳಿಗೆ ಹೋಗಿಬರಲು ತುಂಬಾ ಕಷ್ಟವಾಗಿರುತ್ತದೆ. ದನಕರುಗಳು, ಗಾಡಿಗಳು ಹೋಗಿಬರಬೇಕಾಗಿದೆ, ನೀರಿನ ಸೌಕರ್ಯಕ್ಕೆ ತಕ್ಕ ಹಾಗೆ ರಸ್ತೆಗಳು, ಸೇತುವೆಗಳು ಮುಂತಾದುವನ್ನು ಮಾಡಿದರೆ ಒಳ್ಳೆಯ ಹೆಸರು ಬರುತ್ತದೆ. ಆದುದರಿಂದ ಸರ್ಕಾರ ನೀರಾವರಿ ಪ್ರದೇಶಗಳಿರುವಕಡೆ ಅತಿ ಮುಖ್ಯವಾಗಿ ರಸ್ತೆ ಮತ್ತು ಸಣ್ಣ ಸಣ್ಣ ಸೇತುವೆಗಳನ್ನು ನಿರ್ಮಿಸಬೇಕೆಂದು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಉದಾಹರಣೆಗೆ ಹೇಳುವುದಾದರೆ, ನಮ್ಮ ಪ್ರದೇಶದಲ್ಲಿ ಭದ್ರ ಪ್ರಾಜೆಕ್ಟ್ ಮತ್ತು ತುಂಗಭದ್ರ ಪ್ರಾಜೆಕ್ಟುಗಳ ಕೆಲವು ಭಾಗಗಳಲ್ಲಿ ರಸ್ತೆ ಮತ್ತು ಸೇತುವೆ ಸೌಕರ್ಯಕ್ಕಾಗಿ ಸರ್ಕಾರಕ್ಕೆ ಅಂದಾಜನ್ನು ಕಳುಹಿಸಿದ್ದಾರೆ. ಅದರ ಮೊಬಲಗು 8,50,000 ರೂಪಾಯಿಗಳು. ಅದನ್ನು ಕಳುಹಿಸಿ ಬಹಳ ದಿವಸಗಳಾಯಿತು ; ಸರ್ಕಾರಿ ಲೆವಲ್‌ನಲ್ಲಿದೆ ತುರ್ತುಪರಿಸ್ಥಿತಿ ಅದಕ್ಕೆ ಅನ್ವಯಿಸಬಾರದು. ಅತಿ ಮುಖ್ಯವಾದ ಕೆಲಸವಾಗಿರುವುದರಿಂದ ಅದನ್ನು ಮಂಜೂರುಮಾಡಿ ಕೆಲಸ ಮಾಡಿಸಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರದಲ್ಲಿ ಪ್ರಾರ್ಥನೆಮಾಡುತ್ತೇನೆ.

ಹಾಗೆಯೇ ಶರಾವತಿ ಯೋಜನೆಯಿಂದ ಮುಳುಗಡೆಹೊಂದುವ ಗ್ರಾಮಗಳ ವಿಷಯವೂ ಕೂಡ ಅಷ್ಟೇ ಮುಖ್ಯವಾಗಿದೆ. ಮತ್ತು ಭದ್ರಜಲಾಶಯ ಮತ್ತು ತುಂಗಾಜಲಾಶಯ ಇವುಗಳ ಕೆಳಗಿರುವ ಅನೇಕ ಗ್ರಾಮಗಳ ಸ್ಥಳ ಬದಲಾವಣೆ ಕೂಡ ಮಾಡಬೇಕಾಗಿದೆ. ಸರ್ಕಾರ ಇದಕ್ಕೆ ಜಾಗ್ರತೆ ಗಮನ ಕೊಡಬೇಕಾಗಿದೆ. ಸುಮಾರು ಆರೇಳು ವರ್ಷಗಳಾದರೂ ವರ್ಗಾವಣೆ ಕೆಲಸವಾಗಿಲ್ಲ. ಸಂಬಂಧಪಟ್ಟವರಿಗೆ ಪರಿಹಾರ ಕೊಡುವುದೂ ತಡವಾಗುತ್ತಿದೆ. ವರ್ಗಾವಣೆ ಆಗುವ ಗ್ರಾಮಗಳಿಗೆ ಎಷ್ಟು ಬೇಗ ಪರಿಹಾರಕೊಟ್ಟರೆ ಅಷ್ಟು ಬೇಗ ಸ್ಥಳ ಬಿಡುವರು. ಆ ದೆಶೆಯಿಂದ ಶರಾವತಿ ಯೋಜನೆಯಿಂದ ಮುಳುಗಡೆಯಾಗುವ ಗ್ರಾಮಗಳು ಮತ್ತು ಪುನರ್ವಸತಿಯ ಗ್ರಾಮಗಳ ಬಗ್ಗೆ ತಕ್ಷಣ ಗಮನಕೊಟ್ಟು ಬೇರೆ ಒಳ್ಳೆಯ ಸ್ಥಳಗಳಿಗೆ ಜನರು ಹೋಗಲು ಯೋಗ್ಯ ವ್ಯವಸ್ತೆ ಮಾಡ ಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

2-30 P.M.

ಸ್ವಾಮಿ, ಏನೇ ಆದರೂ ಕೆಲವು ರಸ್ತೆಗಳನ್ನು ಮಾಡಬೇಕು ಎಂದಾಗ ಪಬ್ಲಿಕ್ ವರ್ಕ್ಸ್ ಮಿನಿಸ್ಟರು ಏನು ಮಾಡುವುದು ಹಣವಿಲ್ಲ, ನಾವು ಹೇಗೆ ಮಾಡಬೇಕು ಬಹಳ ಕಷ್ಟ ಪರಿಸ್ಥಿತಿ ಬಂದಿದೆ ಎಂದು ಹೇಳುತ್ತಾರೆ. ಬಹಳ ದಿವಸದ ಹಿಂದೆ ಸರ್ಕಾರದವರು ಕೆಲಕೆಲವು ರಸ್ತೆಗಳನ್ನು ಸ್ಟೇಟ್ ಫಂಡ್ ರಸ್ತೆ ಆಗಿ ತೆಗೆದುಕೊಂಡಿದ್ದಾರೆ. ಉದಾಹರಣೆಗೆ ಭದ್ರಾವತಿಯಿಂದ ಕೇವಲ ಮೂವತ್ತು ಮೈಲಿಯಲ್ಲಿರುವ ಶಿವನಿ ರೈಲ್ವೇಸ್ಟೇಷನ್‌ಗೆ ಸೇರತಕ್ಕ ಒಂದು ಹೊಸ ರಸ್ತೆ ಸ್ಟೇಟ್ ಫಂಡ್ ರಸ್ತೆಯಾಗಿ ಇಟ್ಟುಕೊಂಡು ಸ್ವಲ್ಪ ಕೆಲಸ ಮಾಡಿದ್ದಾರೆ. ಈಗ ಇಲಾಖೆಯವರನ್ನು ಕೇಳಿದರೆ ಹಣ ಇಲ್ಲ ಎಂದು ಹೇಳುತ್ತಾರೆ. ಹೀಗೆ ಅತಿ ಮುಖ್ಯವಾಗಿರತಕ್ಕ ರಸ್ತೆಗಳನ್ನು ತೆಗೆದುಕೊಂಡು ಅಲ್ಲಿ ಸ್ವಲ್ಪ ದುಡ್ಡು ಹಾಕಿ, ಖರ್ಚು ಮಾಡಿ, ಬಾಕಿ ಉಳಿದ ಹಣವನ್ನು ಖರ್ಚು ಮಾಡಿ ರಸ್ತೆ ಪೂರೈಸದೇ ಇದ್ದರೆ ಬಹಳ ತೊಂದರೆಯಾಗುತ್ತದೆ. ಆ ದೆಶೆಯಿಂದ ದಯವಿಟ್ಟು ಈ ರಸ್ತೆಯನ್ನು ಕೂಡ ಮಾಡಿಸತಕ್ಕ

ವ್ಯವಸ್ಥೆ ಮಾಡಬೇಕು. ಹೀಗೆಯೇ ಶಿವಮೊಗ್ಗ ಜೈಲಿನಿಂದ ತ್ಯಾಜವಳ್ಳಿ ಮೇಲೆ ಚೈವಳಂಗಕ್ಕೆ ಹೋಗುವ ರಸ್ತೆ ಮುಖ್ಯವಾದದ್ದು ಅದನ್ನು ಕೂಡ ಸ್ಟೇಟ್ ಫಂಡ್ ರಸ್ತೆಯಾಗಿ ತೆಗೆದುಕೊಂಡು ಸ್ವಲ್ಪ ಕೆಲಸ ಮಾಡಿದ್ದಾರೆ. ಉಳಿದಿರತಕ್ಕ ಕೆಲಸ ಪೂರೈಸಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ನಮ್ಮ ಭದ್ರಾ ಪ್ರಾಜೆಕ್ಟಿನ ಕೆಳಭಾಗದಲ್ಲಿ ಹಿಂದೆ ಇದೇ ಸಭೆಯಲ್ಲಿ ಮುಖ್ಯಮಂತ್ರಿಗಳು ರಂಗೋಲಿ ಹಳ್ಳದ ಪ್ರಶ್ನೆ ಬಂದಾಗ ಮಂಜೂರಾಗಿದೆ ತಕ್ಷಣದಲ್ಲೇ ಕೆಲಸ ಷುರು ಮಾಡುತ್ತೇವೆ ಎಂದು ಹೇಳಿದರು. ಇದುವರೆಗೂ ಯಾವ ಕಾರ್ಯಕ್ರಮವೂ ಆಗಿಲ್ಲ. ರಂಗೋಲಿ ಹಳ್ಳಕ್ಕೆ ಮುಖ್ಯವಾಗಿ ಸೇತುವೆ ಆಗಬೇಕಾಗಿರುವುದು ಏಕೆಂದರೆ ಭದ್ರಾವತಿ ತಾಲ್ಲೂಕಿನಿಂದ ಹೊನ್ನಾಳಿಗೆ ಹೋಗತಕ್ಕ ರಸ್ತೆಯಲ್ಲಿ ಅದು ಒಂದು ದೊಡ್ಡ ಹಳ್ಳ ಮತ್ತು ಭದ್ರಾ ಚಾನಲ್ ಬರತಕ್ಕ ಸಂಭವ ಇರುವುದರಿಂದ ಅಲ್ಲಿ ಗಾಡಿಗಳಾಗಲೀ, ಬಸ್ಸುಗಳಾಗಲೀ, ದನಕರುಗಳಾಗಲೀ ಹೋಗುವುದಕ್ಕೆ ಬಹಳ ತೊಂದರೆಯಾಗಿದೆ. ಅಲ್ಲದೆ ಅದು ಮುಖ್ಯವಾಗಿ ಇರಿಗೇಷನ್‌ಗೆ ಸಂಬಂಧಪಟ್ಟ ಸೇತುವೆ ಅದರ ದೆಸೆಯಿಂದ ಮುಖ್ಯಮಂತ್ರಿಗಳು ತಕ್ಷಣ ಅದನ್ನು ಮಾಡಿಸಿಕೊಡಬೇಕೆಂದು ಅವರಲ್ಲ ಮನವಿ ಮಾಡಿಕೊಳ್ಳುತ್ತೇನೆ. ಇದೇ ರೀತಿ ಲೋಕೋಪಯೋಗಿ ಶಾಖೆಗೆ ಸೇರಿರತಕ್ಕ ಒಂದು ಹಳ್ಳ ಎಂದರೆ ಕಾಗೆ ಹಳ್ಳ. ಬಹಳ ದಿವಸದಿಂದ ಬಡ್ಜೆಟ್‌ನಲ್ಲಿ ಸೇರಿರುತ್ತಿತ್ತು. ಈ ಬಡ್ಜೆಟ್‌ನಲ್ಲಿ ಬಿಟ್ಟುಹೋಗಿದೆ. ಇದು ಅತಿ ಮುಖ್ಯವಾದ ಸೇತುವೆ. ಇದನ್ನು ಕೂಡ ಮಾಡಿಸಿಕೊಡಬೇಕೆಂದು ಹೇಳುತ್ತೇನೆ.

ಸ್ವಾಮಿ ಮುಖ್ಯವಾದ ಕೆಲಕೆಲವು ಯೋಜನೆಗಳು ಮಂಜೂರಾಗಿ ಕೆಲವಾರು ವರ್ಷಗಳಾಗಿ ಸ್ಥಳದ ಇಲಾಖೆಯವರಿಂದ ತಡವಾಗುತ್ತಾ ಇದೆ. ಹಣ ಲ್ಯಾಪ್ಸ್ ಆಗುತ್ತಿದೆ. ಕೆಲಸ ಆಗುವುದಿಲ್ಲ. ಏನು ಲೋಪದೋಷವಿದೆ ಎಂಬುದನ್ನು ಮಂತ್ರಿಗಳು ಮತ್ತು ಮುಖ್ಯ ಇಂಜಿನಿಯರುಗಳು ಯೋಚನೆ ಮಾಡಬೇಕು, ಸ್ಥಳದಲ್ಲಿ ಕೆಲವು ಸಣ್ಣ ಸಣ್ಣ ಮತ್ತು ಸ್ವಲ್ಪ ಮಟ್ಟದ ದೊಡ್ಡ ಅಧಿಕಾರಿಗಳು ಈ ಕೆಲಸಗಳನ್ನು ಪೂರ್ತಿ ಮಾಡಿಸತಕ್ಕವರ ಬಗ್ಗೆ ತಾವು ವಿಚಾರಣೆ ನಡೆಸಬೇಕು. ಏನು ಕಾರಣದಿಂದ ತಡವಾಗಿದೆ, ಯಾರು ಅಸಡ್ಡಾಳತನ ಮಾಡಿದರು, ಅಸಿಸ್ಟೆಂಟ್ ಇಂಜಿನಿಯರಾಗಲೀ, ಸಬ್ ಓವರ್ಸೀಯರಾಗಲೀ, ಎಕ್ಸಿಕ್ಯೂಟಿವ್ ಇಂಜಿನೀಯರಾಗಲೀ, ಸೂಪರಿಂಟೆಂಡಿಂಗ್ ಇಂಜಿನಿಯರಾಗಲೀ ಯಾರು ಕಾರಣಕರ್ತರು ಎಂದು ಶೋಧನೆ ಮಾಡಿ ಅವರ ಬಗ್ಗೆ ಶಿಸ್ತಿನ ಕ್ರಮ ತೆಗೆದುಕೊಳ್ಳುವುದು ಚೀಫ್ ಇಂಜಿನಿಯರ ಕರ್ತವ್ಯ ಮತ್ತು ಸರ್ಕಾರದ ಕರ್ತವ್ಯ. ಉದಾಹರಣೆಗೆ ಹೇಳುವುದಾದರೆ ಸೆಂಟರ್‌ನಿಂದ ಮಂಜೂರಾಗಿರುವ ಭದ್ರಾವತಿ ಇಂಡಸ್ಟ್ರಿಯಲ್ ಟ್ರೈನಿಂಗ್ ಸೆಂಟರ್‌ಗೆ ಕಟ್ಟಡ ಮಂಜೂರಾಗಿ 3 ವರ್ಷವಾಯಿತು. 6 ಲಕ್ಷ ರೂಪಾಯಿ ಮಂಜೂರಾಗಿತ್ತು ಎಂದು ಕೇಳಿದ್ದೇನೆ. ಅಲ್ಲಿ ಜಾಗವನ್ನು ಸುಮಾರು 10 ಸಾವಿರ ರೂಪಾಯಿ ಕೊಟ್ಟು ಆದು ಫಸ್ಟ್‌ಕ್ಲಾಸ್ ತರೀ ಜಮೀನು ಇಲಾಖೆಯವರು ಅಕ್ವೈರ್ ಮಾಡಿಕೊಂಡು ಸುಮಾರು $1\frac{1}{2}$ ವರ್ಷವಾದರೂ ಕೂಡ ಆ ಕಟ್ಟಡ ಇದುವರೆಗೂ ಕಟ್ಟಿಲ್ಲ. ಇದಕ್ಕೆ ಅಲ್ಲಿನ ಸೂಪರಿಂಟೆಂಡಿಂಗ್ ಇಂಜಿನಿಯರೇ ಕಾರಣ ಕರ್ತರು ಎಂದು ನಾನು ಕೇಳಿದ್ದೇನೆ. ದಯವಿಟ್ಟು ಸರ್ಕಾರದವರು ಮತ್ತು ಚೀಫ್ ಇಂಜಿನಿಯರು ಇದನ್ನು ಪರಿಶೀಲನೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ.

ಸ್ವಾಮಿ ಈ ಇಲಾಖೆ ಬಹಳ ಪ್ರಾಮುಖ್ಯವಾದ ಇಲಾಖೆ ಎಂದು ನಾನು ಮುಂಚಿತವಾಗಿಯೇ ಹೇಳಿದ್ದೇನೆ. ಈ ಇಲಾಖೆಗೆ ಹಣ ಬೇಕು. ಎಷ್ಟೇ ಕಷ್ಟ ಇದ್ದರೂ ಕೂಡ ನಮ್ಮ ರಾಜ್ಯ ಅಭಿವೃದ್ಧಿ ಹೊಂದಬೇಕಾದರೆ ಪ್ರತಿ ಮೂಲೆ ಮೂಲೆಯಲ್ಲೂ ಕೂಡ ಸಣ್ಣ ಸಣ್ಣ ನೀರಾವರಿ ಅಣೆಕಟ್ಟುಗಳು ಆಗಬೇಕಾದ್ದು ಬಹಳ ಅವಶ್ಯಕ. ಅದನ್ನು ಮಾಡಬೇಕಾದ್ದು ನಿಮ್ಮ ಕರ್ತವ್ಯ. ಹೆಚ್ಚು ಆಹಾರ ಬೆಳೆದು ನಾವು ಸಮೃದ್ಧಿಯಾಗಬೇಕಾದರೆ ಮುಖ್ಯವಾದ ಈ ಅಣೆಕಟ್ಟುಗಳು ಆಗಲೇಬೇಕು. ಶ್ರೀಮಾನ್ ಮುಕ್ಕಣ್ಣಪ್ಪನವರು, ಹಣ ಖೋತ ಇದೆ. ಮುಖ್ಯವಾದ ಯೋಚನೆಗಳನ್ನು ಸಾಲವಾದರೂ ಸರ್ಕಾರ ಎತ್ತಿ ಸುಮಾರು 30–40 ಕೋಟಿ ರೂಪಾಯಿಗಳ ಬಂಡವಾಳವನ್ನು ತೆಗೆದುಕೊಂಡು ಮಾಡಬೇಕೆನ್ನತಕ್ಕ ಒಂದು ಸಲಹೆ ಕೊಟ್ಟರು. ನಾನಾದರೂ ಕೂಡ ಇದು ಬಹಳ ಒಳ್ಳೆಯದು ಎಂದು ಹೇಳುತ್ತೇನೆ. ಇವತ್ತು ನಾವು ಸಾಲ ಪಡೆದುಕೊಂಡು ಸುಮಾರು 50 ಕೋಟಿ ರೂಪಾಯಿಗಳಿಂದ ಅತಿ ಮುಖ್ಯವಾದ ಕೃಷ್ಣಾ–ಗೋದಾವರಿ ಹೀಗಿರತಕ್ಕ ಅನೇಕ ಯೋಚನೆಗಳನ್ನು ಮಾಡಿದ್ದೇ ಆದರೆ ಸುಮಾರು ಹತ್ತಾರು ವರ್ಷಗಳಲ್ಲಿ ಆ ಹಣವನ್ನು ತೀರಿಸಲೂಬಹುದು. ಅದರಿಂದ ಅಲ್ಲಿರತಕ್ಕ ಜನತೆಗೆ ವ್ಯವಸಾಯಕ್ಕೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ನಮ್ಮ ರಾಜ್ಯದ ಅಭಿವೃದ್ಧಿಯನ್ನು ಕೂಡ ಸಾಧನೆ ಮಾಡಿಕೊಳ್ಳಬಹುದು. ಇದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕು ಅತಿ ಮುಖ್ಯ ವಿಚಾರ. ಇಷ್ಟು ಹೇಳಿ ನಮ್ಮಲ್ಲಿ ಮುಳುಗಡೆಗೆ ಬರತಕ್ಕ ಪ್ರದೇಶ ಇದೆ. ಆದ್ದರಿಂದ ಮುಖ್ಯಮಂತ್ರಿಗಳು, ಪಬ್ಲಿಕ್ ವರ್ಕ್ಸ್ ಮಿನಿಸ್ಟರು, ಮೈನರ್ ಇರಿಗೇಷನ್ ಮಿನಿಸ್ಟರು ಕೂಡ ಅತಿ ಮುಖ್ಯವಾದ ಮಳೆನಾಡು ಪ್ರಾಂತ್ಯಕ್ಕೆ ತಮ್ಮನಿಗೆ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† **ಶ್ರೀ ಜಿ. ಮರುಳಪ್ಪ (ಕಡೂರು).**—ಸ್ವಾಮಿ, ಅಧ್ಯಕ್ಷರೇ, ನಮ್ಮ ದೇಶ ಖರ್ಚು ಮಾಡುವ 100 ಕೋಟಿ ರೂಪಾಯಿಗಳ ಪೈಕಿ ಸುಮಾರು 65 ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕ ಈ ಪಬ್ಲಿಕ್ ವರ್ಕ್ಸ್ ಬಾಬಿನ ಮೇಲೆ ಮಾತನಾಡುತ್ತಾ ಇದ್ದೇನೆ. ಸ್ವಾಮಿ ಒಂದು ವಿಷಯ ಈ ಸಭೆಯಲ್ಲಿ ಮತ್ತು ದೇಶದಲ್ಲಿ ಬಹಳವಾಗಿ ಚರ್ಚೆಯಾಗುತ್ತಾ ಇದೆ. ಅದೇನೆಂದರೆ ಕೃಷ್ಣಾ-ಗೋದಾವರೀ ನೀರಿನ ಪ್ರಶ್ನೆ ಈ ಮನೆಯಲ್ಲೂ, ಹೊರಗಡೆಯೂ, ಒಳಗಡೆಯೂ ಅನೇಕ ಗೊಂದಲಕ್ಕೆಸಿಕ್ಕಿಕೊಂಡಿದೆ. ನಾನು ಅನ್ನುವುದಾದರೂ ಇಷ್ಟೆ. ನಮ್ಮ ಸ್ನೇಹಿತರಿಗೆ ಕೇಳಿದೆ. ''ಇಷ್ಟು ಗೊಂದಲಕ್ಕೆ ತುತ್ತಾಗಿ ಬಹಳ ಗೊಂದಲ ಮಾಡುತ್ತಾ ಇರುವ ಕೃಷ್ಣಾ-ಗೋದಾವರಿ ನೀರನ್ನು ಯಾವ ಡೆವಲಪ್‌ಮೆಂಟ್ ಏರಿಯಾಕ್ಕೆ ಕೇಳುತ್ತೀರಿ, ಹೈದರಾಬಾದು ಕರ್ನಾಟಕ ಮತ್ತು ಬೊಂಬಾಯಿ ಕರ್ನಾಟಕದ ಜನಗಳಿಗೆ ಹೆಚ್ಚು ಪ್ರಯೋಜನವಾಗುತ್ತದೆ. ಅದು undeveloped ಏರಿಯಾ ಎಂದು ಹೇಳುತ್ತಾ ಇದ್ದೀರಿ. ಎಲ್ಲರೂ ಗಲಾಟೆ ಮಾಡುತ್ತಾ ಇದ್ದಾರೆ ನೀವು ಇದರ ಬಗ್ಗೆ ಏನೂ ಗಲಾಟೆ ಮಾಡುವುದು ಕಾಣುವುದಿಲ್ಲ ಸುಮ್ಮನೆ ಇದ್ದೀರಿ, ಏಕೆ ಸುಮ್ಮನೆ ಇದ್ದೀರಿ'' ಎಂದು ಆಕಡೆಯವರನ್ನು ಕೇಳಿದ್ದಕ್ಕೆ—ಅವರು ನಮಗೆ ಹೊಸಬರು—ಅವರು ಹೇಳಿದ್ದೇನೆಂದರೆ ನೋಡಿ ಅದರಲ್ಲಿ ಅರ್ಥವಿಲ್ಲ. ನಾವು ನಮ್ಮ ಲೀಡರನ್ನು ಚುನಾಯಿಸಿದ್ದೇವೆ. ಅವರ ಮಂತ್ರಿ ಮಂಡಲ ಇದೆ ಅವರ ಮೇಲೆ ನಮಗೆ ಪೂರ್ಣ ಭರವಸೆ ಇದೆ. ಅವರು ಈ ಕೆಲಸವನ್ನು ಯಶಸ್ವಿಯಾಗಿ ಮಾಡುತ್ತಾರೆ ಎಂಬ ನಂಬಿಕೆ ಇದೆ. ಅದೂ ಅಲ್ಲದೇ ಅವರು ಪದೇ ಪದೇ ಒತ್ತಾಯಪೂರ್ವಕವಾಗಿ ಹೇಳುತ್ತಾ ಇದ್ದಾರೆ ನಾವು ಖಂಡಿತವಾಗಿ ಇದರಿಂದ ಏನು ಹಕ್ಕು ಬರಬೇಕೋ ಅದನ್ನು ಪಡೆಯುತ್ತೇವೆ ಇದರ ಬಗ್ಗೆ ಯಾರೂ ಸಂಶಯ ಪಡಬೇಕಾಗಿಲ್ಲ ಎಂದು ಅವರು ಹೇಳುತ್ತಾ ಇರಬೇಕಾದರೆ ಈ ಬಗ್ಗೆ ಸುಮ್ಮನೆ ಗೊಂದಲ ಮಾಡುವುದರಿಂದ ಪ್ರಯೋಜನವಾದರೂ ಏನು ಎಂದು, ಕೆಲವರು ಹೇಳಿದರು. ಇಷ್ಟು ಗೊಂದಲ ಮಾಡುತ್ತೀರಲ್ಲಾ ಮುಖ್ಯಮಂತ್ರಿಗಳನ್ನು ನಾವು ಚುನಾಯಿಸಿದವರು, ನಮ್ಮ ದೇಶದವರು, ಆಂಧ್ರದವರಲ್ಲ ಅಥವಾ ಮದರಾಸಿನವರಲ್ಲ.

ನಮ್ಮವರೇ, ಇಲ್ಲಿಯವರೇ, ಇಲ್ಲಿರತಕ್ಕ ಮೆಂಬರುಗಳೇ, ಇಲ್ಲಿಯ ಜನರ ಬಗ್ಗೆ ಕಾತುರತೆ ಇರತಕ್ಕವರೇ, ನಾವೀದಿವಸ ಇವರಿಗೆ ಈ ದೇಶದ ಜವಾಬ್ದಾರಿಯನ್ನೇ ನಾವು ನಮ್ಮವರೆಂತ ವಹಿಸಿರುವಾಗ ಅವರು ಇಡೀ ದೇಶದ ಜವಾಬ್ದಾರಿಯನ್ನೇ ಹೊತ್ತಿರುವಾಗ ಅವರಿಗೆ ಇದರ ಜವಾಬ್ದಾರಿಯಿಲ್ಲವೇ? ಇವರೆಲ್ಲರೂ ಎಂದಿದ್ದರೂ ಇಲ್ಲಿಯೇ ಇರಬೇಕು, ಇವರು ಇಲ್ಲಿಯೇ ಹುಟ್ಟಿದ್ದಾರೆ, ಇಲ್ಲೇ ಬೆಳೆದಿದ್ದಾರೆ. ಇಲ್ಲಿಯ ಜನರ ಕಷ್ಟ ಕಾರ್ಪಣ್ಯಗಳನ್ನೆಲ್ಲ ಚೆನ್ನಾಗಿ ಅರಿತಿದ್ದಾರೆ. ಹೀಗಿರುವಾಗ ಈ ದಿವಸ ನಮ್ಮವರೇ ಆದ ಇವರು ಯಾವ ಕಾರಣಕ್ಕಾಗಿ ಆಂಧ್ರರಿಗೋ ಅಥವಾ ಮದ್ರಾಸಿನವರಿಗೋ ಅಥವಾ ಬೊಂಬಾಯಿನವರಿಗೋ ಒಂದು ಫೇವರಿಟಿಜಂ ತೋರಿಸುತ್ತಾರೆ? ಅಂಥಾದ್ದಕ್ಕೆ ಸ್ವಲ್ಪವೂ ಕಾರಣವಿಲ್ಲ. ಏಕೆಂದರೆ ಇವರೆಲ್ಲರೂ ಇಲ್ಲಿಯೇ ಮೆಂಬರುಗಳಾಗಬೇಕು, ಇಲ್ಲಿಯೇ ಮಂತ್ರಿಗಳಾಗಬೇಕು. ಇಲ್ಲಿಯೇ ಮುಖ್ಯಮಂತ್ರಿಯಾಗಬೇಕು. ಹೀಗಿರುವಾಗ ಇವರು ಈ ದಿವಸ ಆಂಧ್ರದವರ ಅಥವಾ ಮದ್ರಾಸಿನವರ ಅಥವಾ ಬೊಂಬಾಯಿನವರ ಒತ್ತಾಯಕ್ಕೆ ಏಕೆ ಈಡಾಗಬೇಕು? ಇವರು ಆಂಧ್ರಕ್ಕಾಗಲೀ-ಮದ್ರಾಸಿಗಾಗಲೀ ಅಥವಾ ಬೊಂಬಾಯಿಗಾಗಲಿ ಮುಖ್ಯಮಂತ್ರಿಗಳಾಗಿ ಎಂದೂ ಹೋಗುವುದಕ್ಕಾಗುವುದಿಲ್ಲ. ಆ ರೀತಿ ಹೋಗಬೇಕೆಂಬ ಪ್ರಯತ್ನದಲ್ಲಿ ಇವರೆಂದೂ ಜಯಪ್ರದ ಹೊಂದುವಂತಿಲ್ಲ. ಅಂದಮೇಲೆ ನಾವೇತಕ್ಕೆ ಇವರಮೇಲೆ ವೃಥಾ ಸಂಶಯಪಡಬೇಕು? ಅಷ್ಟೇ ಅಲ್ಲದೆ ನಮ್ಮ ಮುಖ್ಯಮಂತ್ರಿಗಳು ಇಡೀ ಕರ್ಣಾಟಕಕ್ಕಾಗಿ ಹಿಂದಿನಿಂದ ಬಹಳ ಶ್ರಮಿಸಿರತಕ್ಕವರು, ಅವರಿಗೆ ದೊಡ್ಡ ಮನಸ್ಸಿದೆ, 30 ವರ್ಷಗಳ ರಾಜಕೀಯದಲ್ಲಿ ದೇಶದ ಹಿತಸಾಧನೆಗೆ ಕಷ್ಟಪಟ್ಟು ದುಡಿದಿದ್ದಾರೆ, ಇಡೀ ಹಿಂದೂಸ್ಥಾನದಲ್ಲೆಲ್ಲ ಒಳ್ಳೆ ಹೆಸರನ್ನು ಗಳಿಸಿಕೊಂಡಿದ್ದಾರೆ, ಅಕ್ಕಪಕ್ಕದ ರಾಜ್ಯಗಳಲ್ಲೂ ಹಾಗೂ ಭಾರತದಾದ್ಯಂತವೂ ಇವರಿಗೆ ಅನೇಕ ಸ್ನೇಹಿತರಿದ್ದಾರೆ, ಇಂಥವರಿಗೆ ನಾವೀದಿವಸ ಈ ಕೆಲಸವನ್ನು ಎಂಟ್ರೆಸ್ಟ್ ಮಾಡಿರುವಾಗ ನಾವೇಕೆ ಸುಮ್ಮನೆ ಕೂಗಾಡಬೇಕು ಎಂತ ಅವರು ವಾದ ಮಾಡುತ್ತಿದ್ದಾರೆ. ಅವರು ಹೇಳತಕ್ಕ ವಾದವೂ ಸಹ ಸರಿಯಾದುದೆಂತಲೇ ನನಗೆ ಅನ್ನಿಸಿತು.

ನನ್ನನ್ನು ಇನ್ನು ಕೆಲವರು ಕೇಳಿದರು; ಆಂಧ್ರದವರು ಈಗಾಗಲೇ ನಾಗಾರ್ಜುನ ಸಾಗರವನ್ನು ಕಟ್ಟಿದ್ದಾರೆ. ಈಗ ಮತ್ತೆ ಶ್ರೀಶೈಲ ಪ್ರಾಜೆಕ್ಟನ್ನು ಕಟ್ಟುವುದಕ್ಕೆ ಅವರು ಮುಂದೆ ಹೋಗುತ್ತಿದ್ದಾರೆ. ಹೀಗಿರುವಾಗ ಇಲ್ಲಿ ಇವರೇಕೆ ಸುಮ್ಮನಿರುತ್ತಾರೆ ಅಂತ ಕೆಲವರು ಕೇಳುತ್ತಿದ್ದಾರೆ. ನಾಗಾರ್ಜುನ ಸಾಗರ ಈ ದಿವಸ ಕಟ್ಟಿದ್ದಲ್ಲ. ಅದನ್ನು ಕೆಲವು ವರ್ಷಗಳ ಕೆಳಗೇ ಕಟ್ಟಲಾಯಿತು. ಆದುದರಿಂದ ಅದರ ಪರವಾಗಿ ಈಗ ಇಲ್ಲಿ ಅಧಿಕಾರದಲ್ಲಿರತಕ್ಕವರನ್ನು ಕಾರಣರೆಂತ ಹೇಗೆ ಹೇಳುವುದು? ಇವರ ಕಾಲಕ್ಕೆ ಹಿಂದೆಯೇ ಅದನ್ನು ಕಟ್ಟಲಾಗಿದೆ. ಅದಕ್ಕಾಗಿ ಈಗ ಹಾಲಿ ಇರತಕ್ಕ ಮುಖ್ಯಮಂತ್ರಿಗಳನ್ನು ಹೀಯಾಳಿಸುವುದು ಸರಿಯಲ್ಲ ಎಂತ ಕೆಲವರು ವಾದಿಸುತ್ತಾರೆ.

ಇಲ್ಲಿಗೆ ಬಹಳ ದಿವಸಗಳ ಹಿಂದಿನಿಂದ ಕನ್ನಡನಾಡು ಒಂದಾಗಬೇಕು ಎಂಬ ಹೆಬ್ಬಯಕೆ ನಮ್ಮೆಲ್ಲರಿಗೂ ಇತ್ತು. ನಮ್ಮ ಸಹೋದರರು ಬೇರೆ ಬೇರೆ ಪ್ರಾಂತಗಳಲ್ಲಿ ಅನೇಕ ಭಾಷೆಗಳ

ಜನರೊಂದಿಗೆ ಸೇರಿ ಅವರಿಗೆ ಯಾವ ತರಹದ ಅಭಿವೃದ್ಧಿ ಕಾರ್ಯಗಳನ್ನು ಸಾಧಿಸಲಿಕ್ಕಾಗಲಿಲ್ಲ ಎಂಬ ಒಂದು ಮೂಲ ಧ್ಯೇಯದಿಂದ ಆ ನಮ್ಮ ಸಹೋದರರು ಈಗ ನಮ್ಮೊಡನೆ ಸೇರಿಕೊಂಡಿದ್ದು ಒಳ್ಳೆಯದೇ ಆಯಿತು. ಈ ದಿವಸ ಕನ್ನಡನಾಡು ರಚನೆಯಾಗಿದೆ.

ಸ್ವಾಮಿ ಅಧ್ಯಕ್ಷರೇ, ಆ ಕಡೆಯಿಂದ ಬಂದಿರತಕ್ಕ ಜನರು ಬಹಳ ಕಷ್ಟಪಡುತ್ತಿದ್ದಾರೆ. ಇಲ್ಲಿಯವರೆಗೆ ಅವರಿಗೆ ನ್ಯಾಯವಾಗಿ ಎಷ್ಟು ನೀರಾವರಿ ಸೌಲಭ್ಯಗಳು ದೊರೆಯಬೇಕಾಗಿತ್ತೋ ಅದು ದೊರೆಯದೆ ಅವರ ಜೀವನ ಬಹಳ ಕಷ್ಟಕರವಾದುದಾಗಿದೆ. ಆದುದರಿಂದಲೇ ಈ ದಿವಸ ಅವರ ಪ್ರದೇಶಗಳನ್ನು ನಾವು ಅನ್-ಡೆವಲಪ್ಡ್ ಏರಿಯಾ ಎಂತ ಕರೆಯುತ್ತಿದ್ದೇವೆ. ಈ ದಿವಸ ಆದಷ್ಟು ಜಾಗ್ರತೆ ಈ ಅನ್-ಡೆವಲಪ್ಡ್ ಏರಿಯಾಗಳನ್ನು ಅಭಿವೃದ್ಧಿ ಮಾಡಲು ಅವರಿಗೆ ನ್ಯಾಯವಾಗಿ ದೊರೆಯಬೇಕಾಗಿರತಕ್ಕ ನೀರಿನ ಸೌಕರ್ಯಗಳನ್ನೊದಗಿಸಿಕೊಡಲು ಒಂದು ಡೆವಲಪ್‌ಮೆಂಟ್ ಬೋರ್ಡನು ಅಲ್ಲಿಗೆ ಕೂಡಲೆ ರಚಿಸಿ ಅವರು ನಮ್ಮ ರಾಜ್ಯಕ್ಕೆ ಬಂದು ನಮ್ಮೊಡನೆ ಸೇರಿಕೊಂಡುದುದಕ್ಕಾಗಿ ಅವರಿಗೆ ನಮ್ಮಲ್ಲಿ ಒಂದು ನಂಬಿಕೆ ಉಳಿಯುವ ಹಾಗೆ ನಾವು ಅವರ ಕೆಲಸವನ್ನು ಮಾಡಿಕೊಟ್ಟರೆ ಬಹಳ ಒಳ್ಳೆಯದು. ಈಹೊತ್ತು ಇದರ ಪೂರ್ಣ ಜವಾಬ್ದಾರಿ ನಮ್ಮೆಲ್ಲರಮೇಲೂ ಬಿದ್ದಿರುತ್ತೆಂದು ನಾನ ತಿಳಿಸಬಯಸುತ್ತೇನೆ.

ಇನ್ನು ನಮ್ಮ P. W. D. ಬಾಬಿನವರು ಈ ಹಿಂದೆ 1959-60 ಮತ್ತು 1960-61 ಸಾಲುಗಳಲ್ಲಿ ಸುಮಾರು 11 ಸಾವಿರ ಮೈಲಿ ರಸ್ತೆ ಮಾಡಿದ್ದಾರೆ. ಇದು ನನಗಂತೂ ಅಪಾಗುತ್ತಿಲ್ಲ. ಈ ರಸ್ತೆಗಳ ನಿರ್ಮಾಣ ಕಾರ್ಯಕ್ಕಾಗಿ ಸುಮಾರು 8-9 ಕೋಟಿ ರೂಪಾಯಿಗಳನು ಖರ್ಚು ಮಾಡಲಾಗಿದೆ. ಕೆಲವು ಕಡೆ ರಸ್ತೆಗಳಲ್ಲಿ ಮಣ್ಣನ್ನು ತೆಗೆದುಹಾಕಿದ್ದಾರೆ. ಇನ್ನು ಕೆಲವು ಕಡೆ ಹಾಗೆಯೇ ಬಿಟ್ಟುಬಿಟ್ಟಿದ್ದಾರೆ. ಇದನ್ನು ಒಳ್ಳೆ ರಸ್ತೆಗಳನ್ನು ಮಾಡತಕ್ಕದ್ದೆಂದು ಯಾರು ಹೇಳಿದರೋ ತಿಳಿಯಲಲ್ಲ. ಆದರೆ ನನಗೆ ಗೊತ್ತಿರುವಂತೆ ಒಂದು ಮೈಲಿ ಒಳ್ಳೆಯ ರಸ್ತೆ ಮಾಡಬೇಕಾದರೆ ಕನಿಷ್ಟ 10 ಸಾವಿರ ರೂಪಾಯಿಗಳಾದರೂ ಬೇಕು ; ಗರಿಷ್ಟ ಎಂದರೆ ಅದು 75 ಸಾವಿರದಿಂದ ಹಿಡಿದು 1 ಲಕ್ಷದವರೆಗೂ ಬೇಕಾಗುತ್ತದೆ. ಹೀಗಿರುವಾಗ ಈ ದಿವಸ ಈ ಹನ್ನೊಂದು ಸಾವಿರ ಮೈಲಿ ರಸ್ತೆ ಮಾಡಬೇಕಾಗಿದ್ದರೆ ಎಷ್ಟು ದುಡ್ಡು ಬೇಕು, ಇಷ್ಟು ಮೈಲಿಗಳ ರಸ್ತೆ ಕೆಲಸವನ್ನು ಏಕಾಏಕಿ ಯಾವ ಒಂದು ಆಲೋಚನೆಯನ್ನು ಮಾಡದೆ ಇವರು ಯಾವ ಆಧಾರದಮೇಲೆ ಟ್ರೆಜರಿಯಲ್ಲಿದ್ದ ಹಣವನ್ನು ತೆಗೆದುಕೊಂಡು ಹೋಗಿ ಈ ವ್ಯವಸ್ಥೆಕಾಣದ ಕೆಲಸಕ್ಕೆ ವ್ಯಯ ಮಾಡಿದರು ? ಈ ಕೆಲಸವು ಪೂರಾ ಅವ್ಯವಸ್ಥೆಯಿಂದ ಯಾವ ಆಲೋಚನೆಯೂ ಇಲ್ಲದೆ ಹಣವನ್ನು ಪೋಲು ಮಾಡಿರತಕ್ಕದ್ದಾಗಿದೆ ಅಂತ ಹೇಳಿದರೆ ಅದೇನೂ ತಪ್ಪಾಗಲಾರದು. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೇಂದ್ರಸರ್ಕಾರದವರು ಇಲ್ಲಿ ನಮ್ಮ ರಾಜ್ಯದ ಕೆಲವು ಅಭಿವೃದ್ಧಿ ಕಾರ್ಯಗಳಿಗಾಗಿ ಏನು ಹಣವನ್ನೊದಗಿಸಿದ್ದರೋ ಆ ಹಣವನ್ನು ಬೇರೆ ಯಾವ ಯಾವ ಇಲಾಖೆಗಳು ಉಪಯೋಗ ಮಾಡಬೇಕಾಗಿತ್ತೋ ಅವು ಆ ಹಣವನ್ನು ಉಪಯೋಗ ಮಾಡದೆ ಕೈಬಿಟ್ಟು ಆ ಹಣ ಲ್ಯಾಪ್ಸಾಗತಕ್ಕ ಸಂಭವ ಒದಗಿದಾಗ ಇನ್ನು ಮುಂದಿನ ಯೋಜನೆಗಳಿಗೆ ಕೇಂದ್ರದವರು ನಾವು ಕೇಳುವಷ್ಟು ಹಣವನ್ನು ಕೊಡಲಾರರೆಂಬ ಭೀತಿಯಿಂದ ಹಣವನ್ನೆಲ್ಲ ಈ ಇಲಾಖೆಗೆ ಹಾಕಿ ಇದನ್ನು ಇಲ್ಲಿ ಖರ್ಚು ಮಾಡಬೇಕೆಂದು ಹೇಳಿದ್ದಾರೆಂತ ಕಾಣುತ್ತದೆ. ಆದರೆ ಯಾವ ಸರ್ಕಾರವೇ ಆಗಲೀ ಇಂಥಾ ಕೆಲಸಗಳನ್ನು ಇಷ್ಟು ಅವ್ಯವಸ್ಥೆಯಿಂದ ಮಾಡಬಾರದು. ಹಣ ಉಳಿದರೆ ಅದು ಎಲ್ಲಿ ಹೋಗುತ್ತೆ ? ಇದ್ದರೆ ಕೇಂದ್ರ ಸರ್ಕಾರದಲ್ಲಿರುತ್ತೆ ; ಇಲ್ಲವೇ ಮೈಸೂರು ಸರ್ಕಾರದಲ್ಲಿರುತ್ತೆ. ಖರ್ಚು ಮಾಡುವುದೆಂದರೆ ಸುಮ್ಮನೆ ವೆಚ್ಚ ಮಾಡುವುದಲ್ಲ. ಆ ಖರ್ಚಿಗೆತಕ್ಕಹಾಗೆ ಜನಗಳಿಗೆ ಏನೇನು ಪ್ರಯೋಜನ ದೊರೆಯಬೇಕೋ ಅದು ದೊರೆಯಲೇಬೇಕು. ಸುಮ್ಮನೆ ಏನೋ ಒಂದು ಉದ್ದೇಶವಿಟ್ಟುಕೊಂಡು ಇಷ್ಟು ಹಣ ಖರ್ಚು ಮಾಡಿರತಕ್ಕದ್ದು ದೊಡ್ಡ ತಪ್ಪು. ಅಷ್ಟು ಹಣವನ್ನು ಹೇಗೆ ಖರ್ಚುಮಾಡಿದರು ? ಈ ದಿವಸ ಆ ರಸ್ತೆ ಕೆಲಸವೆಲ್ಲ ಅರ್ಧಮರ್ಧವಾಗಿದೆ. ಅದನ್ನು ಕಂಪ್ಲೀಟ್ ಮಾಡತಕ್ಕ ಜವಾಬ್ದಾರಿ ಈ ದಿವಸ ಯಾರದು ? ಆ ಜವಾಬ್ದಾರಿ ಈ ದಿವಸ ಸಂಪೂರ್ಣವಾಗಿ ಸರ್ಕಾರದವರಮೇಲೆ ಬಿದ್ದಿದೆ. ಈ ದಿವಸ ಈ ಕಾರ್ಯವನ್ನು ನೆರವೇರಿಸಲು ದುಡ್ಡಿಲ್ಲ ಅಂತ ಹೇಳಿದರೆ ಅದು ಜವಾಬ್ದಾರಿಯುತವಾದ ಮಾತಲ್ಲ ; ಅದರಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಈ ದಿವಸ ಸರ್ಕಾರದವರು ಎಲ್ಲಿಂದಲಾದರೂ ದುಡ್ಡನ್ನು ತಂದು ಅವರು ಮಾಡಿರತಕ್ಕ ತಪ್ಪನ್ನು ಸರಿಪಡಿಸಿಕೊಳ್ಳಬೇಕಾದುದು ಅವರ ಜವಾಬ್ದಾರಿ. ಇಲ್ಲವಾದರೆ ಅವರು ಈ ಹಿಂದೆ ವೃಥಾ ಖರ್ಚು ಮಾಡಿರತಕ್ಕ 9 ಕೋಟಿ ರೂಪಾಯಿಗಳಿಗೆ ಯಾರು ಜವಾಬ್ದಾರರು ? ಏನೋ ಒಂದು ಚೀಪ್‌ಪಾಪ್ಯುಲಾರಿಟಿಗಳಿಸಲು ಈ ಕೆಲಸವನ್ನು ನಡೆಸಿರುವಂತೆ ಕಂಡುಬರುತ್ತಿದೆ. ಇಂಥಾ ಭ್ರಾಂತಿಯುತವಾದ ಕಾರ್ಯಗಳಿಂದ ಖಂಡಿತ ನಮ್ಮ ರಾಜ್ಯಕ್ಕೆ ಕಲ್ಯಾಣವಾಗುವುದಿಲ್ಲ.

ಈ ದಿವಸ ಮಲಪ್ರಭ ಕೆಲಸ ಮಂಜೂರಾಗಿ 2 ವರ್ಷಗಳಮೇಲಾಯಿತು. ಈ ಕೆಲಸಕ್ಕೆ 25-30 ಲಕ್ಷ ರೂಪಾಯಿಗಳಷ್ಟು ಹಣ ಮಂಜೂರಾಗಿದೆ. ಈ ದಿವಸ ಆ ಪ್ರದೇಶದಲ್ಲಿ ರೈತನಿಗೆ

(ಶ್ರೀ ಜಿ. ಮರುಳಪ್ಪ)

ನೀರಾವರಿ ಸೌಲಭ್ಯಗಳನ್ನು ಇಲ್ಲಿಯವರೆಗಾದರೂ ಏಕೆ ಇನ್ನೂ ಒದಗಿಸಿಲ್ಲ? ಅವರಿಗೇನು ವ್ಯವಸ್ಥೆ ಮಾಡಿದ್ದಾರೆ? ಈಗಾಗಲೇ ಅಲ್ಲಿ 50-60 ಲಕ್ಷ ರೂಪಾಯಿಗಳಷ್ಟು ಖರ್ಚಾಗಿದೆ. ಅಷ್ಟು ಹಣ ಏತಕ್ಕೆ ಖರ್ಚಾಯಿತು? ಆ ಹಣವೆಲ್ಲ ಅಲ್ಲಿರತಕ್ಕ ಅಧಿಕಾರಿಗಳಿಗೆ ಒಳ್ಳೊಳ್ಳೆಯ ಬಂಗಲೆಗಳನ್ನು ಕಟ್ಟಿಸಲು ಖರ್ಚಾಗಿದೆ. ಅವರಿಗೆ ಎಲೆಕ್ಟ್ರಿಸಿಟಿ ಒದಗಿಸಲು ಖರ್ಚಾಗಿದೆ. ಆದರೆ ಜನರಿಗೆ ಮಾತ್ರ ಕಾಸಿನ ಪ್ರಯೋಜನವೂ ಆಗಿಲ್ಲ. ಮೊದಲು, ಹೀಗೆ ಯಾವ ಪ್ರಾಜಕ್ಟುಗಳನ್ನೇ ತೆಗೆದುಕೊಳ್ಳಲಿ ನನಗೆ ಗೊತ್ತಿರುವಂತೆ, ಈ ಅಫಿಸಿಯರ್ಸ್ ಕ್ವಾರ್ಟರುಗಳಿಗೆ, ಫ್ಲೆಷ್‌ಔಟುಗಳಿಗೆ ದುಂದು ವೆಚ್ಚವಾಗುತ್ತಿದೆ, ಅವರಿಗೆ ಎಲೆಕ್ಟ್ರಿಸಿಟಿ ಆಗಬೇಕು, ಇಂಥಾದ್ದಕ್ಕೆಲ್ಲ ವಿಶೇಷವಾಗಿ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ಮೊದಲು ಈ ಅಧಿಕಾರಿಗಳು ಅಲ್ಲಿ ಟೆಂಟುಗಳನ್ನು ಹಾಕಿಕೊಂಡು ಇಲ್ಲವೇ ಜಿಂಕ್‌ಷಿಟ್ ಅಥವಾ ಆಸ್ಬೆಸ್ಟಾಸ್‌ಷೀಟುಗಳಲ್ಲಿ ಮನೆಗಳನ್ನು ಮಾಡಿಕೊಂಡು ಆದಷ್ಟು ಬೇಗ ಆ ಪ್ರಾಜಕ್ಟ್‌ಗಳನ್ನು ಮುಗಿಸಿ ಜನರಿಗೆ ಅನುಕೂಲ ಕಲ್ಪಿಸಲು ವ್ಯವಸ್ಥೆ ಮಾಡುತ್ತಿದ್ದರು. ಆದರೆ ಈಗ ಹಾಗಿಲ್ಲ. ಈ ದಿವಸ ಈ ಇಂಜಿನಿಯರಿಂಗ್ ಇಲಾಖೆಯಲ್ಲಿರತಕ್ಕ ನಮ್ಮ ಅಧಿಕಾರಿಗಳಾದರೋ ರಾಜಮನೆತನಕ್ಕೆ ಸೇರಿದವರಲ್ಲ ಶ್ರೀಮಂತರ ಮಕ್ಕಳೂ ಅಲ್ಲ ಅವರು ಕೇವಲ ಹಳ್ಳಿಗಳಲ್ಲಿ ಹುಟ್ಟಿ-ಬೆಳೆದು ಬಡಜನರ ಕಷ್ಟ ಸುಖಗಳನ್ನು ಚೆನ್ನಾಗಿ ಮನಗಂಡ ಜನರಾಗಿದ್ದಾರೆ. ಈ ದಿವಸ ಅವರು ಯಾರ ದುಡ್ಡಿನಿಂದ ಆ ಡಿಗ್ರಿಗಳನ್ನು ಪಡೆದರೋ, ಈ ದಿವಸ ಅವರು ಯಾರ ದುಡ್ಡಿನಿಂದ ಸಂಬಳ ಸಾರಿಗೆಗಳನ್ನು ಪಡೆಯುತ್ತಿದ್ದರೋ ಅಂಥಾ ಜನರ ಸೇವೆ ಮಾಡದೆ ವಾಸಕ್ಕೆ ಬಂಗಲೆಗಳಾಗಬೇಕೆಂದು ಕೇಳುತ್ತಿರುವುದು ಅಷ್ಟು ಸಮರ್ಪಕವಾಗಿದ್ದಂತೆ ಕಾಣುತ್ತಿಲ್ಲ. ಸರ್ಕಾರದವರು ಈ ವಿಚಾರದ ಕಡೆಗೆ ಸ್ವಲ್ಪ ಗಮನ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ನಾನೀಗ ಈ ರೈಲ್ವೆ ಬಗ್ಗೆ ಎರಡು ಮಾತನಾಡಬೇಕೆಂಬ ಆಸೆಯುಂಟಾಗಿದೆ. ಈ ದಿವಸ ಗುಂತಕಲ್ ಮತ್ತು ಹೊಸಪೇಟೆಗಳ ಮಧ್ಯೆ ಇರತಕ್ಕ ರೈಲ್ವೆ ಲೈನನ್ನು ಬ್ರಾಡ್‌ಗೇಜಿಗೆ ಕನ್‌ವರ್ಟ್ ಮಾಡುತ್ತಿದ್ದಾರೆ. ಆದರೆ ಅದರ ಉದ್ದೇಶವೇನು? ಇಂಡಿಯಾ ದೇಶದಲ್ಲೇ ಸುಪ್ರಸಿದ್ಧವಾದ ಚಿತ್ರದುರ್ಗ ಬಳ್ಳಾರಿ ಜಿಲ್ಲೆಗಳಲ್ಲಿ ದೊರೆಯುತಕ್ಕ ಐರನ್-ಓರನ್ನು ಮದ್ರಾಸಿನ ಬಂದರಿಗೆ ರವಾನೆ ಮಾಡಬೇಕೆಂಬುದೇ ಆ ಉದ್ದೇಶ. ಹೊಸಪೇಟೆಯಿಂದ ಮದ್ರಾಸಿಗೆ ಇರತಕ್ಕ ದೂರ 380 ಮೈಲಿಗಳು. ಆದರೆ ಈ ಐರನ್ ಓರನ್ನು ಕಾರ್ವಾರ ಬಂದರಕ್ಕೆ ರವಾನೆ ಮಾಡಿದರೆ ಇದರ ಫಾಸಲೆ ಸುಮಾರು 200 ಮೈಲಿಗಳ ಒಳಗಾಗುತ್ತೆ. ನಮ್ಮ ದೇಶದ ಅದರು, ಅಲ್ಲಿ ಕೂಲಿ ಕೆಲಸ ಮಾಡತಕ್ಕವರು ನಮ್ಮವರು. ನಮ್ಮ ಅದರನ್ನು ನಮ್ಮವರಿಗೆ ಕೊಡದೆ ಈ ದಿವಸ 380 ಮೈಲಿ ಹೊತ್ತುಕೊಂಡು ಹೋಗಿ ಮದರಾಸಿನವರಿಗೆ ಕೊಡುತ್ತಿದ್ದಾರೆ. ಇದರಲ್ಲಿ ಯಾವುದು ಒಳ್ಳೆಯದು? ನಮ್ಮ ರಾಜ್ಯದ ರಸ್ತೆಯನ್ನೇ ಇನ್ನೂ ಒಂದುನೂರು ಮೈಲಿ ಡೆವಲಪ್ ಮಾಡಿ ನಮ್ಮ ರಾಜ್ಯದಲ್ಲಿರತಕ್ಕ ಬಂದರಿಗೇನೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕಾದ್ದು ಅತ್ಯಗತ್ಯ ಎಂಬುದನ್ನು ಸರ್ಕಾರದವರು ಗಮನಿಸಬೇಕಾದಂಥ ವಿಷಯ ಇದು.

ಸ್ವಾಮಿ, ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಬೇರೆಯವರು ಯಾರಾದರು ಜಗಳಮಾಡುವ ಮಟ್ಟದಲ್ಲಿ ಹಿಂದೂಸ್ಥಾನ ಸರ್ಕಾರದಲ್ಲಿ ಸಣ್ಣ ದರ್ಜೆಯಲ್ಲಿ ಜಗಳಮಾಡಿ ನಿಮ್ಮ ದೊಡ್ಡ ಸ್ತಿಕೆಯನ್ನು ಕಳೆದುಕೊಳ್ಳಬೇಡಿ. Dignified ಆಗಿ ಜಗಳಮಾಡಿ. ನಿಮ್ಮಲ್ಲಿ ಇರತಕ್ಕ ವಾಸ್ತವಾಂಶಗಳನ್ನು ಅವರ ಎದುರಿನಲ್ಲಿ ಇಡಿ. ಅವರು ತಪ್ಪು ಮಾಡಿದರೆ ನೀವು ಮಾಡಿದ್ದು ತಪ್ಪು ಎಂದು ದಿಟ್ಟತನದಿಂದ ತಿಳಿಸಿ. ಇದು ಆಗಲೇ ಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳಿಯೇ ತೀರಬೇಕು. ಒಂದು ವೇಳೆ ನಿಮ್ಮ ಒತ್ತಾಯವನ್ನು ಅವರು ಮನ್ನಿಸದೆ ಹೋದರೆ land acquire ಮಾಡಿಕೊಳ್ಳುವುದಕ್ಕೆ ನೀವು ಅನುಮತಿಯನ್ನು ಕೊಡಬಾರದು. “ಆಗುವುದಿಲ್ಲ” ಎಂದು ಬರೆಯಬಾರದು ಎನ್ನುವುದಾದರೆ, ನಿಮ್ಮ ನಿಲುವನ್ನು ನ್ಯಾಯವಾದ ರೀತಿಯಲ್ಲಿ, ದಿಟ್ಟತನದಿಂದ ಅವರಿಗೆ ಹೇಳಿನೋಡಿ. ಅವರು ನಿಮ್ಮ ಸಲಹೆಗಳಿಗೆ ಮಾನ್ಯತೆಯನ್ನು ಕೊಡದೆ ಹೋದರೆ ಆಗ “ನೀವು ಇದಕ್ಕೆ ಒಪ್ಪದೆ ಹೋದರೆ ನಾನೂ ಇದಕ್ಕೆ ಒಪ್ಪುವುದಕ್ಕೆ ಸ್ವಲ್ಪ ಕಷ್ಟ ವಾಗುತ್ತದೆ” ಎಂದು ಹೇಳಿನೋಡೋಣ, ಆಮೇಲೆ ಏನಾಗುತ್ತದೆ ಎಂದು.

ಸ್ವಾಮಿ, ಮೊದಲಿನಿಂದಲೂ ಹೇಳುತ್ತಿದ್ದರು ಹರಿಹರ ಕೊಟ್ಟೂರು ರೈಲ್ವೆ ಮಾರ್ಗವನ್ನು ಹಾಸನ-ಮಂಗಳೂರು ಮತ್ತು ಸೇಲಂ-ಬೆಂಗಳೂರು ರೆಲ್ವೆ ಹಾಕುವ ಕಾಲಕ್ಕೆ ತೆಗೆದುಕೊಳ್ಳುತ್ತೇವೆಂದು. ಈ ಮಾರ್ಗ ಕೇವಲ 43 ಮೈಲಿ ಇದೆ. ಹಿಂದೆ ತೀರ್ಮಾನ ಮಾಡಿದ್ದುದನ್ನು ಈಗ ಯಾವ ಕಾರಣದಿಂದ ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಯೋಚನೆ ಮಾಡಿ, ಇದನ್ನು ತಮ್ಮಲ್ಲಿ ವಿನಂತಿಮಾಡಿ ಕೊಳ್ಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳಿಗೆ ಎಲ್ಲ ಶಕ್ತಿ ಇದೆ. ಅವರಿಗೆ ಎಲ್ಲರ ಪರಿಚಯವೂ ಇದೆ, ಎಲ್ಲರನ್ನೂ ಚೆನ್ನಾಗಿ ಅರಿತಿದ್ದಾರೆ. ಸ್ವಲ್ಪ ದಿವಸ ಮೈಸೂರು ಸಂಸ್ಥಾ

ನದ ಕಾರ್ಯಭಾರವನ್ನು ಬೇರೆಯವರಿಗೆ ವಹಿಸಿ ತಿಂಗಳಲ್ಲಿ ಹದಿನೈದು ದಿವಸವಾದರೂ ಡೆಲ್ಲಿಯಲ್ಲಿರಬೇಕೆಂದು ನನ್ನ ವಿನಂತಿ. ಅಲ್ಲಿದ್ದು ಹೆಚ್ಚಾಗಿ ಕೆಲಸಮಾಡಿ, ನ್ಯಾಯಬದ್ಧವಾಗಿ. ಕಾನೂನು ಬದ್ಧವಾಗಿ ನಮಗೆ ಏನು ಹಿಸ್ಸೆ ಬರಬೇಕೋ ಅದನ್ನು ಕೊಟ್ಟರೆ ಸಾಕು. ನಮಗೆ ಅದು ಬೇಕು, ಇದು ಬೇಕು, ಎಂದು ಹೆಚ್ಚಿಗೆ ಕೇಳುವುದು ಬೇಡ. ಇದಕ್ಕಾದರೂ ಹೆಚ್ಚು ಗಮನ ಕೊಡಬೇಕೆಂದ ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಸ್ವಾಮಿ, ಇಂಜಿನಿಯರಿಂಗ್ ಇಲಾಖೆಲ್ಲಿ ಕೆಲವು ಕಾರಣಗಳಿಗಾಗಿ ಕೆಲವುಕಡೆ Circles, Divisions ಪ್ರಾರಂಭಮಾಡುತ್ತಾರೆ. ಅಲ್ಲಿಯ ಕೆಲಸ ಮುಗಿದು ಹೋದಮೇಲೂ, ಕೆಲಸ ಕಡಮೆ ಇದ್ದಾಗಲೂ ಅದನ್ನು ಮುಚ್ಚಬೇಕು ಎಂದು ಹೇಳಿದಾಗ ಅವರಿಗೆ ಸ್ವಲ್ಪ prestige question ಬಂದ ಹಾಗೆ ಆಗುತ್ತದೆ. ಅದಕ್ಕೆ ಅವರು ತಯಾರಾಗಿ ಕೆಲಸ ವಿದ್ದಾಗ ಇರಲಿ, ಕೆಲಸವಿಲ್ಲದಾಗಿ ಅದನ್ನುಮುಚ್ಚಿ ಆ ಹಣವನ್ನು ಉಳಿತಾಯಮಾಡಬೇಕು. ಪುನಃ ಆವಶ್ಯಕತೆ ಕಂಡುಬಂದರೆ ಪ್ರಾರಂಭಮಾಡಬಹುದು, ಇದರಲ್ಲಿ ಹೆಚ್ಚಿಗೆ ಹಣ ವಿನಿಯೋಗವಾಗಿದೆ ಎಂದು ನನಗನ್ನಿಸುತ್ತದೆ.

ಸ್ವಾಮಿ, ಎಲ್ಲ ಇಲಾಖೆಯವರೂ ಆದಷ್ಟು ಕಡಮೆ ಖರ್ಚುಮಾಡಿ ನೀರಾವರಿಯನ್ನು ಅಭಿವೃದ್ಧಿ ಮಾಡಬೇಕು. ದೇಶದಲ್ಲಿ ನೀರಾವರಿಯನ್ನು ಅಭಿವೃದ್ಧಿ ಮಾಡುವುದಕ್ಕೆ ಬಹಳ ಅವಕಾಶವಿದೆ. ಕೆಲವರು ಪ್ರಶ್ನೆಮಾಡುತ್ತಾರೆ ಸ್ವಾಮಿ, ಆಂಧ್ರದಲ್ಲಿ ಶೇಕಡ 26 ಮದ್ರಾಸಿನಲ್ಲಿ ಶೇಕಡ 46 ಇರುವಾಗ ನಮ್ಮ ಮೈಸೂರಿನಲ್ಲಿ ಶೇಕಡ 7-8 ಮಾತ್ರ ನೀರಾವರಿ ಪ್ರದೇಶ ಇರಲುಕಾರಣವೇನು? ಅದನ್ನು ಯೋಚಿಸಬೇಕು. ನಿಮಗೆಲ್ಲ, ಮಂತ್ರಿಮಂಡಲದವರಿಗೂ ಶೇಕಡ 50 ನೀರಾವರಿ ಮಾಡಬೇಕೆಂದು ಆಸೆಇದೆ. ಆದರೆ ನಿಮ್ಮ ಕಷ್ಟ ಏನು ಎಂಬುದು ಗೊತ್ತು-ಜನಗಳಿಗೆ ಬಹಳ ಹೇಳಿರುತ್ತೀರಿ ಆದರೆ ಆರೀತಿ ಮಾಡದೆ ಹೋದರೆ ನಿಮ್ಮಗತಿಏನು, ಜನ ಏನಂದಾರು ಎನ್ನುವ ಶಂಕೆಇದೆ. ಇಂಜಿನಿಯರಿಂಗ್ ಇಲಾಖೆಯವರು ಏನು ಹೇಳುತ್ತಾರೆ? ಅದೇ ಸಿಬ್ಬಂದಿ ಇಲ್ಲಿದೆ, ಅದೇ ಕೆಲಸಗಾರರು ಇಲ್ಲಿದ್ದಾರೆ. ಆದರೆ ಅವರು ಇಷ್ಟು ಜಾಗ್ರತೆಯಾಗಿ ನೀರಾವರಿಯಲ್ಲಿ ಮುಂದೆ ಹೋಗಿರುವುದಕ್ಕೂ ನಾವು ಹಿಂದೆ ಬಿದ್ದಿರುವುದಕ್ಕೆ ಏನು ಕಾರಣ? ಅವರ ಮನಸ್ಸಿನಲ್ಲಿ ಅವರೇ ಯೋಚನೆಮಾಡಿಕೊಳ್ಳಲಿ. ಹಿಂದೆ ಬೀಳುವುದಕ್ಕೆ ಏನು ಕಾರಣ ವಾಗಿದೆ ಎಂದರೆ—ಈಗಲಾದರೂ ಅದು ಆಗದೆ ಇರಲಿ—ಮಂತ್ರಿಮಂಡಲದ ಬದಲಾವಣೆಗಳು ಸ್ವಲ್ಪ ತಲೆ ಕೆಡಿಸುತ್ತವೆ ಎಂದು ಕಾಣಿಸುತ್ತದೆ. ಇದನ್ನು ಮಾಡಿದರೆ, ಅವರು ಬಂದರೆ ಏನು ಹೇಳುತ್ತಾರೆಯೋ, ಇವರು ಏನು ಹೇಳುತ್ತಾರೆಯೋ ಎಂದು ಕೆಲಸ ಮಾಡದಿರುವುದು ಇಂಥ ಕಾರಣಗಳಿಂದ ಆಗಿರಬಹುದು. ಬೇರೆ ರಾಜ್ಯದವರು ಹೇಗೆ ಶೇಕಡ 46 ನೀರಾವರಿ ಮಾಡಿದ್ದಾರೆಯೋ ಹಾಗೆಯೇ ನಾವೂ ಶೇಕಡ 50ರಷ್ಟು ಮಾಡಬೇಕೆಂದು ಮುಂದೆ ಹೋಗತಕ್ಕ ಉತ್ಸಾಹದಿಂದ ಕೆಲಸ ಮಾಡಬೇಕು.

ನಮ್ಮ ತಾಲ್ಲೂಕಿಗೆ ಶ್ರೀಮಾನ್ ಆಲೂರು ಹನುಮಂತಪ್ಪನವರು ಮೊನ್ನೆ ಪ್ರವಾಸಬಂದಿದ್ದರು.—ನಾನು ಈ ಸಂದರ್ಭದಲ್ಲಿ ಅದನ್ನು ಹೇಳಬೇಕೋ ಬಿಡಬೇಕೋ ಗೊತ್ತಿಲ್ಲ.—ಬಂದವರು ಅನಿರೀಕ್ಷಿತವಾಗಿ, tour programme ಇಲ್ಲದೆ ಇರುವ ಒಂದು ಜಾಗಕ್ಕೆಹೋಗಿ ಅಲ್ಲಿಗೆ ಎಲ್ಲ ಅಧಿಕಾರಿಗಳನ್ನು ಕರೆಸಿದರು. ನೀರಾವರಿಯನ್ನು ಅಭಿವೃದ್ಧಿ ಮಾಡುವುದಕ್ಕೆ ಏನು ಮಾಡಬೇಕು, ಏನು ಕೆಲಸಮಾಬೇಕು, ಯಾವ ರೀತಿ ಮಡುವುದರಿಂದ ಒಳ್ಳೆಯದಾಗುತ್ತದೆ ಎಂದು ಅರಿತು ಅವರಿಗೆಲ್ಲ instructions ಕೊಟ್ಟು ಬಂದರು. ಅದು ಜನಗಳಿಗೆ ಎಷ್ಟು ಸಂತೋಷ ಪಡಿಸಿತು ಎಂದರೆ ಕೆಲಸವಾಗುವುದು ಒಂದು ಕಡೆಇದ್ದರೂ, ಮಾಡತಕ್ಕ ಉತ್ಸಾಹ ನಿಜವಾಗಿಯೂ ಜನಗಳಿಗೆ ಸಂತೋಷವನ್ನುಂಟುಮಾಡಿತು. ಅದಷ್ಟು ಮಟ್ಟಿಗೆ ಎಲ್ಲ ಮಂತ್ರಿಗಳೂ ಪ್ರವಾಸ ಹೋಗತಕ್ಕ ಸಂದರ್ಭದಲ್ಲಿ ಸುಮ್ಮನೆ ಪ್ರವಾಸ ಹೋಗುವುದು ಒಳ್ಳೆಯದಲ್ಲ, ಪ್ರವಾಸ ಹೋದಾಗ ಜನಗಳ ಕಷ್ಟಸುಖಗಳೇನು, ಇಲಾಖೆಗಳಲ್ಲಿ ಏನು ಅಡಚಣೆಗಳಿವೆ, ಅವುಗಳನ್ನು ನಿವಾರಣೆ ಮಾಡುವುದಕ್ಕೆ ಏನು ಮಾಡಬೇಕು ಎಂದು ಅದಷ್ಟು ಮಟ್ಟಿಗೂ ಆಚರಣೆಗೆ ತರುವುದು ಒಳ್ಳೆಯದು,

ಶ್ರೀಮಾನ್ ದೇವರಾಜ ಅರಸ್ ಅವರು ಅಜ್ಜಂಪುರಕ್ಕೆ ಹೋಗುವಾಗ ದೊಡ್ಡ ಕೆರೆಯನ್ನು ನೋಡಿದರು. ಇದು ಯಾವಕೆರೆ ಎಂದು ಕೇಳಿದರು. ಕೆರೆಸಂತೆ ಕೆರೆ ಎಂದು ಹೇಳಿದಾಗ ಇದು ಎಷ್ಟು ದೊಡ್ಡ ಕೆರೆ, ಸಮುದ್ರದ ಹಾಗೆಕಾಣುತ್ತೆ. ಇಷ್ಟು ದೊಡ್ಡ ಕೆರೆ ಕೆಳಗೆ ಎಷ್ಟು ಎಕರೆ ಜಮೀನಿಗೆ ನೀರಾವರಿ ಯಾಗುತ್ತಿದೆ ಎಂದು ಕೇಳಿದರು. ನನಗೆ ತಿಳಿದ ಮಟ್ಟಿಗೆ 900 ಎಕರೆ ಅಚ್ಚುಕಟ್ಟು ಎಂದು ಹೇಳುತ್ತಾರೆ. ಅದರೆ ಈಗ ವ್ಯವಸಾಯವಾಗುತ್ತಿರುವುದು 200-300 ಎಕರೆ ಮಾತ್ರ ಎಂದು ತಿಳಿಸಿದಾಗ ಅವರು ನೇರವಾಗಿ ಅಸಿಸ್ಟೆಂಟ್ ಇಂಜಿನಿಯರ್ ಅವರ ಆಫೀಸಿಗೆ ಹೋದರು. ಅಲ್ಲಿ ಸಂಬಂಧಪಟ್ಟ ಕಡತವನ್ನು ತರಿಸಿನೋಡಿ, ಅವರೊಡನೆ ಮಾತನಾಡಿ ಮುಂದಕ್ಕೆ ಪ್ರಯಾಣ ಮಾಡಿದರು. ಮಾನ್ಯ ಮಂತ್ರಿಗಳು ಬಂದು ಹೋದಮೇಲೆ ಈಗ investigate ಮಾಡುತ್ತಿದ್ದಾರೆ. ಅಲ್ಲಿರುವ ಅಧಿಕಾರಿಗಳೇ ಹೇಳುವ ಪ್ರಕಾರ ಈಗ ಇರುವ 900 ಎಕರೆ ಯಲ್ಲದೆ ಸೂಮಾರು ಒಂದು ಸಾವಿರ ಎಕರೆಗೆ ನೀರು ಕೊಡಬಹುದು. ನಮ್ಮ ಜಿಲ್ಲೆಯಲ್ಲಿ ಪ್ರವಾಸ ಮಾಡಿದ ಅಧಿಕಾರಿಗಳೂ

(ಶ್ರೀ ಜಿ. ಮಾರುಳಪ್ಪ)

ಎಲ್ಲರೂಇದೇದಾರಿಯಲ್ಲಿ ಹೋಗಬೇಕಾಗಿದೆ, ಪ್ರತಿಯೊಬ್ಬರೂ ನೋಡುತ್ತಾರೆ. ಆದರೆ ಅವರಿಗೆ ಇಷ್ಟು ಬುದ್ಧಿ ಏಕೆ ಓಡಲಿಲ್ಲ ? ಇಷ್ಟು ನೀರು ಸದುಪಯೋಗವಾಗುವುದರ ಕಡೆ ಅವರ ಗಮನ ಏಕೆ ಹರಿಯಲಿಲ್ಲ ? ಇಂಥ ವಿಚಾರಗಳಿಗೆ ಸರ್ಕಾರ ಗಮನ ಕೊಡಬೇಕೆಂದು ಸಲಹೆಮಾಡುತ್ತೇನೆ.

ಸ್ವಾಮಿ, ಇನ್ನೊಂದು ವಿಷಯ. ಒಳ್ಳೆಯ ಕೆಲಸ ಮಾಡಿರುವುದನ್ನು ಹೇಳಲೇಬೇಕು. ಇಂಜಿನಿಯರಿಂಗ್ ಇಲಾಖೆಯ ವಿಷಯವನ್ನು ಇಲ್ಲಿಗೇ ಬಿಟ್ಟು ಎಲೆಕ್ಟ್ರಿಕಲ್ ವಿಷಯ ಮಾತನಾಡಲು ಆಸೆಯಾಗಿದೆ. ಹೊಸದಾಗಿ ಎರಡು oil turbines ತರಿಸುತ್ತಾರಂತೆ. ಬಹಳ ಒಳ್ಳೆಯದು. ಈ ಕಾಲದಲ್ಲಿ 20 ಸಾವಿರ K.W. power ಬರುತ್ತದೆಂದು ಹೇಳುತ್ತಾರೆ. ವಿದ್ಯುಚ್ಛಕ್ತಿಗೆ ತೊಂದರೆ ಇರತಕ್ಕ ಕಾಲದಲ್ಲಿ ಕಷ್ಟಪಟ್ಟು ಯಶಸ್ವಿಯಾಗಿ ಅದನ್ನು ಪಡೆಯತಕ್ಕದ್ದು ಬಹಳ ಸಂತೋಷ, ಬಹಳ ಕಷ್ಟದ ಕೆಲಸ. ಇದಕ್ಕೋಸ್ಕರ ನಿಮ್ಮನ್ನು ಅಭಿನಂದಿಸುತ್ತೇನೆ. ಇದರಲ್ಲಿ ನನಗೆ ಬಂದು ಕಷ್ಟವಾಗಿದೆ. ಇದನ್ನು ಎಲ್ಲಿ ಉಪಯೋಗಿಸುತ್ತೀರಿ ? ಪ್ರಾಯಶಃ ಬೆಂಗಳೂರಿನಲ್ಲಿ ಉಪಯೋಗಿಸುತ್ತೀರೆಂದು ಕಾಣುತ್ತದೆ. ಇಲ್ಲಿ ಕೈಗಾರಿಕೆಗಳಿವೆ, ಅದಕ್ಕೆ ಅಪಾಯವಾಗಬಾರದೆನ್ನುವ ದೃಷ್ಟಿಯಿಂದ ಬೆಂಗಳೂರಿನಲ್ಲಿ ಈಟರ್ಬೈನ್‌ಗಳನ್ನು ಇಟ್ಟುಕೊಳ್ಳಬೇಕಾದ್ದು ಸರಿ, ಅಲ್ಲಿ ಅದನ್ನು ಉಪಯೋಗಿಸಿದಾಗ ಅಲ್ಲಿಂದ release ಆಗುವ ವಿದ್ಯುತ್ತನ್ನು ಹಳ್ಳಿಗಳಕಡೆಗೆ ಕೊಡಬೇಕೆಂದು ತಮ್ಮನ್ನು ಬಹಳ ವಿನಯದಿಂದ ಕೇಳಿಕೊಳ್ಳುತ್ತೇನೆ.

ಇದಕ್ಕಿಂತ ಬಹಳ ಮುಖ್ಯವಾದ ಕೆಲಸ ಇನ್ನೊಂದು ಮಾಡಿದ್ದಾರೆ. ಚಿತ್ರದುರ್ಗದಿಂದ ರಾಯಚೂರಿಗೆ ಒಂದು ರಾಷ್ಟ್ರೀಯ ಹೆದ್ದಾರಿಯನ್ನು ಏಳುಕೋಟಿ ರೂಪಾಯಿಗಳ ವೆಚ್ಚದಲ್ಲಿ ಮಾಡಲು ಸೇರಿಸಿದ್ದಾರೆ. ಇದೂ ಬಹಳ ಒಳ್ಳೆಯ ಕೆಲಸ. ಇದು ಹೆಚ್ಚಾಗಿ underveloped areaದಲ್ಲಿ ಹೋಗುವುದರಿಂದ ಆ ಭಾಗದ ಜನರಿಗೆ ಬಹಳ ಸಹಾಯವಾಗುತ್ತದೆ. ಅದಕ್ಕೆ ಏಳು ಕೋಟಿ ರೂಪಾಯಿ ಖರ್ಚು ಮಾಡುವಾಗ ಆ ಭಾಗದ ಜನತೆಗೆ ಕೂಲಿ ಕೆಲಸ ಸಿಕ್ಕಿ ಸಹಾಯವಾಗುತ್ತದೆ, ಇದನ್ನು ಬಹಳ ಯಶಸ್ವಿಯಾಗಿ ತಾವು ನಿರ್ವಹಿಸಿದುದಕ್ಕೋಸ್ಕರವಾಗಿ ನಾನು ತಮ್ಮನ್ನು ಅಭಿನಂದಿಸುತ್ತೇನೆ.

Mr. SPEAKER.—The House will now rise and meet half an hour late,

The House adjourned for recess at Three of the Clock and re-assembled at Thirty Minutes past Three of the Clock.

ಶ್ರೀ ಜಿ. ಮರುಳಪ್ಪ.—ಮಾನ್ಯ ಅಧ್ಯಕ್ಷರೇ, ಸ್ವಲ್ಪಕಾಲ ಹೆಚ್ಚಿಗೆ ತೆಗೆದುಕೊಳ್ಳಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ಅಭಿನಂದಿಸುತ್ತೇನೆ.

ನದಿಗಳಮೇಲೆ ಹೊಸದಾಗಿ ಅಣೆಕಟ್ಟು ವಗೈರೆಗಳನ್ನು ಕಟ್ಟುವುದರಿಂದ ಜನಕ್ಕೆ ಸೌಕರ್ಯವಾಗದೇ ಹೋದರೆ ಇಂತಹ ಕೆಲಸಗಳನ್ನು ಮಾಡುವುದರಿಂದ ಏನೂ ಉಪಯೋಗವಾಗುವುದಿಲ್ಲ. ಆದ್ದರಿಂದ ಸರಿಯಾಗಿ ಜನ ನೀರನ್ನು ಉಪಯೋಗಿಸಿಕೊಳ್ಳುವ ಪ್ರದೇಶಗಳಿಗೆ ಹೆಚ್ಚಿನ ಅನುಕೂಲ ಮಾಡಿಕೊಡಬೇಕು. ಎಲ್ಲಿ Non-Developmental ಏರಿಯಾ ಇದೆಯೋ ಅದನ್ನು ನೋಡಿಕೊಂಡು ಅಲ್ಲಿಯ ಜನರ ಕಷ್ಟಸುಖಗಳು ಹೇಗಿವೆ, ಎನ್ನುವುದನ್ನು ತಿಳಿದುಕೊಂಡು ಸರಕಾರ ಅನುಕೂಲಗಳನ್ನು ಕಲ್ಪಿಸಿಕೊಡಬೇಕು. ಸೆಂಟ್ರಲ್ ಗವರ್ನಮೆಂಟಿನಲ್ಲಿರುವ ಎಂ.ಪಿ.ಗಳಿಗೆ ಭಾರತದೇಶದಾದ್ಯಂತ ಸುತ್ತಿಕೊಂಡು ಬರಲು ಪಾಸುಗಳನ್ನು ಕೊಡುತ್ತಿದ್ದಾರೆ. ಅವರು ಒಂದಲ್ಲ ಒಂದು ಪ್ರಾಂತಕ್ಕೆ ಹೋಗಿ ಅಲ್ಲಿನ ಸ್ಥಿತಿಗಳನ್ನು ತಿಳಿದುಕೊಳ್ಳಲು ಅವಕಾಶ ಮತ್ತು ಅನುಕೂಲವಿದೆ. ಆ ರೀತಿ ನಮ್ಮ ಪ್ರತಿನಿಧಿಗಳು ಕೂಡ ಊರನ್ನು ಸುತ್ತಿ ಚೆನ್ನಾಗಿ ತಿಳಿದುಕೊಂಡು ವ್ಯವಹಾರ ಮಾಡದೇ ಹೋದರೆ ಕಷ್ಟ. ಇಂತಹುದಕ್ಕೆ ಸರಕಾರ ಅವಕಾಶ ಕಲ್ಪಿಸಿಕೊಡುತ್ತಾರೆ ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಜೆ. ಲಿಂಗೇಗೌಡ (ಚನ್ನಪಟ್ಟಣ).—ಮಾನ್ಯ ಸಭಾಪತಿಗಳೇ, ಈ ದಿವಸ ಸರಕಾರವು ನಮ್ಮ ಮುಂದಿಟ್ಟಿರುವ ಬೇಡಿಕೆಗಳನ್ನು ಸಮರ್ಥಿಸುತ್ತ ನಾನು ಕೆಲವು ವಿಷಯಗಳನ್ನು ಮಾತನಾಡಬೇಕೆಂದು ಇಚ್ಛೆಪಟ್ಟಿದ್ದೇನೆ.

ನಮ್ಮ ಸರಕಾರದ ಮುಂದೆ ಈಗ ಭಾವಿ ನೀರಾವರಿ ಯೋಜನೆಗಳು ಮತ್ತು ಸಣ್ಣ ನೀರಾವರಿ ಯೋಜನೆಗಳು ಬಹಳ ಪ್ರಾಮುಖ್ಯವಾದವುಗಳಾಗಿವೆ. ಕೃಷ್ಣ ಗೋದಾವರಿ ನೀರಿನ ಹಂಚಿಕೆ ಸಮಸ್ಯೆ, ಮತ್ತು ಕಾವೇರಿ ನದಿಯ ನೀರಿನಿಂದ ಪ್ರಯೋಜನ ಪಡೆದುಕೊಳ್ಳುವ ಯೋಜನೆಗಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ ನಮ್ಮ ನಾಯಕರಲ್ಲಿ ನಾವು ಪೂರ್ಣ ನಂಬಿಕೆ ಇಟ್ಟರೆ ಅವರು ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಅವುಗಳನ್ನೆಲ್ಲಾ ತೆಗೆದುಕೊಂಡು ನಮ್ಮ ಮೈಸೂರು ದೇಶದ ಪ್ರಗತಿ ಮತ್ತು ಹಿತಕ್ಕೆ ಬೇಕಾದುದೆಲ್ಲವನ್ನೂ ಮಾಡಲು ಪ್ರಯತ್ನಿಸುತ್ತಾರೆಂದು ನಾನು ನಂಬಿಕೊಂಡಿದ್ದೇನೆ. ಈ ವಿಷಯದಲ್ಲಿ ಈಗ ನಾನು ಹೆಚ್ಚಿಗೆ ಏನನ್ನೂ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ.

ನಮ್ಮ ದೇಶದ ಜನತೆ ಸುಖದಿಂದ ಇರಬೇಕಾಗಿದ್ದರೆ, ನೀರಾವರಿ ಕಾಮಗಾರಿಗಳನ್ನು ತ್ವರಿತದಿಂದ ಲೋಕೋಪಯೋಗಿ ಇಲಾಖೆಯವರು ಕೈಗೊಳ್ಳಬೇಕಾದುದು ಬಹಳ ಅವಕ್ಯಕವಾಗಿದೆ. ಈ ಸಂದರ್ಭದಲ್ಲಿ ಸರಕಾರದವರು ಎಷ್ಟು ಶೀಘ್ರತೆಯಿಂದ ಈ ಕೆಲಸ ಕಾರ್ಯಗಳನ್ನು ಮಾಡಿಸಬೇಕಾಗಿತ್ತೋ ಅಷ್ಟು ಶೀಘ್ರತೆಯಿಂದ ಕೆಲಸಕಾರ್ಯಗಳನ್ನೂ ಕೈಗೊಂಡು ಪೂರೈಸುವುದಕ್ಕೆ ಸಾಧ್ಯವಾಗಿಲ್ಲ. ಇದಕ್ಕೆ ಮುಖ್ಯ ಕಾರಣಹಣದ ಅಭಾವ ಅಷ್ಟೇ ಅಲ್ಲ. ಈ ಕೆಲಸಗಳನ್ನು ಕೈಗೊಂಡು ಆಗ ಮಾಡುವುದಕ್ಕೆ ತಕ್ಕ ಸಿಬ್ಬಂದಿಯನ್ನು ಕೂಡ ಸರಿಯಾಗಿ ಒದಗಿಸುತ್ತ ಇಲ್ಲ ಎಂದು ಅನೇಕರ ಅಭಿಪ್ರಾಯವಾಗಿದೆ. ಅನೇಕ ತಜ್ಞರು ಕೂಡ ಈ ವಿಷಯಗಳನ್ನು ನಮ್ಮ ಗಮನಕ್ಕೆ ತರುತ್ತಿದ್ದಾರೆ. ಬಹಳ ಯೋಜನೆಗಳ ಗುರಿಯನ್ನಿಟ್ಟುಕೊಂಡು ಸಾಕಾಗುವಷ್ಟು ಸಿಬ್ಬಂದಿ ವರ್ಗದವರನ್ನು ಒದಗಿಸದಿದ್ದರೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಯುದ್ಧದಲ್ಲಿ ಯಶಸ್ಸನ್ನು ಸಾಧಿಸಬೇಕಾದರೆ ಎಷ್ಟುಮಟ್ಟಿಗೆ ಹೆಚ್ಚಿಗೆ ನಾವು ಶಿಬ್ಬಂದಿಯನ್ನು ಒದಗಿಸಿಕೊಳ್ಳುವುದು ಪ್ರಾಮುಖ್ಯವೋ ಅಷ್ಟೇ ಮುಖ್ಯವಾಗಿ ಲೋಕೋಪಯೋಗಿ ಇಲಾಖೆಯಸಿಬ್ಬಂದಿಯನ್ನು ಸಾಕಷ್ಟು ನೇಮಕ ಮಾಡಿಕೊಂಡು ನೀರಾವರಿ ಯೋಜನೆಗಳನ್ನು ಮುಂದುವರಿಸುವುದು ಅವಶ್ಯಕ. ನಮ್ಮ ಕೆಲವು ಮಾನ್ಯ ಸದಸ್ಯರುಗಳು ಶಿಬ್ಬಂದಿಯ ಖರ್ಚನ್ನು ಕಡಿಮೆಮಾಡಿಕೊಳ್ಳುವುದು ಸಾಧ್ಯವಿದೆ ಎಂದು ಹೇಳಿದ್ದಾರೆ. ನನ್ನ ಅನುಭವದಿಂದ ನಾನು ಹೇಳುತ್ತಿದ್ದೇನೆ. ಸರಕಾರದವರು ಅನೇಕ ಕಾಮಗಾರಿಗಳನ್ನು ಮಾಡಿಸಬೇಕು. ಎನ್ನುವ ಯೋಚನೆ ಇಟ್ಟುಕೊಂಡಿದ್ದರೆ ತಕ್ಕ ಸಿಬ್ಬಂದಿ ವ್ಯವಸ್ಥೆಯನ್ನು ಮೊದಲು ಮಾಡದೆ ಯಾವ ಕಾಮಗಾರಿಗಳನ್ನು ಮಾಡಿಸುವುದಕ್ಕೆ ಸರಕಾರಕ್ಕೆ ಶಕ್ತಿಯಿಲ್ಲ ಎಂದು ಇಲ್ಲಿ ಹೇಳಿದರೆ ಅದು ತಪ್ಪಾಗಲಾರದು. ಒಂದು ತಾಲ್ಲೂಕಿನಲ್ಲಿ ಎಷ್ಟು ಯೋಜನೆಗಳನ್ನು ಕೈಗೊಳ್ಳಬೇಕೆಂದು ಸರಕಾರಕ್ಕೆ ಆಸೆಯಿದೆಯೋ ಆ ಯೋಜನೆಗಳಲ್ಲಿ ಹತ್ತನೇ—ಒಂದು ಭಾಗದಷ್ಟು ಕೂಡ ಮಾಡಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಉದಾಹರಣೆಯಾಗಿ ನಮ್ಮ ಚನ್ನಪಟ್ಟಣ ತಾಲ್ಲೂಕಿನಲ್ಲಿ ಕೆಲಸ ಕಾರ್ಯಗಳು ಯಾವ ರೀತಿ ನಡೆಯುತ್ತಿದೆ ಎನ್ನುವುದನ್ನು ಪರಿಶೀಲಿಸಿದರೆ, ಅನೇಕ ಕಾಮಗಾರಿ ಯೋಜನೆಗಳನ್ನು ತೆಗೆದುಕೊಳ್ಳುತ್ತೇವೆ ಎಂದು ನಮ್ಮ ಮಾನ್ಯ ಉಪಮಂತ್ರಿಗಳಾದ ಶ್ರೀಮಾನ್ ಆಲೂರು ಹನುಮಂತಪ್ಪನವರು ಹೇಳುತ್ತಲೇ ಇದ್ದಾರೆ. ಪ್ರೆಸ್‌ನಲ್ಲೂ ಸ್ಟೇಟುಮೆಂಟುಗಳು ಬರುಬರುತ್ತಲೇ ಅವೆ. ಆದರೆ ಕಾಮಗಾರಿಗಳನ್ನು ತೆಗೆದುಕೊಳ್ಳುವುದರಲ್ಲಿ ಬಹಳ ನಿಧಾನವಾಗಿದೆ. ಎಂದು ನಾನು ಅವರಿಗೆ ಹೇಳಿದರೆ ಅವರು ತಪ್ಪುತಿಳಿದುಕೊಳ್ಳುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ದೊಡ್ಡದೊಡ್ಡ ಅಧಿಕಾರಿಗಳೂ ಕೂಡ ಎಷ್ಟೇ ಪ್ರಯತ್ನ ಮತ್ತು ಆಸೆ ಪಟ್ಟರೂ ಕೂಡ ಸಾಧ್ಯವಾಗುತ್ತಿಲ್ಲ. ಉಪಮಂತ್ರಿಗಳು ಈ ವಿಚಾರದಲ್ಲಿ ಗಮನಕೊಡಬೇಕೆಂದು ನಾನು ಅವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ನಮ್ಮ ತಾಲ್ಲೂಕು ಬಹಳ ಹಿಂದುಳಿದಿರುವ ಪ್ರದೇಶ ಎಂದು ನಾನು ಪದೇಪದೇ ಸರಕಾರಕ್ಕೆ ತಿಳಿಸುತ್ತಲೇ ಇದ್ದೇನೆ. ನಮ್ಮ ತಾಲ್ಲೂಕಿನಲ್ಲಿ ಕಣ್ವ ಪ್ರಾಜೆಕ್ಟನ್ನು ಹಿಂದೆ ರಾಜರ ಆಶ್ರಯದಲ್ಲಿ ಇದ್ದ ಸರಕಾರದವರೇ ಕಟ್ಟಿದ್ದರೂ ಆ ಕಣ್ವ ಪ್ರಾಜೆಕ್ಟಿಗೆ ಸಾಕಷ್ಟು ನೀರಿನ ಆಶ್ರಯವಿಲ್ಲದಂಥ ಯೋಜನೆ ಮಾಡಿದ್ದಾರೆ. ಈ ಪ್ರಾಜೆಕ್ಟನ್ನು ಕಟ್ಟಬೇಕಾದರೆ ರಾಜಕೀಯ ಕಾರಣಗಳು ಕೂಡ ಇದ್ದವು. ಆ ವಿಷಯವನ್ನೆಲ್ಲಾ ಇಲ್ಲಿ ಪ್ರಸ್ತಾಪ ಮಾಡುವುದು ಈಗ ಅನವಶ್ಯಕ. ಆದರೆ ಇಷ್ಟೊಂದು ಹಣ ಖರ್ಚುಮಾಡಿ ಕಟ್ಟಿರತಕ್ಕ ಕಣ್ವ ಜಲಾಶಯಕ್ಕೆ ಸರಿಯಾದ ನೀರಿನ ವಸತಿಯನ್ನು ಕಲ್ಪಿಸುವುದು ಈಗಿನ ಪ್ರಜಾ ಸರಕಾರದವರ ಆದ್ಯಕರ್ತವ್ಯವೆಂದು ಇದನ್ನು ಪದೇಪದೇ ಈ ಮಾನ್ಯ ಸಭೆಯಲ್ಲಿ ಮತ್ತು ಇತರ ಕಡೆಗಳಲ್ಲಿ ಒತ್ತಾಯ ಮಾಡುತ್ತಲೇ ಇದ್ದೇನೆ. ನಮ್ಮ ಸರಕಾರದವರು ಇತ್ತೀಚೆಗೆ ಮಂಚನಬೆಲೆ ಹತ್ತಿರ ಅರ್ಕಾವತಿ ನದಿಗೆ ಅಣೆಕಟ್ಟು ಹಾಕುವುದೂ ಮತ್ತು ಅಲ್ಲಿಂದ ಚಾನಲ್ಲು

(ಶ್ರೀ ಬಿ. ಜೆ. ಲಿಂಗೇಗೌಡ)

ತೆಗೆದು ಕಣ್ವಾಜಲಾಶಯಕ್ಕೆ ನೀರನ್ನು ಒದಗಿಸುವ ಭರವಸೆ ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಸರ್ಕಾರವನ್ನು ವಂದಿಸುತ್ತೇನೆ.

ಮುಖ್ಯ ಮಂತ್ರಿಗಳು ಈ ಯೋಜನೆ ಕಾರ್ಯಗತವಾಗುವ ಹಾಗೆ ಶೀಘ್ರವಾಗಿ ಕ್ರಮ ತೆಗೆದುಕೊಳ್ಳುವ ಭರವಸೆ ಕೊಟ್ಟಿರುವುದು ನಮ್ಮ ತಾಲ್ಲೂಕಿನ ಜನತೆಗೇ ಆನಂದವನ್ನುಂಟು ಮಾಡಿದೆ. ಈ ಸಭೆಯಲ್ಲಿಯ unstarred Question and Answer 1st list ನಲ್ಲಿ 44ನೇ ಪ್ರಶ್ನೆಯಲ್ಲಿ ಕೇಳಲಾದ ಕಣ್ವಾ ಜಲಾಶಯದ ನೀರಿನ ಅವಶ್ಯಕತೆಯ ಬಗ್ಗೆ ಸರಕಾರ ಉತ್ತರ ಕೊಟ್ಟಿರುವುದರ ಬಗ್ಗೆ ಒಂದೆರಡು ಮಾತುಗಳನ್ನು ಪ್ರಸ್ತಾಪಮಾಡಬೇಕಾಗಿದೆ.

Sri G. V. GOWDA.—Sir, he is telling something from the answers got for the unstarred questions. The intention of the answers to unstarred question is : "not to elicit information within the House."

Mr. SPEAKER.—It is, during the Question Hour, but it can be also referred to during the course of the Debate.

ಶ್ರೀ ಬಿ. ಜೆ. ಲಿಂಗೇಗೌಡ.—ಈ ಪ್ರಶ್ನೆಗೆ ಸರಕಾರದವರು ಉತ್ತರ ಕೊಡುತ್ತಾ ಕಣ್ವಾ ಅಚ್ಚುಕಟ್ಟಿನಲ್ಲಿ ಎಷ್ಟು ಜಮೀನು ಸಾಗುವಳಿಯಾಗಲು ಯೋಜನೆ ಇತ್ತೋ ಅಷ್ಟು ಸಾಗುವಳಿಯಾಗಿದೆ ಮತ್ತು ಕಣ್ವಾ ಜಲಾಶಯಕ್ಕೆ ನೀರಿನ ವಸತಿ ಸಾಕಷ್ಟಿದೆ ಎಂಬ ಅರ್ಥ ಬರುವ ಹಾಗೆ ಉತ್ತರ ಕೊಟ್ಟಿದ್ದಾರೆ. ಆ ಉತ್ತರ ಸರಿಯಾಗಿ ಇದೆಯೇ ಎನ್ನುವರನ್ನು ಸರಕಾರ ಪರಿಶೀಲನೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಾನು ಈಗಾಗಲೇ ಹೇಳಿದ ಮಂಚನಬೆಲೆ ಯೋಜನೆ ಜೊತೆಗೆ ನಮ್ಮ ತಾಲ್ಲೂಕಿನ ಯೋಜನೆಗಳಲ್ಲಿ ಬಹಳ ಪ್ರಾಮುಖ್ಯವಾದವುಗಳು ಯಾವುವೆಂದರೆ:—1. ಶಿಂಷಾ ಅಣೆಕಟ್ಟು ತಗ್ಗಳ್ಳಿ ಹತ್ತಿ 2. ಕೀಲಾರ pick up ಯೋಜನೆಗಳ ಈ ಬಗ್ಗೆಯೂ ನಾನು ಪದೇ ಪದೇ ಹೇಳುತ್ತಲೆ ಇದ್ದೇನೆ. ಮತ್ತು 3. ಶಿಂಶಾನದಿಗೆ ಮಟ್ಟದೊಡ್ಡಿ ಹತ್ತಿರ ಅಡ್ಡಕಟ್ಟೆ ಕಟ್ಟಿದರೆ ಸುಮಾರು ಮೂರು ಸಾವಿರ ಎಕರೆ ಪ್ರದೇಶ ನೀರಾವರಿಯಾಗುತ್ತದೆ. ಅಲ್ಲಿ ಜಮೀನು ಮುಳುಗಡೆಯಾಗುವುದಿಲ್ಲ. ಚನ್ನಪಟ್ಟಣ ತಾಲ್ಲೂಕಿನ ಕೆಲವು ಭಾಗ ಮತ್ತು ಹಲಗೂರು ಹೋಬಳಿಯ ಜಮೀನು ವ್ಯವಸಾಯಕ್ಕೆ ಬರುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಈ ಯೋಜನೆಗಳನ್ನು ಕೈಗೊಳ್ಳುವ ಬಗ್ಗೆ ತಜ್ಞರು ಪರಿಶೀಲನೆ ಮಾಡಬೇಕೆಂದು ಸರಕಾರವನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಈಗ ರಸ್ತೆಗಳ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಆಡಬೇಕೆಂಬ ಆಶೆಯಿದೆ. ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಹಳ್ಳಿಗಳಿಗೆ ರಸ್ತೆ ಮಾಡಿದ್ದೀರಿ ಈಗ ಹಣದ ಅಭಾವದಿಂದ ರಸ್ತೆ ಕೆಲಸ ಮುಂದುವರಿಸಲು ಸಾಧ್ಯವಿಲ್ಲವೆಂದು ಹೇಳಿದ್ದೀರಿ. ನಮ್ಮ ದೇಶ ಕಷ್ಟದ ಪರಿಸ್ಥಿತಿಯಲ್ಲಿದೆ ಎನ್ನುವುದನ್ನು ಅರಿತುಕೊಂಡಿದ್ದೇವೆ. ಸರ್ಕಾರವನ್ನು ನಾನು ಪ್ರಾರ್ಥಿಸುವುದು ಇಷ್ಟೇ. ಹೇರಳವಾಗಿ ಹಣ ಖರ್ಚು ಮಾಡಿ ರಸ್ತೆಗಳ ರಚನೆ ಮಾಡಿರುವುದನ್ನು ಯೋಗ್ಯ ಸ್ಥಿತಿಗೆ ತರುವುದಕ್ಕೆ ಎಷ್ಟು ಹಣಬೇಕೋ ಅಷ್ಟನ್ನಾದರೂ ಒದಗಿಸಬೇಕೆಂದು ಒತ್ತಾಯವಾಗಿ ಪ್ರಾರ್ಥಿಸುತ್ತೇನೆ. ಅಲ್ಲದೆ ಸಣ್ಣ ಪುಟ್ಟ ಕಟ್ಟಡಗಳ ಕೆಲಸ ಕೂಡ ಕೈಬಿಡಕೂಡದು ಆಸ್ಪತ್ರೆಗಳ ಮತ್ತು ಸ್ಕೂಲ್ ಬಿಲ್ಡಿಂಗ್ ಕೆಲಸಗಳನ್ನು ಮಾಡಿಸಬೇಕೆಂದು ಪ್ರಾರ್ಥಿಸುತ್ತೇನೆ.

ಶೀಘ್ರವಾಗಿ ನೀರಾವರಿ ಕೆಲಸಗಳು ಕಾರ್ಯಗತವಾಗಬೇಕಾದರೆ ಮೆಷಿನರಿ ಉಪಯೋಗಿಸುವುದು ತುಂಬಾ ಸೂಕ್ತ. ಚನ್ನಪಟ್ಟಣ ತಾಲ್ಲೂಕಿನಲ್ಲಿ ನಮ್ಮ ಎಂಜಿನಿಯರುಗಳು ಮೆಷಿನರಿಯಿಂದ ಕೆಲಸಮಾಡಿಸುತ್ತಿದ್ದಾರೆ. ಒಂದು ಒಂದೂವರೆತಿಂಗಳಿನಲ್ಲಿ ಒಂದೊಂದು ಕೆರೆ ನಿರ್ಮಾಣ ಮಾಡಿದ್ದಾರೆ. ಇದರಿಂದ ಜನತೆ ಶೀಘ್ರವಾಗಿ ಪ್ರಯೋಜನ ಪಡೆದಿದ್ದಾರೆ. ಆದುದರಿಂದ ಸರಕಾರದವರು ಮೆಷಿನರಿ ಆದಷ್ಟು ಇಲಾಖೆಗೆ ಒದಗಿಸಿ ಕೆರೆಗಳ ಕೆಲಸಗಳನ್ನು ತ್ವರಿತದಿಂದ ಮಾಡಿಸಬೇಕು ಎಂದು ಅವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಸ್ವಾಮಿ. ಈ ಇಲಾಖೆಯಲ್ಲಿ ಲಂಚ ಸ್ವಲ್ಪಮಟ್ಟಿಗೆ ಇದೆ ಎಂದು ಜನರು ಹೇಳುತ್ತಾರೆ. ನಾನೂ ಅದನ್ನು ಒಪ್ಪಿಕೊಳ್ಳುತ್ತೇನೆ. ಬೇರೆ ಇಲಾಖೆಯಲ್ಲಿ ಯಾವ ರೀತಿ ಲಂಚವಿದೆಯೋ ಅದೇ ರೀತಿ ಈ ಇಲಾಖೆಯಲ್ಲಿ ಸ್ವಲ್ಪಮಟ್ಟಿಗೆ ಇದೆ ಆದರೆ ಈ ಇಲಾಖೆಯಲ್ಲಿ ಹೆಚ್ಚಾಗಿ ಲಂಚ ಇದೆ ಎಂದು ನಾನು ಅಂದುಕೊಂಡಿಲ್ಲ.

ಶ್ರೀ ವಿ. ಎಂ. ದೇವ್.—ಎಷ್ಟು ಪರ್ಸೆಂಟ್ ಇದೆ ಎಂದು ಅಂದಾಜು ಮಾಡುತ್ತೀರಿ ?

ಶ್ರೀ ಬಿ. ಜೆ. ಲಿಂಗೇಗೌಡ.—ಬಹುಶಃ ಮೈಸೂರು ದೇಶದ ನಾನಾ ಇಲಾಖೆಗಳೆಲ್ಲಕ್ಕೂ ಹೋಲಿಸಿದರೆ ಈ ಇಲಾಖೆಯಲ್ಲಿ ತೀರ ಕಡಿಮೆ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಈ ಇಲಾಖೆಯಲ್ಲಿ ಉತ್ಸಾಹದಿಂದ ಕೆಲಸಮಾಡತಕ್ಕಂಥ ಅಧಿಕಾರಿಗಳಿಗೆ ಇವತ್ತಿನ ದಿವಸ ಲಂಚ ನಿರೋಧ ಶಾಖೆಯಿಂದ ಕಿರುಕುಳವಾಗುತ್ತಾ ಇದೆ. ಇದನ್ನು ನಾನು ಕಣ್ಣಾರೆ ನೋಡಿದ್ದೇನೆ. ಪೋಲೀಸ್ ಅಧಿಕಾರಿಗಳಿಂದ ಕೂಡಿದ ಲಂಚ ನಿರೋದ ಶಾಖೆಯಿಂದ ಜನರಿಗೆ ತುಂಬಾ ಅನಾಹುತ ಜಾಸ್ತಿಯಾಗುತ್ತಿದೆ ಎಂದು ವಿಷಾಧದಿಂದ ತಿಳಿಸಲಿಚ್ಛಿಸುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ಲಂಚ ನಿರೋಧ ಶಾಖೆ ಇರಬೇಕೋ ಇರಬೇಡವೋ ?

ಶ್ರೀ ಬಿ. ಜೆ. ಲಿಂಗೇಗೌಡ.—ಅದನ್ನು ಮೊದಲೆ ಹೇಳಿದ್ದೇನೆ. ರಾಮನಗರಂ ದಿವಿಜನ್ನಿನಲ್ಲಿ ಅದೃಷ್ಟವಶಾತ್ ಒಳ್ಳೆ P.W.D. ಅಧಿಕಾರಿಗಳಿದ್ದಾರೆ. ಅವರ ಕೆಲಸವನ್ನು ನೋಡಿದರೆ ಪ್ರತಿಯೊಬ್ಬರೂ ಹೊಗಳಲೇ ಬೇಕಾಗುತ್ತದೆ. ಲಂಚ ವಿರೋಧ ಶಾಖೆಯ ಸಣ್ಣ ಪುಟ್ಟ ಅಧಿಕಾರಿಗಳು ಗೆಜೆಟೆಡ್ ಆಫೀಸರ್‌ಗಳ ವಿಚಾರಣೆ ಮಾಡುವುದಕ್ಕೆ ಬರುವದನ್ನು ನಾನು ನೋಡಿದ್ದೇನೆ. ಒಬ್ಬ ಸಬ್ ಇನ್‌ಸ್ಪೆಕ್ಟರ್ ಅಧಿಕಾರಿ, ಅಸಿಸ್ಟೆಂಟ್ ಎಂಜನಿಯರ್ ಮತ್ತು ಎಗ್ಜಿಕ್ಯೂಟಿವ್ ಎಂಜಿನಿಯರ್‌ಗಳು ಅವರ ಮನೆಯಲ್ಲಿ ಜವಾನನ್ನು ಇಟ್ಟುಕೊಂಡಿದ್ದಾರೆ ಎಂದು ಹೇಳಿ ಮನೆಗೆ ಸೀದಾ ನುಗ್ಗುತ್ತಾರೆ. ಇದು ಆಗಬಾರದು. ದೇಶದಲ್ಲಿ ಅನೇಕ ಇಲಾಖೆಗಳಲ್ಲಿ ಹಣ ತುಂಬಾ ದುರ್ವ್ಯಯವಾಗುತ್ತಿದೆಂಬ ಕೂಗು ಇರುವಾಗ್ಗೆ ಒಬ್ಬ ಜವಾನನ್ನು ಗೆಜೆಟೆಡ್ ಆಫೀಸರು ಮನೆಗೆ ಇಟ್ಟುಕೊಂಡಿದ್ದಾರೆಯೇ ಎಂದು ಕೇಳುವುದು ಬಹಳ ಕೀಳು ದರ್ಜೆಯಾಗುತ್ತದೆಂದು ಹೇಳುತ್ತೇನೆ. ನಾನು ಮೊದಲೇ ಸಲಹೆ ಮಾಡಿದಂತೆ ಲಂಚ ತಿಂದವರಿಗೆ ಉಗ್ರ ಶಿಕ್ಷೆಯಾಗಲೇಬೇಕು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದರೆ ಈ ಕೆಲಸ ಲಂಚ ನಿರೋಧ ಶಾಖೆ ಅಧಿಕಾರಿಗಳಿಂದ ಸಾಧ್ಯವಾಗುವುದಿಲ್ಲ. ಆಯಾ ಇಲಾಖೆಯವರು ಅವರಲ್ಲಿಯೇ ಇರುವ ನಿಷ್ಪೃಹ ಮತ್ತು ಸತ್ಯವಂತ ಆಫೀಸರ್‌ಗಳನ್ನು ಚುನಾವಣೆ ಮಾಡಿ ಆಯಾಯ ಇಲಾಖೆಯಲ್ಲೇ ಲಂಚನಿರೋಧ ಶಾಖೆಯನ್ನು ಮಾಡಿಕೊಂಡು ಲಂಚ ತೆಗೆದುಕೊಳ್ಳುವುದನ್ನು ತಡಗಟ್ಟುವುದಕ್ಕೆ ಸರಿಯಾದ ಕ್ರಮ ತೆಗೆದುಕೊಳ್ಳುವುದು ಸೂಕ್ತ. ಈ ವಿಷಯ ಸರಕಾರ ಪರಿಶೀಲಿಸಬೇಕು ಎಂದು ನಾನು ಅವರನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಕೊನೆಯದಾಗಿ ಸ್ವಾಮಿ, ಈಗ ಎರಡು ವರ್ಷಗಳಿಂದ ರಾಮನಗರಂ ಡಿವಿಜನ್ ಪ್ರಾರಂಭ ಮಾಡಿದ್ದಾರೆ ಅಲ್ಲಿ ಒಳ್ಳೆಯ ಕೆಲಸ ಕಾರ್ಯಗಳು ನಡೆಯುತ್ತಿವೆ. ಇತ್ತೀಚೆಗೆ ರಾಮನಗರ ಡಿವಿಜನ್ ಅನ್ನು ಮುಚ್ಚಬೇಕು ಎನ್ನುವ ಪ್ರಪೋಜಲ್ ಸರ್ಕಾರದ ಮುಂದೆ ಇದೆಯೆಂದು ಕೆಲವರು ಹೇಳುತ್ತಾರೆ. ಅದು ಖಂಡಿತಾ ಸಾಧುವಾದದ್ದಲ್ಲ. ರಾಮನಗರ ಡಿವಿಜನನ್ನು ಮುಂದುವರಿಸಬೇಕೆಂದು ನಾನು ಸರ್ಕಾರದವರನ್ನು ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಇಷ್ಟು ವಿಷಯಗಳನ್ನು ಹೇಳಿ ನಾನು ನಮ್ಮ ಮುಂದೆ ಇರುವ ಬೇಡಿಕೆಗಳನ್ನು ಸಮರ್ಥಿಸುತ್ತೇನೆ.

† **Sri G. V. GOWDA** (Palya).—At the outset I want to confess that huge sums of money are being obtained year after year and have been spent without resulting in corresponding benefits accruing to the State or its people. Just in the question hour, our Hon'ble Finance Minister has been pleased to say that instructions have been issued to observe economy measures and all that. If you could see the expenditure or amount provided towards establishment charges, so far as Public Works Department is concerned, it is rapidly growing. Sir, in 1961-62 the amount provided towards Establishment was Rs. 50.88 lakhs; in 1962-63 it was Rs. 60.12 lakhs; in 1963-64 it is Rs. 82 lakhs. There is in increase of 64 per cent from 1961-62. If you see the over-all expenditure in the Department, under 50 Civil Works during the current year, the amount expected to be spent is Rs. 1200 lakhs and even during the last year it was Rs. 1,200 lakhs. So, the over-all expenditure is the same more or less. I do not understand why there must be an increase of nearly Rs. 21 lakhs towards Establishment Charges. These establishment charges do not include the amount provided under Demand Nos. 99,100 and 103. This is exclusive of Demand 50 Civil Works. My humble suggestion is that as things are not as they are expected to be, when

(Sri G V. GOWDA)

the overall picture is the same, why should there be more money allotted towards establishment charges I fail to understand. Therefore, the increase in expenditure in the establishment charges is not justified in any circumstance. So far as the capital outlay on improvement of public health is concerned, during the current year, a provision of Rs. 122 lakhs has been made; next year they have provided only Rs. 47 lakhs. This relates to water supply and other public health measures. Sir, I fail to understand how through a provision of Rs. 47 lakhs, the Government could provide rural water supply or take other public health measures is not known. If you could see the capital outlay on electricity schemes, Sir, for 1961–62 there was a provision of Rs. 930 lakhs and for 1962-63 Rs. 1900 lakhs have been provided but the amount expected to be spent by the close of the year is only Rs. 1,400 lakhs. So, the Government had not shown any reason why they are not able to spend Rs. 500 lakhs. The capital outlay on electricity schemes relates to Tungabhadra Hydro-electric Project, and first and second stages of Sharavathi Projects. The other day the Chief Minister had been pleased to give an explanation why work in Sharavathi has been delayed. Let us concede those explanations are genuine. But to the extent of Rs. 500 lakhs they not have been able to spend as has been provided for the current year. Sir, all is not well so far as Sharavathi is concerned. That is my opinion. Sir, this House remembers that last year several members of this House raised protests and objections and a huge cry was raised in respect of extra additional amount that was paid to contractors. I can recall the assurance given by the Hon'ble Chief Minister then that any terms and conditions in the agreement between the Contractor and the Government which are detrimental to the interest of the State would be revoked and steps would be taken in that regard. I do not know whether such of those terms and conditions which are detrimental to the interest of the State as such have bern revoked by this time. The other day in answer to a question he was pleased to say they had sent proposals to the contractors. Naturally the would not agree. In that deal it has been conceded by the Government that they had paid Rs. 50 lakhs and odd more than the stipulated tender rate. Now also I have learnt, subject to correction that the Government have agreed to pay Rs. 30 lakhs to one Contractor more than the accepted tender rates on a claim made by him over a certain item. If that is true, I should say this is nothing but allowing the interest of State to suffer. Sir, it has been made clear by the Hon'ble Chief Minister that such things would not be allowed to continue in future when he gave explanation how the Government was obliged to pay Rs. 50 and odd more lakhs to the contractors for the claims made last year. Now, it is learnt that the Government have passed order awarding Rs. 30 lakhs over and above the accepted and stipulated rates. This is something I should say not only ridiculous; it is something unimaginable; it is beyond the reasoning capacity of any person......

Sri S. NIJALINGAPPA.—I want to know what exactly is it about Rs. 30 lakhs. I am not aware of it.

Sri G. V. GOWDA.—That is my information that a contractor made a claim of Rs. 30 lakhs.

Sri S. NIJALINAPPA.—I only wish my friends come and ask me about it instead of making these statements here. What is the use of creating unnecessary wrong impressions ?

Sri G. V. GOWDA. Let me request the Chief Minister to see that if such a move were to be there, let it be put an end to and see that the terms and conditions which are detrimental, as the Chief Minister himself is obliged to concede some time ago, to interest of the State are revoked earlier so that the work could be got expedited and the interest of the State is not allowed to suffer. If the information I have received is not correct, I am very happy. I would request the Chief Minister not to give scope for such things in future because on every item and on every occasion some claim may be made. It is open for a contractor to come now and then and say that something is wrong there and his claim is just. Therefore, I request the Government to see that terms and conditions which make the appointment of arbitrators......

Mr. SPEAKER.—The Hon'ble Chief Minister has told the House that there will be no Arbitration clause in future contracts.

Sri G. V. GOWDA.—Yes.

Mr. SPEAKER.—Then why develop it further ? The contracts which have been entered into have to subsist.

Sri G. V. GOWDA.—Many of my friends were telling that work connected with irrigation facilities in the State has not made much headway. So far as minor irrigation works are concerned, only 10 lakh acres are brought under cultivation. It is said that nearly 30 lakh acres can be brought under cultivation. So, if we see the amounts provided, it is too meagre. If proper steps are taken, I believe by the end of the Third Plan nearly 30 lakh acres can be brought under irrigation in addition to what they have already achieved.

4-00 P.M.

In respect of medium irrigation projects it has not made much headway. Investigations connected with these projects have not been completed with the result that not even a single project has been taken up. I request the Government to pay immediate attention to minor and medium irrigation projects so that more irrigable area can be brought under cultivation and we can have more food production.

At the very outset I said that money has been spent on rural communications. As the hon'ble member Sri G. Marulappa was urging, the Government must take proper care to see that money already spent on the construction of roads do not go as waste. If the intention of the Government is that the money should not go as waste, they must try to maintain the roads properly because nearly Rs. 9 crores have been spent. I am told more than 7000 miles have been formed and they

(SRI G. V. GOWDA)

have not taken care to maintain them properly after completion. I request the Government not to allow such things and steps must be taken before the end of this month either to make arrangements for maintaining them properly or else to hand them over to the Taluk Boards with sufficient funds.

So far as communications are concerned, last year a sum of Rs. 514 lakhs was provided but this year only a sum of Rs. 142 lakhs is made. I do not know how the Government is able to cope with the work with this meagre money. It may not be possible to maintain the roads that are already formed.

As far as my taluk is concerned, I have word to say in respect of medium irrigation projects. Time and again we have been requesting the Government and the Chief Minister has held out assurances that immediate steps would be taken to see that one or two projects are included in the Third Plan and the work started. I am told that investigations are not yet completed though investigations sub-divisions were started about three or four years ago. At first, two sub-divisions were sanctioned and subsequently one was withdrawn with the result the one sub-division functioning is not able to investigate all the feasible projects. In that area there are many rivers with perennial source of water and if they are properly exploited, more than 40,000 acres can be brought under cultivation. In Gundal and Udigere, if projects are undertaken and completed more than 30,000 acres would come under irrigation and we can get more than 7.4 per cent return. There are seven tanks and if those tank-beds are sold by public auction it would fetch more than Rs. 100 lakhs and we canuse this money. When these areas were in Madras, nothing was done and now the people are expecting much from the Government. So I appeal to the Chief Minister to see that these projects at least are included in the Third Plan and work started.

So far as restoration of tank work is concerned many tanks in Chamarajanagar Taluk have been included. But in Kollegal Taluk not even a single tank is included. There are several tanks in our area and I request the Chief Minister to see that at least in 1964-65 some tanks are taken up and water facility could be restored and more lands are brought under irrigation.

As regards the electricity schemes, I do not wish to point out again the need for taking up the Cauvery Hydel schemes. The Government contemplates taking up Kalinadi and other projects for which more funds have to be secured If Cauvery projects are taken it would facilitate Government getting more electricity. In respect of providing electricity to the I. P. sets and for rural electrification, things are not happy. So far as my area is concerned even in the Third Plan they have not made any provision for providing electricity. When this area formed part of Madras, rural electrification had been earmarked and several villages with a population of more than 5,000 were proposed to be given electricity. The Panchayats and the concerned local bodies co-operated with the Electricity Department and plans and estimates were ready but not even a single village has been sanctioned rural electrification so far. I request the Government that at least territorial distribution must be made in this respect. We see in our State in certain areas several villages being electrified and, in certain other areas not even one village having electricity. Let there be territorial distribution so as to see that progress is achived more or less on par with other progressive areas.

So far as Krishna and Godavari waters are concerned, let me not say what has been told time and again. We have confidence that justice can be secured to us. The other day I read that the Government of Mysore is willing to give two lakh kwts. of power to the Andhra Government if they were to stop the Sri Sailam project. We may have ample power. That is a different matter. We have got to study the implications involved in such bargains. But if we go on making such bargains I am afraid we may weaken our stand. Let us not do anything which would weaken our stand. We have our right and we........

Sri S. NIJALINGAPPA.—Does the hon'ble member think that we have promised them free supply ?

Sri G. V. GOWDA.—It is not the question of free supply. No Government can give free supply. The Hon'ble Chief Minister stated that by the next April or May two units of Sharavathy will be able to supply 9 lakh kwts. of power. Of course on payment if that goes to other place, what would be the fate of us in the State. That has to be studied by the Chief Minister.

It may show to the world that our stand is not strong and it may get weakened. After the determination of the shares, if we have got enough power to spare, we may spare it not only for Andhra or Maharashtra but also for other States. That is why I would request the Hon'ble the Chief Minister that while bargaining we should not weaken our case.

As regards the taking over of the roads for management by the P.W.D., there is discrimination-not intentionally perhaps; it may be through oversight. There are very big taluks having a good length of mileage of roads belonging to the erstwhile district boards. According to the area of the taluk and the length of mileage of roads, these roads should have been taken up. In taluks where there is a good length of road, a substantial portion of it has to be taken up, so that the burden on the Taluk Board can be lessened and roads could be maintained properly.

Provision of rural water supply and communication facilities are the two primary and basic necessities. Unless the two basis necessities are provided, we cannot say that we have achieved rural development.

(Sri G. V. GOWDA)

Therefore, I would request the Government to provide them. In my taluk, the village level workers cannot go from one village to another for want of communication facilities. Under such circumstances, how is rural development to take place? Therefore, I am firmly of the opinion that unless these two basic amenities are provided, no rual development worth the name can take place.

ಶ್ರೀ ಶರಣಪ್ಪ (ದೇವದುರ್ಗ).—ಸನ್ಮಾನ್ಯ ಅಧ್ಯಕ್ಷರೇ, ಈ ದಿನ ನನಗೆ ಲೋಕೋಪಯೋಗಿ ಶಾಖೆ ಮತ್ತು ವಿದ್ಯುಚ್ಛಕ್ತಿ ಮತ್ತು ನೀರಾವರಿ ಡಿಮ್ಯಾಂಡಿನ ಮೇಲೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ನಾನು ತಮಗೆ ವಂದನೆಗಳನ್ನು ಅರ್ಪಿಸುತ್ತೇನೆ. ನಾನು ರಾಯಚೂರ್ ಜಿಲ್ಲೆಯ ದೇವದುರ್ಗ ಕ್ಷೇತ್ರದಿಂದ ಚುನಾಯಿತನಾಗಿ ಆರಿಸಿ ಬಂದರೂ ನಾನು ಕೇವಲ ಆ ಕ್ಷೇತ್ರದ ಮಟ್ಟಿಗೆ ಮಾತನಾಡದೆ ಹೈದರಾಬಾದ್ ಕರ್ಣಾಟಕದ ಒಂದು ಸಂಕ್ಷಿಪ್ತ ಚಿತ್ರವನ್ನು ತಮ್ಮ ಮುಂದೆ ಇಡಬೇಕೆಂದು ಇಚ್ಛಿಸುತ್ತೇನೆ. ಇದಕ್ಕೆ ಮೊದಲು ಕೆಲವು ಮಂದಿ ಮಾನ್ಯ ಸದಸ್ಯರು ನಮ್ಮ ಮೈಸೂರು ರಾಜ್ಯದ ಅನೇಕ ಹಿಂದುಳಿದ ಪ್ರದೇಶಗಳ ಬಗ್ಗೆ ತಂತಮ್ಮ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಅದು ನಿಜವಾದ ಸಂಗತಿ, ಏಕೆಂದರೆ ಹೈದರಾಬಾದ್ ಭಾಗದ ಬಗ್ಗೆ ತಮ್ಮ ಅಭಿಪ್ರಾಯವನ್ನು ಕೊಟ್ಟರು. ನಾವು 1956ಕ್ಕೆ ಮುಂಚಿತವಾಗಿ ಹೈದರಾಬಾದ್ ರಾಜ್ಯದಲ್ಲಿದ್ದಂತಹ ಪರಿಸ್ಥಿತಿಯನ್ನು ಅಥವಾ ನಮ್ಮ ಹಣೆಯಬರಹವನ್ನು ಅಥವಾ ನಮ್ಮ ಅಭಿವೃದ್ಧಿಯನ್ನು ಹೊಂದುವುದಕ್ಕೆ ಒಂದು ರಾಜ್ಯವಾಗಬೇಕು, ಅವರಲ್ಲೂ ಕರ್ಣಾಟಕ ರಾಜ್ಯವಾಗಬೇಕು ಎಂಬ ಒಂದು ದೊಡ್ಡ ಆಕಾಂಕ್ಷೆಯಿಂದ ಅನೇಕ ಕಷ್ಟಗಳನ್ನು ಸಹಿಸುತ್ತಾ ಇದ್ದು ಇಷ್ಟು ದೂರವಾಗಿದ್ದರೂ 1956ರಲ್ಲಿ ಮೈಸೂರು ರಾಜ್ಯಕ್ಕೆ ಬಂದು ಸೇರಿದೆವು. ಆ ಒಂದು ಕಾಲದಲ್ಲಿ ನಮ್ಮ ಹೈದರಾಬಾದ್ ಭಾಗದಲ್ಲಿ ಈ ರಸ್ತೆ, ನೀರಾವರಿ, ವಿದ್ಯುಚ್ಛಕ್ತಿ ಸೌಕರ್ಯಗಳು ಯಾವ ರೀತಿಯಾಗಿದ್ದವೋ ಅದೇ ರೀತಿಯಲ್ಲಿ ಈಗಲೂ ಕೂಡ ಇವೆಯೆಂದು ನನಗೆ ಕಾಣಿಸುತ್ತದೆ. ಆ ಒಂದು ದೃಷ್ಟಿಯಿಂದ ಇದು ಒಂದು ಭಾಗ, ಅದು ಒಂದು ಭಾಗ ಎಂಬುದಾಗಿ ಭೇದಭಾವಮಾಡದೆ ನಾವು ಬೇರೆ, ಇನ್ನೊಬ್ಬರು ಬೇರೆ ಎಂಬ ವಿಚಾರವನ್ನು ತರದೆ ಈ ಒಂದು ಲೋಕೋಪಯೋಗಿ ಶಾಖೆಯಲ್ಲಿ ನಡೆಯತಕ್ಕ ಎಲ್ಲ ಕಾಮಗಾರಿಗಳು ಲೋಕಕ್ಕೇ ಸಹಾಯವಾಗುವಂತೆ ಇರಬೇಕೆಂದು ಹೇಳಿ ಆ ಬಗ್ಗೆ ಕೆಲವು ವಿಚಾರಗಳನ್ನು ತಮ್ಮ ಮುಂದಿಡಬೇಕೆಂದು ನಾನು ಬಯಸುತ್ತೇನೆ.

ಸ್ವಾಮಿ, ಪ್ರಾಂತಪುನರ್ವಿಂಗಡಣಾನಂತರ 1957ನೇ ಇಸವಿಯಲ್ಲಿ ಕೇಂದ್ರ ಸರ್ಕಾರದವರು ಒಂದು ಫೈನಾನ್ಸ್ ಕಮಿಷನ್ ಎಂದು ನೇಮಿಸಿದರು. ಆಗ ಮೈಸೂರ, ಆಂಧ್ರ, ಕೇರಳ, ಮದ್ರಾಸ್ ಪ್ರಾಂತಗಳಿಗೆ ಬೇಕಾದ ಹಣದ ಅವಶ್ಯಕತೆ, ಆಹಾರೋತ್ಪನ್ನ—ಈ ವಿಷಯಗಳ ಬಗ್ಗೆ, ಆಯಾ ಪ್ರಾಂತಗಳಲ್ಲಿ ಎಷ್ಟರಮಟ್ಟಿಗೆ ಕೇಂದ್ರದಿಂದ ಸಹಾಯಧನ, ಮತ್ತು ಆಯಾ ಪ್ರಾಂತಗಳ ಅಭಿವೃದ್ಧಿಗೆ ಬೇಕಾದಂಥ ಹಣದ ಅವಶ್ಯಕತೆಯನ್ನು ಹೊಂದುವುದಕ್ಕಾಗಿ ಪ್ರತಿಯೊಂದು ಸಂಸ್ಥಾನದಲ್ಲೂ ಈ ಫೈನಾನ್ಸ್ ಕಮಿಷನ್ ವಿಚಾರವಿನಿಮಯ ನಡೆಸಿ ಕಡೆಗೆ ಕೇಂದ್ರ ಸರ್ಕಾರಕ್ಕೆ ಒಂದು ವರದಿಯನ್ನು ಕೊಟ್ಟರು. ಆ ಕಮಿಷನ್ನಿನ ಶಿಫಾರ್ಸಿನ ಪ್ರಕಾರ ನಮ್ಮ ಕೇಂದ್ರ ಪುನಃ ಸರ್ಕಾರದವರು ಈ ಮೈಸೂರು ರಾಜ್ಯಕ್ಕೆ ಸುಮಾರು 6 ಕೋಟಿ, 7 ಕೋಟಿ ರೂಪಾಯಿಗಳ ಹೆಚ್ಚು ಹಣವನ್ನು ಕೊಡಲು ಒಪ್ಪಿದರು. ನಮ್ಮ ಮೈಸೂರು ರಾಜ್ಯದಲ್ಲಿ ಹೆಚ್ಚು ಕಾಮಗಾರಿಗಳನ್ನು ತೆಗೆದುಕೊಂಡು ಅಭಿವೃದ್ಧಿ ಹೊಂದುವುದಕ್ಕಾಗಿ ಸಹಾಯ ಧನವನ್ನು ಕೇಂದ್ರ ಸರ್ಕಾರದ ಉತ್ಪಾದನೆಯಿಂದ ಕೊಡಲು ಒಪ್ಪಿಕೊಂಡರು. 1957ನೇ ಇಸವಿಯಲ್ಲಿ ಆದ ಒಂದು ತೀರ್ಮಾನದ ಪ್ರಕಾರ ನಮ್ಮ ಪಾಲಿಗೆ ಸುಮಾರು 36 ರಿಂದ 40 ಕೋಟಿ ರೂಪಾಯಿಗಳವರೆಗೆ ಹೆಚ್ಚಿದಂತಾಗಿದೆ. ಆ ಕಾಲದಲ್ಲಿ ಈ ವಿಷಯಗಳನ್ನು ಚರ್ಚಿಸುವಾಗ, ಅನೇಕ ವಿಷಯಗಳನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರುವಾಗ ಹಿಂದುಳಿದ ಭಾಗಗಳು ಯಾವುದೆಂದರೆ ಮುಖ್ಯವಾಗಿ ಹೈದರಾಬಾದ್ ಪ್ರದೇಶದ 3 ಜಿಲ್ಲೆಗಳು, ಮುಂಬೈ ಕರ್ಣಾಟಕದ ಕೆಲವು ಜಿಲ್ಲೆಗಳು ಮತ್ತು ಹಳೆಯ ಮೈಸೂರಿನ ಕೆಲವೊಂದು ಜಿಲ್ಲೆಗಳು ಎಂದು ಹೇಳಿ ಅಂತಹ ಪ್ರದೇಶಗಳಲ್ಲಿ ಅನೇಕವಾಗಿ ಹೆಚ್ಚು ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕಾಗಿವೆ ಎಂಬ ವಿಷಯವನ್ನು ಕೇಂದ್ರ ಸರ್ಕಾರದವರ ಗಮನಕ್ಕೆ ತಂದು ಕೊಟ್ಟಿದ್ದೆವು. ಆದಕಾರಣ ಈ ದಿವಸ ನಮ್ಮ ಸರ್ಕಾರ ಇರತಕ್ಕಂಥ ಹಣದ ಪೈಕಿ ಹೆಚ್ಚು ಭಾಗ ಹಣವನ್ನು ಹಿಂದುಳಿದ ಪ್ರದೇಶಗಳಿಗೆ ಮಾತ್ರ ಒಂದೇ ಸಮಾನತೆಯಿಂದ, ಒಂದೇ ರೀತಿಯಲ್ಲಿ ಮತ್ತು ಆಯಾ ಪ್ರಾಂತಗಳು ಅಭಿವೃದ್ಧಿ ಹೊಂದಲಿಕ್ಕೆ ಅವಕಾಶವಾಗುವಂತೆ ಹಂಚಬೇಕಾಗಿದೆ. ಯಾವ್ಯಾವ ಬಾಬುಗಳಿಗೆ ಕೊಟ್ಟಿದ್ದಾರೆ ಎಂಬ ವಿವರವನ್ನು ನಮ್ಮೆಲ್ಲರ ಸಮಾಧಾನಕ್ಕೋಸ್ಕರವಾಗಿ ಲೋಕೋಪಯೋಗಿ ಶಾಖೆಯ ಮಂತ್ರಿ

ಗಳಾದ ಮಾನ್ಯ ವೀರೇಂದ್ರ ಪಾಟೀಲ್ ಅವರು ಹೇಳಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ. ಸುಮಾರು 6-7 ವರ್ಷಗಳಿಂದಲೂ ನಮ್ಮ ಪಾಲಿಗೆ ಸಿಕ್ಕಿದಂಥ ಹಣ ಈಗ ಸಿಕ್ಕಿರುವುದರಿಂದ ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಖರ್ಚುಮಾಡುವ ಯೋಜನೆಯನ್ನು ಜಾಗ್ರತೆಯಾಗಿ ತಂದು ಆ ಪ್ರದೇಶಗಳಲ್ಲಿರತಕ್ಕಂಥ ಕೆಲವೊಂದು ಕುಂದುಕೊರತೆಗಳನ್ನು ದೂರಮಾಡಬೇಕೆಂದು ನಾನು ಸಂಬಂಧಪಟ್ಟ ಮಂತ್ರಿಯವರನ್ನು ಪ್ರಾರ್ಥಿಸುತ್ತೇನೆ. ಇಂತಹ ಒಂದು ತುರ್ತು ಪರಿಸ್ಥಿತಿಯಲ್ಲಿ, ಎಮರ್ಜೆನ್ಸಿ ಪೀರಿಯಡ್ ಇದ್ದಾಗಲೂಕೂಡ ನಮ್ಮ ದೇಶದ ಅಭಿವೃದ್ಧಿಗಾಗಿ ನಮ್ಮ ಸರ್ಕಾರ ತಮ್ಮ ಆದಾಯ ವೆಚ್ಚದಲ್ಲಿ ಶೇಕಡ 50 ಕ್ಕಿಂತ ಮೇಲ್ಪಟ್ಟು ಲೋಕೋಪಯೋಗಿ ಕಾರ್ಯಗಳಿಗೆ ಅಂದರೆ ನೀರಾವರಿ, ರಸ್ತೆ, ವಿದ್ಯುಚ್ಛಕ್ತಿ ಬಾಬುಗಳಿಗೆ ಖರ್ಚುಮಾಡುವ ವಿಷಯ ನಿಜವಾಗಿ ಶ್ಲಾಘನೀಯಮಾಡತಕ್ಕ ವಿಚಾರವೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಈ ಡಿಮ್ಯಾಂಡ್‌ಗಳಿಗೆ ಸಮ್ಮತಿ ಕೊಡುತ್ತಾ ಇನ್ನೂ ಹೆಚ್ಚಿನ ಹಣ ಈ ಕಾಮಗಾರಿಗಳಿಗೆ ಬೇಕೆಂದು ಹೇಳುತ್ತೇನೆ. ಇದರ ಬಗ್ಗೆ ಮೊಟ್ಟಮೊದಲನೆಯದಾಗಿ ಮಾತನಾಡಬೇಕೆಂದರೆ, ಅದು ನೀರಾವರಿಯ ವಿಷಯ. ಹೈದರಾಬಾದು ಕರ್ಣಾಟಕದ 13 ಸಾವಿರ ಚದರಮೈಲಿಗೆ ಮೇಲ್ಪಟ್ಟ ಪ್ರದೇಶವನ್ನು ತಗೆದುಕೊಂಡರೆ, 30 ಲಕ್ಷಕ್ಕೆ ಮೇಲ್ಪಟ್ಟ ಜನ ಸಂಖ್ಯೆಯನ್ನು ತೆಗೆದುಕೊಂಡು ಬಂದಿದ್ದೇವೆ. ನಮ್ಮ ಭಾಗಕ್ಕೆ ಭೀಮಾ, ಕೃಷ್ಣಾ, ಮಲಪ್ರಭಾ ಮುಂತಾದ ನದಿಗಳು ಬಂದಿವೆ; ಎಷ್ಟೋ ಅರಣ್ಯಗಳು ಬಂದಿವೆ. ಇಂಥ ಕೃಷ್ಣಾ, ಭೀಮಾ, ತುಂಗಭದ್ರಾ ನದಿಗಳ ವಿಷಯ ಮಾತನಾಡುವಾಗ ಸರ್ಕಾರದ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ. ತುಂಗಭದ್ರಾ ಯೋಜನೆಯ ಕೆಳಗೆ 5 ಲಕ್ಷದ 80 ಸಾವಿರ ಎಕರೆ ನೀರಾವರಿಯಾಗತಕ್ಕ ಭೂಮಿ ಇದೆ. ಆ ಯೋಜನೆ 1925 ರಿಂದಲೂ ಪರಿಶೀಲನೆಯಲ್ಲಿದ್ದು ಪ್ರಥಮವಾಗಿ 1945 ರಿಂದ ಪ್ರಾರಂಭವಾಗಿ ಇದುವರೆಗೂ ಕೆಲಸ ನಡೆಸಿ, ಅಣೆಕಟ್ಟಿನ ಕೆಲಸ ಮುಗಿದಿದೆ. ಆದರೆ ಕಾಲುವೆಗಳಾಗಿಲ್ಲ, ಸಾಕಷ್ಟು ನೀರಾವರಿ ಸೌಕರ್ಯ ಜನರಿಗೆ ಸಿಕ್ಕಿಲ್ಲ. ನೀರಿದೆ, ನದಿಯಿದೆ, ಜನರಿದ್ದಾರೆ, ಭೂಮಿಯಿದೆ, ಆದರೆ ಅದರ ಲಾಭ ಪಡೆಯುವ ಶಕ್ತಿ ನಮಗೆ ಬರಲಲ್ಲ. ಏಕೆಂದರೆ, ಕೆಲವು ಲೋಪದೋಷಗಳಿವೆ. ಹೈದರಾಬಾದು ಸರ್ಕಾರವಿದ್ದಾಗ ರಾಯಚೂರು ಜಿಲ್ಲೆಯಲ್ಲಿ localisation ಎಂದು ಮಾಡಿದ್ದರು. ಹೀಗೆ ಮಾಡಿ ನೀರು ಹರಿಯಲಾರದೇಯಿದ್ದ ಭಾಗವನ್ನು ಸೇರಿಸಿದ್ದರು, ನೀರು ಹರಿಯುವ ಭೂಮಿಯನ್ನು ಬಿಟ್ಟುಬಿಟ್ಟರು. ನೀರು ಹರಿಯದೇಯಿರುವ ಎಷ್ಟೋ ಭೂಮಿಯನ್ನು ಲೋಕಲೈಸೇಷನ್‌ನಲ್ಲಿ ಸೇರಿಸಿದ್ದಾರೆ. ಯಾವ ಭೂಮಿಗೆ ನೀರು ಹೋಗುವುದಿಲ್ಲವೋ ಆ ಭೂಮಿಯನ್ನು ಮಾಡತಕ್ಕವರ ಮೇಲೆ ತೆರಿಗೆ, ಎಂದರೆ water tax ಮತ್ತು betterment tax ಹಾಕಿದ್ದಾರೆ. ಉದಾರಣೆಗೆ, ಸಿಂದನೂರು, ಗಂಗಾವತಿ ಮತ್ತು ಕೊಪ್ಪಳ ಜನರಮೇಲೆ ಹಾಕಿದ್ದಾರೆ. ಇದನ್ನು ಬದಲಾವಣೆ ಮಾಡುವುದಕ್ಕೆ ಆಗಾಗ ಮನವಿ ಮಾಡಿಕೊಂಡಿದ್ದೇವೆ. ಈ ಸಂಬಂಧದಲ್ಲಿ ನಾನು ಹೇಳುವುದಿಷ್ಟೆ: ಅಲ್ಲಿ ಆದಷ್ಟು ಭೂಮಿ ಇದೆ, ನೀರಿದೆ; ಈ ಯೋಜಯಲ್ಲಿ ನಾವು ಹೆಚ್ಚು ಶ್ರದ್ಧೆವಹಿಸಿ ಕೆಲಸ ಮಾಡುವುದಾದರೆ, ಉತ್ತಮವಾದ ತುಂಗಭದ್ರಾ ನದಿಯಿಂದ ರಾಯಚೂರು ಜಿಲ್ಲೆಯ ಭೂಮಿಯಲ್ಲಿ ಆಹಾರವನ್ನು ಆದಷ್ಟು ಹೆಚ್ಚು ಉತ್ಪತ್ತಿ ಮಾಡಬಹುದು. ಭೀಮಾನದಿಯಿಂದ ಗುಲ್ಬರ್ಗ ಜಿಲ್ಲೆಯಲ್ಲಿ ಆದಷ್ಟು ಲಾಭ ಪಡೆಯಬಹುದು. ಆ ಯೋಜನೆಯನ್ನು ತೆಗೆದುಕೊಂಡರೆ, ಸುಮಾರು ಮೂರು ನಾಲ್ಕು ಲಕ್ಷ ಎಕರೆಯಲ್ಲಿ ಬೆಳೆಯಬಹುದು; ನಮ್ಮ ತಾಲ್ಲೂಕಿಗೆ ಲಾಭವಾಗುವ ಸಂಭವವಿದೆ. ಅಪ್ಪರ್ ಕೃಷ್ಣಾ ಯೋಜನೆಯ ಬಗ್ಗೆ ನಮ್ಮ ಮೆಚ್ಚಿನ ನೆಚ್ಚಿನ (ನಾಯಕರಾದ ಮುಖ್ಯ ಮಂತ್ರಿಗಳು) ವಿವರಣೆ ಕೊಟ್ಟಿದ್ದಾರೆ. ಅದರಲ್ಲಿ ನಮಗೆ ವಿಶ್ವಾಸವಿದೆ. ಅಲ್ಲದೆ, ನಾವು ನದಿಯ ಮೇಲಿದ್ದೇವೆ ಅವರು ಕೆಳಗಿದ್ದಾರೆ, ಒಂದು ವೇಳೆ ಕೆಳಗಿನವರು ನಮಗೆ ನ್ಯಾಯ ದೊರಕಿಸದಿದ್ದರೆ, ನ್ಯಾಯ ದೊರಕಿಸಿಕೊಳ್ಳುವ ಶಕ್ತಿ ನಮಗಿದೆ ಎಂಬ ಆತ್ಮ ವಿಶ್ವಾಸವಿದೆ, ಆದ್ದರಿಂದ ಅಪ್ಪರ್ ಕೃಷ್ಣಾ ಯೋಜನೆ ಮುಂದುವರಿಯುವುದರಲ್ಲಿ ಯಾವ ಸಂಶಯವೂ ಇಲ್ಲವೆಂದು ಹೇಳಬಹುದು.

ಸಣ್ಣ ಪುಟ್ಟ ಕಾಮಗಾರಿಗಳನ್ನು ಇದುವರೆಗೆ ಕೆಲವನ್ನು ತೆಗೆದು ಕೊಂಡಿದ್ದಾರೆ. ಹತ್ತಿಗುಣಿ ಯೋಜನೆ ಒಂದು ಸಣ್ಣ ಯೋಜನೆ, ಅದು ಇದುವರೆಗಾಗಲೇ ಮುಗಿಯುತ್ತದೆಂದು ನೀರಿಕ್ಷಿಸಿದ್ದೆವು, ಆ ಅಂತಸ್ತಿಗೆ ಬರಲಿಲ್ಲ. ತುಂಗಭದ್ರಾ, ಭೀಮಾ, ಕೃಷ್ಣಾ ಮತ್ತು ಇನ್ನೂ ಕೆಲವು ಸಣ್ಣ ಸಣ್ಣ ಹೊಳೆಗಳಿವೆ. ಆದರೂ ನಮ್ಮ ಭಾಗದ ನೀರಾವರಿಯ ಸೇಕಡಾವಾರು ವಿಚಾರ ಮಾಡಿದರೆ, ಬಿದರ್ ಜಿಲ್ಲೆಯಲ್ಲಿ ಕೇವಲ 2.34, ಗುಲ್ಬರ್ಗದಲ್ಲಿ 1.25, ರಾಯಚೂರಿನಲ್ಲಿ 3.23 ಪ್ರಕಾರ ನೀರಾವರಿಯಾಗುತ್ತಿದೆ, ದಕ್ಷಿಣ ಭಾರತದ ಮೈಸೂರು ರಾಜ್ಯದಲ್ಲಿ ವಿದ್ಯುಚ್ಛಕ್ತಿಯಿದ್ದರೂ ಕೂಡ, ಎಷ್ಟೋ ನದಿಗಳು ಹರಿದರೂ ಕೂಡ, ನೀರಾವರಿ ಇಲ್ಲಿ ಕೇವಲ ಏಳೆಂಟು ಪರ್‌ಸೆಂಟ್ ಇದೆ. ಅದೇ ಮದರಾಸು, ಆಂಧ್ರ ಮತ್ತು ಕೇರಳದಲ್ಲಿ ಹೆಚ್ಚಾಗಿದೆ; ಮಹಾರಾಷ್ಟ್ರ ಕೂಡ ನಮಗಿಂತ ಮುಂದೆ ಹೋಗುತ್ತಾರೆಂದು ಕೇಳುತ್ತಿದ್ದೇವೆ. ನಮ್ಮ ಭಾಗದಲ್ಲಿ ಎಲ್ಲಕ್ಕಿಂತ ಕಡಮೆ, ಎಂದರೆ, ಕೇವಲ ಸೇಕಡ ಎರಡು ಅಥವಾ ಮೂರರಷ್ಟಿದೆಯೆಂಧರೆ, ಎಷ್ಟು ಮಟ್ಟಿಗೆ ನಮ್ಮ ಆಹಾರ ಪರಿಸ್ಥಿತಿ ಹಾಗೂ

(ಶ್ರೀ ಶರಣಪ್ಪ)

ಆರ್ಥಿಕ ಪರಿಸ್ಥಿತಿ ಮುಂದುವರಿಯುತ್ತಿದೆ, ಮುಂದುವರಿಯಬಹುದು ಎಂಬುದನ್ನು ನಮ್ಮ ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ.

ನಮ್ಮಲ್ಲಿನ ರಸ್ತೆಗಳ ವಿಚಾರವನ್ನೂ ನೋಡುವುದಾದರೆ, ನಮ್ಮ ಮೂರು ಜಿಲ್ಲೆಗಳ ಸರಾಸರಿ ತೆಗೆದುಕೊಂಡರೆ, ನೂರು ಚದರ ಮೈಲಿಗೆ ಕೇವಲ ಎಂಟು ಮೈಲ ರಸ್ತೆ ನಮ್ಮಲ್ಲಿದೆ. ಇದರಲ್ಲಿ ಬಿದರ್‌ಗೆ 11 ಮೈಲಿ, ಗುಲ್ಬರ್ಗಕ್ಕೆ 12 ಮೈಲಿ, ರಾಯಚೂರಿಗೆ 13 ರಿಂದ 14 ಮೈಲ ಈರೀತಿ ಲೆಕ್ಕ ಬರುತ್ತದೆ. ಆದರೂ ಈ ಮೂರು ಕ್ಷೇತ್ರಗಳನ್ನೂ ಒಗ್ಗೂಡಿಸದರೆ ನೂರು ಚದರ ಮೈಲಿಗೆ ಕೇವಲ ಎಂಟು ಮೈಲಿ ರಸ್ತೆ ಇದೆ. ಇದರಲ್ಲಿ ಎಲ್ಲವೂ ಪಕ್ಕಾ ರಸ್ತೆಯಲ್ಲ, ಸಾಧಾರಣವಾಗಿ ಹೋಗಿ ಬರತಕ್ಕ ರಸ್ತೆ. ನಾನು ಬೇರೆ ಜಿಲ್ಲೆಗಳ ವಿಚಾರ ಹೇಳಿದರೆ ಅವರು ಬೇರೆ, ನಾವು ಬೇರೆ ಎಂದು ಭಾವಿಸತಕ್ಕ ಮನುಷ್ಯನಲ್ಲ. ಆದರೆ ರಸ್ತೆಯ ಕಾಮಗಾರಿ ಅಥವಾ ಬೇರೆ ಯಾವ ಕಾಮಗಾರಿಯನ್ನು ಸರ್ಕಾರ ತೆಗೆದುಕೊಳ್ಳಬೇಕಾದರೆ, ಎಲ್ಲಿ ಹಿಂದುಳಿದ ಪ್ರದೇಶವಿದೆ, ಎಲ್ಲಿ ಇನ್ನೂ ಕೆಲಸಮಾಡತಕ್ಕ ಆವಶ್ಯಕತೆ ಇದೆ, ಎನ್ನುವುದನ್ನು ವಿಚಾರಮಾಡಿ ಅಗತ್ಯವಿರುವ ಕಡೆ ಕಾಮಗಾರಿ ಮಾಡಿಸಿದರೆ ಉತ್ತಮವೆಂದು ಪ್ರಾರ್ಥಿಸುತ್ತೇನೆ. ಉದಾಹರಣೆಗೆ ಮಂಡ್ಯ ಜಿಲ್ಲೆಯಲ್ಲಿ ನೂರು ಚದರ ಮೈಲಿಗೆ 119 ಮೈಲ ರಸ್ತೆ ಇದೆ. ಗುಲ್ಬರ್ಗ, ರಾಯಚೂರು, ಬೆಳಗಾಂ ಜಿಲ್ಲೆಗಳನ್ನು ನೋಡಿದರೆ, ನೂರು ಚದರ ಮೈಲಿಗೆ ಕೇವಲ ಎಂಟು ಮೈಲಿ ಇದೆ. ಮಂಡ್ಯ ಜಿಲ್ಲೆ ಮಾತ್ರ ಮುಂದುವರಿದರೆ ಇಡೀ ದೇಶ ಮುಂದುವರಿದ ಹಾಗಾಗುವುದಿಲ್ಲ; ಅಥವಾ ಕೇವಲ ಬಿದರ್ ಜಿಲ್ಲೆ ಮುಂದುವರಿದರೆ ದೇಶವೇ ಮುಂದುವರಿಯುವುದಿಲ್ಲ. ನಮ್ಮಲ್ಲಿರುವ ಎಲ್ಲ ಭಾಗಗಳೂ ಸರಿಯಾಗಿ ಮುಂದುವರಿಯಬೇಕು. ಪ್ರತಿ ಜಿಲ್ಲೆಯಲ್ಲಿಯೂ ಅದಷ್ಟು ರಸ್ತೆಯನ್ನು ನಿರ್ಮಾಣ ಮಾಡಬೇಕು. ಬಿದರ್ ಜಿಲ್ಲೆಯಲ್ಲಿ ಒಂದು ತಾಲ್ಲೂಕಿನಿಂದ ಇನ್ನೊಂದಕ್ಕೆ ಹೋಗಬೇಕಾದರೆ ಒಂಟೆ, ಕುದುರೆ, ಕತ್ತೆಗಳ ಮೇಲೆ ಹೋಗುತ್ತಾರೆ ಈ ಇಪ್ಪತ್ತನೆಯ ಶತಮಾನದಲ್ಲಿ. ನಮ್ಮ ತಾಲ್ಲೂಕು ನೋಡಿದರೆ ಸುಮಾರು 600 ಮೈಲಿ ಇರುವ ತಾಲ್ಲೂಕಿನಲ್ಲಿ ಕೇವಲ 18 ಮೈಲಿ ಇದೆ. ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹೋಗುವುದಕ್ಕೆ ಯಾವ ರಸ್ತೆಯೂ ಇಲ್ಲ. ಈ ಖಾತೆಯ ಮಂತ್ರಿಗಳಾದ ವೀರೇಂದ್ರ ಪಾಟೀಲರ ಕ್ಷೇತ್ರ ಚಿಂಚೋಲಿಯಲ್ಲಿಯೂ ಇದೇ ಪರಿಸ್ಥಿತಿ ಇದೆ. ಇಂಥ ವಿಷಯಗಳನ್ನು ಆದಷ್ಟು ಬೇಗ ಗಮನಕೊಟ್ಟು ಸರಿಪಡಿಸಬೇಕು. ನಮ್ಮ ಅಭಿವೃದ್ಧಿಯೇ ನಿಮ್ಮ ಅಭಿವೃದ್ಧಿ, ದೇಶದ ಅಭಿವೃದ್ಧಿ ಎಂಬ ಭಾವನೆಯಿಂದ ಹೆಚ್ಚು ಕಡಮೆ ಮಾಡದೆ ಇತರ ಕಡೆಗಳಿಗೆ ಗಮನ ಕೊಟ್ಟಿರುವಂತೆ ನಮ್ಮ ಕಡೆಯ ಗ್ರಾಮಗಳಿಗೂ ಗಮನವನ್ನು ಕೊಟ್ಟು ರಸ್ತೆ ಸಾರಿಗೆ ಮತ್ತು ನೀರಾವರಿಯ ಬಗ್ಗೆ ಹೆಚ್ಚು ಪ್ರಾಧಾನ್ಯತೆ ಕೊಟ್ಟು ನಮ್ಮ ಆರ್ಥಿಕ ಸಂಪತ್ತು ಬೆಳೆದು ನಾವು ನಮ್ಮ ದೇಶದ ಇತರ ಜನರ ಸರಿಸಮಾನರಾಗುವುದಕ್ಕೆ ಅವಕಾಶ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

4-30 P.M.

ಈಗ ಕೆಲವೊಂದು ಲಿಂಕ್ ರಸ್ತೆಗಳು ಮತ್ತು ಇಂಟರ್ ತಾಲ್ಲೂಕು, ಇಂಟರ್ ಡಿಸ್ಟ್ರಿಕ್ಟ್ ರಸ್ತೆಗಳ ಆವಶ್ಯಕತೆ ಬಹಳ ಮುಖ್ಯವಾಗಿ ಗಮನಿಸತಕ್ಕ ವಿಚಾರವಾಗಿದೆ. ಕಲುಬುರ್ಗಿ, ರಾಯಚೂರು ಮತ್ತು ಬಿಜಾಪುರ ಜಿಲ್ಲೆಗಳಿಗೆ ಸಂಬಂಧಪಟ್ಟ ಕೆಲವು ರಸ್ತೆಗಳ ವಿಚಾರ ಹೇಳಬೇಕಾಗಿದೆ. ಈಗ ಷಾಪುರ ತಾಲ್ಲೂಕಗೆ ಸುಮಾರು 150 ಮೈಲಿಗಳಷ್ಟು ಸುತ್ತಿಕೊಂಡು ಹೋಗಬೇಕು. ಅಷ್ಟು ಸುತ್ತನ್ನು ತಪ್ಪಿಸಲು ಸರ್ಕಾರ ನಮಗೆ ಕೇವಲ 16 ಮೈಲಿಗಳ ಒಂದು ರಸ್ತೆ ಮಾಡಬೇಕಾಗಿದೆ. ಈಗ ಕೆಲವೇ ದಿನಗಳ ಹಿಂದೆ ಮಾನ್ಯ ಮಂತ್ರಿಗಳು ಆ ರಸ್ತೆಯನ್ನು ಪ್ರಾರಂಭಿಸಬೇಕೆಂದು ಆದೇಶ ನೀಡಿದ್ದಾರೆ, ಕೆಲವು ಮಟ್ಟಿಗೆ ಕೆಲಸವಾಗಿದೆ. ಆದಷ್ಟು ಕೆಲಸವನ್ನು ತೀವ್ರ ಮಾಡಲು ತಾವು ಒಪ್ಪಿಗೆ ನೀಡಬೇಕೆಂದು ಪ್ರಾರ್ಥನೆ ಮಾಡುತ್ತಿದ್ದೇನೆ. ಅದಲ್ಲದೆ ದೇವದುರ್ಗದಿಂದ ತಿಲ್ವಾರಕ್ಕೆ ಹೋಗುವ ರಸ್ತೆ ಕೇವಲ 18 ಮೈಲಿಯಿದೆ. ಅದರ ಮಣ್ಣಿನ ಕೆಲಸ ಈ ದಿವಸ ಪ್ರಾರಂಭವಾಗಿದೆ. ಅದನ್ನು ಪಬ್ಲಿಕ್‌ವರ್ಕ್ಸ್ ಶಾಖೆ ತನ್ನ ವಶಕ್ಕೆ ತೆಗೆದುಕೊಂಡು ಪಕ್ಕಾ ರಸ್ತೆ ಮಾಡಿದರೆ ಕೇವಲ 10-20 ಲಕ್ಷ ಸರ್ಕಾರಕ್ಕೆ ಖರ್ಚಾಗಬಹುದು. ದೇಶದ ಜನತೆಗಾಗಿ, ನ್ಯಾಷನಲ್ ವೆಲ್ತ್ ಉತ್ತಮ ಪಡಿಸಿ ಮನುಷ್ಯನ ಶಕ್ತಿಯನ್ನು ಬೆಳೆಸುವುದಕ್ಕಾಗಿ ಖರ್ಚು ಮಾಡುವುದು ಅನ್ಯಾಯವಾಗುವುದಿಲ್ಲ. ಈ 18 ಮೈಲಿಯ ಒಂದು ರಸ್ತೆ ಮಾಡಿದರೆ ರಾಯಚೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಗೂ ಆಹಾರ ಪದಾರ್ಥಗಳನ್ನು ಸರಿಯಾದ ರೀತಿಯಲ್ಲಿ ಸ್ವಲ್ಪ ವೇಳೆಯಲ್ಲೇ ಯಾವು ಕಷ್ಟವೂ ಇಲ್ಲದೆ ಒದಗಿಸಿ ಪ್ರತಿಯೊಬ್ಬ ಮನುಷ್ಯನಿಗೂ ನೆರವಾಗಲು ಮಾರ್ಗ ಮಾಡಿದಂತಾಗುತ್ತದೆ. ಆ ಕಾರಣ ದಯೆಯಿಟ್ಟು ಇಂಥ ಮುಖ್ಯವಾದ ರಸ್ತೆಗಳನ್ನು ತಪ್ಪದೆ ಈ ವರ್ಷ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಈಗ ತಿಂತಣಿ (Tintani) ಸೇತುವೆಗಾಗಿ ಬಿಜಾಪುರ ಮತ್ತು ಗುಲ್ಬರ್ಗಾ ಜಿಲ್ಲೆಗಳಿಗೆ ಸೌಕರ್ಯವಾಗಿದೆ. ಆದರೆ ಬಿಜಾಪುರಕ್ಕೆ ಹೋಗಲು ಸ್ವಲ್ಪ ಕಷ್ಟವಿದೆ, ಏಕೆಂದರೆ ತಾಳೀಕೋಟೆ ಮತ್ತು ಮಾಲೂರು ನಡುವೆ ಕೇವಲ 8-9 ಮೈಲುಗಳ ರಸ್ತೆ ಪಬ್ಲಿಕ್‌ವರ್ಕ್ಸ್ ಇಲಾಖೆಯದೇ ಇದೆ. ಆದರಲ್ಲಿ ಮಳೆಗಾಲದಲ್ಲಿ ಮೋಟಾರುಗಳು ಮತ್ತು ಬಂಡಿಗಳು ಹೋಗುವುದಕ್ಕಾಗುವುದಿಲ್ಲ. ಆದುದರಿಂದ ಅದನ್ನು ಸರಿಮಾಡಿ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಸೂಚಿಸಬಯಸುತ್ತೇನೆ.

ಕೊನೆಯದಾಗಿ ವಿದ್ಯುಚ್ಛಕ್ತಿ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈಗ ತುಂಗಭದ್ರ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಕೆಲಸ ನಡೆಯುತ್ತಿದೆ, ಮೂರು ಯೂನಿಟ್ಟುಗಳ ಪೈಕಿ ಎರಡು ಯೂನಿಟ್‌ಗಳ ಕೆಲಸವಾಗಿದೆ ಮಾನ್ಯ ಮುಖ್ಯಮಂತ್ರಿಗಳು ಎರಡು ತಿಂಗಳ ಹಿಂದೆ ಆ ಪ್ರಾಂತದ ಕೆಲವೊಂದು ಗ್ರಾಮಗಳಿಗೆ ಬೆಳಕನ್ನು ಒದಗಿಸಿದ್ದಾರೆ. ಅಲ್ಲಿ ಮೂರು ಯೂನಿಟ್ಟುಗಳಿಂದ ಸುಮಾರು 27 ಸಾವಿರ ಕಿಲೋ ವಾಟುಗಳಷ್ಟು ಪವರ್ ಉತ್ಪತ್ತಿಯಾಗಲು ಅವಕಾಶವಿದೆ. ಅದನ್ನು ಮೂರು ನಾಲ್ಕು ಜಿಲ್ಲೆಗಳಿಗೆ ಒದಗಿಸಬಹುದು. ಕೆಲಮಟ್ಟಿಗೆ ಲೈನು ಹಾಕುವ ಕಾರ್ಯವಾಗಿದೆ. ಕೆಲಸ ಭರದಿಂದ ಸಾಗುತ್ತಿದೆ. ಹೆಚ್ಚು ಉತ್ಪತ್ತಿ ಕೂಡಿ ಪಟ್ಟಣದವರಿಗೂ, ಹಳ್ಳಿಯವರಿಗೂ, ವ್ಯವಸಾಯಗಾರರಿಗೂ ವಿದ್ಯುಚ್ಛಕ್ತಿಯನ್ನು ಸಾಕಷ್ಟು ಒದಗಿಸಲು ಅವಕಾಶ ಮಾಡಬೇಕು. ಹಾಗೆ ಮಾಡಿ ಆಹಾರದ ಉತ್ಪನ್ನವನ್ನು ಹೆಚ್ಚಿಸುವುದಕ್ಕೆ ಮತ್ತು ಸಣ್ಣ ಸಣ್ಣ ಕೈಗಾರಿಗಳು, ಕಾರ್ಖಾನೆಗಳನ್ನು ನಡೆಸುವುದಕ್ಕೆ ಅವಕಾಶ ಕಲ್ಪಿಸಬೇಕೆಂದು ಬೇಡಿ ಈ ಒಂದು ವಿಷಯದ ಬಗ್ಗೆ ಮಾತನಾಡಲು ಅವಕಾಶ ಕೊಟ್ಟ ಸಭಾಧ್ಯಕ್ಷರಿಗೆ ಮತ್ತೊಮ್ಮೆ ವಂದಿಸುತ್ತೇನೆ.

(*Sri K. Lakkappa was Standing*).

Mr. SPEAKER.—The Hon'ble member must remember that his party has sent a list. He may please look into it, at any rate.

Sri SANJEEVANATHA AIKALA (Suratkal).—Mr. Speaker, Sir, let me make a few general observations first and then come to specific points about which I have sent cut motions. It has been often told that the Public Works Department is a department which by its very nature of work developed itself as an enemy of the people. Rajaji has rightly said that it is the enemy, number one of the public.

Mr. SPEAKER.—It may be so in Madras so far as Rajaji is concerned. In the Mysore State, it is not like that, unless you substantiate it. What the great man has said does not form part of the Budget.

Sri SANJEEVANATHA IKALA. Such are the ways and methods of this department that it plays drucks and drakes with the taxpayers' money. Several projects are placed before the people and to implement these projects, several sections, several divisions, several offices, and several officers have been appointed. Consequently, the out-turn of the work is not quite in relation to the amount spent. Fortunately, this department is manned by a person, no less than a man, possessing vim, vigour and vitality, i. e., in the person of Veerendra. He is rightly Indra Veera as far as this department is concerned. He possesses, as far as I know, a sort of drive to get the works done. But unfortunately, he dismally failed to inject the same vigour, vitality and the same force in the department to get the works done immediately and as quickly as possible and without much waste. Of course, I will never make any accusation without any facts as my disposal against officers of that Department. I know, as far as top-level is concerned, officers at the State capital or the district level, really they are fine officers who are as enthusiastic and energatic as we are in getting implemented the projects sanctioned. But unfortunately at the bottom level, in the lower rung

(SRI SANJEEVANATHA IKALA)

of the ladder, everything is at pell mell. There is no proper co-ordination among the officers in the lower rung. Many of the works are simply kept pending because the head-clerk or an accountant or the cashier will not pass orders which the higher officers want. That is the fate in many offices. I know many of the works could not be implemented merely because the cashier or the accountant or the head-clerk is not given his mamool or gratification. That is what is happening in the small offices even at the district level. This is one serious blot on the Department and I wish the Head of this Department or the Minister looks into these matters and see that such irregularities will not occur and whatever works are sanctioned are implemented immediately. For small technical reasons, works could not be completed. The clerks put unnecessary querries and they simply pull on days. Simple works are dragged on this way for days together. It is my request that the Hon'ble Minister should see that these things should never happen in the lower-rung of the offices.

Several works have to be taken up, as far as roads or bridges and irrigation projects are concerned. Gigantic and massive works are required to be taken up. Big projects and small brains will never go well. Big projects will require big sums of money and bigger men to tackle. Unfortunately it is not so. While entrusting these works, the contract is given with an idea of getting certain benefits from the contractors. That is what happened in many of the projects and consequently we have very bad legacy as far as many projects are concerned especially about Sharavathi. I do not wish to wash the dirty linen here by going i to these affairs.

An HON'BLE MEMBER.—Where is the dirty linen !

Sri SANJEEVANATHA IKALA.—There is enough of it.

Mr. SPEAKER.—Let us discuss the Budget.

Sri SANJEEVANATHA IKALA.—So, I wish that the consideration should be given to the recommendations which have been made by the Resources and Economy Committee to have a State Construction Corporation formed to undertake big works of the Government. Sir, it is said that there are some considerations in giving the contract also. I understand that as far as Huliyar, Hassan-Mangalore ore road is concerned, several representations were made that the work should not be entrusted to big contractors only. What happens ? The four or five big contractors again divide the work to fourth or fifth class contractors and consequently they have proved themselves only to be commission agents. That is what happened in Mangalore-Hassan ore road. I feel that in future, works should be decentralised—smaller estimates should be made so as to facilitate small contractors to take up works.

I now come to the cut motions of which I gave notice. One of my cut motions relates to the failure of Government to give assurance to the families which are likely to be displaced on account of the location of the all-weether port at Panambur, Mangalore taluk, South Kanara District.

Mr. SPEAKER.—Does the Hon'ble Member know who they are ?

Sri SANJEEVANATHA IKALA.—I have got all the facts and figures—nearly 1,700 families will be displaced. Now it is almost settled about the location of the all-weether port. It is five miles from Mangalore. Now we have been able to get the co-operation of the people for the location of the harbour at Panambur. We will give every co-operation to the Government. As far as the execution of the work is concerned. But our demand is that the people who are to be displaced should be properly rehabilitated. There is no question of merely giving compensation. Any amount of compensation will not solve the problem. Because in these days, in the coastal areas of South Kanara, it is not possible even to find dwelling places for the people. So, Government must see that they are given Government lands in the coastal side and they must acquire lands belonging to private people if necessary lying vacant. In this area, people who are likely to be displaced and who may lose their occupation should be rehabilitated in such a way that no least difficulty is felt, so that they can carry on their normal work and business in the new places taken over. Along with this, they must be given proper compensation to meet the new Expenditure.

Sir, another cut motion is regarding the payment of compensation for lands acquired in connection with the widening of West Coast Highway as well as for other Government purposes such as the Regional Engineering College at Suratkal. Sir, reference has already been made by me during the course of the Budget debate. I want to emphasise the same thing here again. Sir, four or five years have passed since the people have voluntarily given up their lands for the purpose of the formation of this road. Unfortunately, proposals have been sent and all the papers have been completed in this respect, but not even a naya paisa worth of compensation was given to these people. Several memoranda have been submitted to the Government, but Government seems to possess a deaf ear. The Hon'ble Minister in this House assured that everything will be done here and immediately. But unfortunately everything is kept pending and delayed. Several families, on account of this acquisition of land, are now displaced and they have to seek shelter elsewhere. They want money and they want compensation to be given immediately. But Government have kept them in *trishanku swarga*. Neither they could leave the place nor could they go elsewhere. That is the fate of most of the people who gave their lands voluntarily. I understand that all the work is done by the District Land Acquisition Officer; papers have been completed and sent to the Divisional offices. But simply on technical grounds or on lame excuses, cases are being delayed and payment of compensation has been delayed.

Sir, about frequent transfer of Engineers or Executive officers, it is said that it is very wide-spread in this Department. Last year Sir, six months back, I made a reference to the committal of suicide by an

(SRI SANJEEVANATHA IKALA,

Assistant Engineer at Shimoga. Within the course of three months, he was transferred from one place to another...nearly five places he was transferred, and that was the cause for committing suicide, on the fateful night.

Sir, I came in contact with several Engineers of this Department and they all tell the same story. The result is that they can never give proper attention to any work, continuously and consistantly.

Sir, about broadening west coast road, I had referred to it last year itself. When the actual road breadth is only 38 feet, the land taken is 150 feet wide. I do not understand why so much area should be acquired for a road with a margin of 38 feet. So, I suggest that they may have a uniform margin of 80 feet. I do not expect æroplanes would run there ; after all, it is meant for the use of buses, cars and lorries. I do not know why Government wants 150 feet wide road from Cape Camorin to Delhi. Sir, I understand that in Kerala the breadth is limited to 80 feet. So, the same 80 feet limitation should be fixed in our area, *i.e.*, South Kanara and North Kanara also.

Sir, about construction of walls to rivers for flood prevention, this is a work that has got to be attended immediately because most of our roads run on the river banks and several such projects should be undertaken in our district.

A special feature about my district is the scope for salt water prevention projects in the coastal area. Sir, we have a river for every five miles and they have, what we call, back water channels. Most of these channels flow in the middle of irrigated fields and consequently, the second and the third crop gets destroyed. This is a peculiar feature in South Kanara and North Kanara. Our minor irrigation works should be mainly concentrated on this. We require several such works to be taken up. They do not cost more than 20 to 25,000 rupees. Several plans have been sent in this regard but very few works are sanctioned. I urge that these are some of the most important works which are to be done in respect of salt water prevention dams in our district. Another special feature of our district is that any construction work could be taken up only 6 months during the year. Because the rains start from May and it will be continuously pouring for the next six months, no work could be done during that period. No picture of this is known to the several officers sitting at Bangalore and I wish that this should be noted and the construction works in our districts should be undertaken only during the other six months period and estimates prepared accordingly.

Then, Sir in our districts as well as elsewhere, there are several works half done. Most of these works are left unfinished on the ground of emergency. I suggest that instead of taking up new works, the works already taken up and not completed may be completed first.

Sir, there is no proper co-ordination between the Revenue Department and the Public Works Department so far as the acquisition of land

is concerned. Unnecessary delay is being caused by simply passing on the papers from one department to the other. I urge that there should be some sort of co-ordination between these two departments so far as acquisition of land is concerned.

Sir, while taking up works in our districts, no step-motherly treatment must be shown between area and area. There are so many works to be done in respect of rural communication, roads, culverts and other reservoirs. In Belthangadi and other western parts of our district, we have plenty of hills and fine valleys. If you only put some small bunds between the valleys so much of water could be stored and through small channels water can be taken to various parts of the neighbouring villages. I wish some such survey is undertaken to find out the possibility of formation of such water reservoirs. There is also scope for production of electricity through these reservoirs. Some survey has been made and there are 3 or 4 such works in our districts which are being surveyed. I wish the Government to take up these projects. Thank you, Sir.

ಶ್ರೀ ಎ. ಜಿ. ಬಂದೀಗೌಡ (ಶ್ರೀರಂಗಪಟ್ಟಣ).—ಸ್ವಾಮಿ, ಈಗ ನಮ್ಮ ಮುಂದಿರತಕ್ಕ ಡಿಮ್ಯಾಂಡ್‌ಗಳನ್ನು ನಾನು ಸಮರ್ಥಿಸುತ್ತ ಇವುಗಳ ವಿಚಾರದಲ್ಲಿ ಕೆಲವು ವಿಷಯಗಳನ್ನು ಈ ಸಭೆಯ ಮುಂದೆ ಇಡಲು ಇಷ್ಟಪಟ್ಟಿದ್ದೇನೆ.

ನನ್ನ ಉದ್ದೇಶವಾದರೂ ಇಷ್ಟೆ—ಈ ಕಾರ್ಯಗಳೆಲ್ಲ ತ್ವರಿತವಾಗಿ ನೆರವೇರಬೇಕು, ಈಗ ನಾವು ಕೊಡತಕ್ಕ ಈ ಹಣ ಸದ್ವಿನಿಯೋಗವಾಗಬೇಕು ಅನ್ನುವ ದೃಷ್ಟಿಯಿಂದ ನಾನೀಗ ಒಂದೆರಡು ವಿಷಯಗಳನ್ನು ಈ ಸಭೆಯಮುಂದಿಡಬೇಕಾಗಿದೆ. ನಮ್ಮ ಈ ವರ್ಷದ ಬಡ್ಜೆಟ್ 100 ಕೋಟಿ ರೂಪಾಯಿಗಳಿವೆ. ಅದರಲ್ಲಿ ನಾನೀಗ ಲೆಕ್ಕ ಹಾಕಿರುವ ಪ್ರಕಾರ ನಾವು 65 ಕೋಟಿ 45 ಲಕ್ಷ ರೂಪಾಯಿಗಳನ್ನು P.W.D. ಮತ್ತು ಅದಕ್ಕೆ ಸಂಬಂಧಪಟ್ಟ ಬಾಬುಗಳಿಗೆ ಕೊಡುತ್ತಿದ್ದೇವೆ. ಈ ಮೊಬಲಗು ಒಟ್ಟಿನಲ್ಲಿ ನಮ್ಮ ಬಡ್ಜೆಟ್ಟಿನ ಶೇಕಡ 65 ರಷ್ಟಿದೆ. ಈ ಹಣ ಈಗ ಸದ್ವಿನಿಯೋಗವಾಗಬೇಕಾಗಿದೆ, ಇದು ಅಗತ್ಯ. ಈಗಾಗಲೇ ನನ್ನ ಅನೇಕ ಮಿತ್ರರು ಇರಿಗೇಷನ್ ಅಂದರೆ ಮೇಜರ್ ಇರಿಗೇಷನ್ ಹಾಗೂ P.W.D. ವಿಚಾರದಲ್ಲಿ ಕೆಲವು ಮಾತುಗಳನ್ನಾಡಿದ್ದಾರೆ. ಆದರಿಂದ ನಾವೀಗ ಹೆಚ್ಚಿಗೆ ಈ ಜನರಲ್ ಸ್ವಭಾವದ ವಿಚಾರಗಳಿಗೆ ಕೈಹಾಕದೆ ಕೇವಲ ನಮ್ಮ ಜಿಲ್ಲೆಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಮಾತನಾಡುವುದು ಸೂಕ್ತವಾದುದೆಂದು ಭಾವಿಸಿ ನಮ್ಮ ಜಿಲ್ಲೆಯ ವಿಚಾರವನ್ನುಮಾತ್ರ ಮಾತನಾಡಲಿಚ್ಛಿಸುತ್ತೇನೆ.

ನಾನು ಮೊದಲನೆಯದಾಗಿ ನಮ್ಮ ರಾಜ್ಯಕ್ಕೂ-ಮದ್ರಾಸ್ ಸರ್ಕಾರಕ್ಕೂ 1924ರಲ್ಲಿ ಆದ ಒಂದು ಒಪ್ಪಂದದ ವಿಚಾರವನ್ನು ಪ್ರಸ್ತಾಪಿಸಲಿಚ್ಛಿಸುತ್ತೇನೆ. ಈ ಒಪ್ಪಂದದ ವಿಚಾರ ಈ ದಿವಸ ಹೇಗೆ ಕಾಣುತ್ತಿದೆ ಎಂದರೆ ಇದು ಒಂದು one-way traffic ಇದ್ದಹಾಗೆ ಕಾಣುತ್ತಿದೆ. ಈ ದಿವಸ ಕಾವೇರಿ ನದಿಯನೀರಿನ ಹೆಚ್ಚು ಉಪಯೋಗ ಮದ್ರಾಸ್ ರಾಜ್ಯಕ್ಕೇ ಆಗುತ್ತಿದೆ. ನಮ್ಮ ದೇಶಕ್ಕೆ ಇದರ ಉಪಯೋಗ ಬಹಳ ಕಡಮೆಯಾಗಿದೆ. ನಾವೀಗ ಈ ನದೀನೀರಿನ ಉಪಯೋಗವನ್ನು ಹೆಚ್ಚಿಸಿಕೊಳ್ಳಬೇಕಾದ್ದು ಅಗತ್ಯವಾಗಿದೆ. 1924ರಿಂದ 50ವರ್ಷಗಳ ಕಾಲ ಅಂದರೆ 1974ರ ವರೆಗೂ ಈ ಅವಧಿ ಇರುತ್ತದೆ. ನಾವು ಈ ಅವಧಿಯಲ್ಲಿ ನಮ್ಮ ಪ್ರಯತ್ನಗಳನ್ನು ನಡೆಸದೇಇದ್ದಲ್ಲಿ ನಮಗೆ ಮುಂದೆ ಬಹಳ ಧಕ್ಕೆಯಾಗುತ್ತದೆ. ಈ ದಿವಸ ನಾವು ಕೈಗೊಳ್ಳಲಿರತಕ್ಕ ವಿಚಾರಗಳಲ್ಲಿ ಯಾವುಯಾವುದು ಡಿಸ್ಪ್ಯೂಟ್‌ಗೆ ಸಂಬಂಧಿಸಿರುತ್ತದೆಯೋ ಅಂಥವನ್ನು ಸ್ವಲ್ಪ ಹಿಂದಕ್ಕಿಟ್ಟು ಡಿಸ್ಪ್ಯೂಟ್ ಇಲ್ಲದಂಥ ಬಾಬುಗಳನ್ನು ನಾವು ಕಾರ್ಯಗತಮಾಡಲು ಪ್ರಯತ್ನಿಸುವುದು ಒಳ್ಳೆಯದು. ಇದರಿಂದ ನಮಗೆ ಹೆಚ್ಚಿನ ಅನುಕೂಲವಾಗುತ್ತದೆ. ಈ ಒಂದು ಸೂಚನೆಯನ್ನು ಸರ್ಕಾರಕ್ಕೆ ಕೊಡುತ್ತ ನಾನೀಗ ತಿಳಿಸಬೇಕಾಗಿರುವುದೇನೆಂದರೆ—ನಾವೀ ದಿವಸ ಕಾವೇರಿ ನೀರನ್ನು ಕೇವಲ ಒಂದು ಲಕ್ಷ ಎಕರೆಗಳವರೆಗೆ ವ್ಯವಸಾಯಕ್ಕೆ ಅನುಕೂಲಪಡಿಸಿಕೊಂಡಿದ್ದೇವೆ. ನಮಗಿನ್ನೂ ಕಾವೇರಿ ನದಿಯ ನೀರಿನಿಂದ ಅಂದರೆ K.R. ಸಾಗರದ ಮೂಲ್ಕ ಇನ್ನೂ 20-25 ಸಾವಿರ ಎಕರೆಗೆ ನೀರಾವರಿ ಅನುಕೂಲ ಕಲ್ಪಿಸಿಕೊಳ್ಳಲು ಅವಕಾಶವಿದೆ. ಅದನ್ನು ಮಾಡತಕ್ಕದ್ದು ಅಗತ್ಯವಿದೆ.

1924ನೆ ಇಸವಿಯ ಒಪ್ಪಂದದ ಪ್ರಕಾರವಾಗಿ ನಾವು ಕಾವೇರಿ ನದಿಯ ನೀರಿನ ಪ್ರಯೋಜನವನ್ನೂ ಪಡೆದು ಸುಮಾರು ನಾಲ್ಕು ಲಕ್ಷ ಚಿಲ್ಲರೆ ಎಕರೆಗಳಷ್ಟು ಜಮೀನನ್ನೂ ನೀರಾವರಿಗೆ

(ಶ್ರೀ ಎ. ಜಿ. ಬಂದೀಗೌಡ)

ತರಬೇಕಾಗಿದೆ. ಆದುದರಿಂದ ನಾವೀಗ ಯಾವುದು ವಿವಾದಾಸ್ಪದವಾಗಿಲ್ಲವೋ ಅಂಥ ಪ್ರಾಜೆಕ್ಟ್‌ಗಳನ್ನೂ ಎಂದರೆ, ಕಬಿನಿ ಪ್ರಾಜೆಕ್ಟ್, ಹೇಮಾವತಿ ಪ್ರಾಜೆಕ್ಟ್, ಲಕ್ಷ್ಮಣತೀರ್ಥ, ಲೋಕಪಾವನಿ ಇವುಗಳೆಲ್ಲವನ್ನೂ ಜಾಗ್ರತೆ ಕಾರ್ಯರೂಪಕ್ಕೆ ತಂದು ಕೆಲಸ ಮಾಡುವುದು ಬಹಳ ಸೂಕ್ತವಾಗಿದೆ.

5.00 P.M.

ನಮ್ಮ ಮಾನ್ಯ ಮಂತ್ರಿಗಳು ಕಳೆದ ತಿಂಗಳು 9ನೆಯ ತಾರೀಖು ಮಂಡ್ಯಕ್ಕೆ ಬಂದಿದ್ದಾಗ ಅವರ ಗಮನಕ್ಕೆ ನಾವು ತಂದಿದ್ದೇವೆ. ಕಬಿನಿ ಪ್ರಾಜೆಕ್ಟ್ ಕೂಡಲೆ ಆಗಿ ಅದರಿಂದ ಮಂಡ್ಯ ಜಿಲ್ಲೆಯಲ್ಲಿ ಈಗ ವ್ಯವಸಾಯವಾಗದೆ ಇರತಕ್ಕ ಸುಮಾರು 30 ಸಾವಿರ ಎಕರೆಯಷ್ಟು ಜಮೀನು ನೀರಾವರಿಗೆ ಬರುತ್ತದೆಂದು. ಹೇಗೆಂದರೆ ಮದ್ರಾಸ್ ರಾಜ್ಯದೊಡನೆ ಆಗಿರುವ ಒಪ್ಪಂದದ ಪ್ರಕಾರ ನಾವು 900 cusecs ನೀರನ್ನು ಮದ್ರಾಸಿಗೆ ಕೊಡಬೇಕಾಗಿದೆ. ಇದನ್ನು ನಾವು ಕಬಿನಿ ನದಿಯಿಂದ ಮದ್ರಾಸಿಗೆ ಕೊಟ್ಟು ಕಾವೇರಿ ನದಿಯಿಂದ ಎಂದರೆ ಕೃಷ್ಣರಾಜಸಾಗರದಲ್ಲಿ ಉಳಿಯುವ 900 ಕ್ಯೂಸೆಕ್ಸ್ ನೀರನ್ನು ಉಪಯೋಗಿಸಿಕೊಂಡರೆ, ಈಗ ವ್ಯವಸಾಯವಾಗದೆ ಇರತಕ್ಕ ಕೊಪ್ಪ, ಕಾಡ್ಲೆ ಹೋಬಳಿಗಳಿಗೆ ಸೇರಿದ ಹತ್ತು ಸಾವಿರ ಎಕರೆ; ಮಳವಳ್ಳಿ, ಟಿ. ನರಸೀಪುರಕ್ಕೆ ಸೇರಿದ ಹತ್ತು ಸಾವಿರ ಎಕರೆ ಜಮೀನಿಗೆ ರಿಮಿಷನ್ ಕೊಡುವುದು ತಪ್ಪಿ, ವ್ಯವಸಾಯಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಕಬಿನಿ ಪ್ರಾಜೆಕ್ಟನ್ನೂ ಕೂಡಲೇ ಪೂರೈಸಿ ಅದರಿಂದ ಬರತಕ್ಕ 900 ಕ್ಯೂಸೆಕ್ಸ್ ನೀರನ್ನು ಮಂಡ್ಯ ಜಿಲ್ಲೆಗೆ ಉಪಯೋಗಿಸಬೇಕೆಂದು ಮೊದಲನೆಯದಾಗಿ ಅವರ ಗಮನಕ್ಕೆ ತರುತ್ತಿದ್ದೇನೆ.

ಎರಡನೆಯದು ಲೋಕಪಾವನಿಗೆ ಒಂದು pickup ಮಾಡಬೇಕೆಂದು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಪಾಂಡವಪುರ ತಾಲ್ಲೂಕು ಮಡಕೆಪಟ್ಟಣ ಮತ್ತು ಚಿಕ್ಕಮರಳಿ ಗ್ರಾಮಗಳ ಮಧ್ಯೆ ಲೋಕಪಾವನಿ ನದಿಗೆ ಲೆವೆಲ್ ಸಿಕ್ಕಿದೆ. C.D.S. channelಗೆ ಪಿಕ್‌ಅಪ್ ಹಾಕಿಕೊಂಡು channel ಮೂಲಕ ನೀರನ್ನು ತೆಗೆದುಕೊಂಡರೆ C.D.S. channel ನಿಂದ ಬೇಸಿಗೆ ಕಾಲದಲ್ಲಿ ನೀರು ಕೊಟ್ಟು ಸಂಪೂರ್ಣವಾಗಿ ವ್ಯವಸಾಯಕ್ಕೆ ಅನುಕೂಲಮಾಡಬಹುದು, ಅದರಿಂದ ಬಹಳ ಎಕರೆಗಳಷ್ಟು ಜಮೀನಿನಲ್ಲಿ ಕಬ್ಬು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಅದನ್ನು ತೆಗೆದುಕೊಳ್ಳಬೇಕೆಂದು ನಾವು ಹೇಳುತ್ತಿದ್ದೇವೆ. ಇದಕ್ಕೆ ದುಡ್ಡಿಲ್ಲವೆಂದು ಸರ್ಕಾರ ಒಂದುವೇಳೆ ಅಭಿಪ್ರಾಯ ಪಡುವುದಾದರೆ ಪಾಂಡವಪುರ ಸಕ್ಕರೆ ಕಾರ್ಖಾನೆಯವರು ದುಡ್ಡು ಕೊಡುವುದಕ್ಕೆ ಮುಂದೆ ಬಂದಿದ್ದಾರೆ. ಇದರ ಅಂದಾಜು ವೆಚ್ಚ 5 ಲಕ್ಷ 40 ಸಾವಿರ ರೂಪಾಯಿ. ಒಂದುವೇಳೆ ಪಾಂಡವಪುರ ಸಕ್ಕರೆ ಕಾರ್ಖಾನೆಯವರು ಕೊಡದೆಇದ್ದರೆ ರೈತರು ಅಡ್ವಾನ್ಸ್ ಕೊಡುತ್ತೇವೆಂದು ಮುಂದೆ ಬಂದಿದ್ದಾರೆ. ಆದುದರಿಂದ ಲೋಕಪಾವನಿ ಪಿಕ್‌ಅಪ್ ಕೆಲಸವನ್ನೂ ಕೂಡಲೇ ತೆಗೆದುಕೊಳ್ಳಬೇಕೆಂದು ಎರಡನೆಯ ಸಲಹೆ ಕೊಡುತ್ತಿದ್ದೇನೆ.

ಕಾವೇರಿ ನದಿಯಿಂದ ವಿಶ್ವೇಶ್ವರಯ್ಯ ನಾಲಾದಲ್ಲಿ ನೀರು ಹೆಚ್ಚಾಗಿ ಬಂದರೂ ಹುಲಿಕೆರೆ ಟನಲ್‌ಗೆ ನೀರು ಎಳೆಯದೆ ವ್ಯವಸಾಯಕ್ಕೆ ಕಡಮೆಯಾಗುತ್ತಿದೆ. ಆದ್ದರಿಂದ ಹುಲಿಕೆರೆ ಟನಲ್‌ನಿಂದ ಒಂದು channel ತೆಗೆದುಕೊಂಡು ಅದನ್ನು ತುರುವನೂರುಬಳಿ ತೆಗೆದುಕೊಂಡುಹೋದರೆ—ಸುಮಾರು ಹತ್ತು ಸಾವಿರ ಎಕರೆ ಜಮೀನು ವ್ಯವಸಾಯವಿಲ್ಲದೆ ಇದೆ—ಅದಕ್ಕೂ ನೀರನ್ನು ಕೊಡಬಹುದು. ಹುಲಿಕೆರೆ ಟನಲ್‌ನಿಂದ ಈ ಪ್ರದೇಶ ಸುಮಾರು 10-15 ಮೈಲಿ ಆಗುತ್ತದೆ. ಆ ಪ್ರದೇಶದಲ್ಲಿಯೂ ಕೂಡ ಯಾವ ನದಿಯೂ ಇಲ್ಲ. ಅದಕ್ಕೂ ನೀರನ್ನು ಕೊಟ್ಟಹಾಗೆ ಆಗುತ್ತದೆ. ಅದಕ್ಕೂ ರೈತರು ಮುಂದೆ ಬಂದು ಹಣ ಕೊಡುವುದಕ್ಕೆ ಸಿದ್ಧವಾಗಿದ್ದಾರೆ. ಇದನ್ನೂ ತೆಗೆದುಕೊಳ್ಳಬೇಕೆಂದು ಮೂರನೆಯ ಸಲಹೆ ಮಾಡುತ್ತಿದ್ದೇನೆ.

ಶ್ರೀರಂಗಪಟ್ಟಣ ಮತ್ತು ಮಂಡ್ಯ ತಾಲ್ಲೂಕುಗಳಲ್ಲಿ ಅನೇಕ ಪಿಕ್-ಅಪ್‌ಗಳನ್ನು ತೆಗೆದುಕೊಳ್ಳಬಹುದು. ಈಗ ಮೇಜರ್ ಇರಿಗೇಷನ್ ಎಂದರೆ 60 ಕೋಟಿ, 80 ಕೋಟಿ, 100 ಕೋಟಿ ಹೀಗೆಲ್ಲ ಆಗುತ್ತದೆ. Pick-ups ಎಂದರೆ ಎರಡು ಲಕ್ಷ, ಐದು ಲಕ್ಷ, ಹತ್ತು ಲಕ್ಷ ಇಷ್ಟುಮಾತ್ರ ಆಗುತ್ತದೆ. ಆದರೆ ಅದರಿಂದ ಬರತಕ್ಕ ಪ್ರತಿಫಲ ಬಹಳ, ವ್ಯವಸಾಯಗಾರರಿಗೂ ಕೂಡ ಅನುಕೂಲವಾಗುತ್ತದೆ. ಬಹಳ ಎಕರೆ ಜಮೀನಿಗೆ ನೀರಾವರಿಯಾಗುತ್ತದೆ. ಅಂಥ pick-ups ನಾವು ಮೊನ್ನೆ ನೋಡಿದ್ದರಲ್ಲಿ ಬಹಳ ಅನುಕೂಲವಾದವುಗಳು ಬೇಕಾದಷ್ಟಿವೆ. ಅವುಗಳ ಪೈಕಿ ನಾಲ್ಕಾರು ಹೆಸರುಗಳನ್ನು ನಾನು ಕೊಡಲು ಇಚ್ಛೆಪಡುತ್ತೇನೆ. ಸರ್ಕಾರದವರು ವಿಚಾರಮಾಡಿ ಅವುಗಳೆಲ್ಲವನ್ನೂ ಕೂಡ ತೆಗೆದು ಕೊಂಡರೆ ನಮಗೆ ವ್ಯವಸಾಯಕ್ಕೆ ಬಹಳ ಜಮೀನು ಬರುತ್ತದೆ ಮತ್ತು ಸರ್ಕಾರಕ್ಕೆ ಕೂಡ ಫಾಯಿದೆ

ಯಾಗುತ್ತದೆ. ಅಂಥವು ಶ್ರೀರಂಗಪಟ್ಟಣ ತಾಲ್ಲೂಕು ಮೇಳಾಪುರದಹತ್ತಿರ ಒಂದು, ಮತ್ತು ಮಹದೇವಪುರದಹತ್ತಿರ ಎರಡು ಪಿಕ್-ಅಪ್‌ಗಳು. ಮಂಡ್ಯ ತಾಲ್ಲೂಕು ಕೊತ್ತತ್ತಿ ಹೋಬಳಿಗೆ ಸೇರಿದ ದೇವೇಗೌಡನ ಕೊಪ್ಪಲು ಪಿಕ್-ಅಪ್, ಟಿ-ಮಲ್ಲಿಗೆರೆ ಪಿಕ್-ಅಪ್, ಕಬ್ಬನಳ್ಳಿ ಪಿಕ್‌ಅಪ್, ಕೊತ್ತತ್ತಿ ಪಿಕ್‌ಅಪ್ ಹೀಗೆ ನಾಲ್ಕು ಪಿಕ್‌ಅಪ್‌ಗಳು. ಇದಲ್ಲದೆ ಮಂಡ್ಯ ತಾಲ್ಲೂಕಿನಲ್ಲಿ ದೊಡ್ಡವು ಎರಡು ಪಿಕ್-ಅಪ್‌ಗಳಿವೆ. ಅವುಗಳಿಂದ 20 ಸಾವಿರ ಎಕರೆಯಷ್ಟು ಜಮೀನಿಗೆ ಅನುಕೂಲವಾಗುತ್ತದೆ. ಇವು ಹೊಳಲು ಪಿಕ್-ಅಪ್ ಮತ್ತು ಚಿಕ್ಕಬಳ್ಳಿ ಪಿಕ್-ಅಪ್. ಈ ಆರೇಳು ಪಿಕ್-ಅಪ್‌ಗಳು ಶ್ರೀರಂಗಪಟ್ಟಣ ಮತ್ತು ಮಂಡ್ಯ ತಾಲ್ಲೂಕುಗಳಲ್ಲಿ ಇರುವುದನ್ನು ತೆಗೆದುಕೊಂಡರೆ ಬಹಳ ಪ್ರಯೋಜನವಾಗುತ್ತದೆ.

ಇಷ್ಟನ್ನು ಮೇಜರ್ ಮತ್ತು ಮೈನರ್ ಇರಿಗೇಷನ್ ಸಂಬಂಧವಾಗಿ ಮಾತನಾಡಿ ರಸ್ತೆ ವಿಚಾರದಲ್ಲಿ ಒಂದೆರಡು ಮಾತನ್ನು ಹೇಳಬೇಕೆಂದು ಅಪೇಕ್ಷೆಪಡುತ್ತೇನೆ. ನನ್ನ ಮಾನ್ಯ ಮಿತ್ರರಾದ ಶ್ರೀ ಶರಣಪ್ಪನವರು ಮಂಡ್ಯ ಜಿಲ್ಲೆಯಲ್ಲಿ ನೂರು ಮೈಲಿಗೆ 109 ಮೈಲಿ ರಸ್ತೆ ಇದೆ ಎಂದು ಸರಾಸರಿ ಲೆಕ್ಕವನ್ನು ಕೊಟ್ಟಿದ್ದಾರೆ. ಇರಬಹುದು, ಬಹಳ ರಸ್ತೆಗಳಿವೆ. ಮೊದಲಿನಿಂದಲೂಕೂಡ ರಸ್ತೆಗಳಿಗೆ ಹೆಚ್ಚು ಗಮನವನ್ನು ಕೊಡುತ್ತ ಬಂದಿದ್ದೇವೆ. ಇದರ ಜೊತೆಗೆ ಮಂಡ್ಯದಲ್ಲಿ ಎರಡು ಸಕ್ಕರೆ ಕಾರ್ಖಾನೆಗಳಿವೆ. ಅದರಿಂದ ಬರತಕ್ಕ Sugarcane Cess Fund ಉಪಯೋಗಿಸಲು ಒಂದು ಡಿವಿಷನ್‌ಮಾಡಿ ಅದಕ್ಕೆ ಒಬ್ಬ ಖಾಸಗಿಯವರನ್ನು ಚೇರ್ಮನ್‌ಮಾಡಿ official and non-official members ಮಾಡಿ, ಆ ಡಿವಿಷನ್ ಮೂಲಕ ಅನೇಕ ರಸ್ತೆಗಳನ್ನು ತೆಗೆದುಕೊಂಡು ಬಹಳವಾಗಿ ಬೆಳಸಿಕೊಂಡು ಬಂದಿದ್ದೇವೆ. Sugarcane Cess ಒಂದು ಟನ್ ಕಬ್ಬಿಗೆ ಆರು ರೂಪಾಯಿ ಪ್ರಕಾರ ಕೊಡುತ್ತಾರೆ. ಮಂಡ್ಯ ಜಿಲ್ಲೆಯಿಂದ 30 ಲಕ್ಷ ರೂಪಾಯಿ ವಸೂಲಾಗುತ್ತದೆ. ಮೈಸೂರು ದೇಶದ ಎಲ್ಲ ಸಕ್ಕರೆ ಕಾರ್ಖಾನೆಗಳನ್ನು ತೆಗೆದುಕೊಂಡರೆ ಒಂದು ವರ್ಷಕ್ಕೆ ಸುಮಾರು 65–70 ಲಕ್ಷ ರೂಪಾಯಿ Sugar cane cess ಬರುತ್ತದೆ. ಇದನ್ನು ನಮ್ಮ ಮೈಸೂರು ದೇಶದಲ್ಲಿ ಪ್ರಾರಂಭ ಮಾಡುವಾಗ ಆಗಿನ ಮಂತ್ರಿವರ್ಯರು ಹೇಳಿದ್ದಾರೆ; ಇದರಿಂದ ಬರುವ ಹಣವನ್ನು ಕಬ್ಬು ಬೆಳೆಯುವ ಪ್ರದೇಶದಲ್ಲಿ ರಸ್ತೆಗಳ ಕೆಲಸಕ್ಕೆ ಉಪಯೋಗಿಸುತ್ತೇವೆ, ಜನರಲ್ ಫಂಡಿಗೆ ಇಟ್ಟುಕೊಳ್ಳುವುದಿಲ್ಲ, ಜನರಲ್ ಬಡ್ಜೆಟ್‌ನಲ್ಲಿ earmark ಮಾಡಿ sugar cane areaದಲ್ಲಿ ಮಾತ್ರ ಉಪಯೋಗಿಸುತ್ತೇವೆಂದು ವಾಗ್ದಾನ ಮಾಡಿದ್ದಾರೆ. ಅದರಂತೆಯೇ ಇಲ್ಲಿಯವರೆಗೂ ನಡೆದುಕೊಂಡುಬಂದಿದೆ. ಈಗ ಅದನ್ನು ಜನರಲ್ ಬಡ್ಜೆಟ್ಟಿಗೆ ಸೇರಿಸಿಕೊಂಡು ಒಂದು ವರ್ಷಕ್ಕೆ 15-20 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಈ ವರ್ಷವೂಕೂಡ Sugar Cane Cess Fundನಿಂದ 20 ಲಕ್ಷ ರೂಪಾಯಿ ಮಾತ್ರ ಕೊಟ್ಟಿದ್ದಾರೆ. ಇದರಿಂದ ಬರತಕ್ಕ 70 ಲಕ್ಷ ರೂಪಾಯಿಗಳಲ್ಲಿ 20 ಲಕ್ಷ ರೂಪಾಯಿಮಾತ್ರ ಕೊಟ್ಟಿದ್ದಾರೆ. ಕಬ್ಬು ಬೆಳೆಯುವ ಪ್ರದೇಶದಲ್ಲಿ ಗಾಡಿಗಳ ಮೂಲಕ ಕಬ್ಬನ್ನು ಸಾಗಿಸುವುದಕ್ಕೆ ಬಹಳ ಕಷ್ಟವಾಗುತ್ತಿದೆ. ಆದುದರಿಂದ sugar cane cessನಿಂದ ಬರತಕ್ಕ ಹಣವನ್ನೆಲ್ಲಾ sugarcane areaಕ್ಕೆ ಉಪಯೋಗಿಸತಕ್ಕದ್ದು ಬಹಳ ಸೂಕ್ತವೆಂದು ನಾನು ಒಂದು ಸಲಹೆಯನ್ನು ಕೊಡುತ್ತಿದ್ದೇನೆ.

Rural Communication Roads ಈ ವಿಚಾರದಲ್ಲಿ ಕೆಲವು ಪ್ರಶ್ನೆಗಳನ್ನು ಕೇಳಿದಾಗ ಮಾನ್ಯ ಮಂತ್ರಿಗಳ ಗಮನಕ್ಕೆ ಕೆಲವು ವಿಷಯಗಳನ್ನು ತಂದಿದ್ದೇನೆ. R.C. ರಸ್ತೆಗಳನ್ನು ಒಳ್ಳೆಯ ಉದ್ದೇಶದಿಂದ ಪ್ರಾರಂಭ ಮಾಡಿದ್ದಾರೆ ಎರಡನೆಯ ಪಂಚವಾರ್ಷಿಕ ಯೋಜನೆ ಮುಗಿದು ಮೂರನೆಯ ಯೋಜನೆಯಲ್ಲಿ ನಾವಿದ್ದೇವೆ. ಇದು ಮುಗಿಯುವುದರೊಳಗಾಗಿ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಐವತ್ತು ಮೈಲಿಯಷ್ಟಾದರೂ R.C. roads ಮಾಡಬೇಕೆಂದು ಪ್ರಾರಂಭವಾಯಿತು. ಕೆಲವರು ಉತ್ಸಾಹದಿಂದ 50 ಮೈಲಿಗಿಂತ ಹೆಚ್ಚು ಎಂದರೆ 100-150 ಮೈಲಿ ಮಾಡಿದ್ದಾರೆ. ಕೆಲವರು ಐವತ್ತು ಮೈಲಿ ಇಟ್ಟುಕೊಂಡಿದ್ದಾರೆ. ಇನ್ನೂ ಕೆಲವರು ಬಹಳ ಕಡಮೆ ಮಾಡಿದ್ದಾರೆ. ಏನೇ ಇರಲಿ ಈಗ R.C. roads ಪ್ರಾರಂಭಮಾಡಿದ್ದೇವೆ ಮತ್ತು ಅದನ್ನು ಮಾಡುವುದಕ್ಕೆ ಅನುಮತಿಯನ್ನುಕೂಡ ಕೊಟ್ಟಿದ್ದೇವೆ ಒಂದು ವಿಧದಲ್ಲಿ. ಆದುದರಿಂದ ಯಾವ ಯಾವ ತಾಲ್ಲೂಕಿನಲ್ಲಿ R.C. roadsಮಾಡಿ ಆಗಿದೆಯೋ ಅಲ್ಲಿ ಬರೀ ಮಣ್ಣನ್ನು ಹಾಕಿರುವುದರಿಂದ ಜನಗಳು ಕೂಡ ತಿರುಗಾಡುವುದಕ್ಕಾಗದೆ, ಗಾಡಿಗಳು ಹೋಗುವುದಕ್ಕೆ ಆಗದೆ ದತ್ತೂರಿ ಗಿಡ ಬೆಳೆದುಕೊಂಡು ತಿರುಗಾಡುವುದಕ್ಕೆ ಬಹಳ ಕಷ್ಟವಾಗುತ್ತಿದೆ. ಆದುದರಿಂದ R.C. roads ಎಂದು ಯಾವುದನ್ನು ಪ್ರಾರಂಭಮಾಡಿದ್ದೇವೆ ಆ ರಸ್ತೆಗಳನ್ನಾದರೂ ನಾವು ಮುಗಿಸಿ ಜನಗಳಿಗೆ ಉಪಯೋಗವಾಗುವಂತೆ ಮಾಡಿಕೊಟ್ಟರೆ ಒಳ್ಳೆಯದೆಂದು ನಾನು ಭಾವಿಸುತ್ತೇನೆ. ಒಂದುವೇಳೆ ನಮ್ಮ ಮಂತ್ರಿವರ್ಯರು ದುಡ್ಡಿಲ್ಲ ಎಂದು ಹೇಳುವುದಾದರೆ, ಅದಕ್ಕೆ ಈಗಾಗಲೇ ನಮ್ಮ ಚೀಫ್ ಮಿನಿಸ್ಟರವರು ಒಂದು ಸಲಹೆ ಕೊಟ್ಟಿದ್ದಾರೆ: ಅದೇನೆಂದರೆ, ಯಾವುದಾದರೂ ಒಂದು ಇರಿಗೇಷನ್ನು ತೆಗೆದುಕೊಳ್ಳಲು ಅಲ್ಲಿರುವ ಜನರೇ ಮುಂದೆ ಬಂದು ಸಾಲದ ರೂಪದಲ್ಲಿ ಸರಕಾರಕ್ಕೆ ಹಣ ಕೊಡಲು ಒಪ್ಪಿದರೆ, ಆ ದುಡ್ಡನ್ನು

(ಶ್ರೀ ಎ. ಜಿ. ಬಂದೀಗೌಡ)

ತೆಗೆದುಕೊಂಡು ಇಂತಹ ಕೆಲಸಗಳನ್ನು ಎಲ್ಲ ಕಡೆಯಲ್ಲಿಯೂ ಮಾಡಬಹುದು. ಹಾಗೆಯೇ R.C. ರೋಡುಗಳಕೆಲಸ. ಇನ್ನಿತರ ಪ್ರಾಜೆಕ್ಟಿನ ಕೆಲಸಗಳಿಗೂ ದುಡ್ಡು ಕೊಡಲು ನಮ್ಮ ಭಾಗದ ಜನ ಸಿದ್ಧರಾಗಿದ್ದಾರೆ.

ಶ್ರೀ ಎಸ್. ನಿಜಲಿಂಗಪ್ಪ.—ಹಾಗೆ ಯಾರಾದರೂ ದುಡ್ಡು ಕೊಟ್ಟರೆ ಮಾಡೋಣ.

ಶ್ರೀ ಎ. ಜಿ. ಬಂದೀಗೌಡ.—ಆದುದರಿಂದ ಮಾನ್ಯ ಮಂತ್ರಿಗಳು ಈ ರಸ್ತೆಯ ಕೆಲಸಗಳನ್ನೂ ಪೂರ್ತಿಮಾಡಬಹುದು ಎಂದು ಇಲ್ಲಿ ಸೂಚನೆ ಮಾಡುತ್ತೇನೆ. ಕೆಲವುಕಡೆ ಒಂದು ತಾಲ್ಲೂಕಿನಲ್ಲಿ R.C. ರೋಡನ್ನು ಕೇವಲ ನಾಲ್ಕು ಮೈಲಿಯಷ್ಟು ಮಾತ್ರ ಮಾಡಿದ್ದಾರೆ. ಈ ರೀತಿ ಅಲ್ಲಿ ಅನ್ಯಾಯ ಮಾಡಲು ಏನು ಕಾರಣವೋ ಗೊತ್ತಿಲ್ಲ. ಅಲ್ಲಿಯೂ 50 ಮೈಲಿಗಳಷ್ಟು ರಸ್ತೆಮಾಡಿಸಿ ಕೊಡಬೇಕು. ಇಂತಹ ರಸ್ತೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಡಬೇಕೆಂದು ನಾನು ಸೂಚನೆ ಮಾಡುತ್ತೇವೆ.

ನಮ್ಮ ಊರಿನ ಹತ್ತಿರ ತಗಡವಾಡಿ ಎನ್ನುವಲ್ಲಿ ಒಂದು ಹಳ್ಳ ಇದೆ. ಅದಕ್ಕೆ ಒಂದು Causeway ಕೂಡ ಇತ್ತು. ಈಗ ಅದು ಬಿದ್ದುಹೋಗಿದೆ. ಇದು ಹೋಗಿ ಸುಮಾರು ಏಳು ವರ್ಷಗಳಾಗಿದೆ. ಈ ಹಳ್ಳದಲ್ಲಿಯೇ ಅನೇಕ ಗಾಡಿಗಳು, ಬಸ್ಸುಗಳು, ಕಾರುಗಳು ಎಲ್ಲ ಓಡಾಡುತ್ತಿವೆ. ಕೆಲವುವೇಳೆ ಈ ಹಳ್ಳದಲ್ಲಿ ಒಂದುಸಾರಿ ಹೋಗುವಾಗ ನೀರಿರುವುದಿಲ್ಲ. ಆದರೆ ವಾಪಸ್ ಬರುವಾಗ ನೀರು ಬಂದು ಅಲ್ಲಿ ಓಡಾಡುವ ವಾಹನಗಳಿಗೆ ಅನಾನುಕೂಲವಾಗುತ್ತಿದೆ. ಈ ತೊಂದರೆಯನ್ನು ಅನೇಕಸಾರಿ ಸರಕಾರದ ಗಮನಕ್ಕೆ ತಂದಿದ್ದೇನೆ. ಈಗ ಎಮರ್ಜನ್ಸಿಗೋಸ್ಕರ ಇದನ್ನು ಸ್ವಲ್ಪ ದಿವಸ ಪೋಸ್ಟ್‌ಪೋನು ಮಾಡಿದ್ದೇವೆಂದು ಹೇಳುತ್ತಾರೆ. ಇದು ಪೋಸ್ಟ್‌ಪೋನು ಮಾಡತಕ್ಕ ವಿಷಯವಲ್ಲ. ಆದಷ್ಟು ಜಾಗ್ರತೆ ಇದನ್ನು ತೆಗೆದುಕೊಂಡು ನೆರವೇರಿಸುತ್ತಾರೆಂದು ನಾನು ನಂಬುತ್ತೇನೆ. ಮಹದೇವಪುರದ ಬಳಿಯಲ್ಲಿ ಕಾವೇರಿ ನದಿ ಹರಿದುಹೋಗುತ್ತಿದೆ. ಇಲ್ಲಿ ಒಂದು ಸೇತುವೆಯನ್ನು ಕಟ್ಟಿಸಿ ಕೊಡಬೇಕಾದುದು ಬಹಳ ಅಗತ್ಯ. ಸರಕಾರದವರು ಇದನ್ನುಕೂಡ ಎಮರ್ಜನ್ಸಿ ಎಂದು ಕೈ ಬಿಟ್ಟಿದ್ದಾರೆಂದು ತೋರುತ್ತೆ. ಬಡ್ಜೆಟ್ಟಿನಲ್ಲಿ ಇದಕ್ಕಾಗಿ 12 ಲಕ್ಷ ರೂಪಾಯಿಗಳನ್ನು ಸೇರಿಸಿದ್ದುದನ್ನು ಏನು ಕಾರಣವೋ ಈ ವರ್ಷ ಮಾಡಿಲ್ಲ. ಕಾವೇರಿ ನದಿಗೆ ಇದು ಅಗತ್ಯವಾದ ಸೇತುವೆ. ಈ ಸೇತುವೆ ಕೆಲಸವನ್ನು ಕೂಡಲೆ ತೆಗೆದುಕೊಂಡು ಮಾಡಿ ಮುಗಿಸಬೇಕೆಂದು ನಾನು ಕೋರುತ್ತೇನೆ. ಇದಕ್ಕಾಗಿ ಟೆಂಡರನ್ನು ಕರೆದಿದ್ದರು. ಅಲ್ಲದೆ ಕೆಳಗಿನ ಅಧಿಕಾರಿಗಳು ಡಿಸೈನು, ಪ್ಲಾನುಗಳು ಮಾಡಿ ಮೂರು ನಾಲ್ಕನ್ನೂ ಕೂಡ ಒಪ್ಪಿಗೆಗಾಗಿ ಕಳುಹಿಸಿದ್ದರು ಎಂದು ತಿಳಿದುಬರುತ್ತದೆ. ಇದರಬಗ್ಗೆ ಇನ್ನೂ ಸರಕಾರ ಮಾಡಬೇಕೇ ಇಲ್ಲವೇ ಎನ್ನುವಂತಿದೆ. ಆದ್ದರಿಂದ ಮಹದೇವಪುರದ ಈ ಸೇತುವೆಯನ್ನು ಆದಷ್ಟು ಜಾಗ್ರತೆ ಮಾಡಿಸುತ್ತಾರೆಂದು ಭಾವಿಸುತ್ತೇನೆ.

ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri N. O. SAMAJI (Belgaum-II).—[*Spoke in Marathi*].

5-30 P.M.

Mr. SPEAKER.—What time will be required by the Hon'ble Minister to reply ?

Sri VEERENDRA PATIL.—I will require 2 hours.

Sri S. SIVAPPA.—The time allotted for this Demand is 2 days. Yesterday we had discussed it for one hour. So, we may discuss it tomorrow up to 4 O' clock.

Mr. SPEAKER.—We may meet at 12 NOON tomorrow. Sri S. Sivappa, can think it over and tell me.

†**Sri M. SRINIVASA NAYAK** (Mangalore-I).—Mr. Speaker, Sir, I rise to support the Demand placed before this August House by the Hon'ble Minister for Public Works. Public Works Department is a welfac

Department. Public Works Department is criticised by my friends on the Opposition side as Public enemy No 1. But I would say........

Mr. SPEAKER.—That has already been replied to.

Sri M. SRINIVASA NAYAK.—I would say Public Works Department is a welfare Department which seeks to transform the State into a welfare State. Education and Public Works are the two main portfolios or Departments which seek to transform the face of this State and I should say that the Public Works Department in our State has done well for the last 10 years and today we can be proud that we have achieved so much in our State. The Chief Engineer and the Department has bestowed very good attention.

ಶ್ರೀ ಕೆ. ಪಿ. ರೇವಣ್ಣಸಿದಪ್ಪ.—ಅಕ್ಕಪಕ್ಕದ ಸಂಸ್ಥಾನಗಳಿಗೆ ಹೋಲಿಕೆ ಆಗುವ ಹಾಗೆ ಹೇಳಿ.

ಶ್ರೀ ಎಂ. ಶ್ರೀನಿವಾಸ ನಾಯಕ್.—ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಕೆಲವು ವಿವರಗಳನ್ನು ಕೊಡುತ್ತಾರೆ. We should congratulate the Chief Engineer and the Department for the very good work they have done during these years. There is a feeling among the Government here and there in the State the South Kanara is a place where honey and milk flow. I hail from South Kanara and would like to place before this August House and the Government that South Kanara is a place which is a remote malnad area and it does require careful attention of the Government for its due development. One thing I would like to place before the Government at this stage is that South Kanara has not received as much attention it should have because South Kanara is a place which is thickly populated. I should say that the density of population in South Kanara is 410 per square mile which is equivalent or coming nearer to Bangalore. The population density of North Kanara is only 131; the population density of Shimoga is 163; that of Hassan is 275; and that of Mysore is 308. Taking into consideration the density of population, the Public works that ought to have been done in South Kanara ought to have had preferential share. Further, our terrain is hilly; we have got excessive rains; the rainfall in South Kanara is over 2,500 m.m. whereas in Hassan and Shimoga it is only 1,500 to 2,000 m.m. In Mysore Belgaum and Dharwar it is 600 to 900 m.m. per year. We have got 21 rivers which go breadthwise our District and it has got more than 3,000 tributaries and over a lakh of channels. These have to be bridged so that the traffic from the interior areas flows to Cities. We are thinking in terms of having minor irrigation and major irrigation and increasing foodstuffs. If these were to be achieved, we must have rural roads to bring this produce to the market place at a very cheap rate so that overhead charges incurred on this does not affect the price of the commodities. If that is so, there is need that the Public Works Department has to review the allocations made to my District, that is, South Kanara and see that proper allocations are made for rural communications and roads and work taken up during this year.

There is also a feeling that there are many development works in South Kanara developed at the cost of other districts. I may say that the bridges built there are at the cost of the Central Government. Even when South Canara formed a part of Madras, the bridges across the

(SRI M. SRINIVASA NAIK)

Pavanji River, Netravati River and the Multi river were built at the cost of the Central Government under the Road Transport Fund. The alignment of the West Coast road was changed through the efforts of our representatives in the Parliament. The roads cross the Netravati, Gangavati and other major rivers. The Netravati bridge costing a crore of rupees, the bridge across Gangavati costing 60 lakhs, the bridge across Kalyanapuri costing 15 lakhs and the bridge across Mubaguti costing several lakhs of rupees, were all built at the cost of the Central Government and it was all through the efforts of our representatives in the Parliament and so much cost is saved to the Government. The old alignment would have to pass through the Ghat section which is vital to be opened up. There we have a lot of forest wealth and it is said that South Canara's forest wealth is valuable and the Government is getting much income from the forest produces of malnad area The Madras Government and the Mysore Government have agreed to build up projects over the old alignment of the West Coast even though there is the Central Government's present alignment so that the hinterland, the lower ghat section may be opened up. I may say that your constituency is also involved in a particular way.

Mr. SPEAKER.—My constituency is safe in the hands of the Minister for Public Works.

Sri M. SRINIVASA NAYAK.—I know you were pleased to remark that your constituency is safe in the hands of the Government. But, I hailing from South Canara take it as a duty cast on me to refer to something about that constituency also. If you were on this side of the House, I know you would have ably pleaded for your constituency. But you are now in a different position. But, whatever it be, the Government had also agreed to take up certain roads in malnad area as a certainty in the last budget. But so far these works have not been taken up. If they are not taken up this year, there are beautiful lands, arable lands where plenty of water is available all through the year, and they will go as waste. Such lands can be used for the purpose of growing more food and that would be very valuable for the people of our district. If that road is not taken up, I think the constituency is going to suffer and the food crops that we would otherwise raise would go waste. So, I appeal to the Government to examine that question and such of the works that were included in the last budget as asterisk works should be taken up. Otherwise a great injustice will be done to the people living in these areas, and a great injustice will be done to the constituency of the Hon'ble Speaker. I would like to say that the people of South Canara are enterprising. Inspite of the handicaps they are facing in regard to rainfall, in regard to terrain that has been cut off by the rivers, and hard soil. By their own efforts the people have built up 74 educational institutions as high schools. There are 104 high schools in our district, out of which 24 are District Board schools, 74 are aided ones and six are run by private enterprise. Further there are

11 colleges, out of which three are Government ones and eight are run by private agencies. Similarly, the people in South Canara have invested more than Rs. 10 crores on education and I have talked about it during the discussion of Education budget. Even the legitimate grants that are due to these institutions have not yet been disbursed though we are nearing 31st March.

I am not asking too much of the Government nor am I asking too much from the Government. I am only trying to draw the attention of the Government to certain facts that we in South Canara are contributing nearly 40 lakhs to the Motor Vehicles Taxation fund; we are paying nearly one crore by way of sales tax and there is hundred per cent collection; 100 lakhs are paid as income-tax and 125 lakhs as excise duty. There is cent per cent collection. We were paying about 40 lakhs as land revenue and now we are paying 80 lakhs and there is cent per cent collection. We are not due to the Government by way of taxation in our district. Further, we have built up our own industries. We have nearly 50 tile factories in which our people have invested more than Rs. 10 crores. We have nine Cashew factories, which is a dollar earning commodity. The Government have shown keen interest in the development of the cashew industry. All these require roads. Unless there are proper roads to take these produces to the market, the produce grown will go as waste, involving their head weight charges for conveying them. We have 20 saw mills and the investment is about a crore of rupees. The malnad area has to be opened up to get timber for the saw mills established. Further, from Mangalore port itself we are exporting nearly 80 per cent of coffee grown in Mysore. That means transport facilities to the port and transport facilities for carrying coffee and timber from the hinterland to the main city has to be developed. I may also bring the fact to the notice of the House, that Hassan-Mangalore road is being developed and 50 miles of the road are lying in South Canara. From Mudigere to Mangalore ore is being carried and that road has not been developed. Twelve million tons of iron ore is being shipped from the Mangalore port. So, it may be imagined how these roads will have to be developed. Further, when the port is developed, Mangalore port will receive and despatch goods to the whole State of Mysore. That will be the gateway of Mysore and when the Home Minister visited Mangalore, he was pleased to say that in due course of time Mangalore will be the face of Mysore State. That being the case it is essential that the Public Works Department of our Government should bestow keen interest on the development of roads in our district. But for the fact that the port is developed and the railway is linked, we will find ourselves too late to take up development of roads because development works of the port and other things will be very much hampered. That is why I am cautioning the Government beforehand so that we may have a long range policy and have proper roads opened up from the hinterland and other roads that lead to the port and development plans taken up at this stage itself. In South

(SRI M. SRINIVASA NAIK)

Canara we have six miles of railway. The Hassan-Mangalore railway which comes up will be entirely at the cost of the Central Government.

God has given us a shore of 200 miles and we can increase food production by taking up minor and major irrigation works. We have not yet applied our mind and sufficient thought on the development of fisheries on our coast. South Canara is a rich coast with tremendous deposit of fish. I should say that Banasandra mines or any other mines has got a limit. But that mine which is available in our sea is unlimited.

That has to be tapped. Fisheries roads are to be built up and proper facilities for fishermen have to be afforded. I am going to take the oppurtunity to speak on the Fisheries demand separately when it comes up here, but still I would like to make just a passing remark about it on the Public Works Demand. Without proper fishery roads, the fishermen will not be able to get that sort of convenience for them to bring the fish from the shore to the marketing centres. Last year, there was a proposal to form fishery roads and I do not know whether they will be continued or completed this year. Anyway, I am taking this opportunity to request the Hon'ble Minister for Public Works to see that the fishery roads are given priority and taken up and completed this year. During the Second Plan only Rs. 29 lakhs were spent in my district whereas, as I said earlier, we have contributed to the exchequer of our State to a very large extent. We were looking forward to the day when we would become part of Mysore State for our dreams to be realised and we hope and trust that the aspirations with which we became part of the Mysore State will be fulfilled and that the Hon'ble Minister for Public Works will take interest in the development of South Kanara.

Mr. SPEAKER.—What about the fishing harbours ?

Sri M. SRINIVASA NAIK.—Only Rs. 10,000 have been set apart for the fishing harbour. It is quite necessary that a fishing harbour should be established in South Kanara; it may be in Malpe or in Coondapur. It is quite necessary that a fishing harbour should be established in Mangalore because fish is a staple food and the fish that is available in the deep seas is equivalent to milk, eggs and fruits. When we are spending so much on agriculture and minor irrigation, we should also make adequate provision for fisheries as it is also an equally important foodstuff. It is an open treasure into which we can put our hands and draw as much staple food as we want. I therefore request the Government that they should improve the fishery roads and provide a fishing harbour for our district. For the development of Karwar they have spent more than they should have spent legitimately for Mangalore, but we have no grievance on that score because after all Karwar is a place in Mysore State. I am only drawing the attention of the Government to the fact that Mangalore lacks the attention of the Government. When T. Mariappa was in power in Mysore, it was represented to him that more money should be provided for South Kanara. He came on an extensive tour, went round the district and said that the Mysore Government has not spent as much money as it ought to have and he has left a note in the Government files that Mangalore has not received the proper quota of expenditure from the Mysore Government. Whatever major works have been taken up have been done at the cost of the Central Government. What I am driving at is that it is not too late even now for the Minister to rethink and give proper allocations to our district so that our malnad roads and communications can be improved.

Another thing is that our rains begin from 15th May or June and last till November so much so the workable season in South Kanara is only 8 months as against 12 months in the maidan areas. So, materials such as cement that are required for developmental works in Mangalore should be made available in good time so that the works that are going to be taken up could be completed in the course of these 8 months. I know the Chief Engineer had an occasion to be there during the rains. I do not know whether the Minister has been able to go to Mangalore during the rainy season and I do not know whether I can on the floor of the House invite him to go over there during the rainy season so that he may know the difficulties there. We have not got sufficient communicable roads by which we can go to the remotest villages. So, it is necessary that our bridges and roads should be properly maintained and rural roads should be made available to the people so that the agricultural produce can be brought to the cities and the overhead charges can thereby be reduced to a great extent.

We are thinking of minor irrigation only. There are some major irrigation projects which can and should be taken up in our district. Now, the rain water is going to waste; it is being drained to the sea. It could be stored by having a big reservoir at Halady or some other place. I request the Hon'ble Minister to get this properly investigated. When we were in Madras, these works were got examined by the Madras Government and I request the Government of Mysore to pursue those works and see that major irrigation works are also made available to our district so that our people may be able to grow more food.

†ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಅಧ್ಯಕ್ಷರೇ, ಈ ಲೋಕೋಪಯೋಗಿ ಖಾತೆಯ ಬಗ್ಗೆ ಮಾತನಾಡುತ್ತಾ ನನ್ನ ಮಿತ್ರರಾದ ಅನೇಕ ಸದಸ್ಯರುಗಳು ಕಟುವಾಗಿ ಟೀಕೆ ಕೂಡ ಮಾಡಿದ್ದಾರೆ. ಅದರಲ್ಲೂ ಸಹ ಕಾಂಗ್ರೆಸ್ ಪಕ್ಷದವರು ಬಹಿರಂಗವಾಗಿ ವಿರೋಧ ಮಾಡದೆ ಹೋದರೂ ಅಂತರಂಗದಲ್ಲಿ ವಿರೋಧ ಮಾಡಿ ಹೇಳಿದ್ದಾರೆ. ಅವರು ಆ ರೀತಿ ಹೇಳುವುದಕ್ಕೆ ಏನು ಕಷ್ಟವಿದೆಯೆಂಬುದು ನನಗೆ ಗೊತ್ತು. ಆದರೆ ಈ ಮರಾಮತ್ತು ಇಲಾಖೆಗೆ ಕೋಟ್ಯಾಂತರ ರೂಪಾಯಿಗಳ ಹಣವನ್ನು ಪ್ರತಿವರ್ಷವೂ ಕೂಡ ಖರ್ಚುಮಾಡಬೇಕಾಗಿದೆ. ಇದರಿಂದ ದೇಶದ ಬಹುತೇಕವಾದಂಥ ಅಭಿವೃದ್ಧಿ ಆಗಬೇಕಾದುದು ಇದೆ. ಈ ಇಲಾಖೆ 15 ವರ್ಷಗಳ ಅವಧಿಯಲ್ಲಿ ನಮ್ಮ ದೇಶದಲ್ಲಿ ಆಹಾರೋತ್ಪಾದನೆಯನ್ನು ಜಾಸ್ತಿ ಮಾಡುವುದಕ್ಕೆ ಯಾವ ಒಂದು ಕ್ರಮವನ್ನೂ ಸಹ ಸರಿಯಾಗಿ ಹಾಕಿಲ್ಲವೆಂಬ ವಿಚಾರವನ್ನು ನಾನು ಹೇಳಬೇಕಾಗಿದೆ. ಈಗತಾನೆ ನಮ್ಮ ಸ್ನೇಹಿತರು ಹೇಳುತ್ತಿದ್ದರು. ಈ ತುರ್ತುಪರಿಸ್ಥಿತಿಯಿಂದ ನಮಗೆ ಸಾಕಾದಷ್ಟು ಹಣ ದೊರಕುವುದಿಲ್ಲ. ಹಣದ ಅಭಾವ ಜಾಸ್ತಿ ಇದೆ. ಮುಖ್ಯವಾಗಿ ದೇಶದಲ್ಲಿ ಆಗಬೇಕಾದಂಥ ಕೆರೆ ಕಾಮಗಾರಿ ಕೆಲಸಗಳು, ನೀರಾವರಿ ಕೆಲಸಗಳು ಬಹಳ ಮಟ್ಟಿಗೆ ಕುಂಠಿತವಾಗಿವೆಯೆಂದು ನಾನು ಹೇಳುತ್ತೇನೆ. ಹದಿನೈದು ವರ್ಷಗಳ ಅವಧಿಯಲ್ಲಿ ಯಾವ ತುರ್ತುಪರಿಸ್ಥಿತಿ ಕಾಣದೇ ಇದ್ದ ಸಮಯದಲ್ಲೂ ಕೂಡ ಲೋಕೋಪಯೋಗಿ ಇಲಾಖೆ ನಿಜವಾಗಿಯೂ ಕೂಡ ನಮ್ಮ ದೇಶದ ಅಭಿವೃದ್ಧಿಯನ್ನು ಸರಿಯಾಗಿ ಸಾಧನೆ ಮಾಡದೇ

(ಶ್ರೀ ಕೆ. ಲಕ್ಕಪ್ಪ)

ಇರುವ ನಿದರ್ಶನಗಳು ನಮಗೆ ಬೇಕಾದಷ್ಟು ದೊರೆತಿವೆ. ಮರಾಮತ್ ಇಲಾಖೆಯಲ್ಲಿ ಆಗಬೇಕಾದ ಕೆಲಸಗಳು ಶೀಘ್ರವಾಗಿ ನಡೆಯುತ್ತಿಲ್ಲ. ಅದರಿಂದಲೇ ಯಾವ ಬಾಬುಗಳಿಗೆ ಹಣ ಖರ್ಚು ಮಾಡಬೇಕೋ ಅವಕ್ಕೆ ಸರಿಯಾದ ರೀತಿಯಲ್ಲಿ ಖರ್ಚುಮಾಡುತ್ತಿಲ್ಲವೆಂಬ ಅಪವಾದನೆಗಳನ್ನು ಸರ್ಕಾರದ ಮೇಲೆ ಅನೇಕರು ಹೊರಿಸುತ್ತಿದ್ದಾರೆ. ಇದಕ್ಕೆ ಕಾರಣವಿಷ್ಟೆ! ನಮ್ಮ ಮೈಸೂರು ದೇಶ ಮೈನರ್ ನೀರಾವರಿಯ ವಿಷಯದಲ್ಲಿ ರಾಜಾಸ್ಥಾನವನ್ನು ಬಿಟ್ಟರೆ ಎರಡನೆಯದು. ಏಕೆಂದರೆ, ಯಾವ ರೀತಿಯಲ್ಲಿಯೂ ಮೈನರ್ ನೀರಾವರಿ ಇಲ್ಲಿ ಅಭಿವೃದ್ಧಿಯಾಗಿಲ್ಲ. ಅನೇಕ ಯೋಜನೆಗಳನ್ನು ಹಾಕಿದ್ದೇವೆಂದು ಇದಕ್ಕಾಗಿ ಒಂದು ಪ್ರತ್ಯೇಕ ಇಲಾಖೆಯನ್ನು ಮಾಡಿ, ಸಿಬ್ಬಂದಿಯನ್ನು ನೇಮಕ ಮಾಡಿ, ಇದಕ್ಕೆ ಒಬ್ಬ ಉಪಮಂತ್ರಿಗಳನ್ನು ಕೂಡ ಮಾಡಿ ಶ್ರೀಮಾನ್ ಆಲೂರು ಹನುಮಂತಪ್ಪನವರಿಗೆ ಈ ಸ್ಥಾನವನ್ನು ಕೊಟ್ಟಿದ್ದಾರೆ. ಅವರು ಬಹಳ ಉತ್ಸಾಹದಲ್ಲಿ, ದೇಶದಲ್ಲಿ ನೀರಾವರಿ ಅಭಿವೃದ್ಧಿ ಮಾಡುತ್ತೇವೆ, ಈ ತುರ್ತುಪರಿಸ್ಥಿತಿಯಲ್ಲಿ ಜನರಿಗೆ ಇನ್ನೂ ಜಾಸ್ತಿ ತಿನ್ನಿಸುತ್ತೇವೆ ಎಂದು ಬಹಿರಂಗವಾಗಿ ಪತ್ರಿಕೆಗಳಿಗೆ ಹೇಳಿಕೆಗಳನ್ನು ಕೊಟ್ಟಿದ್ದಾರೆ.

Mr. SPEAKER.—The House will now rise and meet at one of the clock on the 20th March 1963.

The House adjourned at Six of the clock to meet again at One of the Clock on Wednesday the 20th March 1963.